



ಉಪಾಯನ ಕೃತಿ ಕರಂಡ


ಶ್ರೀ ಕುವೆಂಪು ಸನ್ಮಾನ ಸಮಿತಿ.
ಚಿಕ್ಕಮಗಳೂರು.



ಶಿಲ್ಪಿ : ವೆಂಕಟಾಚಾರ್ಯ

ಉಪಾಯನ ಸ್ಮೃತಿ ಕರಂಡ

ರಾಜಭಾಷಾ ವಿದ್ವಾನ್
ಕಾಶಿ ವಿಶ್ವನಾಥ ಶೆಟ್ಟಿ, ಎಂ.ಎ.,
ಸಂಪಾದಕ.

ದಿನಾಂಕ ೧ ಮಾರ್ಚಿ ೧೯೬೯ ರಿಂದ ೭ ಮಾರ್ಚಿ ೧೯೬೯

ಶ್ರೀ ಕುವೆಂಪು ಸಪ್ತಾಹ

ಶ್ರೀ ಕುವೆಂಪು ಸನ್ಮಾನ ಸಮಿತಿ
ಚಿಕ್ಕಮಗಳೂರು.

ಪ್ರಥಮ ಮುದ್ರಣ ೧೯೬೯

ಮುದ್ರಕರು :
ಎಂ. ವಿ. ಗುರುಬಸಪ್ಪ ಶೆಟ್ಟಿ,
ಮಲೆನಾಡು ಪ್ರಿಂಟರ್ಸ್
'ಪ್ರಶಾಂತ ಕೃಪ', ಸೌತ್‌ಎಂಡ್ ರೋಡ್, (ಮಿಲ್ ಕಾರ್ನರ್)
ಮಲ್ಲೇಶ್ವರಂ, ಬೆಂಗಳೂರು–೨೦.
ಫೋನ್ : 70235

ಬಿನ್ನಪ

ಆದಿಕವಿ ಪಂಪನಿಂದ ಹಿಡಿದು ಆಧುನಿಕ ಕವಿ ಕುವೆಂಪುವರೆಗೆ ಸಹಸ್ರಾರು ಕವಿ ಪುಂಗವರು ಕನ್ನಡ ನಾಡಿನಲ್ಲಿ ಜನಿಸಿ ಸಾಹಿತ್ಯವನ್ನು ನಿರ್ಮಾಣ ಮಾಡಿ ಜನತೆಯನ್ನು ಜಾಗ್ರತಿಗೊಳಿಸುತ್ತ ಇಹ-ಪರಗಳಲ್ಲಿ ಫಲ ದೊರಕುವಂತೆ ಮಾಡಿದ್ದಾರೆ. ಅಂತಹ ಕವಿ ಶ್ರೇಷ್ಠರಲ್ಲಿ ಕಳೆದ ಶತಮಾನಗಳ ಮೈಲಿಗಲ್ಲುಗಳಾಗಿ, ಮಾರ್ಗದರ್ಶಕರಾಗಿ, ಯುಗಕವಿಗಳಾಗಿ ನಿಂತ ಮಹಾ ಕವಿಗಳ ಪಂಕ್ತಿಯಲ್ಲಿ ನಿಂತ ಕವಿಗಳಿಗೆ ಅಂದಿನ ರಾಜ ಮಹಾರಾಜರುಗಳು, ಜನತೆಯ ಪರವಾಗಿ ಬಿರುದು ಬಾವಲಿಗಳನ್ನಿತ್ತೋ, ನಗಾರಿ ನೌಪತ್ತುಗಳನ್ನಿತ್ತೋ, ಛತ್ರ ಚಾಮರ ಪಲ್ಲಕ್ಕಿಗಳನ್ನಿತ್ತೋ ಗೌರವಿಸುತ್ತಿದ್ದುದು ತಿಳಿದ ವಿಷಯ. ಅಕ್ಷರಕ್ಕೆ ಲಕ್ಷ ವರಹಗಳನ್ನಿತ್ತವರೂ ಉಂಟು. ಕನಕಾಭಿಷೇಕ ಮಾಡಿ ಕೃತಿಯನ್ನು ಅಂಬಾರಿಯಲ್ಲಿಟ್ಟು ಮೆರೆಸಿದವರು ಇಲ್ಲದಿಲ್ಲ. ಹೀಗಿರುವಾಗ ಸ್ವತಂತ್ರ ಭಾರತದ ಜನತೆ ತನ್ನ ಕರ್ತವ್ಯವನ್ನರಿತುಕೊಂಡು ರಾಷ್ಟ್ರ ಮಹಾ ಕವಿಯಾದ, ಈ ಯುಗದ ಮೇರು ಕೃತಿ ಶ್ರೀಮದ್ರಾಮಾಯಣದ ದ್ರಷ್ಟಾರರಾದ ಶ್ರೀ ಕುವೆಂಪುರವರನ್ನು ಆ ಸೇತು ಹಿಮಾಚಲ ಪರ್ಯಂತವಿರುವ ವಿವಿಧ ಭಾಷಾ ಕವಿಗಳಲ್ಲೆಲ್ಲಾ ಒಬ್ಬ ಶ್ರೇಷ್ಠ ಕವಿಯೆಂದು ಜ್ಞಾನಪೀಠದ ಉನ್ನತ ಗೌರವವನ್ನಿತ್ತು ಸನ್ಮಾನಿಸಿರುವುದು ಕನ್ನಡಿಗರಿಗೆ ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ. ಇಂತಹ ಕವಿಯನ್ನು ಕನ್ನಡ ನಾಡಿನ ಅನೇಕ ನಗರಗಳಲ್ಲಿನ ನಾಗರೀಕರೂ, ಸಂಘ ಸಂಸ್ಥೆಗಳವರೂ ಭಕ್ತಿ ಪುರಸ್ಸರವಾಗಿ ಸನ್ಮಾನಿಸಿ ಗೌರವಿಸಿರುತ್ತಾರೆ. ಇಂತಹ ಕವಿಯನ್ನು ತಮ್ಮ ಜೀವಿತಕಾಲದಲ್ಲಿಯೇ ದರ್ಶಿಸಿ ಪೂಜಿಸುವುದು ಸುಯೋಗವೆಂದು ಹರ್ಷಿಸಿದ್ದಾರೆ.

ಈ ಅಪೂರ್ವ ಸಂದರ್ಭದಲ್ಲಿ ಅವರ ಜನ್ಮಸ್ಥಳ ಜಿಲ್ಲೆಯಾದ ಮಲೆನಾಡಿನ ಮಡಿಲು ಚಿಕ್ಕಮಗಳೂರಿಗೆ ಅವರನ್ನು ಬರಮಾಡಿಕೊಂಡು ಭಕ್ತಿಯಿಂದ ಸನ್ಮಾನಿಸಿ ಗೌರವಿಸಬೇಕೆಂದು ನಿರ್ಧರಿಸಿದಾಗ, ಅದರ ಧ್ರುವ ನೆನಪಿಗಾಗಿ 'ಉಪಾಯನ ಕೃತಿ ಕರಂಡ'ವೆಂಬ ಸ್ಮರಣ ಗ್ರಂಥವೊಂದನ್ನು ಹೊರತರಬೇಕೆಂದು ಇಚ್ಛೈಸಿ ಕವಿಯ ಬಗ್ಗೆ, ಕವಿಯ ಕೃತಿಯ ಬಗ್ಗೆ, ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ಲೇಖನಗಳಿಗಾಗಿ ಕನ್ನಡ ನಾಡಿನ ಲೇಖಕರಿಗೆಲ್ಲಾ ವಿಜ್ಞಾಪನಾ ಪತ್ರಿಕೆಗಳನ್ನು ಕಳಿಸಲಾಯಿತು. ಅನೇಕರು ಪ್ರೀತಿಯಿಂದ ನಮ್ಮ ಕರೆಯನ್ನು ಮನ್ನಿಸಿ ಲೇಖನಗಳನ್ನು, ಪದ್ಯಗಳನ್ನು ಕಳಿಸಿಕೊಟ್ಟು ಉಪಕರಿಸಿರುತ್ತಾರೆ. ಅವರೆಲ್ಲರ ಸಹಕಾರವನ್ನು ಇಲ್ಲಿ ಅತ್ಯಂತ ವಿನಮ್ರತೆಯಿಂದ ಸ್ಮರಿಸುತ್ತೇವೆ.

ಚಿಕ್ಕಮಗಳೂರಿನ ಶ್ರೀ ಕುವೆಂಪು ಸಾಹಿತ್ಯ ಸಪ್ತಾಹ ಮಹೋತ್ಸವದ ಶಾಶ್ವತದ ಸೆಲೆಯೆಂದರೆ ಮೈಸೂರು ರಾಜ್ಯದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೆಚ್.ಹೊಂಬೇಗೌಡ ರವರಾಗಿದ್ದಾರೆ. ಅವರು ಅಡಿಗಡಿಗೂ ಮಾರ್ಗದರ್ಶನ ಮಾಡುತ್ತ, ನಮ್ಮ ಪವಿತ್ರ ಪಥದಲ್ಲಿ ಪ್ರಯಾಸವಿಲ್ಲದಂತೆ ಮುಂದುವರಿಯುವಂತೆ ಮಾಡಿ ಉತ್ಸವವನ್ನು ಅತ್ಯಂತ ವೈಭವದಿಂದ ನಡೆಯುವಂತೆ ಮಾಡಿದ್ದಾರೆ. ಅವರ ಆಶೀರ್ವಾದ, ಅಭಯಗಳಿಲ್ಲದಿದ್ದರೆ ನಾವು ಇಷ್ಟು ಸುಗಮವಾಗಿ ಅಡಿಯಿಡ ಲಾಗುತ್ತಿರಲಿಲ್ಲ. ಶ್ರೀರಾಮ ಚಂದ್ರನ ಪವಿತ್ರ ಕೃತಿ ಕರ್ತೃವಿನ ದರ್ಶನ ಉಪದೇಶ ಗಳನ್ನು ಚಿಕ್ಕಮಗಳೂರಿನ ಜನತೆಗೆ ಒದಗಿಸುವುದು ಮಾತ್ರವಲ್ಲದೆ, ಆ ಕವಿಯ ವಿವಿಧ ಕೃತಿಗಳ, ನಾಟಕಗಳ ಶ್ರವಣ ಹಾಗೂ ದರ್ಶನವನ್ನು ಪಡೆಯುವ ಸೌಭಾಗ್ಯವನ್ನು ಒದಗಿಸಿಕೊಟ್ಟು ಪುನೀತರನ್ನಾಗಿ ಮಾಡಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಅತ್ಯಂತ ಭಕ್ತಿಯಿಂದ ವಂದಿಸುವುದು ನಮ್ಮ ಆದ್ಯ ಕರ್ತವ್ಯ ವಾಗಿದೆ.

ಈ ಸ್ಮರಣ ಗ್ರಂಥದ ಪ್ರಕಾಶನ ಕಾರ್ಯದಲ್ಲಿ ಹಗಲಿರುಳು ಹೆಗಲೆಣೆಯಾಗಿ ನಿಂತು ನಡೆದವರೆಂದರೆ ದೈವಭಕ್ತರೂ, ಜನಾನುರಾಗಿಗಳೂ ಆದ ನಮ್ಮ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಸುಬ್ಬಯ್ಯನವರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ. ಜೆ. ಕೋದಂಡರಾಂ ರವರು. ಲೇಖನ ಸಂಗ್ರಹದಿಂದ ಹಿಡಿದು ಕೃತಿ ಬಿಡುಗಡೆಯಾಗುವವರೆಗೆ ಎಲ್ಲಾ ಹಂತಗಳಲ್ಲಿಯೂ ಸಲಹೆ ಸಹಾಯ ಮತ್ತು ಸಹಕಾರಗಳನ್ನೀಯುತ್ತಾ ಅವಿಶ್ರಾಂತರಾಗಿ ದುಡಿದು ಇದರ ಬೃಹತ್ ಮಹತ್ ಗಳಿಗೆ ಕಾರಣರಾಗಿದ್ದಾರೆ. ಅವರುಗಳನ್ನು ಇಲ್ಲಿ ವಂದಿಸುತ್ತೇವೆ. ಮುದ್ರಣ ಕಾರ್ಯದಲ್ಲಿ ಸಂಪೂರ್ಣ ಸಹಕಾರವನ್ನಿತ್ತು ಈ ಸಂಚಿಕೆಯನ್ನು ಅತ್ಯಂತ ಮನೋಹರವಾಗಿ ಮುದ್ರಿಸಿಕೊಟ್ಟ 'ಮಲೆನಾಡು' ಪತ್ರಿಕೆಯ ಸಂಪಾದಕರೂ ಮಲೆನಾಡು ಪ್ರೆಸ್ಸಿನ ಮಾಲೀಕರೂ ಆದ ಶ್ರೀ ಎಂ. ವಿ. ಗುರುಬಸಪ್ಪಶೆಟ್ಟಿ ಅವರಿಗೆ ನಮ್ಮ ವಂದನೆಗಳು. ರಕ್ಷಾಪುಟವನ್ನು ನೇತ್ರಾನಂದ ಕರವಾಗಿ ಬರೆದು ಕೊಟ್ಟ ಅಜ್ಜಂಪುರದ ಕಲಾವಿದ ಶ್ರೀ ಬಿ. ವಿಶ್ವನಾಥ್‌ರವರಿಗೂ, ರಕ್ಷಾಪುಟವನ್ನು ಆಕರ್ಶಕವಾಗಿ ಅಚ್ಚು ಮಾಡಿಕೊಟ್ಟ ಭಾಸ್ಕರ್ ಬೈಂಡಿಂಗ್ ವರ್ಕ್ಸ್‌ನವರಿಗೂ ಲೇಖನಗಳನ್ನಿತ್ತು, ಸಂದೇಶಗಳನ್ನು ಕಳಿಸಿ, ಗ್ರಂಥಕ್ಕೆ ಶೋಭೆಯನ್ನು ತಂದು ಕೊಟ್ಟ ಲೇಖಕರಿಗೂ, ಗುರುಹಿರಿಯರಿಗೂ ನಮ್ಮ ವಂದನೆಗಳು.

ಚಿಕ್ಕಮಗಳೂರು
೧ ಮಾರ್ಚಿ ೧೯೬೯

ಕಾಶಿ ವಿಶ್ವನಾಥ ಶೆಟ್ಟಿ
ಸಂಪಾದಕ

ಪ ರಿ ವಿ ಡಿ

ವಿಷಯ			ಪುಟ ಸಂಖ್ಯೆ
೧. ಬಿನ್ನಪ—ಕಾಶೀ ವಿಶ್ವನಾಥಶೆಟ್ಟಿ	....	....	೩
೨. ಪರಿವಿಡಿ	....	....	೫
೩. ಚಿತ್ರಗಳು	....	....	೮
೪. ಕಾರ್ಯಕಾರೀ ಸಮಿತಿ	....	....	೯
೫. ಉಪ ಸಮಿತಿಗಳು	....	....	೧೦
೬. ಲೇಖಕರ ಪರಿಚಯ	....	....	೧೨
೭. ಕುವೆಂಪು ಜೀವನದ ಮೈಲಿಗಲ್ಲುಗಳು	....	....	೧೫
೮. ಯುಗದ ಕವಿಗೆ—ಅಂಬಿಕಾತನಯದತ್ತ	....	....	೧೭
೯. ನಮೋ ಕಾವ್ಯ ಕಲ್ಪತರುವೆ—ಕಾಶೀ ವಿಶ್ವನಾಥಶೆಟ್ಟಿ	....	....	೧೮
೧೦. ಕುವೆಂಪು ರೇಖಾಚಿತ್ರ—ಬಿ. ವಿಶ್ವನಾಥ್	....	....	೧೯
೧೧. ಶಂಕರಾನಂದ ಸ್ವಾಮಿಗಳ ಸಂದೇಶ	....	....	೨೧
೧೨. ಶೃಂಗೇರಿ ಶ್ರೀ ಜಗದ್ಗುರುಗಳ ಸಂದೇಶ	....	....	೨೨
೧೩. ಶುಭ ಹಾರೈಕೆ—ಶ್ರೀ ಬಿ. ಸುಬ್ಬಯ್ಯನವರು	....	....	೨೩
೧೪. ಸಂದೇಶಗಳು :			
(i) ಶ್ರೀ ವಿ. ವಿ. ಗಿರಿ	....	....	೨೫
(ii) ಶ್ರೀ ಎಸ್. ನಿಜಲಿಂಗಪ್ಪ	....	....	೨೬
(iii) ಶ್ರೀ ಬಿ. ಡಿ. ಜತ್ತಿ	....	....	೨೭
(iv) ಶ್ರೀ ವಿ. ಕೃ. ಗೋಕಾಕ್	....	....	೨೮
(v) ಡಾ|| ಟಿ. ಎಂ. ಎ. ಪೈ	....	....	೨೯

(vi) ಶ್ರೀಮತಿ ಸರೋಜಿನಿ ಮಹಿಷಿ ೩೦
(vii) ಶ್ರೀ ಎ. ಪಿ. ಅಪ್ಪಣ್ಣ ೩೦
(viii) ಶ್ರೀ ಮಹಮದಾಲಿ ೩೧
(ix) ಶ್ರೀಮತಿ ಬಸವರಾಜೇಶ್ವರಿ ೩೧
(x) ಶ್ರೀ ವಿ. ಎಲ್. ಪಾಟೀಲ್ ೩೨

೧೫. ಡಾ॥ ಕೆ. ವಿ. ಪುಟ್ಟಪ್ಪನವರು—ಪ್ರೊ॥ ವಿ. ಕೃ. ಗೋಕಾಕ್ ೩೩
೧೬. ಕರ್ನಾಟಕಕ್ಕಾಗಿ ದುಡಿದ ಸುಪ್ರತಿಷ್ಠಿತರು—
ಶ್ರೀ ಬಿ. ಶಿವಮೂರ್ತಿ ಶಾಸ್ತ್ರೀ ೩೫
೧೭. ಕುವೆಂಪು ಅವರ 'ಪ್ರೇಮದರ್ಶನ'—ಶ್ರೀ ರಾಘವ ೪೪
೧೮. ಕುವೆಂಪುಗಳ ವ್ಯಕ್ತಿತ್ವ—ಪ್ರೊ॥ ಬಿ. ಹೆಚ್. ಶ್ರೀಧರ ೪೯
೧೯. ಪುಟ್ಟಪ್ಪನವರ ವಿಭೂತಿಯೋಗ—ಶ್ರೀ ಮಿರ್ಜಿ ಅಣ್ಣಾರಾಯ.... ೫೩
೨೦. ಕುವೆಂಪುರವರ ಸ್ವಾಮಿ ವಿವೇಕಾನಂದ—
ಶ್ರೀಮತಿ ಜಿ. ಸಾವಿತ್ರಿ ೫೭
೨೧. ಕುವೆಂಪು ಕಂಡ ಕನ್ನಡ....ಶ್ರೀ ಹಂಪ. ನಾಗರಾಜಯ್ಯ ೬೫
೨೨. ಹರಕೆ—ತಿರುಕ ೭೫
೨೩. 'ಹೇಮಾವತಿ ಕುವೆಂಪು'—ಶ್ರೀಮತಿ ಕಮಲಹಂಪನಾ ೭೮
೨೪. 'ಕವಿರಾಜಮಾರ್ಗ'ದಲ್ಲಿ ಕವಿಸ್ತರಗಳು—
ಶ್ರೀ ಸಿ. ಪಿ. ಕೃಷ್ಣಕುಮಾರ್ ೮೫
೨೫. ಸ್ಮಶಾನ ಕುರುಕ್ಷೇತ್ರ—ಶ್ರೀ ಕು. ವೆಂ. ಶ್ರೀನಿವಾಸಮೂರ್ತಿ ೯೦
೨೬. 'ಪರಕವಿ ಕುವೆಂಪು'—ಶ್ರೀಮತಿ ಹೆಚ್. ಆರ್. ಇಂದಿರಾ ೧೦೯
೨೭. ಕುವೆಂಪುವಿಗೆ—ಶ್ರೀ ಕೆ. ನರಸಿಂಹಮೂರ್ತಿ ೧೧೩
೨೮. ಕಾನೂರು ಹೆಗ್ಗಡಿತಿ—ಶ್ರೀಮತಿ ಕೆ. ಸಾವಿತ್ರಿ ೧೧೪
೨೯. ವಿಶ್ವಕವಿ ಶ್ರೀ ಕು. ವೆಂ. ಪು.—ಹಿ. ಮ. ನಾಗಯ್ಯ ೧೨೩
೩೦. ಕನ್ನಡಕ್ಕೆ ಶ್ರೀ ಕು. ವೆಂ. ಪು. ಅವರ ಕಾಣಿಕೆ, ಮತ್ತು 'ಕಾಣ್ಕೆ'—
ಶ್ರೀ ಎಂ. ವಿ. ಸೀತಾರಾಮಯ್ಯ ೧೨೪

೩೧. ಧೀರ ಧಿಷಣೆ-ಕುವೆಂಪು – ಡಾ|| ಜಿ. ಮರಳಸಿದ್ದಯ್ಯ ೧೩೪

೩೨. ಶ್ರೀ ಕುವೆಂಪುವಿನ ಸೌಂದರ್ಯೋಪಾಸನೆ—ಶ್ರೀ ಜಿ. ಬ್ರಹ್ಮಪ್ಪ ೧೩೬

೩೩. ಅಳುಕದೀ ಕನ್ನಡಂ—ಕುವೆಂಪು ೧೪೧

೩೪. ಜೆರಲ್‌ಗೆ ಕೊರಳ್ ಮತ್ತು ಹೆಬ್ಬೆರಳು ವಿಮರ್ಶೆ—
ಶ್ರೀ ಕೆ. ಆರ್. ಶೇಷಗಿರಿ ೧೪೨

೩೫. ಕವಿಗೆ ಕರ್ಣಂ ಪ್ರಮಾಣಂ ವ್ಯಾಕರಣಮಲ್ತು—
ಶ್ರೀಮತಿ ಎಸ್. ರತ್ನಮ್ಮ ೧೫೪

೩೬. ಕನ್ನಡ ಕಿಂಕಿಣಿ—ಶ್ರೀ ಸಾ. ಶಿ. ಮರುಳಯ್ಯ, ... ೧೫೯

೩೭. ಕುವೆಂಪು ಅವರ ‘ಕೋಗಿಲೆ ಮತ್ತು ಸೋವಿಯಟ್ ರಷ್ಯಾ’—
ಶ್ರೀ ಎಸ್. ಪಿ. ಪಾಟೀಲ ೧೬೪

೩೮. ಸ್ವಂತಿಕೆ—ಶ್ರೀ ವಾಸುದೇವ ಭೂಪಾಲ್ ೧೭೬

೩೯. ಉದಯರವಿ ಯಾತ್ರೆಗೆ–ಶ್ರೀ ಟಿ. ಕೆ. ವಿಶ್ವನಾಥಶೆಟ್ಟಿ ೧೮೬

೪೦. ಶ್ರೀ ದಾಸ ಸಾಹಿತ್ಯ—ಶ್ರೀ ಬಿ.ವಿ. ಶ್ರಿನಿವಾಸರಾವ್ ೧೮೯

೪೧. ಕವಿ ಕಲ್ಪನೆ—ಶ್ರೀ ಚ. ಸುಂದರೇಶನ್ ೧೯೦

೪೨. ವೈದಿಕ ಸಾಹಿತ್ಯ—ಶ್ರೀ ಎಂ. ಜಿ. ನಂಜುಂಡಾರಾಧ್ಯ ೧೯೮

೪೩. ಮಂಥರೆ—ಶ್ರೀ ಭಾರತೀರಮಣಾಚಾರ್ ೨೦೩

೪೪. ಕುವೆಂಪು-ಪ್ರಕೃತಿ ಪೂಜೆ—ಶ್ರೀ ಎಂ. ವಿ. ಗುರುಬಸಪ್ಪಶೆಟ್ಟಿ ೨೧೮

೪೫. ಜಾನಪದ ಸಾಹಿತ್ಯ—ಶ್ರೀ ರಾಘವೇಂದ್ರ ಸ್ವಾಮಿಗಳು ೨೨೨

೪೬. ಕರ್ಣಾಟಕದ ಮಹಾ ಪುರುಷರು—ಡಾ||ಬಾ.ರಾ ಗೋಪಾಲ್ ೨೨೬

೪೭. ಕುಮಾರ ವಾಲ್ಮೀಕಿ—ಕಾಶೀ ವಿಶ್ವನಾಥಶೆಟ್ಟಿ ೨೩೯

ಚಿತ್ರಗಳು

೧ ಶ್ರೀರಾಮ ಲಕ್ಷ್ಮಣ ಸೀತೆ ಆಂಜನೇಯ
೨ ಕುವೆಂಪು ರೇಖಾ ಚಿತ್ರ
೩ ಕುವೆಂಪು–ಬೇಂದ್ರೆ ಸಮಾಗಮ
೪ ಕಾರ್ಯಕಾರಿ ಸಮಿತಿ
೫ ಶ್ರೀ ರಾಮಕೃಷ್ಣಾಶ್ರಮದ ಶ್ರೀಗಳೊಡನೆ ಕುವೆಂಪು
೬ ಶ್ರೀ ಎಚ್. ಹೊಂಬೇಗೌಡರು
೭ ಶ್ರೀ ಬಿ. ಸುಬ್ಬಯ್ಯನವರು
೮ ಶ್ರೀ ಯು. ಕೆ. ಲಕ್ಷ್ಮಣಗೌಡರು
೯ ಶ್ರೀ ಕಾಶೀ ವಿಶ್ವನಾಥ ಶೆಟ್ಟರು
೧೦ ಶ್ರೀ ಕೋದಂಡರಾಮ ಶೆಟ್ಟರು
೧೧ ಡಾ|| ನಾರಾಯಣ್
೧೨ ಶ್ರೀ ಬಿ. ಇ. ಪುಟ್ಟೇಗೌಡರು
೧೩ ಶ್ರೀ ಬಾಳೇಹಳ್ಳಿ ರಂಗೇಗೌಡರು



★ ೧೮೫ ೦೨೭೨ ★

ಶ್ರೀ ಕುವೆಂಪು ಸನ್ಮಾನ ಸಮಿತಿ

ಚಿಕ್ಕಮಗಳೂರು.

ಕಾರ್ಯಕಾರಿ ಸಮಿತಿ

೧. ಅಧ್ಯಕ್ಷರು : ಶ್ರೀ ಬಿ. ಸುಬ್ಬಯ್ಯ, B.E.,A.M.I.E.,

೨. ಉಪಾಧ್ಯಕ್ಷರುಗಳು : ಶ್ರೀ ಯು. ಕೆ. ಲಕ್ಷ್ಮಣ ಗೌಡ, B.Sc.,M.P.
ಶ್ರೀ ಕಾಶಿ ವಿಶ್ವನಾಥ ಶೆಟ್ಟಿ, M.A.,

೩. ಪ್ರಧಾನ ಕಾರ್ಯದರ್ಶಿ : ಶ್ರೀ ಎಂ. ಜೆ. ಕೋದಂಡರಾಮ ಶೆಟ್ಟಿ, B.Sc.,

೪. ಉಪಕಾರ್ಯದರ್ಶಿಗಳು : ಡಾ|| ಬಿ. ಎಂ. ನಾರಾಯಣ್, M.B.,B.S.,
ಶ್ರೀ ಬಿ. ಇ. ಪುಟ್ಟೇ ಗೌಡ

೫. ಖಜಾಂಚಿಗಳು : ಶ್ರೀ ಬಾಳೇಹಳ್ಳಿ ರಂಗೇಗೌಡ

ಉಪ ಸಮಿತಿಗಳು

ಸ್ವಾಗತ ಸಮಿತಿ

೧. ಶ್ರೀ ಸಿ. ಆರ್. ಶಿವಾನಂದ, ಅಧ್ಯಕ್ಷರು.
೨. ಶ್ರೀ ಡಿ. ಹೆಚ್. ರುದ್ರಪ್ಪ
೩. ಶ್ರೀ ಎನ್. ಪಿ. ಗೋವಿಂದೇ ಗೌಡ
೪. ಶ್ರೀ ಎನ್. ಕೆ. ಲಿಂಗೇಗೌಡ
೫. ಶ್ರೀ ಖಲಂದರ್ ಖಾನ್
೬. ಶ್ರೀ ಬಿ. ಕೆ. ನರಸಿಂಹ ಮೂರ್ತಿ
೭. ಶ್ರೀ ಬಿ. ಪಿ. ಬಸಪ್ಪಶೆಟ್ಟಿ.
೮. ಶ್ರೀಮತಿ ಬಿ. ಎಲ್. ಸುಬ್ಬಮ್ಮ
೯. ಶ್ರೀ ಎಂ. ವಿ. ಗುರುಬಸಪ್ಪಶೆಟ್ಟಿ.

ಆಮಂತ್ರಣ ಸಮಿತಿ

೧. ಶ್ರೀ ಡಿ. ಹೆಚ್. ರುದ್ರಪ್ಪ, ಅಧ್ಯಕ್ಷರು.
೨. ಶ್ರೀ ಎನ್. ಕೆ. ಲಿಂಗೇಗೌಡ
೩. ಶ್ರೀ ಎಂ. ಎಲ್. ವಾಸುದೇವಮೂರ್ತಿ. ಎಂ.ಎಲ್‌ಸಿ.,
೪. ಶ್ರೀ ಸಿ. ಆರ್. ಶಿವಾನಂದ
೫. ಶ್ರೀ ಬಿ. ಕೆ. ನರಸಿಂಹಮೂರ್ತಿ
೬. ಶ್ರೀ ಎನ್. ಪಿ. ಗೋವಿಂದೇಗೌಡ
೭. ಶ್ರೀಮತಿ ಬಿ. ಎಲ್. ಸುಬ್ಬಮ್ಮ

ಊಟ ಉಪಚಾರ ಸಮಿತಿ

೧. ಶ್ರೀ ಕೆ. ಎಸ್. ಕಲ್ಲೇಗೌಡ, ಅಧ್ಯಕ್ಷರು.
೨. ಶ್ರೀ ಬಿ. ಇ. ಪುಟ್ಟೇಗೌಡ
೩. ಶ್ರೀ ಬಿ. ಆರ್. ಲೋಕಪ್ಪಗೌಡ
೪. ಶ್ರೀ ಬಸಪ್ಪ, Asst. Engineer
೫. ಡಾ|| ನಾರಾಣಪ್ಪ.
೬. ಶ್ರೀಮತಿ ಬಿ. ಎಲ್. ಸುಬ್ಬಮ್ಮ.

ಚಪ್ಪರ ಮತ್ತು ವಸತಿ

೧. ಡಾ|| ಬಿ. ಎಂ. ನಾರಾಯಣ್, ಅಧ್ಯಕ್ಷರು.
೨. ಶ್ರೀ ಕೆ. ಎಸ್. ಕಲ್ಲೇಗೌಡ
೩. ಶ್ರೀ ಖಲಂದರ್ ಖಾನ್
೪. ಶ್ರೀ ಹಲ್ಸೆ ಬೈರೇಗೌಡ
೫. ಶ್ರೀ ವೆಂಕಟಸ್ವಾಮಿ Asst. Engineer
೬. ಶ್ರೀ ಹುಚ್ಚಪ್ಪ Asst. Engineer

ಸಾಂಸ್ಕೃತಿಕ

೧. ಶ್ರೀ ಕಾಶಿ ವಿಶ್ವನಾಥ ಶೆಟ್ಟಿ, ಅಧ್ಯಕ್ಷರು.
೨. ಶ್ರೀ ಬಸಪ್ಪ Asst. Engineer
೩. ಶ್ರೀ ಬಿ. ಇ. ಪುಟ್ಟೇಗೌಡ
೪. ಶ್ರೀ ಎಕೋ ರಾಮಸ್ವಾಮಿ
೫. ಶ್ರೀ ಹೆಚ್. ಬಿ. ರಾಜಗೋಪಾಲ್
೬. ಶ್ರೀ ಕೆ. ಆರ್. ಲಿಂಗಪ್ಪ
೭. ಶ್ರೀ ಎಸ್. ರಾಮಚಂದ್ರರಾವ್
೮. ಶ್ರೀ ರೇಣುಕ, ಆಲ್ದೂರು.

ನಿಧಿ ಸಂಗ್ರಹಣಾ ಸಮಿತಿ

೧. ಶ್ರೀ ಸಿ. ಆರ್. ಶಿವಾನಂದ, ಅಧ್ಯಕ್ಷರು.
೨. ಶ್ರೀ ಡಿ. ಹೆಚ್. ರುದ್ರಪ್ಪ
೩. ಶ್ರೀ ಎಂ. ಎಲ್. ವಾಸುದೇವ ಮೂರ್ತಿ M. L. C.
೪. ಶ್ರೀ ಸಿ. ಎಂ. ಎಸ್. ಶಾಸ್ತ್ರಿ M. L. A.
೫. ಶ್ರೀ ಬಿ. ಆರ್. ಲೋಕಪ್ಪಗೌಡ
೬. ಶ್ರೀ ಹುಲಿಕೆರೆ ದೇವೇಗೌಡ
೭. ಶ್ರೀ ಖಲಂದರ್ ಖಾನ್
೮. ಶ್ರೀ ಹೆಚ್ ಜಿ. ಗೋವಿಂದೇಗೌಡ
೯. ಶ್ರೀ ತಿಪ್ಪಯ್ಯ
೧೦. ಶ್ರೀಮತಿ ಬಿ. ಎಲ್. ಸುಬ್ಬಮ್ಮ

ಲೆಕ್ಕಪತ್ರಗಳ ಸಮಿತಿ

೧. ಶ್ರೀ ಬಾಳೇಹಳ್ಳಿ ರಂಗೇಗೌಡ, ಅಧ್ಯಕ್ಷರು.
೨. ಶ್ರೀ ಎಂ. ಎಲ್. ವಾಸುದೇವಮೂರ್ತಿ, M. L C.
೩. ಶ್ರೀ ಎನ್. ಪಿ. ಗೋವಿಂದೇ ಗೌಡ
೪. ಡಾ|| ಬಿ. ಎಂ. ನಾರಾಯಣ್
೫. ಶ್ರೀ ಸುಂದರೇಶ್, ಮೂಡಿಗೆರೆ.

ಲೇಖಕರ ಪರಿಚಯ

೧. ಶ್ರೀ ಅಂಬಿಕಾತನಯದತ್ತ' ಶ್ರೀ ದ.ರಾ. ಬೇಂದ್ರೆಯವರ ಕಾವ್ಯನಾಮ. ಸಾಧನ ಕೇರಿ ಧಾರವಾಡದಲ್ಲಿರುವ ಇವರು ಕನ್ನಡದ ಶ್ರೇಷ್ಠ ಕವಿಗಳಾಗಿದ್ದಾರೆ. ಸಖೀಗೀತ, ಗರಿ, ಕಾಮಕಸ್ತೂರಿ, ನಾದಲೀಲೆ, ಅರಳು ಮರಳು, ಗಂಗಾವ ತರಣ ಮುಂತಾದ ಕೃತಿಗಳನ್ನು ಬರೆದಿದ್ದಾರೆ.

೨. ಶ್ರೀ ವಿ. ಕೃ. ಗೋಕಾಕ್, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಆಗಿದ್ದಾರೆ. ದ್ಯಾವಾಪೃಥವಿ, ಇಜ್ಜೋಡು, ಯುಗಾಂತರ ಮುಂತಾದುವು ಗಳನ್ನು ಬರೆದಿದ್ದಾರೆ.

೩. ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಕರ್ಣಾಟಕದಲ್ಲಿ ಮನೆ ಮಾತಾಗಿರುವ ಇವರ ವಿದ್ವತ್ತು ಪಾಂಡಿತ್ಯ ಪ್ರತಿಭೆಗೆ ಪುರಸ್ಕಾರವಾಗಿ ಮೈಸೂರು ರಾಜ್ಯವು ಆಸ್ಥಾನ ವಿದ್ವಾನ್, ಪಂಡಿತ ರತ್ನಂ, ಪ್ರಶಸ್ತಿಯನ್ನೂ ಭಾರತ ಸರ್ಕಾರವು 'ಪದ್ಮಶ್ರೀ' ಪ್ರಶಸ್ತಿಯನ್ನೂ ನೀಡಿವೆ. ಸಂಶೋಧನೆಗೆ ಹೆಸರಾದ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಕೃತಿಗಳನ್ನು ನೀಡಿದ್ದಾರೆ. ಸುಮಾರು ಹತ್ತು ವರ್ಷಗಳು ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾಗಿದ್ದರು.

೪. ಶ್ರೀ ಎಂ. ವಿ. ಸೀತಾರಾಮಯ್ಯನವರು ನಿವೃತ್ತ ಕನ್ನಡ ಪ್ರಾಧ್ಯಾಪಕರು. 'ರಾಘವ' ಎಂಬ ಕಾವ್ಯನಾಮದಿಂದ ಕೃತಿಗಳನ್ನು ರಚಿಸಿದ್ದಾರೆ.

೫. ಪ್ರೊ|| ಬಿ. ಎಚ್. ಶ್ರೀಧರ ಸಿರಸಿ ಕಾಲೇಜಿನ ಸಂಸ್ಕೃತ ವಿಭಾಗದ ಪ್ರಾಧ್ಯಾಪ ಕರೂ ವೈಸ್ ಪ್ರಿನ್ಸಿಪಾಲರು ಆಗಿದ್ದಾರೆ. ಹೊಸಗನ್ನಡ ಶೈಲಿ, ಬೇಂದ್ರೆ, ಮೇಘನಾದ, ರಸ ಯಜ್ಞ ಕೃತಿಗಳನ್ನು ಬರೆದಿದ್ದಾರೆ.

೬. ಶ್ರೀ ಮಿರ್ಜಿ ಅಣ್ಣಾರಾಯರು ಶೇಡಬಾಳದ ಶಾಂತಿ ಸದನದಲ್ಲಿ ಅಧ್ಯಾಪಕರಾಗಿ ದ್ದಾರೆ. ಜೈನಧರ್ಮ, ನಿಸರ್ಗ, ಅಶೋಕ ಚಕ್ರ, ಭಾರತೀಯ ಸಂಸ್ಕೃತಿಯ ಹೃದಯ ಮುಂತಾದ ಕೃತಿಗಳನ್ನು ಬರೆದಿದ್ದಾರೆ.

೭. ಶ್ರೀಮತಿ ಜಿ. ಸಾವಿತ್ರಿ, ಮೈಸೂರು ಟೆರೇಷಿಯನ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯರಾಗಿದ್ದಾರೆ. ಕನ್ನಡದಲ್ಲಿ ಜೀವನ ಚರಿತ್ರೆಗಳು ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿದ್ದಾರೆ.

೮. ಶ್ರೀ ಹಂ. ಪ. ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದಾರೆ. ದ್ರಾವಿಡ ಭಾಷಾ ಚರಿತ್ರೆ ಕೃತಿಯನ್ನು ಬರೆದಿದ್ದಾರೆ.

೯. ಶ್ರೀ 'ತಿರುಕ' ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಮುಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಸ್ಥಾಪಕರಾಗಿದ್ದಾರೆ.

೧೦. ಶ್ರೀಮತಿ ಕಮಲ ಹಂಪ. ನಾಗರಾಜಯ್ಯ ಇವರು ಮಹಾರಾಣಿ ಕಾಲೇಜಿನ ಕನ್ನಡ ಉಪನ್ಯಾಸಕಿಯರಾಗಿದ್ದಾರೆ.

೧೧. ಶ್ರೀ ಸಿ. ಪಿ. ಕೆ. ಮಾನಸ ಗಂಗೋತ್ರಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ, ಅನಂತ ಪೃಥ್ವಿ. ತಾರಾಸಖ, ಸಾಹಿತ್ಯ ಪ್ರವೇಶ, ಸಾಹಿತ್ಯರಾಧನೆ ಮುಂತಾದವುಗಳನ್ನು ಬರೆದಿದ್ದಾರೆ.

೧೨. ಶ್ರೀ ಕು.ವೆಂ. ಶ್ರೀನಿವಾಸಮೂರ್ತಿಗಳು ಹಾಸನದ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಇವರು ಅನೇಕ ಲೇಖನಗಳನ್ನು ಬರೆದಿದ್ದಾರೆ.

೧೩. ಶ್ರೀಮತಿ ಹೆಚ್. ಆರ್. ಇಂದಿರಾ, ಬೆಂಗಳೂರು ಲೇಖಕಿಯರ ಸಂಘದ ಸಂಚಾಲಕಿಯರು. ಖ್ಯಾತ ಬರಹಗಾರರು.

೧೪. ಶ್ರೀ ಕೆ. ನರಸಿಂಹಮೂರ್ತಿಗಳು, ಎಂ.ಎ., ಐ.ಎ.ಎಸ್, ಸುಪ್ರಸಿದ್ಧ ಸಾಹಿತಿ, ಕವಿ ಹಾಗೂ ವಿಮರ್ಶಕರು. ಕೊಡಗು ಜಿಲ್ಲಾಧಿಕಾರಿಗಳಾದ್ದಾರೆ.

೧೫. ಶ್ರೀಮತಿ ಕೆ. ಸಾವಿತ್ರಿ, ಬೆಂಗಳೂರಿನ ಹೆಸರಾಂತ ಮಹಿಳಾ ಲೇಖಕಿ.

೧೬. ಶ್ರೀ ಹಿ. ಮ. ನಾಗಯ್ಯ, 'ಒಳ್ಪರಿ ಬೆಳಗು' ಕವಿತಾ ಸಂಕಲನಾ ಪ್ರಕಟವಾಗಿದೆ. ಪತ್ರಿಕೋದ್ಯಮಿ, ಕವಿ ಹಾಗೂ ವಿಮರ್ಶಕರು ಕರ್ನಾಟಕ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರು.

೧೭. ಡಾ|| ಜಿ. ಮರುಳಸಿದ್ಧಯ್ಯನವರು ಮಾನಸಗಂಗೋತ್ರಿಯ ಸಂಸ್ಕೃತ ಪ್ರೊಫೆಸರ್ ಆಗಿದ್ದಾರೆ.

೧೮. ಶ್ರೀ ಜಿ. ಬ್ರಹ್ಮಪ್ಪನವರು, ಕೊಡಗು ಕಾಲೇಜಿನಲ್ಲಿ ಕನ್ನಡ ರೀಡರ್ ಆಗಿದ್ದಾರೆ. ರತ್ನಾಕರ ಶತಕ, ಸಾಮ್ರಾಟ್ ಖಾರವೇಲ, ಮುಂತಾದವುಗಳನ್ನು ಬರೆದಿದ್ದಾರೆ.

೧೯. ಶ್ರೀ ಕೆ. ಆರ್. ಶೇಷಗಿರಿ, ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧನ ಸಹಾಯಕರಾಗಿದ್ದಾರೆ. ವೀರ ಸಂಗಯ್ಯನ ಚೌಪದಿ ರುಕ್ಮಾಂಗದ ಚರಿತಗಳನ್ನು ಸಂಪಾದನೆ ಮಾಡಿದ್ದಾರೆ.

೨೦. ಶ್ರೀಮತಿ ಎಸ್. ರತ್ನಮ್ಮ ಎಂ. ಎ. ಇವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಉಪನ್ಯಾಸಕರು. ಹೆಸರಾಂತ ಬರಹಗಾರರು.

೨೧. ಶ್ರೀ ಸಾ.ಶಿ. ಮರುಳಯ್ಯ ಎಂ. ಎ. ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ಕನ್ನಡ ಅದ್ಯಾಪಕರು, ಕವಿಗಳು ಸಾಹಿತಿ ಮತ್ತು ಭಾಷಣಕಾರರು.

೨೨. ಶ್ರೀ ಎಸ್. ಪಿ. ಪಾಟೀಲರು, ಶೇಡಬಾಳ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದಾರೆ. ಉತ್ತಮ ಬರಹಗಾರರು. ಅನೇಕ ಲೇಖನಗಳನ್ನು ರಚಿಸಿದ್ದಾರೆ.

೨೩. ಶ್ರೀ ವಾಸುದೇವ ಭೂಪಾಲಂರವರು ಇವರು ಬೆಂಗಳೂರು ದಂಡಿನ ಲೆವಲಿ ರೋಡ್‌ನಲ್ಲಿ ವಾಸವಾಗಿದ್ದಾರೆ. ಹೆಸರಾಂತ ಲೇಖಕರು. ಅನೇಕ ಗ್ರಂಥಗಳನ್ನು ಬರೆದಿದ್ದಾರೆ.

೨೪. ಶ್ರೀ ಕಾಶೀ ವಿಶ್ವನಾಥ ಶೆಟ್ಟಿ, ಚಿಕ್ಕಮಗಳೂರು ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಕಾಶಿಕಾವೇರಿ, ಹೂವುಮಲ್ಲಿಗೆ, ಸೀತಕ್ಕನ ಸವತಿ,ಸಮಾಗಮ ಶಕ್ತ-ಶಾಕ್ತ, ಸಂಘಮಿತ್ರಾ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

೨೫. ಶ್ರೀ ಜಿ. ವಿ. ಶ್ರೀನಿವಾಸರಾಯರು, ಕೆ.ಜಿ.ಎಫ್. ಕಾಲೇಜಿನನಲ್ಲಿ ಇತಿಹಾಸ ಶಾಸ್ತ್ರದ ಉಪನ್ಯಾಸಕರಾಗಿದ್ದಾರೆ. ರಾಯಚೂರು ಇತಿಹಾಸ, ಪ್ರೌಢದೇವರಾಯ, ವಿರೂಪಾಕ್ಷರಾಯ ಮುಂತಾದುವು ಇವರ ಕೃತಿಗಳು.

೨೬. ಶ್ರೀ ಚ.ಸುಂದರೇಶನ್, ಬೆಂಗಳೂರು ಗೌ|| ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಪರಂಜ್ಯೋತಿ ದರ್ಶನ. ವೃಷ್ಟಿಯೋಗ, ಭಾವ ಚಿಂತಾರತ್ನ ವಿಮರ್ಶೆ, ತಲಕಟ್ಟು, ಹೊಸ ಬೆಳಕು ಮುಂತಾದವುಗಳನ್ನು ಬರೆದಿದ್ದಾರೆ.

೨೭. ಶ್ರೀ ಎಂ.ಜಿ. ನಂಜುಂಡಾರಾಧ್ಯರು ಸಂಶೋಧಕರು ಗ್ರಂಥಕರ್ತರು ಮೈಸೂರು ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

೨೮. ಶ್ರೀ ಭಾರತೀ ರಮಣಾಚಾರ್ಯರು ಕೋಲಾರ ಕಾಲೇಜಿನಲ್ಲಿ ಹಿಂದಿ ಅಧ್ಯಾಪಕರಾಗಿದ್ದಾರೆ. ಚರಿತ್ರಹೀನ. ವಿಪ್ರದಾಸ. ಗಿಲ್ ಹರೀಕೇಗಲ್ಪ ಮುಂತಾದ ಕೃತಿಗಳನ್ನು ಬರೆದಿದ್ದಾರೆ.

೨೯. ಶ್ರೀ ಎಂ.ವಿ.ಗುರುಬಸಪ್ಪ ಶೆಟ್ಟಿ, ಮಲೆನಾಡಿನವರಾದ ಇವರು 'ಮಲೆನಾಡು' ಎಂಬ ಮಾಸ ಪತ್ರಿಕೆಯನ್ನು ಕಳೆದ ಹದಿನೈದು ವರ್ಷಗಳಿಂದ ಪ್ರಕಟಿಸುತ್ತಿದ್ದಾರೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ.

೩೦. ಡಾ|| ಬಾ. ರಾ ಗೋಪಾಲ್, ಧಾರವಾಡದ ಇತಿಹಾಸದ ಸಂಶೋಧಕರಾದ ಇವರು ಕನ್ನಡದ ಹೆಸರಾಂತ ಲೇಖಕರು.

'ಕುವೆಂಪು' ಜೀವನದ ಮೈಲಿಗಲ್ಲುಗಳು

೧೯೦೪ ಜನನ (ಕುಪ್ಪಳಿ–ತೀರ್ಥಹಳ್ಳಿ ತಾಲ್ಲೂಕು) ಡಿಸೆಂಬರ್, ೨೯

೧೯೧೮ ಮೈಸೂರಿಗೆ ಬಂದು ವೆಸ್ಲಿಯನ್ ಮಿಷನ್ ಹೈಸ್ಕೂಲಿಗೆ ಸೇರಿದ್ದು

೧೯೨೨ 'Beginners Muse' ಇಂಗ್ಲಿಷ್ ಕವನ ಸಂಕಲನದ ಪ್ರಕಟಣೆ

೧೯೨೪ ಕನ್ನಡದಲ್ಲಿ ಮೊದಲಕೃತಿ 'ಅಮಲನ ಕಥೆ' ಪ್ರಕಟಣೆ

೧೯೨೫ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಬಂದದ್ದು

೧೯೨೭ ಬಿ.ಎ. ಪದವಿ

೧೯೨೮ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷತೆ (ಬೆಂಗಳೂರು)

೧೯೨೯ ಎಂ.ಎ. ಪದವಿ

೧೯೨೯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದ್ದು

೧೯೩೦ ಮೊತ್ತಮೊದಲನೆಯ ಕವನ ಸಂಕಲನ 'ಕೊಳಲು' ಪ್ರಕಟಣೆ

೧೯೩೩ ೧೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿಸಮ್ಮೇಳನದ ಅಧ್ಯಕ್ಷತೆ (ಹುಬ್ಬಳ್ಳಿ)

೧೯೩೬ 'ಚಿತ್ರಾಂಗದಾ' ಪ್ರಕಟಣೆ

೧೯೩೭ ವಿವಾಹ

೧೯೩೮ 'ಕಾನೂರು ಹೆಗ್ಗಡಿತಿ' ಪ್ರಕಟಣೆ

೧೯೪೬ ಕನ್ನಡ ಪ್ರಾಧ್ಯಾಪಕರೂ, ಇಲಾಖೆಯ ಮುಖ್ಯರೂ ಆದದ್ದು

೧೯೪೯ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ಪ್ರಕಟಣೆ

೧೯೫೫ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದದ್ದು

೧೯೫೫ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ

೧೯೫೬ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. ಪ್ರಶಸ್ತಿ

೧೯೫೬ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಕ

೧೯೫೭ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (ಧಾರವಾಡ)

೧೯೫೮ ಭಾರತ ಸರ್ಕಾರದಿಂದ 'ಪದ್ಮಭೂಷಣ' ಪ್ರಶಸ್ತಿ

೧೯೫೮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮ ತರಗತಿಗಳ ಪ್ರಾರಂಭ.

೧೯೬೦ ಸ್ನಾತಕೋತ್ತರ ಶಿಕ್ಷಣ ಕೇಂದ್ರ 'ಮಾನಸಗಂಗೋತ್ರಿ'ಯ ಪ್ರಾರಂಭ

೧೯೬೦ ಉಪಕುಪತಿ ಪದವಿಯಿಂದ ನಿವೃತ್ತಿ

೧೯೬೪ 'ರಾಷ್ಟ್ರಕವಿ' ಪ್ರಶಸ್ತಿ

೧೯೬೫ ಬೆಂಗಳೂರು ನಗರ ಕಾರ್ಪೊರೇಷನ್ ಸನ್ಮಾನ

೧೯೬೫ ಕರ್ನಾಟಕ ವಿಶ್ವವಿದ್ಯಾನಿಲಯದ ಡಾಕ್ಟರೇಟ್

೧೯೬೮ ಜ್ಞಾನ ಪೀಠದ ಪ್ರಶಸ್ತಿ

೧೯೬೯ ಮಾರ್ಚ್, ಚಿಕ್ಕಮಗಳೂರಿನಲ್ಲಿ ಸನ್ಮಾನ

ವೀರೇಂದ್ರ ಪಾಟೀಲ್
ಮುಖ್ಯ ಮಂತ್ರಿ

"ವಿಧಾನ ಸೌಧ"
ಬೆಂಗಳೂರು–೧

ದಿನಾಂಕ; ೨೩–೨–೧೯೬೯

ಸಂದೇಶ

ಚಿಕ್ಕಮಗಳೂರಿನ ಶ್ರೀ ಕುವೆಂಪು ಸನ್ಮಾನ ಸಮಿತಿಯವರು ಈ ತಿಂಗಳ ಕೊನೆಯ ಭಾಗದಲ್ಲಿ ಶ್ರೀಮದ್ರಾಮಾಯಣ ದರ್ಶನ ಕೃತಿ ಕರ್ತರಾದ ಡಾ|| ಕೆ. ವಿ. ಪುಟ್ಟಪ್ಪನವರನ್ನು ಸನ್ಮಾನಿಸುವರೆಂದು ಕೇಳಿ ಹರ್ಷಿತನಾಗಿದ್ದೇನೆ. ಮಲೆನಾಡಿನ ಸುಪುತ್ರರಾದ ಕುವೆಂಪುರವರನ್ನು ಆ ಪ್ರಕೃತಿ ರಮಣೀಯತೆಯ ಮಡಿಲಿನಲ್ಲಿಯೇ ಗೌರವಿಸುವುದು ಅಭಿಮಾನಾಸ್ಪದ. ಕುವೆಂಪುರವರು ಕನ್ನಡ ಭಾಷೆಯ ಕಣ್ಮಣಿಗಳು. ಅವರ ಕಾವ್ಯ ಸಂಪತ್ತು ಅಮರವಾಗಿದೆ. ಇಡೀ ಕನ್ನಡ ಲೋಕದ ಜನತೆ, ಅವರ ಸಾಹಿತ್ಯದ ಸೇವೆಯನ್ನು ಆದರಾಭಿಮಾನದಿಂದ ಬರಮಾಡಿಕೊಂಡಿದೆ. ರಾಷ್ಟ್ರದ ಮಹಾಕವಿಗಳನ್ನು ಚಿಕ್ಕಮಗಳೂರಿನ ಜನತೆ ಆದರಿಸುವುದು ಸಮಯೋಚಿತವಾಗಿದೆ. ಸನ್ಮಾನ ಮಹೋತ್ಸವಕ್ಕೆ ನನ್ನ ಶುಭಾಶಯಗಳನ್ನು ಪ್ರೀತಿಯಿಂದ ಸಲ್ಲಿಸುತ್ತೇನೆ.

(ಸಹಿ) ವೀರೇಂದ್ರ ಪಾಟೀಲ್

ಶ್ರೀ ಎಂ. ಜೆ. ಕೋದಂಡರಾಮ್
ಪ್ರಧಾನ ಕಾರ್ಯದರ್ಶಿ
" ಶ್ರೀ ಕುವೆಂಪು ಸನ್ಮಾನ ಸಮಿತಿ "
ಪೋಸ್ಟ್ ಬಾಕ್ಸ್ ನಂ.೫೦.
ಚಿಕ್ಕಮಗಳೂರು.

ಕೆ. ಲಕ್ಕಪ್ಪ
ಲೋಕೋಪಯೋಗಿ ಸಚಿವರು

ವಿಧಾನ ಸೌಧ
ಬೆಂಗಳೂರು-೧
ದಿನಾಂಕ ೨೦-೨-೧೯೬೯

ಸಂದೇಶ

ರಾಷ್ಟ್ರ ಕವಿ ಕುವೆಂಪು ಅವರಿಗೆ ಸನ್ಮಾನ ನೀಡುವ ಅಂಗವಾಗಿ ಒಂದು ವಿಶೇಷ ಸಂಚಿಕೆಯನ್ನು "ಉಪಾಯನ ಕೃತಿ ಕರಂಡ"— ನಾಮಾಂಕಿತದಲ್ಲಿ ಪ್ರಕಟಿಸುವುದು ನನಗೆ ಹರ್ಷವನ್ನುಂಟುಮಾಡಿದೆ. ನಮ್ಮ ನೆಚ್ಚಿನ ಕವಿಯನ್ನು ಕರೆಯುವ 'ಕುವೆಂಪು' ಈ ಮೂರು ಅಕ್ಷರಗಳನ್ನು ಉಚ್ಚರಿಸಿದರೆ ನನಗೆ ಈ ಹೆಸರಿನ ಯಾವುದಾದರೂ ಒಂದು ಹೂವು ಇರಬಹುದೆಂದು ಭಾಸವಾಗುತ್ತದೆ. ಹಾಗೆಯೇ ನಮ್ಮ 'ಕುವೆಂಪು' ಯವರ ಕಾವ್ಯಗಳು ಹಿರಿಯುವ ಹಿಗ್ಗಿನ ಕಮಲಗಳು ದುಂಬಿಗಳನ್ನು ಆಕರ್ಷಿಸುವಂತೆ ಅವರ ಕಾವ್ಯಗಳು ಸರ್ವತೋಮುಖವಾಗಿ ಎಲ್ಲರನ್ನು ಆಕರ್ಷಿಸಿರುವುದಲ್ಲದೆ ಭಾರತೀಯ ಜ್ಞಾನ ಪೀಠವು ಅವರನ್ನು ಸನ್ಮಾನಿಸಿದೆ.

ಕುವೆಂಪು ಅವರ ಆತ್ಮ ಪ್ರಜ್ಞೆಯ ಮಹಾಫಲವಾದ "ಶ್ರೀ ರಾಮಾಯಣ ದರ್ಶನಂ" ಕಾವ್ಯವನ್ನು ನಾಡಿನ ಪ್ರಜೆಗಳೆಲ್ಲರೂ ಶ್ರದ್ಧಾಭಕ್ತಿಯಿಂದ ಪಾರಾಯಣ ಮಾಡಿ ತಮ್ಮ ತಮ್ಮ ಜನ್ಮ ಸಾಫಲ್ಯಗೊಳ್ಳಲು ಕಾರಣರಾಗಿದ್ದಾರೆ ನಮ್ಮ ನಾಡಿನ ವಾಲ್ಮೀಕಿ. ಈ ಕಾವ್ಯವು ಮಹಾನ್‌ಕೃತಿಯು ಅವರ ಕಾವ್ಯಗಳೊಂದಾಗಿದೆ.

ಭಗವಂತನು ಕವಿ ಕುವೆಂಪು ಅವರಿಗೆ ದೀರ್ಘಾಯುಸ್ಸನ್ನು ಕೊಟ್ಟು ಅವರಿಂದ ನಮ್ಮ ನಾಡು ಸಾಹಿತ್ಯ ಪಥದಲ್ಲಿ ಮುನ್ನಡೆಯುವುದಕ್ಕೆ ದಾರಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಇಡೀ ನಮ್ಮ ನಾಡಿನ ಜನರು ಕವಿ ಕುವೆಂಪು ಅವರಿಗೆ ಅಚ್ಚುಮೆಚ್ಚಿನ ಬಿರುದನ್ನು ಶೀಘ್ರವೇ ಅಮೋಘ ರೀತಿಯಲ್ಲಿ ನೀಡುತ್ತಾರೆಂದು ನಂಬಿರುತ್ತೇನೆ.

(ಸಹಿ) ಕೆ. ಲಕ್ಕಪ್ಪ

ಬಿ. ರಾಚಯ್ಯ, ಬಿ.ಎಸ್.ಸಿ.,ಬಿ.ಎಲ್.
ವ್ಯವಸಾಯ ಮಂತ್ರಿ

"ವಿಧಾನ ಸೌಧ"
ಬೆಂಗಳೂರು-೧

ದಿನಾಂಕ: ೨೧—೨—೧೯೬೯

ಸಂದೇಶ

ಚಿಕ್ಕಮಗಳೂರಿನ ಕನ್ನಡಾಭಿಮಾನಿಗಳು ಈ ತಿಂಗಳ ಕೊನೆ ವಾರದಲ್ಲಿ ರಾಷ್ಟ್ರಕವಿ ಶ್ರೀ 'ಕುವೆಂಪು' ಅವರಿಗೆ ಸನ್ಮಾನ ಸಮಾರಂಭವನ್ನೇರ್ಪಡಿಸಿರುವುದು ಒಂದು ಸಂತಸದ ಸಂಗತಿ. ಇಂತಹ ಸಮಾರಂಭಗಳು ನಾಡಿನ ಜನತೆ ಕವಿವರ್ಯರಿಗೂ ತನ್ಮೂಲಕ ಕನ್ನಡ ನುಡಿಗೂ ಸಲ್ಲಿಸುವ ಅಳಿಲ ಸೇವೆ.

ಶ್ರೀ 'ಕುವೆಂಪು' ಅವರು ಒಂದು ಭಾಷೆಯ ಅಥವ ಒಂದು ದೇಶದ ಬರಡು ಕವಿಯಾಗಿರದೆ, ಜಗದ, ಯುಗದ, ಒಬ್ಬ ಶ್ರೇಷ್ಟಕವಿ. ಅವರ ಕೃತಿ ಗಗನಚುಂಬ ಮೇರುವಿನಷ್ಟು ಹಿರಿದು. ಅದರಲ್ಲಿ ಉದ್ಭವಿಸುವ ಕಾವ್ಯಸುಧೆ ಪಾವನ ಗಂಗಾ ಜಲದಂತೆ ಜನಮನಕ್ಕೆ ರಸದೂಟವನುಣಿಸಿ, ಥಣಿಸುತ್ತದೆ. ಮಿಗಿಲಾಗಿ ನಮ್ಮನ್ನು ಸತ್ಯತೆಯ ಸಾಕ್ಷಾತ್ಕಾರಕ್ಕೆ ಸ್ವಾಗತವೀಯುತ್ತದೆ.

ಶ್ರೀ 'ಕುವೆಂಪು' ವಿರಚಿತ ಜಗತ್ಪೂಜ್ಯ ರಾಮಾಯಣ ದರ್ಶನವು, ಅವರ ಕೃತಿಗಳಲ್ಲೊಂದು. ಅದು ಮಾನವನ, ಮನದ ಮಲಿನವನ್ನು ತೊಳೆದು, ಮಿತ್ಯದಿಂದ ಸತ್ಯೆಡೆಗೊಯ್ದು, ಚಿರಶಾಂತಿಯನ್ನು ಕೊಡುವ ಸಂಜೀವಿನಿ.

ಶ್ರೀ 'ಕುವೆಂಪು' ಸಹೃದಯಿಗಳು. ಅವರ ಕೃತಿ ಹೇಗೆ ಮೇರುವಿನಷ್ಟು ಹಿರಿದೋ ಅವರ ಹೃದಯವೂ ಅಷ್ಟೇ ಹಿರಿದು. ಸರ್ವರಿಗೆ ಸಮಬಾಳು; ಸರ್ವರಿಗೆ ಸಮಪಾಲು, ಎಂಬ ತತ್ವ ಅವರದು. ಮಲೆನಾಡಿನ ನಿಸರ್ಗದೊಡಲಿನಲಿ ಜನ್ಮವೆತ್ತಿ ಪ್ರಕೃತಿಯ ಮಡಲಿನಲಿ ಬೆಳೆದು ಅದರ ಸೊಬಗಿಗೆ ಮಾರುಹೋದ, ಭವ್ಯ ಸುಂದರ ಶೀಲದ ಋಷಿ ಅವರು ಅವರ ಸೇವೆ ಕನ್ನಡ ನುಡಿಗೆ, ಕನ್ನಡ ನಾಡಿಗೆ ಮತ್ತು ಇಡೀ ಕಾವ್ಯ ಪ್ರಪಂಚಕ್ಕೆ ಬಹುಕಾಲ ದೊರೆಯಬೇಕು. ಚೈತನ್ಯ ಸ್ವರೂಪಿಯಾದ ಭಗವಂತನು ಶ್ರೀ 'ಕುವೆಂಪು' ಅವರಿಗೆ ನವಚೇತನವನ್ನು ಕೊಟ್ಟು ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲೆಂದು ಹಾರೈಸುತ್ತೇನೆ.

ನಿಮ್ಮ ಉಪಾಯನ ಕೃತಿ ಕರಂಡಕ್ಕೆ ಯಶಸ್ಸು ಬಯಸುತ್ತೇನೆ.

(ಸಹಿ) ಬಿ. ರಾಚಯ್ಯ

ಸಂದೇಶಗಳು

............ಕನ್ನಡವನ್ನೇ ತಮ್ಮ ಉಸಿರಾಗಿಟ್ಟು ಕನ್ನಡದ ಸಾಹಿತ್ಯಕ್ಕೆ ವಿವಿಧ ಮತ್ತು ವಿಶಿಷ್ಟ ರೀತಿಗಳಲ್ಲಿ ಮಹತ್ ಸೇವೆ ಸಲ್ಲಿಸಿದ ಕವಿಯನ್ನು ನಾವು ಎಷ್ಟು ಸನ್ಮಾನಿಸಿದರೂ ಕಡಿಮೆ. ಮತ್ತು ಪರಮಾತ್ಮನು ಶ್ರೀ ಕುವೆಂಪು ಅವರಿಗೆ ಇನ್ನು ಹೆಚ್ಚಾಗಿ ಕನ್ನಡದ ಸೇವೆಯನ್ನು ಮಾಡುವ ಶಕ್ತಿಯನ್ನು ದಯಪಾಲಿಸಲಿ.

(ಸಹಿ) **ಪಿ. ಎಂ. ನಾಡಗೌಡ**
ಸಹಕಾರ ಪಂಚಾಯಿತಿ ರಾಜ್ಯ ಅಭಿವೃದ್ಧಿ ಸಚಿವರು

............ನಮ್ಮ ನಾಡ, ನುಡಿಯ ಇತಿಹಾಸದಲ್ಲಿ ಶ್ರೀ ಕುವೆಂಪುರವರ ಕೃತಿಗಳು ಶತಮಾನಗಳ ಕಾಲ ಶಾಶ್ವತವಾಗಿ ಉಳಿವುದರಲ್ಲಿ ಸಂದೇಹವಿಲ್ಲ. ಒಂದು ರಾಜ್ಯದ ಸಂಪತ್ತನ್ನು ಅಲ್ಲಿಯ ಖಜಾನೆಯಲ್ಲಿರುವ ಸೊತ್ತುಗಳಿಂದ ಮಾತ್ರ ಅಳೆಯಲ್ಪಡುವುದಿಲ್ಲ, ಅಲ್ಲಿ ಹುಟ್ಟಿ ಬೆಳೆದು ಬಾಳಿ ಬದುಕಿದ ಕವಿಗಳು, ವಿಜ್ಞಾನಿಗಳು ಮತ್ತು ಬುದ್ಧಿ ಜೀವಿಗಳು ಕೂಡ ಎಂಬುದರ ಅರಿವು ಜನತೆಗೆ ಆದಾಗ ಮಾತ್ರ ಆ ರಾಜ್ಯವನ್ನು ನಾಗರಿಕ ರಾಜ್ಯ ಅಥವಾ ರಾಷ್ಟ್ರ ಎಂದು ಕರೆಯುವುದರಲ್ಲಿ ಸತ್ಯವಿದೆ; ನ್ಯಾಯವಿದೆ, ಕರೆಯಿಸಿಕೊಳ್ಳುವ ಅರ್ಹತೆಯೂ ಆ ರಾಜ್ಯಕ್ಕಿದೆ. ಈ ದೃಷ್ಟಿಯಿಂದ ನಮ್ಮ ರಾಜ್ಯಕ್ಕೆ ಶ್ರೀ ಕುವೆಂಪುರವರು ಸಲ್ಲಿಸಿದ ಅಪಾರ ಸೇವೆಗೆ ನಮ್ಮ ರಾಜ್ಯದ ಕೋಟ್ಯಾಂತರ ಮಂದಿ ಋಣಿಗಳಾಗಿದ್ದಾರೆ. ಪರಮಾತ್ಮನು ಅವರಿಗೆ ಆಯುರಾರೋಗ್ಯವನ್ನು ಸದಾ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

(ಸಹಿ) **ಬಿ. ವಿಠಲದಾಸ ಶೆಟ್ಟಿ**
ಆಹಾರ ಮತ್ತು ಸಿವಿಲ್ ಸರಬರಾಜುಗಳ ರಾಜ್ಯ ಮಂತ್ರಿ.

............ಮಹಾಕವಿ ಶ್ರೀ ಕುವೆಂಪು ರವರನ್ನು ಸನ್ಮಾನಿಸುವ ಮತ್ತು ಆ ಸಂದರ್ಭದಲ್ಲಿ "ಉಪಾಯನ ಕೃತಿ ಕರಂಡ" ಎಂಬ ಹೊತ್ತಿಗೆಯನ್ನು ಪ್ರಚುರ ಪಡಿಸುವ ವಿಷಯವನ್ನು ತಿಳಿದು ಅತೀವ ಆನಂದವಾಯಿತು. ಶ್ರೀ ಕುವೆಂಪುರವರಿಗೆ ಯಾವ ರೀತಿ ಸನ್ಮಾನ ಮಾಡಿದರೂ ಕಡಿಮೆಯೇ.

(ಸಹಿ) **ನ. ಮು. ಕೊಟ್ರ ಬಸಯ್ಯ ಸೋಗಿ**
ವಿದ್ಯಾ ಖಾತೆಯ ಉಪ ಸಚಿವರು



ಕುವೆಂಪು – ದ. ರಾ. ಬೇಂದ್ರೆ

ಯುಗದ ಕವಿಗೆ

ಯುಗದ ಕವಿಗೆ
ಜಗದ ಕವಿಗೆ

ಶ್ರೀ ರಾಮಾಯಣ ದರ್ಶನದಿಂದಲೆ ಕೈ
ಮುಗಿದ ಕವಿಗೆ—ಮಣಿಯುದವರು ಯಾರು ?

ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ
ಕವನ ತತಿಗೆ ತಣಿಯುದವರು ಆರು ?

ಕನ್ನಡಿಸಲಿ ಶಿವಜೀವನ
ಮುನ್ನಡಿ ಸಲಿಯುವ-ಜನ-ಮನ
ಇದೆ ಪ್ರಾರ್ಥನೆ ನಮಗೆ

ತಮವೆಲ್ಲಿದೆ ರವಿಯಿದಿರಿಗೆ ?
ಉತ್ತಮ ಕವಿನುಡಿ-ಓದುಗರಿಗೆ
ಚಾರುತ್ವದ ಕುಂದಣದಲಿ
ಚಾರಿತ್ರ್ಯದ ರತ್ನ

ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೆ ತೃಪ್ತಿಯು ನಿಮಗೆ

—ಅಂಬಿಕಾತನಯ ದತ್ತ.

ನಮೋ ಕಾವ್ಯ ಕಲ್ಪತರುವೆ

ಕಾಶಿ ವಿಶ್ವನಾಥ ಶೆಟ್ಟಿ, ಎಂ. ಎ.

ಕುವೆಂಪು ಗುರುವೆ ನಮ್ಮ ನಾಡ ವರವೆ ನಮೋ ಕಾವ್ಯಕಲ್ಪತರುವೆ
ಬದುಕ ಬಯಸಿದೀ ಭಾಪದುಸಿರ ಜಿಳಿಸಲಿಕೆ ಬೇಡತಿರುವೆ ||

ಕಲ್ಪ ಅಲ್ಪತೆಯ ತಲ್ಪದಲ್ಲಿ ಚಿರ ಯೋಗ ಮುದ್ರೆ ರಚಿಸಿ
ಕ್ಷರದ ನುಡಿಯ ಕಗ್ಗಲ್ಲ ಕಡೆದು ಅಕ್ಷರತೆ ನೀಡ ಬಯಸಿ ||

ಉಸಿರ ಮಣಿಗಳನು ತಿರುವಿ ಎಣಿಸಿ ಸಸಿ ವೃಕ್ಷವಾಗೆ ತಪಸಿ
ಜಹ್ನು ಶಿವನ ಶಿರ ಕರ್ಣದಿಂದ ಹೊರಬಂದ ಗಂಗೆಯೆನಿಸಿ ||


ಬರಲು ಪುಣ್ಯ ಪುಂಜಗಳ ಮೊತ್ತ ಅಃ! ಹೊತ್ತ ಕಾವ್ಯಧಾರೆ
ಬಂತು ಭವದ ಬಳಲಿಕೆಯ ಕಳೆದು ಮನ ಊರ್ಧ್ವ ಧರೆಯ ಸೇರೆ ||

'ಉದಯರವಿಯ' ಗೃಹ ಗವಿಯ ಸೇರಿ ಚಿರಕಾಲ ತಪದಿ ನಿಂತು
ಕಂಡ ಬೆಳಕು ಅಖಂಡವಾಗೆ ಶ್ರೀ ರಾಮ ಚರಿತ ಬಂತು ||

ವಾರಿ ಹರಿದು ಅಗಲಗಲವಾಗಿ ಕೊನೆಗಾದ ತೆರದಿ ಕಡಲು
ಕಿರುಕಥನ ಕವನ ಮಹಾ ಕಾವ್ಯವಾಯ್ತು ಓದುಗಗೆ ಮುಕ್ತಿ ಕೊಡಲು ||

ಪದಪುಂಜ ಶಕ್ತಿ ಒಳಅರ್ಥ ಮೌಕ್ತಿ ತೀದಾಗ ಭಾವ ಮುಕ್ತಿ
ಬೆಲೆ ತಿಳಿಯುವೆತ್ನ ಪಾಷಾಣರತ್ನ ಪರಿಣಿವೆ ಮೂಲಶಕ್ತಿ ||

ಉಪಾಯನ ಕೃತಿ ಕರಂಡ



ಶ್ರೀ ಕುವೆಂಪು

ಚಿತ್ರಕಾರ : ಬಿ. ವಿಶ್ವನಾಥ್

[illegible]

[illegible] 10-1-69

[illegible]

ನಡತೆಯೋ ಬಾಳಿನ ಸಂಸ್ಕೃತಿ

ಕನ್ನಡಾಂಬೆಯ ಐಸಿರಿಯ ಸುಪುತ್ರ; ಕವಿಕುಲ ಪ್ರದೀಪ; ಸಾಹಿತ್ಯ ಲೋಕದರತ್ನ; ಸುಹೃದಯರ ಕಣ್ಮಣಿ; ಪೌರಾಣಿಕ ಸ್ಮೃತಿದಾತ ಇಪ್ಪತ್ತನೆ ಶತಮಾನದ ವಾಲ್ಮೀಕಿ ಋಷಿಯು ಆದ ಮಾನ್ಯಶ್ರೀ ಕುವೆಂಪುರವರೇ, ನಿಮ್ಮ ನಾಮ ನಿಮ್ಮ ಸಾಹಿತ್ಯ ಚಿರಾಯುವಾಗಲಿ. ಭಾವೀಜೀವಿಗಳಿಗೆ ಮಾರ್ಗದರ್ಶಕವಾಗಲಿ. ಕನ್ನಂಡಾಂಬೆಯ ರೂಪದಲ್ಲಿ ತೋರುವ ವಿಶ್ವರೂಪಿ ಭಾರತಮಾತೆಗೆ ಜಯವಾಗಲಿ.

ಶ್ರೀ ಶಂಕರಾನಂದ,
ಶಿವಾನಂದ್ರಾಮ, ಅಜ್ಜಂಪುರ.

ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಂ
ಶಾರದಾ ಪೀಠಂ, ಶೃಂಗೇರಿ

ಕೆ. ಕೃಷ್ಣಭಟ್ಟ, ಬಿ.ಎಸ್.ಸಿ.
ಪ್ರವೇಟ್ ಸೆಕ್ರೆಟರಿ.

ಮೊಖ್ಖಾಂ : ಬೆಂಗಳೂರು,
ತಾ|| ೨-೨-೧೯೬೯

ಸಂದೇಶ

ಶ್ರೀ ಎಂ. ಜೆ. ಕೋದಂಡ ರಾಮ ಶೆಟ್ಟರಿಗೆ

ನೀವು ದಿನಾಂಕ ೨೫-೧-೬೯ ರಲ್ಲು ಕಳುಹಿಸಿದ ಪತ್ರ ನಮ್ಮ ಬೆಂಗಳೂರು ಕ್ಯಾಂಪ್‌ನಲ್ಲಿ ಹಸ್ತಗತವಾಯಿತು. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರಲ್ಲಿ ನಿಮ್ಮ ಪ್ರಣಾಮಗಳೊಂದಿಗೆ ಅರಿಕೆ ಮಾಡಲಾಯಿತು.

ಕವಿತೆಯಿಂದ ಜನಗಳಿಗೆ ಜ್ಞಾನೋದಯವಾಗುವುದು. ಶ್ರೀ ಕುವೆಂಪುರವರು ಪ್ರಖ್ಯಾತ ಕವಿಗಳು. ಇವರು ಸಾಹಿತ್ಯ ಸೇವೆಯನ್ನು ಚೆನ್ನಾಗಿ ಮಾಡಿ, ದೇಶದ ಜನರನ್ನು ಸನ್ಮಾರ್ಗ ಪ್ರವರ್ತರನ್ನಾಗಿ ಮಾಡಲು ತುಂಬಾ ಶ್ರಮಿಸಿದ್ದಾರೆ. ಇವರ ಸನ್ಮಾನ ಸಮಾರಂಭವು ಯಶಸ್ವಿಯಾಗಿ ನಡೆಯಲಿ, ಇವರು ಚಿರಕಾಲ ಕನ್ನಡ ಸಾಹಿತ್ಯ ಸೇವೆಯನ್ನು ಮಾಡಲಿ : ಎಂದು ಶ್ರೀ ಶ್ರೀ ಗಳವರು ಆಶೀರ್ವದಿಸಿ ಅನುಗ್ರಹಿಸಿದ ಆಶೀರ್ಮಂತ್ರಾಕ್ಷತೆ, ಶ್ರೀ ಶಾರದಾ ಚಂದ್ರಮೌಳೀಶ್ವರರ ಪ್ರಸಾದವನ್ನು ಈ ಮೂಲಕ ಲಗ್ತೀಕರಿಸಿರುತ್ತೆ.

ಇಂತೀ ತಮ್ಮ ವಿಶ್ವಾಸಿ,
(ಸಹಿ.) ಕೆ. ಕೃಷ್ಣಭಟ್ಟ.

ಶ್ರೀ ಬಿ. ಸುಬ್ಬಯ್ಯ, ಬಿ.ಇ., ಎ.ಎಂ.ಐ.ಇ.
ಕುವೆಂಪು ಸನ್ಮಾನ ಸಮಿತಿಯ ಅಧ್ಯಕ್ಷರು.

ಶುಭ ಹಾರೈಕೆ

ಈ ಪ್ರಪಂಚದಲ್ಲಿ ಮಾನವನಾಗಿ ಜನಿಸಿರುವುದು ಸಂಸಾರ ಸಾಗರ ದಾಟಿ ಮುಕ್ತಿಪಡೆದು ಚೈತನ್ಯ ಸ್ವರೂಪನಾಗಲೋಸುಗ. ಆದರೆ ಈ ಮಾಯಾ ಪ್ರಪಂಚದಿಂದ ದೂರನಾಗಿ ಜಾಗೃತ ಸ್ವಪ್ನ ಸುಷುಪ್ತಿಗಳಿಗೆ ಸಾಕ್ಷಿಯಾಗಿ ಆತ್ಮ ಜ್ಞಾನವನ್ನು ಪಡೆದು ಜೀವನ್ಮುಕ್ತನಾಗಬೇಕಾದರೆ ಮಾನವನಿಗೆ ಸಾತ್ವೀಕಾಹಾರ ಸತ್ಸಂಗ, ಮತ್ತು ಸದ್ ಗ್ರಂಥಗಳೇ ಹೆದ್ದಾರಿಗಳು, ಆದರೆ ಈ ವಿಜ್ಞಾನಮಯ ಕಲಿಯುಗದಲ್ಲಿ ಸಾತ್ವೀಕಾಹಾರ ಮತ್ತು ಸತ್‌ಸಂಗ ದುರ್ಲಭ ಮಾನವನು ಅಧೋಗತಿಗೆ ಇಳಿಯುವ ಮಾರ್ಗಗಳೇ ಹೆಚ್ಚು. ಮನಸ್ಸನ್ನು ವಿಷಯ ವಸ್ತುಗಳ ಕಡೆಗೆ ಎಳೆಯುವ ಸೌಲಭ್ಯಗಳೇ ಹೆಚ್ಚು ಇಂತಹಾ ದುಸ್ಥಿತಿಯಲ್ಲಿ ಮಾನವ ಉದ್ಧಾರವಾಗಿ ತನ್ನ ಆತ್ಮೋನ್ನತಿಯನ್ನು ಮಾಡಿಕೊಂಡು ಸುಖ ಶಾಂತಿಯನ್ನು ಪಡೆಯಬೇಕಾದರೆ ಸದ್ ಗ್ರಂಥಗಳೇ ಗತಿ.

ಮಾನವನು ಈ ಮಹಾಕಾವ್ಯ 'ರಾಮಾಯಣ ದರ್ಶನ'ವನ್ನು ಓದುವುದರಿಂದಲೂ ಶ್ರವಣ ಮನನಗಳಿಂದ ದೇವ ಮಾನವನಾಗುವುದರಲ್ಲಿ ಕಿಂಚತ್ತೂ ಅನುಮಾನವಿಲ್ಲ; ಮತ್ತು ಈ ಮಹಾಕಾವ್ಯದ ಅದ್ಯಯನದಿಂದ ಪಂಚೇಂದ್ರಿಯಗಳೂ ಆತ್ಮಾನಂದವನ್ನು ಅನುಭವಿಸುತ್ತದೆ. ವಿಶ್ವಕವಿ ಶ್ರೀ 'ಕುವೆಂಪು'ರವರು ಬರೆದಿರುವ ಈ ಮಹಾ ಕೃತಿ ಮಾನವ ಜನಾಂಗಕ್ಕೆ ಅಮೃತೋಪಾದಿಯಲ್ಲಿದೆ. ಈ ಕಾವ್ಯವು ವಸಿಷ್ಠ ರಾಮಾಯಣದ ಹಾಗೆ ಪ್ರತಿಯೊಂದು ಸಂದರ್ಭದಲ್ಲೂ ಆತ್ಮಜ್ಞಾನದ ಅನುಭವವನ್ನೇ ಬೋಧಿಸುವುದಲ್ಲದೆ ಮಾನವನ ಅಂತಃಕರಣವನ್ನು ಮಲ ವಿಕ್ಷೇಪ ದೋಷಗಳಿಂದ ಬಿಡುಗಡೆ ಮಾಡುವುದು. ಈ ರಾಮಾಯಣ ದರ್ಶನದ ಶ್ರೀರಾಮನೇ ಆತ್ಮ, ಲಕ್ಷ್ಮಣನೇ-ಜೀವ, ಸೀತೆಯೇ–ಮಾಯೆ. ಶೂರ್ಪಣಕಿಯು ಶ್ರೀರಾಮನನ್ನೇ

ಬಯಸಿ ಸೀತೆಯನ್ನು ದೂರೀಕರಿಸಿ ತನ್ನ ಕಿವಿ ಮೂಗುಗಳನ್ನು ಕಳೆದು ಕೊಂಡಳು. ಲಂಕಾಧಿಪತಿಯು ಸೀತೆಯನ್ನೇ (ಪ್ರಕೃತಿ) ಬಯಸಿ ರಾಮನನ್ನು ದೂರೀಕರಿಸಿ ತಾನೂ ನಾಶವಾಗಿ ತನ್ನ ವಂಶವನ್ನೇ ನಿರ್ಮೂಲ ಮಾಡಿಕೊಂಡನು. ಮಹಾ ಭಕ್ತನಾದ ವಿಭೀಷಣ ರಾಮನಿಗೆ ಶರಣು ಹೋಗಿ ಸೀತೆಯನ್ನು ಆತನಿಗೆ ಒಪ್ಪಿಸಿ ಪರಮಾತ್ಮ ಮತ್ತು ಪ್ರಕೃತಿಯ ಸಮನ್ವಯ ಮಾಡಿ ಲಂಕಾಪಟ್ಟಣವನ್ನು ಪಡೆದು ಮುಕ್ತಿಯನ್ನು ಹೊಂದಿದನು, ಎಂಬುದನ್ನು ಈ ಕಾವ್ಯವು ಎತ್ತಿ ಹಿಡಿದು ಮಾನವನು ಈ ಜಗತ್ತಿನಲ್ಲಿ ಆತ್ಮ ಚಿಂತನೆಯಿಂದ, ಆತ್ಮಾನುಭವದಿಂದ ಪ್ರಕೃತಿ ಯನ್ನು ಆತ್ಮಾರ್ಪಣೆ ಮಾಡುವುದರಿಂದ ಸುಖ ಶಾಂತಿಯಿಂದ ಬಾಳ ಬಹುದೆಂಬು ದನ್ನು ಎತ್ತಿ ತೋರಿಸುತ್ತದೆ. ಈ ಮಹಾ ಕಾವ್ಯವು ದೇವರೇ ಈ ಪ್ರಪಂಚದಲ್ಲಿ ಮಾನವನಾಗಿ ಹುಟ್ಟಿದರೂ, ಎಷ್ಟು ಕಷ್ಟಕಾರ್ಪಣ್ಯಗಳಿಗೆ ಸಿಕ್ಕಿ ಈ ಮಾಯೆ ಯಿಂದ ತಪ್ಪಿಸಿಕೊಳ್ಳುವುದು ಎಷ್ಟು ಅಸಾಧ್ಯ ಎಂಬುದನ್ನೂ ಮತ್ತು ಅದನ್ನು ತ್ಯಾಗ, ಧೈರ್ಯ, ಸಹನೆ, ಶಾಂತಿ ಮತ್ತು ಧರ್ಮದಿಂದ ಸಹಿಸಿ ಮಾನವನಿಗೆ ಮಾರ್ಗ ದರ್ಶಕನಾಗಿ ಬಾಳುವುದು ಹೇಗೆ ಎಂಬುದನ್ನು ಎತ್ತಿ ಪ್ರತಿಪಾದಿಸಿದೆ. ವಾಲ್ಮೀಕಿ ರಾಮಾಯಣದಿಂದ ಹಿಡಿದು ಅನೇಕ ರಾಮಾಯಣಗಳು ನಮ್ಮ ದೇಶದಲ್ಲಿ ಇದ್ದರೂ ಶ್ರೀ ಕುವೆಂಪುರವರ ರಾಮಾಯಣ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದು, ಅನೇಕ ರಾಮಾಯಣಗಳ ಗುಂಪಿನ ದೇವಾಲಯಕ್ಕೆ ಬಂಗಾರದ ಕಳಶದಂತಿದೆ. ಇಂತಹ ಮಹಾಕಾವ್ಯವನ್ನು ಕರ್ನಾಟಕದಲ್ಲಿ ಪಡೆದಿರುವ ನಾವುಗಳು ಪುಣ್ಯಶಾಲಿಗಳು ಮತ್ತು ಭಾಗ್ಯವಂತರು. ಅದರಲ್ಲೂ ಇಂತಹ ಪುಣ್ಯಾತ್ಮನಾದ ರಾಷ್ಟ್ರಕವಿ ನಮಗೆ ದೊರೆತಿರುರುವುದು ನಮ್ಮ ಭಾಗ್ಯವೇ ಸರಿ. ದಯಾಮಯನಾದ ಪರಮೇಶ್ವರನು ಈ ಪುಣ್ಯಾತ್ಮರಿಗೆ ಇನ್ನೂ ಹೆಚ್ಚಿನ ಆಯುಸ್ಸು ಆರೋಗ್ಯವನ್ನು ಕೊಟ್ಟು, ಮಾನವ ಕೋಟಿಯನ್ನು ಈ ಪಾಪ ಕೂಟದಿಂದ ಉದ್ಧರಿಸಲೆಂದು ಕಾವ್ಯರೂಪಿ ಶ್ರೀರಾಮ ಚಂದ್ರನನ್ನು ಪ್ರಾರ್ಥಿಸುತ್ತೇನೆ.



ಬಿ. ಸುಬ್ಬಯ್ಯ, ಬಿ.ಇ.,ಎ.ಎಂ.ಐ.ಇ.
ಅಧ್ಯಕ್ಷರು

VICE-PRESIDENT
INDIA
NEW DELHI

February 2, 1969.

Dear Sir,

Thank you for your letter of the 25th January.

I send my best wishes for the success of your function to be held during the month of February, 1969.

Yours faithfully,
(Sd.) V. V. GIRI.

ALL INDIA CONGRESS COMMITTEE

7, JANTAR MANTAR ROAD, NEW DELHI–1

S. NIJALINGAPPA
President.

February 4, 1969.

Dear Shri Kodanda Ram,

I am very happy to learn that you are arranging a grand function to honour our great poet Shri "Kuvempu". He more than deserves this honour. I wish the function all success and long life and greater glory for Shri Kuvempu.

Yours sincerely,
(Sd.) S. NIJALINGAPPA.

RAJ NIVAS
PONDICHERRY

February 19, 1969

I am glad to learn that a week long function is being organised to felicitate Poet Shri K. V. Puttappa and that the 'Magnum Opus' of his creative genius 'Ramayana Darshana' is sought to be given the honour it deserves.

It is indeed an indication of the growing enlightenment among the public that due respect and honour are conferred on poets even during their life time. It is at the same time a reflection of the inherent greatness of his poetic accomplishments. The proposed commemorative Souvenir entitled 'Upayana Kruthi Karanda', I hope, will help to widen the circle of Ku Vem Pu's admirers.

The organisers will thus earn the appreciation of all patrons of creative endeavour.

I wisth the function all success.

(Sd.) B. D. JATTI,
Lt. Governor.

ಬೆಂಗಳೂರು ವಿಶ್ವವಿದ್ಯಾಲಯ

ವಿ. ಕೃ. ಗೋಕಾಕ್,
ಉಪಸ್ಥಾಪತಿ

ಬೆಂಗಳೂರು,
ತಾ|| ೧೭-೧-೧೯೬೯

ಸಂದೇಶ

ಸನ್ಮಾನ್ಯರೇ,

ತಾವು ರಾಷ್ಟ್ರ ಮಹಾಕವಿ ಶ್ರೀ ಕುವೆಂಪುರವರನ್ನು ಗೌರವಿಸುವ ಕಾರ್ಯಕ್ರಮವನ್ನು ತಿಳಿದು ಬಹಳ ಸಂತೋಷವಾಯಿತು. ಈ ಸಂದರ್ಭದಲ್ಲಿ ಸಂಸ್ಮರಣ ಸಂಪುಟವೊಂದನ್ನು ಪ್ರಕಟಿಸುವುದು ಬಹಳ ಆನಂದವಾದ ವಿಷಯ. ನಿಮ್ಮ ಕಾರ್ಯಕ್ಕೆ ಎಲ್ಲ ಯಶಸ್ಸನ್ನು ಕೋರುತ್ತೇನೆ.

ಇತಿ ವಂದನೆಗಳು,
(ಸಹಿ.) ವಿ. ಕೃ. ಗೋಕಾಕ್

THE ACADEMY OF GENERAL EDUCATION

MANIPAL, S. KANARA

Dr. T.M.A. PAI, M.B., B.S.
President and Registrar.

January 31, 1969

Dear Sir,

I am glad to know that you are arranging a function to felicitate the famous Kannada author, Dr. K. V. Puttappa, popularly known as Kuvempu.

A person lives through his writings ; so has been the impression and conviction of many. Dr. Puttappa, through his writings, will always have a place of pride among the people of Karnatak. It is good that you highlight the qualities of head and heart of some of these people by felicitating them and having their blessings also. The function and the publication that you will bring out on the occasion both will have an inspiration to give to the people that participate. Kindly give my regards to Dr. Puttappa and excuse my absence.

Yours faithfully,
(Sd.) Dr. T.M.A. PAI.

V. L. PATIL,
Minister for Social Welfare

VIDHANA SOUDHA
BANGALORE-1,
Dated 21st February 1969.

MESSAGE

It gives me great pleasure to learn that the Shri Kuvempu Sanmana Samiti, Chickmagalur is to arrange a grand function towards the end of February, 1969, to felicitate Dr. K. V. Puttappa, the great Kannada Poet, more popularly known as 'Ku Vem Pu' and that to mark the great occasion, a Souvenir entitled "UPAYANA KRUTHI KARANDA" is also to be released. Dr. Puttappa is undoubtedly one of the greatest living Poets of our country. Not only we Mysoreans but the whole of India has acclaimed him as one. The recent honours conferred on him by the President of India have enhanced the greatness of the Kannada Language. His monumental work 'Ramayana Darshana' will rank in World Literature as one of the greatest. While wishing the function a grand success, I send my warmest wishes on the occasion of the publication of the Souvenir.

(Sd.) V. L. PATIL.



ಶ್ರೀಮದ್ರಾಮಾಯಣ ದರ್ಶನದ ಸತ್ಯಾರಾಧಕರು

ಶ್ರೀ ಹೆಚ್. ಹೊಂಬೇಗೌಡರು

ಮೈಸೂರು ರಾಜ್ಯದ ಶ್ರೇಷ್ಠ ನ್ಯಾಯಾಧೀಶರು

ಡಾ॥ ಕೆ. ವಿ. ಪುಟ್ಟಪ್ಪನವರು

ಪದ್ಮಶ್ರೀ ಪ್ರೊ॥ ವಿ. ಕೃ. ಗೋಕಾಕ್.

ಡಾಕ್ಟರ್ ಕೆ. ವಿ. ಪುಟ್ಟಪ್ಪನವರು ದಿನಾಂಕ 29-12-1904ರಲ್ಲಿ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿ ಎಂಬ ಗ್ರಾಮದಲ್ಲಿ ಜನ್ಮತಾಳಿದರು. ಅಪೂರ್ವ ನಿಸರ್ಗಸೌಂದರ್ಯದ ನೆಲೆವೀಡಾದ ಸಹ್ಯಾದ್ರಿಯ ಆವರಣದಲ್ಲಿರುವ ಕುಪ್ಪಳ್ಳಿಯಲ್ಲಿ ಬೆಳೆದ ಅವರು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ತೆರಳಿದರು. ರಾಮಕೃಷ್ಣಾಶ್ರಮದಲ್ಲಿದ್ದು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಹಾಗು ಸ್ವಾಮಿ ವಿವೇಕಾನಂದರ ಪ್ರಭಾವಲಯದಲ್ಲಿ ಅವರ ಜೀವನ ಜ್ಯೋತಿ ಇನ್ನಷ್ಟು ದೇದೀಪ್ಯಮಾನವಾಯಿತು. ಈ ಪುಣ್ಯಪುರುಷರಿಬ್ಬರ ಜೀವನ ಚರಿತ್ರೆಯನ್ನು ತಮ್ಮ ಕಾವ್ಯಮಯ ಶೈಲಿಯಲ್ಲಿ ಡಾಕ್ಟರ್ ಪುಟ್ಟಪ್ಪನವರು ಬರೆದಿದ್ದಾರೆ.

ಇಂಗ್ಲೀಷಿನಲ್ಲಿ ಕಾವ್ಯಾಭಿವ್ಯಕ್ತಿಯನ್ನು ಪಡೆಯುತ್ತಿದ್ದ ಪುಟ್ಟಪ್ಪನವರನ್ನು ಡಾಕ್ಟರ್ ಜೇಮ್ಸ್ ಹೆಚ್. ಕಸಿನ್ಸ್ ಅವರು ಕನ್ನಡಕ್ಕೆ ತಿರುಗಿಸಿದರು. ಹಿಂದಿನ ತಲೆಮಾರಿನ ಪ್ರತಿಭಾವಂತ ಲೇಖಕರ ಹಾಗೂ ಶಿಕ್ಷಕರ ಸನ್ನಿಧಿಯಲ್ಲಿ ಬೆಳೆದ ಹೊಸ ಕವಿಗಳ ಮೇಳಕ್ಕೆ ಡಾಕ್ಟರ್ ಪುಟ್ಟಪ್ಪನವರು ಕಂಠಮಣಿಯಾದರು. ಸ್ವಯಂಸ್ಫೂರ್ತಿಯಿಂದ ತುಂಬಿದ ಕಾವ್ಯ ಅವರ ಲೇಖನಿಯಿಂದ ಹೊರಹೊಮ್ಮಿತು.

ತಮ್ಮ ವ್ಯಾಸಂಗವನ್ನು ಮುಗಿಸಿದನಂತರ ಕನ್ನಡದ ಅಧ್ಯಾಪಕರಾಗಿ ಡಾಕ್ಟರ್ ಪುಟ್ಟಪ್ಪನವರು ಶೈಕ್ಷಣಿಕ ಕ್ಷೇತ್ರದಲ್ಲಿ ಅಡಿಯಿಟ್ಟರು. ಕ್ರಮೇಣ ಅವರು ಪ್ರಾಧ್ಯಾಪಕರಾದರು; ಪ್ರಾಚಾರ್ಯರಾದರು. ಮುಂದೆ ತಮ್ಮ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ಉತ್ತಮ ಸೇವೆ ಸಲ್ಲಿಸಿದರು. ಪ್ರಾಧ್ಯಾಪಕರಾಗಿದ್ದಾಗ ಕನ್ನಡ ಸಾಹಿತ್ಯದ ಸೀಮಾಪುರುಷರನ್ನು ಕುರಿತು ಅವರು ಶ್ರೇಷ್ಠ ವಿಮರ್ಶಾತ್ಮಕ ಪ್ರಬಂಧಗಳನ್ನು ಬರೆದರು. ಕುಲಪತಿಗಳಾಗಿದ್ದಾಗ ಪ್ರಾದೇಶಿಕ ಭಾಷೆ ಉಚ್ಚಶಿಕ್ಷಣದ ಮಾಧ್ಯಮವಾಗಬೇಕೆಂಬ ತತ್ವವನ್ನು ಅವರು ಘೋಷಿಸಿದಲ್ಲದೆ ಅದನ್ನು ಕಾರ್ಯರೂಪಕ್ಕೆ ತಂದರು. ಕನ್ನಡದಲ್ಲಿ ಎಲ್ಲ ವಿಷಯಗಳನ್ನು ಕುರಿತು ಉನ್ನತ ಮಟ್ಟದ ಪಠ್ಯಪುಸ್ತಕಗಳ ನಿರ್ಮಿತಿಗೆ ಕಾರಣರಾದ ಅವರು ಚಾಲುಗೊಳಿಸಿದ ಭೂಮಿ ಚಿತ್ತ್ರಸೆಯ ಕಾರ್ಯಕ್ಕೆ ಈಗ ಸಿದ್ಧವಾಗಿದೆ. ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಅವರು ಮಾಡಿದ ಭಾಷಣಗಳಲ್ಲಿ ಬರಿ ಪ್ರಾಸಂಗಿಕತೆ ಇರದೆ ಒಂದು ಶಾಶ್ವತ ಸತ್ವವಿದೆ.

ಡಾಕ್ಟರ್ ಪುಟ್ಟಪ್ಪನವರು ಮೂಲತಃ ಕವಿಗಳು. ಅದೇ ಅವರ ಸ್ವಧರ್ಮ ಹಾಗು ಸ್ವಭಾವವಾಗಿದೆ. ಕಾವ್ಯವೇ ಅವರ ಮನೆ, ಮತ ಹಾಗು ದೇಗುಲವಾಗಿದೆ. ಅವರ ಕವಿತೆ ಕಾವ್ಯದಲ್ಲಿ ಒಂದು ಅನನ್ಯ ಸ್ವಯಂಸ್ಫೂರ್ತಿ ಇದೆ. ಅವರ

ನಲ್ವಾಡುಗಳಲ್ಲಿ ಒಂದು ವಿಶ್ವವಿಶಾಲವಾದ ಸಾರ್ವತ್ರಿಕತೆ ಇದೆ. ಕಾವ್ಯವನ್ನು ಕುರಿತು ಬರೆದ ಕವನಗಳು ಸರಸ್ವತಿಗೆ ಎತ್ತಿದ ರತ್ನದೀಪಗಳ ಆರತಿಯಾಗಿವೆ. ಕನ್ನಡ ನಾಡನ್ನೂ ಭಾರತವನ್ನೂ ಕುರಿತು ಅವರು ರಚಿಸಿದ ಭಾವಗೀತೆಗಳು ಸರ್ವಭಾಷಾ ಸರಸ್ವತಿಯ ಧ್ಯಾನಮೂರ್ತಿಯೊಡನೆ ಅವರ ಪ್ರತಿಭೆ ಹೊಂದಿದ ತಾದಾತ್ಮ್ಯವನ್ನು ಸೂಚಿಸುತ್ತವೆ. ಅವರ ತಾತ್ವಿಕ ಕವನ ಹಾಗು ಭಕ್ತಿಗೀತೆಗಳಲ್ಲಿ ಒಂದು ಪೂರ್ಣ ಉತ್ಕಟತೆ ಇದೆ. ಈ ಎಲ್ಲ ಕವನಗಳು ಅವರು ಕನ್ನಡಕ್ಕಿತ್ತ ಅಮರ ಕಾಣಿಕೆ ಗಳಾಗಿವೆ. ಅವರ ಮಹಾ ಕಾದಂಬರಿಗಳಿಗೆ ಕಾವ್ಯನಾಟಕಗಳಿಗೆ ಹಾಗು ಕಥನಾತ್ಮಕ ಪ್ರಬಂಧಗಳಿಗೆ ಅವರು ಕಟ್ಟಿದ ಭವ್ಯ ಕಲಾಮಂದಿರದಲ್ಲಿ ಶಾಶ್ವತ ಸ್ಥಾನವಿದೆ

ಎಲ್ಲರೂ ಒಪ್ಪುವಂತೆ ಅವರ ಮಹಾಕಾವ್ಯವಾದ ಶ್ರೀ ರಾಮಾಯಣ ದರ್ಶ ನವು ಶ್ರೇಷ್ಠ ಕಲಾಕೃತಿಯಾಗಿದೆ. ತಾನಾಗಿಯೇ ಹೊರಹೊಮ್ಮುವ ಸಹಜ ರಮ್ಯ ಸ್ಫೂರ್ತಿ ಪಂಜ್ತಿ ಪಂಜ್ತಿಯಲ್ಲಿ ಕಂಡುಬರುವಂತೆ ಪ್ರಭುತ್ವಪೂರ್ಣವಾದ ಕಲಾ ತಪಸ್ಸೂ ಅಲ್ಲಿ ಹೆಜ್ಜೆ ಹೆಜ್ಜೆಗೆ ಕಂಡುಬರುತ್ತದೆ. ಈ ಮಹಾಕಾವ್ಯ ಅನ್ಯೋಕ್ತಿ ಪೂರ್ಣ ಅರ್ಥಮಾಲೆಯಾಗಿದೆ; ರೋಮಾಂಚಕ ಕಥನವಾಗಿದೆ; ಮಹಾಕಾವ್ಯದ ಪರಂಪರೆಗಳನ್ನು ಜೀರ್ಣಿಸಿಕೊಂಡ ಮಹಾ ಕೃತಿಯಾಗಿದೆ. ಅದರ ಛಂದಸ್ಸಿನಲ್ಲಿ ಒಂದು ಅದಮ್ಯವಾದ, ವಿವಿಧವಾದ ತಾಳಲಯದ ಓಟವಿದೆ. ಈ ಕಾವ್ಯದ ಧ್ವನಿ ಬರಿ ಕನಸಿನ ಇಲ್ಲವೆ ಚಮತ್ಕಾರದ ಪ್ರಪಂಚದಲ್ಲಿ ಕಳೆದುಹೋಗುವ ಮೈಮರೆತ ವಲ್ಲ. ಅವರ ರಸಧ್ವನಿಯ ಸೂಕ್ಷ್ಮ ತರಂಗಗಳು ಆಧುನಿಕ ಪ್ರಪಂಚದ ಸಮಸ್ಯೆಗಳ ಮೇಲೂ ಸಮರ್ಥವಾಗಿ ಬೆಳಕು ಚೆಲ್ಲ ಬಲ್ಲವು.

ಕನ್ನಡ ಜನಮನಕ್ಕೆ ಉತ್ತಮ ಸಂಸ್ಕಾರಗಳನ್ನು ಒದಗಿಸುವುದರಲ್ಲಿ ಹಾಗು ಜನತೆಯ ಸಂಸ್ಕೃತಿಯ ಮಟ್ಟವನ್ನು ಮೇಲಕ್ಕೆತ್ತುವುದರಲ್ಲಿ ಡಾಕ್ಟರ್ ಪುಟ್ಟಪ್ಪನವರ ಸಾಹಿತ್ಯ ಶ್ರೇಷ್ಠ ಪಾತ್ರವನ್ನು ವಹಿಸಿದೆ. ಶ್ರೀಸಾಮಾನ್ಯನ ಕಲ್ಯಾಣ ಚಿಂತನ, ಶಾಸ್ತ್ರ ಇಲ್ಲವೆ ನಿರ್ಜೀವ ಪರಂಪರೆಗಿಂತ ಹೃದಯವಂತಿಕೆಯಿಂದ ಬಂದ ನೀತಿ ಹಾಗೂ ಶಿಸ್ತಿನ ಸಮರ್ಥನೆ, ಅನಂತತೆ ಹಾಗು ನಿಸ್ಸೀಮತೆಯ ಬಗ್ಗೆ ಅವರು ತಳೆದ ಆಳವಾದ ಪ್ರೇಮ,--ಅವರು ಕರುಣಿಸಿದ ಇವೇ ಮೊದಲಾದ ರತ್ನಪಾತ ಗಳಿಂದ ಜನಮನವು ಹಿಗ್ಗಿದೆ. ಜನತೆಯ ಪ್ರಜ್ಞೆ ವಿಸ್ತಾರಗೊಂಡಿದೆ.

ಡಾಕ್ಟರ್ ಕೆ. ವಿ. ಪುಟ್ಟಪ್ಪನವರಿಗೆ ಒಂದಲ್ಲ, ಎರಡಲ್ಲ ಹಲವಾರು ಸಲ ಕೀರ್ತಿಲಕ್ಷ್ಮಿ ತನ್ನ ಶ್ವೇತಛತ್ರವನ್ನು ಹಿಡಿದಿದ್ದಾಳೆ. ಭಾರತ ಸರಕಾರವಿತ್ತ ಪದ್ಮ ಭೂಷಣ ಪ್ರಶಸ್ತಿ, ಮೈಸೂರು ಸರಕಾರವಿತ್ತ ರಾಷ್ಟ್ರಕವಿ ಗೌರವ, ಸಾಹಿತ್ಯ ಅಕ್ಯಾಡಮಿ ಇತ್ತ ಪ್ರಥಮ ಪುರಸ್ಕಾರ,—ಹೀಗೆಲ್ಲ ಸಂದ ಮನ್ನಣೆಯಿಂದ ದೇಶಕ್ಕೆ ಅವರು ಸಲ್ಲಿಸಿದ ಸೇವೆ ಜನಮನದಲ್ಲಿ ನೆಲೆಸೆಲೆಯಾಗಿ ನಿಂತಿದೆ.ಅವರಿಗೆ ರಾಷ್ಟ್ರೀಯ ಸಾಹಿತ್ಯ ಗೌರವವನ್ನು ಸಲ್ಲಿಸಿ ಭಾರತೀಯ ಜ್ಞಾನಪೀಠವು ಕೃತಾರ್ಥವಾಗಿದೆ.

ಕರ್ನಾಟಕಕ್ಕಾಗಿ ದುಡಿದ ಸುಪ್ರತಿಷ್ಠಿತರು

ಪಂಡಿತರತ್ನಂ, ಪದ್ಮಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು

(ಪದ್ಮಭೂಷಣ, ರಾಷ್ಟ್ರಕವಿ ಡಾ॥ ಕೆ. ವಿ ಪುಟ್ಟಪ್ಪನವರ ಗೌರವಾರ್ಥವಾಗಿ ಚಿಕ್ಕಮಗಳೂರಿನವರು ಸಮರ್ಪಿಸುವ ಗ್ರಂಥಕ್ಕೆ ಈ ಲೇಖನ ಕಳಿಸಿದೆ. ಕುವೆಂಪು ಕನ್ನಡನಾಡು ನುಡಿಗಳ ಉನ್ನತಿಗಾಗಿ ತಮ್ಮ ಜೀವಿತವನ್ನು ಮೀಸಲಾಗಿಟ್ಟಿರುವ ಸಂಗತಿ ಸರ್ವಶ್ರುತವಾಗಿದೆಯಲ್ಲವೇ !)

ದಿನಾಂಕ ೧-೧೧-೧೯೫೬ ರಂದು ಈಗಿನ ವಿಶಾಲ ಮೈಸೂರುರಾಜ್ಯ ಅಥವ **ಕರ್ನಾಟಕ**ದ ಉದಯವಾಯಿತು. ಕಳೆದ ಶತಮಾನಗಳಲ್ಲಿ ರಾಜಕೀಯ ಘಟನಾವಳಿಗಳ ಪರಿಣಾಮವಾಗಿ, ಇಪ್ಪತ್ತೆರಡು ಆಡಳಿತಗಳಿಗೆ ಸೇರಿದ್ದ ಕನ್ನಡನಾಡು, ಸುಮಾರು ನೂರುವರ್ಷಗಳ ಕಾಲ ಕನ್ನಡ ಜನರು ಒಮ್ಮುಖವಾಗಿ ನಡೆಸಿದ ಏಕೀಕರಣ ಚಳುವಳಿಯ ಫಲವಾಗಿ, ಒಂದುಗೂಡಿ ಕನ್ನಡ ರಾಜ್ಯೋದಯವಾಯಿತು. ಈ ಮಹತ್ಕಾರ್ಯದಲ್ಲಿ ಸುಪ್ರತಿಷ್ಠಿತರೂ, ದೇಶಾಭಿಮಾನಿಗಳೂ, ತ್ಯಾಗಶೀಲರೂ ಆದ ಹಲವು ಮಂದಿ ಮಹನೀಯರು ಸತತವಾಗಿ ಪ್ರಯತ್ನ ನಡೆಸಿದರು. **ಕರ್ಣಾಟಕಕ್ಕಾಗಿ ದುಡಿದ ಸುಪ್ರತಿಷ್ಟಿತರು** ಎಂಬ ಈ ಲೇಖನದಲ್ಲಿ ಸಂಗ್ರಹವಾಗಿ ಅಂತಹ ಕೆಲವು ಮಹನೀಯರ ಪರಿಚಯವನ್ನು ಮಾಡಿಕೊಡುವುದು ನಮ್ಮ ಉದ್ದೇಶವಾಗಿದೆ. ಆದರೆ ಇದಕ್ಕೆ ಹಿನ್ನೆಲೆಯಾಗಿ ಕರ್ಣಾಟಕ ಸ್ಥಿತಿಗತಿಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವುದು ಕೂಡ ಇಲ್ಲಿ ಅಗತ್ಯವಾಗಿದೆ.

ಕನ್ನಡನಾಡಿಗೆ ಸುಮಾರು ಎರಡು ಸಾವಿರ ವರ್ಷಗಳ ಉಜ್ವಲವಾದ ಚರಿತ್ರೆ ಇದೆ. ಅದಕ್ಕೂ ಹಿಂದಿನ ಕೆಲವು ಐತಿಹಾಸಿಕ ನಿದರ್ಶನಗಳಿವೆ. ಕ್ರಿಸ್ತಪೂರ್ವ ೩ನೆಯ ಶತಮಾನದಿಂದ ೪೦೦ ವರ್ಷಗಳ ಕಾಲ ಕೊಪ್ಪಳ, ಮಸ್ಕಿ ಮತ್ತು ಸಿದ್ದಾಪುರ ಪರಿಯಂತ ಕನ್ನಡ ನಾಡನ್ನು ಮೌರ್ಯರು ಆಳಿದರು. ಅನಂತರ ಶಾತವಾಹನರು ಕನ್ನಡಿಗರ ಮೇಲೆ ಅಧಿಕಾರ ನಡೆಸಿದರು. ಚಂದ್ರಗುಪ್ತನ ಮೊಮ್ಮಗನಾದ ಅಶೋಕನ ಶಾಸನಗಳಿಂದ ಕನ್ನಡನಾಡು ಮೌರ್ಯಚಕ್ರಾಧಿಪತ್ಯಕ್ಕೆ ಸೇರಿತ್ತೆಂದು ಸ್ಮರಿಸಿಕೊಳ್ಳಬಹುದು. ಆಮೇಲೆ ಕದಂಬರು, ಬಾಣರು, ಆಳುಪರು, ನಳರು, ಸೇಂದ್ರಕರು ಮತ್ತು ಪುನ್ನಾಟರು ಕನ್ನಡನಾಡಿನಲ್ಲಿ ಅರಸುತನವನ್ನು ಮಾಡಿದರು. ಮೌರ್ಯ ಚಕ್ರವರ್ತಿ ಚಂದ್ರಗುಪ್ತನು ಶ್ರವಣಬೆಳಗೊಳಕ್ಕೆ ತನ್ನ ಗುರುವಾದ ಭದ್ರಬಾಹು ಸಮೇತನಾಗಿ ಬಂದು ತಪಸ್ಸಿಗೆ ನಿಂತ ಕಥೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಗಂಗ, ಕದಂಬ, ಚಾಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ಯಾದವ, ಕಾಕತೀಯ, ವಿಜಯನಗರ ಮೊದಲಾದ ರಾಜ್ಯ ಸಾಮ್ರಾಜ್ಯಗಳ ಆಳಿಕೆಯನ್ನು ಇದುಗನು

ದೃಷ್ಟಿಯಿಂದ ಅವಲೋಕಿಸಿದರೆ, ಕನ್ನಡಿಗರ ಪೌರುಷ, ಸಂಸ್ಕೃತಿ, ರಾಜ್ಯಭಾರ ಕ್ರಮ ಮತ್ತು ಕಲಾಸಂಪತ್ತು ಮೊದಲಾದುವನ್ನು ತಕ್ಕಮಟ್ಟಿಗೆ ತಿಳಿದುಕೊಳ್ಳಬಹುದು. ಸುದೀರ್ಘವಾದ ಈ ಇತಿಹಾಸ ಕಾಲದಲ್ಲಿ ಬಾದಾಮಿ ಚಾಲುಕ್ಯರು. ಕ್ರಿ. ಶ. ೫೫೦–೭೫೭) ಅನಂತರ ಮಳಖೇಡದ ರಾಷ್ಟ್ರಕೂಟರು (ಕ್ರಿ. ಶ. ೭೫೭ ರಿಂದ ೯೭೩), ಆಮೇಲೆ ಕಲ್ಯಾಣದ ಚಾಳುಕ್ಯರು (ಕ್ರಿ. ಶ. ೯೭೩ ರಿಂದ ೧೧೮೦) (ಈ ೬೩೦ ವರ್ಷಗಳ ಅವಧಿಯಲ್ಲಿ ಸಮಗ್ರ ಕರ್ನಾಟಕವು ಕನ್ನಡ ರಾಜರ ಅಧೀನದಲ್ಲಿ ಒಂದುಗೂಡಿತ್ತೆಂದು ಹೇಳಬಹುದು. ಅನಂತರ ಕರ್ನಾಟಕವು ಹಳೆಯಬೀಡಿನ ಹೊಯ್ಸಳರು, ದೇವಗಿರಿಯ ಯಾದವರು, ಓರುಂಗಲ್ಲಿನ ಕಾಕತೀಯರು ಇವರುಗಳ ಆಧಿಪತ್ಯದಲ್ಲಿ ಹಂಚಿಹೋಯಿತು. ಚಾಲುಕ್ಯ ಸಾಮ್ರಾಜ್ಯದ ಪತನಾನಂತರ–ಹದಿಮೂರನೆಯ ಶತಮಾನದಲ್ಲಿ–ಈ ಘಟನೆ ನಡೆದು ಹೋಯಿತು. ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರನು ಕ್ರಿ.ಶ. ೧೩೦೭ ಮತ್ತು ೧೩೧೧ ರಲ್ಲಿ ಬಲವಾಗಿ ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದನು. ಈ ಕಾಲದಲ್ಲಿ ಕನ್ನಡಿಗರ ರಾಜಧಾನಿಗಳಾದ, ದೇವಗಿರಿ, ಓರಂಗಲ್ಲು ಮತ್ತು ಹಳೇಬೀಡುಗಳನ್ನು ಪುಡಿಗುಟ್ಟಿದನು. ದಕ್ಷಿಣದ ಮಧುರೆಯ ದೇವಾಲಯವನ್ನು ಕೊಳ್ಳೆ ಹೊಡೆದನು. ರಾಮೇಶ್ವರದಲ್ಲಿ ತನ್ನ ವಿಜಯ ಧ್ವಜವನ್ನು ಹೆಮ್ಮೆಯಿಂದ ಹಾರಿಸಿದನು.

ಈ ಸನ್ನಿವೇಶದಲ್ಲಿ ಕರ್ನಾಟಕವು ಕಂಗೆಟ್ಟು ಹೋಯಿತು. ಮುಂದಿನ ಘಟನಾವಳಿಗಳ ಪರಿಣಾಮವಾಗಿ ಕ್ರಿಯಾಶಕ್ತಿ ವಿದ್ಯಾರಣ್ಯರ ಅನುಗ್ರಹದಿಂದ ಮತ್ತೆ ೧೩೩೬ ರಲ್ಲಿ ತುಂಗಭದ್ರಾ ತೀರದಲ್ಲಿ ಪಂಪಾ ವಿರೂಪಾಕ್ಷನ ಸನ್ನಿಧಿಯಲ್ಲಿ ಸಂಗಮ ವಂಶೀಯರಾದ ಹರಿಹರ–ಬುಕ್ಕರ ನೇತೃತ್ವದಲ್ಲಿ ವಿಜಯನಗರ ರಾಜ್ಯ ಸ್ಥಾಪನೆಯಾಯಿತು. ಆದರೆ ಅದಕ್ಕೆ ಎದುರಾಗಿಯೇ ಕ್ರಿ. ಶ. ೧೩೪೭ ರಲ್ಲಿ ಕಲ್ಬುರ್ಗಿಯಲ್ಲಿ ಬಹಮನಿರಾಜ್ಯ ಸ್ಥಾಪನೆಯಾಯಿತು. ಅದು ಬಿದರಕೋಟೆಯನ್ನು ಕೇಂದ್ರವಾಗಿಸಿಕೊಂಡು ಬಲಿಯಿತು. ೧೫೬೫ ವರೆಗೆ ವಿಜಯನಗರ ಮತ್ತು ಬಹಮನೀರಾಜ್ಯಗಳು ಹಲವಾರು ಯುದ್ಧಗಳನ್ನು ನಡೆಸಿದುವು. ಈ ಕಾಲದಲ್ಲಿ ಕರ್ನಾಟಕದ ಕೃಷ್ಣಾ ನದಿಯ ಉತ್ತರ ಭಾಗವು ಮಹಮ್ಮದೀಯರಿಗೂ ದಕ್ಷಿಣ ಭಾಗವು ಕನ್ನಡಿಗರಿಗೂ ಸೇರಿತ್ತೆಂದು ಸ್ಥೂಲವಾಗಿ ಹೇಳಬಹುದು. ಕನ್ನಡಿಗರು ಹೆಮ್ಮೆಯಿಂದ ಹೇಳಿಕೊಳ್ಳುವ ವಿಜಯನಗರದ ಕಾಲದಲ್ಲಿಯೂ ಕೂಡ ಕರ್ನಾಟಕವು ಸಂಪೂರ್ಣವಾಗಿ ಕನ್ನಡಿಗರ ಕೈಯಲ್ಲಿರಲಿಲ್ಲ ಎಂಬುದು ಗಮನಾರ್ಹ. ವಿಜಯನಗರದ ಪತನಾನಂತರ ಮಹಮ್ಮದೀಯರು, ಮರಾಠರು, ಕಡೆಯಲ್ಲಿ ಇಂಗ್ಲಿಷರು ಕರ್ನಾಟಕದ ಮೇಲೆ ಅಧಿಕಾರವನ್ನು ನಡೆಸಿದರು. ಈ ಎಲ್ಲ ಕಾಲಗಳಲ್ಲಿಯೂ ಕನ್ನಡ ಜನ ಒಮ್ಮುಖವಾಗಿರಲಿಲ್ಲ ಎಂದು ನಿರೂಪಿಸುವುದೇ ಈ ವಿವರಣೆಯ ಉದ್ದೇಶವಾಗಿದೆ. ಈಗಿನ ವಿಶಾಲ ಮೈಸೂರು ರಾಜ್ಯ ರಚನೆಯಾಗುವುದಕ್ಕೆ

ಸುಮಾರು ಒಂದು ನೂರು ವರ್ಷಗಳ ಕಾಲದ ಕನ್ನಡಿಗರ ಪ್ರಯತ್ನವು ಕಾರಣ ವಾಗಿದೆ ಎಂಬುದನ್ನು ನಾವು ಇಲ್ಲಿ ನೆನಪಿಟ್ಟುಕೊಳ್ಳಬೇಕು.

೧. ಕೈ|| ಡೆಪ್ಯುಟಿ ಚನ್ನಬಸಪ್ಪನವರು

ಕ್ರಿ. ಶ. ೧೮೫೫ ರಲ್ಲಿ ಕೈ|| ಡೆಪ್ಯುಟಿ ಚನ್ನಬಸಪ್ಪನವರು ಧಾರವಾಡದಲ್ಲಿ ಕನ್ನಡದ ಧ್ವಜವನ್ನು ಎತ್ತಿ ನಿಲ್ಲಿಸಿದರು. ಅವರು ಅದೇ ವರ್ಷ ಸರ್ಕಾರಿ ಕೆಲಸಕ್ಕೆ ಸೇರಿದರು. ಅವರ ಜೀವಮಾನವೆಲ್ಲ ಕನ್ನಡ ನಾಡುನುಡಿಗಳನ್ನು ಕಳೆಗೊಳಿಸುವ ಕಾರ್ಯದಲ್ಲೇ ಕಳೆಯಿತು. ೧೯೫೬ ಕ್ಕೆ ಕನ್ನಡ ರಾಜ್ಯೋದಯವಾಯಿತು. ಈ ಮಹತ್ಕಾರ್ಯ ಸಾಧನೆಗೆ ೧೦೧ ವರ್ಷಗಳ ಕಾಲಾವಧಿಯೂ ಹಲವು ಸುಪ್ರತಿಷ್ಠಿತರ ಪ್ರಯತ್ನ ವಿಶೇಷವೂ ಬೇಕಾಯಿತು. ಇಲ್ಲಿ ಅಂತಹ ಪ್ರಯತ್ನಶೀಲರಾದ ಕೆಲವು ಮಂದಿ ಮಹನೀಯರ ನಾಮ ಸ್ಮರಣೆಯನ್ನು ಸಂಗ್ರಹವಾಗಿ ಮಾಡಲಾಗಿದೆ.

ಕರ್ನಾಟಕದ ಏಕೀಕರಣಕ್ಕೆ ತಳಹದಿಯಾಗಿ ಕರ್ನಾಟಕತ್ವದ ಅಭಿಮಾನ ವನ್ನೂ ಕನ್ನಡ ನಾಡುನುಡಿಗಳ ಮೇಲಿನ ಮಮತೆಯನ್ನು ಜನರಲ್ಲಿ ಉಂಟುಮಾಡಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದ ಸುಪ್ರತಿಷ್ಠಿತರಲ್ಲಿ ಕೈ|| ಡೆಪ್ಯುಟಿ ಚೆನ್ನ ಬಸಪ್ಪನವರು ಮೊಟ್ಟ ಮೊದಲಿಗರು. ಇವರ ಜನನ ೧೮೩೩. ಇವರ ಮರಣ ೧೮೮೧. ಇವರು ಬಾಳಿದ್ದು ಕೇವಲ ೪೮ ವರ್ಷ ಮಾತ್ರ. ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಿದರು. ೧೮೫೬ ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಕೇವಲ ೧೨ ಕನ್ನಡ ಶಾಲೆಗಳಿದ್ದವು. ೧೮೭೨ ರಲ್ಲಿ ಈ ಶಾಲೆಗಳ ಸಂಖ್ಯೆ ೩೪೧ ಆಯಿತು. ಈ ಸಂಖ್ಯೆಯು ಮೇಲಿನಿಂದ ಅವರ ಕಾರ್ಯದ ವೇಗವನ್ನು ನಾವು ಸುಲಭವಾಗಿ ಅರಿಯಬಹುದು. ಈ ಅವಧಿಯಲ್ಲಿ ಗಂಗಾಧರ ಮಡಿವಾಳೇಶ್ವರ, ವೆಂಕಟರಂಗೋ ಕಟ್ಟಿ ಈ ಮೊದಲಾದ ವಿದ್ವಾಂಸರನ್ನು ಅವರು ಹುರಿದುಂಬಿಸಿ, ಗ್ರಂಥಗಳನ್ನು ಬರೆಸಿದರು. ಆಗಿನ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಮರಾಠಿ ಶಾಲೆಗಳೇ ಅಧಿಕ ವಾಗಿದ್ದವು. ಕರ್ನಾಟಕದ ಏಕೀಕರಣ ತತ್ವವನ್ನು ಜನಗಳಲ್ಲಿ ಬೋಧಿಸಿದರು. ಕನ್ನಡ ಭಾಷೆಯ ಗರಿಮೆ-ಹಿರಿಮೆಗಳನ್ನು ಜನರಿಗೆ ಪರಿಚಯ ಮಾಡಿಕೊಟ್ಟರು. ಒಂದು ರೀತಿಯಿಂದ ತಮ್ಮ ಮೇಲಾಧಿಕಾರಿಗಳಾದ ರಸೆಲ್ ಸಾಹೇಬರನ್ನು ಸುಪ್ರ ಸನ್ನ ಮಾಡಿಕೊಂಡು ಈ ಮಹತ್ಕಾರ್ಯವನ್ನು ಸಾಧಿಸಿದರು. ವರ್ತಕರು ಕನ್ನಡ ದಲ್ಲಿ ಲೆಕ್ಕ ಬರೆಯುವಂತೆ ಎಚ್ಚರಿಸಿದರು. ರೀ|| ಕಿಟೆಲ್ ಸಾಹೇಬರ ನಿಘಂಟಿಗೆ ಬೆಂಬಲವಿತ್ತರು. 'ಕರ್ನಾಟಕ ಭಾಷೆಯ ಉದ್ಧಾರಕರು, ಕರ್ನಾಟಕ ಏಕೀಕರಣದ ಆಚಾರ್ಯ ಪುರುಷರು ಎಂದೂ ನಾವು ಇವರನ್ನು ಕರೆಯಬಹುದು. ಇವರು ವಿದ್ಯಾ ಇಲಾಖೆಯಲ್ಲಿ ಅಧಿಕಾರಿಗಳಾಗಿದ್ದರು.

೨. ವೆಂಕಟರಂಗೋ ಕಟ್ಟಿಯವರು.

ಕೈ|| ಡೆಪ್ಯುಟಿ ಚನ್ನಬಸಪ್ಪನವರ ಅನಂತರ ಇವರು ಕರ್ನಾಟಕದ ಮುಖಂಡ ರಾದವರು. ಇವರು ಮುಧೋಳದ ಪಕ್ಕದ ಕುಳಲಿ-ಬತಿಕುರಕೆ ಗ್ರಾಮದಲ್ಲಿ ಬಾಲ್ಯವನ್ನು ಕಳೆದರು. ಇವರ ಮೊದಲ ಕಾರ್ಯಕ್ಷೇತ್ರ ಬೆಳಗಾವಿ. ಇವರು ಕನ್ನಡ, ಸಂಸ್ಕೃತ, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ಬಲ್ಲಿದರು. ಅರೇಬಿಯನ್ ನೈಟ್ಸ್, ಕರ್ನಾಟಕ ಗೆಜೆಟಿಯರ್ ಮೊದಲಾದ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿದರು. ಇವರು ಸುಪ್ರಸಿದ್ಧ ಭಾಷಾಂತರಕಾರರು. ಡೆಪ್ಯುಟಿ ಚೆನ್ನಬಸಪ್ಪನವರ ಉತ್ತರಾಧಿಕಾರಿಗಳಾಗಿ ಕನ್ನಡದ ಉಳಿವಿಗಾಗಿ ವಿವಿಧ ಪ್ರಯತ್ನ ನಡೆಸಿದರು. ಕರ್ನಾಟಕ ಗೆಜೆಟಿಯರ್ ೧೮೯೩ ರಲ್ಲಿ ಇವರಿಂದ ಕನ್ನಡದಲ್ಲಿ ಪ್ರಕಟವಾಗಿದೆ. ಧಾರವಾಡ ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಕರ್ನಾಟಕದ ಜನರಲ್ಲಿ ಕನ್ನಡದ ಅಭಿಮಾನವನ್ನೂ, ಏಕೀಕರಣದ ಅಗತ್ಯವನ್ನೂ ಈ ಮಹನೀಯರು ನೆಲೆಗೊಳಿಸಿದರು.

ಪುಣ್ಯಶ್ಲೋಕರಾದ ಡೆಪ್ಯುಟಿ ಚೆನ್ನಬಸಪ್ಪನವರು ಮಾಡಿದ ಕಾರ್ಯವನ್ನು ಶ್ರೀ ವೆಂಕಟರಂಗೋಕಟ್ಟಿ, ರೊದ್ದ ಶ್ರೀನಿವಾಸರಾಯರು ಕಡಪ ರಾಘವೇಂದ್ರ ರಾಯರು, ಆಲೂರು ವೆಂಕಟರಾಯರು, ಗದಿಗಯ್ಯ ಹೊನ್ನಾಪುರ ಮಠರು, ಮುದುವೀಡು ಕೃಷ್ಣರಾಯರು, ಶಾಂತವೀರ ರಾಚಿದೇವ ಕಿತ್ತೂರರು, ಶೇಷೋ ರಾಮಚಂದ್ರ ಚುರುಮುರಿ, ಹರ್ಡೀಕರ ಮಂಜಪ್ಪನವರು, ಡಾ|| ಫ. ಗು. ಹಳಕಟ್ಟಿಯವರು, ಪ್ರೊ|| ಎಸ್. ಎಸ್. ಬಸವನಾಳರು ಮುಂದುವರಿಸಿದರೆಂದು ಹೇಳಬಹುದು,

೩. ಕಡಪಾ ರಾಘವೇಂದ್ರರಾಯರು.

ಡೆಪ್ಯುಟಿ ಚನ್ನಬಸಪ್ಪನವರಾದ ಮೇಲೆ ಏಕೀಕರಣ ಚಳುವಳಿಯನ್ನು ದಿಟ್ಟತನದಿಂದ ಮುಂದುವರಿಸಿದ ಕೀರ್ತಿ ದಿ|| ವೆಂಕಟರಂಗೋ ಕಟ್ಟಿ ಹಾಗೂ ದಿ|| ಕಡಪ ರಾಘವೇಂದ್ರರಾಯರಿಗೆ ಸಲ್ಲುತ್ತದೆ. ದಿ|| ರಾಘವೇಂದ್ರರಾಯರು ೧೮೯೭ ರಲ್ಲಿ ಧಾರವಾಡದಲ್ಲಿ ಸ್ಥಾಪನೆಯಾದ ‘ಕರ್ನಾಟಕ ಸಭೆಯು’ ಕಾರ್ಯದರ್ಶಿಗಳಾಗಿ ಮುದುವೀಡು ಕೃಷ್ಣರಾಯರೊಡನೆ ಅಖಂಡ ಕರ್ನಾಟಕವನ್ನು ಸುತ್ತಿ, ಕರ್ನಾಟಕದ ಅಗತ್ಯಗಳನ್ನೂ ಮಹತ್ವವನ್ನೂ ಒತ್ತಿ ಹೇಳಿದರು. ಮಾಂಟೆಗೋ ಸಾಹೇಬರು ಈ ದೇಶಕ್ಕೆ ಬಂದಾಗ (೧೯೧೯) ಅವರ ಮುಂದೆ ಇವರು ಸಾಕ್ಷಿಕೊಟ್ಟು “ಸ್ವತಂತ್ರ ಭಾರತದಲ್ಲಿ ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಬೇಕೆಂದು” ಹೋರಾಡಿದರು. ೧೯೨೪ ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ

ಕಾಂಗ್ರೆಸ್ಸು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿದಾಗ ಇವರು ಮೊಟ್ಟ ಮೊದಲು ಏಕೀಕರಣ ಸಭೆಯನ್ನು ನಡೆಸಿದರು. ಇವರ ಜತೆಯಲ್ಲಿ ಡಾ|| ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು ಭುಜಕ್ಕೆ ಭುಜ ಕೊಟ್ಟು ಹೋರಾಡಿದರು.

೪. ಆಲೂರು ವೆಂಕಟರಾಯರು.

ಕಡಪ ರಾಘವೇಂದ್ರರಾಯರ ಅನಂತರ ಏಕೀಕರಣ ಚಳುವಳಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿದ ಮಹನೀಯರು ಆಲೂರು ವೆಂಕಟರಾಯರು. 'ಕರ್ಣಾಟಕ ಗತವೈಭವ' 'ಕನ್ನಡ ವೀರರತ್ನಗಳು' 'ಕರ್ಣಾಟಕತ್ವದ ಕಲ್ಪನೆ' 'ಗೀತಾ ಪ್ರಕಾಶ' 'ನನ್ನ ಜೀವನ ಸ್ಮೃತಿಗಳು' 'ಶಿಕ್ಷಣ ಮೀಮಾಂಸೆ' ಮೊದಲಾದ ಗ್ರಂಥಗಳ ಕರ್ತರೂ, 'ಜಯ ಕರ್ಣಾಟಕ' ಮಾಸಿಕೆಯ ಸಂಸ್ಥಾಪಕರೂ ಆದ ಆಲೂರು ವೆಂಕಟರಾಯರನ್ನು ಕಂಡವರು, ಅವರನ್ನು 'ಕನ್ನಡ ಋಷಿ' ಎಂದು ಕರೆಯುತ್ತಾರೆ. ಪೂಜ್ಯ ವೆಂಕಟರಾಯರು ಧಾರವಾಡದಲ್ಲಿ ೧೮೯೦ ರಲ್ಲಿ ವಿದ್ಯಾವರ್ಧಕ ಸಂಘವನ್ನು ನೆಲಗಟ್ಟನ್ನಾಗಿ ಇಟ್ಟುಕೊಂಡು, ಶಾಂತಕವಿಗಳು, ರೊದ್ದ ಶ್ರೀನಿವಾಸರಾಯರು, ಡಾ|| ಹಳಕಟ್ಟಿಯವರು ಮೊದಲಾದವರ ಸಹಾಯದಿಂದ ಕರ್ಣಾಟಕವನ್ನು ಒಂದುಗೂಡಿಸಲು ಬಹಳವಾಗಿ ಶ್ರಮಿಸಿದರು. ೧೯೦೭ ರಲ್ಲಿ ಧಾರವಾಡದ 'ವಾಗ್ಭೂಷಣ' ಪತ್ರಿಕೆಯಲ್ಲಿ ಇವರು ಕರ್ಣಾಟಕ ಏಕೀಕರಣವನ್ನು ಕುರಿತು ಒಂದು ಲೇಖನವನ್ನು ಬರೆದರು. ೧೯೧೫ ರಲ್ಲಿ ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲು ಬಹಳವಾಗಿ ಶ್ರಮಿಸಿದರು. ೧೯೩೦ ರಲ್ಲಿ ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಕರ್ಣಾಟಕದಲ್ಲಿ ನಾಡಹಬ್ಬದ ಚಳುವಳಿಯನ್ನು ಇವರು ಆರಂಭಿಸಿದರು. ೧೯೩೬ ರಲ್ಲಿ ಪಂಪಾಕ್ಷೇತ್ರದಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷಗಳ ಮಹೋತ್ಸವ ಸಾಧನೆಯಲ್ಲಿ ತುಂಬಾ ಶ್ರಮಿಸಿ ಪ್ರಮುಖ ಪಾತ್ರ ವಹಿಸಿದರು. ಕರ್ಣಾಟಕದ ಏಕೀಕರಣಕ್ಕಾಗಿ, ಕನ್ನಡಿಗರ ಆತ್ಮೋನ್ನತಿಗಾಗಿ ಪೂಜ್ಯ ಆಲೂರು ವೆಂಕಟರಾಯರು ಸಲ್ಲಿಸಿದ ಸೇವೆಯನ್ನು ಗೌರವಿಸಿ, ಕನ್ನಡ ಜನ ಅವರನ್ನು 'ಕನ್ನಡ ಕುಲ ಪುರೋಹಿತ' ರೆಂದು ಕರೆದರು. ಈ ಮಹನೀಯರು ತಾ|| ೨೫-೨-೧೯೬೪ ರಲ್ಲಿ ಕಣ್ಮರೆಯಾದರು. ಮರಣ ಕಾಲದಲ್ಲಿ ಇವರಿಗೆ ೮೫ ವರ್ಷ ವಯಸ್ಸಾಗಿತ್ತು. ಕನ್ನಡ ನಾಡನ್ನು ಕಟ್ಟಿದ ಪ್ರತಿಷ್ಠಿತರಲ್ಲಿ, ನಮ್ಮ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರಾಗಲಿ ಎಂದು ಹಂಬಲಿಸಿದವರಲ್ಲಿ, ಆಲೂರು ವೆಂಕಟರಾಯರ ಹೆಸರು ಬಹಳ ಪ್ರಮುಖವಾದುದು.

೫. ಮುದವೀಡು ಕೃಷ್ಣರಾಯರು.

ಇವರು 'ಕನ್ನಡದ ಹುಲಿ' ಎಂದು ಹೆಸರಾದವರು. ೧೯೨೯ ರಲ್ಲಿ ಬೆಳಗಾವಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ಕನ್ನಡದಲ್ಲಿ ಉತ್ತಮ ವಾಗ್ಮಿಗಳು. ಮರಾಠಿ, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲೂ ಇವರಿಗೆ ಪಾಂಡಿತ್ಯವಿತ್ತು. ೧೯೧೫ ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗ ಹಲವರು ಇಂಗ್ಲೀಷಿನಲ್ಲಿ ಮಾತನಾಡಿದರು. ಆದರೆ ಮುದವೀಡು ಕೃಷ್ಣರಾಯರು ತಮ್ಮ ಉಜ್ವಲವಾದ ಕನ್ನಡ ಮಾತಿನಲ್ಲಿ ಭಾಷಣ ಮಾಡಿ ಎಲ್ಲರನ್ನೂ ಎಚ್ಚರಗೊಳಿಸಿದರು. ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜಮಂತ್ರ ಪ್ರವೀಣ ಎಚ್. ವಿ ಸಂಜುಂಡಯ್ಯನವರು ಇವರನ್ನು 'ಕನ್ನಡದ ಸುರೇಂದ್ರನಾಥ ಬ್ಯಾನರ್ಜಿ' ಎಂದು ಸಂಬೋಧಿಸಿ ಗೌರವಿಸಿದರು. ಇವರು ದೇಶದ ಸ್ವಾತಂತ್ರ್ಯಕ್ಕಾಗಿಯೂ, ಕರ್ಣಾಟಕ ಏಕೀಕರಣಕ್ಕಾಗಿಯೂ ಅಪಾರವಾಗಿ ಶ್ರಮಿಸಿ ೧೯೩೧ ರಲ್ಲಿ ಕೃಷ್ಣಾಷ್ಟಮಿ ದಿನ ಕಣ್ಮರೆಯಾದರು. ಇವರು ೧೮೭೪ ರಲ್ಲಿ ಜನಿಸಿದಂತೆ ಅವರ ಚರಿತ್ರೆಯಿಂದ ತಿಳಿದುಬರುತ್ತದೆ. ಇವರು ನಡೆಸಿದ ಕರ್ಣಾಟಕ ವೃತ್ತ ಮತ್ತು ಧನಂಜಯ ಪತ್ರಿಕೆಗಳು ಕನ್ನಡಿಗರನ್ನು ಬಡಿದೆಬ್ಬಿಸಿದುವು. ಇವರು ೧೯೦೪ ರಲ್ಲಿ ಧಾರವಾಡದಲ್ಲಿ ಒಂದು ನಾಟಕ ಮಂಡಲಿಯನ್ನು ರಚಿಸಿ ರಂಗಭೂಮಿಯ ಮೇಲೆ, ಶಾಕುಂತಲ, ಸುಭದ್ರ, ಪದ್ಮಾವತೀ ಪರಿಣಯ ಮೊದಲಾದ ನಾಟಕಗಳನ್ನು ಆಡಿ ಕನ್ನಡ ಜನರ ರಸಿಕತೆಯನ್ನು ವಿಕಾಸಗೊಳಿಸಿದರು. ಒಟ್ಟಿನಲ್ಲಿ ಕನ್ನಡ ನಾಡನ್ನು ಕಟ್ಟಿಸಿದ ಸುಪ್ರತಿಷ್ಠಿತರಲ್ಲಿ ಇವರೂ ಒಬ್ಬರು.

೬. ಬೆನಗಲ್ ರಾಮರಾಯರು.

ಇವರು ಮಂಗಳೂರಿನ ಕನ್ನಡಿಗರು. ಮೊಟ್ಟ ಮೊದಲು ೧೯೦೩ ರಲ್ಲಿ ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದಲ್ಲಿ ಇವರು ಕರ್ಣಾಟಕ ಏಕೀಕರಣವನ್ನು ಕುರಿತು ಒಂದು ಭಾಷಣವನ್ನು ನಿರೂಪಿಸಿದರು. ೧೯೨೫ ರಲ್ಲಿ ಬೆಳಗಾವಿಯಲ್ಲಿ ನಡೆದ ಕ. ಸಾ. ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಇವರು ಸಂಸ್ಕೃತ, ಮರಾಠಿ, ತೆಲುಗು, ತಮಿಳು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಉದ್ದಾಮ ಪಂಡಿತರಾಗಿದ್ದರು. ಇವರ ಜನನ ೧೮೭೬. ಇವರು ಮಂಗಳೂರಿನ ಪ್ಲೀಡರ್ ಮಂಜುನಾಥಯ್ಯನವರ ಮಕ್ಕಳು. ಇವರು 'ಸುವಾಸಿನೀ' ಪತ್ರಿಕೆಯ ಸಂಪಾದಕರಾಗಿದ್ದರು. ಇವರು ಕನ್ನಡದಲ್ಲಿ ಹಲವಾರು ಗ್ರಂಥಗಳನ್ನು ರಚಿಸಿರುವರು. ಸಂಸ್ಕೃತದ "ಶಿವತತ್ತ್ವ ರತ್ನಾಕರ"ವನ್ನು ಸಂಸ್ಕರಿಸಿ, ಪ್ರಕಟಿಸಿ ಲೋಕೋಪಕಾರ ಮಾಡಿದರು. "ಕನ್ನಡವನುಳಿದು ಎನಗೆ ಅನ್ಯ ಜೀವನವಿಲ್ಲ, ಕನ್ನಡವೆ ಎನ್ನುಸಿರು ಪೆತ್ತೆನ್ನ

ತಾಯಿ" ಮುಂತಾದ ಹಲವು ಕವನಗಳನ್ನು ರಚಿಸಿರುವರು. ೧೯೩೬ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಕರ್ನಾಟಕ ಏಕೀಕರಣ ಸಂಘಕ್ಕೆ ಇವರು ಮೊದಲು ಅಧ್ಯಕ್ಷರಾಗಿದ್ದರು. ಹಳೇ ಮೈಸೂರು ರಾಜ್ಯದಲ್ಲಿ ಏಕೀಕರಣ ಚಳುವಳಿಯನ್ನು ವಿಸ್ತರಿಸಲು ಈ ಸಂಘವು ಬಹುಮಟ್ಟಿಗೆ ಪ್ರಯತ್ನಿಸಿತು. ಎಂದು ಹೇಳಬಹುದು. ಈ ಮಹನೀಯರು ೧೯೫೩ರಲ್ಲಿ ದಿವಂಗತರಾದರು. ಕರ್ನಾಟಕ ಏಕೀಕರಣ ಚರಿತ್ರೆಯಲ್ಲಿ ಇವರ ಹೆಸರು ಅಜರಾಮರವಾದುದು.

೭. ಡಾ|| ಫ. ಗು. ಹಳಕಟ್ಟಿ ಅವರು

'ಶಿವಾನುಭವ' ಮತ್ತು 'ನವಕರ್ನಾಟಕ' ಪತ್ರಿಕೆಗಳ ಸಂಪಾದಕರಾದ ಡಾ|| ಫ.ಗು. ಹಳಕಟ್ಟಿ ಅವರು ಕ. ಏಕೀಕರಣದ ಮುಂದಾಳುಗಳಲ್ಲಿ ಒಬ್ಬರು. ಇವರು ಹುಟ್ಟಿದುದು ಧಾರವಾಡದಲ್ಲಿ. ಇವರ ಕಾರ್ಯಕ್ಷೇತ್ರ ಬಿಜಾಪುರ. ಕನ್ನಡದಲ್ಲಿ ವಚನ ಶಾಸ್ತ್ರವನ್ನು ಪ್ರಚಾರಮಾಡಿ "ವಚನಶಾಸ್ತ್ರ ಪಿತಾಮಹ" ಎಂಬ ಕೀರ್ತಿಯನ್ನು ಗಳಿಸಿದರು. ೧೯೨೬ರಲ್ಲಿ ಬಳ್ಳಾರಿಯಲ್ಲಿ ಆದ ಕ.ಸಾ. ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ೧೯೨೩ರಲ್ಲಿ ವಚನ ಶಾಸ್ತ್ರಸಾರ [ಭಾಗ-೧ನ್ನು] ಪ್ರಕಟಿಸಿದರು. ಅನಂತರ ಶಿವಾನುಭಂಗ ಗ್ರಂಥಮಾಲೆಯ ವಚನಶಾಸ್ತ್ರದಲ್ಲಿ [ಭಾಗ ೨-೩] ಪ್ರಕಟಿಸಿದರು. ಬಸವೇಶ್ವರ, ಚೆನ್ನಬಸವೇಶ್ವರ, ಅಕ್ಕಮಹಾದೇವಿ. ಪ್ರಭುದೇವರ ವಚನಗಳನ್ನು ಪ್ರಕಟಿಸಿದರು. ಇವರಿಗೆ ಕನ್ನಡ, ಇಂಗ್ಲೀಷ್, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವಿತ್ತು. ೧೯೦೪ರಲ್ಲಿ ಬಿಜಾಪುರದಲ್ಲಿ ವಕೀಲಿ ಆರಂಭಿಸಿ ಜತೆಯಲ್ಲಿ ಏಕೀಕರಣ ಚಳುವಳಿ ಆರಂಭಿಸಿದರು. ತಮ್ಮ ಜೀವನ ಪರಿಯಂತರವಾಗಿ ಏಕನಿಷ್ಠೆಯಿಂದ ಹೋರಾಡಿದರು. 'ನವಕರ್ನಾಟಕ' ವಾರಪತ್ರಿಕೆಯನ್ನು ೧೯೨೦ರಲ್ಲಿ ಆರಂಭಿಸಿ ಬಹಳ ಕಾಲ ನಡೆಸಿ ಏಕೀಕರಣ ಚಳುವಳಿಗೆ ಪುರುಪುಕೊಟ್ಟರು. ಇವರು ಕ್ರಿ. ಶ. ೧೮೮೦ರಲ್ಲಿ ಜನಿಸಿ ೨೯-೬-೧೯೬೪ರಲ್ಲಿ ಶಿವಲೋಕವಾಸಿಗಳಾದರು. ನಾಡಿನ ಏಕೀಕರಣ ಚರಿತ್ರೆಯಲ್ಲಿ ಇವರ ಹೆಸರು ಅಜರಾಮರವಾದುದು. ಕರ್ನಾಟಕ ವಿಶ್ವವಿದ್ಯಾನಿಲಯದವರು ಇವರಿಗೆ 'ಡಾಕ್ಟರೇಟ್' ಪದವಿಕೊಟ್ಟು ಗೌರವಿಸಿದರು. ಇಂಗ್ಲಿಷ್ ಸರ್ಕಾರ ಇವರಿಗೆ 'ರಾವ್ ಬಹದ್ದೂರ್' ಬಿರುದು ಕೊಟ್ಟು ಗೌರವಿಸಿದರು.

೮. ರೊದ್ದ ಶ್ರೀನಿವಾಸರಾಯರು

ಇವರು ೧೭-೯-೧೮೫೦ ಧಾರವಾಡದಲ್ಲಿ ಜನಿಸಿದರು. ಇವರು ೧೯೨೦ರಲ್ಲಿ ಹೊಸಪೇಟೆಯಲ್ಲಾದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಧಾರವಾಡ ಜಿಲ್ಲೆಯಲ್ಲಿ ಕನ್ನಡ ಶಾಲೆಗಳನ್ನು ೨೦೦ ರಿಂದ ೬೦೦ಕ್ಕೆ ಏರಿಸಿದರು. ಹಳ್ಳಿಗಾ

ಅಡ್ಡಾಡಿ ೨,೦೦,೦೦೦ ರೂ. ಕೂಡಿಸಿ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪಿಸಿದರು. [೧೯೧೭] ಶಿಕ್ಷಣಾಧಿಕಾರಿಗಳಾಗಿ, ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲರಾಗಿ, ವಿದ್ಯಾವರ್ಧಕ ಸಂಘದ ಸ್ಥಾಪಕರಾಗಿ ಶ್ರಮಿಸಿದರು. ಸುಮಾರು ೮೦ ವರ್ಷದ ಜೀವನವನ್ನೆಲ್ಲಾ ಕನ್ನಡದ ಏಳಿಗೆಗಾಗಿ ದುಡಿದರು. ಇವರು ಶಾಲಾ ಮಾಸ್ತರರಾಗಿ ಜೀವನವನ್ನು ಆರಂಭಿಸಿದರು. ೧೮೯೮ರಲ್ಲಿ ಧಾರವಾಡದ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದರು. ೧೯೦೪ರಲ್ಲಿ ಅಲ್ಲಿಂದ ನಿವೃತ್ತರಾದರು. ಇವರು ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. ನಂದಿಸಿ, ಸ್ತ್ರೀ ಶಿಕ್ಷಣ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರಿಗೆ ಇಂಡಿಯಾ ಸರ್ಕಾರದಿಂದ 'ದಿವಾನ್ ಬಹದ್ದೂರ್' ಸಿ.ಪಿ.ಇ. ಎಂಬ ಬಿರುದು ಬಂದಿತು. ಇವರು ೪-೮-೧೯೩೯ ರಲ್ಲಿ ಮರಣ ಹೊಂದಿದರು. ಇವರ ಕೀರ್ತಿ ನಾಡಿನಲ್ಲಿ ಅಜರಾಮರವಾಗಿದೆ.

೯. ಹರ್ಡೀಕರ್ ಮಂಜಪ್ಪನವರು

ಇವರು ಕಾರವಾರ ಜಿಲ್ಲಾ ಬನವಾಸಿಯಲ್ಲಿ ಹುಟ್ಟಿ ಬೆಳೆದವರು. ಜನನ ೧೪-೨-೧೮೮೬. ಮರಣ ತಾ|| ३-೧-೧೯೪೭. ಜೀವಿತ ಕಾಲ ೬೧ ವರ್ಷ ಇವರು ಬಾಲಬ್ರಹ್ಮಚಾರಿಗಳು. ಭಾರತೀಯರ ದೇಶಭಕ್ತಿ, ಬಸವೇಶ್ವರ ಚರಿತೆ, ಬುದ್ಧಿಯ ಮಾತುಗಳು, ಸ್ವಾಮಿ ರಾಮತೀರ್ಥ, ಶುದ್ಧಿ ಸಂಘಟನೆ ಮೊದಲಾದ ಗ್ರಂಥಗಳನ್ನು ಬರೆದರು ಕನ್ನಡನಾಡನ್ನು ಸುತ್ತಾಡಿ ಜನರಲ್ಲಿ ನವಚೈತನ್ಯ ಉಂಟುಮಾಡಿದರು. ಇವರು ಹಿರಿಯ ವಾಗ್ಮಿಗಳು. "ಖಾದಿ ವಿಜಯ"ಶರಣ ಸಂದೇಶ, ಉದ್ಯೋಗ ಮೊದಲಾದ ಪತ್ರಿಕೆಗಳನ್ನು ನಡೆಸಿದರು. 'ಕರ್ನಾಟಕ ಏಕೀಕರಣದಿಂದಲೇ ಕನ್ನಡಿಗರ ಮುಕ್ತಿ'ಎಂದು ಸಾರಿ ಹೇಳುತ್ತಿದ್ದರು. ಇವರಿಗೆ ಕನ್ನಡ, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ಪಾಂಡಿತ್ಯವಿತ್ತು. ಇವರ ಕಾರ್ಯಕ್ಷೇತ್ರವು, ದಾವಣಗೆರೆ, ಹರಿಹರ ಮತ್ತು ಆಲಮಟ್ಟಿಗಳಾಗಿದ್ದುವು.

೧೦. ಪ್ರೊ|| ಎಸ್. ಎಸ್. ಬಸವನಾಳರು

ಇವರು ೧೯೪೪ರಲ್ಲಿ ರಬಕವಿಯಲ್ಲಾದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಚೆನ್ನಬಸವ ಪುರಾಣ, ಶಬರಶಂಕರ ವಿಳಾಸ, ಕೈವಲ್ಯ ಕಲ್ಪವಲ್ಲರಿ ಕಾವ್ಯಾವಲೋಕನ, ಶಬ್ದಾನುಶಾಸನ, ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಬಸವೇಶ್ವರನ ವಚನಗಳನ್ನು ಇಂಗ್ಲಿಷ್‌ನಲ್ಲಿ ಭಾಷಾಂತರಿಸಿದ್ದಾರೆ. ಇವರು ನಾಡಿನಲ್ಲಿ ಹೆಸರಾಂತ ಅಗ್ರಗಣ್ಯ ವಿದ್ವಾಂಸರು.

ಲಿಂಗರಾಜ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾಗಿದ್ದು 'ಜಯ ಕರ್ನಾಟಕ' ಸಂಪಾದಕರಾಗಿದ್ದು ಸೇವೆಸಲ್ಲಿಸಿದ್ದಾರೆ. ಕರ್ನಾಟಕ ವಿದ್ಯಾರ್ಥಿ ಸಂಘದ

ಉದ್ಧಾರಕರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕದ ಪ್ರಮುಖ ವಿದ್ಯಾ ಸಂಸ್ಥೆ ಕೆ.ಎಲ್. ಈ. ಸೊಸಾಯಿಟಿ ಸ್ಥಾಪಿಸಿ ಮುಖ್ಯಾಚಾರ್ಯ ಸಾಧಿಸಿದರು. ಕನ್ನಡದಲ್ಲಿ ಹಿಂದೂ ಸ್ಥಾನದ ಚರಿತ್ರೆ ಬರೆದಿದ್ದಾರೆ.

೧೧. ಗದಿಗಯ್ಯ ಹೊನ್ನಾಪುರಮಠರು

ಇವರು ಧಾರವಾಡದಲ್ಲಿ ೧೮೭೦ರಲ್ಲಿ ಜನಿಸಿದರು. ಜೀಗಸೆ ಅಭಿವೃದ್ಧಿಗೆ ಬಂದರು. ತಾ|| ೬-೧-೧೯೩೩ರಲ್ಲಿ ಮರಣ ಹೊಂದಿದರು. ಚಂದ್ರೋದಯ, ವಾಗ್ದೇವಿ ಎಂಬ ಪತ್ರಿಕೆಗಳನ್ನು ನಡೆಸಿದರು. ಅದ್ಭುತಪ್ರೇಮ, ಅಬ್ರಹಾಂ ಲಿಂಕನ್, ತ್ರಾಟಿಕಾ ನಾಟಕ, ಪ್ರಹ್ಲಾದ ಚರಿತ್ರೆ, ಬಾಲ ಭಾಗವತ, ಬಾಲ ಭಾರತ, ಬಾಲ ರಾಮಾಯಣ, ಶ್ರೀಕೃಷ್ಣ ಚರಿತೆ, ಬಸವೇಶ್ವರ ಚರಿತೆ, ಶ್ರೀರಾಮಕೃಷ್ಣರ ಸತ್ಕಥೆಗಳು, ಸಮರ್ಥ ರಾಮದಾಸರ ಚರಿತ್ರೆ, ಶಿವಲೀಲಾಮೃತ, ಸಾವಿತ್ರಿ ಚರಿತ್ರೆ, ಸುದಾಮ ಚರಿತ್ರೆ ಮೊದಲಾದ ಗ್ರಂಥಗಳನ್ನು ರಚಿಸಿದರು.

ಧಾರವಾಡ ಜಿಲ್ಲಾ ಬೋರ್ಡ್, ನಗರ ಸಭೆಗಳ ಸದಸ್ಯರಾಗಿ ಸೇವೆ ಸಲ್ಲಿಸಿದರು. ದಿ|| ಆಲೂರು ವೆಂಕಟರಾಯರು, ಮುದುವೀಡು ಕೃಷ್ಣರಾಯರು, ಕಡಪ ರಾಘವೇಂದ್ರರಾಯರಿಗೆ ಏಕೀಕರಣ ಚಳುವಳಿಯಲ್ಲಿ ನೆರವಾಗಿ ಭಾಗವಹಿಸಿದರು.

೧೨. ಕೈ|| ಬಿ. ಎಂ. ಶ್ರೀಕಂಠಯ್ಯನವರು

ಇವರು ೧೯೩೮ರಲ್ಲಿ ಕಲ್ಬುರ್ಗಿಯಲ್ಲಾದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರು. ಕನ್ನಡ ತಮಿಳು, ಇಂಗ್ಲಿಷ್ ಭಾಷೆಗಳಲ್ಲಿ ಪರಿಣತರಾಗಿದ್ದರು. ಅಶ್ವತ್ಥಾಮನ್ [ನಾಟಕ] ಹೊಂಗನಸುಗಳು, ಗದಾಯುದ್ಧ (ನಾಟಕ) ಪಾರಸಿಕರು (ನಾಟಕ) ಇಂಗ್ಲೀಷ್ ಗೀತೆಗಳು [ಕವಿತೆ] ಕನ್ನಡ ಸಾಹಿತ್ಯ ಚರಿತ್ರೆ (ವಿಮರ್ಶೆ) ಮೊದಲಾದ ಗ್ರಂಥಗಳನ್ನು ರಚಿಸಿದ್ದಾರೆ. ಹಳೇ ಮೈಸೂರಿನಲ್ಲಿ ಧೈರ್ಯವಾಗಿ ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಧೀರರಿವರು. ಇವರು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಪ್ರಖ್ಯಾತ ವಾಗ್ಮಿಗಳಾಗಿದ್ದರು. ಇವರು ೧೮೮೪ರಲ್ಲಿ ತುಮಕೂರು ಜಿಲ್ಲಾ ಸಂಪಿಗೆ ಗ್ರಾಮದಲ್ಲಿ ಜನಿಸಿದರು. ೧೯೪೬ನೇ ಜನವರಿ ೫ ರಂದು ಧಾರವಾಡದಲ್ಲಿ ದಿವಂಗತರಾದರು.

ಹೀಗೆ ಕರ್ನಾಟಕದ ಮಹಾತ್ಮರಾಗಿ ನಾಡುನುಡಿಗಾಗಿ ದುಡಿದ ಎಲ್ಲ ಸುಪ್ರತಿಷ್ಠಿತರ ಆಸೆಯೂ ಕರ್ನಾಟಕವನ್ನು ಸರ್ವಾಂಗ ಸುಂದರವಾಗಿ ಸಂಪತ್ಭರಿತವನ್ನಾಗಿ ಮಾಡುವುದೇ ಆಗಿದೆಯಲ್ಲವೆ?

ಕುವೆಂಪು ಅವರ 'ಪ್ರೇಮ ದರ್ಶನ'
('ಕಿಂಕಿಣಿ' ಮತ್ತು 'ಪ್ರೇಮ ಕಾಶ್ಮೀರ'ಗಳಲ್ಲಿ)

ಶ್ರೀ ರಾಘವ—ಬೆಂಗಳೂರು

—: :—

ಕುವೆಂಪು ಅವರ ಕಿಂಕಿಣಿ ಒಂದು ಹೊಸ ಬಗೆಯ ಗ್ರಂಥ. ಇದರಲ್ಲಿ ಒಟ್ಟು ೬೦ ವಚನ ಕವನಗಳಿವೆ. ವಚನ ಕವನ ಎನ್ನುವ ಹೆಸರು ಹೊಸದು; ಅದು ಅನುಸರಿಸಿರುವ ಗದ್ಯ ಶೈಲಿ ಹಳಗನ್ನಡ ಚಂಪೂಕಾವ್ಯಗಳಲ್ಲಿಯೂ ಶಿವಶರಣರ ವಚನ ಸಾಹಿತ್ಯದಲ್ಲಿಯೂ ಕನ್ನಡಿಗರಿಗೆ ಸುಪರಿಚಿತ. ಚಂಪೂಕಾವ್ಯಗಳ ಗದ್ಯ ಭಾಗಗಳಲ್ಲಿ ನೀರಸ ಕಥಾಭಾಗ ನಿರೂಪಣೆ, ಇಲ್ಲವೆ ಶಬ್ದಾಡಂಬರ ಶಬ್ದಾಲಂಕಾರ ಶ್ಲೇಷೆ ಇವುಗಳಿಂದ ತುಂಬಿದ ಕವಿಯ ಪಾಂಡಿತ್ಯ ಪ್ರದರ್ಶನ ಕಂಡು ಬರುತ್ತದೆ.ದುರ್ಗ ಸಿಂಹ ನಯಸೇನ ಮುಂತಾದ ಕೆಲವು ಕವಿಗಳು ಮಾತ್ರ ಚಂಪೂ ಕೃತಿಗಳಲ್ಲಿ ಗದ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ಮೊತ್ತದಲ್ಲಿ, ಚಂಪೂ ಕಾವ್ಯರಾಶಿಯ ಗದ್ಯದಲ್ಲಿ ಕಾವ್ಯಗುಣಕ್ಕೆ ಕೊಡಲಿ ಪೆಟ್ಟು ಶಿವಶರಣರ ವಚನಸಾಹಿತ್ಯದ ಬಹುಭಾಗ ಭಾವಪೂರ್ಣವಾಗಿದ್ದು, ಗದ್ಯಕವನ ಅಥವಾ ವಚನಕವನ (prose poem)ಎನ್ನಲಡ್ಡಿಯಿಲ್ಲ. ಹೊಸ ಕನ್ನಡದಲ್ಲಿ ಗದ್ಯ ವಿಶಾಲವಾದ ಕ್ಷೇತ್ರದಲ್ಲಿ ದುಡಿಯಬೇಕಾಗಿ ಬಂದದ್ದರಿಂದ, ಕವಿತೆಗೆ ಸಹಜವಾದ ನುಡಿತೊಡವುಗಳನ್ನು ಕಳಚಿಹಾಕಿ ಸರಳತೆಯ ಉಡುಪು ತೊಟ್ಟಿತು. ವಚನ ಶೈಲಿಯ ವಿಶಿಷ್ಟ ಸೌಂದರ್ಯವೂ, ಅದು ಒದಗಿಸಿ ಕೊಟ್ಟ ಅಭಿವ್ಯಕ್ತಿ ಸ್ವಾತಂತ್ರ್ಯವೂ ಈಚಿನ ಕೆಲವು ಬರಹಗಾರರ ಮೇಲೆ ಪ್ರಭಾವ ಬೀರಿತು. ತತ್ಪರಿಣಾಮವಾಗಿ, "ರಂಗಯ್ಯನ ವಚನಗಳು" ಮಾದರಿಯ ಹೊಸಗನ್ನಡ ವಚನಗಳು ರಚಿತವಾಗತೊಡಗಿದವು. ರಂಗನಾಥ ದಿವಾಕರರ 'ಅಂತರಾತ್ಮನಿಗೆ', ರಾಜರತ್ನಂ ಅವರ 'ಹನಿಗಳು', ಸಿ, ಕೃಷ್ಣರ 'ನನ್ನ ಅಪ್ಸರೆ,' ಎಂ. ವಿ. ಸೀ ಅವರ 'ಹಿಡಿ ಹೂವು' ಗ್ರಂಥದ ಕೆಲವು ರಚನೆಗಳು, — ಇವುಗಳಲ್ಲಿ ವಚನಗಳ ಮಾದರಿಯ ಪದ್ಯಗಂಧಿಯಾದ ಗದ್ಯಶೈಲಿ ಹೆಜ್ಜೆ ಹಾಕಿತು. ಈ ಹೆಜ್ಜೆಯ ಗತಿಗೆ ಗೆಜ್ಜೆ ಗಟ್ಟಲು ಸಮರ್ಥ ಕವಿ ಬೇಕಾಗಿದ್ದಿತು. ಕುವೆಂಪು ಅವರ ಕಾವ್ಯವಾಣಿ ಈ ಹೊಸ ಹೆಜ್ಜೆಯ 'ಕಿಂಕಿಣಿ' ಆಗಿ, ವಚನ ಶೈಲಿಯನ್ನು ತನ್ನದೇ ಆದ ಲಯಲೀಲೆಯಲ್ಲಿ ಕುಣಿಸಿದೆ.

ಹೀಗೆಂದ ಮಾತ್ರಕ್ಕೆ, ನಾದಮಾಧುರ್ಯವೊಂದೇ 'ಕಿಂಕಿಣಿ'ಯ ಗುಣ ಎಂದು ತಿಳಿಯತಕ್ಕದ್ದಲ್ಲ. 'ಕಿಂಕಿಣಿ' ಮೊದಲು ನಮ್ಮ ಕಿವಿಯನ್ನು ಒಲಿಸಿಕೊಂಡು,

ಕುಣಿಕುಣಿಯುತ್ತಲೇ ನಮ್ಮ ಹೃದಯವನ್ನು ಪ್ರವೇಶಿಸುತ್ತವೆ. ಅಲ್ಲಿ ನಡೆಯುತ್ತದೆ ಕುವೆಂಪು ನಿರ್ಮಿಸಿರುವ ಕವಿತಾಕಾಮಿನಿಯ ಪೈವಿಕ ಶೃಂಗಾರ ಭಾವಾಭಿನಯದ ಲಾಸ್ಯವಿಲಾಸ, ಕಿಂಕಿಣೀರವ ರಂಜಿತವಾಗಿ ಕೃತಿಯು 'ಕಿಂಕಿಣಿ' ನಾದವೈಚಿತ್ರ್ಯಪೂರ್ಣ. ಅದರ ಹೊರ ಆಕರ್ಷಣೆ ನಾದ ಮಾಧುರ್ಯ, ಒಳ ಆಕರ್ಷಣೆ ಭಾವ ಬಂಧುರಂತೆ. ಈ ಭಾವ ಬಂಧುರತೆಯ ವೇದಿಕೆಯ ಮೇಲೆ ಬಗೆಯ ಬಿನ್ನತ್ಯದ, ಕಲ್ಪನಾವಿಲಾಸದ, ನರ್ತನವೂ ನಡೆಯುತ್ತದೆ ನಡುನಡುವೆ.

'ಕಿಂಕಿಣಿ'ಯ ನಾದ ಪ್ರಪಂಚದಲ್ಲಿ ಕಣ್ಣಿಗೆ ಹಬ್ಬವಿಲ್ಲದಿಲ್ಲ. 'ಆಷಾಢ ಸೂರ್ಯೋದಯ', 'ಸಂಜೆಯ ದಿಬ್ಬಣ', 'ಸಂಧ್ಯಾ ಚಿಂತನೆ', ಮಂಜಿನ ಅವತಾರ', 'ಚೈಗು'— ಈ ಕೆಲವು ವಚನ ವರ್ಣ ಚಿತ್ರಗಳು; ಇವುಗಳನ್ನು ಓದಿದಾಗ "ಕಿವಿ ಕಣ್ಣಾಗುತಿದೆ; ದನಿ ಬಣ್ಣವಾಗುತಿದೆ" ಇಂಥ "ಇಂದ್ರಜಾಲದ ಸೌಂದರ್ಯವನ್ನು ಮಾತಿಲ್ಲದೆ ಅನುಭವಿಸುವುದನ್ನು ನಮಗೆ ಕಲಿಸು" ಎಂದು "ಅಸಂಖ್ಯ ರಾಗಾನುರಾಗಗಳ ವಿಶ್ವವರ್ಣ ಶಿಲ್ಪಿ"ಯನ್ನು ಕವಿ ಬೇಡಿಕೊಳ್ಳುತ್ತಾರೆ. ಕೆಲವು ವಚನಗಳಲ್ಲಿ "ಚೆಳ್ಳಿಂಗಳು ಬಾಡುವ ಮುನ್ನ, ನನ್ನ ದೊರೆಯೆ, ಬಾ ನನ್ನೆದೆಗೆ!"– "ಓ ದಿವ್ಯ ಶಿಲಾಮೂರ್ತಿ, ಜನ್ಮ ಜನ್ಮಾಂತರಗಳಲ್ಲಿ ಕಲ್ಪ ಕಲ್ಪಾಂತರಗಳಿಂದಲೂ ನಿನ್ನೆದುರು ನಿಂತು ಜೀವನದಾರತಿಯನೆತ್ತುತಿಹೆನು... ನಟನೆಯನು ಬಿಟ್ಟೆನಗೆ ಮೈದೋರು"–"ಓ ಎನ್ನ ದೊರೆಯೆ, ಈ ಎನ್ನ ಗುಡಿಗೆ ನೀನೆಂದಿಗೈತರುವೆ"– ಎಂದು ಮುಂಚಿತಾಗಿ ಭಕ್ತಿಭಾವದಲ್ಲಿ ಪರಮಾತ್ಮನನ್ನು ಬೇಡುತ್ತಾರೆ. ಈ ಭಕ್ತಿಯೇ ದಿವ್ಯಪ್ರೇಮಕ್ಕೆ ತಿರುಗಿ, ಪರಮಾತ್ಮನನ್ನು ಪ್ರಿಯನನ್ನಾಗಿ ಪ್ರಿಯೆಯನ್ನಾಗಿ ಭಾವಿಸಿ, ಅವನನ್ನು ಕಾಡುತ್ತಾರೆ, ಬೇಡುತ್ತಾರೆ. ಇದು ಅನುಭಾವಿ ಭಕ್ತರು ತುಳಿದ ಜಾಡು. ಕನ್ನಡದಲ್ಲಿ ಮಹಾದೇವಿಯಕ್ಕನ ಕೆಲವು ಸುಂದರ ವಚನಗಳನ್ನೂ, ಸಂಸ್ಕೃತದಲ್ಲಿ ಜಯದೇವಿ ಕವಿಯ 'ಗೀತ ಗೋವಿಂದ'ದ ಕೆಲ ಗೀತಗಳನ್ನೂ ಸ್ಮರಿಸಬಹುದು, ಈ ಸಂದರ್ಭದಲ್ಲಿ. ಕುವೆಂಪು ಅವರ ವಚನಗಳಲ್ಲಿ ಒಂದು ವೈಶಿಷ್ಟ್ಯವಿದೆ: ಕವಿಗೆ ಪರಮಾತ್ಮ ಪೂರ್ಣವಾಗಿ ಅದ್ವೈತವಾಗಿ, ಪ್ರೇಮಮೂರ್ತಿ: "ಇರುಳು ಹಗಲನು ಚುಂಬಿಸುವ ಸಮಯದಲ್ಲಿ ನೀನೆನ್ನ ಚುಂಬಿಸಿದೆ. ನಿನ್ನನುರಾಗ ನನ್ನೆದೆಯನು ತುಂಬಿ ತುಳುಕಿತು.... ನೀನೈತರುವೆ ಎಂದು ಕಾತರದಿ ಕಾದೆ... ಅನಂತ ಪರೀಕ್ಷೆಯೆ ತಪಸ್ಸಾಯಿತೆನಗೆ!.....ಬಾ ನನ್ನ ಮಧುರ ಮೋಹನಮೂರ್ತಿ! ಹೇ ಅನಂತ ಪರೀಕ್ಷೆಯ ತಪಃಫಲಮೂರ್ತಿ!....ನನ್ನನಾಲಿಂಗಿಸು; ಚುಂಬಿಸು; ನನ್ನನಿಲ್ಲಗೈ!.... ನನಗೂ ನಿನಗೂ ಭೇದವಿಲ್ಲ. ಏಕೆಂದರೆ, ಪ್ರೇಮ ಅದ್ವೈತ!.... ನೀನೆನ್ನ ರಾಧೆ, ಕೃಷ್ಣ, ಪ್ರೇಮ, ಪ್ರಾಣ: ನನ್ನ ಜೀವದ ಜೀವ! ನಾನಿಲ್ಲ; ನಾನಿಲ್ಲ! ನೀನೆ ಇರುವುದೆಲ್ಲ, ಓ ನನ್ನನಲ್ಲ!"— ಎಂದು ಮುಂಚಿತಾಗಿ ದಿವ್ಯಪ್ರೇಮಿಯಲ್ಲಿ ಆತ್ಮ ಸಮರ್ಪಣೆ ಮಾಡಿಕೊಳ್ಳುತ್ತಾರೆ

"ನಾಯಿಯ ಬಳಿಯಲಿ ನಿಂತು ಮುಗುಳುನಗೆ ಬೀರುವ" "ಸರ್ಪ ಸಹ ಗಾಮಿಯಾಗಿ", "ಮಹಾಘನ ವಿಶ್ವವನು ಸವಿ ಸುಳ್ಳಿನಲಿ ಕೆತ್ತಿರುವ" ಮಾಯಾವಿಯಾಗಿ, ಒಂಟಿಗರ ಸಂಗಡಿಗನಾಗಿ, ಸಾಹಸಿಗಳೊಡನಾಡಿಯಾಗಿ, "ನಾನುತ್ತಿಟ್ಟು ತೊಡಿಸಿದ ಆ ಮುಗುಳುನಗೆಯಲ್ಲಿ?" ಎಂದು ಕೇಳುವ ತಾಯಾಗಿ. "ಬಗೆ ಕೋರಿದರೂ ಕೈಗೆ ಬಾರದಿಹ ನೂರಾರು ನವಿಗನಸುಗಳು ದಿಗಂತದ ಹಿಂದುಗಡೆ ನೈಗರೆದು ನಿಂತು ಕೈಬೀಸಿ ಕರೆಯುವಂತೆ ತೋರುವ 'ದಿಗಂತ ದೇವನಾಗಿ', "ಸೌಂದರ್ಯ-ದುಃಖ-ಸಂಕಟ-ದಾರಿದ್ರ್ಯಮೂರ್ತಿಯಾಗಿ, ಬಗೆಬಗೆಯ ಲೀಲೆಯಲ್ಲಿ ಕವಿಯ ಹೃದಯರಂಗದಲ್ಲಿ ಕುಣಿದಾಡಿದ್ದಾನೆ: ಕವಿಯ ಹೃದಯದಿಂದ ದಸಿಗೈದಿಹೆ ಆವನ ಪಾದಕಿಂಕಿಣಿ: "ಅರ್ಥಮುಕ್ತ, ಭಾವದೀಪ್ತ, ಧ್ವನಿಪ್ರಚುರ:

ಹೀಗೂ ಧ್ವನ್ಯಾತ್ಮಕ ಕೃತಿಯ 'ಕಿಂಕಿಣಿ' ನಾಮ.

o o o o

ಕುವೆಂಪು ಅವರ ರಸಪ್ರಯಾಣ ಪಥದಲ್ಲಿ 'ಪ್ರೇಮಕಾಶ್ಮೀರ' ಒಂದು ಮೈಲಿಗಲ್ಲು. ಈ ಗ್ರಂಥ ೫೬ ಪ್ರೇಮಗೀತಗಳ ಸಂಕಲನ. ಕಾಶ್ಮೀರ ಎಂದೊಡನೆಯೆ ಬಣ್ಣಬಣ್ಣಗಳಿಂದ ಮೆರೆಯುವ ಪ್ರಕೃತಿಯ ತುಂಬು ಚೆಲುವಿನ ಚಿತ್ರ ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತದೆ. ಇದುವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಪ್ರೇಮಗೀತಗಳ ಸಂಕಲನಗಳಲ್ಲಿ (ಆನಂದ ಕಂದರ 'ವಿರಹಿಣಿ' ಮತ್ತು 'ಒಡನಾಡಿ', ತೀ. ನಂ. ಶ್ರೀ. ಯವರ 'ಒಲುಮೆ', ಕೆ. ಎಸ್. ನರಸಿಂಹಸ್ವಾಮಿಯರ 'ಮೈಸೂರು ಮಲ್ಲಿಗೆ') ಪ್ರೇಮ ಪ್ರಪಂಚದ ವಿಸ್ತಾರ ವೈಭವಗಳು, ಅದರ ತುಂಬು ಚೆಲುವು, (ಬೇರೆ ಬೇರೆ ಕಾರಣಗಳಿಂದಾಗಿ) ಪ್ರಕಾಶಗೊಂಡಿಲ್ಲ. 'ಪ್ರೇಮ ಕಾಶ್ಮೀರ'ದಲ್ಲಿ ಆ ತುಂಬು ಚೆಲುವು ಅನುಪಮ ಶಬ್ದ ಸಂಪತ್ತನ್ನು ಸೂರೆಗೊಂಡ ಸಿದ್ಧಿಯಿಂದ ವರ್ಣೋಜ್ಜ್ವಲವಾಗಿ ಮೆರೆಯುತ್ತಿದೆ. ಇಲ್ಲಿ ಆತ್ಮನಿಷ್ಠವಾದ ಪ್ರೇಮಾನುಭವದ ನಿವೇದನಕ್ಕಿಂತ ಹೆಚ್ಚಾಗಿ ವಸ್ತುನಿಷ್ಠವಾದ 'ಪ್ರೇಮದರ್ಶನ' ನೂತನ ಕಾಂತಿಯಿಂದ ನಿರೂಪಣೆಗೊಂಡಿದೆ.

ಕವಿಯ ಪ್ರೇಮದರ್ಶನದ, ಪ್ರೇಮ ಸಿದ್ಧಾಂತದ, ಪ್ರೇಮತತ್ತ್ವದ, ರಸ ನಿರೂಪಣೆಯನ್ನು ಅಡಕವಾಗಿ ತಿಳಿಸುವುದು ಮಾತ್ರ ಈ ಚಿಕ್ಕ ಅವಲೋಕನದಲ್ಲಿ ಸಾಧ್ಯ.

ಪ್ರೇಮಕ್ಕೆ ಪ್ರೇರಕ ಸೊಬಗು: ಆದ್ದರಿಂದ "ಸೊಬಗನೇಕೆ ಹಳಿಯುತಿರುವೆ ಬಣಗು ವೈರಾಗಿ? ಸೊಬಗು ದೇವನಂಶವಲ್ತೆ?" ಎಂದು ಕವಿಯ ಪ್ರಶ್ನೆ. ಈ ಸೊಬಗು ಎಲ್ಲ ಕಡೆಯೂ ನೆಲಸಿರುತ್ತದೆ; ಕಾಣುವ ಕಣ್ಣು ಬೇಕು, ಅಷ್ಟೆ. "ವನವಕಾಶದ ಚೆಲುವು ಕಣ್ಣು ರಾಧೆಗೇನು ಕಡಿಮೆ ಎನ್ನೆ!" ಎನ್ನುತ್ತಾನೆ ಕವಿ.

ಆದರೂ ಹೊರಗಿನ ಸೊಬಗು ಹುಸಿ: "ಮೈ ಚೆಲುವಿಗೆ ನೀ ಸೋಲಿಯಾಮೆನ್ನ" ಎಂದು ಪ್ರೇಯಸಿ ಕೇಳಿಕೊಳ್ಳುತ್ತಾಳೆ; ಏಕೆಂದರೆ, ದೇಹಕ್ಕೆ ಅಂಟಿಕೊಂಡಿರುವ ಹೊರಸೊಬಗು ದೇಹದ ಕುಗ್ಗಿನೊಡನೆ ಕುಗ್ಗುವುದು, ಕೊನೆಗೆ ಕಣ್ಮರೆಯೂ ಆಗುವುದು; (ಮುಪ್ಪಿನೊಡನೆ ಮೂಡುವ ಸೊಬಗಿನ ಪರಿಯೇ ಬೇರೆ; ಅದು ಕಲಾ ದೃಷ್ಟಿಗೆ ಮಾತ್ರ ಗೋಚರ; ಈ ಸಂಬಂಧದ ಜಿಜ್ಞಾಸೆ ಇಲ್ಲಿ ಅಪ್ರಕೃತ); ಹಿಡಿವುದು ದೇಹಕೆ ಕಾಲದ ತುಕ್ಕು!' ಆದರೂ, ಈ ಹೊರಗಿನ ಚೆಲುವನ್ನು ನಿರಾಕರಿಸುವಂತೆಯೂ ಇಲ್ಲ; ಅದನ್ನು ಆಶ್ರಯಿಸಿಯೆ, ಕಡೆಗೆ ಅದನ್ನು ಮೀರಿಯೂ, ಬದುಕಬೇಕಾಗಿದೆ ಪ್ರೇಮ. "ನನ್ನ ಪ್ರೇಮ ಬರಿಯ ಕಾಮ" ಎಂಬ ಜ್ಞಾನೋದಯವಾಗಿ, "ಹುಲ್ಲು ಬೆಂಕಿಯಂತೆ ಒಲವು, ಅದರ ಕ್ಷಣಿಕ ಉಷ್ಣದಲ್ಲಿ ಕುದಿಯುಲೆಮ್ಮ ಕಾಮುಕನಕ ಪ್ರೇಮ ಎಂಬ ಹೆಸರಿನಲ್ಲಿ" ಎಂಬ ಅನಿವಾರ್ಯ ನಿರ್ಧಾರಕ್ಕೆ ಬಂದ ಕೂಡಲೆ, ನಿಜವಾದ ಪ್ರೇಮದ ಅರಿವು ಉಂಟಾಗುತ್ತದೆ. ದಿವ್ಯಪ್ರೇಮ ಮೂರ್ತಿಯನ್ನು ಕುಳ್ಳಿರಿಸಲು ಮೋಹ, ಕಾಮ—ಒಂದು ಪೀಠಿಕೆ: ಮೊದಲಲ್ಲಿ ದೇಹ ದೇಹಕ್ಕೆ ಎಳಸುತ್ತದೆ; ಮೋಹದ ಮತ್ತಿನಲ್ಲಿ "ಹಾಲು, ಹೂವು, ಜೊನ್ನ, ಜೇನು ಎಲ್ಲ ಸೇರಿಯಾದೆ ನೀನು; ಹಾಲಿಗಿಂತ ಕೆನ್ನೆ ಸವಿ" ಎಂದು ಮೊದಲಾಗಿ ಪ್ರಿಯನು ಪ್ರಿಯೆಗೆ ಹೇಳುತ್ತಾನೆ; "ಮೈ ಚೆಲುವಿನ ಹೊಳೆಯಲಿ" ಮೀಯಲು ಬಯಸುತ್ತಾನೆ. ಪ್ರಿಯನಿಗೆ ಪ್ರಿಯೆಯ' ಚೆಂದುಟಿಯ ಸವಿಮುತ್ತು, ಮೈಸೊಂಕು, ಇವೆಲ್ಲ ಕಮನೀಯ; ಕಾಮ್ಯ: "ಚೆಂದುಟಿಯ ಸವಿಮುತ್ತಿಗೆಂದು ನಾ ಜನ್ಮ ಜನ್ಮಗಳೆತ್ತಿ ಬಯಸಿ" ಬಂದಿರುತ್ತಾನೆ ಅವನು. ಪ್ರೇಮಾನುಭವ ವ್ಯಕ್ತಿಯ ಬದುಕಿನಲ್ಲಿ ಆಕಸ್ಮಿಕವಾಗಿ ಬರತಕ್ಕದ್ದಲ್ಲ: ಅದು ಜನುಮಜನುಮದಾಟ. ಹೀಗೆ ಜನುಮ ಜನುಮಗಳಲ್ಲಿ ನಲ್ಲನಲ್ಲೆಯರಾಗಿದ್ದ ಎರಡು ಜೀವಗಳು ಮತ್ತೆ ನಲ್ಲನಲ್ಲೆಯರಾಗಿ ಒಡಗೂಡಿದಾಗ ಒಂದನ್ನೊಂದು ಅಗಲಿ ಇರಲು ಆಗದು. ಪ್ರೇಮದ ಅತಿಥಿಯ ಬರವಿಗಾಗಿ ಪ್ರಣಯಿಯ ಹೃದಯ ಮಂದಿರದ ಬಾಗಿಲು ಸದಾ ತೆರೆದಿರುತ್ತದೆ. "ತೆರೆದಿದೆ ಮನೆ, ಓ, ಬಾ ಅತಿಥಿ" ಎಂದು ಪ್ರಣಯಿ ಹಾತೊರೆಯುತ್ತಿರುತ್ತಾನೆ. ಪ್ರಿಯನು ಪ್ರಿಯೆಯ ಅಗಲಿಕೆಯನ್ನು ಕ್ಷಣ ಮಾತ್ರವೂ ಸಹಿಸನು; ಅಂತೆಯೆ ಪ್ರಿಯೆಯೂ ಸಹ. ಪ್ರಿಯೆ ನಾಕವೂ ಹೌದು, ನರಕವೂ ಹೌದು: ಅವಳು "ಜೊತೆಯೊಳಿದ್ದರೆ ನಾಕ, ದೂರ ಹೋದರೆ ನರಕ!" ಇಂತಹ ಸ್ವರ್ಗ ಸುಖವನ್ನು ಕೊಡುವ ಪ್ರೇಮವನ್ನು ಕೀಳಾಗಿ ಎಣಿಸಕೂಡದು. ದೇಹ ಕೂಡ ತುಚ್ಛವಾದುದಲ್ಲ: "ಮೈಗಳೆರಡಪ್ಪಿದರೆ, ಒಲಿದೊಪ್ಪಿದಪ್ಪಿನಲಿ ದ್ವೈತವದ್ವೈತದಲ್ಲಿ ಲೀನ"—ಇದೇ ಸ್ವರ್ಗ, ಅದರ ಸುಖ. ಪ್ರಣಯ ವಿಲಾಸವೆಲ್ಲ ಒಂದು 'ರಸ ಪೂಜೆ': ಪ್ರೇಯಸಿಯು "ಮೈ ದೇಗುಲದಿ" ಪ್ರಿಯನು ಪೂಜಾರಿ, ಅವನೆದೆಯ ನಾರಿ ದೇವತೆ. ಪ್ರಿಯಪ್ರೇಯಸಿಯರು ಸಂಪೂರ್ಣ ತ್ಯಾಗ ಭಾವನೆಯಿಂದ ಹೀಗೆ ಭೋಗಿಸಿದರೆ,

"ಆ ಭೋಗಕ್ಕಿಂತ ತ್ಯಾಗವಿಲ್ಲ; ಆ "ರಸಪ್ರಣಯ ಪರಸ್ಪರತೆ ಪುರುಷಾರ್ಥಂ ಬತ್ತ ಒರತೆ, ದಾಂಪತ್ಯನಾಕವಿ, ಒಲಿದ ಗಂಡು ಹೆಣ್ಣುಗಳ ಪ್ರೇಮಕ್ಕೆ ದಾಂಪತ್ಯವೇ ಸಾವವರೆಗೆ ತ್ಯಾಗ-ಭೋಗಗಳಲ್ಲಿ ಜೋಡಿಯಾಗಿರುವುದೇ, 'ರಸಪ್ರಣಯ ಪರಸ್ಪರತೆ'ಯೇ, ಮಂಗಳದ ಮನೆ; ಆ ಮನೆಯ ಬೆಳಕೇ ಪ್ರೇಮದ ಫಲವಾದ ಶಿಶು ಅದೇ ಸಂಸಾರ. ಸಂಸಾರವನ್ನು ಹಳಿಯುವುದು ತಪ್ಪು. "ಜಗದೀಶ್ವರನೆ ವಿಶ್ವಸಂಸಾರಿಯಾಗಿರಲು ಸಂಸಾರ ಪಾಶ" ಎನ್ನಬಹುದೆ? "ಶಿವನ ಕಾರ್ಯದೊಳಾವು ಶಿರಬಾಗಿ ನೆರವಾಗೆ ನಮಗದುವೆ ಪರಮಪಾವನ ಧರ್ಮವೈ....ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ" ಹೀಗೆ ಪ್ರೇಮ ಎನ್ನುವುದು ಮಾನವನ ಧರ್ಮ ಮಾತ್ರವಲ್ಲ, ವಿಶ್ವದ ಚಾಲಕ ಶಕ್ತಿಯೂ ಅದು. ಎರಡು ಜೀವಿಗಳಲ್ಲಿ ಪ್ರೇಮಜ್ಯೋತಿ ಹೊತ್ತಲು ಕಿಡಿ ತೋರಿಸುವ ಪರಸ್ಪರ ಆಕರ್ಷಣೆಯ ಶಕ್ತಿ ವಿಶ್ವವನ್ನೇ ವ್ಯಾಪಿಸಿದೆ: ಧರೆ ರವಿಯನ್ನೆಳೆಯುತ್ತಾನೆ, ರವಿ ಧರೆಯನೆಳೆಯುತ್ತಾನೆ; "ಭೀಮ ನೀಹಾರಿಕೆಯು ಭೂಮಿ ರವಿಗಳನೆಲ್ಲ ಸೆಳೆಯುತ್ತಿದೆ: "ಪ್ರೇಮವೆಂಬುವ ಶಕ್ತಿ ಪ್ರೇಮದಾಲಿಂಗನದಿ ಬಂಧಿಸಿದೆ ಸಕಲರನು ವಜ್ರ ಬಂಧದಲಿ!" ಹೀಗೆ, ಅನ್ಯೋನ್ಯಾಕರ್ಷಣೆಯಲ್ಲಿ ನಿಂತಿರುವ ವಿಶ್ವದ ಕೇಂದ್ರದಲ್ಲಿ "ತ್ರಿಭಂಗ ಮುರಾರಿ, ತ್ರಿಲೋಕ ಮೋಹಕ ರಾಸವಿಹಾರಿ—ಶ್ರೀ ಕೃಷ್ಣ—ಜಗದಡೆಯಲಿ ರತಿ ತೃಷ್ಣೆಯ ಕೆರಳಿಸಿ", ರಾಧೆಯೊಡನೆ ರಾಸಕ್ರೀಡೆಯಾಡಲು "ಭೂ ಗ್ರಹನಿಕರಂ ರವಿ ತಾರಾಳಿ ರಾಸಕ್ರೀಡಾ ವೇಶದ ತಾಳ ಯುಗ ಯುಗದಿಂ ಗಿರ್ರನೆ ಸುತ್ತಿವೆ, ಒಂದನ್ನೊಂದಂ ಸೆಳೆದಿವೆ, ಮುತ್ತಿವೆ. ಎಂದೆಂದಿಗು ಬಿಡದಾಲಿಂಗನದಿ ರಹಸ್ಯ ಛಂದೋಬಂಧನದಿ!" ಈ ವಿಶ್ವದ ರಾಸಕ್ರೀಡೆಯಲ್ಲಿ ಪ್ರತಿಯೊಬ್ಬ ಪ್ರಿಯನೂ ಕೃಷ್ಣನೆ, ಪ್ರತಿಯೊಬ್ಬ ಪ್ರೇಯಸಿಯೂ ರಾಧೆಯೆ. ಭಕ್ತಿಯೂ ಪ್ರೇಮವೆ: ಭಗವಂತ ಕೃಷ್ಣ, ಭಕ್ತ ರಾಧೆ, ಪ್ರೇಮ ಭಕ್ತಿಗೇನು ಕಡಮೆಯಾದುದಲ್ಲ. "ಹೃದಯ ಮಂದಿರದಲ್ಲಿ ಮಧುರ ಪ್ರಾಣೇಶನಿಗೆ ಪ್ರಣಯದಾರತಿ ಪೂಜೆಯಾಗುವಂದು, "ರಾಗವೇ ವೈರಾಗ್ಯವಪ್ಪುದಲ್ಲಿ, ಮೋಹವೇ ಭಕ್ತಿಯಾಗಿರುವುದರಲ್ಲಿ, ಪ್ರೇಮವೇ ಮುಕ್ತಿಯಂತೆಸೆವುದಲ್ಲಿ!"—ಇಂತಹ ಅಮೋಘವಾದ ಪ್ರೇಮದ ರಸದರ್ಶನಕ್ಕಾಗಿ ಕನ್ನಡಿಗರು 'ಪ್ರೇಮ ಕಾಶ್ಮೀರ'ದ ಕರ್ತೃ ಕುವೆಂಪುವಿಗೆ ಪ್ರೇಮಪೂರ್ವಕ ವಂದನೆ ಸಲ್ಲಿಸಬೇಕು.

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು.

ಕುವೆಂಪುಗಳ ವ್ಯಕ್ತಿತ್ವ

ಪ್ರೊ|| ಬಿ. ಹೆಚ್. ಶ್ರೀಧರ

—೦—

ಶ್ರೀ ಕುವೆಂಪುಗಳು ಆಧ್ಯಾತ್ಮಿಕ ಸ್ಫೂರ್ತಿಯಿಂದ ಕಾವ್ಯರಚನೆಗೆ ಕೈಹಾಕಿದವರು. ಕೌಮಾರದೆಶೆಯಿಂದಲೇ ಅವರಿಗೆ ಶ್ರೀ ರಾಮಕೃಷ್ಣಾಶ್ರಮದ ತರಬೇತು ಸಿಕ್ಕಿತ್ತು. ಅದರಿಂದ ಸ್ತುತಿನಿಂದಾವಿಮುಖಧೋರಣೆ ಅವರಲ್ಲಿ ಬೆಳೆಯುತ್ತ ಬಂದಿತು.

ಕುವೆಂಪುಗಳ ಬಂಗಾಳಿ–ಇಂಗ್ಲೀಷುಗಳ ಪ್ರಭುತ್ವ ಕರ್ನಾಟಕದಲ್ಲಿ ಅನನ್ಯಸಾಧಾರಣ. ಅವರು ಸೋಲನ್ನು ಜೀವನದಲ್ಲಿ ಕಂಡದ್ದೇ ಇಲ್ಲವೆನ್ನಬಹುದು. ಆದುದರಿಂದ ಛಂದಸ್ಸಿನಲ್ಲಿ ಹೊಸ ಪ್ರಯೋಗಗಳನ್ನವರು ಮೊದಲಿನಿಂದಲೂ ಮಾಡತೊಡಗಿದರು.

ಛಂದಸ್ಸಿನಲ್ಲಿ ಕನ್ನಡವು ಜನಪ್ರಿಯವಾದದ್ದು ಷಟ್ಪದಿಯನ್ನು ಬಳಸಿ. ಷಟ್ಪದಿ ತಾಳಬದ್ಧವಾದುದು. ಆ ತಾಳವನ್ನು ಮುರಿದರೆ ಏನಾಗುತ್ತದೆ? ಎಂಬುದನ್ನು ಕುವೆಂಪುಗಳೂ ಇಂದಿನ ನವ್ಯ ಕವಿಗಳೂ ತೋರಿಸಿಕೊಟ್ಟಿದ್ದಾರೆ.

ಭಾಷೆಯಲ್ಲಿ ಕುವೆಂಪುಗಳಿಗೆ ಪಂಕ್ತಿಭೇದವಿಲ್ಲ. ಹಳ–ನಡು–ಹೊಸಗನ್ನಡ ಭಾಷೆಗಳೂ ಸಂಸ್ಕೃತ–ಬಂಗಾಳಿ ಋಣ ಪದಗಳೂ ಅಲಂಕಾರ ನಿಯಮ ಸಾಮೀನ್ಯವೂ ಅವರ ಕೃತಿಗಳಲ್ಲಿ ಕಂಡುಬರುತ್ತವೆ. ಇಂಥ ಪ್ರಯೋಗಶೀಲ ಶೈಲಿರೂಪಣಕ್ಕೆ ಕುವೆಂಪುಗಳು ನೇತಾರರು. ಅವರ ಕನ್ನಡ ಗದ್ಯವು ಅಭಿಜಾತ ಆದರ್ಶವನ್ನು ಹಿಡಿದಿದೆ. ಅದು ಸರ್ವಾನುಕರಣೀಯ.

ಕುಂವೆಂಪುಗಳಲ್ಲಿಯ ವಿಶೇಷ ಪ್ರತಿಭೆ ಇರುವುದು ಪರ ಸಾಂಸ್ಕೃತಿಕ ಅಂಶಗಳನ್ನು ಕನ್ನಡಕ್ಕೆ ಸಾತ್ಮ್ಯಗೊಳಿಸುವುದರಲ್ಲಿ. ಯಾವುದನ್ನು ಕೊಟ್ಟರೂ ಅವರು ಕನ್ನಡವನ್ನಾಗಿ ಮಾಡಿಬಿಡುತ್ತಾರೆ. ಅದರಿಂದ ಅವರೀಗ ಕೆಚ್ಚೆದೆಯ ಕನ್ನಡ ಮುಂದಾಳುಗಳೆಲ್ಲರಿಗೂ ಅಗ್ರೇಸರರಾಗಿದ್ದಾರೆ. ನಿರ್ಭೀತಿಯು ಅವರ ವ್ಯಕ್ತಿತ್ವದ ಮಹಾ ಲಕ್ಷಣ. ಅದವರ ತ್ರಿಕರಣಗಳಲ್ಲಿ ಅಭಿವ್ಯಕ್ತವಾಗಿದೆ. "ಶೂರಶ್ಚ ಕೃತವಿದ್ಯಶ್ಚ" ಎಂದರವರೇ. ಕನ್ನಡದ ಅಭಿಮಾನವು ಅವರಲ್ಲಿ ಯಾವ ಪೂರ್ವಗ್ರಹಗಳಿಗೂ ಎಡೆಗೊಟ್ಟಿಲ್ಲ. ಶೆಂದಮಿಳು ಚಳವಳಗಾರರ ವಿಪರೀತ ಮತಿ ಅವರಲ್ಲಿ ಉದಯವಾಗಲಿಲ್ಲ. ಶಿಕ್ಷಣದ ಎಲ್ಲ ಮಟ್ಟಗಳಲ್ಲೂ ಕನ್ನಡವೇ ಮಾಧ್ಯಮವಾಗಬೇಕೆಂದು ಪದೇ ಪದೇ ವೀರಶೈಲಿಯಿಂದ ಘೋಷಿಸಿದ ಕನ್ನಡ ಕೇಸರಿಯೆಂದರೆ ಅವರೇ. ಅದರಲ್ಲಿ ಅವರ ನ್ಯಾಯವಾದಿತ್ವವು ಅಖಂಡನೀಯ. ಅಪ್ರತಿಮ.

ಪಂಪಾದಿ ಹಳಗನ್ನಡ ಕವಿಗಳಂತೆಯೇ ದೇಶ್ಯ-ತತ್ಸಮ-ತದ್ಭವಗಳ ಭೇದವನ್ನು ಕುವೆಂಪುಗಳು ಗಣಿಸದೆ, ತಮ್ಮದೇ ಆದ ಸಂಮಿಶ್ರ ಶೈಲಿಯನ್ನು ಕಾಲಾನುಸಾರ ಮಹಾಕವಿ ಸಹಜವಾಗಿ ರೂಪಿಸಿಕೊಂಡರು. ಇದು ಆಧುನಿಕ ಕನ್ನಡ ಲೇಖಕನು ಅನುಸರಿಸಲೇ ಬೇಕಾದ ಮಾರ್ಗ.

ಕನ್ನಡ ರಾಜ್ಯವನ್ನು ಕಟ್ಟುವುದರಲ್ಲಿ ಅನೇಕ ಹಿರಿಯರು ದುಡಿದು ಕೃತಕೃತ್ಯರಾದರು. ಕನ್ನಡ ಭಾಷೆಯನ್ನು ಕಟ್ಟುವುದರಲ್ಲಿ ಕುವೆಂಪುಗಳು ಕೃತಕೃತ್ಯರಾಗಿದ್ದಾರೆ. ಹೈಕ ಮೈಕಾದಿ ಪಂಚ ಕರ್ನಾಟಕೀಯರಿಗೂ ಅವರ ಕನ್ನಡ ಮಾದರಿಯಾಗಬಹುದಾಗಿದೆ. ಉಪ ಪ್ರಾದೇಶಿಕ ಕನ್ನಡ ವೈಶಿಷ್ಟ್ಯವನ್ನು ಭಾಷೈಕ್ಯಕ್ಕೆ ವಿರುದ್ಧವಾಗಿ ಅವರೆಂದೂ ಸಮರ್ಥಿಸಲಿಲ್ಲ. ಕನ್ನಡವು King's English ನಂತೆ ಸರ್ವ ಪ್ರಯೋಜ್ಯವಾಗಬಲ್ಲುದೆಂಬುದನ್ನು ತೋರಿಸಿಕೊಟ್ಟವರು ಪುಟ್ಟಪ್ಪನವರೇ.

ಭಾರತೀಯತೆಯ ಸಮಗ್ರ ಸ್ವರೂಪವನ್ನು ಕುಪ್ಪಳ್ಳಿಯ ಪುಟ್ಟಪ್ಪನವರ ವ್ಯಕ್ತಿತ್ವ-ಚಾರಿತ್ರಗಳು ಚೆನ್ನಾಗಿ ಅರಗಿಸಿಕೊಂಡಿವೆ. ಅವರ ನಡತೆಯ ಶೈಲಿ ಅದಕ್ಕೆ ನಿದರ್ಶನ. ಆದರೆ ಅವರು ಮಲೆನಾಡ ಮಗ, ಶ್ರೀಮಂತ ನಿಸರ್ಗದ ಪುತ್ರ. ಹಿಮಾಲಯ-ಸಹ್ಯಗಳ, ಗಂಗೆ-ತುಂಗೆಗಳ, ಕದಂಬ-ಯದುವಂಶೀಯರ, ಚಂಪು-ಸರಳ ರಗಳೆಗಳ, ಯಾಜ್ಞವಲ್ಕ್ಯ-ಅರವಿಂದರ, ತುಳಸಿ-ವಟವೃಕ್ಷಗಳ, ಪಾತಾಳ—ಆಕಾಶಗಳ, ಸೌಂದರ್ಯ-ಸತ್ಯಗಳ, ಸರಳತೆ-ಸಾಹಸಿಕತೆಗಳ, ಶಿಷ್ಯತ್ವ-ಗುರುತ್ವಗಳ, ಶಿಕ್ಷಕತ್ವ-ಪ್ರಶಾಸಕತ್ವಗಳ, ಮಾನ್ಯತ್ವ-ಸಾಮಾನ್ಯತ್ವಗಳ ಸಮನ್ವಿತತೆಯ ಒಂದು ಒಳ್ಳೆಯ ಮಾದರಿ ಅವರ ಜೀವನ ಮತ್ತು ಕಾವ್ಯ ರಚನೆ.

ಅಲ್ಪತ್ವ-ಮಹತ್ವಗಳ, ದೋಷ-ಗುಣಗಳ, ಮೌನ-ಮಾತುಗಾರಿಕೆಗಳ, ಮಾರ್ದವ-ಕಾಠಿನ್ಯಗಳ, ನ್ಯಾಯವೀರತನ—ಶಿಷ್ಯ ಪಕ್ಷಪಾತತನಗಳ, ಜಾತ್ಯತೀತತೆ-ಹಿಂದುಳಿದ ಜಾತಿಗಳ ಉದ್ಧಾರಕ್ಕಾಗಿ ವಿಶೇಷ ಕ್ರಮಗಳ, ಸ್ತುತಿವಿಮುಖತೆ-ಸ್ತುತಿಕಾರರ ಮೇಲೆ ಮಾಡುವ ಅನುಗ್ರಹಗಳ, ನಮ್ರತೆ-ಸ್ವಕೃತಿಗಳ ಬಗೆಗಿನ ಹೆಮ್ಮೆಗಳ, ಕೌಟುಂಬಿಕತೆ-ಸಂನ್ಯಾಸಿತ್ವಗಳ ವೀರಶೃಂಗಾರ ಹಾಗೂ ಸಸ್ಮಿತ ವಿಸ್ಮಿತಗಳ ಹೊಗುರು ಕುವೆಂಪುಗಳಲ್ಲೇ ದರ್ಶನೀಯ. ಮರ್ತ್ಯಾಮರ್ತ್ಯ ಅಂಶಗಳ ಸಾಮರಸ್ಯದ ಇನ್ನೊಂದು ಹೆಸರು ಕುವೆಂಪು. ಕಾವ್ಯಕಲೆಯ ಕಸಬುದಾರಿಕೆಯಲ್ಲಿ ಅಂತರ್ರಾಷ್ಟ್ರೀಯ ಮಟ್ಟ ಅವರದಿಂದು. ಅವರು ವಾಲ್ಮೀಕಿಯನ್ನು ಆಧುನೀಕರಿಸಿದ ಬಗೆ ಅವರದೇ. ಶೂದ್ರ ತಪಸ್ಸಿನಿಂದ ಆರಂಭವಾದ ಅವರ ಬೆಳವಣಿಗೆ ಬಲಿಷ್ಠ ಬ್ರಹ್ಮತೇಜಕ್ಕೆ ತಂದು ಅವರನ್ನು ಮುಟ್ಟಿಸಿತು. ಇದು ಕರ್ಮಯೋಗದ ಅದ್ಭುತ ಸಾಧನೆ. ಅವರ ಕೆಚ್ಚಿನಲ್ಲಿರುವ ಹುಚ್ಚು ದೇವತೆಗಳ ಸ್ಥಿರ ಯೌವನಕ್ಕೆ ಸರಿದೂರ. ಅವರ

ಪರಂಪರಾ ಪ್ರತ್ಯೇಕತೆಯು ಅಂಶಗಳು ಗಂಧರ್ವ-ಅಪ್ಸರೆಯರ ಪವಿತ್ರ "ಅಪಶೀಲಗಳಿಗೆ" ಸಮಾನ.

ಕುವೆಂಪುಗಳು ಸಾಹಿತಿಗಳೆಂದು ಗಣ್ಯರಾದುದು ಸಾಲದು. ಭಾರತದ ರಾಷ್ಟ್ರಪತಿತ್ವದ ಅಥವಾ ಕೇಂದ್ರದ ಮುಖ್ಯಮಂತ್ರಿತ್ವದ ಹೊಣೆಯನ್ನು ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ನಡೆಸಿಕೊಂಡು ಹೋಗಬಲ್ಲ ಕುಶಾಗ್ರರೆಂದೂ ಅವರು ಗಣ್ಯರಾಗಬೇಕಾಗಿದೆ. ವಜ್ರಾದಪಿ ಕಠೋರರೂ, ಕುಸುಮಾದಪಿ ಮೃದುಶೀಲರೂ ಆದ ಅವರ ವ್ಯಕ್ತಿತ್ವವು ಒಂದು ತರಹದ ಅನಿರ್ವಚನೀಯತೆಯನ್ನು ಮುಟ್ಟಿದೆ. "ಮೌನದಲ್ಲಿಯು ಕೂಡ ಮಾತಿನ ಧ್ವನಿ" ಯುಳ್ಳ ಅವರ ಚೈತನ್ಯದ ಸ್ವರೂಪವು ಭಾರತದ ವರ್ತಮಾನ ಇತಿಹಾಸದ ರಚನಾತ್ಮಕ ಅವಶ್ಯಕತೆಗೆ ಬಹಳ ಮಟ್ಟಿಗೆ ಬೇಕಾದುದಾಗಿದೆ. ಅವರದು ನಿಜವಾದ ಆರ್ಯ ಬ್ರಾಹ್ಮತೇಜಸ್ಸು. ಅವರು ತ್ಯಾಗಿಗಳಿಗೆ ಭೋಗಿಗಳಾಗಿಯೂ ಭೋಗಿಗಳಿಗೆ ತ್ಯಾಗಿಗಳಾಗಿಯೂ ಸಂಸ್ಕೃತರಿಗೆ ಕನ್ನಡಿಗರಾಗಿಯೂ ಕನ್ನಡಿಗರಿಗೆ ಸಂಸ್ಕೃತರಾಗಿಯೂ ಋಷಿಗಳಿಗೆ ರಾಜರಾಗಿಯೂ ರಾಜರಿಗೆ ಋಷಿಗಳಾಗಿಯೂ ಪಂಡಿತರಿಗೆ ಪಾಮರರಾಗಿಯೂ ಪಾಮರರಿಗೆ ಪಂಡಿತರಾಗಿಯೂ ಕಾಲ್ಪನಿಕರಿಗೆ ವಾಸ್ತವಿಕರಾಗಿಯೂ ವಾಸ್ತವಿಕರಿಗೆ ಕಾಲ್ಪನಿಕರಾಗಿಯೂ ಆಧುನಿಕರಿಗೆ ಸನಾತನಿಗಳಾಗಿಯೂ ಸನಾತನಿಗಳಿಗೆ ಆಧುನಿಕರಾಗಿಯೂ ಕಾಣಿಸಿಕೊಂಡ ಮಾಯಾವಿತನದ ಲೀಲೆಗಳು ಯುಗಪುರುಷ ಸಹಜ, ಸಂಕ್ರಾಂತಿ ಪುರುಷ ಸದೃಶ. ಯಾವ ಪ್ರಸಿದ್ಧ ಆಂಗ್ಲ ಕವಿಯ ಜೀವನವೂ ಇಂಥ ಚಮತ್ಕಾರದಿಂದ ಆಕರ್ಷಕವಾಗಿಲ್ಲ. "ಮಿಸ್ಟಿಕ್ ಕವಿತ್ವ"—"ರಸ್ಟಿಕ್ ಕವಿತ್ವ" ಗಳ ಪಥ್ಯವಾದ ಧೋರಣಗಳನ್ನು ಏಕತ್ರ ಕಾಣಬೇಕಾದರೆ ಈ ಅಪರಾಪ್ರಕೃತಿ-ಪರಾಪ್ರಕೃತಿಗಳ ಸಂಮಿಳನದ ಫಲವೆನ್ನಿಸಿದ ಶಿಶುವಿನ ಕಡೆಗೆ ಹೋಗಬೇಕು. ಇದೊಂದು ಲೀಲಾ ಮಾನುಷ ವಿಗ್ರಹ. ಮಾನವ ಧರ್ಮಕ್ಕಿಟ್ಟ ಮಹಾ ಕಿರೀಟ: ಬಲಿಷ್ಠವಾದ ಹೃದಯ-ಬುದ್ಧಿಗಳ ವಿಚಿತ್ರ ಪರಿಪಾಕ!

ಪುಟ್ಟಪ್ಪನವರ ದೊಡ್ಡಪ್ಪತನವೆಂದು ಒಂದು ಉಪನಿಷದ್ರಹಸ್ಯ. ಮಲೆನಾಡ ಮಹಾ ವೃಕ್ಷಗಳ ಮತ್ತು ಅವುಗಳನ್ನಾಶ್ರಯಿಸಿದ ಲತಾ ಪ್ರತಾನಗಳ ಅಚಲ, ಶಾಶ್ವತ ಅವಿನಾಭಾವಕ್ಕೆ ಅವರೊಂದು ಪ್ರತೀಕ. ಅಲ್ಲಮನು ಮಾಯಾಕೋಲಾಹಲನಾದಂತೆ, ಅವನ ನಾಡಿನ ಕಣ್ಮಣಿಯಾದ ಕುವೆಂಪುಗಳು ಕೋಲಾಹಲ ಮಾಯೆಯಾದರು. ಅಲ್ಲಮನ ಆಧುನಿಕ ಅವಧೂತತೆಯ ಬಿಂಕ-ಬಿಡಗುಗಳು ಕುವೆಂಪುಗಳಲ್ಲಿ ಪಡಿಮೂಡಿವೆ. ಕನ್ನಡದ ಶಂಕರಾಚಾರ್ಯರೆಂದರೆ ಅಲ್ಲಮನು. ಮೈಸೂರಿನ ಆಧುನಿಕ ಅಲ್ಲಮನೆಂದರೆ ಕುವೆಂಪುಗಳು!

॥ವೃತ್ತ॥ ಪೆಂಪಿನ ಗುಡಿ ಮೈದಳೆದ ಮಲ್ಲಿಗೆ ಪರ್ಬಿದ ಮಾಮರಕ್ಕೆ ಪಾ
ರಂಪರಿಕ ಪ್ರಬೋಧತರು ಬಿಟ್ಟ ನವೀನ ಫಲಕ್ಕೆ ಸರ್ವದೋ॥
ತ್ಕಂಪನಶೀಲ ಯಂತ್ರಗತಸಾರ ಕಠೋರ ಗುಣೋದಿತ ಕ್ರಿಯಾ।
ಚಂಪುಗೆ ಮೂರ್ತಿ ಮಾನುಷದ ವಿಗ್ರಹಮಾಡೆ ಕುವೆಂಪು ಪುಟ್ಟಿದರ್ ।

ಕನ್ನಡ ಡಿಂಡಿಮ

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

ಸತ್ತಂತಿಹರನು ಬಡಿದೆಚ್ಚರಿಸು;
ಕಚ್ಚಾಡುವರನು ಕೂಡಿಸಿ ಒಲಿಸು.
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು;
ಒಟ್ಟಿಗೆ ಬಾಳುವ ತೆರದಲಿ ಹರಸು!

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಳ ಮತಿ ಮತಿಯಲ್ಲಿ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ!

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ!

—ಕುವೆಂಪು

ಶ್ರೀ ಪುಟ್ಟಪ್ಪನವರ ವಿಭೂತಿ ಯೋಗ

ಶ್ರೀ ಮಿರ್ಜಿ ಅಣ್ಣಾರಾಯ.

—o—

ವಿಭೂತಿಯೆಂದರೆ ವಿಶೇಷ ವ್ಯಕ್ತಿತ್ವ. ಇಲ್ಲಿ ವ್ಯಕ್ತಿತ್ವ ಎಂಬುದು ಅವ್ಯಕ್ತದ ವ್ಯಕ್ತರೂಪ ಎಂಬ ಅರ್ಥ. ಆ ಅವ್ಯಕ್ತದ ಪ್ರಕಟಿತ ರೂಪವೇ ಈ ಸೃಷ್ಟಿ. ಸೃಷ್ಟಿ ಯಾವ ಶಕ್ತಿಯ ಅಭಿವ್ಯಕ್ತಿಯಾಗಿದೆಯೋ ಆ ಶಕ್ತಿಯೊಡನೆ ಪುನಃ ಸಂಬಂಧ ಬೆಳೆಯಿಸುವುದೇ ವಿಭೂತಿಯೋಗ. ವ್ಯಕ್ತಿಯ ವಿಭೂತಿಮತ್ವ ಎಷ್ಟು ಪ್ರಬಲತರ ವಾದುದೋ ಅಷ್ಟು ವಿಶ್ವ ವಿಭೂತಿಯ ಸಾಮೀಪ್ಯ, ಸಾನಿಧ್ಯಗಳನ್ನು ಸೇರಿ ನಿಲ್ಲುವುದು ಸ್ವಾಭಾವಿಕ. ಈ ಸೇರಿ ನಿಲ್ಲುವುದಕ್ಕೆ ಸಾಧನೆಯೆಂಬುವುದಿದೆ. ಜನ್ಮತಃ ಯಾರೂ ಪರಮಾತ್ಮನ ಸಾನಿಧ್ಯವನ್ನು ಹೊಂದಿರುವುದಿಲ್ಲ. ಅವರ ಅಂಥ ಪ್ರಯತ್ನವೇ ಜೀವನ. ಅಂಥ ಜೀವನವೇ ಒಂದು ಸಾಧನಮಾರ್ಗ. ಆ ಸಾಧಕನಿಗೆ ವಿಭೂತಿಯೋಗದ ವಿನಹ ಇನ್ನೊಂದು ಧ್ಯೇಯ ಇರಲಾರದು. ಅಂಥ ಮಹಾ ಧ್ಯೇಯವನ್ನು ಹೊಂದಿದ ನಮ್ಮ ಕವಿ 'ಕುವೆಂಪು' ಅವರು ವಿಭೂತಿಯೋಗದಲ್ಲಿ ನೆಲೆಗೊಂಡುದನ್ನು ಇದೀಗ ಲೋಕವರಿತಿದೆ. ಆ ಅರಿವು ಕನ್ನಡ ಜನಪದ ಕಾವ್ಯರ್ಷಿ ಯಾವ ಶ್ರೀ 'ಅಂಬಿಕಾತನಯದತ್ತ' ರಿಂದ

ಯುಗದ ಕವಿಗೆ
ಜಗದ ಕವಿಗೆ

ಶ್ರೀ ರಾಮಾಯಣ ದರ್ಶನದಿಂದಲೆ ಕೈ ಮುಗಿದ ಕವಿಗೆ–ಮಣಿಯದವರು ಯಾರು ? ಎಂಬ ಕಾವ್ಯ ವಾಣಿಯಾಗಿ ರೂಪುವಡೆದಿದೆ. ಭಾರತೀಯ ಜ್ಞಾನ ಪೀಠ ಆ ಧ್ವನಿಯನ್ನು ಸ್ವೀಕರಿಸಿ ಮನ್ನಣೆಯನ್ನಿತ್ತಿದೆ. ಇಂಥ ಸಂದರ್ಭದಲ್ಲಿ ಈ ರಾಷ್ಟ್ರಕವಿಯ–ಅಲ್ಲ–ಜಗದ ಕವಿಯ–ವಿಭೂತಿಯೋಗವನ್ನು ಗುರುತಿಸುವ ಗೆರೆಯೊಂದನ್ನೆಳೆಯುವ ಪ್ರಯತ್ನವಿದು.

'ಶ್ರೀರಾಮಾಯಣ ದರ್ಶನ' ಮಹಾ ಕಾವ್ಯದಿಂದ ಕವಿಯ ಮಹಾ ವಿಭೂತಿಯೋಗವು ಲೋಕದ ಮನಸನ್ನು ಸೆಳೆದಿದ್ದರೂ ಅದರ ಮೂಲ ಸಾಧನೆಯು ಬಹು ದಿನಗಳ ಮುಂಚಿನಿಂದಲೇ ಪ್ರಾರಂಭವಾದುದನ್ನು ನಾವು ಕಾಣುತ್ತೇವೆ. 'ಅವರವರ ಮತವಿರಲಿ, ನನ್ನ ಪಥ ನನಗಿರಲಿ' (ಪಾಂ. ಜ. ೫೧) ಎಂದು ನಿಶ್ಚಿತ ಧೀರ ಹೆಜ್ಜೆಯನ್ನಿಟ್ಟ ಕವಿಯಾತ. ಆಗಿನಿಂದಲೂ 'ಇಂದೋ ನಾಳೆಯೋ ದಾಸನೀಶನಾಗಲೇಬೇಕು' (ಪಾಂ. ಜ. ೪೩) ಎನ್ನುವ ನಿಷ್ಠೆಯು

ಅವರಲ್ಲಿ ದೃಢಗೊಂಡಿವೆ. ಇಂಥ ದೃಢ ನಿರ್ಧಾರದ ಮಾರ್ಗದಲ್ಲಿ ಸಾ
ಸಾಧಕನಿಗೆ 'ಎತ್ತಣ ನೋವು? ಎಲ್ಲಿಯ ಸಾವು? ಜೇನರ ಹುಚ್ಚರೊ ಸಾ
ಬಾಳೊಳು ಸಾವು, ಜಿಲ್ಲದ ಬೇವು; ತಲೆ ನರ್ಮ್ಮಾತ್ಮದ ಮೇವು! ಎನಿಸುವ
ಸ್ವಾಭಾವಿಕ ತಾನೆ ? ಸಾವನ್ನೂ ಕೂಡ ಲೆಕ್ಕಿಸದ ಸಾಧಕನ ನಿಷ್ಠೆಗೆ ಇನ್ನಾ
ಕೊರತೆ ಇದ್ದೀತು ? ಆದರಿಂದ ಕವಿಯ ಆತ್ಮನಲ್ಲಿಯ ಅಲ್ಪತೆಯ ಭ್ರಾಂತಿ
ಎಂದೋ ಅಳಿದು ಹೋಗಿದೆ. ಅಲ್ಲಿ ಭೂಮ ನೆಲೆಸಿದೆ. ಅದರ ಮುಂಗುರುತಾಗಿಯೆ

> ಅಲ್ಪ ನಾನು ಎಂದು ಕುಗ್ಗಿ ಮುದುಗಬೇಡವೋ :
> ಓ, ಅಲ್ಪವೆ.
> ಅನಂತದಿಂದ ಗುಣಿಸಿಕೊ; ನೀನ್ ಅನಂತವಾಗುವೆ
> (ಮಂತ್ರಾಕ್ಷತೆ ೩೦)

ಎಂಬ ಆತ್ಮ ವಿಶ್ವಾಸದ ನುಡಿಯು ಹೊರ ಹೊಮ್ಮುದುಂಟು. ಸ
ಮಾತ್ಮನ ಅನಂತ ಲೀಲೆಯಲ್ಲಿ ಅನಂತನಾಗಿ ಹೋಗುವ ನಿಸ್ಸೀಮತೆಯ
ತಲ್ಲೀನತೆಯಿಂದ ಮೈಗೂಡಿ ಬಂದಿವೆ, ಈ ವಿಭೂತಿ ಪುರುಷನಲ್ಲಿ. ಅಂತೇ
'ವಿಭೂತಿ ಪೂಜೆ' ಯಲ್ಲಿ ಎಂದೋ ಇವರು 'ಋತವಿಲ್ಲದ ಮಿಥ್ಯಾದೃಷ್ಟಿಯಿಂ
ಅನೃತ ಸೃಷ್ಟಿ ಮಾತ್ರ ಸಾಧ್ಯ' (ಪು. ೫೬) ಎಂದು ಸಾರಿದರು. ಋತ ಮಾರ್ಗದ
ನಾಗಿ ಕಾವ್ಯರ್ಷಿಗಳೆನಿಸಿ, ತಪೋನಿರತರಾಗಿ ಕೃತಿ ರಚನೆಗೆ ತೊಡಗಿದರು.

ಇಂದು ಕುವೆಂಪು ಅವರ ತಪಸ್ಸಿನ ಮಾತು ಕನ್ನಡ ನಾಡಿನ ಮನೆಮನೆಗ
ತಲುಪಿದೆ. ಅವನ್ನು ಕೇಳಿ ಲೋಕ ಆಶ್ಚರ್ಯ ಪಡುವಂತೆಯೂ ಆಗಿದೆ. ಇವ
ಜೀವನವನ್ನು ಸಾಧನೆಯನ್ನು ನೆನೆದಾಗ ಹಿಂದಿನ ಕಾಲದ ಶ್ರಮಣರಲ್ಲಿ
ಸ್ಥವಿರರ ನೆನಪಾಗುತ್ತದೆ. ಸನ್ಮಂತ ಭವ್ಯ ದೃಷ್ಟಿಯು ಕಲ್ಪನೆಯು ಬಗೆಗಣ
ನೆಮ್ಮಗೆ ಮೂಡಿ ನಿಲ್ಲುತ್ತದೆ. ಅದಕ್ಕೆ 'ಎಲ್ಲ ನನುಳಿವುವೆ ಆದರೆ ಮುಕ್ತಿ ಎಲ್ಲ
ನಪ್ಪುವುದರೊಳಗಿದೆ ಶಕ್ತಿ' (ಕೋ. ಸೋ. ೫೨) ಎಂಬ ಅವರ ನುಡಿಯೇ ಸಾ
ಯಾಗಿದೆ. ಮುಕ್ತಿಗೆ ಸ್ಥವಿರತೆಯು ಸಾಧನರಂಗವೆನಿಸಿದರೆ ಶಕ್ತಿಗೆ ಸಮರ
ಜೀವನವೇ ಮೂಲ ಪ್ರೇರಣೆಯಾಗಿದೆ.

ಈಶ ಶಕ್ತಿಯ ಆವಿರ್ಭಾವವೇ ಪ್ರಕೃತಿಯ ವಿವಿಧ ರೂಪ. ಇವನ್ನನ
ಭವಿಸಿ ಆರಾಧಿಸುವ ಈ ಕವಿಜೀವಕ್ಕೆ ಪ್ರಕೃತಿಯೋಗವೂ ಒಂದು ವಿಭೂ
ಯೋಗವೇ ಸರಿ. 'ಪ್ರಕೃತಿ ಸೌಂದರ್ಯವುಂ ಭಾವನೋಜ್ವಲವಾಗಿ ನೋ
ದಿಹ ಬಾಳೊಂದು ಬಾಳಲ್ಲ;' (ಪ. ಕಾ. ೨೩) ಎಂದು ನಂಬಿ ಜೀವನಯಾತ್ರೆ
ಹೊರಟ ಕವಿ ವಿಹಂಗ ಮಿವರು. ಪ್ರಕೃತಿಯ ಮಡಿಲಲ್ಲಿ, ಮಲೆಗಳ ಉಡಿಯ
ಹುಟ್ಟಿ ಬೆಳೆದ ಭಾಗ್ಯವನ್ನು ಸ್ವಾಭಾವಿಕವಾಗಿ ಪುಟ್ಟಪ್ಪನವರು ಪಡೆದು ಬಂದರು

ಸುಪ್ತಲೀನ ಆವರಣವೇ ಅವರ, ಅದಾಷ್ಟ್ರ ವಸ್ತುವಾಯಿತು: ಕಾವ್ಯ ವಸ್ತುವೂ ಆಯಿತು. 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಬರಲಿ 'ಮಲೆಗಳಲ್ಲಿ ಮದುಮಗಳು' ಇರಲಿ ಯಾವುದರಲ್ಲಿಯೂ ಅದೇ ಉದ್ದೇಶ ಸಾಧನೆಯು ಅವರಿಗಿದೆ. 'ಪರಮ ಪುರುಷಾರ್ಥ ಸಾಧನೆಯೇ ಸೃಷ್ಟಿಯ ಸರ್ವೋತ್ತಮೋದ್ದೇಶ' (ವಿ. ಪೂ. ೬೦) ಎಂಬುದನ್ನು ಅವರು ಅರಿತವರು. ವಿಶ್ವದ ಹೃದಯವನ್ನೇ ಬಲ್ಲವರು. ಅಂತಲೇ ಅವರ ವಾಣಿಯಲ್ಲಿ,

> 'ಆನಂದಮಯ ಈ ಜಗ ಹೃದಯ ಏತಕೆ ಭಯ ? ಮಾಣೊ!
> ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ!' (ಪ. ಕಾ. ೯)

ಎಂಬ ಧ್ವನಿಯು ಮೂಡಿದೆ. ಯಾವ ಒಳಿತು–ಕೆಡಕುಗಳಿಗೂ ಪರಮಾತ್ಮನ ಕೃಪೆಯೇ ಕಾರಣವೆಂದು ನಂಬಿದ ಸಾಧಕನ ನೆಲೆಯೇ ಬೇರೆ. ಅದು ಸರ್ವಾರ್ಪಣ ಭಾವ. ಭಕ್ತಿಯೋಗದಲ್ಲಿ ಒಂದು ಮಹತ್ವದ ಹೆಜ್ಜೆ. ಅಂಥ ಹೆಜ್ಜೆಯ ಹಲವು ಗುರುತುಗಳನ್ನು ಈ ಮಹಾ ಕವಿಯ ಕಾವ್ಯದಲ್ಲಿ ಎಲ್ಲೆಡೆಗೂ ಕಾಣುತ್ತೇವೆ.

ಪ್ರಕೃತಿಯ ಉಪಾಸನೆಯಿಂದ ಭಕ್ತಿಯೋಗದ ಮಾರ್ಗದಲ್ಲಿ ಪರಿಣತಿಯನ್ನು ಹೊಂದಿದ ಈ ಕವಿಯ ಅಂತರಾತ್ಮನು ಆತ್ಮಾನುಸಂಧಾನದಲ್ಲಿ ಮಗ್ನನಾಗಿರುವುದು ಸಹಜ. 'ಪ್ರವರ್ಧಮಾನ ಜೀವಕ್ಕೆ ಆತ್ಮ ಪ್ರತ್ಯಯ ಅತ್ಯಂತಾವಶ್ಯಕ' (ಷ. ನ. ೧೯) ಎಂದವರು ಭಾವಿಸಿದ್ದುಂಟು. ಅಂತಲೇ ಅವರ ಸತತ ಸಾಧನೆಯು ಊರ್ಧ್ವಮುಖವಾಗಿ ಸಾಗಿದ್ದುಂಟು. ಆಗ ಅದು ವಿಶ್ವವ್ಯಾಪಿಯಾದ ಋತ ಶಕ್ತಿಯನ್ನು ಕಂಡು ಅನುಭವಿಸಿದೆ. 'ಪೂರ್ಣ ಸಮರ್ಪಣೆಯೇ ಶಾಂತಿಯ ದಿವ್ಯಧಾಮ' (ದ್ರಾ. ಶ್ರೀ ೩೯) ಎಂದು ಅದಕ್ಕೆ ಪೂರ್ಣ ಶರಣಾಗತಿಯನ್ನು ಹೊಂದಿದೆ. ಇಂಥ ಶರಣ್ಯ ಭಾವವೇ ಸಾಧ್ಯ ಸಾಧಕರನ್ನು ಒಂದಾಗಿಸುವ ನೆಲೆಯಾಗಿದೆ. ಇದು ಸಾಧಕನ ಪರಮೋಚ್ಚ ಸ್ಥಿತಿಯಾಗಿದೆ.

ಈ ಉಚ್ಚ ಅವಸ್ಥೆಯಲ್ಲಿ ನಿಂತಾಗ ಈ ಮಹಾ ವಿಭೂತಿಯಿಂದ 'ಶ್ರೀ ರಾಮಾಯಣ ದರ್ಶನಂ'ನಂಥ ದಾರ್ಶನಿಕ ಕಾವ್ಯದ ಉದಯವಾಯಿತು. ಈ ಆತ್ಮನ ವಿಭೂತಿಯೋಗಕ್ಕೆ ಪ್ರತೀಕವೆನಿಸಿತು. ಅಲ್ಲಿ ಬುದ್ಧಿ ಭಾವಗಳ ವಿದ್ಯುದಾಲಿಂಗನವೇ ಪ್ರತಿಭೆಯಾಗಿ ಕೃತಿಯನ್ನು ಮುನ್ನಡಿಸಿತು. ಶ್ರೀ ಕುವೆಂಪು ಸೃಜಿಸಿರುವ ಈ ಮಹಾ ಕಾವ್ಯವೆಲ್ಲವೂ ಒಂದು ಪ್ರತಿಮೆ.

> ………ಪ್ರಾಣಮಯಮುಂ ಮನೋಮಯಮುಮಂ ಮೀರ್ದ ವಿಜ್ಞಾನಮಂ
> ಕಂಡು ಕಾವ್ಯಸತ್ಯಜ್ಞಾನದಿಂದಿರ್ಪ ದಸಮಳಂ।
> ಕವಿ ದರ್ಶನಕೊಂದು ನಿದರ್ಶಿಸುವೆನಾಂ ಬೃಹತ್ ಪ್ರತಿಮೆಯುಮಂ,

ತಾನತೀಂದ್ರಿಯಮಾದೊಡಂ ಕಾಣ್ ಕವಿ ಪ್ರಾಣ,
ಪ್ರಾಣ ಬುದ್ಧಿ ಗ್ರಾಹ್ಯಮಪ್ಪರನದಂ! (ಶ್ರೀ ರಾ. ದ. ಪ್ರ. ೮

ಹೀಗೆ ಕವಿ ವಿಜ್ಞಾನ ಭೂಮಿಕೆಯಲ್ಲಿ ಕಂಡ ಕಾಣ್ಕೆಗೆ ಈ ಕಾವ್ಯವೊಂ ಬೃಹತ್ ಪ್ರತಿಮೆ ಆದರೆ ಈ ಪ್ರತಿಮೆಯೂ ಸಹ ಆ ಕಾಣ್ಕೆಯ ಸಂಪೂರ್ಣ ಭೂಮತ್ವವನ್ನು ಪ್ರತಿಮಿಸುತ್ತಿದೆಯೆ? ಇಲ್ಲ. ಕವಿಯೇ ಹೇಳುವಂತೆ 'ಪೇ ಸತ್ಯಲ್ಪಮಂ' ಎಂಬುದೇ ದಿಟ. ಅತೀಂದ್ರಿಯ ಸತ್ಯಗಳನ್ನು ಇಂದ್ರಿಯ ವೇ ವಾಗುವಂತೆ ಹೇಳುವುದಿಲ್ಲ ಕೇವಲ ಅತ್ಯಲ್ಪವೇ ಸರಿ. ಕವಿಯ ವಿಭೂತಿಯೋ ವನ್ನು—ಭೂಮಾನುಭೂತಿಯನ್ನು—ಪ್ರತಿಮಿಸುವ ಈ ಮಹಾ ಕಾವ್ಯವು ಆಧ ತ್ಮಿಕ ಮಹಾ ಗಂಗೋತ್ರಿಯೆನಿಸಿದರೆ ಆಶ್ಚರ್ಯವೆನಿಸದು. ಈ ದೃಷ್ಟಿಯಿಂ ಶ್ರೀ ಕುವೆಂಪು ಸಾಹಿತ್ಯ ಸೃಷ್ಟಿಯನ್ನು ಅವಲೋಕಿಸಿದಲ್ಲಿ ಅದರ ಮಹ ಮಹಿಮೆಗಳನ್ನು ವಾಚಕರು ಅರಿಯಬಹುದಾಗಿದೆ ಆಗ ರಸ ಶರಧಿಯನ ಸವಿಯಬಲ್ಲರವರು.

ಕನ್ನಡ

'ಕನ್ನಡ' ಎನೆ ಕುಣಿದಾಡುವುದೆನ್ನೆದೆ,
'ಕನ್ನಡ' ಎನೆ ಕಿವಿ ನಿಮಿರುವುದು!
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈ ಮರೆಯುವುದು;
ಕನ್ನಡ! ಕನ್ನಡ! ಹಾ, ಸವಿಗನ್ನಡ!
ಕನ್ನಡದಲಿ ಹರಿ ಬರೆಯುವನು!
ಕನ್ನಡದಲಿ ಹರ ತಿರಿಯುವನು!
ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿ ವರಗಳ ಮಳೆ ಕರೆಯುವನು!
ಹರ ಮುನಿಯದೆ ತಾ ಪೊರೆಯುವನು!
ಬಾಳುವುದೇತಕೆ? ನುಡಿ, ಎಲೆ ಜೀವ!
ಸಿರಿಗನ್ನಡದಲಿ ಕವಿತೆಯ ಹಾಡೆ!
ಸಿರಿಗನ್ನಡದೇಳಿಗೆಯನು ನೋಡೆ!
ಕನ್ನಡ ತಾಯಿಯ ಸೇವೆಯ ಮಾಡೆ!

—ಕುವೆಂಪು

ಕುವೆಂಪುರವರ ಸ್ವಾಮಿ ವಿವೇಕಾನಂದ

ಶ್ರೀಮತಿ ಜಿ. ಸಾವಿತ್ರಿ, ಎಂ. ಎ., ಮೈಸೂರು.

ಮಲೆನಾಡು ಎಂದಾಗ ಥಟ್ಟನೆ ನೆನಪಿಗೆ ಬರುವುದು ಎರಡು, ಒಂದು ಭೋರ್ಗರೆದು ಹರಿವ ಪ್ರಚ್ಛನ್ನ ಶಕ್ತಿಯ ರುದ್ರ ರಮಣೀಯ ಜೋಗದ ಜಲಪಾತ. ಇನ್ನೊಂದು ಅಖಂಡ ಚಿಚ್ಛಕ್ತಿಯ ಜ್ಞಾನಸಾಗರ ಕುವೆಂಪು. ಇವೆರಡೇ ಸಾಕು. ಅಲ್ಲಿನ ಮಣ್ಣು, ಜನ, ಸಾರ್ಥಕ.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂದ ಶ್ರೀಕೃಷ್ಣ. ಹಾಗೆಯೇ ಸಾಹಿತ್ಯವನ್ನು ಉದ್ಧರಿಸಲು ನಾನು ಪುನಃ ಪುನಃ ಉದ್ಭವಿಸುತ್ತೇನೆ, ಎಂದು ಯಾವ ದೇವರಾದರೂ ಹೇಳಿದ್ದಿದ್ದರೆ ಆ ದೇವರ ಅವತಾರವೆಂದು ಕುವೆಂಪುರವರು ಗಣಿಸಲ್ಪಡುತ್ತಿದ್ದರು. ಇದು ಅವರ ಕಾವ್ಯ ಶಕ್ತಿ. ಇದು ಅವರ ಸಾಹಿತ್ಯ ಸೃಷ್ಟಿ.

ಸದಾ ಭೋರ್ಗರೆದು ಹರಿವ ಜೋಗದ ಜಲಪಾತಕ್ಕಿರುವಷ್ಟೇ ಕುವೆಂಪುರವರ ಕಾವ್ಯ ಚೈತನ್ಯಕ್ಕೆ ಕವಲುಗಳು. ಎರಡರ ಪರಿಣಾಮವೂ ಸಮಾನಾಂತರ, ಪೂರಕ. ಜನಮನ ಬೆಳಗುವ ಪ್ರಕಾಶ. ತೃಪ್ತಿಪಡಿಸುವ ರಮಣೀಯವಾದ ಹಸಿರು.

ರಾಮಾಯಣ ದರ್ಶನಂ, ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ಇತರೆ ಕಾವ್ಯ ಸಂಕಲನ, ವಿಮರ್ಶನಾ ಗ್ರಂಥಗಳು, ಕಥಾ ಸಂಕಲನ, ನಾಟಕ ಇವು ಈ ಜಲಪಾತದ ವಿಭಾಗಗಳು.

ಕುವೆಂಪುರವರು ರಾಮಾಯಣವನ್ನು ಸೃಷ್ಟಿಸಲಿಲ್ಲ. ರಾಮಾಯಣ ಕುವೆಂಪುರವರನ್ನು ಸೃಷ್ಟಿಸಿತು. ಇಪ್ಪತ್ತನೆ ಶತಮಾನದ ಈ ವಾಲ್ಮೀಕಿಯನ್ನು ಲೋಹಿಯಾ–ವಿನೋಬಾಜಿ ಸಂದರ್ಶಿಸಿ ಕವಿಶಕ್ತಿಗೆ ನಮಿಸಿರುವುದು ವಿಶೇಷವೇನಲ್ಲ.

ಅವರ ಈ ಕೃತಿಗೆ ದೊರೆತಿರುವ ಜ್ಞಾನಪೀಠದ ಪ್ರಶಸ್ತಿಯಿಂದಾಗಿ ಆ ಪೀಠ ತನ್ನ ಹೆಸರಿನ ಸಾರ್ಥಕತೆಯ ಕಟ್ಟಡಕ್ಕೊಂದು ಭವ್ಯ ಸುಂದರ ಅಮೃತ ಶಿಲೆಯ ಗಟ್ಟಿ ಹಾಸನ್ನು ಒದಗಿಸಿಕೊಂಡಿದೆ.

ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಕುವೆಂಪುರವರ ಅಂತರಂಗಕ್ಕೆ ಹಿಡಿದ ಭೂತಕನ್ನಡಿ, ಅಲ್ಲಿ ನಮಗೆ ಕಾಣುವುದು ಅಣುವನ್ನು ಒಡೆದಾಗ ಕಾಣುವ ಶಕ್ತಿ. ಅವರ ಅಂತರಂಗದಲ್ಲಿ ವ್ಯಕ್ತಿಗಳಿಗಿರುವ ಸ್ಥಾನವೇ ನಾಯಿ, ನೀರು, ಕಲ್ಲು, ಮರ, ಕುಡಿಕೆ, ಮಡಿಕೆ, ಗೋಡೆ, ಕಿಟಕಿ, ಎಂಜಲೆಲೆಗೂ

ಇವೆ. ಇದು ಅವರ ಸಂವೇದನಾ ಶೀಲತೆಯ ಮಟ್ಟ. ಅವರ ಕಾದಂಬರಿಯ ಒಂದೊಂದು ಸಾಲೂ ಹಿಡಿ ಹಿಡಿ ಪಾತ್ರಗಳು, ಸನ್ನಿವೇಶಗಳು ಒಂದೇ ಗಿಡದ ಹೂಗಳಂತೆ ಅರಳಿವೆ.

ಕುವೆಂಪುರವರ ಬಗೆಗೆ ಬರೆಯಬೇಕೆಂದಾಗ ಅವರ ಯಾವ ಮುಖ, ಕೃತಿಯ ಬಗೆಗೆ ಬರೆಯಬೇಕು ಎಂಬ ತೊಡಕು. ಏನನ್ನು ಬರೆಯ ಹೊರಟರೂ ಅದು ಬೃಹದ್ದಾಗುವ ಭಯ.

ಹೊಳೆಯ ನೀರೆಷ್ಟು ಸಿಹಿ ಅನ್ನಲು ಹೊಳೆಯ ನೀರನ್ನೆಲ್ಲ ಕುಡಿಯಬೇಕಾದುದಿಲ್ಲ. ಅಂತೆಯೇ ಪ್ರಸ್ತುತ ಬರಹದಲ್ಲಿ ಅವರ "ಸ್ವಾಮಿ ವಿವೇಕಾನಂದ" ಗ್ರಂಥದ ಮೂಲಕ ಕವಿಯ ಭಾವ-ಶೈಲಿಗಳ ಪರಿಚಯ ಪಡೆಯಲು ಯತ್ನಿಸುವಾ. ಕುವೆಂಪುರವರ "ಸ್ವಾಮಿ ವಿವೇಕಾನಂದ" ವಿವೇಕಾನಂದರ ಉಜ್ವಲ ಜೀವನದ ಘಟನಾವಳಿಗಳ ಮಹತ್ತಿನ ಮೇಲೆ ಬೆಳಕು ಚೆಲ್ಲುವ ಜೀವನ ಚಿತ್ರಣ.

ಸಾಮಾನ್ಯವಾಗಿ, ಜೀವನ ಚರಿತ್ರೆಯೆಂದರೆ ಒಬ್ಬ ವ್ಯಕ್ತಿಯ ಜೀವನ ವೃತ್ತಾಂತವನ್ನು ಆದ್ಯಂತವಾಗಿ ವಿವರಿಸುವುದು. ಹೀಗೆ ಜೀವನ ಚರಿತ್ರಕಾರನು ಒಬ್ಬ ಗಣ್ಯ ವ್ಯಕ್ತಿಯ ಜೀವನ ಚಿತ್ರಣವನ್ನು ಕೊಡುವಾಗ, ತನ್ನ ಕೃತಿ ನಾಯಕನ ಕಥೆಯನ್ನು ಸಾಕಷ್ಟು ಸಮರ್ಪಕವಾಗಿ, ಪ್ರಾಮಾಣಿಕತೆಯಿಂದ ಮುಖ್ಯ ಘಟನೆಗಳೊಂದಿಗೆ, ನಿಷ್ಪಕ್ಷಿಕನಾಗಿ ವಿವರಿಸಿರಬೇಕು. ಈ ರೀತಿಯ ವಿವರಣೆಯಲ್ಲಿ ಜೀವನ ಚರಿತ್ರಕಾರನ ಪ್ರತಿಭೆಯು ತನ್ನ ನಾಯಕನಲ್ಲಿನ ಆದರ್ಶದ ದರ್ಶನವನ್ನು ಪಡೆದಿರುವುದರ ಜೊತೆಗೆ ಅದನ್ನು ವ್ಯಕ್ತಪಡಿಸುವುದರಲ್ಲಿ ಕಲಾವಂತಿಕೆಯನ್ನೂ ಮೆರೆಸಿರಬೇಕು. ಶ್ರೀ ಕುವೆಂಪುರವರು ಈ ಎಲ್ಲ ಗುಣಗಳನ್ನು ಒಳಗೊಂಡಿರುವ ಉತ್ತಮ ಜೀವನ ಚರಿತ್ರಕಾರರು. ಅವರು ತಮ್ಮ ಕೃತಿ "ಸ್ವಾಮಿ ವಿವೇಕಾನಂದ"ದಲ್ಲಿ ಸ್ವಾಮಿ ವಿವೇಕಾನಂದರನ್ನು ಕಂಡಿರುವ ಶಿವದ ದೃಷ್ಟಿ ಅಭೂತಪೂರ್ವವಾದದ್ದು.

ಸಾಮಾನ್ಯವಾಗಿ ಸ್ಪರ್ಶಾತೀತ ವಸ್ತುವಿನ ಬಗ್ಗೆಯೇ ಆಧ್ಯಾತ್ಮದ ಪ್ರಪಂಚ ವಿಸ್ತಾರವಾಗುತ್ತಾ ಹೋಗುವುದರಿಂದ ಸಾಮಾನ್ಯ ಮನುಷ್ಯ ಅದರಲ್ಲಿ ಕಾಲಿಡಲು ಅಧೀರನಾಗುತ್ತಾನೆ, ಇಲ್ಲವೇ ಅದು ನೀರಸವೆಂದು ತೆಗಳುತ್ತಾನೆ. ಒಂದು ರೀತಿಯಲ್ಲಿ ನೋಡಿದರೆ ಅದು ತಪ್ಪು ಎನ್ನಿಸುವುದಿಲ್ಲ. ಕಾರಣ ಸರಳ. ನಮ್ಮ ಮತಾಚಾರ್ಯರಾಗಲೀ, ಅಥವಾ ವೇದಾಂತದ ಬಗ್ಗೆ ತಲೆ ಕೆಡಿಸಿಕೊಂಡ ಯಾರೇ ಆಗಲಿ ತಾವು 'ಅನನ್ಯ'ವೆಂದು ಬಗೆದದ್ದನ್ನು 'ಅನ್ಯ'ವೆಂದು ತಿಳಿದುಕೊಂಡ ಅನ್ಯರ ಮೇಲೆ ಹೇರಹೋಗಿ 'ವೇದಾಂತ' ಎನ್ನುವ ವಿಶಾಲಾರ್ಥದ ಶಬ್ದವನ್ನು ಕೇವಲ ಒಂದು ಸೈಕತಧಾರೆಯಾಗಿ ಮಾಡಿ ಅದರ ಶಕ್ತಿ ಕ್ಷೀಣಿಸಲು ಸರ್ವ ಸಾಹಸ ಮಾಡಿದ್ದಾರೆ. ಆ ಸಾಹಸದ ಫಲವೇ ಇಂದಿನ ಜಾತಿ, ಮತ, ದೇವರುಗಳು,

ಸ್ವಾಮಿ **ವಿವೇ**ಕಾನಂದರ ಹೆಸರು ಸಾಮಾನ್ಯ ಓದುಗನ ಉಸಿರಲ್ಲಿ ಸೇರಿದಾಕ್ಷಣ, ನಮಗೆ ಆತನ ನೆನಪಿನೊಡನೆ ಮತ್ತೆ 'ವೇದಾಂತ ಆಧ್ಯಾತ್ಮ' ಎಂಬ ಶಬ್ದಗಳು ತಮ್ಮಷ್ಟಕ್ಕೆ ತಾವೇ ಆಯಾದಿತವಾಗಿ ಬಂದು ಕಣ್ಣೆದುರು ನಿಲ್ಲುತ್ತವೆ. ಅಷ್ಟಕ್ಕೆ ಮಾತ್ರ ಅದು ಸಹಜವು ಹೌದು. ಆದರೆ ಆಧ್ಯಾತ್ಮದ ಅಪಾರ ಕಡಲನ್ನು ಕುಡಿದು ಅಗಸ್ತ್ಯನಾದುದಕ್ಕಾಗಿ ವಿವೇಕಾನಂದರು ಕೀರ್ತಿ ಬಾಜನರಾಗಲಿಲ್ಲ; ಅದಕ್ಕೂ ವಿಭಿನ್ನವಾದ ಅವರ ಗಂಭೀರ ವ್ಯಕ್ತಿತ್ವ ಹೇಗೆ ತನ್ನ ಅನಂತ ನಾಲಗೆಗಳನ್ನು ಬದುಕಿನ ಸರ್ವ ಸಮಸ್ಯೆಗಳ ಕಡೆಗೆ ಚಾಚಿತು ಎಂಬುದನ್ನು ಕಣ್ಣಿಟ್ಟು ನೋಡಿದಾಗ, ಅವರ ತುಷಾರ ಧವಳ ಕೀರ್ತಿಗೆ ಸೂರ್ಯಕಿರಣದ ಸಂಗಮವಾಗುತ್ತದೆ.

ಕುವೆಂಪುರವರು ಈ ಕೃತಿಯನ್ನು ಬರೆಯುವುದರಲ್ಲಿ ಒಂದು ರೀತಿಯ ಔಚಿತ್ಯವಿದೆ. ಅವರ ವಿದ್ಯಾಭ್ಯಾಸದ ಅವಧಿಯಲ್ಲಿ ಕೆಲವು ವರ್ಷಗಳನ್ನು ಅವರು ರಾಮಕೃಷ್ಣಾಶ್ರಮದಲ್ಲಿ ಕಳೆದಿರುವುದರಿಂದ, ಸಹಜವಾಗಿ ಅವರ ಒಲವು ಈ ರೀತಿಯ ಯುಗಾಚಾರ್ಯ ವ್ಯಕ್ತಿಯ ಜೀವನ ಬರೆಯಲು ಪ್ರೇರಕವಾಗಿ ಬಂದಿದೆ. ಆದರೆ ಈ ರೀತಿಯ ಅವರ ಪ್ರೇರಣೆ ಅವರನ್ನು, ಜೀವನ ಚರಿತ್ರೆಯ ತತ್ವಗಳ ಎಲ್ಲೆಯನ್ನು ಮೀರುವಂತೆ ಪ್ರೇರೇಪಿಸಿಲ್ಲ. ಇಲ್ಲಿ ಅವರು ತಮ್ಮ ಸ್ವಂತ ಇಚ್ಛೆಯೊಂದಿಗೆ, ಪಕ್ಷರಹಿತರಾಗಿ, ತಮ್ಮ ಮನೋಧರ್ಮಕ್ಕೆ ಹೊಂದಿಕೊಳ್ಳುವಂತಹ ನಾಯಕನನ್ನು ಆರಿಸಿಕೊಂಡು, ಅವರ ಪರಿಮಿತಿಯಲ್ಲಿಯೇ ವಿವೇಕಾನಂದರ ಉತ್ಕೃಷ್ಟ ಚಿತ್ರಣವನ್ನು ತರಲು ಪ್ರಯತ್ನಿಸಿದ್ದಾರೆ. ಈ ರೀತಿಯ ಅವರ ಪ್ರಯತ್ನ ಕೃತಿಯನ್ನು ಮೇಲ್ದರ್ಜೆಗೆ ಏರಿಸಿದೆ. ಅದು ಭಾವ ಪ್ರಕಾಶನದ ಅಂಗವಾಗಿ ರಚಿತವಾಗಿರುವುದರೊಂದಿಗೆ, ಹೆಚ್ಚು ಸುಂದರವೂ ಆಗಿ ಮೂಡಿಬಂದಿದೆ.

ಸಾಮಾನ್ಯವಾಗಿ ಜೀವನ ಚರಿತ್ರಕಾರನು ಎಲ್ಲ ರೀತಿಯ ಲೌಕಿಕ ಬಂಧನಗಳಿಂದ ಮುಕ್ತನಾಗಿ, ಸಂಪ್ರದಾಯದ ಎಲ್ಲೆ ಕಟ್ಟುಗಳನ್ನು ಮೀರಿ ತನ್ನ, ನಾಯಕನ ಒಳಿತು-ಕೆಡಕುಗಳನ್ನು ರಸಪೂರ್ಣವಾಗಿ ವಿವರಿಸುವುದರಿಂದ ಉತ್ತಮ ಕಥಾನಾಯಕನ ಚಿತ್ರ ಮೂಡಿ ಬರುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದಲ್ಲಿ ಕೃತಿಕಾರನ ಮನೋಧರ್ಮವೇ ಬೇರೆಯಾಗಿ, ಕೃತಿನಾಯಕನ ಮನೋಧರ್ಮವೇ ಬೇರೆಯಾಗಿ, ಕೃತಿ ತೀವ್ರ ಭಿನ್ನತೆಯ ಹಾದಿಯನ್ನು ಹಿಡಿಯುತ್ತದೆ. ಈ ರೀತಿಯ ಭಿನ್ನತೆಯಿಂದ ವಿಷಯದ ವರ್ತುಲದ ಎರಡು ಎದುರು ಬದುರು ಧ್ರುವಗಳ ನಡಿಗೆ ಕೃತಿಕಾರ ಮತ್ತು ಕೃತಿನಾಯಕನದಾಗುತ್ತದೆ. ಇಲ್ಲಿ ಕುವೆಂಪುರವರು ಇದಕ್ಕೆ ಅವಕಾಶಕೊಡದೆ, ತಮ್ಮ ಕೃತಿನಾಯಕನ ಎಲ್ಲೆಯ ಜಾಡನ್ನೇ ಜಾಡು ತಪ್ಪದೆ ಹಿಂಬಾಲಿಸಿದ್ದಾರೆ. ಆಧ್ಯಾತ್ಮವನ್ನು ವಿವೇಕಾನಂದರು ಹೇಗೆ ವಿಶಿಷ್ಟ ಅರ್ಥದಲ್ಲಿ ನೋಡುತ್ತಾರೆಯೋ, ಅದೇ ಅರ್ಥವನ್ನು ಕೃತಿಕಾರರು ಇನ್ನಷ್ಟು ಚೆನ್ನಾಗಿ ಅರ್ಥ

ಮಾಡಿಕೊಂಡಿರುವುದರಿಂದ ಈ ಕೃತಿಗೆ ಮಹತ್ವ, ಮೆರಗು ಎರಡೂ ಏಕಕಾಲದಲ್ಲಿ ಬಂದಿವೆ.

ವಿವೇಕಾನಂದರ ಬದುಕು ಅರಳಿ ಸುಗಂಧದ ತಂಗಾಳಿ ವಿಶ್ವವ್ಯಾಪಕವಾಗುವ ಮುನ್ನ ಭಾರತದ ಜನ ಜೀವನ, ಹೋರಾಟ, ಆಧ್ಯಾತ್ಮ ಎನ್ನಿಸಿಕೊಳ್ಳುವಂತಾದ್ದು ಇದ್ದ ಸ್ಥಿತಿ, ಇವುಗಳನ್ನು ಕಂಡು ಮಿಡಿದು ನಿಂತ ಹಲ ಕೆಲವು ವ್ಯಕ್ತಿಗಳ ಚಿತ್ರಣ ಮೊದಲನೆಯ ಅಧ್ಯಾಯದಲ್ಲಿ ಹಿನ್ನಲೆಯಾಗಿ ಬಂದಿದೆ. ಕೇವಲ ಹಿನ್ನೆಲೆಯಾಗಿ ಮಾತ್ರ ಬಂದಿದ್ದರೂ ಕೂಡ ರಾಜಾರಾಮ ಮೋಹನ್‌ರಾಯರ ಚಿತ್ರ ಮರೆಯದ ಚಿತ್ರವಾಗಿ ಪರಿಣಮಿಸಿದೆ. ಮುಂದೆ ವಿವೇಕಾನಂದರ ವ್ಯಕ್ತಿತ್ವ ಚಿತ್ರಣದ ದೇಗುಲಕ್ಕೆ ಇದೊಂದು ಪುಟ್ಟ ಹಾಗೂ ರಮಣೀಯ ದ್ವಾರಗೋಪುರ ಎನ್ನಬಹುದು. ಇಲ್ಲಿ ಕವಿಯ ಹೃದಯದೊಂದಿಗೆ, ಸಂಸ್ಕಾರ, ಸನ್ನಿವೇಶಗಳ ಪ್ರಭಾವಕ್ಕೆ ಸಿಕ್ಕು ಲೇಖನಿಯಿಂದ ಮೂಡಿಬಂದ ಪ್ರತಿಶಬ್ದವು ಕವಿ ಸಂವೇದನೆಗೆ ಒಳಗಾಗಿ ಬಂದ ಪಡಿನುಡಿ. ಅವರ ಸುಂದರ ಗಭೀರ ಶೈಲಿ ನರಗಳನ್ನೇ ಮೀಂಟಿ ನುಡಿಸುವ ಅಪೂರ್ವ ಶ್ರುತಿ.

"ಎಣ್ಣೆಗೆಂಪಾಗಿ ಅಗಲವಾಗಿದ್ದ ಆತನ ಮುಖದಲ್ಲಿ ಧೀರಲಲಾಟವೂ ದಿಟ್ಟ ಹುಬ್ಬುಗಳು ದಾರ್ಢ್ಯ ಸೂಚಕವಾದ ಮೊರಡು ಗಲ್ಲವು ಕರ್ರಗೆ, ತೀಕ್ಷ್ಣವಾಗಿ, ನಿರಂತರಾನ್ವೇಷಕವಾಗಿ, ಕಮಲ ದಳಗಳನ್ನು ನೆನಪಿಗೆ ತರುವ, ಅದ್ಭುತ, ತೇಜೋನ್ವಿತ, ವಿಶಾಲ ನೇತ್ರದ್ವಯವು ಪೂಜ್ಯ ಭಾವವನ್ನು ಉದ್ದೀಪನಗೊಳಿಸುತಿದ್ದುವು. ಆ ದೃಷ್ಟಿಯಲ್ಲಿ ದಾರ್ಢ್ಯದೊಡನೆ ಕರುಣೆಯೂ, ಮೋಹದೊಡನೆ ಭೀಷಣತೆಯೂ, ವ್ಯಂಗ್ಯದೊಡನೆ ಹಾಸ್ಯವೂ, ವಿಶಾಲ ಭಾವದೊಡನೆ ಗಭೀರ ಜ್ಞಾನವೂ, ಸಮ್ಮಿಳಿತವಾಗಿದ್ದುವು. ಅದು ಸರ್ವತೋಮುಖವು ಆಗಿ ಅಂತಃರಂಗದ ಐಶ್ವರ್ಯದ, ಸಮುಜ್ವಲ ಕಾಂತಿಗೆ ಸಾಕ್ಷಿಯಾಗಿತ್ತು. ದ್ವಂದ್ವಗಳಿಗೊಂದು ಸಮನ್ವಯ ರಂಗವಾಗಿತ್ತು. ಕಾಶಾಯ ವಸ್ತ್ರ ಧಾರಿಯೂ ದಂಡ ಧಾರಿಯೂ ಬ್ರಹ್ಮವನ ವಿಹಾರಿಯೂ ಆಗಿದ್ದ ಆತನ ಆತ್ಮಶ್ರೀ ಓಜಸ್ವಿಯಾದ, ಸುಂದರ, ಗಂಭೀರ ವದನದಿಂದ ಹೊರಸೂಸುತ್ತಿತ್ತು. ಕಾವಿಯ ರುಮಾಲನ್ನು ಸುತ್ತಿದ್ದ ಆತನು ಆರ್ಚಕರ ಚಕಿತ ದೃಷ್ಟಿಗೆ ಛದ್ಮವೇಷದ ರಾಜಪುರುಷನಂತೆ ತೋರಿದನು. (ಪುಟ ೩)

ಈ ಸಾಲುಗಳು ವಿವೇಕಾನಂದರ ಚಿತ್ರವನ್ನು ಚಿರಸ್ಮರಣೀಯವಾಗಿರಿಸಿವೆ.

ತಾವು ಹುಟ್ಟಿದ ಊರಿನ ಬಗ್ಗೆ, ಬಂದ ನಾಡಿನ ಬಗ್ಗೆ ಪಸೆಲ್ಲಾ ಪ್ರೇಮ, ಆದರಗಳು ಅನುಪಮವಾಗಿದ್ದರೂ, ವಿವೇಕಾನಂದರ ಆತ್ಮಾಭಿಮಾನ ಸೆಟೆದು ನಿಂತಾಗ ಅವರು ವಿಶ್ವವ್ಯಕ್ತಿಗಳೂ ಹೌದು. 'ನಾನು ಎಷ್ಟರಮಟ್ಟಿಗೆ ಭಾರತ ವರ್ಷಕ್ಕೆ ಸೇರಿದವನೋ ಅಷ್ಟರಮಟ್ಟಿಗೇ ಪ್ರಪಂಚಕ್ಕೂ ಸೇರಿದವನೂ ಆಗಿದ್ದೇನೆ ....ಯಾವ ದೇಶಕ್ಕೂ ನನ್ನ ಮೇಲೆ ಹಕ್ಕಿಲ್ಲ. ನಾನು ಯಾವುದಾದರೂ

ಒಂದು ಜನಾಂಗದ ಗುಲಾಮನೇನು ?' ಎನ್ನುವ ಅವರ ಸ್ವಂತ ಮಾತುಗಳಲ್ಲಿ ಮೇಲೆ ಹೇಳಿದ ಅಭಿಪ್ರಾಯ ಧ್ವನಿತವಾಗುತ್ತದೆ.

ವಿವೇಕಾನಂದರ ನಿರ್ದೇಶನದ ಮೇರೆಗೆ 'ಶ್ರೀರಾಮಕೃಷ್ಣ ಪ್ರಚಾರ' ಮತ್ತು 'ಶ್ರೀರಾಮ ಕೃಷ್ಣ ಮಠ' ಎಂಬ ಸಂಘಗಳೆರಡು ಸ್ಥಾಪಿತವಾಗಿ, ಒಂದು ಸನಾತನ ಆರ್ಯ ಧರ್ಮದಲ್ಲಿ ಅಡಗಿದ ಚಿಚ್ಛಕ್ತಿಯನ್ನು ಬಗೆಯು ಹೊರಟರೆ, ಇನ್ನೊಂದು ಮೌಢ್ಯದ ಬುಡಕ್ಕೆ ಕೊಡಲಿಹಾಕಿ, ದರಿದ್ರ ನಾರಾಯಣರ ಸೇವೆ ಮಾಡಲು ದ್ಯುಕ್ತವಾಗಿದೆ.

೧೯೦೨ ರಲ್ಲಿ ವಿವೇಕಾನಂದರು ಇಹದ ಬದುಕಿನಿಂದ ಇಲ್ಲವಾದರೂ, ಕೋಟಿ ಕೋಟಿ ಯುವಕರಮೇಲೆ, ಕೋಟಿ ಕೋಟಿ ಜ್ಞಾನ ಪಿಪಾಸುಗಳಮೇಲೆ ತಮ್ಮ ಅದ್ಭುತ ರಮಣೀಯ ಚಿರಮುದ್ರೆಯನ್ನೊತ್ತಿ ಬೆಳಕಿನ ಅಂಚಿಗೆ ದಾರಿ ತೋರಲು ಇಂದಿಗೂ ಸ್ಫೂರ್ತಿ ಕೇಂದ್ರವಾಗಿದ್ದಾರೆ.

ಕುವೆಂಪುರವರ ಪ್ರತಿಭೆಯು ಕೃತಿಯು ಉದ್ದಕ್ಕೂ ಹರಿದು ಈ ಯುಗಾಚಾರ್ಯನ ಬದುಕನ್ನು, ಅದು ಸೂಸಿದ ಸುಗಂಧವನ್ನು ರಮಣೀಯವಾಗಿ ಪ್ರತಿಪಾದಿಸಿದೆ. ಅವರ ಸಿಂಹ ಶೈಲಿಯಿಂದ ಮೂಡಿ ಬಂದಿರುವ ಈ ಕೃತಿ ವಿವೇಕಾನಂದರಷ್ಟೆ ಗಂಭೀರವಾಗಿ ಹಾಗೂ ಸರಳ ಸುಂದರ ಮನೋಜ್ಞ ಮೈ ತಾಳಿದೆ.

ವಿವೇಕಾನಂದರು ನರೇಂದ್ರನಾಗಿದ್ದಂಥ ಕಾಲದಲ್ಲಿ ಅಂತರಂಗದ ತುಮುಲಕ್ಕೆ ಅಂತಿಮ ಶಾಂತಿ ಯಾವುದು ಎಂದು ಕಂಡು ಹಿಡಿಯುವ ಹೋರಾಟದ ಚಿತ್ರಣ ಸೋದಾಹರಣವಾಗಿ ಚಿತ್ರಿತವಾಗಿದೆ. ದೇವೇಂದ್ರನಾಥ ಠಾಗೂರರಂತಹ ವ್ಯಕ್ತಿಗಳಿಂದಲೂ ತಣಿಸದ ಈ ದಾಹ, ಆಂಗ್ಲ ಉಪಾಧ್ಯಾಯರೊಬ್ಬರ ನಿರ್ದೇಶನದ ಮೇರೆಗೆ ಶ್ರೀರಾಮಕೃಷ್ಣ ಪರಮಹಂಸರ ಬಳಿ ಹೋಗಿ ಕೃತಕೃತ್ಯತೆಯನ್ನು ಹೊಂದುವುದು ಅಷ್ಟೇ ಚೆನ್ನಾಗಿ ಬಂದಿದೆ. ವಿದ್ಯಾವಂತ ಯುವಕನೊಬ್ಬ ಶ್ರೀರಾಮಕೃಷ್ಣರಂತಹ ವಿಚಿತ್ರ ಯೋಗಿಗಳ ಸಾನಿಧ್ಯದಲ್ಲಿದ್ದು ಹೇಗೆ ಚಿಂತಿಸಬಲ್ಲ ಎಂಬುದನ್ನು ಲೇಖಕರು ವಿವೇಕಾನಂದರ ಮಾತಿನಲ್ಲಿ ಹೇಳಿರುವುದೇ ಅದರ ಹೆಚ್ಚಳ ಹಾಗೂ ಸಹಜತೆಗೆ ಸಾಕ್ಷಿ. ಶ್ರೀರಾಮಕೃಷ್ಣರ ಈ ಪ್ರಚಂಡ ಧೀರ ಶಿಷ್ಯನನ್ನು ಹೇಗೆ ಪಳಗಿಸಿ ತಮ್ಮ ತಾಣಕ್ಕೆ ಹಿಡಿಸಿದರು ಎನ್ನುವುದು ಕೃತಕತೆಯಾಗಿ ಪರಿಣಮಿಸದೆ 'ಏಕಿರಬಾರದು ?' ಎನ್ನುವ ಇತ್ಯಾತ್ಮಕ (Positive outlook) ನೋಟದಿಂದಲೇ ನೋಡುವಂತಾಗುತ್ತದೆ, ಎಂತಹ ವಿಚಾರವಂತ ಓದುಗನಿಗೂ.

ಗೃಹಕೃತ್ಯದ ತೊಂದರೆಗಳು, ಸ್ತ್ರೀ ವ್ಯಾಮೋಹ (ಪುಟ ೬೫) ಅವ್ಯಾಹತವಾಗಿ ಹರಿದು ಬಂದ ಮಾನಸಿಕ ಹೋರಾಟ—ಈ ಎಲ್ಲವನ್ನೂ ಮೀರಿ ಶ್ರೀ ಗುರು ದೇವನ ಪದ ತಲದಲ್ಲಿ ಅರಸಿದ ಶ್ರೀ ಶಕ್ತಿ ವಿವೇಕಾನಂದರ ವೈಯುಕ್ತಿಕ ಆಸ್ತಿಯಾಗದೆ ಜಿಜ್ಞಾಸೆಗಳನ್ನು ತಣಿಸುವ ಜೀವ ಗಂಗೆಯಾದುದು ಹೇಗೆ ಎಂಬುದನ್ನು

ಈ ಹೊತ್ತಿಗೆಯ ಉದ್ದಕ್ಕೂ ಸಾಕ್ಷಿಯಾಗಿ ನೋಡುತ್ತಾ ಹೋಗುತ್ತೇವೆ.

ವಿವೇಕಾನಂದರ ಜೀವನ ಸಾಧನೆಯ ಹಾದಿಯಲ್ಲಿ ಅದ್ಭುತ ಹೋರಾಟ, ಅರಸಿದ ಸಂಪೂರ್ಣ ಶಾಂತಿಗಾಗಿ ವಿಚಿತ್ರ ಕೆದಕಾಟ. ಶ್ರೀರಾಮಕೃಷ್ಣರು ನಿರ್ಯಾಣ ಹೊಂದಿದಮೇಲೆ ವಿವೇಕಾನಂದರು ಅಲ್ಲಲ್ಲಿ ಸಂಚರಿಸಿ, ಪವಹಾರಿ ಬಾಬನನ್ನು ಸಂದರ್ಶಿಸಿ ಅವರಲ್ಲಿದ್ದ ಅಸೀಮ ಶಕ್ತಿಗೆ ಮರುಳಾಗಿ ದೀಕ್ಷಾಗ್ರಹಣ ಮಾಡಲು ಮನಸ್ಸು ಮಾಡಿದರೂ ಕೊನೆಗೆ ಶ್ರೀರಾಮಕೃಷ್ಣರ ದೇವಮಾನವ ಮೂರ್ತಿ ಕಂಡು, ಅವರು ಬೋಧಿಸಿದ್ದ ಜೀವಕಿನ ಸೆರಗಿನಿಂದ ಪಾರಾಗದಾದರು.

ಇಷ್ಟಾದರೂ ತಾವು ಕೆದಕುತ್ತಿದ್ದ ಹುಡುಕುತ್ತಿದ್ದ ಅಪೂರ್ವ ಶಾಂತಿ ಅವರನ್ನು ಪರಿವ್ರಾಜಕ ಸನ್ಯಾಸಿಯಾಗಿ ಮಾಡಿ ಇಡೀ ಭರತ ಖಂಡವನ್ನೇ ಸುತ್ತಿಸಿತು. ಕೊನೆಗೆ ೧೮೯೩ನೇ ಇಸವಿಯಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಹೇಗೆ ಅವರ ದಿವ್ಯಕೀರ್ತಿ ದಿಗಂತವ್ಯಾಪ್ತಿಯಾಯಿತು ಎಂಬುದು ಸರ್ವರ ಗಮನಕ್ಕೂ ಬಂದ ಮಹತ್ವದ ಸಂಗತಿ. ಶ್ರೀ ಗುರುದೇವನು ಆಣತಿಯಿತ್ತಂತೆ ಸನಾತನ ಹಿಂದೂ ಧರ್ಮವನ್ನೂ ಅದ್ವೈತದ ವಿಶಿಷ್ಟತೆಯನ್ನು ಜಗತ್ತಿಗೆ ಸಾರಿ ಜಗದ್ವಂದ್ಯರಾದುದು ಎಷ್ಟು ಪ್ರಖ್ಯಾತವೋ, ಅದಕ್ಕಿಂತ ಪ್ರಖ್ಯಾತವಾದುದು ಎಂದರೆ ವಿವೇಕಾನಂದರು ಸಾಮಾಜಕವಾಗಿ ಚಿಂತಿಸಿದ ರೀತಿ ಮತ್ತು ಅದಕ್ಕಾಗಿ ಅವರು ಪಟ್ಟ ಕಳಕಳಿ, ಅವರ ಈ ಅಸೀಮ ವ್ಯಕ್ತಿತ್ವದಲ್ಲಿ ಸಾಮಾಜಿಕವಾಗಿ ಕೊಬ್ಬಿ ಮೆರೆಯುತ್ತಿರುವ ಸಹಸ್ರ ಕೊರತೆಗಳನ್ನು ಕಡೆಗಾಣಿಸುವುದು ಹೇಗೆ, ಪ್ರೇಮದ ಒರತೆಯನ್ನು ಉಕ್ಕಿಸುವುದು ಹೇಗೆ ಎಂಬುದರ ಪ್ರಚಂಡ ನಾಳೆಯನ್ನು ಕಾಣುತ್ತೇವೆಯೇ ವಿನಃ ಎಲ್ಲೂ ಬಲವಂತವಾಗಿ ಆಧ್ಯಾತ್ಮದ ಅನರ್ಥ ದೀಕ್ಷೆಯನ್ನು ಕೊಟ್ಟಂತೆ ಕಾಣುವುದಿಲ್ಲ.

ಕ್ರೈಸ್ತರನ್ನು ಕಂಡು ಅವರ ಮತ ಪ್ರಚಾರವನ್ನು ಖಂಡಿಸಿ ಧರ್ಮದ ಬದಲು ಭಾರತದ ಜನತೆಗೆ ಅನ್ನವನ್ನು ಕೊಟ್ಟು, ಸಲುಹಿ ಎಂಬ ಮಾತು (ಪು. ೧೫೩) ನಾನೊಬ್ಬ ತತ್ತ್ವವೇತ್ತನಲ್ಲ; ಧರ್ಮ ಗುರುವಲ್ಲ; ಮಹರ್ಷಿಯಲ್ಲ, ದರಿದ್ರರಿಗಾಗಿ ಮರುಗುವ ದರಿದ್ರ' ಎನ್ನುವ ಮಾತು (ಪು. ೧೯೭) ಗೋರಕ್ಷಣೆಯ ಪ್ರಚಾರಕನೊಬ್ಬನಿಗೆ ಛೀಮಾರಿ ಹಾಕಿದ್ದು (ಪು. ೨೧೪)—ಈ ಭಾಗಗಳಲ್ಲೆಲ್ಲಾ ವಿವೇಕಾನಂದರ ಮಾನವೀಯ ಹೃದಯ ತಾನೇ ತಾನಾಗಿ ಮಿಡಿದಿದೆ. ಇವನ್ನು ನಾವು ಎಷ್ಟು ಮೆಚ್ಚಿಕೊಂಡರೂ ಸಾಲದು.

ಭಾರತದ ಬಗ್ಗೆ, ಭರತ ಮಾತೆಯ ಬಗ್ಗೆ ಅವರಿಗಿದ್ದ ಪೂಜನೀಯ ಭಾವನೆ ಎಷ್ಟು ಉದಾತ್ತವಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದು. ಶ್ರೀಮಂತನೊಬ್ಬನು ಚಿಕಾಗೋ ನಗರದಲ್ಲಿ ಆತಿಥ್ಯ ನೀಡಿದಾಗ ಭರತ ಮಾತೆಯ ಆ ದಟ್ಟ ದರಿದ್ರತನ ನೆನಪಾಗಿ ಕಣ್ಣೀರು ತಂದು ಕೊಂಡದ್ದು (ಪು. ೧೫೪) ಸೇವಿಯರ್ ದಂಪತಿಗಳು ಪ್ರಾಸಂಗಿಕವಾಗಿ ಮಾತನಾಡುವಾಗ ಸ್ವಾಮಿ ವಿವೇಕಾನಂದರು ಭರತ

ಭೂಮಿಯ ಬಗ್ಗೆ ತಾಳಿದ್ದ ಹೃದಯ ತುಂಬಿದ ಆ ಪೂಜನೀಯ ಭಾವನೆ (ಪು. ೧೯೩) ಗಮನಿಸಿದಾಗ ಅವರ ರಾಷ್ಟ್ರ ಪ್ರೇಮ ಯಾವ ಮಟ್ಟದ್ದು ಎಂಬು ದನ್ನು ಯಾರಾದರೂ ಅರಿತಾರು. "ಕೂಡಲೆ ಸಾವಿರಾರು ಸಿಡಿಲುಗಳು ಕೋಲಾಟ ವಾಡುವಂತೆ ದೊಡ್ಡ ಸದ್ದಾಯಿತು" (ಪುಟ ೧೪೭).

"ಉರಿವ ಕಡು ಬೇಸಗೆಯ ಕಾಲ್ಕಿಚ್ಚಿನಂತೆ ನಲಿವ ಬಸಂತನ ಪೈರಿಸಿರಿ ಇಂಪಿನಂತೆ, ಪ್ರಾಗಳ ಕಂಪಿನಿಂದ ಕುಸಿ ಕುಸಿದು ತೀಡುವ ಬನದೆಲರಂತೆ, ಪಸರಿಸುವ ಇರುಳಿ ಬೆಳದಿಂಗಳಂತೆ, ಮೂಡಿ ಬರುವ ನೇಸರಿನ ಹೊಂಗದಿರಂತೆ, ಯುಗಾ ಚಾರ್ಯ ಯೋಗಿವರ್ಯ ಶ್ರೀ ವಿವೇಕಾನಂದ ಸ್ವಾಮಿಗಳ ಪುಣ್ಯಾಗಮನದ ವಾರ್ತೆ ಭಾರತ ವರ್ಷವೆಲ್ಲೆಲ್ಲ ಹಬ್ಬಿತು. (ಪುಟ ೧೯೫).

"ಹೊರಗಡೆ ಘನನಿಬಿಡ ಘೋರಾಂಧಕಾರ ಕವಿದಿತ್ತು. ಎದುರುಗಡೆ ಭಾಗೀರಥಿಯ ವಿಶಾಲ ವಕ್ಷಸ್ಥಳದ(ಲ್ಲಿ) ತೀರದಲ್ಲಿದ್ದ ಸೌಧಗಳ ಮಣಿದೀಪ ಮಾಲೆ ಗಳು ಪ್ರತಿಬಿಂಬಿಸಿ, ಮೃದು ತರಂಗ ನೃತ್ಯದಲ್ಲಿ ಕಂಪಿಸುತ್ತಿದ್ದವು. ಮೇಲುಗಡೆ ಅಗಣಿತ ನಕ್ಷತ್ರ ಪುಂಜಗಳನ್ನು ವಕ್ಷಸ್ಥಳದಲ್ಲಿ ಧರಿಸಿದ್ದ ಆಕಾಶ ನಿಸ್ತಬ್ಧವಾಗಿತ್ತು. ಕಳವಳದಿಂದ ಕೂಡಿದ ತಂಗಾಳಿ ಬಿರುಬಿರನೆ ಬೀಸುತ್ತಿತ್ತು." (ಪುಟ ೨೪೫).

"ಅದು 'ಒಂದು ವ್ಯಕ್ತಿಯ ವಾಣಿಯಲ್ಲ.' ಒಂದು ಕಣ್ಣಿನ ಕಾಂತಿಯಲ್ಲ. ಅನೇಕ ಮಹಾ ಪುರುಷರ ಜೀವ ಜ್ಯೋತಿಗಳ ಸೂತ್ರ ಸಮಷ್ಟಿಯಾಗಿದೆ. ಬಹು ಜೀವನಗಳ ದರ್ಶನ ಗೋಷ್ಠಿಯಾಗಿದೆ. ಅದರಲ್ಲಿ ಪ್ರಾಚ್ಯ ಪಾಶ್ಚಾತ್ಯ, ಹಿಂದೂ, ಕ್ರೈಸ್ತ, ಇಸ್ಲಾಮ್, ಬೌದ್ಧ ಮತ, ತತ್ತ್ವ, ವಿಜ್ಞಾನ, ಕಲಾ, ಇಹ, ಪರ, ದೇಹ, ಆತ್ಮ, ನೂತನ, ಪುರಾತನ ಎಲ್ಲವು ಸಮನ್ವಯ ಗೊಂಡಿದೆ. (ಪುಟ ೨೪೮, ೨೪೯), ಇವು ಕುವೆಂಪುರವರ ಸಮರ್ಥ ಗದ್ಯ ಶೈಲಿಗೊಂದು ಉದಾಹರಣೆ.

ಇಂಗ್ಲೀಷ್ ಸಾಹಿತ್ಯದಲ್ಲಿ ಜೀವನ ಚರಿತ್ರೆಗಳು ಉತ್ತಮ ಗದ್ಯವನ್ನು ಕಾಣಿಕೆಯಾಗಿ ಇತ್ತಿವೆ. ಆ ದೃಷ್ಟಿಯಿಂದ ನೋಡಿದಾಗ—ಸಂಸ್ಕೃತ ಶಬ್ದಾಡಂ ಭರದ ವ್ಯಾಮೋಹ ಬಿಟ್ಟರೆ— ಈ ಕೃತಿ ಕನ್ನಡ ಸಾಹಿತ್ಯಕ್ಕೆ ಅತ್ಯುತ್ತಮ ಕಾಣಿಕೆ ಯೊಂದನ್ನು ಅರ್ಪಿಸಿದೆ. ಗದ್ಯದ ದೃಷ್ಟಿಯಿಂದಲೇ ಮಾತ್ರ ಹೇಳುವುದಾದರೆ ಈ ಕೃತಿ ಗದ್ಯದಲ್ಲಿ, ಉತ್ತುಂಗ ಶಿಖರವನ್ನೇರಿದೆ ಎಂದು ಒಪ್ಪಿಕೊಳ್ಳಬೇಕಾಗು ತ್ತದೆ. ಕೃತಿ ನಾಯಕನನ್ನು ಕಡೆದು ನಿಲ್ಲಿಸುವಲ್ಲಿ ಲೇಖಕರು ಎಲ್ಲಿಯೂ ಔಚಿತ್ಯ ಮೀರಿಲ್ಲ. ಅವರು ಬಳಸಿರುವ ಲೇಖನಗಳು, ಕಾಗದಗಳು, ವೃತ್ತ ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳು, ಸರ್ವವೂ ಕೃತಿ ನಾಯಕನ ವ್ಯಕ್ತಿತ್ವವನ್ನು ಮರೆಸದೆ ಮೆರೆಯಿಸಲೋಸುಗ ಬರುವುದರಿಂದ ಅವುಗಳ ಬಗ್ಗೆ ಲೇಖಕನಿಗೆ ಇರುವ ಔಚಿತ್ಯ ಜ್ಞಾನವನ್ನು ಕೈವಾರಿಸಬೇಕು. ಸಮಕಾಲೀನ ವ್ಯಕ್ತಿಯ ಬಗ್ಗೆ ಬರೆದ ಈ ಸ್ವತಂತ್ರ ಕೃತಿಯಲ್ಲಿ ಉತ್ಪ್ರೇಕ್ಷೆ, ಹೊಗಳಿಕೆ ಮೊದಲಾದವನ್ನು ಕೃತಿ ನಾಯಕನ

ಮೇಲೆ ಆರೋಪಿಸದೆ, ಅದಷ್ಟು ಸಹಜತೆ ಮೈದುಂಬಿಕೊಂಡು ಬರುವ ಪ್ರಜ್ಞಾಪೂರ್ವಕ ಎಚ್ಚರ ಕೃತಿಕಾರನಿಗೆ ಇರುವುದನ್ನು ಗಮನಿಸಬೇಕು. ಒಟ್ಟಿನಲ್ಲಿ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾಗಿರುವ ಅತ್ಯುತ್ತಮ ಜೀವನ ಚರಿತ್ರೆಗಳಲ್ಲಿ ಕುವೆಂಪುರವರ 'ಸ್ವಾಮಿ ವಿವೇಕಾನಂದ' ಕೃತಿಯೂ ಕೂಡ ಒಂದು ಎಂದು ನಿಸ್ಸಂದೇಹವಾಗಿ ಹೇಳಬಹುದು.

—o—

ಪ್ರಾರ್ಥಿಸಿ, ಓ ಮಕ್ಕಳಿರಾ!

ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನಿಯ ಅಸುವೀಂಟಿ ಕೊಂದ ಗೋವಿಂದ!
    ಅಂದು ಹಾಲೆಂದು ವಿಷವೂಡಲೈತಂದ
    ಮಕ್ಕಳಾ ಮಾರಿಯನು ರಕ್ಕಸಿಯ ಕೊಂದ,
    ಹೇ ಕೃಷ್ಣ, ಹೇ ಬಾಲಗೋಪಾಲ, ಕಂದಾ,
    ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
    ಪೂತನಿಯ ಅಸುವೀಂಟಿ ಕೊಂದ ಗೋವಿಂದ!
ತಾಯಮೊಲೆಯಂದದಲಿ ತೋರ್ಪವಳ ಕಬ್ಬಿಣದ
ಹೇರೆದೆಯ ಕೆಚ್ಚಲನು ಬಾಯ್ಗಿಟ್ಟು, ತುಟಿ ಹರಿದು,
ರಕ್ತ ಸೋರುವ ನಮ್ಮನೊಲಿದು ಕಾಪಾಡಯ್ಯ;
ಭಾರತಿಯ ಮಕ್ಕಳಾಯುವ ರಕ್ಷಿಸಯ್ಯ!
ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನಿಯ ಅಸುವೀಂಟಿ ಕೊಂದ ಗೋವಿಂದ!
    ಹೊಟ್ಟೆಗೂ ಹಾಲಿಲ್ಲ; ಬಾಯಿಗೂ ಬಿಡುವಿಲ್ಲ:
    ಕೆಟ್ಟೆವಯ್ಯಾ ಈ ಜಿಟ್ಟ ಬಂಡೆಯ ನಂಬಿ;
    ಕೊಟ್ಟಕೊನೆಗೂ ಬರಿಯ ದಣಿವು ಬಾಯಾರಿಕೆ!
    ನಮ್ಮ ನುಡಿಗೋಮಾತೆಯಾ ಮೆತ್ತಗೆಚ್ಚಲಿಗೆ
    ಬಾಯಿಟ್ಟರಾಯ್ತು ಹೊಡೆತುಂಬೆ ನೊರೆಹಾಲಿರಲು
    ಏಕಯ್ಯ ಈ ಬರಡು ಪೂತನಿಯ ಹಾಲ್ದೋರಿಕೆ?
ಹೇ ಕೃಷ್ಣ, ಹೇ ಬಾಲಗೋಪಾಲ, ಕಂದಾ
ಪಾರುಮಾಡೆಮ್ಮನೀ ಇಂಗ್ಲೀಷಿನಿಂದ,
ಪೂತನಿಯ ಅಸುವೀಂಟಿ ಕೊಂದ ಗೋವಿಂದ!

— ಕುವೆಂಪು.



ಶ್ರೀ ಯು. ಕೆ. ಲಕ್ಷ್ಮಣಗೌಡರು ಬಿ.ಎಸ್.ಸಿ. ಎಂ.ಪಿ.
ಉಪಾಧ್ಯಕ್ಷರು

ಕುವೆಂಪುರವರು ಕಂಡ ಕನ್ನಡ

ಶ್ರೀ ಹಂಪ. ನಾಗರಾಜಯ್ಯ, ಎಂ. ಎ.

ಕನ್ನಡಕೆ ಹೋರಾಡು ಕನ್ನಡದ ಕಂದಾ
ಕನ್ನಡವ ಕಾಪಾಡು ನನ್ನ ಆನಂದಾ
ಜೋಗುಳದ ಹರಕೆಯಿದು ಮರೆಯದಿರು ಚಿನ್ನಾ
ಮರತೆಯಾದರೆ, ಅಯ್ಯೊ ಮರೆತಂತೆ ನನ್ನ !
ಮೊಲೆಯ ಹಾಲಂತೆ ಸವಿಜೇನು ಬಾಯ್ಗೆ
ತಾಯಿಯಪ್ಪುಗೆಯಂತೆ ಬಲು ಸೊಗಸು ಮೆಯ್ಗೆ
ಗುರುವಿನೊಳ್ನುಡಿಯಂತೆ ಶ್ರೀಯಸ್ಸು ಬಾಳ್ಗೆ
ತಾಯ್ನುಡಿಗೆ ದುಡಿದು ಮಡಿ ಇಹಪರಗಳೇಳ್ಗೆ !

ಈ ಹೆಬ್ಬಯಕೆಯ ಕಳಕಳಿಯ ಕರೆಯನ್ನು ಕನ್ನಡದ ಕಂದರಿಗೆ ಕೊಟ್ಟವರು ರಾಷ್ಟ್ರಕವಿ ಪದ್ಮಭೂಷಣ ಡಾ|| ಕುವೆಂಪುರವರು. ಕಳೆದ ನಾಲ್ಕೂವರೆ ದಶಕಗಳಿಂದ ಒಂದೇಸಮನೆ ಕನ್ನಡದ ಕೆಚ್ಚನ್ನು ಎದೆಯಲ್ಲಿ ತುಂಬಿಕೊಂಡು ಕನ್ನಡ ನಾಡು ನುಡಿಗಳ ಮೇಲ್ಮೆಗಾಗಿ ದುಡಿಯುತ್ತಾ ಬಂದಿರುವ ಮಹಾಕವಿ ಕುವೆಂಪುರವರು ಕನ್ನಡದ ಡಿಂಡಿಮವನ್ನು ಬಾರಿಸಿದ್ದಾರೆ, ಕನ್ನಡದ ಪಾಂಚಜನ್ಯವನ್ನು ಊದಿದ್ದಾರೆ. ಕನ್ನಡವೆಂದಾದರೂ ಅನ್ನಿ, ಕುವೆಂಪುವೆಂದಾದರೂ ಹೇಳಿ – ಆವೆರಡೂ ಒಂದೇ.

ಕುವೆಂಪುರವರು ಉತ್ಕಟ ಕನ್ನಡಾಭಿಮಾನಿಗಳಾದರೂ ಅವರ ಅಭಿಮಾನ ಆತುರಾತುರದ ಅಂಧಾಭಿಮಾನವಲ್ಲ, ಆವೇಶೋನ್ಮಾದಗಳ ದುಡುಕಿನ ದುರಭಿಮಾನವಲ್ಲ. ಸಾವಧಾನವಾಗಿ ಸಮಾಧಾನ ಚಿತ್ತಗಳಿಂದ ಪೂರ್ವಾಪರಗಳನ್ನು ಆಳವಾಗಿ ವಿವೇಚಿಸಿ ದೂರದೃಷ್ಟಿಯಿಂದ ತಳೆದ ವಿವೇಕದತ್ತವಾದ ನಿರ್ಧಾರ ಕವಿ ಕುವೆಂಪುರವರ ಈ ನಿಲುವು. ಕನ್ನಡನಾಡಿನಲ್ಲಿ ಶಿಶುವಿಹಾರದಿಂದ ಸ್ನಾತಕೋತ್ತರ ತರಗತಿಯ ತನಕ ಕನ್ನಡ ಭಾಷೆಯೇ ಶಿಕ್ಷಣಮಾಧ್ಯಮವಾಗಬೇಕು. ಕರ್ನಾಟಕದಲ್ಲಿ ಎಲ್ಲ ವಿಶ್ವವಿದ್ಯಾನಿಲಯಗಳ ಎಲ್ಲ ಕಾಲೇಜುಗಳಲ್ಲೂ ಪಾಠಭಾಷೆ, ಪ್ರವಚನ ಭಾಷೆ, ಪರೀಕ್ಷೆಯ ಭಾಷೆ—ಈ ಮೂರೂ ಕನ್ನಡವಲ್ಲೇ ಇರಬೇಕು. ನ್ಯಾಯಾಲಯದಲ್ಲಿ ಆಪಾದನೆ, ವಿಚಾರಣೆ, ವಾದ ಪ್ರತಿವಾದ, ತೀರ್ಪು - ಎಲ್ಲ ಕನ್ನಡದಲ್ಲಿರಬೇಕು ಕೋರ್ಟು, ಕಚೇರಿ, ಬ್ಯಾಂಕು, ಅಂಚೆ, [illegible]ಗೆ ಸಂಪರ್ಕ - ಎಲ್ಲ[illegible] ಕನ್ನಡ

ದಲ್ಲೇ ವ್ಯವಹಾರವಾಗಬೇಕು. ಅವರ ಈ ಪ್ರತಿಪಾದನೆಯಲ್ಲಿ ಹುರುಳಿದೆ, ತಿರುಳಿದೆ ಯೆಂಬುದು ಅನ್ಯಭಾಷೆಗೆ ತಮ್ಮನ್ನು ಮಾರುಗೊಟ್ಟು ಪರಭಾಷಾ ವ್ಯಾಮೋಹದ ಸುಳಿಯಲ್ಲೇ ಸುರುಳಿ ಸುತ್ತಿಕೊಂಡ ಅಭಿಮಾನಶೂನ್ಯರಿಗೆ ತಿಳಿಯದಿರಬಹುದು. ಆದರೆ ನಿರ್ಲಿಪ್ತರಾಗಿ ಪರಿಭಾವಿಸಿದ ಶ್ರೀಸಾಮಾನ್ಯನಿಗೂ ಇದರ ಔಚಿತ್ಯ ಭಾಸವಾಗುತ್ತದೆ. ಮಹಾಕವಿ ಕುವೆಂಪುರವರು, ಅನ್ಯಭಾಷೆಗಳಿಗೆ ತಮ್ಮ ವ್ಯಕ್ತಿತ್ವವನ್ನೇ ಸೂರೆಗೊಟ್ಟು ದಾಸರಾದವರಿಗೆ ಸಂಬೋಧಿಸುತ್ತಾ, ಅಂಥವರ ಮರುಳು ಮಾತುಗಳಿಗೆ ಒಳಗಾದವರಿಗೆ ಕರೆಕೊಡುತ್ತಾ 'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ!' ಎಂದು ಸಂಬೋಧಿಸಿ ಹೇಳಿದ ಪದ್ಯದ ಕೆಲವು ಸಾಲುಗಳು ಇಂತಿವೆ:

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ!
ರಾಜನುಡಿಯೆಂದೊಂದು; ರಾಷ್ಟ್ರನುಡಿಯೆಂದೊಂದು
  ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುರಿದಿಹೊಳೆ ಸಾಯುತಿದೆ
  ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ!
ಕೂಗಿಕೊಳ್ಳಲು ಕೂಡ ಬಲವಿಲ್ಲ; ಮಕ್ಕಳೇ
  ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ.

ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
  ಪರಭಾಷೆ ಮೋಹಕ್ಕೆ ಚೆಲ್ಲಬೇಡಿ
ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತ
  ನೇಣುರುಳ ಸೇದಯ್ಯೊ ಕೊಲ್ಲಬೇಡಿ
ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
  ಹರಸುತ್ತ ಬರುವರೈ ಮೊದಲು ಮೊದಲು
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು
  ನಮ್ಮ ನಾಲಗೆ ನಮಗೆ ಕೀಳು ತೊಡಲು!

ಉತ್ತರನ ಕಾಶಿಯಲಿ ಕತ್ತೆ ನಿಂದೈತರಲು
  ದಕ್ಷಿಣದ ದೇಶಕದು ಕುದುರೆಯಹುದೆ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
  ಹೊತ್ತ ಹೊರೆ ಬಲಕಾರಿ ನೆತ್ತರಹುದೆ?

ಕನ್ನಡ ನಾಡಿನ ಪ್ರತಿಯೊಂದು ಹಂತದಲ್ಲೂ, ಪ್ರತಿಯೊಂದು ಕ್ಷೇತ್ರದಲ್ಲೂ ಕನ್ನಡವೇ ಸಾರ್ವಭೌಮ ಭಾಷೆಯಾಗಿ ವಿಜೃಂಭಿಸಬೇಕು. ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾದ ಈ ಎಲ್ಲ ಸ್ಥಾನಮಾನ ಮರ್ಯಾದೆಗಳನ್ನೂ, ತಕ್ಕ ಅವಕಾಶಗಳನ್ನೂ ಮೊದಲು ದೊರಕಿಸಿಕೊಟ್ಟರೆ ಆಗ, ಈಗ ಇರುವುದಕ್ಕಿಂತಲೂ ಹತ್ತು ಪಾಲು ಮಿಗಿಲಾದ ಯೋಗ್ಯತೆ, ಅರ್ಹತೆ, ಜೀವಕಳೆ, ವೈಭವೋನ್ನತಿ ತನ್ನ ಪಾಡಿಗೆ ತಾನು ಕನ್ನಡ ಭಾಷೆಗೆ ಪ್ರಾಪ್ತವಾಗುತ್ತದೆ. ಕನ್ನಡಿಗರು ತಮ್ಮ ಔದಾರ್ಯದ ಬಿರುಸಿನಲ್ಲಿ ಕನ್ನಡವನ್ನು ಕಡೆಗಣಿಸುವ ಕಾರ್ಯ ಮಾತ್ರ ಕನಸಿನಲ್ಲೂ ಆಗಬಾರದು, ಆಗುವುದಕ್ಕೆ ಅವಕಾಶ ಕೊಡಬಾರದು. ಕನ್ನಡದ ಮೇಲೆ ಹಿಂದೆ ಸಂಸ್ಕೃತ ಭಾಷೆ ಸವಾರಿ ಮಾಡಿತು. ಅದು ನಿಂತಿತೆಂದರೆ ಇಂಗ್ಲಿಷ್ ಬಂತು. ಇದುವರೆಗೆ ಇಂಗ್ಲಿಷ್ ದಬ್ಬಾಳಿಕೆ ಮಾಡಿದ್ದು ಈಗ ಮುಗಿಯತೊಡಗಿದೆ. ಆದರೆ ಈಗ ಮತ್ತೆ ಹಿಂದಿ ಬಂದು ಕನ್ನಡದ ಹೆಗಲ ಮೇಲೆ ಸವಾರಿ ಮಾಡತೊಡಗಿದರೆ ಆಗ ಒಂದು ಮಾರಿಯನ್ನು ಓಡಿಸಿ ಇನ್ನೊಂದು ಮಾರಿಯನ್ನು ಕರೆದುಕೊಂಡಂತೆ ಆಗುತ್ತದೆ. ಇದನ್ನು ನಮ್ಮ ಜನ ಯೋಚಿಸಬೇಕು.

ಇಂಗ್ಲಿಷೂ ಇರಲಿ, ಹಿಂದಿಯೂ ಇರಲಿ. ಆದರೆ ಎಲ್ಲಿ ಇರಬೇಕೋ ಅಲ್ಲಿ ಇರಲಿ, ಎಷ್ಟು ಬರಬೇಕೋ ಅಷ್ಟು ಬರಲಿ. ಹಿಂದಿಗೆ ಇಂಗ್ಲಿಷಿಗಿಂತ ಭಾರತದಲ್ಲಿ ಎಲ್ಲೆಡೆಯಲ್ಲೂ ಹೆಚ್ಚು ಪ್ರಾಮುಖ್ಯತೆ ಕೊಡುವುದು ನ್ಯಾಯಸಮ್ಮತ. ಆದರೆ ಪ್ರಾಂತ ಭಾಷೆಗಳಿಗೇ ಸದಾ ಆದ್ಯತೆಯಿರಬೇಕು. ಈ ವಿಚಾರವಾಗಿ ಕುವೆಂಪುರವರು ಹೀಗೆ ಹೇಳಿದ್ದಾರೆ: “ಈ ಬಲಾತ್ಕಾರದ ಇಂಗ್ಲಿಷ್ ಶಿಕ್ಷಣದ ಪ್ರಚ್ಛನ್ನ ಭ್ರಷ್ಟಾಚಾರವನ್ನು, ನಷ್ಟದಲ್ಲಾಗಲಿ, ಹಾನಿಯಲ್ಲಾಗಲಿ, ಸರಿದೂಗುವ ಭ್ರಷ್ಟಾಚಾರ ಮತ್ತೊಂದಿಲ್ಲ; ಮತ್ತು ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವರನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಗಿಲೋಟಿನ್ನಿಗೆ ಕೋಟ್ಯಾಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ ಪರಿಣಾಮವನ್ನು ಊಹಿಸಲೂ ಸಾಧ್ಯವಿಲ್ಲ. ಬಹುಶಃ ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಾಂಚವಾರ್ಷಿಕ ಯೋಜನೆಗಳ ಮೊತ್ತವ ಆದರೂ ಆಗಬಹುದೇನೊ!”

ಕುವೆಂಪುರವರ ಈ ಅಭಿಪ್ರಾಯಗಳು ಸತ್ಯದ ಅಮೃತ ನುಡಿಗಳು. ಪ್ರದೇಶ ಭಾಷೆಗೆ ಪ್ರಥಮ ಪ್ರಾಶಸ್ತ್ಯ ಪ್ರಾಪ್ತವಾಗಬೇಕು. ಶಿಕ್ಷಣ ಕ್ಷೇತ್ರದ ಹಾಗೂ ಆಡಳಿತದ ಧನುಸಿಗಳಲ್ಲಿ ಪ್ರಾಂತಭಾಷೆಗಳ, ಕನ್ನಡ [illegible] ಇಂಗ್ಲಿಷ್ ಈಗ ಇರುವ ತನ್ನ ಬಲಾತ್ಕಾರದ ಸ್ಥಾನದಿಂದ [illegible]

ನಿಯಂತ್ರಣವಾಗಬೇಕು. ಏಕೆಂದರೆ ನಮ್ಮ ದಿನನಿತ್ಯದ ತಾಯ್‌ನುಡಿಯ ಮೂಲಕ ತಿಳಿಸಿದಾಗ ಗಹನವಾದ ವಿಚಾರವೂ ಸರಳ ಸುಲಭವಾಗಿ ತಿಳಿಯಲು ಸಾಧ್ಯ. ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಮಹಾಕವಿ ಕುವೆಂಪುರವರು ಅಪ್ಪಣೆ ಕೊಡಿಸಿದ ಮಾತುಗಳಿವು: ವಿದ್ಯಾರ್ಥಿಗಳಾಗುವ ನಮ್ಮ ಮಕ್ಕಳ ಮೇಲೆ ನಮಗೇನಾದರೂ ಕರುಣೆಯಿದ್ದರೆ ಮೊದಲು ಅವರ ಎದೆಯ ಮೇಲೆ ಪರಕೀಯರು ಹೇರಿಟ್ಟು ಹೋಗಿರುವ ಹೆಣಭಾರದ ಹೊರಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು. ಅವರ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾಗಿರುವ ಭಾವತುಷ್ಟಿ ಮತ್ತು ಬುದ್ಧಿತುಷ್ಟಿಗಳೆರಡನ್ನೂ ಕನ್ನಡದ ತಾಯ್ ಮೊಲೆಯ ಮೂಲಕವೆ ಅವರು ಹೀರಿಕೊಳ್ಳುವಂತೆ ಅವಕಾಶ ಕಲ್ಪಿಸಬೇಕು. ಅವರ ಬೆಳವಣಿಗೆಗೆ ಬೇಕಾಗಿರುವ ಒಂದು ಬಟ್ಟಲು ಹಾಲನ್ನು ಹೆಣಭಾರದ ಇಂಗ್ಲಿಷ್ ಕಡಾಯಿಯಲ್ಲಿ ಹಾಕಿಕೊಟ್ಟರೆ ಅವರು ಕುಡಿಯುವುದೆಂತು? ಆ ಕಡಾಯಿ ಚಿನ್ನದ್ದೇ ಆಗಿರಬಹುದು; ಜಗತ್ತಿನ ಮಾರುಕಟ್ಟೆಯಲ್ಲಿ ಅದಕ್ಕೆ ಅನರ್ಘ್ಯವಾದ ಬೆಲೆಯೂ ಇರಬಹುದು. ಹಾಗೆಂದು ಪುಷ್ಟಿ ಬೇಕಾಗಿರುವ ನಮ್ಮ ದುರ್ಬಲ ಮಕ್ಕಳನ್ನು ಆ ವ್ಯಾಮೋಹಪೂತನಿಗೆ ಬಲಿಗೊಡುವುದೇನು ?" (೧೯೫೭).

ಕುವೆಂಪುರವರು ಈ ವಿಷಯವನ್ನು ಕುರಿತು ಬರೆದ ಒಂದು ಕವಿತೆಯ ಕೆಲವು ಪಂಕ್ತಿಗಳನ್ನು ಇಲ್ಲಿ ಉದಾಹರಿಸಿದೆ: ಇಂಗ್ಲಿಷಿನ ಬಲಾತ್ಕಾರವನ್ನು 'ಸಾಕು ಈ ಬಲಾತ್ಕಾರ' ಎಂದು ಹೇಳಿ ಮುಂದೆ ಹೀಗೆ ನಿವೇದಿಸಿದ್ದಾರೆ;

ಇಂಗಿ ಹೋಗುತಿದೆ ಇಂಗ್ಲಿಷಿನ ಮರುಭೂಮಿಯಲಿ
ನಿನ್ನ ಮಕ್ಕಳ ಶಕ್ತಿ - ಬುದ್ಧಿ - ಪ್ರತಿಭಾ
ರಾಷ್ಟ್ರನಾಯಕ ಮನದಿ ವಿವೇಕರೂಪದಿ ಮೂಡಿ
ಓ ರಸಮಯಿಯ ಸರಸ್ವತಿಯೆ, ಪೊರೆ ಬಾ!

ಕಲ್ಲ ಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ
ಕಿಮುಳ್ವಿ ಗುಜ್ಜಾಗುತಿದೆ ಮೊಳೆವ ಚೈತನ್ಯ
ಭೂಮಿಯಲಿ ಬೇರೂರಿ, ಬಾನೆಡೆಗೆ ತಲೆಯೆತ್ತಿ
ನಿಲುವವರಿಗೇತಕೀ ದಾಸ್ಯದೈನ್ಯ ?

ಗಾಂಧಿಯಿಂದಿಂಗ್ಲಿಷರ ದಾಸ್ಯದಿಂ ಪಾರಾದೆ
ಅವನ ಕೊಂದಿಂಗ್ಲಿಷಿಗೆ ದಾಸಿಯಾದೆ
ಓ ತಾಯಿ ಭಾರತಿಯೆ, ಚೀಣೀಯರನೆ ಮೀರಿ
ಹಿಂಡುತಿಹೆ ಕಂದರನು ಇಂಗ್ಲಿಷಿನ ಮಾರಿ !

ಬಲಾತ್ಕಾರಕಾಗಿ ಮಾತ್ರವೆ ಹೊರತು ಈ ಹೊಸ
ಭಾಷೆಗಾಗಿಯೆ ನಮ್ಮ ದ್ವೇಷವೇನಿಲ್ಲ
ತೆಗೆಯಿರಿ ಬಲಾತ್ಕಾರದಂಶವನು ; ಆಳಿಸಲಿ
ಸರ್ವರೂ ಇಂಗ್ಲಿಷನೆ. ಚಿಂತೆ ಇನಿತಿಲ್ಲ.

ಭಾರತ ಜಲಮೂಲವನೆ ಹೀರುತಿದೆ ಮರುಭೂಮಿ
ಹಿಂಡೆ ಜೀವವನು ಇಂಗ್ಲಿಷಿನ ಕಲ್ಗಾಣ
ಕನ್ನಡದ ಕ್ರಿಸ್ತನದೊ ಇಂಗ್ಲಿಷಿನ ಶಿಲುಬೆಯಲಿ
ಸಿಲುಕಿ ಬಾಯ್ಬಿಡುತಿಹನು ನೀರಡಸಿ ಪ್ರಾಣ !

ತಮ್ಮೆಸರು ಎಂತಿದ್ದರೂ ನುಸುಳಿ ಬರುವರು ಎಂಬ
ಕೆಚ್ಚಿನಲಿ, ಇಂಗ್ಲಿಷಿನ ಉಕ್ಕಿನ ಬಲೆಯನಿಕ್ಕೆ
ಜಾತಿಯಲಿ ಹಣದಲ್ಲಿ ಅಂತೆ ಅಧಿಕಾರದಲಿ
ಮೇಲೆ ಕುಳಿತವರೆಲ್ಲ ಮೆರೆಯುತಿರುವರು ಸೊಕ್ಕಿ !

ಮೇಲಿನ ಕವಿತೆಯ ಸಾಲುಗಳು ತುಂಬ ಅರ್ಥಗರ್ಭಿತವಾಗಿ ಮೂಡಿಬಂದಿವೆ ಕವಿಯ ಅಂತರಾಳದಿಂದ. ಅವನ್ನು ಮತ್ತೆ ಮತ್ತೆ ಓದಿ ಮನನ ಮಾಡಿ ಅರ್ಥೈಸಬೇಕು. ೧೯೬೪ ರ ಜನವರಿ ೨೭ ರಂದು ಬೆಂಗಳೂರಿನ ಪುರಭವನದಲ್ಲಿ ಸರಕಾರದವರು ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಮಹಾಕವಿ ಕುವೆಂಪುರವರಿಗೆ 'ರಾಷ್ಟ್ರಕವಿ' ಪ್ರಶಸ್ತಿಯ ವಿತರಣಾ ಸಮಾರಂಭವನ್ನು ಏರ್ಪಡಿಸಿದಾಗ ಉತ್ತರ ಕೊಡುತ್ತಾ ಮಾತನಾಡುವಾಗಲೂ ಕುವೆಂಪುರವರು ತಮ್ಮ ಎಂದಿನ ಕನ್ನಡನಾಡಿನ ಒಲವನ್ನೇ ತೋಡಿಕೊಂಡಿದ್ದಾರೆ: "ಕನ್ನಡನಾಡು ಒಟ್ಟಾಗಿದೆ. ಕನ್ನಡವನ್ನು ಅಧಿಕೃತ ಭಾಷೆ ಎಂದು ಘೋಷಿಸಿದ್ದೀರಿ. ಇತರ ರಾಜ್ಯಗಳಂತೆ ಕರ್ನಾಟಕವೂ ರಾಜ್ಯಾಂಗದ ಪ್ರಕಾರ ತನ್ನ ರಾಜ್ಯಪಾಲರನ್ನು ಪಡೆದು, ಪ್ರಜಾಸತ್ತೆಯಲ್ಲಿ ಉಳಿದ ರಾಜ್ಯಗಳಿಗೆ ಹಿಂದೆ ಬೀಳದೆ ಸಮಾನತೆಯನ್ನು ಸಾಧಿಸಿದೆ. ಇನ್ನು ಕರ್ನಾಟಕ ಎಂದು ಹೆಸರಿಡುವ ವಿಚಾರದಲ್ಲಿ ಏನೋ ಒಂದು ತರಹದ ಒಳಿದು [illegible] ಕಿತ್ತಾಟ ನಡೆಯುತ್ತಿರುವಂತೆ ತೋರುತ್ತಿದೆ. ಆರ್ಷೇಯ ಕಾಲದಿಂದಲೂ, ಭೌಗೋಳಿಕವಾಗಿ ಬೇರೆ ಬೇರೆ ಹೆಸರಿದ್ದ ಬಹು ರಾಜ್ಯಗಳಲ್ಲಿ ಹಂಚಿ ಹೋಗಿದ್ದಾಗಲೂ, ಯಾವ ಪ್ರದೇಶವನ್ನು ಕವಿಗಳೂ ಸಾಹಿತಿಗಳೂ ಮತ ಪ್ರ[illegible] [illegible] ಮಹಾಜನರೂ ಇತಿಹಾಸಕಾರರೂ ವಿದೇಶೀಯ ಪ್ರವಾಸಿಗಳೂ ಕರ್ನಾಟಕ ಎಂದು ಕರೆದೂ ಕರೆದೂ ಅದನ್ನೊಂದು [illegible]ವನ್ನಾಗಿ

ನೂಡಿ, ಅದಕ್ಕೆ ಶಕ್ತಿ ನೀಡಿದ್ಯಾರೆಯೊ ಆ ಪ್ರದೇಶಕ್ಕೆ ಕರ್ನಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯದ ಸ್ಪರ್ಧಾಭಾವದಿಂದಲ್ಲದೆ, ಸಾಂಸ್ಕೃತಿಕವಾದ ಮೈತ್ರಿಯಿಂದಲೂ ಸರ್ವಸಂತೋಷದಿಂದ ಸರ್ವಸಮ್ಮತವಾಗಿ ಏಕಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ*.

ಪದ್ಮಭೂಷಣ ಡಾ|| ಕುವೆಂಪುರವರಿಗೆ ಕನ್ನಡ ಅಥವಾ ಕರ್ನಾಟಕ ವೆಂಬುದು ಕೇವಲ ನಿರ್ಜೀವ ಪದಗಳಾಗಿ, ಸಪ್ಪೆ ಮಾತುಗಳಾಗಿ ತೋರುವುದೂ ತಿಳಿಯುವುದೂ ಸಾಧ್ಯವಿಲ್ಲ. ಈ ವಿಚಾರವಾಗಿ ಅವರ ಅಭಿಪ್ರಾಯ ಹೀಗೆ ವ್ಯಕ್ತ ಪಟ್ಟಿದೆ:

ಕರ್ನಾಟಕ ಎಂಬುದೇನು
  ಹೆಸರೆ ಬರಿಯ ಮಣ್ಣಿಗೆ?

ಮಂತ್ರಕಣಾ! ಶಕ್ತಿಕಣಾ!
ತಾಯಿಕಣಾ! ದೇವಿಕಣಾ!
ಬೆಂಕಿಕಣಾ! ಸಿಡಿಲುಕಣಾ!
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿಕಣಾ
  ಋಷಿಯ ಕಾಣ್ಬ ಕಣ್ಣಿಗೆ!
ವಿರೋಧಿಗಾಸ್ಫೋಟಕ,
  ಕಂಡ ಕವಿಗಖಂಡ ದೇವಿಕಣಾ ಕರ್ನಾಟಕ!
ಸರಸ್ವತಿಯೇ ರಚಿಸಿದೊಂದು ರಾಜಕೀಯ ತ್ರೋಟಕ!

ಭಾರತಕ್ಕೆ ಸ್ವಾತಂತ್ರ್ಯವನ್ನು ತಂದಿತ್ತ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ, ನಮ್ಮನಾಡಿನ ಮೊಟ್ಟಮೊದಲ ರಾಷ್ಟ್ರಾಧ್ಯಕ್ಷ ಡಾ|| ಬಾಬು ರಾಜೇಂದ್ರಪ್ರಸಾದರು, ಮಹಾಮೇಧಾವಿ ರಾಜಕಾರಣದ ಮುತ್ಸದ್ಧಿ ರಾಮಮನೋಹರ ಲೋಹಿಯಾ, ಭಾರತದ ಏಕೈಕ ನೊಬೆಲ್ ಪಾರಿತೋಷಕ ಸಾಹಿತಿ ರವೀಂದ್ರನಾಥ ಠಾಗೋರರು ಹಿರಿಯ ಕಾದಂಬರಿಕಾರ ಬಂಕಿಮ ಚಂದ್ರರು, ಡಾ|| ಅಮರನಾಥ ಝಾ, ಬ್ರಿಟಿಷ ಸರಕಾರವೇ ನಿಯಮಿಸಿದ್ದ ಸ್ಯಾಡ್ಲರ್ ಮತ್ತು ಹಾರ್ಟೊಗ್ ಸಮಿತಿಗಳು, ಸರ ಸಾರ್ಜಂಟ್, ಸರ್ ಚಾರ್ಲ್ಸ್ ಮುಂತಾದ ಹೊರದೇಶದ ಶಿಕ್ಷಣ ತಜ್ಞರು, ಡಾ ರಾಧಾಕೃಷ್ಣನ್, ಡಾ|| ಕೊಠಾರಿ. ಡಾ|| ಕುವೆಂಪು, ಡಾ|| ತ್ರಿಗುಣಸೇನ್, ಉಪಕುಲ ಪತಿ ಶ್ರೀ ಮಾಲಿ—ಮುಂತಾದವರು ದೇಶಭಾಷೆಗಳಿಗೆ ಅಗ್ರತಾಂಬೂಲವಿತ್ತಿದ್ದಾರೆ

ಕುವೆಂಪುರವರು. ಜಗತ್ತಿನ ಎಲ್ಲ ಕ್ಷೇತ್ರದ ತತ್ತ್ವದಂತೆ, ವಿದ್ಯಾಭ್ಯಾಸವೇನಿದ್ದರೂ ಮಾತೃಭಾಷೆಯ ಮೂಲಕವೇ ಆಗಬೇಕೆಂದು ಪ್ರತಿಪಾದಿಸಿರುವುದು ತುಂಬ ಸ್ಪಷ್ಟತರರೂಪದಲ್ಲಿದೆ. ಅವರು ಇದಕ್ಕೆ ಕೊಡುವ ಕಾರಣಗಳು ಮುಖ್ಯವಾಗಿ ನಾಲ್ಕು:

೧. ವಿದ್ಯೆ ಪರಭಾಷೆಯ ಮೂಲಕ ಸರಿಯಾಗಿ ಹತ್ತುವುದಿಲ್ಲ. ಅದರ ಫಲವಾಗಿಯೇ ನಮ್ಮ ವಿದ್ಯಾಭ್ಯಾಸದ ಮಟ್ಟ ಪಾತಾಳಕ್ಕೆ ಇಳಿದಿರುವುದು. ವಿದ್ಯಾಭ್ಯಾಸಕ್ಕೆ, ಅದು ಪರಭಾಷಾ ಮಾಧ್ಯಮದಲ್ಲಿರುವುದರಿಂದ, ಸುರಿಯುತ್ತಿರುವ ಕೋಟಿಗಟ್ಟಲೆ ರೂಪಾಯಿ ಸಮುದ್ರಕ್ಕೆ ಸುರಿದಂತಾಗಿದೆ.

೨. ಅನೈಸರ್ಗಿಕವಾದ ಪ್ರಭಾವಕ್ಕೆ ಸಿಕ್ಕಿದ ರೋಗಿಗಳಂತೆ ವಿದ್ಯಾರ್ಥಿಗಳು ಉಪಾಧ್ಯಾಯರಿಂದಲೂ ಕೈಪಿಡಿಗಳಿಂದಲೂ ಹರಿಯುತ್ತಿರುವ ಇಂಗ್ಲಿಷನ್ನು ಅಸಕ್ತರಾಗಿ, ಅಸಹಾಯರಾಗಿ ಕೇಳುತ್ತಾ ಕುಳಿತಿರುತ್ತಾರೆ. ಅದರಿಂದ ಬೇಸಿಹೋಗಿರುವ ವಿದ್ಯಾರ್ಥಿಗಳು ಸ್ವಲ್ಪ ಅವಕಾಶ ಸಿಕ್ಕಿದರೂ ಶಾಂತಿಭಂಗಕ್ಕೆ ಆರಂಭಿಸುತ್ತಾರೆ. ಹಿನ್ನೆಲೆ ಸರಿಯಾಗಿ ತಿಳಿಯದೆ ಅಶಿಸ್ತು ಎಂದು ಅದನ್ನು ಕರೆಯುವರು.

೩. ಮುಖ್ಯವಾದ ವಿಚಾರ ಇನ್ನೊಂದಿದೆ. ಪ್ರಪಂಚದ ಯಾವುದೇ ಮುಂದುವರಿದ ನಾಗರಿಕ ರಾಷ್ಟ್ರದಲ್ಲಿಯೂ ಪರಭಾಷೆಯ ಮೂಲಕ ವಿದ್ಯೆಗಳಿಸುವ ದುಸ್ಥಿತಿಯಿಲ್ಲ.

೪. ಇಂಗ್ಲಿಷ್ ಬಲಾತ್ಕಾರದ ಭಾಷೆ. ಉಳಿದ ವಿಷಯಗಳಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವ ಬುದ್ಧಿವಂತ ವಿದ್ಯಾರ್ಥಿಗೂ ಇಂಗ್ಲಿಷಿನಲ್ಲಿ ಕಡಮೆ ಅಂಕಗಳು — ಈ ಗುಂಡನ್ನು ಕೊರಳಿಗೆ ಕಟ್ಟಿಕೊಂಡ ವಿದ್ಯಾರ್ಥಿ ಈಜಲಾರ. ಮುಳುಗದೆ ಉಳಿದರೇ ಅವನ ಪುಣ್ಯ, ಆಂಗ್ಲ ಕವಿಗಳ ಕವಿಕಾವ್ಯ ಪ್ರತಿಭೆಯನ್ನು ಇಂಗ್ಲಿಷಿನಲ್ಲಿ ವಿವರಿಸಲಾಗದೆ ಅದೆಷ್ಟು ಜನ ಪ್ರತಿಭಾವಂತ ವಿದ್ಯಾರ್ಥಿಗಳು ಅಜ್ಞಾತರಾಗಿ ಅಪಮಾನಿತರಾಗಿ ಬಾಳನ್ನು ನೂಕುತ್ತಿದ್ದಾರೊ, ಅದರ ಲೆಕ್ಕ ಯಾರಿಗೆ ಗೊತ್ತು ?

ಹೀಗೆ ಖಚಿತವಾದ ಪ್ರಾಮಾಣಿಕವಾದ ಸಬಲ ಸಾಕ್ಷ್ಯಗಳನ್ನು ಕೊಟ್ಟು ಕುವೆಂಪುರವರು ಭಾಷಾಮಾಧ್ಯಮವು ಕನ್ನಡ ಅಥವಾ ಪ್ರಾಂತಭಾಷೆಗಳು ಆಗುವುದ

ಶಿಕ್ಷಣದ ಯಶಸ್ಸಿಗೆ ಸುಭದ್ರ ಬುನಾದಿಯಾಗುತ್ತದೆಂದು ತಿಳಿಸಿದ್ದಾರೆ. ಆದ ಇದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಅಡ್ಡಿಯೊಡ್ಡುವ ಗುಂಪಿನಲ್ಲಿ ದಡ್ಡರೂ, ಸ್ವಾರ್ಥಿಗಳೂ, ಸಂಕುಚಿತ ಮನೋಭಾವದವರೂ, ದೀರ್ಘಾಲೋಚನೆ ಮಾಡಲಿಚ್ಛಿಸದ ಬುದ್ಧಿವಂತರೂ ಇದ್ದಾರೆ. ಇವರು ಇನ್ನೆಂಥವರು ?

೧. ಇಂಗ್ಲಿಷ್ ಕಲಿಕೆಯ ಮೇಲೆ ತಮ್ಮ ಗೌರವ ಪ್ರತಿಷ್ಠೆ ನಿಂತಿದೆಯೆಂದು ತಿಳಿಯುವ ಜನ ಕೆಲವರು.
೨. ಇಂಗ್ಲಿಷ್ ಭಾಷೆಯನ್ನು, ಕೇವಲ ತಮ್ಮ ಹೊಟ್ಟೆ ಹೊರೆಯುವ ದಕ್ಕಾಗಿ, ಅವಲಂಬಿಸಿರುವ ಜನ ಹಾಗೂ ಪತ್ರಿಕೆಗಳು ಕೆಲವು.
೩. ಬೇರೆಬೇರೆ ಪ್ರಾಂತಗಳ ಕಾಳಸಂತೆಕೋರರಿಂದ ಹಾಗೂ ಅಕ್ರಮ ಶ್ರೀಮಂತರಿಂದ ಹೆಚ್ಚಿನ ಹಣಪಡೆದು ಅರಿವನ್ನು ಮಾರುತ್ತಿರುವ ವಿದ್ಯಾಲಯಗಳು ಕೆಲವು.
೪. ಒಕ್ಕಲಿನ, ಬಡವರ ಮಕ್ಕಳೂ ದೇಶಭಾಷೆಯ ಮೂಲಕ ವಿದ್ಯೆಯನ್ನು ಪಡೆದು ಎಲ್ಲಿ ತಮ್ಮ ವಿಶಿಷ್ಟ ಲಾಭದಾಯಕ ಆಯಕಟ್ಟಿನ ಸ್ಥಾನ ಮಾನಗಳನ್ನು ಸ್ಪರ್ಧಿಸಿ ಪಡೆಯುವರೋ ಎಂದು ಕಳವಳಗೊಂಡ ಸ್ವಾರ್ಥಹಿತಾಸಕ್ತ ಜನ ಕೆಲವರು.

ಇದನ್ನೆಲ್ಲ ಚೆನ್ನಾಗಿ ಗಮನಿಸಿ, ಬಹುವಾಗಿ ಪರ್ಯಾಲೋಚಿಸಿ ಕುವೆಂಪುರವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ ಕನ್ನಡ ಮಾಧ್ಯಮ ವನ್ನು ಕಾಲೇಜಿನ ಹಂತದಲ್ಲೂ ಪ್ರಾರಂಭಿಸಿದ್ದು. ಹಾಗಾದರೆ ಕುವೆಂಪುರವರು ಕನ್ನಡದ ಕೂಪಮಂಡೂಕವೆ ?—ಎಂದು ಯಾರಾದರೂ ಕೇಳಬಹುದು. ಅಂಥ ವರಿಗೆ ಕುವೆಂಪುರವರ ಹೃದಯ ಅರ್ಥವಾಗಿಲ್ಲವೆಂದು ಹೇಳಬಹುದು. ಕುವೆಂಪು ರವರು ಮಹಾದೇಶಭಕ್ತರು, ಭಾಷಾಪ್ರೇಮದಷ್ಟೇ ದೇಶಪ್ರೇಮವೂ ಅವರಲ್ಲಿದೆ. ಆದಕ್ಕೆ ಈ ಪದ್ಯಗಳೇ ಸಾಕ್ಷಿ:

ಭರತಖಂಡದ ಹಿತವೆ ನನ್ನ ಹಿತ ಎಂದು
ಭರತಮಾತೆಯ ಮತವೆ ನನ್ನಮತ ಎಂದು
ಭಾರತಾಂಬೆಯ ಸುತರೆ ಸೋದರರು ಎಂದು
ಭಾರತಾಂಬೆಯ ಮುಕ್ತಿ, ಮುಕ್ತಿ ನನಗೆಂದು
ನುಗ್ಗು ಮುಂದಕೆ ಧೀರ, ಕಾಳೆಗದ ಕೊಲೆಗೆ
ನುಗ್ಗು ಮರಣಕೆ ವೀರ, ಸಗ್ಗದಾ ನೆಲೆಗೆ !

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು, ಪೂಜಿಸುವ ಬಾರ!

ಕುವೆಂಪುರವರೇ ಒಂದುಕಡೆ ಇದರ ಬಗೆಗೆ ಹೀಗೆ ನಿಚ್ಚಳವಾಗಿ ನುಡಿದು ಬಿಟ್ಟಿದ್ದಾರೆ: "ನಾನು ರಾಜ್ಯದ ದೃಷ್ಟಿಯಿಂದ ಕರ್ನಾಟಕದವನು. ಭಾಷಾ ದೃಷ್ಟಿಯಿಂದ ಕನ್ನಡಿಗ. ಆದರೆ ಸಂಸ್ಕೃತಿಯ ದೃಷ್ಟಿಯಲ್ಲಿ ಮತ್ತು ರಾಷ್ಟ್ರ ದೃಷ್ಟಿಯಿಂದ ಭಾರತೀಯನು. ನನ್ನ ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದಿಗೂ ಎದುರು ನಿಲ್ಲುವುದಿಲ್ಲ. ಕರ್ನಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುತ್ತದೆ. ಭಾರತಿಯೆ ತಾಯಿ, ಕರ್ನಾಟಕ ಅವಳ ಮಗಳು. ಭಾರತಕ್ಕೆ ತೊಂದರೆಯಾದರೆ ಕರ್ನಾಟಕಕ್ಕೂ ಆ ಹಿಂಸೆ ತಪ್ಪಿದ್ದಲ್ಲ. ಕರ್ನಾಟಕಕ್ಕೆ ಕೇಡಾದರೆ ಭಾರತ ಸಹಿಸದು. ಪರಸ್ಪರ ಪ್ರೇಮರಕ್ಷಣೆಯಿರುತ್ತದೆ. ಇದನ್ನೇ ಕವಿ 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ಹಾಡಿರುವುದು. ಕರ್ನಾಟಕದ ಬಗ್ಗೆ ಹೇಳುವುದಾದರೆ ಇದಕ್ಕೆ ತನ್ನದೇ ಆದ ಪ್ರತ್ಯೇಕ ಅಸ್ತಿತ್ವವಿಲ್ಲ. ಆದ್ದರಿಂದ ಭಾಷಾನುಗುಣ ರಾಜ್ಯರಚನೆಯಿಂದ ಭಾರತ ರಾಷ್ಟ್ರದ ಸಮಗ್ರತೆಗೆ ಭಂಗ ಬರುತ್ತದೆ ಎಂಬುದು ಭ್ರಾಂತಿಯ ಮಾತು. ರಚಿತವಾಗಿರುವ ಭಾಷಾ ರಾಜ್ಯಗಳನ್ನು ನಿರ್ಮೂಲಮಾಡಿ, ಭಾವೈಕ್ಯತೆಯನ್ನು ಸಾಧಿಸುತ್ತೇವೆ ಎನ್ನುವವರು ರಾಷ್ಟ್ರಪ್ರೇಮವನ್ನು ಹಾಳುಗೆಡವುತ್ತಿರುವುದರಲ್ಲಿ ಸಂದೇಹವಿಲ್ಲ".

ಆದುದರಿಂದ ದೇಶಪ್ರೇಮಕ್ಕೆ ಭಾಷಾಪ್ರೇಮ ಪೂರಕವೇ ಹೊರತು ವಿರೋಧವಲ್ಲ. ಇಂದು ನಾವು ಮೊದಲು ಕನ್ನಡದ ಕಂದಮ್ಮಗಳನ್ನು ಕಾನ್ವೆಂಟ್ ಕೂಸುಗಳನ್ನಾಗಿ ಮಾಡದೆ ಕನ್ನಡಮ್ಮನ ಮಕ್ಕಳಾಗಿ ಬೆಳಸಬೇಕು. ಎಂದಿಗಿಂತಲೂ ಇದರ ಅಗತ್ಯ ಇಂದು ತುಂಬ ಬೇಕಾಗಿದೆ:

ಕನ್ನಡಕ್ಕಾಗಿ ಕೈಯೆತ್ತು; ನಿನ್ನಕೈ
  ಕಲ್ಪವೃಕ್ಷವಾಗುತ್ತದೆ!
ಕನ್ನಡಕ್ಕಾಗಿ ಕೊರಳೆತ್ತು; ಅಲ್ಲಿ ಪಾಂಚಜನ್ಯ
  ಮೂಡುತ್ತದೆ!
ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು
ಇಂದು ಅದೇ ಗೋವರ್ಧನ
  ಗಿರಿಧಾರಿಯಾಗುತ್ತದೆ.

ಭಾರತದಲ್ಲಿ ಭಾಷಾವಾರು ಪ್ರಾಂತರಚನೆಯಾಗಿರುವುದು ಪರಸ್ಪರ ತಿಕ್ಕಾಟ ಕಾದಾಟ ಘರ್ಷಣೆಗೆ ಕಾರಣವೆಂಬುದನ್ನು ರಸಋಷಿ ಕುವೆಂಪುರವರು ಒಪ್ಪುವುದಿಲ್ಲ.

ಪರಸ್ಪರ ಹಂದಿಕ್ಕಿ ತಮಾಷೆ ನೋಡುವ, ರಾಜಕೀಯ ಧುರೀಣರ - ಹೀಗೆ ಇತರ ಹೊರಗಿನ ಕಾರಣಗಳಿಂದ ಆ ಗದ್ದಲ ಗಲಾಟೆಗಳು ನಡೆಯಬಹುದೇ ಹೊರತು ಈ ಭಾಷೆ ಅದಕ್ಕೆ ಮೂಲಕಾರಣವಾಗಿಲ್ಲ. ಈ ವಿಷಯವನ್ನು ಕುವೆಂಪುರವರು ಸ್ಪಷ್ಟವಾಗಿ ಸಾರಿದ್ದಾರೆ: "ಕೊಳಲಿಗೆ ಅನೇಕ ಕಣ್ಣುಗಳಿರುವಂತೆ ಭಾರತಿಗೆ ಬಹುಜಿಹ್ವೆಗಳಿವೆ. ಪೀಪಿ ಊದುವ ಹುಡುಗನಿಗೆ ಕೊಳಲಿಗೆ ಅನೇಕ ರಂಧ್ರಗಳಿರುವುದು ತೊಂದರೆಯ ವಿಷಯವಾಗುತ್ತದೆ; ಆದರೆ ವೇಣುವಾದನ ನಿಪುಣನಿಗೆ ಆ ರಂಧ್ರಗತ ಅನೇಕತೆಯೇ ಸಂಗೀತದ ಸ್ವರ ಮೇಳ ಮಾಧುರ್ಯಕ್ಕೆ ಅವಶ್ಯ ಸಾಧ್ಯವಾಗುತ್ತದೆ. ಸ್ವಾತಂತ್ರ್ಯನಂತರ ಭಾರತದಲ್ಲಿ ಭಾಷಾನುಗುಣ ರಾಜ್ಯಗಳ ರಚನೆಯಾಗಿರುವುದು ಕೆಲವು ಅರೋಚಿ ಭೀರುಗಳಿಗೆ ರುಚಿಸುತ್ತಿಲ್ಲ. ಹಿಡಿಸುತ್ತಿಲ್ಲ; ಕೆಲವರಂತೂ ದಿಗಿಲುಗೊಂಡಿದ್ದಾರೆ. ಹೋರಾಡಿ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಸ್ವಭಾಷಾಪ್ರೇಮದ ಅತಿರೇಕದಿಂದ ಉಂಟಾಗಬಹುದಾದ ಅನೈಕ್ಯತೆ ಎಲ್ಲಿ ಧಕ್ಕೆ ತರುತ್ತದೆಯೋ ಎಂದು ಹೆದರಿದ್ದಾರೆ. ಅಂಥವರಿಗಿರುವ ಭಯವನ್ನು ಸಂಪೂರ್ಣ ಹೋಗಲಾಡಿಸುತ್ತದೆ ಜ್ಞಾನಪೀಠದ ಇಂದಿನ ಸಮಾರಂಭ".

ಕಡೆಯದಾಗಿ ಕನ್ನಡಿಗರಿಗೆ ಕುವೆಂಪು ಕೊಟ್ಟ ಕರೆಯನ್ನು ಹೇಳುತ್ತಾ ಈ ಲೇಖನವನ್ನು ಮುಗಿಸಬಹುದು :

ಎಲ್ಲಾದರು ಇರು; ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡಗೋವಿನ ಓ ಮುದ್ದಿನ ಕರು
ಕನ್ನಡ ತನವೊಂದಿದ್ದರೆ ನೀನಮ್ಮಗೆ ಕಲ್ಪತರು !

ನೀ ಮೆಟ್ಟುವ ನೆಲ - ಅದೆ ಕರ್ನಾಟಕ
ನೀನೇರುವ ಮಲೆ - ಸಹ್ಯಾದ್ರಿ
ನೀ ಮುಟ್ಟುವ ಮರ - ಶ್ರೀಗಂಧದಮರ
ನೀ ಕುಡಿಯುವ ನೀರ್ - ಕಾವೇರಿ
ಎಲ್ಲಿದ್ದರೆ ಏನ್ ? ಎಂತಿದ್ದರೆ ಏನ್ ?
ಎಂದೆಂದಿಗು ತಾನ್ - ಕನ್ನಡವೇ ಸತ್ಯ !
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯಾ !

ಹರಕೆ

★

ಕರುನಾಡಿನಾ ಜೀವನಾಡಿ ಮಲೆನಾಡಿನಲಿ-
ಅರಳಿದೀ ಪುಷ್ಪದಾ ಕಾವ್ಯಮಯ ಸೌರಭವು-
ಧರೆಯಗಲ ಬೀರಿ ತಾ ಹಿರಿದಾಗಿ ಬಾಳುತಿದೆ;
ಅಮೃತ ಕಿರಣಗ ಚೆಲ್ಲುವೀ ಹೂವು ; ಅದೇ....ಕುವೆಂಪು!

ಕನ್ನಾಡ ಮನೆಮನೆಲಿ ಮನಮನದಿ ಹೊತ್ತಿಸಿದ
ಹೊನ್ನ ಜ್ಯೋತಿಯ ಸಿರಿಯು ಕನ್ನಡದ ದೀವಿಗೆಗೆ-
ತನ್ನ ಸಿರ ಘೃತವೆರೆದು ಬೆಳಕನೂರ್ಮಡಿಗೊಳಿಸಿ-
ತಾನಿತ್ತನೊಂದು ಹೊಸತನವ ರಸ ಋಷಿ ಕುವೆಂಪು||

ಶತ ವರುಷ ಬಾಳು ನೀ ಕನ್ನಡದ ಕುಲದೀಪ-
ಪಥದೋರಿ ಮುನ್ನಡೆಸು ಕನ್ನಾಡ ಮಣಿದೀಪ-
ಉತ್ತುಂಗ ಶಿಖರಕೇರಲಿ ನಿನ್ನ ಕೀರ್ತಿ ಪತಾಕೆ-
ಸತತ ಹರಕೆಯು ನಿನಗೆ ಸೋದರ ಕುವೆಂಪು ||

—ತಿರುಳ.

ಮಹಾಕವಿ ಕುವೆಂಪುರವರ ಧರ್ಮಪತ್ನಿ
ಹೇಮಾವತಿ ಕುವೆಂಪು

ಶ್ರೀಮತಿ ಕಮಲಾ ಹಂಪನಾ., ಎಂ. ಎ.

—○—

'ಬಾ ಬಾರ ಸಖಿ'

ಸಂಸಾರಿಯಾಗಬೇಕೆಂದಿದ್ದ ಕವಿ ಕುವೆಂಪುರವರು "ಸಂಸಾರಿಯನು ಸಲಹು ನೀನು! ಆಶೀರ್ವದಿಸು ನಮ್ಮೀರ್ವರೆದೆಗಳೊಂದಾಗುವಂತೆ" ಎಂದು ಗುರುದೇವನನ್ನು ಭಕ್ತಿಯಿಂದ ಪ್ರಾರ್ಥಿಸಿದರು. ಅವರ ಪ್ರಾರ್ಥನೆ ಈಡೇರಿತು. ಸಮಾನ ಹೃದಯಿಗಳು ಒಂದಾದವು. "ನಾನಿನಗೆ ನೀನೆನಗೆ ಜೇನಾಗುವ"...... "ಬಾ ಬಾರಾ ಸಖಿ" ಎಂದು ದಾಂಪತ್ಯ ಜೀವನಕ್ಕೆ ತಮ್ಮ ಮುದ್ದು ಮಡದಿ ಹೇಮಾವತಿಯನ್ನು ಪ್ರೀತಿಯಿಂದ ಸ್ವಾಗತಿಸಿದರು.

ರಾಷ್ಟ್ರಕವಿ ಕುವೆಂಪುರವರನ್ನು ನಾನು ಕಂಡು "ನಿಮ್ಮ ದಾಂಪತ್ಯಜೀವನದಲ್ಲಿ ಸಾಹಿತ್ಯ ಸೇವೆಯಲ್ಲಿ ನಿಮ್ಮ ಸಹಧರ್ಮಿಣಿಯ ಸಹಾಯವೇನು?" ಎಂದು ಕೇಳಿದಾಗ ಕವಿಗಳು ಮುಗುಳ್ನಗೆ ನಕ್ಕು "ನನ್ನ ಐದು ಪ್ರಣಯಗೀತೆಗಳಲ್ಲಿ ನನ್ನ ಮಡದಿಯ ಬಗ್ಗೆ, ನನ್ನ ಸಂಸಾರದ ಬಗ್ಗೆ ಎಲ್ಲವನ್ನೂ ತಿಳಿಸಿದ್ದೇನೆ. ಅವೇ ನಿಮ್ಮ ಪ್ರಶ್ನೆಗೆ ಸಾಕಷ್ಟು ವಿಷಯಗಳನ್ನು ಒದಗಿಸಿಕೊಡುತ್ತವೆ." ಎಂದು ಹೇಳಿದ್ದಲ್ಲದೆ "ಜೇನಾಗುವಾ, ಚಂದ್ರಮಂಚಕೆ ಬಾ ಚಕೋರಿ ಮತ್ತು ಅನುತ್ತರಾ"—ಈ ಕವನ ಸಂಕಲನಗಳನ್ನು ನನಗೆ ಕೊಟ್ಟು "ವಯಸ್ಸಿಗೆ, ಅನುಭವಕ್ಕೆ ತಕ್ಕಂತೆ ಒಂದು ಸಂಕಲನಕ್ಕೂ ಮತ್ತೊಂದು ಸಂಕಲನಕ್ಕೂ ಅಂತರವಿದೆ" ಎಂದು ತಿಳಿಸಿದರು. ತನ್ನ ಸಂಸಾರದ ಬಗೆಗೆ, ಮಡದಿ ಹಾಗೂ ಮಕ್ಕಳ ಬಗೆಗೆ ಇಷ್ಟು ವಿವರವಾಗಿ ಇಷ್ಟೊಂದು ಕವನಗಳನ್ನು ಬರೆದಿರುವ ಕವಿ ಕುವೆಂಪುವಲ್ಲದೆ ಮತ್ತಾವ ಕವಿಯೂ ಸಿಗಲಾರ. ದಾಂಪತ್ಯ ಜೀವನದ, ಸಾಂಸಾರಿಕ ವಿಷಯಗಳ ಎಲ್ಲ ಅನುಭವಗಳು ಅತ್ಯಂತ ಮಧುರವಾಗಿ, ಕೋಮಲವಾಗಿ, ಹಿತಮಿತವಾಗಿ, ಸುಂದರವಾಗಿ ಒಂದೊಂದು ಕವನದಲ್ಲೂ ಒಡಮೂಡಿ ನಿಂತಿವೆ.

ಹೇಮಾವತಿಯವರು ಬಳಿಯಲ್ಲಿ ಇಲ್ಲದ ಕವಿಗೆ "ನೀನು ಬಳಿಯಿಲ್ಲದಿರೆ, ಓ, ನಲ್ಲೆ ಹೇಮಸಾಕ್ಷಿ, ಜಗವೆಲ್ಲ ಜಡಬಂತೆ, ಜೀವರಸ ಬೀಡು!" ಎನ್ನಿಸಿದೆ. ಈ ವಿರಹದ ಜೊತೆಯಲ್ಲಿಯೇ ಅವರ ಪತ್ನೀ ಪ್ರೇಮದ ಆಳದ ಅರಿವು ನಮಗಾಗುತ್ತದೆ.

ಹೇಮಾಂಗಿನಿ—ಪ್ರೇಮಸತಿ
ಮನು ಜೀವನ ಮಧುರತಿ
ಬಾರೆ, ಸೀರೆ, ಕಲಾವಿದನ ಕನ್ಯರಂಗದಿ
ಒಲಿನ, ಉಲಿನ, ನಲಿನ,
ಬದಲಿ ವಿಸ್ಮೃತಿಯಾ ರಸಸ್ಮೃತಿ
ಕೇಲಾಡಲಿ ತ್ರೈಭುವನಂ
ರಸ ತರಂಗದಿ."

ಒಂದು ಕ್ಷಣ ಹೇಮಾವತಿ ಕಣ್ಮರೆಯಾದರೆ ಕವಿಯ ಹೃದಯ ಅವರ ಸಾಮೀಪ್ಯ ಸಾಕ್ಷಾತ್ಕಾರಕ್ಕಾಗಿ ಮೊರೆಯಿಡುತ್ತದೆ. ಕುವೆಂಪುರವರಿಗೆ ತನ್ನ ಪತ್ನಿಯನ್ನು ಎಂಥ ಮೃದುತರ ಹೆಸರಿನಿಂದ ಹೆಸರಿಸಿದರೂ ತೃಪ್ತಿಯಾಗದು. ರಾಷ್ಟ್ರಕವಿ ಕುವೆಂಪುರವರ ಶಬ್ದ ಭಂಡಾರವೂ ಒಮ್ಮೊಮ್ಮೆ ಶ್ರೀಮತಿಯವರನ್ನು ವರ್ಣಿಸಲು ಅಸಾಧ್ಯವಾಗುತ್ತದೆ ಎಂದರೆ ಅವರ ಪಾತ್ರದ ಹಿರಿಮೆ ಘನತೆ ನಮಗೆ ಅರಿವಾಗದೆ ಇರದು.

ಹೇಮಲತೆಯೇ ಎಲ್ಲ

ಶ್ರೀಮತಿಯವರ ನಡೆ, ನುಡಿಯಿಂದ ಕವಿ ಕುವೆಂಪುರವರನ್ನು ಜನ ತೂಕಮಾಡಿ ಅಳೆಯುತ್ತಾರಂತೆ. ಎಂದ ಮೇಲೆ ಶ್ರೀಮತಿಯವರ ವ್ಯಕ್ತಿತ್ವ ಕವಿಯ ಮೇಲೆ ಬೀರುವ ಪ್ರಭಾವದ ಪರಿಚಯವಾಗುತ್ತದೆ ಕವಿ ಕುವೆಂಪು ರವರ

ರವಿಯುದಯಕೆ, ಶಶಿಯುದಯಕೆ
ಹೂದಿಂಗಳುದಯಕೆ
ಕೃತಿಯ ಮಧುರಸದುದಯಕೆ,
ಹೇಮಲತೆಯೇ ಹೃದಯವಂತೆ !
ಕಲೆ, ಕೀರ್ತಿ, ಸಿರಿ
ಯೆಲ್ಲವೂ ಹೇಮಲತೆ ಇಲ್ಲದಿಲ್ಲ
ಹೇಮಲತೆಯೇ ಎಲ್ಲ.

ಕವಿಯ ಎಲ್ಲ ಅನುಭವಕ್ಕೂ ಆ ಅನುಭವಗಳ ಆವಿರ್ಭಾವಕ್ಕೂ ಚೈತನ್ಯ ಶಕ್ತಿಯಂತಿದ್ದಾರೆ ಹೇಮಲತೆಯವರು. ಕವಿಯ ಹೃದಯ, ವಿರಹ ವ್ಯಥೆಯನ್ನು ತಡೆಯಲಾರದೆ ಹೀಗೆ ಮೊರೆಯಿಟ್ಟಿದೆ:

ಹೇಮಲತೆ, ಪ್ರೇಮಲಕ್ಷ್ಮಿ
ನನ್ನ ಪಂಚಪ್ರಾಣ ಲಕ್ಷ್ಮಿ
ಗಾಳಿ ನೀನೆ, ಬೆಳಕು ನೀನೆ

ಉಲ್ಲಾಸದ ಉಸಿರು ನೀನೆ
ನನಗೆ ಮನೆಗೆ ಎಲ್ಲ ನೀನೆ !
ನೀನೆ ಕವಿಗೆ ಹೃದಯ ಭಾವ
ವೀಣಾತ್ಮಕೆ ರಸದ ಜೀವ !
ಗೃಹಿಣಿ, ನೀನೆ ಗೃಹದ ದೇವಿ
ನೀನು ದೂರ ಹೋದರೆ
ಮನಸಿದೊಂದು ಹಾಳು ಬಾವಿ
ಗೃಹವಿದು "ಮನೆ" ಎಂಬರೆ ?
ತಪ್ಪಲು ಗೃಹಲಕ್ಷ್ಮಿಯ ಜೊತೆ
ಒಪ್ಪಿದ ಮನೆಯು ವಿರಹ ಚಿತೆ.

ಕವಿಗೆ ಅಂದವಾಗಿದ್ದುದೆಲ್ಲಾ, ಪ್ರಿಯವಾಗಿದ್ದುದೆಲ್ಲಾ ಪ್ರಿಯತಮೆಯ ವಿರಹದಿಂದ ಅಸಹ್ಯವಾಗಿವೆ. ನೋವು ಅಸನಾಗಿದೆ. ಕುವೆಂಪುರವರಿಗೆ ಸರ್ವಸ್ವವೂ ಪತ್ನಿಯಲ್ಲಿ ಮನೆ ಮಾಡಿಕೊಂಡಿದೆ. ಆಕೆ ಸರ್ವಸ್ವರೂಪಿಣಿಯಾಗಿ, ಮಂಗಳಪ್ರದೆಯಾಗಿದ್ದಾರೆ.

ಸತಿಯನ್ನು ಎಲ್ಲ ಪುರುಷರೂ ಹೊಗಳುವಂತೆ! "ಸತಿ ಎನ್ನುವ ಮಮತೆಯಲ್ಲಿ ನುಡಿಸಿಲ್ಲ, ಪತಿಯ ಮೋಹದ ಅತಿಶಯೋಕ್ತಿ ಅಲ್ಲ, ಕವಿಯ ಅನುಭವದ ಮಾತು, "ನೀ ದೇವತಾ ವ್ಯಕ್ತಿ"

ಕಣ್ಣು ಕೋರೈಸುವ ಮಿಂಚಿನಂತಿಲ್ಲ. ಧ್ರುವತಾರೆಯಂತೆ! ನಿಃಸ್ವಾರ್ಥ ಹೇಮಾ ಸತಿಯೆ, ನೀನೆ ದೇವತೆಯೆನಗೆ."

—ಎಂದು ಪತ್ನಿಯನ್ನು ದೇವತೆಯನ್ನಾಗಿ ಕಂಡಿದ್ದಾರೆ.

ವಕ್ಷದ ವಾತ್ಸಲ್ಯ :

ಕುವೆಂಪುರವರಿಗೆ ದಾಂಪತ್ಯ ಎನ್ನುವುದು ಕೇವಲ ಗಂಡು, ಹೆಣ್ಣು ಕೂಡಿ ನಡೆಸುವ ಜೀವನ ಮಾತ್ರ ಎಂದು ತೋರದೆ ಅದೊಂದು ಅರ್ಥಗರ್ಭಿತವಾದ ಮಹಾ ತತ್ತ್ವವೆಂದು ಕಂಡಿದೆ ಮತ್ತು ಅವರ ಕೈ ಹಿಡಿದ ಮಡದಿ ಅವರ ಪಾಲಿಗೆ ಕೇವಲ ಮಡದಿ ಮಾತ್ರವಾಗಿರದೆ

"ಪ್ರೇಯಸಿ ? ಸಹಧರ್ಮಿಣಿ ? ಹೆಂಡತಿ,
ತಾಯಿ " ?
ಲೌಕಿಕ ಸಂಬಂಧಕೆ ಬಾಯಿ ತೊದಲಿತಂತೆ !

ಆಕೆ ತ್ರಿಜಗನ್ಮಾತೆಯ ವಕ್ಷದ ವಾತ್ಸಲ್ಯದಂತೆ ! ಕವಿಗಳಿಗೆ ಮಕ್ಕಳಲ್ಲಿ ಇರುವ ಮಮತೆ ತಾಯಿಯ ಹೃದಯದಂತೆ ವಾತ್ಸಲ್ಯ ತುಂಬಿ ಹರಿದಿದೆ. ಕವಿ ತಾಯಿಯಾಗಿ

ಮಕ್ಕಳನ್ನು ಕಂಡಿದ್ದಾರೆ. ತೇಜಸ್ವಿ ತನ್ನ ತಾಯಿಯ ಗರ್ಭವನ್ನು ಪ್ರವೇಶಿಸಿ ಜನಿಸಿದಾಗಲೂ ಕವಿ ಕುವೆಂಪು ಅವರಿಗೆ ಎಲ್ಲಿಲ್ಲದ ಸಡಗರ. ತನುಜಾತ ಆತ್ಮಜಾತ ನಾಗಿದ್ದಾನೆ. ಅವರಿಗೆ! ಮಗುವಿನೊಡನೆ ಮಗುವಾಗಿ ಕುಣಿದಿದ್ದಾರೆ ಸಂಭ್ರಮಿಸಿದ್ದಾರೆ. ಮನೆಯಲ್ಲಿ ಮಗು ಚೆಲ್ಲಿದ ಧೂಳು ರಂಗೋಲಿ ಆಗಿತ್ತು. ಹರಡುತ್ತಿದ್ದ ಕಸ ಆಗಿತ್ತು. ಜೀವರಸ! ಮಗುವಿಲ್ಲದ ಮನೆಯ ನೈರ್ಮಲ್ಯವೇ ಕವಿಗೆ ಅಸಹ್ಯವಾಯಿತು. ಇಂಥ ಮಕ್ಕಳನ್ನು ಹಡೆದುಕೊಟ್ಟ ಹೇಮಾವತಿ "ಕವಿಯ ಜೀವನಕೆ ಜೀವನಾ, ಸಂಜೀವನಾ" ಆಕೆಯಿಂದಲೇ ಕವಿ ಕುವೆಂಪುರವರಿಗೆ ಮೋಕ್ಷ, “ನಾ. ......ನು, ನಾ........ನು, ನಾ ....ನು. ಹೇ .... ಮಾ ....ಗಂ........ಡ” ಎಂದು ಹೇಳಿದಾಗ ಕವಿಗೆ ಸಗ್ಗದ ಬಾಗಿಲು ತೆರೆಯಿತಂತೆ. ವೈಸ್ ಛಾನ್ಸಲರ್, ರಾಷ್ಟ್ರಕವಿ ಕುವೆಂಪು–ಅವರಿಗೆ ಧರ್ಮಪತ್ನಿ ಹೇಮಾವತಿಯ ಶಿಫಾರಸಿನಿಂದ ಸಗ್ಗದಲ್ಲಿ ಪ್ರವೇಶ ಸಿಕ್ಕಿತೆಂಬ ಕವಿ ಕಲ್ಪನೆ ಅವರ ಪವಿತ್ರ ಪ್ರೀತಿಯ ದ್ಯೋತಕ. ಹೀಗೆ ಕವಿಯ ಜೀವನದ ನಾಡಿ ನಾಡಿಯಲ್ಲಿ ಜೀವಂತ ಶಕ್ತಿಯಂತೆ ಹರಿದು ಚೈತನ್ಯ ತುಂಬಿದ್ದಾರೆ ಶ್ರೀಮತಿ ಹೇಮಾವತಿ.

ದೇವಂಗಿಯ ಕನ್ಯೆ

ರಾಷ್ಟ್ರಕವಿಗೆ ಸ್ಫೂರ್ತಿದಾಯಿನಿಯಾಗಿ, ಮೋಕ್ಷ ಪ್ರದಾಯಿನಿಯಾಗಿ, ಚೈತನ್ಯ ಶಕ್ತಿಯಾಗಿ ಇರುವ ಹೇಮಾವತಿಯವರು ದೇವಂಗಿ ರಾಮಣ್ಣ ಹಾಗೂ ಸೀತಮ್ಮನವರ ಪುತ್ರಿ. ರಾಮಣ್ಣನವರು ಕ್ರಾಂತಿ ಪುರುಷರು, ದಯಾಳುಗಳು. ದೇವಂಗಿ ಸಣ್ಣ ಹಳ್ಳಿಯಾಗಿದ್ದು ಅಂದಿನ ದಿನದಲ್ಲಿ ಜನರಿಗೆ ಆಸ್ಪತ್ರೆಯ ಸೌಕರ್ಯ ವಾಗಲೀ, ಓದುವ ಆಸೆಯಿರುವ ಮಕ್ಕಳಿಗೆ ಶಾಲೆಯ ಅನುಕೂಲವಾಗಲೀ ಇರಲಿಲ್ಲ. ಅಂಥ ಸಮಯದಲ್ಲಿ ಕ್ರಿಶ್ಚಿಯನ್ ಫಾದರ್‌ಗಳ ಸಹಾಯದಿಂದ ಆ ಹಳ್ಳಿ ಯಲ್ಲಿ ಆಸ್ಪತ್ರೆ ಶಾಲೆಗಳನ್ನು ಮೊಟ್ಟ ಮೊದಲಿಗೆ ತೆಗಿಸಿ, ಪ್ರಾರಂಭಿಸಿದ ಕೀರ್ತಿ ರಾಮಣ್ಣನವರದು. ದೇವಂಗಿ ಮನೆತನದ ಹೆಣ್ಣು ಮಕ್ಕಳು ಸುಸಂಸ್ಕೃತ ಹೆಣ್ಣು ಮಕ್ಕಳು ನಯ, ವಿನಯ, ಸೌಜನ್ಯ, ರೂಪು, ಗುಣ ಎಲ್ಲದರಲ್ಲಿಯೂ! ಇಂಥ ಹೆಣ್ಣು ಮಕ್ಕಳಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ರಾಮಣ್ಣನವರು ಒದಗಿಸಿ ಕೊಟ್ಟರು. ಹೆಣ್ಣು ಮಕ್ಕಳಿಗೂ ಆತ್ಮವಿದೆ. ವ್ಯಕ್ತಿತ್ವವಿದೆ. ಆದರೂ ವಿದ್ಯಾ ವಂತರಾಗಬೇಕು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ಯೋಚಿಸಿ ಅದನ್ನು ಕಾರ್ಯರೂಪಕ್ಕೆ ತಂದವರು ರಾಮಣ್ಣನವರು. ಬಾಲ ವಿಧವೆಯಾದ ತಮ್ಮ ತಮ್ಮನ ಮಗಳನ್ನು ಮೈಸೂರಿನಲ್ಲಿದ್ದ “Widows home” ನಲ್ಲಿ ಇರಿಸಿ, ಓದನ್ನು ಕಲಿ ಸಿದ ದೊಡ್ಡಪ್ಪ ಇವರು. 'ಹಿಂದೂ ಹೆಣ್ಣು ಮಕ್ಕಳು ಹೀಗೆ ಓದುವುದುಂಟೆ? ಅದರಲ್ಲಿಯೂ ವಿಧವೆ?' ಎಂದು ಪ್ರಶ್ನೆ ಕೇಳಿದವರುಂಟು. ಆದರೆ ಅಂಥ ಪ್ರಶ್ನೆಗಳಿಗೆ ಜಗ್ಗದ ಹೃದಯವನ್ನು ರಾಮಣ್ಣನವರದು ಮತ್ತು ಅವರು ಎಂದೂ ಹಳೆಯ

ಸಂಪ್ರದಾಯಗಳನ್ನೂ ಮೂಢ ನಂಬಿಕೆಗಳನ್ನೂ ಸ್ವಲ್ಪವೂ ನಂಬಿದವರಲ್ಲ. ಮಲೆ ನಾಡಿನ ಜನರಿಗೆ ದೆವ್ವಗಳಲ್ಲಿ ಬಲು ನಂಬಿಕೆ. ರಾಮಣ್ಣನವರು ಪ್ರಾಯಕ್ಕೆ ಬಂದಿದ್ದಂತೆ ಆ ಜನರ ಮೂಢನಂಬಿಕೆಗಳೆಲ್ಲಾ ಕೊಚ್ಚಿ ಹೋಗುವಂತೆ ಮಾಡಿ ದರು. ಇಂಥ ವೀರ ತಂದೆಯ ಮಗಳು ಹೇಮಾವತಿ. ಹದಿನಾಲ್ಕು ಜನ ಒಡ ಹುಟ್ಟಿದವರೊಡನೆ ಅವಿಭಕ್ತ ಕುಟುಂಬದಲ್ಲಿ ಹುಟ್ಟಿ ಬೆಳೆದ ಹೆಣ್ಣು ಮಗಳು ಇವರು. ಹೇಮಾವತಿಯವರು ಹುಟ್ಟಿದಾಗ ಕುವೆಂಪುರವರೇ ಆ ಮಗುವಿಗೆ ಹೇಮಾವತಿ ಎನ್ನುವ ಹೆಸರನ್ನು ಇಡಲು ಸೂಚಿಸಿದರಂತೆ. ರಾಮಣ್ಣನವರ ತಂಗಿ ಯನ್ನು ಕುವೆಂಪುರವರ ಚಿಕ್ಕಪ್ಪನವರಿಗೆ ಕೊಟ್ಟಿತ್ತಂತೆ, ಅವರ ತಂಗಿಯನ್ನು ರಾಮಣ್ಣನವರು ಮದುವೆ ಆಗಿದ್ದರಂತೆ, ಹೀಗಾಗಿ ಹೇಮಾವತಿ, ಕುವೆಂಪುರವರಿಗೆ ಸೋದರಿಕೆಯ ಸಂಬಂಧವಿದ್ದು, ಹೇಮಾವತಿಯನ್ನು ಹುಟ್ಟಿದಂದಿನಿಂದ ನೋಡಿ, ಆಡಿಸಿ ಎತ್ತಿಕೊಂಡು ಮುದ್ದಾಡಿದ್ದರು ಇನ್ನೂ ಬಾಲಕನಾಗಿದ್ದ ಕುವೆಂಪು.

ಸಂಗೀತದಲ್ಲಿ ಅಭಿರುಚಿ

ಶ್ರೀಮತಿ ಹೇಮಾವತಿಯವರ ವಿದ್ಯಾಭ್ಯಾಸ ಚಿಕ್ಕಂದಿನಲ್ಲಿ ಶಿವಮೊಗ್ಗೆಯಲ್ಲಿ ನಡೆಯಿತು. ಜೊತೆಗೆ ಸಂಗೀತ ಪಾಠ, ವೀಣೆ, ಪಿಟೀಲುಗಳ ಅಭ್ಯಾಸವೂ ಸಾಗಿತು. ಸಂಗೀತ ಪಾಠದಲ್ಲಿ ಶ್ರೀಮತಿಯವರಿಗೆ ಸೀನಿಯರ್ ಆಗಿದೆ. ಸುಮಧುರ ಕಂಠದ ಜೊತೆಗೆ ಇವರ ಹೆಚ್ಚಾದ ಆಸಕ್ತಿ, ಅಭಿರುಚಿಯೂ ಸೇರಿ ಸಂಗೀತ ಸುಲಭವಾಗಿ ಶ್ರೀಮತಿಯವರ ಕೈ ಸೇರಿತು. ಕುಶಲ ಕಲೆಗಳು ಶ್ರೀಮತಿಯವರಲ್ಲಿ ಮನೆಮಾಡಿ ಕೊಂಡಿವೆ. ಯಾವುದು ಚೆನ್ನು ಎನಿಸಿದರೆ ತಕ್ಷಣ ಅದನ್ನು ಮನೆಯಲ್ಲಿ ಅಳವಡಿಸಿ ಸಿಂಗರಿಸುತ್ತಾರೆ. ಆ ಗುಣ ಶ್ರೀಮತಿ ಹೇಮಾವತಿಯವರಿಗೆ ಅವರ ತಾಯಿ ಹಾಗೂ ಅಕ್ಕತಂಗಿಯರಿಂದ ಉಂಟಾಗಿದೆ. ಇಂದಿಗೂ ಮನೆಯನ್ನು ನವೀನ ರೀತಿಯಿಂದ ಸಿಂಗರಿಸುವ ಹೇಮಾವತಿಯವರ ಜಾಣ್ಮೆ ಮಾದರಿಯ ಮನೆಗೆ ಆದರ್ಶ ವನ್ನು ಉಂಟುಮಾಡುತ್ತದೆ.

ವಿವಾಹ

ಹೇಮಾವತಿಯವರಿಗೆ ಹದಿನಾರು ವರುಷಗಳಲ್ಲಿ ಮದುವೆಯಾಯಿತು. ಒಂದೇ ದಿವಸದ ಮದುವೆ. ಏಳು, ಎಂಟು ದಿನಗಳ ಸಂಪ್ರದಾಯದ ಮದುವೆಯಲ್ಲಿ ಶ್ರೀಮತಿಯವರ ತಂದೆ ರಾಮಣ್ಣನವರಿಗೆ ನಂಬಿಕೆ ಇರಲಿಲ್ಲ. ಮದುವೆ ಒಂದೇ ದಿನ ನಡೆದರೂ ಮದುವೆಗೆ ಹದಿನೈದು ದಿವಸಗಳ ಮೊದಲೇ ಮನೆಯು ತುಂಬ ಜನಬಂದು ಸೇರಿದರು. ಮದುವೆ ಮುಗಿದ ಮೇಲೆ ಒಂದು ತಿಂಗಳು ಮನೆಗೆ ಬಂದಿದ್ದ ನೆಂಟರು ಇದ್ದರು. ಅವರ ಮದುವೆ ಆದ ವರುಷವೇ ಈಗ ಕುವೆಂಪು

ವರು ಇರುವ 'ಉದಯರವಿ' ಮನೆಯನ್ನು ಕಟ್ಟಿಸಿದ್ದು. ದಾಂಪತ್ಯ ಹಾಗೂ ಸಂಸಾರಿಕ ಜೀವನದ ಬಹುಭಾಗವನ್ನು ಕಳೆದಿರುವುದು ಆ ಮನೆಯಲ್ಲಿಯೇ ಕಳೆದಿದ್ದಾರೆ. ಸ್ವಲ್ಪ ವರುಷಗಳು ಮಾತ್ರ ಬೆಂಗಳೂರಿನಲ್ಲಿದ್ದರು.

ಪತಿಯ ಸಾಹಿತ್ಯದ ಬಗೆಗೆ

ಪತಿಯ ಸಾಹಿತ್ಯವನ್ನೆಲ್ಲಾ ಓದಿದ್ದಾರೆ, ಮೆಚ್ಚಿಕೊಂಡಿದ್ದಾರೆ. "ಆದರೆ ನಾನು ವಿಮರ್ಶಿಸಲಾರೆ" ಎನ್ನುತ್ತಾರೆ ಹೇಮಾವತಿಯವರು. ಅನೇಕ ಸಾಹಿತಿಗಳು ಮನೆಗೆ ಬರುತ್ತಾರೆ, ಗಂಟೆಗಟ್ಟಲೆ ಎಷ್ಟೆಷ್ಟೋ ದೊಡ್ಡದೊಡ್ಡ ವಿಷಯಗಳನ್ನು ಚರ್ಚಿಸುತ್ತಿರುತ್ತಾರೆ. ಆದರೆ ಅವರ ಮಧ್ಯದಲ್ಲಿ ನಾನು ಪ್ರವೇಶಿಸುವುದಿಲ್ಲ. ಅವರುಗಳ ಜೊತೆಯಲ್ಲಿ ಹೆಣ್ಣುಮಕ್ಕಳಿದ್ದರೆ ನಾನು ಜೊತೆಯಲ್ಲಿ ಕುಳಿತರೆ ಮಾತನಾಡುತ್ತೇನೆ," ಎನ್ನುತ್ತಾರೆ. ಹೆಣ್ಣುಮಕ್ಕಳಿಲ್ಲದ ಗೋಷ್ಠಿಯಲ್ಲಿ ಹೇಮಾವತಿಯವರು ಅಷ್ಟಾಗಿ ಪ್ರವೇಶಿಸಲು ಇಚ್ಛಿಸುವುದಿಲ್ಲ. ಹೊರಗಿನ ಬಹಳ ಜನ ಕುವೆಂಪುರವರನ್ನು 'ಮಿತಭಾಷಿ' ಎಂದು ಭಾವಿಸಿದ್ದಾರೆ. ಹಾಗೆ ಭಾವಿಸಿದವರಲ್ಲಿ ನಾನು ಒಬ್ಬಳು. ಆದರೆ ಅವರನ್ನು ಕಂಡು ಮಾತನಾಡಿಸಿದ ಮೇಲೆ ನಮ್ಮ ಅಭಿಪ್ರಾಯ ಸಂಪೂರ್ಣವಾಗಿ ಬದಲಾಗುತ್ತದೆ. ಅವರ ಮನೆಯನ್ನು ಪ್ರವೇಶಿಸಿ, ಅವರೊಡನೆ ಮಾತಿಗೆ ಕುಳಿತ ನನಗೂ ಹಾಗೆ ಅನ್ನಿಸಿತು. ಕುವೆಂಪುರವರು ಎಷ್ಟು ಸಹಜವಾಗಿ, ಎಷ್ಟು ಸರಳವಾಗಿ ಎಷ್ಟು ಹೊತ್ತು ಮಾತನಾಡಿದರು, ಅವರು ಆಡಿದ ಮಾತೆಲ್ಲ ಮಣಿಮುತ್ತುಗಳು. ಹೊಸ ವಿಚಾರಗಳಿಂದ ಕೂಡಿದ್ದು, ಆಳವಾದುದು, ಸತ್ವಯುತವಾದುದು. ಅದನ್ನು ನೆನೆದರೆ ನನ್ನ ಮನಸ್ಸಿಗೆ ಎಲ್ಲಿಲ್ಲದ ಸಂತಸ ಉಂಟಾಗುತ್ತದೆ.

ಆಂತರಿಕ ಸೌಂದರ್ಯ

ಹೇಮಾವತಿಯವರು ಕುವೆಂಪುರವರಿಗೆ ತಕ್ಕ ಮಡದಿ. ಪ್ರಕೃತಿಯ ಸೌಂದರ್ಯವನ್ನು ಕಂಡ ಕವಿಯಂತೆ ಆ ಆನಂದದಲ್ಲಿ ಮೈಮರೆಯುವುದನ್ನು ಕಾಣಬಹುದು. ಮಾತುಗಳು ಅತ್ಯಂತ ಮಧುರ, ಮೃದು. ಕನ್ನಡದ ಸ್ವಚ್ಛ ಪ್ರತೀಕ ಹೇಮಾವತಿಯವರು. ದುಂಡುಮುಖ, ಹೊಳೆಯುವ ಕಾಂತಿಯುಕ್ತ ಕಣ್ಣುಗಳು ಮುಗುಳ್ನಗೆಯಿಂದ ಕೂಡಿರುವ ಚೆಂದುಟಿಗಳು, ತುಂಬಿರುವ ಕೆನ್ನೆ. ಮುದ್ದಾದ ಅಲ್ಲ, ಎತ್ತರವೂ ಅಲ್ಲ, ಕುಳ್ಳೂ ಅಲ್ಲದ ಮಧ್ಯಮಟ್ಟದ ದೇಹಾಕೃತಿ, ಆಭರಣಗಳ ಆಡಂಬರವಿಲ್ಲದ ನಿಸರ್ಗಸುಂದರಿ. ಇದು ಅವರ ಹೊರನೋಟದ ಸೌಂದರ್ಯ. ಆಂತರಿಕ ಸೌಂದರ್ಯದ ಬಗೆ ಅತಿಶಯವಾದುದು. ಅವರ ಅಂತರಂಗ ಸಕಲ ಜೀವಿಗಳ ಬೀಡು. ಬಿಡುವಿನ ದಿವಸಗಳಲ್ಲಿ ರಾಮಕೃಷ್ಣಾಶ್ರಮಕ್ಕೆ ಹೋಗುತ್ತಾರೆ.

ಆ ಆಶ್ರಮದ ಪುಸ್ತಕಗಳನ್ನೆಲ್ಲಾ ಹೇಮಾವತಿಯವರು ಓದಿ ಮುಗಿಸಿದ್ದಾರೆ. ಆದರೆ ಅವರು "ಆಶ್ರಮದ ಪುಸ್ತಕಗಳನ್ನೆಲ್ಲಾ ಓದಿ ಮುಗಿಸುವುದೇನೋ ಮುಗಿಸಿದ್ದೇನೆ, ಆದರೆ ಎಷ್ಟರ ಮಟ್ಟಿಗೆ ಜೀರ್ಣಮಾಡಿಕೊಂಡಿದ್ದೇನೋ ಆ ಭಗವಂತನಿಗೆ ಗೊತ್ತು" ಎಂದು ಹೇಳಿ ತಮ್ಮ ಸೌಜನ್ಯವನ್ನು ವ್ಯಕ್ತಪಡಿಸಿದ್ದಾರೆ. ಆ ಆತ್ಮದಲ್ಲಿ ಅಹಂಕಾರಕ್ಕೆ ಅವಕಾಶವಿಲ್ಲ.

ರಾಮಕೃಷ್ಣ ಪರಮಹಂಸ, ವಿವೇಕಾನಂದರ ಸಂಪೂರ್ಣ ಪ್ರಭಾವ ಇವರ ಮೇಲಾಗಿದೆ. ಮಹಾಪುರುಷರ ಆಶೀರ್ವಾದದಿಂದ ಕುವೆಂಪುರವರಿಗೆ ದೊರೆತ ವೆಂಕಟರಮಣನ ವಿಗ್ರಹದಿಂದ, ಆ ದೇವರ ಮೇಲಿನ ಭಕ್ತಿ ವಿಶೇಷವಾಗಿ ಉಂಟಾಗಿದೆ.

ತಾಯ್ನುಡಿ ಮಮತೆ

ಮಕ್ಕಳನ್ನು ಅತ್ಯಂತ ಮಮತೆಯಿಂದ, ಅಷ್ಟೇ ಶಿಸ್ತು, ಸಂಯಮದಿಂದ ಬೆಳೆಸಿದ್ದಾರೆ. ಪೂರ್ಣಚಂದ್ರತೇಜಸ್ವಿ, ಕೋಕಿಲೋದಯ ಚೈತ್ರ, ಇಂದುಕಲಾ, ತಾರಿಣಿ ಈ ನಾಲ್ವರು ಮಕ್ಕಳಲ್ಲಿ ಮೊದಲಮಗ, ಮೊದಲಮಗಳನ್ನು ಕನ್ನಡ ಎಂ.ಎ. ಪದವೀಧರರಾಗುವಂತೆ ಮಾಡಿದ್ದಾರೆ. ಕನ್ನಡ ಮನಸ್ಪೂರ್ತಿಯಾಗಿ, ಕನ್ನಡವನ್ನು ಉಪಯೋಗಿಸುವ ಅಧ್ಯಾಪಕರುಗಳೇ ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸುವುದಿಲ್ಲ. ಅಂಥ ಜನರೇ ಇಂದಿನ ಸಮಾಜದಲ್ಲಿ ಅತಿಯಾಗಿರುವರು. ಆದರೆ ಕುವೆಂಪು ದಂಪತಿಗಳು ಆ ಅಪವಾದಕ್ಕೆ ಹೊರತಾಗಿ ನಿಂತಿದ್ದಾರೆ. ತಮ್ಮ ಮಾತೃಭಾಷಾಪ್ರೇಮ, ರಾಷ್ಟ್ರಭಾಷಾಪ್ರೇಮವನ್ನು ಮಕ್ಕಳಲ್ಲಿಯೂ ಹರಿಸಿ ಕನ್ನಡ ಎಂ.ಎ. ಓದಿಸಿದ್ದಾರೆ; ಆದರ್ಶ ಕನ್ನಡದ ದಂಪತಿಗಳು. ಹೆಣ್ಣುಮಕ್ಕಳಿಗೆ ಸಂಗೀತ ಕಂಠ ಪಾಠದ ಜೊತೆಗೆ ವೀಣೆ ಪಿಟೀಲುಗಳ ಅಭ್ಯಾಸವೂ ಆಗಿದೆ. ಮಕ್ಕಳು ತಂದೆ ತಾಯಿಗಳಿಬ್ಬರ ಒಳ್ಳೆಯ ಗುಣಗಳನ್ನು ಹೊಂದಿ ಶೋಭಿಸಿದ್ದಾರೆ.

ದೇಶದ ಇಂದಿನ ಅನೇಕ ಸಮಸ್ಯೆಗಳನ್ನು ಕುರಿತು ಹೇಮಾವತಿಯವರು ಆಳವಾಗಿ ಆಲೋಚಿಸುತ್ತಾರೆ. ಜಾತೀಯತೆಯ ಬಗ್ಗೆ ವಿಶಾಲದೃಷ್ಟಿ ಇದ್ದು, ನಮ್ಮಲ್ಲಿ ಆ ಸಂಕುಚಿತ ಭಾವನೆ ಹೋಗಬೇಕು" ಎನ್ನುತ್ತಾರೆ. ನಮ್ಮವರೇ ಆದ ನಮ್ಮ ಹರಿಜನರನ್ನು ನಾವು ಉಪಚರಿಸುವುದಿಲ್ಲ' ಅವರನ್ನು ನಾವು ತಿರಸ್ಕರಿಸುತ್ತೇವೆ. ಕ್ರಿಶ್ಚಿಯನ್ನರು ಅವರನ್ನು ಉಪಚರಿಸಿ, ತಮ್ಮವರನ್ನಾಗಿ ಮಾಡಿಕೊಳ್ಳುತ್ತಾರೆ. ಅದೇ ಹರಿಜನರು ಕ್ರಿಶ್ಚಿಯನ್ನರಾದ ಮೇಲೆ ಅವರನ್ನು ನಾವು ಉಪಚರಿಸುತ್ತೇವೆ. ಈ ಕೀಳುಭಾವನೆ ನಮ್ಮಿಂದ ಹೋಗಬೇಕು" ಎನ್ನುತ್ತಾರೆ. ವಿಶ್ವವಿದ್ಯಾನಿಲಯಗಳಲ್ಲಿ ಪದವೀಧರರಾಗಿರುವವರಲ್ಲಿಯೂ ಈ ಜಾತೀಯತೆಯ ಬಗ್ಗೆ ಇಂಥ ಉದಾತ್ತವಾದ ಭಾವನೆಯನ್ನು ಪಡೆದಿರುವವರು ಬಹಳ ಕಡಿಮೆ. ಅಂಥವರಲ್ಲಿ ಕಾಲೇಜಿನ ಮೆಟ್ಟಿಲು ಹತ್ತದ, ನಗರದ ನಾಗರಿಕತೆಗೆ ಸಿಲುಕದ, ಯಾವುದೋ ಕುಗ್ರಾಮದಲ್ಲಿ

ರಲ್ಲಿಯೂ ಒಕ್ಕಲು ಮನೆತನದಲ್ಲಿ ಹುಟ್ಟಿ ಬೆಳೆದ ಈ ಹೆಣ್ಣು ಮಗಳು ತಳೆದಿರುವ ಾಲದೃಷ್ಟಿಯು ಮಾನವೀಯತೆಯು ಉದಾತ್ತ ಭಾವನೆಗಳನ್ನು ನೋಡಿದರೆ ಆ ಯಿಯು ಬಗೆಗೆ ಎಂಥವರಿಗೂ ಒಡನೆಯೇ ಗೌರವ ಭಾವನೆ ಉದಿಸುತ್ತದೆ.

ಮಾಜಿಕ ಪ್ರಜ್ಞೆ

"ದೇಶದ ಇಂದಿನ ಪರಿಸ್ಥಿತಿಯಲ್ಲಿ ಒಂದು ಸಂಸಾರದಲ್ಲಿ ಎರಡು, ಮೂರು ಕ್ಕಳಿಗಿಂತ, ಹೆಚ್ಚು ಇರುವುದು ಆ ವ್ಯಕ್ತಿಗೂ ತೊಂದರೆ, ದೇಶಕ್ಕೂ ಕಷ್ಟ" ದು ಕುಟುಂಬ ಯೋಜನೆಯನ್ನು ದೇಶದ ಹಿತದೃಷ್ಟಿಯಿಂದ ಮೆಚ್ಚಿ ನುಡಿಯು ರೆ. ಇಂಥ ರಾಷ್ಟ್ರಪ್ರಜ್ಞೆ ಭರತಖಂಡದ ಎಲ್ಲಾ ಮಹಿಳೆಯರಲ್ಲಿಯೂ ಮೂಡು ದು ಅತ್ಯಾವಶ್ಯಕವೆಂದು ತೋರುತ್ತದೆ. ಈ ಎರಡು ನಿದರ್ಶನಗಳಿಂದ ಶ್ರೀಮತಿ ಮಾವತಿ ಕುವೆಂಪುರವರು ದೇಶದ ಆಗುಹೋಗುಗಳನ್ನು ಹೇಗೆ ಗಮನಿಸಿ, ರ್ಶಮಾಡಿಕೊಳ್ಳುತ್ತಿದ್ದಾರೆಂಬುದನ್ನೂ ಸಮಕಾಲೀನ ಸಾಮಾಜಿಕ ಪ್ರಜ್ಞೆ ನ್ನು ಹೇಗೆ ಮನದಟ್ಟು ಮಾಡಿಕೊಂಡಿದ್ದಾರೆಂಬುದನ್ನೂ ನಾವು ಚೆನ್ನಾಗಿ ಯುಬಹುದು.

ೀ ಕೈ ಬಿಡದಿರು"

ಈ ರೀತಿ ಎಲ್ಲ ಹಿರಿಯ ಆದರ್ಶ ಗುಣಗಳಿಂದ ಕೂಡಿರುವ ಹೇಮಾವತಿಯನ್ನು ಷ್ಟ್ರಕವಿ ಕುವೆಂಪು ಹೀಗೆ ಪ್ರಾರ್ಥಿಸುತ್ತಾರೆ.

ಯಾರು ಕೈಬಿಟ್ಟರೂ
        ನೀ ಬಿಡದಿರು
ನೀನೆನ್ನ ತಾಯ್, ತಂದೆ,
        ಗುರು, ದೇವರು!
ನಿನ್ನೊಡನೆ ಹಿಂದೆನಿತೊ
        ಸಾರಿ ಹುಟ್ಟಿದೆ ಸಾತ್ತೆ;
ಮುಂದೆಯೂ ನಿನ್ನೊಡನೆ
        ಜನ್ಮಜನ್ಮವನೆತ್ತೆ
ಹಿಂಜರಿಯನೈ, ಕ್ಲೇಶ
        ಕಷ್ಟದಿ ಪತ್ತೆ ವತ್ತೆ,
ಸಂಸಾರ ಲೀಲೆಯು
        [illegible]!
ನೀನಿರಲು ನನ್ನೊಡನೆ
        [illegible]

ಸರ್ಪಕಾಳಿಯನಿರ್ಪ
                ಮಡುವಾದರೂ ?
ನೀಂ ಬರಲು ಬೆಂಬಿಡದೆ,
                ನನಗನ್ಯರೇಂ ಬೇಕೆ ?
ನೀಂ ಬಂದೆ ಬಹೆ,
                ಕೊಂಚ ತಡವಾದರೂ !

ಹೀಗೆ ಇವರ ಶಕ್ತಿಯನ್ನು ಅರ್ಥಮಾಡಿಕೊಂಡ ಕವಿ, ಜನ್ಮ ಜನ್ಮದ ಸ್ನೇ ದಿಂದ ! ಇಂದು ಜೊತೆಗೂಡಿದಂತೆ, ಮುಂದೆಯೂ ಒಂದಾಗಲು ಮೊರೆಯಿಟ್ಟ ಹೇಮಾವತಿಯವರು "ಅವರಿಗೆ ನಾನೇನು ಸಹಾಯ ಮಾಡಿದ್ದೇನೆ ? ನನ್ನ ಮ ನೆಯ ಹೊತ್ತಿಗೆ ಅವರ ಅರ್ಧ ಸಾಹಿತ್ಯವೇ ನಿರ್ಮಾಣವಾಗಿತ್ತು. ನಾನು ಬಂ ಮೇಲೆ ಮೇರುಕೃತಿ "ಶ್ರೀ ರಾಮಾಯಣ ದರ್ಶನಂ" ರಚನೆಯಾಯಿತು". ಎಂ ಅತ್ಯಂತ ಸೌಜನ್ಯದಿಂದ ಈ ಮಾತುಗಳನ್ನು ಹೇಳುತ್ತಾರೆ. ಅವರ ಮಾತನ್ನ ಸಮರ್ಥಿಸುವುದಾದರೆ ಕವಿಯ ಹೃದಯವನ್ನು ಮಹಾ ಮಡದಿ ಪ್ರವೇಶಿಸು ದ್ದಂತೆಯೇ ಜಗದ್ಭವ್ಯ ಮೇರುಕೃತಿ ರಚನೆಯಾಗಿ ಕವಿ ಕುವೆಂಪು ಮಹಾಕ ಯಾದರು. ಹೀಗೆ ಕುವೆಂಪುರವರ ಹೃದಯವೆಂಬ ವೀಣೆಯನ್ನು ಹೇಮಾವ ಎಂಬ ಕೈ ಮಿಡಿದು ಲೋಕೋನ್ನತ ಕಾವ್ಯಧಾರೆಯನ್ನು ಹೊನಲಾಗಿ ಹರಿಸಿ ಕವಿಯನ್ನು ಮಹಾ ಕವಿಯನ್ನಾಗಿ ಮಾಡಿದ ಹೇಮಾವತಿಯವರ ವ್ಯಕ್ತಿತ್ವ ಹಿರಿಮೆ ಊಹೆಗೆ ನಿಲುಕದು.



'ಕವಿರಾಜಮಾರ್ಗ'ದಲ್ಲಿ ಕವಿಸ್ವರಗಳು'

ಶ್ರೀ ಸಿ. ಪಿ. ಕೃಷ್ಣಕುಮಾರ್, ಎಂ. ಎ.

—○—

"ಹಳಗನ್ನಡದಲ್ಲಿರುವ ಅಲಂಕಾರ ಗ್ರಂಥಗಳೆಲ್ಲಾ ಸಂಸ್ಕೃತ ಗ್ರಂಥಗಳನ್ನು ನುಸರಿಸಿ ಬರೆಯಲ್ಪಟ್ಟವು. ಕನ್ನಡ ಆಲಂಕಾರಿಕರು ಪ್ರಾಯಶಃ ತಮ್ಮ ಗ್ರಂಥ ಲ್ಲಿ ಯಾವ ಹೊಸ ಸಂಗತಿಯನ್ನು ಎತ್ತಿಯಾಗಲಿ ವಿಚಾರಮಾಡಿಯಾಗಲಿ ಳಿಲ್ಲ" ಎಂದು ದಿವಂಗತ ಎ. ಆರ್. ಕೃಷ್ಣಶಾಸ್ತ್ರಿಗಳು ಅಭಿಪ್ರಾಯಿಸಿದ್ದಾರೆ. (1) ಮಾತಿನಲ್ಲಿ ಸತ್ಯವೇನೋ ಉಂಟು; ಆದರೆ ಅದು ಪೂರ್ಣ ಸತ್ಯವಲ್ಲ. ಾರತೀಯ ಕಾವ್ಯಮೀಮಾಂಸೆಗೆ ಕನ್ನಡಿಗರ ಸ್ವತಂತ್ರವಾದ ಕೊಡುಗೆ ಏನೂ ಲ್ಲವೆ? ಈ ಪ್ರಶ್ನೆಗೆ ನಕಾರಾತ್ಮಕವಾಗಿಯೆ ಉತ್ತರ ಕೊಡುವುದು ಆಳವಾದ ವೇಚನೆಯ ಅಭಾವವನ್ನು ವ್ಯಕ್ತಪಡಿಸುತ್ತದಷ್ಟೆ. ಕಾವ್ಯಮೀಮಾಂಸೆಯ ತ್ರದಲ್ಲಿ ಕನ್ನಡಿಗರ ಸ್ವೋಪಜ್ಞತೆಯನ್ನು ಕಾಣಬೇಕಾದರೆ, ಕನ್ನಡ ಅಲಂಕಾರ ಂಥಗಳಿಗಿಂತ ಹೆಚ್ಚಾಗಿ ಪ್ರಸಿದ್ಧ ಕನ್ನಡ ಕವಿಗಳು ತಮ್ಮ ಕಾವ್ಯಗಳ ಪೀಠಿಕಾ ಾಗಗಳಲ್ಲಿ ಅಥವಾ ಅನ್ಯತ್ರ ಹೇಳುವ ಮಾತುಗಳನ್ನು ಅವಲಂಬಿಸುವುದು ಮೇಲು. ಲ್ಲಿ, ಸಂಸ್ಕೃತ ಆಲಂಕಾರಿಕರು ಹೇಳದ ಎಷ್ಟೋ ವಿಚಾರಗಳು ನಮ್ಮ ಕವಿಗಳಿಂದ ್ರಣೀತವಾಗಿರುವುದು ಕಂಡುಬರುತ್ತದೆ: ನಾಗಚಂದ್ರ ಶಾಂತ ವೊಂದೆ ರಸವೆಂಬ ರ್ಥ ಬರುವಂತೆ ಜಿನಸ್ತವನ ಮಾಡಿರುವುದನ್ನು ನೆನೆಯಬಹುದು. ಕನ್ನಡ ಲಂಕಾರ ಗ್ರಂಥಗಳನ್ನು ತೆಗೆದುಕೊಂಡರೂ ಕೂಡ, ಅವೆಲ್ಲ ಚರ್ವಿತ ಚರ್ವಣ ಂದು ಅವಸರದಿಂದ ನಿರ್ಣಯಿಸುವುದು ಅಸಾಧುವಾಗುತ್ತದೆ. ನಮ್ಮ ಆಲಂಕಾರಿಕ ಲ್ಲಿ ಎಷ್ಟೋ ವಿನೂತನವಾದ ಕಾವ್ಯತತ್ತ್ವಗಳು ಪ್ರಕಟವಾಗಿವೆ. ಉದಾಹರಣೆಗೆ, ವಿರಾಜಮಾರ್ಗಕಾರ "ಧ್ವನಿಯೆಂಬುದಳಂಕಾರಂ" ಎಂದು ಹೇಳುವಲ್ಲಿ, ನಾಗವರ್ಮ ೀತಿ ವಿನೂತ ವಸ್ತುಕೃತಿಗೊಪ್ಪುವ ಮೆಯ್" ಎಂದು ನಿರೂಪಿಸುವಲ್ಲಿ ಸಂಸ್ಕೃತ ಲಂಕಾರ ಗ್ರಂಥಗಳಲ್ಲಿಲ್ಲದ ವಿಶಿಷ್ಟವಾದ ಮತ್ತು ಆಧುನಿಕ ದೃಷ್ಟಿಸಮ್ಮತವಾದ ಲೋಚನೆಗಳನ್ನು ಗುರುತಿಸುತ್ತೇವೆ.

ಸದ್ಯಕ್ಕೆ 'ಕವಿರಾಜಮಾರ್ಗ'ದಲ್ಲಿ ಬರುವ ಒಂದು ಭಾಗವನ್ನು ಈ ಪಾದಕ್ಕೆ ಮರ್ಥನೆಯಾಗಿ ಪರಿಶೀಲಿಸಬಹುದು. 'ಕವಿರಾಜಮಾರ್ಗ' ದಂಡಿ ಭಾಮಹರನ್ನು ನುಸರಿಸಿದ ಒಂದು ಅಲಂಕಾರ ಗ್ರಂಥವೆಂದು ಸಾಂಪ್ರದಾಯಿಕವಾಗಿ ಪರಿಗಣಿತ

(1) 'ಕನ್ನಡ ಕೈಪಿಡಿ'. ಪು. ೧೩೬.

ವಾಗಿದ್ದರೂ; ವಸ್ತುತಃ ಅದೊಂದು ಸ್ವತಂತ್ರ ಮೌಲ್ಯವುಳ್ಳ ಸಂಕೀರ್ಣ ಸ್ವರೂಪ ಕೃತಿ. ಕನ್ನಡ ನಾಡಿನ ಮೇರೆಗಳು, ಕನ್ನಡಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಹರಹು ಮುಂತಾದ ವಿಷಯಗಳ ಮೇಲೆ ಅಪೂರ್ವವಾದ ಬೆಳಕು ಚೆಲ್ಲುವ ಈ ಗ್ರಂ ಕನ್ನಡಿಗರ ಕೈಪಿಡಿಯೇ ಆಗಿದೆ. ಅದರಲ್ಲಿ ಬರುವ ಅಲಂಕಾರ ಭಾಗದಲ್ಲೂ ಕವಿರಾ ಮಾರ್ಗಕಾರನ ಸ್ವತಂತ್ರ ಪರಿಭಾವನೆ ಸುಸ್ಪಷ್ಟವಾಗಿ ವ್ಯಕ್ತವಾಗಿದೆ.

'ಕವಿರಾಜ ಮಾರ್ಗ'ದ ಪ್ರಥಮ ಪರಿಚ್ಛೇದದ ಕೇವಲ ನಾಲ್ಕು ಪದ್ಯಗ (೧೫-೧೮) ನಮಗಿಲ್ಲಿ ಪ್ರಕೃತ. ಈ ಭಾಗದಲ್ಲಿ ಕವಿರಾಜಮಾರ್ಗಕಾರ ಕವಿಗ ಬೇರೆಬೇರೆ ಸ್ತರಗಳನ್ನು ಅನುಕ್ರಮವಾಗಿ ವ್ಯಾವರ್ಣಿಸಿದ್ದಾನೆ; ಈ ಸ್ತರನಿರೂಪ ಯಾವ ಸಂಸ್ಕೃತ ಅಲಂಕಾರ ಗ್ರಂಥದಲ್ಲೂ ನಮಗೆ ಸಿಕ್ಕುವುದಿಲ್ಲ. ಕವಿಗಳ ಸನಾಮರಾದರೂ ಸಮಾನರಲ್ಲ; ಅವರಲ್ಲಿ ತರತಮ ಭೇದಗಳುಂಟು, ವಗ ಗಳುಂಟು : ಅದಕ್ಕನುಸಾರವಾಗಿ ಕಾವ್ಯಪ್ರಯೋಜನಗಳಲ್ಲೂ ವಿಭಿನ್ನತೆಯುಂಟು ಎಂಬುದಿಲ್ಲಿ ಸೊಗಸಾಗಿ ವಿದಿತವಾಗುತ್ತದೆ.

ಕವಿಲೋಕದ ಮೊದಲನೆಯ ಎರಡು ಸ್ತರಗಳು ಈ ಪದ್ಯದಲ್ಲಿ ಪ್ರಸ್ತಾ ಗೊಂಡಿವೆ :

ಕುರಿತಂತು ಪೆರರ ಬಗೆಯಂ
ತೆರೆದಿರೆ ಪೆರರ್ಗರಿಪಲಾರ್ಪವ ಮಾತರಿವಂ
ಕಿರಿದರೊಳೆ ಪಿರಿದುಮರ್ಥಮ
ನರಿಪಲ್ ನೆರೆವಾತನಾತನಿಂದಂ ನಿಪುಣಂ.

ತನ್ನ ಮನಸ್ಸಿನಲ್ಲಿ ಮೂಡಿದ ಎಲ್ಲ ಭಾವಲೋಚನೆಗಳನ್ನು ಕೇಳುವವ ಚಿತ್ತಕ್ಕೆ ನಾಟುವಂತೆ ಪರಿಣಾಮಕಾರಿಯಾಗಿ ಮಾತಿನಲ್ಲಿ ಅಭಿವ್ಯಕ್ತಿಗೊಳಿಸಲ ಸಮರ್ಥನಾದವನು ಮಾತು ಬಲ್ಲವ' (ಮಾತರಿವಂ). ಇದು ಕವಿಯ ಮೊದಲನೆ ಹಂತ. ಸಾಮಾನ್ಯರಲ್ಲೂ ಭಾವಗಳಿರುತ್ತವೆ, ತೀವ್ರವಾಗಿಯೆ ಇರುತ್ತವೆ ; ಆದ ಅವರು ಅವುಗಳನ್ನು ನುಡಿಯಲ್ಲಿ ಯಶಸ್ವಿಯಾಗಿ ಪ್ರಕಟಿಸಲಾರರು. ಅವ ಒಂದು ರೀತಿಯಲ್ಲಿ ಮೂಕರು ; ಕವಿಯಾದರೊ ವಾಚಾಲ. ಆದ್ದರಿಂದ ನಿವೇದ ಶಕ್ತಿಯೇ (Communication) ಕಾವ್ಯದ ಪ್ರಥಮ ಲಕ್ಷಣ. ಇದನ್ನು ಪ ದಿದ್ದರೆ ಅಷ್ಟೇ ಸಾಕು, ವ್ಯಕ್ತಿ ಕವಿನಾಮಧೇಯಕ್ಕೆ ಯೋಗ್ಯ.

ಆದರೆ ಮಾತಿನ ಬಲ್ಮೆಯೊಂದೆ ಸಾಲದು. ಹೇಳಬೇಕಾದುದನ್ನು ಸಂಕ್ಷಿಪ್ತ ವಾಗಿ ಹೇಳುವುದು ಮುಖ್ಯ : ಅದು ಬೇರೆಯೇ ಒಂದು ಶಕ್ತಿ : ಅದರಿಂದ ಮುಂದಿ ಹಂತವೇರ್ಪಡುತ್ತದೆ. ಕಿರಿದರಲ್ಲಿ ಹಿರಿದಾದ ಅರ್ಥವನ್ನು ತುಂಬಿ ಹೇಳಬಲ್ಲವನ

ಮಾತರಿವವನಿಗಿಂತ ನಿಪುಣ ಎನ್ನುವಲ್ಲಿ ಕವಿರಾಜಮಾರ್ಗಕಾರ ಧ್ವನಿಸಾಮರ್ಥ್ಯ ವನ್ನು ಸೂಚಿಸಿದ್ದಾನೆ. ಮನಸ್ಸಿನಲ್ಲಿ ಹುಟ್ಟಿದ್ದನ್ನು ಇತರರು ಗ್ರಹಿಸುವಂತೆ ಮಾತಿನಲ್ಲಿ ಹೊರಿಸುವುದು ಸಾಧಾರಣ ಗುಣವೇನಲ್ಲ; ಆದರೆ ಅದನ್ನೆ ಧ್ವನಿ ಪೂರ್ಣವಾಗಿ ಹೇಳಿದಾಗ ಅರ್ಥರಮಣೀಯಪೂರ್ಣವಾಗಿ ಪರಿಣಮಿಸಿ ಕೇಳುವವರಿಗೆ ಸಂತೋಷ ಕೊಡುತ್ತದೆ. ಇದು ಮೊದಲನೆಯದಕ್ಕಿಂತ ಶ್ರೇಷ್ಠವಾದ ಗುಣ. ನಿಸ್ಸಂದೇಹವಾಗಿ.

ಈ ಧ್ವನಿಪೂರ್ಣವಾದ ಅಭಿವ್ಯಕ್ತಿ ಗದ್ಯದಲ್ಲಿ ಇರುವುದೂ ಸಾಧ್ಯ; ಗದ್ಯದಲ್ಲಿ ಕಾವ್ಯ ಇರಬಾರದೆಂದಿಲ್ಲ. ಆದರೆ ಕಾವ್ಯ ಇನ್ನೂ ಉತ್ತಮವಾಗುವುದು ಯಾವಾಗ ಎಂದರೆ, ಅದು ಛಂದೋಬದ್ಧವಾದಾಗ. ಆದ್ದರಿಂದಲೇ ಕವಿರಾಜಮಾರ್ಗಕಾರ ಹೇಳುತ್ತಾನೆ, "ನುಡಿಯುಂ ಛಂದದೊಳೊಂದಿರೆ ತೊಡರ್ಚಲರಿವಾತನಾತನಿಂದಂ ಜಾಣಂ" ಎಂದು. ಕಿರಿದರಲ್ಲಿ ಹಿರಿದರ್ಥವನ್ನು ಹೇಳುವವನಿಗಿಂತ ಅದನ್ನು ಛಂದಸ್ಸಿನಲ್ಲಿ ಹೇಳುವವನ ಹಂತ ಮತ್ತೂ ಮುಂದಿನದು. ಛಂದಸ್ಸು ಕಾವ್ಯದ ಅನಿವಾರ್ಯಾಂಗ; ಮ್ಯಾಥ್ಯೂ ಆರ್ನಾಲ್ಡ್ ಹೇಳುವಂತೆ, ಅದರ 'ಪರಿಪೂರ್ಣತೆಯ ಭಾಗ'. ಛಂದೋರಾಹಿತ್ಯದಿಂದ ಕಾವ್ಯತ್ವ ಅಷ್ಟರಮಟ್ಟಿಗೆ ಊನವಾಗುತ್ತದೆ. (2) ಆದ್ದರಿಂದ ಛಂದೋಬದ್ಧವಾಗಿ ಕಾವ್ಯರಚನೆ ಮಾಡುವ ಕವಿ ಹಿಂದಿನವರಿಗಿಂತ ಉತ್ತರವಾಗಿ ತೃತೀಯ ಸ್ತರದಲ್ಲಿ ನಿಲ್ಲುತ್ತಾನೆ.

ಇನ್ನೂ ಮುಂದಿನ ಹರವು ಪರಮೋತ್ತರವೊಂದಿದೆ; ಅದನ್ನು ಮುಟ್ಟಿದವರು ಮಹಾಕವಿಗಳು; ಕವಿರಾಜಮಾರ್ಗಕಾರನ ಮಾತಿನಲ್ಲಿ ಹೇಳುವುದಾದರೆ 'ಮಹಾಪ್ರಕೃತಿ' ನಿರ್ಮಾಪಕರು, 'ಪರಮಕವಿವೃಷಭರು', 'ಪರಮಕವಿಪ್ರಧಾನರು'. ಇವರು ಎಲ್ಲರಿಗಿಂತ ದೊಡ್ಡವರು. "ತಡೆಯದೆ ಮಹಾಪ್ರಕೃತಿಗಳನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ".

ಕಾವ್ಯದಲ್ಲಿ ಕವಿ ಉನ್ನತವಾದ ಅಭಿವ್ಯಕ್ತಿ ಸತ್ವವನ್ನು ಮೆರೆದಿರಬಹುದು; ಧ್ವನಿ ಮಹಿಮೆಯನ್ನು ತೋರ್ಪಡಿಸಿರಬಹುದು, ಅವನ ಛಂದಸ್ಸು ಲೋಕಮೋಹಕ ವಾಗಿರಬಹುದು. ಇಷ್ಟೆಲ್ಲ ಇದ್ದೂ ಅದು ಕಲೆಗಾಗಿ ಕಲೆ ಎಂಬ ಸೂತ್ರಕ್ಕೆ ಮಾತ್ರ ನಿದರ್ಶನವಾಗಿ ಪರಿಣಮಿಸಿ, ಅತ್ಯುದಾತ್ತವಾಗದಿರುವುದು ಸಾಧ್ಯ. ಆದರೆ ಪರಮ ಕವಿವೃಷಭರು, ಪರಮ ಕವಿ ಪ್ರಧಾನರು ಕಟ್ಟುವ ಕಾವ್ಯ ಈ ಎಲ್ಲ ಗುಣ ಗಳನ್ನೂ ಮೈಗೂಡಿಸಿಕೊಂಡು ಮತ್ತೂ ಮುಂದೆ ಹೋಗುತ್ತದೆ; 'ಮಹಾಪ್ರಕೃತಿ'

---

2) 'Poetry communicates before it is understood' ಎಂಬ ಟಿ. ಎಸ್. ಎಲಿಯಟ್ಟನ ಪ್ರಸಿದ್ಧ ವಾಕ್ಯದಲ್ಲಿ ಸೂಚಿತವಾಗಿರುವುದು ಲಯದ ಪ್ರಾಧಾನ್ಯವೇ. ಕಾವ್ಯಾನುಭವವನ್ನು ತಂದುಕೊಡುವಲ್ಲಿ ಲಯದ ಪಾತ್ರ ವಿಶೇಷವಾದುದು.

ಯಾಗುತ್ತದೆ. ಅದು ಮುಂದೆ ಬರುವ ಕವಿಗಳಿಗೆ 'ಮಹಾಧ್ವ'ವೊಂದನ್ನು ತಿಳಿ
ತ್ತದೆ; ಅದಕ್ಕಿಂತ ಮಿಗಿಲಾಗಿ, ಜನಜೀವನಕ್ಕೆ 'ಮಹಾಧ್ವ'ವನ್ನು ತೋರುತ್ತ
ಅಷ್ಟೇ ಅಲ್ಲ, ಪ್ರಾಚೀನ ಮಹಾಕವಿಗಳ 'ಮಹಾಧ್ವ'ವನ್ನೆ ಅದು ಅನುಸರಿಸುತ್ತ
ಯಾವ ಅರ್ಥದಲ್ಲಿ ಭಾವಿಸಿದರೂ ಅದು ಮಾರ್ಗಕೃತಿಯೇ.

ಕವಿ-ಕಾವ್ಯದ ಈ ನಾಲ್ಕನೆಯ ಸ್ತರವನ್ನು ಕವಿರಾಜಮಾರ್ಗಕಾರ ಹಿ
ನಿರೂಪಿಸುತ್ತಾನೆ:

ಮಾತರಿವರ್ ಕೆಲಬರ್ ಜಗ
ತೀತಳಗತ ಮನುಜರೊಳಗೆ ಮಾತರಿವವರೊಳ್
ನೀತಿವಿದರವುಳ ಕವಿತಾ
ನೀತಿಯುುತರ್ ಕೆಲರೆ ಪರಮ ಕವಿ ವೃಷಭರ್ಕಳ್
ಪಾಪಮಿದು ಪುಣ್ಯಮಿದು ಹಿತ
ರೂಪ ಮಿದಹಿತ ಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದರಿಪುಗು
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್.

ನಿವೇದನ ಶಕ್ತಿ, ಧ್ವನಿಶಕ್ತಿಗಳು ಸಿದ್ಧಿಸಿದರೆ ಕವಿಗೆ ಕವಿತಾನೀತಿ ವಶವ
ದಂತೆಯೇ, ಆದರೆ ಜೀವನನೀತಿಯನ್ನು ಅವನು ಚಿತ್ರಿಸದಿದ್ದಲ್ಲಿ ಅದು ಉ
ವರ್ಗದ ಕಾವ್ಯವಾಗದು. ನೀತಿ–ಕವಿತಾನೀತಿಗಳ ಸಮನ್ವಯದಿಂದ ಮಹ
ಕಾವ್ಯ ಆವಿರ್ಭವಿಸುತ್ತದೆ. (3) ಕಾವ್ಯಮೌಲ್ಯಗಳೇ ಸರ್ವಸ್ವವೆಂದು ತಿಳಿ
ಕೊಂಡು ವಿರಚಿಸಿದ ಕಾವ್ಯದಿಂದ ಬದುಕಿಗೆ ಪ್ರಯೋಜನವಿಲ್ಲ: ಜೀವನಮೌ
ಗಳನ್ನು ಕವಿ ಪ್ರತಿಪಾದಿಸಬೇಕು. ಪಾಪ-ಪುಣ್ಯ, ಹಿತ-ಅಹಿತ, ಸುಖ–ದುಃ
ಇವುಗಳ ಅರಿವು, ವಿವೇಚನೆ ಕಾವ್ಯಾನುಶೀಲನದಿಂದ ಉಂಟಾಗಬೇಕು. ಅಂ
ಕಾವ್ಯ ಲೋಕತಾರಕವಾಗುತ್ತದೆ; ಕೇವಲ ಮನೋರಂಜನದಲ್ಲಿ ವಿರಮಿಸ
ಬಾಳಿಗೆ ತುಷ್ಟಿಪುಷ್ಟಿಗಳನ್ನು ದಾನಮಾಡುತ್ತದೆ, ರಾಮಾಯಣ ಭಾರತ ಭಾಗವ
ಮಹಾಪುರಾಣಗಳಂತಹ ಕಾವ್ಯಗಳು ಈ ವರ್ಗದವು; ಇವುಗಳನ್ನು ಬರೆದವ
ಪರಮಕವಿವೃಷಭರು, ಪರಮಕವಿಪ್ರಧಾನರು. ಕವಿರಾಜಮಾರ್ಗಕಾರ ಹೇಳು
ಈ ಚತುರ್ಥವರ್ಗದ ಕಾವ್ಯ ಚತುರ್ಥವರ್ಗದ ಪುರುಷಾರ್ಥಕ್ಕೆ ಸಾಧಕವಾಗ
ವಂಥದು. ಕವಿಯ ಗುರಿ ಈ ಬಗೆಯ ಕಾವ್ಯಗಳ ರಚನೆಯ ಕಡೆಗಿರಬೇಕು.

---

(3) ಪಂಪಕವಿ ಇದೇ ಅಭಿಪ್ರಾಯವನ್ನು ಧರ್ಮ ಮತ್ತು ಕಾವ್ಯಧರ್ಮವನ್ನು ಕುರಿತ ತ
ಪ್ರಸ್ತಾಪದಲ್ಲಿ ವ್ಯಕ್ತಪಡಿಸಿದ್ದಾನೆ.

ಕಾವ್ಯನಿರ್ಮಿತಿಯಲ್ಲಿ ಮೂಲಭೂತವಾದುದು ನುಡಿಬಲ್ಮೆ. ಮಾತು ಬಂದವರೆಲ್ಲ ಮಾತು ಬಲ್ಲವರೆಂದು ಅರ್ಥವಲ್ಲ ಎಂಬುದನ್ನು ಕವಿರಾಜಮಾರ್ಗಕಾರ ಸ್ಪಷ್ಟಪಡಿಸಿದ್ದಾನೆ. ಎಲ್ಲ ಜಡಜನಕ್ಕೂ ಮಾತು ಬರುತ್ತದೆ; ಹೇಳಿಕೊಟ್ಟರೆ ಗಿಳಿಗಳೂ ಪುರುಳಿಗಳೂ ಮಾತು ಕಲಿಯುತ್ತವೆ. ಅದರಲ್ಲೇನಿದೆ ಮಹತ್ವ? ಮಾತು ಬಲ್ಲವನು ಮಾತ್ರ ಕವಿಯಾಗುತ್ತಾನೆ; ಮುಂದೆ ಮುಂದೆ ಹೋಗಿ ಮಹಾಕವಿಯಾಗುತ್ತಾನೆ.—ನುಡಿ, ನುಡಿವಲ್ಮೆ, ಕಿರಿದರಲ್ಲಿ ಹಿರಿದನ್ನಡಗಿಸುವಿಕೆ, ನುಡಿಗೆ ಛಂದಸ್ಸನ್ನು ಅಳವಡಿಸುವಿಕೆ, ಮಹಾಧ್ವ ಕೃತಿಗಳ ವಿರಚನೆ-ಹೀಗೆ ಮಾತಿನ ನಾನಾ ಹಂತಗಳನ್ನು ಕವಿರಾಜಮಾರ್ಗಕಾರ ಎಚ್ಚರಿಕೆಯಿಂದ ಗಮನಿಸಿ ವಿಶದಪಡಿಸಿದ್ದಾನೆ.

ಅವನು ಹೇಳುವ ಮತ್ತೊಂದಂಶ ಗಮನಾರ್ಹವಾಗಿದೆ. ಯಾವ ಸ್ತರದ ಕವಿಯೇ ಆಗಿರಲಿ, ಅನ್ಯರ ಮಾತುಗಳನ್ನು ನೆನೆದು ತನ್ನ ಕೃತಿಯಲ್ಲಿಟ್ಟರೆ ಅದು ನಗದ ಗುಹಾಧ್ವನಿಯಂತಾಗುತ್ತದೆ; ಕವಿಗೆ ಸ್ವೋಪಜ್ಞತೆ ಅತ್ಯಗತ್ಯ; ಅವನು ಅನುಕರಣವನ್ನು ವರ್ಜಿಸುವುದು ಶ್ರೇಯಸ್ಕರ ಎಂದು ಕವಿರಾಜಮಾರ್ಗಕಾರನ ಅಭಿಮತ.

ನೆನೆನೆನೆದು ಪೆರರ ಮಾತುಗ
ಳನೆ ನೆಗಳ್ದಿರೆ ಕೃತಿಯೊಳಿಡುವವಂ ನಗದ ಗುಹಾ
ಧ್ವನಿಯವೊಲನರ್ಥವಚನಂ
ತನಗಾಗಿಸಲರೆಯನುಚಿತ ವಾಕ್ಯಾತುರತೆಯಂ

ಹೀಗೆ ಕವಿರಾಜಮಾರ್ಗಕಾರನ ಕವಿಸ್ತರ ವಿವೇಚನೆ ಔಚಿತ್ಯಪೂರ್ಣವೂ ಉಪಾದೇಯವೂ ಆಗಿದೆ. ದುರ್ಗಸಿಂಹ 'ಕವಿಗಳ್ಗಿದು ಕೈಗನ್ನಡಿ' ಎಂದು 'ಕವಿರಾಜಮಾರ್ಗ'ವನ್ನು ಕೊಂಡಾಡಿದ್ದು ಅತ್ಯುಕ್ತಿಯಲ್ಲ.

—: : —

ಹೆಣಭಾರ! ಹೆಣಭಾರ! ಸಾಕೀ ಬಲಾತ್ಕಾರ;
ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ.
ಇಂಗ್ಲಿಷಿನ ಚಪ್ಪಡಿಯಡಿಯ ಹಸುಳೆ ಚೀತ್ಕಾರ
ಕೇಳಿಸದ ಕಿವುಡರಿರ, ನಿಮಗೇಕೆ ಅಧಿಕಾರ?
ಕೇಳಿಯೂ ಧಿಮ್ಮನಿರೆ, ಕೋಟಿ ಧಿಕ್ಕಾರ!

—ಕುವೆಂಪು.

ಶ್ಮಶಾನ ಕುರುಕ್ಷೇತ್ರ

ಶ್ರೀ ಕು. ವೆಂ. ಶ್ರೀನಿವಾಸಮೂರ್ತಿ, ಎಂ. ಎ.

ಮಾನವನು ಜೀವನದಲ್ಲಿ 'ಗೆಲುವು' ಒಂದೇ ತನ್ನ ಗುರಿ ಎಂದುಕೊಳ್ಳುವುದು ಸಹಜ. ಆಧ್ಯಾತ್ಮಿಕ ಪ್ರಪಂಚಕ್ಕೆ ಇದು ಅನ್ವಯವಾಗಬಹುದಾದ ಮಾತು. ಆದರೆ ಗೆಲುವಿಗಾಗಿ ಇನ್ನೊಬ್ಬರ ಅಳಿವು ಅನಿವಾರ್ಯವೆನಿಸಿದಾಗ? ಗೆಲುವಿನ ಸಂತೋಷ ಬಹುಮ್ಟ ಖಿವಾಗುತ್ತದೆ. ಗೆಲುವಿನ ಅನ್ವೇಷಣೆಯಲ್ಲಿ ರಕ್ತದ ಕೋಡಿಯೇ ಹರಿದಿರುವ ನಿದರ್ಶನಗಳಿಗೇನೂ ಕೊರತೆಯಿಲ್ಲ! ಇಂತಹ ಸನ್ನಿವೇಶದಲ್ಲಿ 'ಗೆಲುವಿಗೆ' ಅಂತಹ ಮಹತ್ತರವಾದ ಸ್ಥಾನವೇನೂ ದಕ್ಕುವಂತಿಲ್ಲ. "ಸೋಲ್ವರ ಸಂತಾಪಂ ವಿಜಯಿಗಳಪೆರ್ಮೆ," ಏನೆಂಥ ಸಾಧನೆ!

ಭಾರತ ಮಹಾಸಂಗ್ರಾಮದ ಪರಿಣಾಮವನ್ನು ಅತ್ಯಂತ ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಬಲ್ಲುದಾದ ನಾಟಕ "ಶ್ಮಶಾನ ಕುರುಕ್ಷೇತ್ರ" ಹೆಸರೇ ಸೂಚಿಸುವಂತೆ ಯುದ್ಧಾನಂತರದ ವಸ್ತು ಈ ನಾಟಕದ್ದು, ಇದರಲ್ಲಿ ೧೦ ದೃಶ್ಯಗಳಿವೆ. ಶ್ರೀ ಕುವೆಂಪು ಅವರು "ಇದೊಂದು ಪ್ರತಿಮಾಸೃಷ್ಟಿ, ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶನ.ಅವಿವೇಕ, ದುರ್ಲಂಘ್ಯವಿಧಿ, ಸರ್ವವಿಫಲತೆ, ಸಂಸ್ಕೃತಿಯ ಸಾವು ಇದಕ್ಕೆ ಪ್ರತಿಮೆ" ಎಂದಿದ್ದಾರೆ.

ಮಹಾಭಾರತದ ಕಥೆ ದಾಯಾದಿ ಮಾತ್ಸರ್ಯದ ಕಥೆಯಾದರೂ; ಭಾರತದ ಯುದ್ಧವು ಧರ್ಮಾಧರ್ಮಗಳ ನಡುವೆ ನಡೆದಂಥದು ಎನ್ನುವುದು ಭಾರತೀಯರ ಭಾವನೆ. ಮಾತ್ಸರ್ಯದಿಂದ ಯುದ್ಧ ನಡೆಯಿತು. ಇದರ ಪರಿಣಾಮ ಕೌರವರ ಮೇಲೆ ಮಾತ್ರವಾಯಿತೆ? ಅಥವಾ ಪಾಂಡವರ ಮೇಲೋ? ನಿರಪರಾಧಿಗಳೆಷ್ಟು ಮಂದಿ ಸಾಮ್ರಾಜ್ಯಭಕ್ತಿಯ ನಂಜಿಗೆ ತುತ್ತಾಗಲಿಲ್ಲ? ೧೮ ಅಕ್ಷೌಹಿಣೀ ಸೈನ್ಯದ ಮೇಲೆ ಯುದ್ಧದ ಪರಿಣಾಮವಾಯಿತಲ್ಲ ಹೋಗಲಿ; ಕೌರವರಾದರೂ ಸಾಧಿಸಿದ್ದೇನನ್ನು? ಅಥವಾ ಪಾಂಡವರೋ? ಅಂತೂ ಇಂತೂ ಕುಂತೀಮಕ್ಕಳಿಗೆ ರಾಜ್ಯವಿಲ್ಲ,ಎನ್ನುವ ಮಾತು ಸುಪ್ರಸಿದ್ಧವಾಯಿತು ಅಷ್ಟೇ!

"ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೇ ಕೊನೆಗಾಣಿಸುವ ಜಗತ್ತಿನ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯವೆಲ್ಲ ತೊಲಗಿ ನ್ಯಾಯ ಸಂಸ್ಥಾಪನೆಯಾಗುವುದೆಂದು ಭಾವಿಸುತ್ತೇವೆ. ………… ಆದರೆ? ಮತ್ತೆ ವಿಶೇಷತೆಗಾಗಿ ಸಾಮಾನ್ಯರ ಆಹುತಿ, ಸಂಸ್ಕೃತಿ, ನಾಗರೀಕತೆ, ಪ್ರಗತಿ ಎಲ್ಲ ಶ್ಮಶಾನರುದ್ರನ ಮೆಯ್ಗೆ ಭಸ್ಮ ಲೇಪನವಾಗುತ್ತದೆ. ಸರಿ, ಪುನರ್ ಸೃಷ್ಟಿಯ ಪ್ರಾರಂಭ, ನಾಟಕಾರಂಭ: ವಿಶ್ವಲೀಲೆ ಸಾಗುತ್ತದೆ." ಎಂದಿದ್ದಾರೆ ಕುವೆಂಪು.

ಭಾರತ ಯುದ್ಧ ನಡೆದದ್ದು 'ವಿಶೇಷತೆಗಾಗಿ' ಪುನರ್‌ಸೃಷ್ಟಿಗಾಗಿ, ನವ ಸೃಷ್ಟಿಗಾಗಿ ಹಳೆಯುದರ ಬಲಿಯಾಗಬೇಕು. ಏಕ ಕಾಲದಲ್ಲಿ ಹೊಸತು ಹಳತು ಸೇರಿದಕ್ಕೂ ಅವಕಾಶವಿಲ್ಲ. ಪಕ್ವವಾದ ಫಲವೊಂದು ತನ್ನನ್ನಳಿಸಿಕೊಂಡು ಹೊಸ ಸಸ್ಯವೊಂದರ ಜನನಕ್ಕೆ ಕಾರಣವಾಗುತ್ತದೆ. ಕಲಿಯುಗದ ಸೃಷ್ಟಿಗೆ ದ್ವಾಪರ ಯುಗದ ಅಳಿವು ಅನಿವಾರ್ಯ. ನೆಪವಿಲ್ಲದೆ ಜವರಾಯ ಕೊಲ್ಲ. ದಾಯಾದಿ ಮಾತ್ಸರ್ಯವೇ ದ್ವಾಪರ ಯುಗದ ಅಳಿವಿಗೆ ಕಾರಣವಾಯಿತು.

ನಾಟಕದ ಆರಂಭದಿಂದಲೇ ಕರುಣರಸದ ಉಗಮವಾಗುತ್ತದೆ. ಯುಗಾಧಿಕಾರಿ ದ್ವಾಪರ ಆಗಮಿಸುತ್ತಾನೆ. ನಿಟ್ಟುಸಿರು ಬಿಡುತ್ತಾನೆ, ಕಂಬನಿದುಂಬುತ್ತಾನೆ. ದ್ವಾಪರಯುಗದ ವೈಭವವೇನೂ ಕಡಿಮೆಯಲ್ಲ. ಕ್ಷಾತ್ರ ತೇಜಸ್ಸು ಕಣ್ಣು ಕೋರೈಸುತ್ತಿದ್ದಂತಹ ಯುಗ. ತ್ಯಾಗಶೀಲರಿಂದ, ಛಲವಂತರಿಂದ, ಸ್ವಾಭಿಮಾನರಿಂದ, ಸ್ವಾಮಿಭಕ್ತರಿಂದ ಕಳೆಗೊಂಡಿದ್ದ ಯುಗವದು. ತನ್ನ ಕಣ್ಣುಗಳಿಂದಲೇ ಯುಗದ ಉನ್ನತಿಯನ್ನು ಕಂಡು ಬೀಗಿದ್ದ ದ್ವಾಪರ. ೧೮ ದಿನಗಳ ಘೋರ ಸಂಗ್ರಾಮದ ನಂತರ ಕುರುಕ್ಷೇತ್ರವನ್ನು ಪ್ರವೇಶಿಸಿದ್ದಾನೆ. ಅವನ ಕಣ್ಣುಗಳು ಕ್ಷಾತ್ರ ತೇಜಸ್ಸನ್ನು ಕಾಣಲು ಹಂಬಲಿಸುತ್ತಿವೆ. ಕಿವಿಗಳು ಛಾಪಠಂಕಾರವನ್ನು ಕೇಳ ಬಯಸುತ್ತಿವೆ. ಅಶ್ವಗಳ ಹೇಷಾರವವನ್ನು ಕಾಣಲೆಳಸುತ್ತಿವೆ. ಆದರೆ ? ಆತ ಕಾಣುವುದು ಮೂಗುವಟ್ಟಿರ್ಪ ಶ್ಮಶಾನವನ್ನು ! ಪೆಣದ ಬಣಬೆಗಳನ್ನು ! ರಕ್ತಸ್ರೋತವನ್ನು! ಸತ್ತಾನೆಗಳ ಮೊತ್ತವನ್ನು ! ಭೀಕರ ಮೌನವನ್ನು ! ವೈಭವದ ತುತ್ತತುದಿಯನ್ನು ಕಂಡ ಕಣ್ಣುಗಳು ವಿಲಯವನ್ನು ಕಾಣ ಬಯಸವು. ಅವನ ಸ್ಥಿತಿ ಏನಾಗಿರಬೇಡ ? ಉನ್ನತ ಸಂಸ್ಕೃತಿಯಿಂದೊಡಗೂಡಿದ್ದ, ಉನ್ನತ ವ್ಯಕ್ತಿಗಳಿಂದ ನಿಬಿಡವಾಗಿದ್ದ, ಯುಗದ ಆಳಿವಿಗೆ ೧೮ ದಿನಗಳೇ ಸಾಕಾದುವಲ್ಲ! ಮಾತ್ಸರ್ಯದ ದಳ್ಳುರಿಯೇ ಇವಕ್ಕೆ ಕಾರಣವಾಯಿತಲ್ಲ!

ದುಃಖೋನ್ಮಾದದಿಂದ ತೊಳಲುತ್ತಾನೆ ದ್ವಾಪರ.

"ಕಾಳಗವ್ರೋ ಬಿತ್ತರದ ಕೊಲೆಗೆಯ್ಮ ! " ಎನ್ನುವ ಸತ್ಯ ಅವನಿಗೆ ಗೋಚರವಾಗುತ್ತದೆ. ಈ ಕಾಳಗವಾದರೋ ನಡೆದುದು ಏತಕ್ಕೆ ? ಗೆಲುವಿಗೆ! ಗೆಲುವೆಂದರೇನ್ ? ಸೋಲ್ವರ ಸಂತಾಪಂ ವಿಜಯಿಗಳ ಪೆರ್ಮೆ ! " ಇಷ್ಟೇ ತಾನೆ! ಎಂಥ ಸಾಧನೆ! ಇದಕ್ಕಾಗಿ ಇಂದೂ ಅದೆಷ್ಟು ದೇಶಗಳು ಸಮರ ಸಿದ್ಧತೆ ನಡೆಸಿಲ್ಲ? ಈ ಗೆಲುವಿಗೆ ಚಿರಂಜೀವತ್ವವಿದೆಯೇನು ? ಅಥವಾ ಕೇಳುವವರ ಎದೆ ಉಬ್ಬುತ್ತದೆಯೇನು ? ದ್ವಾಪರನಾಡುವ ಮಾತುಗಳಿಂದ ಕವಿಗೆ ಯುದ್ಧದ ಬಗೆಗೆ ಇರುವ ತಿರಸ್ಕಾರ ದೃಷ್ಟಿ ಗೋಚರವಾಗುತ್ತದೆ. ಮುಂದುವರಿದ ದ್ವಾಪರ ಅನನ್ಯ ಚಿತ್ರನಾಗಿದ್ದಾನೆ. ಪ್ರತಿಯೊಂದು ದೃಶ್ಯವೂ ಅವನ ಕಣ್ಣುಗಳನ್ನು ತಿವಿಯುತ್ತಿದೆ.

"ನಿನ್ನ ಪೊನ್ನೈಳಗಿನಂ ಈ ಭಯಂಕರ ನೃತ್ಯಮಂ ಬೆಳಗದಿರ್ !"
ಇನ್ನಿದು ಕುರುಕ್ಷೇತ್ರಮಲ್ತು ಇಳೆಯ ಬಲ್ಮಸಣಂ॥
ಎಂದು ದುಃಖತಪ್ತನಾಗಿ ಬೆಂಗದಿರನನ್ನು ಪ್ರಾರ್ಥಿಸುತ್ತಾನೆ.

ದ್ವಾಪರ ಸಾಹುವ ಒಂದೊಂದು ಹಂತವು ಕುರುಕ್ಷೇತ್ರದ ರುದ್ರಭವ್ಯತೆಯನ್ನು ಕಣ್ಣಿಗೆ ಕಟ್ಟುವಂತಿದೆ. ಈ ಹೊತ್ತಿನಲ್ಲೇ ಕಲಿಪುರುಷನೂ ಪ್ರವೇಶಿಸು
ತ್ತಾನೆ. 'ಗಂಡಸ್ಯೋಪರಿ ಸ್ಫೋಟಕಂ' ಎಂಬಂತಾಗುತ್ತದೆ ದ್ವಾಪರನ ಸ್ಥಿತಿ.
ದ್ವಾಪರನ ಯುಗ ಒಮ್ಮೆ ವೈಭವ ಪೂರಿತವಾಗಿದ್ದುದು ಸುಳ್ಳಲ್ಲ. ಯುಗಾಧಿಕಾರಿಯಾಗಲು ಬಂದಿರುವ ಕಲಿಯನ್ನು ಶ್ಮಶಾನದಲ್ಲಿ ಇದಿರುಗೊಳ್ಳುವಂತಾಯಿತಲ್ಲ! ಶ್ಮಶಾನದಲ್ಲಿ ಪಟ್ಟಾಭಿಷೇಕವಾಗುವಂತಾಯಿತಲ್ಲ! ಹೋಗಲಿ ಯುಗಾಧಿಕಾರಿಗೆ ತನ್ನ ಕಾಲ ಸಾಮ್ರಾಜ್ಯವನ್ನು ಒಪ್ಪಿಸುವಾಗ ತನ್ನ ವೈಭವದ ಕುರುಹಾಗಿ ಆವುದನ್ನು ತೋರಬೇಕು? ಅಥವಾ ಯಾವುದನ್ನು ಬಳುವಳಿಯಾಗಿ ಕೊಡಬೇಕು? ಅಳಿದ ತುಳಿಲಾಳ್ಗಳ ಶವವನ್ನು ಬಹುಮಾನವಾಗಿ ಕೊಡಬೇಕೇನು? ಅಥವಾ ಮುರಿದ ಹೊಂದೇರುಗಳನ್ನೋ! ಎಂತಹ ಹೃದಯ ವಿದ್ರಾವಕ ಸನ್ನಿವೇಶ! ಕುವೆಂಪು ಅವರ ಪ್ರತಿಭೋನ್ನತಿಗೆ ಹಿಡಿದ ಕನ್ನಡಿಯಾಗಿದೆ.

ಕಲಿಗೆ ಆಶ್ಚರ್ಯ. ಯುಗದ ಈ ಅವಸ್ಥೆಗೆ ದ್ವಾಪರ ಎಷ್ಟರಮಟ್ಟಿಗೆ ಕಾರಣ? ಇದರಲ್ಲಿ ಅವನ ಅಪರಾಧವಾದರೂ ಏನು? ಸೃಷ್ಟಿ ಧರ್ಮವೇ ಅಂಥದು. ಯಾರ ಇಚ್ಛೆ ಅನಿಚ್ಛೆಗಳೂ ಅದಕ್ಕೆ ಬೇಡ.

ವ್ಯಕ್ತ ಸೃಷ್ಟಿಯನೆಲ್ಲ
ತನ್ನೊಡಲಿನೊಳ್ ಪೊತ್ತು ಸಲಹಿದಾ ನಿತ್ಯತೆಯೆ
ಮರಳಿಯದನ್ ಅವ್ಯಕ್ತವನ್ನಾಗಿ ಮಾಡಲ್ಕೆ
ಯುಗ ಪುರುಷನಾದ ನೀನದಕೇಕೆ ದುಮ್ಮಾನಂ ಗೊಳ್ಳುತಿಹೆ?

ಎಂದು ದ್ವಾಪರನನ್ನು ಸಮಾಧಾನ ಪಡಿಸುತ್ತಾನೆ ಕಲಿಪುರುಷ. ದ್ವಾಪರಯುಗದ ಸೃಷ್ಟಿಗೆ: ವೈಭವಕ್ಕೆ: ಯಾವ ಶಕ್ತಿ ಕಾರಣವಾಯಿತೋ ಅದೇ ದ್ವಾಪರ ಯುಗದ ವಿನಾಶಕ್ಕೂ ಕಾರಣವಾಗಿದೆ. ದ್ವಾಪರಯುಗಾಧಿಕಾರಿಯೇ ಹೊರತು ಸೃಷ್ಟಿಕರ್ತನಲ್ಲವಲ್ಲ.

"ರಸಪೂರ್ಣ ಶೂನ್ಯದಿಂ ಹೊಗೆ ತಂದುದೀ
ವಿಶ್ವಂ: ಅದರೊಳೆ ವಿಲೀನ ಮಾಗದಗುವುದು ತಾನ್
ಅಹೊಡೇನ್? ಮರಳಿ ಬೇರೊಂದಾಕೃತಿಯ ತಳೆದು
ಬೇರೊಂದು ಕಟ್ಟಳೆಗೆ ತಲೆಬಾಗಿ ಬೇರೊಂದು

ಕಾಲದಲಿ ಮೂಡುವುದು. ಲೀಲೆಯೆಂಬುವುದೆಲ್ಲ
ಮೂಡುವುದು ಮುಳುಗುವುದರಲ್ಲಿಹುದು. ಅದಕೇಕೆ
ಮರುಗುವುದು ? "—ಎನ್ನುತ್ತಾನೆ ಕಲಿ.

ಕಲಿಯ ಮಾತುಗಳಲ್ಲಿ ಸೃಷ್ಟಿತತ್ವ ಸುವ್ಯಕ್ತವಾಗಿದೆ. ಅಳಿವು ಉಳಿವು ಸೃಷ್ಟಿಯದೇ ಹೊರತು ಅನ್ಯರದಲ್ಲ. ಅನ್ಯರನ್ನು ನೆಪ ಮಾತ್ರಕ್ಕೆ ಗುರಿಯಾಗಿಸುವುದಷ್ಟೆ. ಕೌರವ ಪಾಂಡವರಾದರೋ ಸೃಷ್ಟಿಕರ್ತನ ಕೈಗೊಂಬೆಗಳು ಆತ ಕುಣಿಸಿದಂತೆ ಕುಣಿದರು. ಸೃಷ್ಟಿಕರ್ತನ ಇಚ್ಛೆ ಏನಿತ್ತೋ ಅದು ನಡೆಯಿತು. ಇಲ್ಲಿಗೇ ಅದು ಮುಗಿಯಿತೇನು ? ಇಲ್ಲ. ಬೇರೊಂದು ರೂಪದಲ್ಲಿ ಜನಿಸುವುದು. ಸೃಷ್ಟಿ ನಿತ್ಯತಾನೆ. ವಸ್ತುಸ್ಥಿತಿ ಹೀಗಿರುವಾಗ ಕಂಬನಿಯಾಗಲೀ ನಿಟ್ಟುಸಿರಾಗಲೀ ಸಲ್ಲದು. ಅಲ್ಲವೆ?

ದ್ವಾಪರನ ಮನಸ್ಸಿಗೆ ಒಂದು ರೀತಿ ಸಮಾಧಾನವಾದರೂ ಹಲವಾರು ಸಮಸ್ಯೆಗಳು ಮೂಡಿ ಬರುತ್ತವೆ ತನ್ನ ಯುಗದಲ್ಲಿದ್ದಂತಹ ಭೀಷ್ಮ, ದ್ರೋಣ, ಕರ್ಣ, ದುರ್ಯೋಧನ–ಈ ಮುಂತಾದ ಉನ್ನತ ವ್ಯಕ್ತಿತ್ವವನ್ನುಳ್ಳ ವ್ಯಕ್ತಿಗಳು ಹುಟ್ಟುತ್ತಾರೆಯೋ ಕಲಿಯುಗದಲ್ಲಿ? ಎಂದು ಕವಿಯ ಆಶಾವಾದಿತ್ವ ಕಲಿಯ ಉತ್ತರದಲ್ಲಿ ಹೊಮ್ಮಿದೆ. ದ್ವಾಪರಯುಗದ ವ್ಯಕ್ತಿಗಳಿಗಿಂತ ಉನ್ನತವಾದ, ವಿಸ್ತಾರ ದೃಷ್ಟಿಯುಳ್ಳ ವ್ಯಕ್ತಿಗಳು ಜನಿಸದಿರಲಾರರು. ಅಂದು ಮಂತ್ರಾಸ್ತ್ರಗಳ ಪರಿಣತಿ ವ್ಯಕ್ತವಾಗಿದ್ದರೆ; ಇಂದು ವಿಜ್ಞಾನ ಸಾಧಿಸಿರುವ ಕಾರ್ಯವೇನೂ ಕಡಿಮೆಯೆ ? ಕರ್ಜೋಗೆಗಳನ್ನು ಕಾರುವ ಸಿಡಿಲುಗಳಾದ ಅಣ್ವಸ್ತ್ರಗಳಿಲ್ಲವೇನು? ಚಂದ್ರನ ಕಕ್ಷೆಗೆ ಹೋಗಿಲ್ಲವೇನು ? ಗ್ರಹ ತಾರೆಗಳನ್ನು ಅರಿಯುವ ಪ್ರಯತ್ನ ನಡೆದಿಲ್ಲವೇನು ? ದ್ವಾಪರನ ಯುಗದ ಮೇಲಿನ ಅಭಿಮಾನ, ವ್ಯಾಮೋಹವಷ್ಟೇ ಈ ಸಮಸ್ಯೆಗೆ ಕಾರಣ ಅಷ್ಟೆ. ಕೊನೆಗೆ ಕಲಿ ಹೇಳುವ ಮಾತುಗಳನ್ನು ನೋಡಿ:—

"ಸಾವಿನಲಿ ಹೊಸಬಾಳು ಹುದುಗಿಹುದು; ನಾಶದಲಿ
ನವಸೃಷ್ಟಿ ಪವಡಿಸಿದೆ. ನೂರು ಮಾತಿಂದೇನ್
ಸಾವೆ ಹೊಸ ಬಾಳಿಗಾಧಾರವಾಗಿರ್ಪುದು
ನಾಶವೇ ನವಸೃಷ್ಟಿಗುತ್ಸಾಹವಾದಪುದು ! "

ಪುನರ್ಜನ್ಮದಲ್ಲಿ ನಂಬಿಕೆಯಿರುವ ಭಾರತೀಯರಾದರೂ ಒಪ್ಪಲೇಬೇಕಷ್ಟೆ? ಸೃಷ್ಟಿ ಹೊಸತು, ನಿಜ. ಆದರೆ ಆ ಅನುಭವ ಎಂಬುದಕ್ಕೆ ಭೂತಕಾಲದ ತಳಹದಿ ಇದ್ದೇ ಇರುತ್ತದೆ. ಆದುದರಿಂದಲೇ ಕಲಿ ಹೇಳುತ್ತಾನೆ—

"ಪೂರ್ವ ಯುಗದನುಭವದ ತಳಹದಿಯ ಮೇಲೆಯೇ
ಬರುವ ಕಾಲದ ಭವ್ಯ ಮಂದಿರವ ನಿರ್ಮಿಪೆನ್" ಎಂದು.

ಇದನ್ನು ಸಾಧಿಸುವುದಕ್ಕೆ ಆಧಾರಗಳೇನೂ ಕಡಿಮೆಯಿಲ್ಲ. ಆದರೆ ಇಲ್ಲಿ ಅದಕ್ಕೆ ಅವಕಾಶವಿಲ್ಲ. ಕಲಿಯ ಮಾತುಗಳಿಂದ ದ್ವಾಪರನ ದುಃಖ ತಿಳಿಯಾಗುತ್ತದೆ, ತನ್ನ ಕಿರೀಟ, ರಾಜಕರವಾಲಗಳನ್ನು ಕಲಿಗೆ ಅರ್ಪಿಸಿ ದುರ್ಯೋಧನನನ್ನು ಕಾಣಲು ಹೊರಡುತ್ತಾನೆ. ಇದುವರೆಗೆ ದ್ವಾಪರನನ್ನು ಸಮಾಧಾನಪಡಿಸಿದ ಕಲಿಗೆ ಆಶ್ಚರ್ಯವಾಗುತ್ತದೆ: ಶ್ಮಶಾನದ ದೃಶ್ಯವನ್ನು ನೋಡಿ!

ಈ ವಿಪರೀತವೆಲ್ಲ ಏನು? ಎಂದು ಪ್ರಶ್ನಿಸುತ್ತಾನೆ. ಕಲಿಯ ಕಣ್ಣಿಗೆ

"ಜನನ ಮರಣದ ದುಃಖಗಳ್ ಪಿಂಡುಗೊಂಡು ಈ
ಮಸಣದಲಿ ನೆರವಣಿಗೆ ಮಾಳ್ಪಂತೆ ತೋರ್ದಪುದು!"

ಎಂಥ ಭಯಾನಕ ದೃಶ್ಯ! ಮೈನಡುಗುತ್ತದೆ. ದ್ವಾಪರನಾಡುವ ಮಾತುಗಳನ್ನು ನೋಡಿ—

"ಇದೆ ಪರಾಕ್ರಮ ಶಾಲಿಗಳ ರಣೋತ್ಸಾಹಕ್ಕೆ
ಪ್ರತಿಫಲಂ! ನೋಡಿದೆ ರಣೋನ್ಮತ್ತರಾಗಿರ್ದ
ಮೆಯ್ಗಲಿಗಳದಟಿಸಿಂದುದಿಸಿರ್ದ ಮಸಣಂ!
ಮೇಣಿದೆ ಮಹಾಭಾರತ ಕುರುಕ್ಷೇತ್ರದಿಂ,
ವೀರ ಸಂಗ್ರಾಮದಿಂ, ಲೋಕಪ್ರಸಿದ್ಧವಹ
ವಿಜಯದಿಂ ಮೂಡಿ ಬಂದಿಹ ಸೂಡುಗಳ ಬೀಡು!
ಶವಗಳುಗ್ರಾಣಂ! ನಿಶಾಚರಿಗಳಿಗೆ ನಾಡು!

ಈ ಮಾತುಗಳಿಗೆ ವಿವರಣೆಯ ಅಗತ್ಯವೇ ಇಲ್ಲ. ಭಾರತ ಯುದ್ಧದ ಪರಿಣಾಮವನ್ನು ಅದ್ಭುತವಾಗಿ ಪ್ರತಿಬಿಂಬಿಸುತ್ತಿವೆ. ದ್ವಾಪರ ಯುಗದವೀರರ ರಣೋತ್ಸಾಹದ ಸ್ಮಾರಕ ಕುರುಕ್ಷೇತ್ರ ಶ್ಮಶಾನ! ಇದೇ ಯುದ್ಧ ಜಗತ್ಪ್ರಸಿದ್ಧವೂ ಹೌದು! ಶ್ರೀ ಕುವೆಂಪು ಅವರ ಒಂದೊಂದು ಮಾತುಗಳೂ ಯುದ್ಧಾಕಾಂಕ್ಷಿಗಳಿಗೆ ಚಾಟಿಯೇಟು!

ಯುದ್ಧದ ಬೇಗೆಯ ತೀವ್ರತೆಯನ್ನು ಪ್ರತಿಬಿಂಬಿಸುವುದಕ್ಕಾಗಿ "ಶ್ಮಶಾನ ಕುರುಕ್ಷೇತ್ರ"ವನ್ನು ವಿವಿಧ ದೃಷ್ಟಿಕೋನಗಳಿಂದ ಬಿಟ್ಟಿಸಿದ್ದಾರೆ. ಕುವೆಂಪು ಅವರ ಪ್ರತಿಭೆಯಿಂದೊಗೆದ ಕಾಲ್ಪನಿಕ ಸನ್ನಿವೇಶಗಳು "ಏಕೋ ರಸಃ ಕರುಣ ಏವ" ಎಂಬ ಮಾತನ್ನು ಸಮರ್ಥಿಸುತ್ತಿವೆ.

ಚಾಣೂರ, ಗೀರ್ವಾಣ, ನೀಲಾಕ್ಷ ಎಂಬ ದುರ್ಯೋಧನನ ಸೇವಕರು, ಯುದ್ಧ ಭೂಮಿಯಲ್ಲಿ ತಮ್ಮ ಸ್ವಾಮಿಯನ್ನರಸುತ್ತಿದ್ದಾರೆ. ಕುರುಕುಲ ಸಾರ್ವಭೌಮನನ್ನು ಅರಸಿಕೊಂಡು ಬಂದ ಸೇವಕರು ಯುದ್ಧ ಎಷ್ಟು ಭೀಕರವಾದುದೆಂಬುದನ್ನು ಮನಗಾಣುತ್ತಾರೆ. ದುರ್ಯೋಧನನೇನೂ ಹೇಡಿಯಲ್ಲ. ಅವನ ಪಕ್ಷದಲ್ಲಿದ್ದ ವೀರರೇನು ಕಡಿಮೆಯೆ? ಪಾಂಡವರನ್ನು ನಿರ್ನಾಮ ಮಾಡಬೇಕೆಂಬ ಸಂಕಲ್ಪವೊಂದಿದ್ದರೆ ಸಾಧ್ಯವಿರುತ್ತಿರಲಿಲ್ಲವೆ? ಎಲ್ಲರೂ ಇದ್ದರು; ಎಲ್ಲವೂ ಇದ್ದುವು. ದೈವಬಲವೊಂದಿರಲಿಲ್ಲ ಅಷ್ಟೆ. ಆದುದರಿಂದಲೇ ಯುದ್ಧವನ್ನು ತಿರಸ್ಕರಿಸುವ ಈ ಸೇವಕರು ದುರ್ಯೋಧನನ ವಿರುದ್ಧ ಒಂದೇ ಒಂದು ಮಾತನ್ನಾದರೂ ಆಡುವುದಿಲ್ಲ. ಚಾಣೂರ ದುರ್ಯೋಧನನ್ನು ಕುರಿತು ಆಡುವ ಮಾತುಗಳು ದುರ್ಯೋಧನನು ತನ್ನ ಸೇವಕರನ್ನು ಎಷ್ಟರ ಮಟ್ಟಿಗೆ ಪ್ರೀತಿಸುತ್ತಿದ್ದ ಎನ್ನುವುದನ್ನು ಸ್ಪಷ್ಟಪಡಿಸುತ್ತವೆ.

ಇನ್ನೊಂದು ಸನ್ನಿವೇಶ ಸಹೃದಯರನ್ನು ಕರುಣರಸ ಜಲಧಿಯಲ್ಲಿ ಮುಳುಗಿಸಿ ಬಿಡುವಂಥದು. ಮಡಿದ ಯೋಧನೊಬ್ಬನ ಪತ್ನಿ ಮಗುವಿನೊಂದಿಗೆ ಕಳೇಬರವನ್ನು ಹುಡುಕಲು ಕುರುಕ್ಷೇತ್ರ ಶ್ಮಶಾನಕ್ಕೆ ಬಂದಿದ್ದಾಳೆ. ತನ್ನ ಪತಿಯದೆಂದು ಭಾವಿಸಿ ಯಾವನೋ ಯೋಧನ ಕಳೇಬರವನ್ನು ಬಗ್ಗಿ ನೋಡುತ್ತಾಳೆ. ಅವಳಿಗೆ ಪತಿವಿಯೋಗದ ದುಃಖ. ಮರಣವೆಂದರೇನು? ಯುದ್ಧವೆಂದರೇನೆಂಬುದನ್ನರಿಯದ ಆ ಕಂದ ತಾಯಿಯನ್ನು ಕೇಳುತ್ತದೆ, ಬಿದ್ದಿರುವವರು ಯಾರು? ಎಂದು. ಇವನಿಗೆ ಮಲಗಲು ಮನೆಯಿಲ್ಲವೇನು? ಪರದೇಶಿಯೇನು? ಎಂದು ಕೇಳುತ್ತದೆ. ವಸ್ತುಸ್ಥಿತಿಯನ್ನು ಮಗುವಿನ ಮನಸ್ಸಿಗೆ ಹಿಡಿಯುವಂತೆ ಆ ತಾಯಿಗೆ ಹೇಳಲು ಸಾಧ್ಯವೇನು? "ಹೆಣ! ಹೆಣ! ಸತ್ತ ಸುಡುಗಾಡಿನ ಹೆಣ" ಎಂದು ಹೇಳುತ್ತಾಳೆ. ಹೃದಯ ವಿದ್ರಾವಕವಾಗಿದೆ ಸನ್ನಿವೇಶ. ಯುದ್ಧದ ಬೇಗೆಯಿಂದ ಅದೆಷ್ಟು ಸಂಸಾರಗಳ ಪತನವಾಗಿವೆ? ಅದೆಷ್ಟರ ಮಟ್ಟಿಗೆ ಅಳಿಸಲಾರದ ಭೀಕರ ಮುದ್ರೆಯನ್ನೊತ್ತಿದೆ? ಎಂಬುದು ಹೃದಯಕ್ಕೆ ನಿಲುಕ ಬಲ್ಲ ಸಂಗತಿಯೇ ಹೊರತು ಲೇಖನಿಗಲ್ಲ! ಇಂತಹ ಸನ್ನಿವೇಶಗಳಲ್ಲಿ ಕವಿಯ ಸನ್ನಿವೇಶ ಸೃಷ್ಟಿಯ ಪ್ರಜ್ಞೆ ಹಾಗೂ ನಿರೂಪಣಾಶಕ್ತಿ ಗೋಚರವಾಗುತ್ತದೆ.

ಶ್ಮಶಾನದಲ್ಲೇ ಕಾಲಕಳೆಯುವ ಮರುಳುಗಳು ಮಾನವನ ಮರುಳುತನವನ್ನು ಎತ್ತಿ ಆಡುತ್ತವೆ! ಮೊದಲೇ ಮರುಳುಗಳು! "ಪಿಂತಣ್ಗೆ ಮತ್ತಾವ ಕಾಳಗದೊಳು ಇಂತಪ್ಪ ಜೀವಮುಂ, ಇಂತಪ್ಪ ಕೊಲೆಯುಮಂ ಪಾರ್ದಿಯೆನ್" ಎಂದು ಈ ಮರುಳುಗಳು ಹೇಳುತ್ತವೆ!

"ಮಾನವರ್ ಕೊಲೆಗೆ ಕೈಯಿಂದೆ ಮಾಯನ್ ಪಿರಿದರ್ಪರ್" ಎನ್ನುವಾಗ ಹಿಂದಿನ ಇತಿಹಾಸದ ನೆನಪು ನಮಗೆ ಬರುವುದು ಸಾಧ್ಯ. ಮರುಳುಗಳ ಮಾತು ಖಂಡಿತ ಸುಳ್ಳಲ್ಲ. "ಮಾನವ ಜನ್ಮ ದೊಡ್ಡದು" ಎನ್ನುವ ಮಾತನ್ನು ಈ ನಾಟಕ

ವನ್ನು ಓದುವಾಗಲಾದರೂ ಸಂದೇಹಿಸುವಂತಾಗುತ್ತದೆ! ಒಟ್ಟಿನಲ್ಲಿ ಮರುಳುಗಳ ಮಾತುಗಳು ಯುದ್ಧ ಹಾಗೂ ಮಾನವ ಕುಲದ ಬಗೆಗೆ ಇರುವ ತಿರಸ್ಕಾರವನ್ನೂ ಪ್ರತಿಬಿಂಬಿಸುತ್ತವೆ.

ಕೃಷ್ಣ ಹಾಗೂ ವಿದುರರ ಸಂವಾದದಲ್ಲಿ ಶ್ರೀ ಕುವೆಂಪು ಅವರು ದಾರ್ಶನಿಕರಾಗಿದ್ದಾರೆ. ವೃದ್ಧೆಯೊಬ್ಬಳು ಮಗನನ್ನು ಅರಸಿ ಬಳಲಿ ಬೆಂಡಾಗಿ, ನಾರಾಯಣ ನಾರಾಯಣ ಎಂದು ಕೂಗುತ್ತಾಳೆ, ಅವನು ಉಳಿದಿದ್ದರೆ ತಾನೆ ಉತ್ತರ ಕೊಡುವುದು? ಶ್ರೀ ಕೃಷ್ಣ ತಾನೇ ಕೂಗಿಗೆ ಓಗೊಟ್ಟು ಸಂತೈಸುತ್ತಾನೆ. ವಿದುರನಿಗೆ ಆಶ್ಚರ್ಯವಾಗುತ್ತದೆ.

ಶ್ರೀ ಕೃಷ್ಣನನ್ನು "ದೀನ ಸಂರಕ್ಷಕನೆ ದುರ್ಜನರ್ ಸಜ್ಜನರ್
ಎಂಬ ತರತಮ ಭಾವವಿಲ್ಲದೆಯೆ ಎಲ್ಲರ್ಗೆ
ಪದವಿಯೊಂದನೆ ಕೊಟ್ಟು ಪೊರೆವೆಯೇನು ?"

ಎಂದು ಪ್ರಶ್ನಿಸುತ್ತಾನೆ ವಿದುರ. ಶ್ರೀ ಕೃಷ್ಣ ಹೇಳುತ್ತಾನೆ—

"ಅಂತರಂಗದ ಮೂಲ ತತ್ತ್ವವನರಿಯದಿಹ
ಕುಬ್ಜ ವೃಷ್ಟಿಯ ನರರ್ ತೆಗಳುವರ್, ನೂಂಕುವರ್
ಎಂದಾನ್, ಎಲ್ಲಮಂ ತಿಳಿದಾನುಂ ಅಂತೆಸೆಗೆ
ನಸ್ನಿಗೇ: ಕುಂದಹುದು. ಎನಗೆ ದ್ವೇಷಿಗಳಿಲ್ಲ;
ಪ್ರಿಯರುಮಿಲ್ಲ: ಎನ್ನ ದಿಟ್ಟಿಗೆ ಎಲ್ಲರೊಂದೇ"||

'ಮಮ ಪ್ರಾಣಾಹಿ ಪಾಂಡವಾಃ' ಎನ್ನುವ ಮಾತಿಗೂ, ಈ ಮಾತಿಗೂ ಎಷ್ಟು ವ್ಯತ್ಯಾಸ! ಮಾನವರಲ್ಲೇನೋ ಪಕ್ಷಪಾತ ದೃಷ್ಟಿಯಿರುವುದು ಸಹಜ, ಆದರೆ ಮಾನವನನ್ನು ಮೀರಿ ನಿಂತ ಶಕ್ತಿಗೂ ಅದೇ ಪಕ್ಷಪಾತ ದೃಷ್ಟಿಯಿದ್ದರೆ ಯಾವ ದೃಷ್ಟಿಯಿಂದ ಮಾನವನಿಗಿಂತ ಉನ್ನತವೆನ್ನಬಹುದು? ಮುಂದುವರಿದು ಕೃಷ್ಣನೇ ಹೇಳುತ್ತಾನೆ—

"ನಾಟಕದ ರಂಗದಲಿ ರಾಜಮಂತ್ರಿಗಳೆಂಬ
ಸೈನಿಕ ಸೇನಾನಿ ಪ್ರಜೆಗಳೆಂದೆಂಬ
ಸಜ್ಜನರ್ ದುರ್ಜನರ್ ಪಾಪಿಗಳೆಂದೆಂಬ
ಭೇದಮಂ ಲೀಲೆಗೋಸುಗವಾಗಿ ನಾನುಲಿಯುವೆನ್.
ಲೀಲೆ ಮುಗಿಯಲ್ಕೆಲ್ಲರೊಂದಾಗಿ ಪೋದಪರ್||

ಉಪಾಯನ ಕೃತಿ ಕರಂಡ



ರಾಜಭಾಷಾ ವಿದ್ವಾನ್
ಕಾಶಿವಿಶ್ವನಾಥಶೆಟ್ಟಿ, ಎಂ.ಎ.,
ಸಂಪಾದಕರು ಮತ್ತು ಉಪಾಧ್ಯಕ್ಷರು

ಈ ತಾರತಮ್ಯ ಲೀಲೆಗೋಸ್ಕರವಾಗಿ ಅಷ್ಟೆ. ಜೀವನ ನಾಟಕಮಂದಿರದಲ್ಲಿ ಪಾತ್ರಧಾರಿಗಳು ಸೂತ್ರಧಾರ ಕುಣಿಸಿದಂತೆ ಕುಣಿಯುತ್ತಾರೆ. ಬಣ್ಣ ಕಳಚಿದ ಮೇಲೆ ಎಲ್ಲರೂ ಒಟ್ಟಾಗಿ ಹೋಗಬೇಕಷ್ಟೆ? ಕುವೆಂಪು ಅವರ ಶ್ರೀಕೃಷ್ಣ ಹೃದಯ ವೈಶಾಲ್ಯವನ್ನುಳ್ಳವನಾಗಿದ್ದಾನೆ.

ಕುರುಕ್ಷೇತ್ರ ಶ್ಮಶಾನದ ಮತ್ತೊಂದು ಭಾಗ. ಸಂಜಯನೊಡನೆ ಧೃತರಾಷ್ಟ್ರ ತನ್ನ ಮಗನನ್ನು ನೋಡುವುದಕ್ಕಾಗಿ ಕಾತುರದಿಂದ ಬರುತ್ತಿದ್ದಾನೆ. ಸಂಜಯನಿಗೆ ಶ್ಮಶಾನದ ದೃಶ್ಯಗಳನ್ನು ಕಣ್ಣಿಂದ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ, ಧೃತರಾಷ್ಟ್ರನಿಗೆ:

“ಕಣ್ಗಳಿಲ್ಲದ ನೀನೆ
ಧನ್ಯನಾದಯ್ ಇಂದು ಧೃತರಾಷ್ಟ್ರ ಭೂಮಿಪನೆ
ಐದಿಂದ್ರಿಯಂಗಳಿಂದೈತರ್ಪ ಬೇನೆಗಿಂ
ನಾಲ್ಕಿಂದ್ರಿಯಗಳಿಂಬಹ ಬೇನೆ ತಾನ್
ಇನಿತು ಲಘುತರಮೈಸೆ?

ಎನ್ನುತ್ತಾನೆ ವಿದುರ.

ಅಪ್ಯಾಯಮಾನವಾದ ನೋಟವನ್ನು ನೋಡುವುದಕ್ಕೆ ಕಣ್ಣು ಅವಶ್ಯಕ. ಆದರೆ ಇಂತಹ ಭಯಂಕರವಾದ ದೃಶ್ಯಗಳನ್ನು ನೋಡಲು ಕಣ್ಣಿರದಿದ್ದರೇ ವಾಸಿ! ಎಂಬುದು ವಿದುರನ ಅಭಿಪ್ರಾಯವಾದರೆ, ಕುರುಡನಾದ ಧೃತರಾಷ್ಟ್ರ ಹೇಳುತ್ತಾನೆ–

“ಕಣ್ಗಳಿಯದಿಹ ನೋವು ಕಿವಿಗಳಿಗೆರಡು ಮಡಿ
ಆದಪುದು ಓ ವಿಧಿ, ಕುರುಡಿಂಗೇತರ್ಕೆ
ಕಿವುಡುಂ ಮಂ ಪ್ರೇರ್ದಿಸದೆ ನೀನೆನ್ನ ಮಾಡಿದಯ್?” ಎಂದು.

ಎಂಥ ಮಾತು! ಕರುಣದ ಸೆಲೆಯೊಡೆಯುತ್ತದೆ. ವಾಸ್ತವಿಕತೆಯ ನಗ್ನ ನೃತ್ಯವನ್ನು ನೋಡಲಾರದ ಧೃತರಾಷ್ಟ್ರ ಧನ್ಯನಾದರೂ; ಹಾಹಾಕಾರವನ್ನು ಕೇಳುವುದಕ್ಕೆ ಕಿವಿಯಿಡೆಯಲ್ಲ! ಈ ಮಾತನ್ನಾಡುವುದಕ್ಕೆ ಶ್ಮಶಾನದ ಪ್ರಭಾವ ಎಷ್ಟಾಗಿರಬೇಡ? ಗಾಂಧಾರಿಯ ಅಳಲೂ ಕರುಣವನ್ನು ಮತ್ತಷ್ಟು ಪ್ರಚೋದಿಸುತ್ತದೆ. ಒಟ್ಟಿನಲ್ಲಿ ಎಲ್ಲರೂ ಕಂಬನಿಯ ಹೊಳೆಯಲ್ಲಿಯೇ ತೇಲಿಹೋಗುತ್ತಾರೆ.

“ಕಂಬನಿಯ ಮುನ್ನೀರೊಳಿನಿಬರುಂ
ಮುಳುಗಿರೆ ಆರನಾರ್ ದಡಕೆಳೆದು ರಕ್ಷಿಪರ್ ||

ದುಃಖಿಗಳನ್ನು ಸಂತೈಸಬೇಕಾದ್ದು ಧರ್ಮ. ಆದರೆ ಎಲ್ಲರೂ ದುಃಖಿಗಳಾಗಿದ್ದಾರೆ; ಸಂತೈಸುವುದಾದರೂ ಹೇಗೆ? ಪಡೆದದ್ದನ್ನು ಉಣ್ಣಲೇಬೇಕಷ್ಟೆ?

ವಿಜಯಿಗಳೆನ್ನಲಾದ ಪಾಂಡವರನ್ನು ಕುರುಕ್ಷೇತ್ರದ ಇನ್ನೊಂದು ಭಾಗದಲ್ಲಿ ಕಾಣುತ್ತೇವೆ. ಯಶಸ್ಸಿಗಾಗಿ ಯುದ್ಧ ಮಾಡಿದರೋ ಅವರಿಗೇ ದೊರೆತಾದ ಶ್ಮಶಾನ

ವನ್ನು ನೋಡಿ ಧರ್ಮರಾಯ ನಿಟ್ಟುಸಿರು ಬಿಡುತ್ತಾನೆ. ಧರ್ಮಕ್ಕೆ ಪ್ರತಿಫಲ ಇದೇ ತಾನೆ? ಧರ್ಮರಾಯನಿಗೆ ನಿಟ್ಟುಸಿರಾದರೆ ಯುದ್ಧಾಸಕ್ತಿಯ ಭೀಮನನ್ನು ನೋಡಿ–

"ಧರ್ಮಂ ಜೀರ್ಣ್ವರ್ಪ ಅಧರ್ಮದುದ್ಯಾನಂ ;
ಪುಣ್ಯಾಗ್ನಿಗಾಹುತಿಯಾದ ಪಾಪದ ಬೆಳಸು !" ಎನ್ನುತ್ತಾನೆ.

ಮಾನವೀಯ ಧರ್ಮ ಎನ್ನುವುದೂ ಒಂದಿದೆಯಲ್ಲ! ಭೀಮ ನಿಜವಾಗಿ ಧರ್ಮದ ಬಗೆಗೆ ಮಾತನಾಡಬಹುದೆ? ತನ್ನ ಮಗನನ್ನು ಕಳೆದುಕೊಂಡಿದ್ದಾನೆ. ಎಲ್ಲರಿಗೂ ಭೀಕರವಾಗಿ ಕಂಡ ರಣರಂಗ, ಯುದ್ಧವೆನ್ನುವ ಪುಣ್ಯಾಗ್ನಿಯಿಂದ ಆವೃತವಾಗಿ ಅಧರ್ಮವನ್ನು ದಹಿಸಿದೆಯಂತೆ! ಅಧರ್ಮವನ್ನು ಮಾಡದವರಾರು ಅಲ್ಲಿ? ಭೀಮ ದುರ್ಯೋಧನನ ತೊಡೆಯನ್ನು ಮುರಿದದ್ದು ಧರ್ಮಕ್ಕೆ ವಿರುದ್ಧ ವಲ್ಲವೇನು ?

ಮಹಾವೀರ ಅರ್ಜುನನ ಪ್ರತಿಕ್ರಿಯೆಯಾದರೂ: ಅವನ ಮಾನವೀಯ ಧರ್ಮ ವನ್ನು ದರ್ಶಿಸುವಂತಿದೆ.

"ಕೊಲೆಯ ಮುನ್ನುಡಿಯೇಕೆ ಧರ್ಮಸಂಸ್ಥಾಪನೆಗೆ ?
ರಕ್ತ ರಣಧುನಿ ಹರಿಯದೆಯೆ ಧರ್ಮಂ ಭೂತಳಕೆ ಕಾಲಿಡದೆ?"

ಎಂದು ಯೋಚಿಸುತ್ತಾನೆ. ಯುದ್ಧವಾದ ಮೇಲೆ ಈ ಆಲೋಚನೆ ಬರಬೇಕೆ ಅರ್ಜುನನಿಗೆ? ಧರ್ಮ ಸಂಸ್ಥಾಪನೆಗೆ ಯುಗ ಯುಗಗಳೇ ಬೇಕು. ಪುನರ್ ಸೃಷ್ಟಿ ಯಾದರೆ ಧರ್ಮ ಸಂಸ್ಥಾಪನೆ ಸುಲಭ; ಎನ್ನುವುದು ಭೀಮಸೇನನ ಅಭಿಪ್ರಾಯ. ಯುಗದ ಅಭಿವೃದ್ಧಿಗೆ ಅದೆಷ್ಟು ಕಾಲಬೇಕು! ಆದರೆ ದ್ವಾಪರಯುಗದ ವೈಭವ ವೆಲ್ಲ ೧೮ ದಿನಗಳಲ್ಲಿ ಮಣ್ಣು ಪಾಲಾಯ್ತು! ಯಾರನ್ನು ದೂರಬೇಕು? ಸೃಷ್ಟಿಯ ಇಚ್ಛೆ ಹಾಗಿತ್ತು ಅಷ್ಟೇ. ಆ ರಣಚಂಡಿ ಅಗ್ನಿ ಪುತ್ರಿಗಾದರೂ ಭೀಮನ ಈ ಮಾತೇ ಸಮ್ಮತ !

ರಣರಂಗದಲ್ಲಿ ಬಿದ್ದಿದ್ದ ಗಾಯಾಳುವೊಬ್ಬ ಸಂಕಟದಿಂದ, ಬಾಯಾರಿಕೆಯಿಂದ ಕೂಗುತ್ತಾನೆ. ಧರ್ಮರಾಯ ಕರುಣೆಯಿಂದ ಗಾಯಾಳುವಿನ ಬಳಿಗೆ ಹೋಗಿ ಉದಕವನ್ನು ತರುವಂತೆ ಅರ್ಜುನನಿಗೆ ಆಜ್ಞಾಪಿಸುತ್ತಾನೆ. ಮಾನವನೊಬ್ಬ ಕಷ್ಟ ದಲ್ಲಿರುವಾಗ ಅದನ್ನು ಪರಿಹರಿಸಲೆತ್ನಿಸುವುದು ಮಾನವ ಧರ್ಮ. ಕರ್ತವ್ಯಪಾಲನೆ ಯಿಂದ ಮಾನವನಿಗೆ ದೇವತ್ವ ಲಭಿಸುತ್ತದೆ. ಇದು ಧರ್ಮರಾಯನ ದೃಷ್ಟಿ. ಆದರೆ ಭೀಮನಿಗೂ ಧರ್ಮರಾಯನಿಗೂ ಭಾವನೆಗಳಲ್ಲಿ ಮಹದಂತರವಿದೆ. ಮಾನ ವೀಯ ಧರ್ಮವನ್ನು ಬಲ್ಲವನು ಧರ್ಮರಾಯ. ಇನ್ನೊಬ್ಬ ದ್ವೇಷದ ಕುರುಡಿನಿಂದ ಆವೃತವಾಗಿ ಮಾನವೀಯತೆಯನ್ನು ಮರೆತವನು. ಗಾಯಾಳುವಿನ ಬಗೆಗೆ ಕನಿ ಕರವೇ ಇಲ್ಲ: ಸಹಾನುಭೂತಿ ಮೊದಲೇ ಇಲ್ಲ!

ಅಗ್ರಜಾ ಮೊದಲ್ ಅವನಾರವನ್ ?
ಕೇಡಿದನ್! ನಮ್ಮವನೋ? ಕೌರವನ ಪಡೆಯವನೊ?

ಎಂದು ಕೇಳುತ್ತಾನೆ ಭೀಮ! ಮರಣೋನ್ಮುಖ ಸ್ಥಿತಿಯಲ್ಲಿರುವವನ ಬಗೆಗೂ ಒರಟು ವರ್ತನೆಯೆ? ಯಾರು ಯಾರವನಾದರೇನು? ಎಲ್ಲರೂ ಯಮನ ವರು ತಾನೆ? ಬದುಕಿದ್ದಾಗ ಏನೇ ತಪ್ಪು ಮಾಡಿದ್ದರೂ ಸಾವಿನ ಸಂದರ್ಭದಲ್ಲಿ ಅದು ಕರಗಿ ಹೋಗಬೇಕು ಎಂಬ ಸತ್ಯ ಭೀಮನಿಗೆ ತತ್ಕಾಲದಲ್ಲಿ ಮರೆತು ಹೋಗಿರ ಬೇಕು! ವಿಜಯಿಗಳ ಪರ್ವ ಇದೇನು? ಹೀಗಿರಬೇಕೇನು?

ಯುದ್ಧದಿಂದಾದ ಅನಾಹುತವನ್ನು ಕಂಡ ಧರ್ಮರಾಯ ಹೇಳುತ್ತಾನೆ
"ರಾಜಕರವಾಲಕಿಂತಲೂ ಕರ್ಕಶಂ ಕರುಣೆ"
ಶತ್ರುಗಳನೊಲಿಸುವುದು ಮಿತ್ರರನ್ ಮಾಡಿ ಭಗವಂತ ನೆರ್ದೆಗಿಂತಲುಂ
ಕೋಮಲಂ ಕರುಣೆ" ಎಂದು.

ಈ ಮಾತುಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. ಬಲಶಾಲಿಗಳಾದ ವರಿಗೆ ಮೇಲಿನ ಮಾತು ಅನ್ವಯಿಸುತ್ತದೆಯೇ ಹೊರತು ದುರ್ಬಲರಿಗಲ್ಲ. ದುರ್ಬ ಲರಿಗೆಂದೂ ಕರುಣೆ ಕರ್ಕಶವಾಗಲಾರದು. ಈ ಮಾತಿನ ಸಮರ್ಥನೆಗೆ ಇತಿಹಾಸದ ಬೆಂಬಲವಿದೆ. ಕರುಣೆಯೆಂಬುದು ಮಾನವನಿಗೆ ಇರಬೇಕಾದ ಅನಿವಾರ್ಯ ಗುಣ. ಭೀಮನಿಗೆ ಅದರ ಅವಶ್ಯಕತೆ ಹೆಚ್ಚಾಗಿದೆ!

ಅರ್ಜುನನು ತಂದ ನೀರನ್ನು ಕುಡಿದು; ಕೊನೆಯುಸಿರೆಳೆಯುವ ಮುನ್ನ ಕಣ್ದೆರೆದು ಪಾಂಡವರನ್ನು ನೋಡುತ್ತಾನೆ ಆ ಗಾಯಾಳು. ಪಾಂಡವರ ಕೈಯಿಂದ ನೀರು ಕುಡಿದುದು ಸ್ವಾಮಿಗೆ ಅಪರಾಧ ಮಾಡಿದಂತಾಯಿತೆಂದೆಣಿಸಿ –"ಪ್ರಭೋ ಮನ್ನಿಸಯ್! ಮನ್ನಿಸಯ್! ಎಂದು ಪ್ರಾಣ ಬಿಡುತ್ತಾನೆ. ಸ್ವಾಮಿಗಾಗಿಯೇ ಹೋರಾಡಿ ಮಡಿದ ವೀರನೊಬ್ಬ ತನ್ನ ಮರಣೋನ್ಮುಖ ಸಮಯದಲ್ಲಿ, ಸ್ವಾಮಿಯ ವೈರಿಗಳಿಂದ ನೀರು ಕುಡಿದು ಅಪರಾಧವನ್ನೆಸಗಿದನೆಂದು ವ್ಯಥೆಪಟ್ಟು ಸಾಯು ವಾಗ ಅವನ ಸ್ವಾಮಿ ಭಕ್ತಿಯನ್ನು ಸಹೃದಯ ಮೆಚ್ಚುತ್ತಾನೆ. ಆದರೆ ಭೀಮ ನಾಡುವ ಮಾತುಗಳನ್ನು ಕೇಳಿ ಅವನಿಗೆ ಧಿಕ್ಕಾರವಿರಲಿ ಎನ್ನಿಸುತ್ತದೆ. ಭೀಮ ಹೇಳುತ್ತಾನೆ—

"ಈತನೀಗಳ್ ಎನ್ನ ಮೆಚ್ಚಿನ ಬೀರನ್!
ಬಾಳೊಳ್ ಎಂತುಡೋ ಅಂತೆಯೇ ಸಾವಿನೊಳಂ
ನೋವಿನೊಳುಂ ಎರ್ದೆಗಿಡದೆ ಪಗೆಯಂ ಸಾಧಿಸನೆ
ಸಹಜವೀರನ್! ಮಿಕ್ಕವರ್ ಕೃತ್ರಿಮದ ವೀರರ್!"

ಎಂಥ ಮಾತು! ಸಾವಿನಲ್ಲಿಯೂ ಶತ್ರುತ್ವವನ್ನು ಸಾಧಿಸಬೇಕಂತೆ! ಅಂ ಪನು ಮಾತ್ರವೇ ವೀರನಂತೆ! ಎಂಥ ಅಪೂರ್ವ ದೃಷ್ಟಿ ಭೀಮನದು. ಈ ಮಾತನ ಆ ಗಾಯಾಳುವಾಡಿದ್ದರೆ ಮೆಚ್ಚಬಹುದಿತ್ತು!

ಮತ್ತೊಂದು ದೃಶ್ಯ ಕರಳನ್ನು ಹಿಂಡುವಂಥದು, ಛಲಚಕ್ರಿ ಭೀಮ ಗದ ಘಾತದಿಂದ ಕೆಳಗುರುಳಿ ಬಿದ್ದಿದ್ದಾನೆ. ಅವನ ದುಸ್ಥಿತಿಯನ್ನು ನೋಡಿ ಕಂಬ ದುಂಬಿದ್ದಾನೆ ಅಶ್ವತ್ಥಾಮ. ಪಾಂಡವರನ್ನು ಕೊಲ್ಲುವಾಸೆ ಅಶ್ವತ್ಥಾಮನಿಂದಲ ನೆರವೇರಿಲ್ಲ, ಸಾಯುವ ಮುನ್ನ ಕೊನೆಯ ಆಸೆಯೊಂದುಳಿದಿದೆ. ಅಶ್ವತ್ಥಾಮನನ ಸಂತೈಸುತ್ತಿದ್ದಾನೆ ಕುರುಕುಲ ಸಾರ್ವಭೌಮ!

"ನಡೆ ಪೋಗು; ಒಂಟಿಯಾಗೈತಂದವನ್ ನಾನ್
ಒಂಟಿಯಾಗಿಲ್ಲಿಂದೆ ತೆರಳ್ವೆನ್ ನಡಿ ಪೋಗು" ಎಂದು.

ದುರ್ಯೋಧನ ಅನ್ಯರನ್ನು ಮೆಚ್ಚಿ ಬೀಗಿದ್ದ. ಆದರೆ ಈಗ ಗೊತ್ತಾಗಿ ಸ್ವಾವಲಂಬಿತ್ವವಿಲ್ಲದೆ ತನ್ನ ಸ್ಥಿತಿ ಇಲ್ಲಿಗೆ ಬಂತು ಎಂದು ಅವನ ಕೊನೆಯಾ ಯಾದರೂ ಎಂಥದು?

"ಕರ್ಣನ್ ಎನ್ನೊಡನೆ ಚಿತೆಯಲ್ಲಿ ಬೆಂದಿಹನಾ?
ನಾವಿರ್ವರೊಂದಾಗಿ ಭೂಮಿಯೊಳ್ ಬಾಳಿದೆವು;
ನಾವಿರ್ವರೊಂದಾಗಿ ಸಾಮ್ರಾಜ್ಯವಾಳಿದೆವು;
ಸಾವಿನೊಳು ಇರ್ವರುಂ ಒಂದಾಗಿ ನಲಿಯುವೆವು"

ಎಂಥ ಆದರ್ಶ ಮೈತ್ರಿ! ಎಂಥ ಬಯಕೆ! ಯಾವ ಭಾರತದಲ್ಲಿಯೂ ಕಾಣ ಸನ್ನಿವೇಶವಿದು. ದುರ್ಯೋಧನನ ವ್ಯಕ್ತಿತ್ವ ಉನ್ನತಿಗೇರುತ್ತದೆ. ದುರ್ಯೋಧನ ಮಿತ್ರ ಪ್ರೇಮದ ಗಾಢತ್ವದಲ್ಲಿ ಅವನ ದೋಷವೇನಿದ್ದರೂ ಕರಗಿ ಹೋಗುತ್ತ ಮಹಾನುಭಾವನಾಗಿ ತೋರುತ್ತಾನೆ. ಅಶ್ವತ್ಥಾಮ ಅವನ ಮಾತನ್ನು ನಡೆ ಕೊಡುವುದಾಗಿ ತಿಳಿಸಿ ಹೊರಡುತ್ತಾನೆ!

ಅವಮಾನದ ನೋವು ಹೆಚ್ಚಿದಂತೆ ತನಗಾದ ಅನ್ಯಾಯವನ್ನು ನೆನೆನೆನೆ ಕ್ರೋಧಗೊಳ್ಳುತ್ತಾನೆ ದುರ್ಯೋಧನ. ಭೀಷ್ಮ, ದ್ರೋಣ, ಮುಂತಾದವರ ಕೌರವನ ಪಕ್ಷದವರೆ? ತನುವನ್ನು ಜೋಳದ ಪಾಳಿಗೋಸುಗ ಕೌರವನಿಗಿತ ಮನವನ್ನು ಪಾಂಡವರಿಗೆ ಈಯಲಿಲ್ಲವೆ? ಇದರಿಂದ ತಾನೆ ಇಂದು ಕುರುಕು ಸಾರ್ವಭೌಮನ ಪರಾಭವವಾದುದು? ಹೀಗೆಲ್ಲ ಆಲೋಚಿಸುತ್ತಾನೆ. ವಿನುಷೇ

ದ್ವಾಪರನ ಆಗಮನವಾಗುತ್ತದೆ ಈಗ. ಇವರಿಬ್ಬರ ಸಂಭಾಷಣೆಯಿಂ ಕೌರವನ ವ್ಯಕ್ತಿತ್ವ ಮತ್ತಷ್ಟು ಮೇಲೇರುತ್ತದೆ. ದ್ವಾಪರ ದುರ್ಯೋಧನನ ಚಕ್ರವರ್ತಿ ಎಂದೇ ಸಂಬೋಧಿಸುತ್ತಾನೆ. ದುರ್ಯೋಧನನಿಗೆ ತಾನು ಚಕ್ರವ ಯಲ್ಲ ಎಂಬ ಭಾವನೆ. ಏಕೆಂದರೆ ವಿಜಯಿಗಳು ಪಾಂಡವರು ತಾನೆ? ಆ

ದ್ವಾಪರನದು ವ್ಯರ್ಥ ನಿರ್ಧಾರ. 'ಚಕ್ರವರ್ತಿ' ಎನ್ನುವುದು ದುರ್ಯೋಧನನೊಬ್ಬನನ್ನೇ. ತನ್ನನ್ನು ಬೀಳ್ಕೊಡಬೇಕೆಂದು ಬೇಡುತ್ತಾನೆ. "ನಾವೀರ್ವರಿನ್ನೊಮ್ಮೆ ಸೇರುವಂ" ಎಂದು ದ್ವಾಪರ ಹೊರಟು ಹೋಗುತ್ತಾನೆ.

ದ್ವಾಪರನ ನಿರ್ಗಮನದ ತರುವಾಯ, ಕೌರವ ಮತ್ತಷ್ಟು ಉದ್ರೇಕಗೊಳ್ಳುತ್ತಾನೆ. ಎಲ್ಲರೂ ತನ್ನನ್ನು ಅಧರ್ಮಿಗಳೆನ್ನುತ್ತಾರೆ; ಅನಾಗರಿಕ; ಅಸಂಸ್ಕೃತ ಎನ್ನುತ್ತಾರೆ! ಇರಬಹುದು. ಪಾಂಡವರು ಧರ್ಮಿಗಳೇನು? ಎಂದು ಯೋಚಿಸುತ್ತದೆ ಮನಸ್ಸು. ಪಾಂಡವರು ಭೀಷ್ಮನನ್ನು ಬೇಡಿಕೊಂಡರು! ದ್ರೋಣರ ಅಳಿವಾದದ್ದೂ ಸಂಚಿನಿಂದ! ಕರ್ಣನ ಅಳಿವಾದರೂ ಮೋಸದಿಂದಲೇ! ಇದೆಲ್ಲ ಧರ್ಮವೇನು? ಇಷ್ಟೆಲ್ಲ ಆಲೋಚಿಸಿದರೂ ಅವನ ಮನಸ್ಸು ಪಾಂಡವರಲ್ಲೇ ನಿಲ್ಲದೆ "ಇದೆಲ್ಲ ಕೃಷ್ಣನ ಕುಹಕಂ" ಎಂಬ ತೀರ್ಮಾನಕ್ಕೆ ಬರುತ್ತಾನೆ.

"ಕೈತವದ ಶಿಕ್ಷಾಗುರುವಲ್ತೆ ಆತನ್?
ಎಲವೋ ಕೃಷ್ಣಾ! ಕೃಷ್ಣಾ! ಕೃಷ್ಣಾ!" ಎಂದು ಕೋಪದಿಂದ

ಹೂಂಕರಿಸುತ್ತಾನೆ, ಮುಕ್ತಿಗೆ ಮಹಾದ್ವಾರ ತಾನೆ ಶ್ಮಶಾನ ಕುರುಕ್ಷೇತ್ರ? ತನ್ನ ಹೆಸರನ್ನು ಕೇಳಿದೊಡನೆಯೇ ಕಪಟನಾಟಕ ಸೂತ್ರಧಾರಿ ಆಗಮಿಸುತ್ತಾನೆ. ದುರ್ಯೋಧನನಿಗೆ ಕೃಷ್ಣನ ಹೆಸರನ್ನು ಕೇಳಿದರೇ ಕೋಪ! ಕೃಷ್ಣನೇ ಎದುರಿಗೆ ಬಂದು ನಿಂತಿದ್ದಾನೆ!?

"ತೊಲಗಿಲ್ಲಿಂ ನೀಚ! ನಿಲ್ಲದಿರ್ ಕಣ್ ಬೇನೆ ಬರ್ಕುಂ!" ಎಂದು ನಿಷ್ಠುರವಾಗಿ ನುಡಿಯುತ್ತಾನೆ. ಕೃಷ್ಣನು ಏನೇ ಮಾತನಾಡಿದರೂ ಅದರಲ್ಲಿ ವ್ಯಂಗ್ಯವನ್ನೇ ಗುರುತಿಸುವ ದುರ್ಯೋಧನನ್ನು ಕಂಡಾಗ ಅವನಿಗಿದ್ದ ಕ್ರೋಧವೆಷ್ಟು? ಎಂಬುದರ ಕಲ್ಪನೆ ಬರುತ್ತದೆ. ಶ್ರೀ ಕೃಷ್ಣನು ದುರ್ಯೋಧನನಿಂದಾದ ಅನ್ಯಾಯವನ್ನು ಪಟ್ಟಿಮಾಡಿ :—

"ನಿನ್ನಿಂದಲೇ ಈ ಕುರುಕ್ಷೇತ್ರ ರಣರಂಗಂ
ನೋಡೀಗಳೆಂತು ರುದ್ರಭೂಮಿಯಾಗಿರ್ಪುದು?
ನಿನ್ನಿಂದಲೆ ಕರ್ಣ ಭೀಷ್ಮ ದ್ರೋಣಾದಿಗಳ್
ದ್ವಾಪರಯುಗದ ಅನರ್ಘ್ಯ ರತ್ನಂಗಳ್ ನುಚ್ಚುಳ್ಳು
ನ್ರೋಗಿರ್ಪವೈಸೆ?" ಎಂದು ಅನಾಹುತದ ಅಪರಾಧವನ್ನು ದುರ್ಯೋಧನನ ಮೇಲೇ ಹೊರಿಸುತ್ತಾನೆ? ಈ ಮಾತುಗಳನ್ನು ಸ್ವಾಭಿಮಾನಿ, ಛಲಚಕ್ರಿಯೆಂತು ಕೇಳಿಯಾನು? ಅವನೂ ನಮ ಕೃಷ್ಣನ ಅಪರಾಧಗಳನ್ನು ಪಟ್ಟಿ ಮಾಡುತ್ತಾನೆ:—

"ಓ ಹುಟ್ಟು [illegible] ನೀನೆಂದು [illegible]
[illegible] ನ ಕೈತಂದಾಗಳ್

ಪಜ್ಜೆ ಪಜ್ಜೆಗು, ಸೂಡುಗಳನೊಟ್ಟಿ, ಮಸಣಮಂ
ಗೆಯ್ಯುತ್ತೆ ಬಂದೆಯಲ್ತೆ? ಕಪಟಮಂ ಮರೆಮಾಡಿ
ಗಳಪ್ರಮೆಯಾ ಎನ್ನೊಡನೆ?" ಎಂದು ಬುಸುಗುಡುತ್ತಾನೆ. ದುಯೋ
ಧನನಿಗೆ ಕೃಷ್ಣ ಭೂಭಾರವನ್ನಿಳಿಸಲು ಹುಟ್ಟಿದವನೆಂಬುದು ಗೊತ್ತು. ಭಾರತದ
ಕಾಣುವುದೇ ಶ್ರೀಕೃಷ್ಣನ ಕೈವಾಡವನ್ನು! ಯಾರ ಮೇಲೆ ಅಪರಾಧವನ
ಹೊರಿಸುವುದು?

ಸೃಷ್ಟಿಯ ಅಳಿವಿಗಾಗಿ ಅಭಿನಯಿಸಿದ ನಾಟಕ ಮಹಾಭಾರತ ಎನ್ನು
ದೃಷ್ಟಿಯಲ್ಲಿ ಔಚಿತ್ಯವಿದೆ. ಈ ನಾಟಕದ ಅಭಿನಯ ಪಟುಗಳು ದುರ್ಯೋಧ
ಕರ್ಣ, ಮುಂತಾದವರು, ದುರ್ಯೋಧನನ ಕೋಪವನ್ನು ಕಂಡ ಕೃಷ್ಣನು "ಸ್ವ
ಸ್ವಪ್ನ" ವನೊಡೆದೇಳುವಂತೆ ದುರ್ಯೋಧನನಿಗೆ ಆಜ್ಞಾಪಿಸುತ್ತಾನೆ. ಕೌರವ
ಮೇಲೆ ಮುಸುಕಿದ್ದ ಅಜ್ಞಾನದ ಪರೆ ಕಳಚುತ್ತದೆ.

ಸೂತ್ರಧಾರ ನಾನ್ ಪಾತ್ರಮಂ ನೇರಮಾಗಭಿನಯಿಸಿ ತೋರ್ದೆನೇನ್
ಅದರೊಳೇನಾದರುಂ ತಪ್ಪಿದೆನೊ?" ಎಂದು ಶ್ರೀಕೃಷ್ಣನು ಪ್ರಶ್ನಿಸುತ್ತಾ
ಸುಯೋಧನ.

"ನಿನ್ನವೋಲ್ ಅಭಿನಯ ಚತುರರಿನ್ನಿಲ್ಲ. ಏನಭಿನಯಂ ನಿನ್ನಭಿನಯ
ಮಾರುವೋದೆನ್!" ಎನ್ನುತ್ತಾನೆ. ಕೃಷ್ಣನ ಈ ಮಾತಿನಲ್ಲಿ ಕವಿ
ದುರ್ಯೋಧನನ ಬಗೆಗೆ ಮೆಚ್ಚಿಗೆಯಿರುವುದನ್ನು ಕಾಣಬಹುದು. ಮೊದಲಿನಿ
ಕೊನೆಯವರೆಗೆ ದುರ್ಯೋಧನನ ಅಭಿನಯ ಪ್ರೌಢವಾದುದೇ ಹೌದು, ಜ್ಞಾ
ಮರಳಿ ಬಂದರೂ ಕರ್ಣನ ಮೈತ್ರಿಯನ್ನು ನೆನೆಯದಿರಲಾರ ದುರ್ಯೋಧ
ಕರ್ಣನ ಅಭಿನಯ ಹೇಗಿತ್ತು? ಎನ್ನುತ್ತಾನೆ, ಕರ್ಣನ ಅಭಿನಯವೂ ಅಷ್ಟೆ ಸೊಗಸ

ಈ ವೇಳೆಗೆ ಧೃತರಾಷ್ಟ್ರ ಗಾಂಧಾರಿಯರು ಸಂಜಯನೊಡನೆ ದೈವೋಪಹ
ಚೇತಸನಾದ ದುರ್ಯೋಧನನನ್ನು ನೋಡಲು ಬರುತ್ತಾರೆ. ಸೃಷ್ಟಿಯ ನಾಟ
ಕೊನೆಗಾಣಬೇಕಲ್ಲ? ಮತ್ತೆ ದುರ್ಯೋಧನನ ಮೇಲೆ ಅಜ್ಞಾನದ ತೆರೆ ಕವಿಯ
ತ್ತದೆ, ನೋವಿನಿಂದ ಮರುಗುತ್ತಾನೆ. ಅಪಮಾನದಿಂದ ನರಳುತ್ತಾನೆ, ತನ್ನ ಕೊ
ಯುಸಿರನ್ನೆಳೆಯುತ್ತಾನೆ. ಧೃತರಾಷ್ಟ್ರ ಗಾಂಧಾರಿ, ಭಾನುಮತಿಯರು ಕುಸಿ
ಬಿದ್ದು ರೋದಿಸುತ್ತಾರೆ.

ಕುರುಕ್ಷೇತ್ರದ ಇನ್ನೊಂದು ಭಾಗ. ಕೃಷ್ಣ ವಿದುರರು ಸಂಭಾಷಿಸುತ್ತಿ
ತ್ತಾರೆ, ಕುಂತಿ ಸಹದೇವನೊಂದಿಗೆ ಯುದ್ಧ ಭೂಮಿಗೆ ಬಂದಿದ್ದಾಳೆ. ಕುಂ
ಯಾರನ್ನು ಹುಡುಕಿಕೊಂಡು ಬಂದಿದ್ದಾಳೆ? ಎಂದು ವಿದುರನಿಗೆ ಆಶ್ಚರ್ಯ, ಕೃ
ನಿಂದ ಕರ್ಣನು ಕುಂತಿಯ ಮೊದಲ ಪುತ್ರನೆಂದೂ, ಅವನನ್ನು ಹುಡುಕಿಕೊಂ
ಬಂದಿರುವಳೆಂಬ ಅಂಶ ತಿಳಿದು ಆಶ್ಚರ್ಯಪಡುತ್ತಾನೆ. ರಹಸ್ಯ ಸತ್ಯತಾನೆ ಕರ್ಣ
ವಿಷಯ?

ಕುಂತಿ ಗೋಳಾಡುತ್ತಿದ್ದಾಳೆ ಕರ್ಣನ ಶವವಾದ ಮೇಲೆ! ಅವನು ಬದುಕಿದ್ದಾಗ ಮಗನೆಂದು ತಿಳಿದರೂ ಅನುಸರಿಸಲಿಲ್ಲ. ಜನಾಪವಾದದ ಭಯದಿಂದ. ಕೊನೆಗೆ ಕರ್ಣನಿಂದ ಮುಂಗಡೆಯನ್ನು ಬೇಡಿ ಅವನ ಸಾವಿಗೆ ತಾನೂ ಕಾರಣಳಾಗಿ ನಿಲ್ಲುತ್ತಾಳೆ.

ಕರ್ಣನಿಗೆ ತಾನು ದ್ರೋಹ ಬಗೆದುದಾಗಿ ಪಶ್ಚಾತ್ತಾಪ ಪಟ್ಟು ಪುನೀತಳಾಗುತ್ತಾಳೆ. ಪಶ್ಚಾತ್ತಾಪದಿಂದ ದಗ್ಧಳಾದ ಕುಂತಿ ಸಹೃದಯರ ಸಹಾನುಭೂತಿಯನ್ನು ಗಳಿಸುತ್ತಾಳೆ.

"ನನ್ನ ಮಗುವನ್ ನಾನೆ ಮಿಳ್ತುವಿಗೀಡು ಮಾಡಿದೆನ್!
ಓ ಬಿದಿಯೆ ಸುಡು ಎನ್ನ ತಾಯ್ತನಮಂ।

ಎನ್ನುವಾಗ ಸಹೃದಯ ಅವಳ ದುಃಖದಲ್ಲಿ ಪಾಲುಗೊಳ್ಳುತ್ತಾನೆ.

ತಿಳಿಯದ ಅಬಲೆಗೆ ಮೋಸಮಾಡಿ ಕರ್ಣನ ಸಾವಿನಲ್ಲಿ ಪಾಲು ತೆಗೆದುಕೊಳ್ಳುವಂತೆ ಮಾಡಿದರೆಂಬುದನ್ನು ಮನಗಾಣುತ್ತಾಳೆ. ಏನಾದರೇನು? ಈ ವಿವೇಚನೆ ಯುದ್ಧಪೂರ್ವದಲ್ಲಿ ಬರಲಿಲ್ಲ!

ವಿಜಯಿಗಳಾದ ಪಾಂಡವರೇನೋ ಮೊದಮೊದಲು ಪೆರ್ಮೆ ಎಂದೇ ಭಾವಿಸಿರಬೇಕು, ಆದರೆ ತಮ್ಮ ಕರುಳಿನ ಕುಡಿಗಳನ್ನು ಚಿತೆಗೆ ಇಡುವಾಗ ಯುದ್ಧದ ಭೀಕರ ಪರಿಣಾಮದ ಅರಿವು ಉಂಟಾಗುತ್ತದೆ. ಪರರ ಬಗೆಗೆ ಮಾನವೀಯ ಸಹಾನುಭೂತಿಯನ್ನೇ ತೋರದ ಭೀಮಸೇನನು ತನ್ನ ಮಗನಾದ ಘಟೋತ್ಕಚನ ಚಿತೆಗೆ ಅಗ್ನಿಸ್ಪರ್ಶ ಮಾಡಲಾರದೆ,

"ಅಣ್ಣಾ ಕೊಲೆಗಾರನ್ ಆನ್ ಎಂಬುದನ್ ಈಗಳರಿತೆನ್
ಈ ಎನ್ನ ಮುದ್ದು ಶಿಶುಗಳ ಪೆಣಗಳೆಡೆ ನಿಂತು
ಗಾಂಧಾರಿ ಧೃತರಾಷ್ಟ್ರರಳಲಾಳವಂ ತಿಳಿದೆನ್" ಎಂದು

ಗೋಳಾಡುತ್ತಾನೆ.

ಕ್ರೋಧವಶನಾಗಿದ್ದಾಗ, ಕೋಪವನ್ನೇ ಬಲವೆಂದು ಭ್ರಮಿಸುತ್ತಾನೆ ಭೀಮಸೇನ. ತನ್ನನ್ನು ತಾನೊಮ್ಮೆ ಚಿಗುಟಿಕೊಂಡು ನೋಡಿದರೆ, ತನಗೆ ನೋವಾದಂತೆಯೇ ಇನ್ನೊಬ್ಬರಿಗೂ ಎಂಬುದು ತಿಳಿಯುತ್ತದೆ. ಭೀಮನು ಕೌರವರನ್ನೆಲ್ಲಾ ಕೊಂದನಲ್ಲ! ಆ ದುಃಖದ ಬೇಗೆಯಿಂದ ಧೃತರಾಷ್ಟ್ರ ಹಾಗೂ ಗಾಂಧಾರಿಯರೆಷ್ಟು ನೊಂದಿರಬೇಕು? ಒಬ್ಬನೇ ಮಗನನ್ನು ಕಳೆದುಕೊಂಡು ಇಷ್ಟು ಗೋಳಾಡಿದ್ದಾನೆ ಭೀಮ. ಪುತ್ರವ್ಯಾಮೋಹದಿಂದಾದರೂ ಭೀಮನಲ್ಲಿ ಮಾನವೀಯತೆಯಿದೆ ಎಂಬುದನ್ನು ತೋರಿಸಿಕೊಟ್ಟಿದೆ!

ಇನ್ನೇನು ಅಭಿಮನ್ಯು ಘಟೋತ್ಕಚರ ಸೂಡಿಗೆ ಅಗ್ನಿಸ್ಪರ್ಶವಾಗಬೇಕು;
ಕುಂತಿ ಸಹದೇವನೊಂದಿಗೆ ಕರ್ಣನ ಕಳೇಬರವನ್ನು ತರುತ್ತಾಳೆ. ಕುಂತಿಗೆ ತನ್ನ
ಮಕ್ಕಳಿಂದಲೇ ಸಂಸ್ಕಾರ ನಡೆಯಬೇಕೆಂದೊಂದು ಆಸೆ. ಮಕ್ಕಳಿಗೋ ಆಶ್ಚರ್ಯ
ಕರ್ಣನಾದರೂ ಅಭಿಮನ್ಯು, ಘಟೋತ್ಕಚರಿಬ್ಬರ ಅಳಿವಿಗೂ ಕಾರಣನಾಗಿ ಪಾಂಡ
ವರ ಹಗೆಯಾಗಿದ್ದವನು. ಅಂಥವನನ್ನು ಏಕಾದರೂ ಸೂಡಿನಲ್ಲಿಡುವಂತೆ ಕೇಳು
ತ್ತಾಳೆ ಕುಂತಿ? ಎಂದು ಧರ್ಮರಾಯನಿಗೂ ಆಶ್ಚರ್ಯ; ವಿಸ್ಮಯ, ಕುತೂಹಲ,

"ಸುಡುವ ಬೆಂಕಿಗೆ ಕರುಣೆಯಿಲ್ಲ, ಕರುಬಿಲ್ಲ
ಆದೊಡಂ ಇದರರ್ಥಮೇನ್? ತಿಳಿಯಲೆಳಸುವೆನ್" ಎಂದು ಧರ್ಮ

ರಾಯ ಕೇಳುತ್ತಾನೆ ತಾಯಿಯನ್ನು. ಆಕೆ ತನ್ನ ಮಗನಿಗೆ ಏನು ತಾನೆ ಹೇ
ಯಾಳು? ಕರ್ಣ ತನ್ನ ಮಗನೆಂದೆ? ವಸ್ತುಸ್ಥಿತಿಯನ್ನು ಹೇಳಿದರೆ ಮಕ್ಕಳ
ಏನೆಂದುಕೊಳ್ಳುವರೋ ಎಂಬ ಸಂಕೋಚವಿರಬಹುದು. ಆದುದರಿಂದ ಆಕೆ ತನ್ನ
ಕರ್ಣನ ಸಂಬಂಧವನ್ನು ಬಾಯ್ಬಿಟ್ಟು ಹೇಳಲಾರಳು. ಭೀಮನಿಗೆ ಕರ್ಣನನ್ನು
ಕಂಡರೇ ಕ್ರೋಧ. ಕಳೇಬರವನ್ನು ಕಂಡರೂ ಅದೇ ಕ್ರೋಧ! ಕರ್ಣ ಕುಲಘಾತ
ನೆಂಬುದು ಭೀಮನ ಮತ! ನಿಜವಾಗಿ ಕುಲಘಾತಕರಾರು ? ತಾಯಿಯನ್ನು ಪ್ರ
ಶ್ನಿಸದೆ, "ಸಹದೇವ ಇದೇನನ್ ನೀನೆಸಗಿರ್ಪೆ ! ತೊಲಗಿಸಿಲ್ಲಿಂ ಈ ವಿಗ
ಪೆಣಮಂ !" ಎಂದು ಗುಡುಗುತ್ತಾನೆ.

ಹಿರಿಯ ಅಣ್ಣ ಕ್ರೋಧದ ಕಣ್ಣಿಗೆ ಸಹಾನುಭೂತಿಯಿಲ್ಲದ ಕಣ್ಣಿಗೆ ವಿ
ದಂತೆ ತೋರುವುದರಲ್ಲೇನು ಆಶ್ಚರ್ಯ? ಕಳೇಬರದ ಮೇಲೂ ದ್ವೇಷವೆ? ಮುಂದು
ವರಿದು ಭೀಮ ಹೇಳುತ್ತಾನೆ.

"ಧರ್ಮಜಾ ರೋದನಕೆ
ನೀನಳುಕಿದೊಡೆ ವಿಲಯಮಹುದಿಂದೆ!" ಎಂದು. ಈ ಅಲ್ಪ

ಕಾರಣಕ್ಕಾಗಿ ಮತ್ತೆ ವಿಲಯವಾಗಬೇಕೆ ? ಇದುವರೆಗಿನ ವಿಲಯ ಸಾಲದೇನು
ಆದರೂ ವಿಲಯವಾಗುತ್ತದಂತೆ ಭೀಮನಿಂದ !

ಅರ್ಜುನನಿಗೂ ಅಭಿಮನ್ಯುವನ್ನು ಕೊಳ್ವ ಬೆಂಕಿಯಲ್ಲಿ ಕರ್ಣನನ್ನು ದ
ಸಲು ಇಷ್ಟವಿಲ್ಲ. ಕರ್ಣ ನಮಗೇನಾಗಬೇಕು ? ಎಂಬುದೇ ಅವನ ಸಮಸ್ಯೆ. ಇದ
ಅರ್ಜುನನಿಗೆ ಸಮಸ್ಯೆಯಾದರೆ, ಭೀಮನಿಗೆ ಸಮಸ್ಯೆಯೇ ಅಲ್ಲ.

"ಪಗೆಯಕೆಳೆ! ಅಭಿಮನ್ಯುವನ್ ಘಟೋತ್ಕಚನನ್
ಮೋಸದಿಂದಿರಿದವನ್" ಎಂದು

ಘಂಟಾಘೋಷವಾಗಿ ನುಡಿಯುತ್ತಾನೆ! ಎಷ್ಟು ನಿಜ ಈ ಮಾತು!?

ತಾಯ ಬೇಡಿಕೆ ಕೇವಲ ಅರಣ್ಯರೋದನವಾಯಿತೆ ಹೊರತು ಭೀಮನನ್ನು ಕರಗಿಸಲಿಲ್ಲ. ಇದೇ ವೇಳೆಗೆ ದುರ್ಯೋಧನನ ಕೊನೆಯ ಬಯಕೆಯನ್ನು ಸಲ್ಲಿಸುವ ಸಲುವಾಗಿ ಅಶ್ವತ್ಥಾಮ ಅಲ್ಲಿಗೆ ಬರುತ್ತಾನೆ.

"ಕೌರವೇಂದ್ರನ್ ನುಡಿದ ನೊವಲಿನ್ನನ್ ಕೇಳು
ಕರ್ಣನನ್ ತನ್ನೊಡನೆ ಸೂಡುಗೈಯಲ್ ಬೆಸಸಿ
ಪೋದನ್–ಪೋದವರ ಬಯಕೆಯಂ ಇರ್ಪವರ್
ಕೈಗೂಡಿಪುದೆ ಧರ್ಮಂ" ಎಂದು ಕರ್ಣನ ಕಳೇಬರವನ್ನು ಸಂಸ್ಕರಿಸಲು ತನಗೆ ಕೊಡಬೇಕೆಂದು ಕೇಳುತ್ತಾನೆ ಅಶ್ವತ್ಥಾಮ. ಭೀಮನಿಗೆ ಬೇಕಾದದ್ದೇ ಇದು. ಕೂಡಲೇ ನುಡಿಯುತ್ತಾನೆ;

"ಅಶ್ವತ್ಥಾಮ ಕರ್ಣನನ್ ಕೊಂಡು ಪೋಗಯ್
ನೀನವಂಗೆ ಸಂಸ್ಕಾರ ಎಸಗುವುದೆ ಧರ್ಮಂ" ಎಂದು.

ಭೀಮನಂತೂ ತಾಯ ಬೇಡಿಕೆಯನ್ನು ಮನ್ನಿಸಲಿಲ್ಲ. ಧರ್ಮರಾಯ, ಅರ್ಜುನ, ನಕುಲರು ವಾಸ್ತವಾಂಶ ಏನೆಂದು ತಿಳಿಯುವ ಆಸಕ್ತಿಯನ್ನೂ ಪ್ರಕಟಪಡಿಸುವುದಿಲ್ಲ! ಸಹದೇವನಿಗೆ ವಾಸ್ತವವಾದ ವಿಷಯ ತಿಳಿದಿದ್ದರೂ ತಾನೇಕೆ ಹೇಳುವುದಿಲ್ಲ? ಎನ್ನುವ ಸಂದೇಹ ತಲೆಯೆತ್ತುತ್ತದಾದರೂ: ಶ್ರೀ ಕುವೆಂಪು ಅವರದೃಷ್ಟಿ ಕೇಂದ್ರೀಕೃತವಾಗಿರುವುದು; ದುರ್ಯೋಧನ ಕರ್ಣರಿಬ್ಬರನ್ನೂ ಒಟ್ಟಿಗೆ ಸಂಸ್ಕರಿಸಬೇಕೆಂಬುದರಲ್ಲಿ. ಆದುದರಿಂದಲೇ ಸಹದೇವನೂ ಮೌನನವಾಗಿದ್ದನೆಂದು ಸಮಾಧಾನ ಪಟ್ಟುಕೊಳ್ಳಬಹುದು.

ದುರ್ಯೋಧನನೇ ಅಶ್ವತ್ಥಾಮನೊಡನೆ ಹೇಳುವಂತೆ; ಕರ್ಣ ಕೌರವರ ಮೈತ್ರಿ ಅಪೂರ್ವ ಹಾಗೂ ಗಾಢವಾದುದು. ದುರ್ಯೋಧನನ ಆಶ್ರಯದಲ್ಲಿ ಬೆಳೆದು ಅವನಿಗೋಸ್ಕರವಾಗಿಯೇ ಪ್ರಾಣವನ್ನು ತೆತ್ತ ಕರ್ಣನು ಅವನೊಡನೆಯೇ ಸೇರುವುದರಲ್ಲಿ ಔಚಿತ್ಯವಿದೆ. ಮೇಲಾಗಿ ಮೊದಲಿನಿಂದ ಕೊನೆಯವರೆಗೂ ಪಾಂಡವರಿಂದ ತಿರಸ್ಕೃತನಾಗಿ ಕೊನೆಗೆ ಈ ರೀತಿ ಪುರಸ್ಕೃತನಾಗುವುದರಲ್ಲಿ ಅಂಥ ಸೊಬಗೇನೂ ಇಲ್ಲ. ಇಲ್ಲಿ ಕುವೆಂಪು ಅವರ ಔಚಿತ್ಯ ಪ್ರಜ್ಞೆ ಸುಸ್ಪಷ್ಟವಾಗಿದೆ.

ಅಶ್ವತ್ಥಾಮ ಕರ್ಣನ ಪಾರ್ಥಿವ ಶರೀರವನ್ನು ಒಯ್ಯುತ್ತಾನೆ. ಕುಂತಿಯ ಅಳಲು ಮುಗಿಲಿನದು; ಅವಳಿಗರಿವಿಲ್ಲದೆಯೇ ವಾಸ್ತವ ಸತ್ಯ ಹೊರಬೀಳುತ್ತದೆ. ಕರ್ಣ ತಮಗೆಲ್ಲರಿಗೂ ಅಣ್ಣನಾಗಬೇಕೆಂಬ ಅಂಶ ಪಾಂಡವರಿಗೆ ಸಹದೇವನಿಂದ ತಿಳಿಯುತ್ತದೆ. ಎಲ್ಲರಿಗೂ ಗರ ಹೊಡೆದಂತಾಗುತ್ತದೆ ಅದರ ಭೀಮನಿಗೆ ಇನ್ನೂ

ಸಂದೇಹವೇ! "ಪ್ರಸಿಸಿಯೊಡದಿರ್!" ಎನ್ನುತ್ತಾನೆ. ವಾಸ್ತವ ಅಂಶವನ್ನು ಸುಳ್ಳೆಂದು ಭ್ರಮಿಸುತ್ತದೆ ಅವನ ಮನಸ್ಸು! ಭೀಮ ನಿಜವಾಗಿ ಬಿಡಿಸಲಾರ ಒಗಟಾಗಿದ್ದಾನೆ!

ಧರ್ಮರಾಯ—ತಾಯೇ ಏನನೆಸಗಿರ್ಪೆ ನೀನ್? ಎಂದರೆ

ಅರ್ಜುನ—ಓ ಕೃಷ್ಣ ಪ್ರಸಿವೇಳ್ದು ಕೊಲಿಸಿದೆಯಾ!

ಎಂದು ಉದ್ಗಾರ ತೆತ್ತುತ್ತಾನೆ.

"ಕಡೆಗಂ ಪೊಲಸಾದುದೀ ಭಾರತ ಸಂಗ್ರಾಮ!" ಎಂದು ಉದ್ಗಾ ತೆತ್ತುತ್ತಾನೆ ಭೀಮ! ಕರ್ಣ ತನ್ನ ಅಣ್ಣನೆಂದು ತಿಳಿಯುವ ಮೊದಲು ಯುದ್ಧ ಪೊಲಸಾಗಿರಲಿಲ್ಲ! ಅದು ಶೌರ್ಯದ ಪ್ರತೀಕವಾಗಿತ್ತು. ಧರ್ಮಂ ಬೇ ಅಧರ್ಮದುದ್ಯಾನವಾಗಿತ್ತು! ಕರ್ಣ ತನ್ನ ಅಣ್ಣನೆಂದ ಮೇಲೆ ಭ್ರಾತೃ ವಾತ್ಸ ತಾನೆ! ಆದುದರಿಂದಲೇ ಭೀಮನೂ ಸಹ ಭಾರತ ಯುದ್ಧ ಪೊಲಸಾಯ ಎಂದ. ಯುದ್ಧಾಕಾಂಕ್ಷಿಯ ಮನದ ಪರಿವರ್ತನೆ ಮಾಡಿಸಿದ್ದಾರೆ ಕುವೆಂ ಅವರು.

ಸೃಷ್ಟಿಯ ಉಳಿವು ಅಳಿವು ಪ್ರಳಯಕಾರಿಯ ಇಚ್ಛೆ. ಎಲ್ಲಕ್ಕೂ ಒಂ ಕೊನೆಯಿದೆ. ಎಲ್ಲೆಲ್ಲೋ ಹುಟ್ಟಿ ಹರಿಯುವ ನದಿಗಳು ಸಮುದ್ರದಲ್ಲಿ ಲಯವಾ ವಂತೆ ಮಾನವರು ಗೈದುದೆಲ್ಲಾ ಪರಮೇಶ್ವರನಿಗೆ ಸೇರುತ್ತದೆ. ಧರ್ಮಾಧರ್ಮಗಳ ಸಂಪತ್ತು ವಿಪತ್ತು, ಪಾಪಪುಣ್ಯ ಯಾವುದೇ ಇರಲಿ ಅದರ ಕೊನೆಯಿರುವು ಪರಮೇಶ್ವರನಲ್ಲಿ.

ಕಾಲದೇಶಗಳು, ಜನನ ಮರಣಗಳು
ಜೀವಕೋಟಿಗಳು—ಮಸಣದೆಡೆಗೇ!
ಮಸಣ ದೆಡೆಗೇ! ಕಟ್ಟಕಡೆಗೆ!
ಎನ್ನ ಹುಟ್ಟಿನಿಂದುದಿಸಿದೀ ಸೃಷ್ಟಿ
ಕಡೆಗೆ ತುತ್ತಾಗುವುದು—ಎನ್ನ ಹುಟ್ಟಿಗೇ!
ಎನ್ನ ಹುಟ್ಟಿಗೇ! ಎನ್ನ ಹುಟ್ಟಿಗೇ!

ಎನ್ನುತ್ತಾನೆ ಉನ್ಮತ್ತನಾದ. ಭೀಮ[illegible]ರದ, ರುದ್ರ[illegible] ಮೂರ್ತಿಯ ಮಹಾದೇವ. ಲೀಲೆ ಎಂದರೆ ಇದೇ [illegible]? ದ್ವಾಪರಯುಗದ ವ್ಯಕ್ತಿ ಶ್ರೇಷ್ಠರ ಅವರ ವೈಭವ, ಸಂಸ್ಕೃತಿಗಳೂ [illegible] ರುದ್ರನ ಇಚ್ಛೆಯಿಂದ. ಅದ

ಯಾರೂ ಹೊಣೆಯಾಗಲಾರರು. ಒಟ್ಟಿನಲ್ಲಿ ಸೃಷ್ಟಿಯ ಯಾವುದೇ ಪರಿವರ್ತನೆಗೆ ಮಾನವ ಕಾರಣವಾಗಲಾರ. ಅದು ಆತನಿಂದ ಸಾಧ್ಯವಿಲ್ಲ; ಎನ್ನುವ ಭಾರತೀಯರ ದೃಷ್ಟಿಯನ್ನು ಶ್ರೀ ಕುವೆಂಪು ಅವರು ಪ್ರತಿಬಿಂಬಿಸಿದ್ದಾರೆ.

ಭಾರತದ ಕಥೆ ಒಂದು ರುದ್ರನಾಟಕವಾಗುತ್ತದೆ ಕೃಷ್ಣನ ದೃಷ್ಟಿಯಲ್ಲಿ. ಈ ದುರಂತತೆಯಲ್ಲಿ ಹೊಸ ಸೃಷ್ಟಿಯಿದೆ. ಸೃಷ್ಟಿಯ ಲಯಕ್ಕಾಗಿಯೇ ಶ್ರೀ ಕೃಷ್ಣ ಜನ್ಮ ತಳೆದ. ಕಾರ್ಯಸಾಧನೆಗಾಗಿ ನಾಟಕವಾಡಿ, ಕಪಟನಾಟಕ ಸೂತ್ರಧಾರನೆನಿಸಿದ. ಇದಕ್ಕೆ ರುದ್ರನ ಬೆಂಬಲವೂ ಇತ್ತು ; ಕಾರ್ಯ ಸಫಲವಾಯಿತು ಎನ್ನುವುದನ್ನು ಪ್ರತಿಬಿಂಬಿಸಿದ್ದಾರೆ ಶ್ರೀ ಕುವೆಂಪು.

ದ್ವಾಪರಯುಗದ ಕಥಾ ಸಂವಿಧಾನದಲ್ಲಿ ದುರಂತತೆಯಿದೆ. ಕಲಿಯುಗದ ಕಥಾ ಸಂವಿಧಾನ ಹೇಗಿರುತ್ತದೆ? ಎನ್ನುವ ಕಲ್ಪನೆಯು ಸಹ ಪ್ರಜ್ವಲಿಸಿದೆ. ಕೊನೆಯಲ್ಲಿ ರುದ್ರ ಹಾಗೂ ಕೃಷ್ಣರು ಒಂದುಗೂಡುತ್ತಾರೆ. ರುದ್ರನಿಗೆ ಕಲಿಯುಗದ ಕಥಾ ಸಂವಿಧಾನವನ್ನು ಕೇಳಬೇಕೆಂಬ ಆಸೆ. ಕೃಷ್ಣನು ವೇದಗಳ ಕಾಲದಿಂದ ಹಿಡಿದು ಇತಿಹಾಸವನ್ನೆಲ್ಲಾ ತಿರುವಿ ಹಾಕುತ್ತಾನೆ. ಗೌತಮಬುದ್ಧ, ಏಸುಕ್ರಿಸ್ತ, ಪೈಗಂಬರ್, ಶಂಕರಾಚಾರ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದ ರಂತಹ ಮಹಾ ವ್ಯಕ್ತಿಗಳು ಜನ್ಮ ತಳೆದದ್ದು ಎಲ್ಲರನ್ನೂ ಹೇಳಿಕೊಂಡು ಬಂದಿದ್ದಾನೆ ಶ್ರೀ ಕೃಷ್ಣ. ಕುವೆಂಪು ಅವರ ಕನ್ನಡನಾಡಿನ ಮೇಲಣ ಅಭಿಮಾನ, ಕನ್ನಡ ಭಾಷೆಯ ಮೇಲಣ ಅಭಿಮಾನವೂ ಇಲ್ಲಿ ವ್ಯಕ್ತವಾಗಿದೆ. ಸ್ವಾತಂತ್ರ್ಯದ ಹೋರಾಟ-ಹಿಂಸೆ, ಅತ್ಯಾಚಾರ ಇವೆಲ್ಲದರ ಪಕ್ಷಿ ನೋಟವಿದೆ. ಅಧರ್ಮದ ಹೆಸರು ಕೇಳಿದ ಕೂಡಲೆ ರುದ್ರ ಶೂಲವನ್ನೆತ್ತುತ್ತಾನೆ. ಆದರೆ ಕೃಷ್ಣನಿಗೆ ಇದು ಇಷ್ಟವಲ್ಲ ಆದುದರಿಂದ.

"ತಾಳ್ಮೆ ತಾಳ್ಮೆ, ಓ ರುದ್ರ ಕೆಡಿಸದಿರ್ ಕಾವ್ಯಮನ್....
ಮುಂಗಾಣಯ್........ಸಾರ್ವಭೌಮತ್ವ ಭಂಗಂ
ಸ್ವತಂತ್ರ ಭಾರತರಂಗಸರ್ಗಂ........ ಪ್ರಜಾಧಿಪತ್ಯಂ
ಸರ್ವ ಸಮತ್ವಂ........ಜಗತ್ಕಲ್ಯಾಣಂ
ಭೂ ವೈಕುಂಠಂ........ನೋಡದೋ........
ದೂರದೊಳ್ ಬಹು ದೂರದೊಳ್ ಕಾಲ ಗರ್ಭದೊಳ್........
ಸಾಮಾನ್ಯ ಮಾನವ ಸಂಸಾರಂ ...... ಸತಿಪತಿಗಳ ಶೃಂಗಾರಂ
ಮಕ್ಕಳಾಟಂ ನೋಟಂ ಕಾವ್ಯಂ
ಕಲಿಯುಗ ಮಹಾ ಕಾವ್ಯಂ !
ಸುಮಧುರಂ........ದಿವ್ಯಂ........ಸುಕಾವ್ಯಂ"

ಎಂದು ವರ್ಣಿಸಿ ಮುಗಿಸುತ್ತಾನೆ ಕೃಷ್ಣ.

ಕಲಿಯುಗದ ಕಾವ್ಯ ಮನೋಹರವಾಗಿರಬೇಕು. ದ್ವಾಪರ ಯುಗದಂತೆ ದುರಂತತೆಯಾಗಬಾರದು; ಎನ್ನುವ ಹಂಬಲ, ಪೇರಾಸೆ ಹೊರ ಹೊಮ್ಮಿದೆ ಕಾವ್ಯರ್ಷಿಯ ಹೃದಯದಿಂದ. ಹಾಗಾಗದೆಂಬ ಆಶಾವಾದಿತ್ವವೂ ಸುಪ್ರಕಟವಾಗಿದೆ. ಕಲಿಯುಗದ ಕಥಾ ಸಂವಿಧಾನವಾದರೂ ಕುವೆಂಪು ಅವರು ಬಯಸಿದಂತೆ ಪೂರ್ಣವಾಗಲಿ ಎಂದು ನಾವೂ ಧ್ವನಿಗೂಡಿಸಬಹುದು.

ಮೊದಲಿನಿಂದ ಕೊನೆಯವರೆಗೆ ಓದುಗರನ್ನು ಕುತೂಹಲದ ಕಲ್ಪದ ಮೇಲೇ ಕುಳ್ಳಿರಿಸುವಂತಿದೆ "ಶ್ಮಶಾನ ಕುರುಕ್ಷೇತ್ರ". ಯುದ್ಧದ ದುರಂತತೆ ಕಣ್ಣಮುಂದೆ ಕಟ್ಟುತ್ತದೆ. ಕರುಣರಸದ ತೊರೆ ನಾಟಕದ ಉದ್ದಕ್ಕೂ ಹರಿದು ಬಂದಿದೆ. ಶ್ರೀ ಕುವೆಂಪು ಅವರ ಪ್ರತಿಭೆಗೆ ಸಾಕ್ಷಿಯಾಗಿ ಕಾಲ್ಪನಿಕ ಸನ್ನಿವೇಶಗಳು ಭೂಮವಾಗಿ ನಿಂತಿವೆ. ಆಧ್ಯಾತ್ಮ ತತ್ವದ ನಿರೂಪಣೆ ಗ್ರಾಹ್ಯವಾಗುವಂತಿದೆ. ಈ ನಾಟಕದ ರಚನೆಯ ಕಾಲದಲ್ಲಿ ಯುದ್ಧ ಪ್ರಸಕ್ತಿಗಳು ನಡೆಯುತ್ತಿದ್ದರಬಹುದಾದ್ದರಿಂದ ಯುದ್ಧದ ಬಗೆಗೆ ಕವಿಯ ತಿರಸ್ಕಾರ ಸಹಜವಾಗಿ ಮೂಡಿ ಬಂದಿದೆ. ಯುದ್ಧಾಕಾಂಕ್ಷಿಗಳಿಗೆ ಚಾಟಿಯೇಟಿನಂತಿದೆ 'ಶ್ಮಶಾನ ಕುರುಕ್ಷೇತ್ರ'.

ಮಹಾಭಾರತದ ಯುದ್ಧಕ್ಕೆ ದಾಯಾದಿ ಮಾತ್ಸರ್ಯವೇ ಬೀಜವಾದರೂ, ಅದರ ಉದ್ದೇಶವೇ ಬೇರೆಯಾದದ್ದು. ಆದರ ಉದ್ದೇಶ ಸೃಷ್ಟಿಗೆ ಸಂಬಂಧಿಸಿದುದು ಹೊಸ ಸೃಷ್ಟಿಗೆ ಹಳೆಯದರ ಬಲಿ ಅನಿವಾರ್ಯ. ಇದಕ್ಕಾಗಿಯೇ ದುರ್ಯೋಧನ, ಕರ್ಣ, ಕೃಷ್ಣ ಮುಂತಾದವರ ಆಗಮನ. ಒಬ್ಬೊಬ್ಬರೂ ಅಭಿನಯ ಕೌಶಲವನ್ನು ಮೆರೆದರು ಮೂಲೋದ್ದೇಶ ಸಫಲವಾಯಿತು. ದ್ವಾಪರಯುಗ ಅಳಿಯಿತು ಕಲಿಯುಗ ಕಾಲಿಟ್ಟಿತು.

ಕುರುಕ್ಷೇತ್ರ ಕೇವಲ ಸಂಗ್ರಾಮ ಭೂಮಿಯಲ್ಲ. ಅದು ದ್ವಾಪರ ಯುಗ ಲಯದ ಪ್ರತೀಕ. ಅದು ಶ್ಮಶಾನ ಮಾತ್ರವೇ ಅಲ್ಲ; ಮುಕ್ತಿಗಾಗರವೂ ಆಗಿತ್ತು ಎನ್ನುವುದು ಈ ನಾಟಕವನ್ನು ಓದಿದಮೇಲೆ ಧ್ವನಿತವಾಗುವ ಅಂಶ.

—○—

"ವರಕವಿ ಕುವೆಂಪು"

ಶ್ರೀಮತಿ ಹೆಚ್. ಆರ್. ಇಂದಿರಾ.

—: :—

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದ ದಿನಗಳು ಅವು. ವಾರ್ಷಿಕೋತ್ಸವ ಸಂದರ್ಭದಲ್ಲಿ ಕನ್ನಡ ಗೀತೆಯ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಸ್ವೀಕರಿಸುವ ಸಲುವಾಗಿ ತುಂಬ ಸಂಭ್ರಮದಿಂದ ಶಾಲೆಗೆ ನಡೆದಿದ್ದೆ. ನನಗೆ ಬಳುವಳಿಯಾಗಿ ಬಂದ ಪುಸ್ತಕ ಕುವೆಂಪು ಅವರ ಪ್ರೇಮಕಾಶ್ಮೀರ. ಅದನ್ನೋದಿದ ಮರುಕ್ಷಣದಿಂದ ಕುವೆಂಪು ಅವರ ಕೃತಿಗಳ ಬಗ್ಗೆ ನನ್ನ ಒಲವು ಹೆಚ್ಚಿತು ಎಂದರೆ ತಪ್ಪಲ್ಲ. ಮಲೆನಾಡಿನ ಸುಂದರ ವಾತಾವರಣದಲ್ಲಿ, ಪ್ರಕೃತಿಯ ಕೂಸಾಗಿ, ಕಾವ್ಯಗಂಗೆ ಹರಿಸಿದ ಅವರ ಕವನಗಳು ಕನ್ನಡದ ಆಸ್ತಿ. ಅವರು ಸೃಷ್ಟಿಸಿದ ಕಾವ್ಯ ಸಂಪತ್ತನ್ನ, 'ಶೂದ್ರ ತಪಸ್ವಿ', ಶ್ಮಶಾನ ಕುರುಕ್ಷೇತ್ರ 'ಬೆರಳ್ಗೆ ಕೊರಳ್' 'ಜಲಗಾರ' ಮುಂತಾದ ನಾಟಕಗಳನ್ನು ಓದಿದಾಗ, ರಂಗದಮೇಲೆ ನೋಡಿದಾಗ, ಕಾಲಕಾಲಕ್ಕೆ ಹೊಸ ಅರ್ಥನೀಡುವಂತೆ ಹಳೆಯ ಕಥನಗಳನ್ನ ಹೊಸಹೊಸ ಶೈಲಿಯಲ್ಲಿ ಬಣ್ಣಿಸಿರುವ ರೀತಿ ಸಾಹಿತ್ಯಾಸಕ್ತರ ಮನಸೂರೆಗೊಳ್ಳುವುದರಲ್ಲಿ ಸಂಶಯವಿಲ್ಲ ಎನಿಸುತ್ತದೆ.

ಪ್ರಕೃತಿ ಪ್ರಿಯರಾದ ಕುವೆಂಪು ವೀರಾವೇಶದಿಂದ ಊದಿದ ಪಾಂಚಜನ್ಯ 'ನಡೆಮುಂದೆ ನಡೆಮುಂದೆ' ಅಂಥ ವೀರಾವೇಶದ ಕವಿ ಶಿಲ್ಪ ಸೌಂದರ್ಯವನ್ನ ಮೆಚ್ಚಿ ಮಾರು ಹೋದಾಗ ಆ ಪವಿತ್ರ ದೇವಾಲಯವನ್ನು ಕುರಿತು

'ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ.
ಶಿಲೆಯಲ್ಲ ಈ ಗುಡಿಯು ಕಲೆಯ ಬಲೆಯು" ಎಂದಿದ್ದಾರೆ. ಮಕ್ಕಳೊಡನೆ ಮಕ್ಕಳಾಗುತ್ತಾರೆ ಕುವೆಂಪು ಎನ್ನುವುದಕ್ಕೆ ಅವರ ಬೊಮ್ಮನಹಳ್ಳಿಯ ಕಿಂದರ ಜೋಗಿಯೇ ಸಾಕ್ಷಿ. ರಾಮಕೃಷ್ಣ ಪರಮಹಂಸ, ವಿವೇಕಾನಂದ ಈ ಈರ್ವರು ವಿಭೂತಿಪುರುಷರ ಪ್ರಭಾವ ಅವರ ಕೃತಿಗಳಲ್ಲಿ, ಜೀವನದಲ್ಲಿ ಮೂಡಿ ಬಂದಿರುವುದು ತಿಳಿದಿರುವ ಅಂಶ.

ಕಾವ್ಯ, ನಾಟಕ, ಕಾದಂಬರಿ ಮುಂತಾದ ಎಲ್ಲ ಸಾಹಿತ್ಯದ ಪ್ರಕಾರದಲ್ಲೂ ತಮ್ಮ ಅಮೂಲ್ಯ ಕೊಡುಗೆಗಳನ್ನಿತ್ತು ಹೆಸರಾದರೂ ಕೀರ್ತಿಶನಿಗೆ ಮಾತ್ರ ಬೆನ್ನು ಬಿದ್ದವರಲ್ಲ, ಆದರೆ ಆ ಕೀರ್ತಿ ಇವರನ್ನ ನೆರಳಿನಂತೆ ಹಿಂಬಾಲಿಸಿ ಬಂದಿತು. "ಶ್ರೀರಾಮಾಯಣದರ್ಶನಂ" ಮೇರುಕೃತಿ ಇವರಿಗೆ ಭಾರತೀಯ ಜ್ಞಾನಪೀಠದ ಪ್ರಶಸ್ತಿಯನ್ನೂ ತಂದುಕೊಟ್ಟು, ಕನ್ನಡಕ್ಕೆ ಅಪಾರ ಗೌರವವನ್ನು ತಂದಿದೆ.

ಈ ವರಕವಿ ಉತ್ತುಂಗ ಶಿಖರವನ್ನೇರಿದರೂ, ಕನ್ನಡದ ಪಾಂಚಜನ್ಯವನ್ನ ಇಂದಿಗೂ ಮೊಳಗಿಸುತ್ತಿದ್ದಾರೆ. ಕನ್ನಡ ಇವರ ಜೀವನದ ಉಸಿರು. ಕನ್ನಡದ ನುಣೆಯಲ್ಲಿ ಕನ್ನಡಕ್ಕೇ ಅಗ್ರಮಾನ್ಯತೆ ದೊರೆಯಬೇಕು ಎನ್ನುವುದು ಇವರ ನಿತ್ಯ ಮಂತ್ರ.

ರಾಷ್ಟ್ರ ಪ್ರಶಸ್ತಿಗಳಿಸಿದ ಈ ಮಹಾನ್ ಕವಿಯನ್ನು ಕಾಣಲು ಹೆದರುವವರೇ ಜಾಸ್ತಿ. ಸಭೆ-ಸಮಾರಂಭ, ಸದ್ದು-ಗದ್ದಲ ಇವರಿಗಾಗದು. ಈ ಬಾರಿ ಪ್ರಶಸ್ತಿ ಸ್ವೀಕರಿಸಲು ಕುವೆಂಪು ಅವರನ್ನು ದೆಹಲಿಗೆ ಕರೆದೊಯ್ಯಲು ಪಟ್ಟಪಾಡನ್ನು ದೇ.ಜ.ಗೌ. ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ.

ಇಂಥ ವರಕವಿಯನ್ನು ಕಂಡು, ಮಾತನಾಡಲೇಬೇಕೆಂಬ ಹಂಬಲ ಒಬ್ಬ ಬಾಲಕನಿಗೆ ಮೂಡಿ ಬಂದಾಗ ಅವರು ವರ್ತಿಸಿದ ರೀತಿ ಎಷ್ಟು ಹೃದಯ ಸ್ಪರ್ಶಿಯೆಂಬುದನ್ನು ವರ್ಣಿಸುವುದು ಅಗತ್ಯ.

ನಾಲ್ಕಾರು ವರುಷಗಳ ಹಿಂದಿನ ಮಾತು. ರಸ್ತೆಯಂಚಿನಲ್ಲಿ ಚಿತ್ರ ರಚಿಸುತ್ತಿದ್ದ ಬಾಲ ಕಲಾವಿದ ಶ್ರೀನಿವಾಸ ವರ್ಮನಿಗೆ ಕುವೆಂಪು ಅವರನ್ನು ಕಾಣುವ ಬಯಕೆ. ಕಂಡು ಅವರ ಆಶೀರ್ವಾದ ಪಡೆಯುವ ಹಂಬಲ. ಆದರೆ ಅವರಿವರ ಮಾತನ್ನ ಕೇಳಿ ಕುವೆಂಪು ಎಂದರೆ ಗುಮ್ಮನೇನೋ ಎನ್ನುವ ಭಯವೂ ಇತ್ತು. ಆದರೂ ಒಮ್ಮೆ ಧೈರ್ಯಮಾಡಿ ಮೈಸೂರಿಗೆ ನಡೆದ. ಉದಯರವಿಯ ಅತ್ತಿತ್ತ ಸುಳಿದಾಡುತ್ತ ಕುವೆಂಪು ಅವರ ದರ್ಶನಕ್ಕಾಗಿ ಕಾದ. ಈ ಹುಡುಗನಿಗೆ ಯಾರು ಅವರ ಪರಿಚಯ ಮಾಡಬೇಕು ಪಾಪ! ಆದರೂ ಕಳ್ಳನಂತೆ ಇಣುಕಿ ನೋಡಿದಾಗ, ಕುವೆಂಪು ತೋಟದ ಕೆಲಸದಲ್ಲಿ ಮಗ್ನರಾಗಿದ್ದುದು ಕಂಡು ಬಂತು. ಅವರೇ ಕುವೆಂಪು ಎಂದು ನಿಶ್ಚಯ ಮಾಡಿಕೊಂಡ ನಂತರ ಅಳುಕುತ್ತ ಅಳುಕುತ್ತಲೇ, ಒಳಗೆ ನಡೆದ.

"ಯಾರಪ್ಪ ನೀನು?" ಎಂದರು ಕತ್ತೆತ್ತಿದ ಕುವೆಂಪು.

ವರ್ಮನಿಗೆ ಏನು ಹೇಳಬೇಕೆಂದು ತೋರದೆ ಒಂದುಕ್ಷಣ ತಬ್ಬಿಬ್ಬಾದರೂ ಅದನ್ನ ತೋರಗೊಡದೆ.

"ತಮ್ಮದೊಂದು ಫೋಟೋ ಬೇಕು ಸಾರ್" ಎಂದ.

"ಫೋಟೋ ಬೇಕಾದ್ರೆ ಮಾರ್ಕೆಟ್ಟಿನ ಅಂಗಡೀಲಿ ಸಿಗಬಹುದು. ಇಲ್ಲಿಲ್ಲ" —ಎನ್ನುವಾಗ ಧ್ವನಿ ಗಡುಸಾಗಿಯೇ ಇತ್ತು.

"ಒಂದು ನಿಮಿಷ ಸಾರ್".

ಕುವೆಂಪು ಮತ್ತೆ ಮಾತನಾಡದೆ ಕತ್ತು ಬಗ್ಗಿಸಿ ತಮ್ಮ ಕೆಲಸದಲ್ಲಿ ನಿರತರಾದರು.

ಇಷ್ಟುದೂರ ಬಂದು ತನ್ನ ಆಸೆ ಉಡುಕಿದಂತಾಯ್ತಲ್ಲಾ, ನನ್ನ ಕಲೆಗಾರಿಕೆಯನ್ನು ಪ್ರದರ್ಶಿಸಿ, ಆಶೀರ್ವಚನ ಪಡೆಯುವುದು ಸಾಧ್ಯವಾಗಲಿಲ್ಲವಲ್ಲಾ

ಎಂದು ಮನಸ್ಸು ನೊಂದಾಗ ಮತ್ತಷ್ಟು ಧೈರ್ಯ ತುಂಬಿಕೊಂಡು ಹೇಳಿದ ಹುಡುಗ.

"ಒಂದೇ ಒಂದು ನಿಮಿಷ ಸಾರ್....ನಿಮ್ಮ ಚಿತ್ರ ಬಿಡಿಸುತ್ತೀನಿ".

ಅವೆಲ್ಲ ಸಾಧ್ಯವಿಲ್ಲಪ್ಪ".

—ಎಂದು ಕುವೆಂಪು ನುಡಿದಾಗ ದೀನ ವದನನಾದ ವರ್ಮ.

"ಒಂದು ನಿಮಿಷ ಹಾಗೆ ನೋಡ್ತಿರಿ ಸಾರ್",

ಎಂದು ಹೇಳಿ ಬಿಳಿಯ ಕಾರ್ಡೊಂದನ್ನು ತೆಗೆದು ಉಗುರಿನ ನೆರವಿನಿಂದ ಅದರೊಡನೆ ಸರಸರನೆ ಚೆಲ್ಲಾಟವಾಡಿದಾಗ 'ಇದೇನು ?' ಎಂದು ಕುವೆಂಪು ಕೇಳು ವಷ್ಟರಲ್ಲಿ ಚಿತ್ರವೊಂದು ಬಿಳಿಯ ಕಾರ್ಡಿನ ಮೇಲೆ ಮೂಡಿ ಬಂದಿತ್ತು. ಅದನ್ನ ಕಂಡ ಕೂಡಲೇ ಅವನ ಪ್ರತಿಭೆಗೆ ಮೆಚ್ಚಿ, ಸಂತಸ ಚಿತ್ತರಾದ ಕುವೆಂಪು ಅಭಿಮಾನ ದಿಂದ ಮನೆಯೊಳಗೆ ಕರೆದೊಯ್ದು, ಮನೆ ಮಂದಿಯನ್ನೆಲ್ಲ ಕೂಗಿ ಹೆದರುತ್ತ ದೂರ ಕುಳಿತವನನ್ನ ಅಭಿಮಾನದಿಂದ ಪಕ್ಕದಲ್ಲಿ ಕೂರಿಸಿಕೊಂಡು, ತಲೆ ನೇವಿಸಿ, ಅವನ ಕೈ ಚಳಕವನ್ನ ಮೆಚ್ಚಿ ವಿವೇಕಾನಂದರ ಕೃತಿಯೊಂದನ್ನು ಆಶೀರ್ವಾದ-ಪೂರ್ವಕವಾಗಿ ನೀಡಿದುದು ಮಾತ್ರವಲ್ಲ, ಆ ಕ್ಷಣದಲ್ಲೇ.

'ರಸಕೊಳದ ಮರಿ ಮೀನಾಗು
ನವ ಗಗನದಿ ಕಿಂ ರತ್ನವಾಗು
ಹಿರಿ ಹಿಗ್ಗಿ ನೀನು ಬರಿ ಮೊಗ್ಗಾಗು,
ಕಲ್ಪನೆಯಲಿ ತೇಲಿ ದಡವ ಸೇರು'

ಎಂದು ಕವನದ ಮೂಲಕ ಹರಸಿದರು.

ಕವಿ ಹೃದಯದ ಕುವೆಂಪು ಪ್ರತಿಭೆ ಕಂಡಾಗ ಅದನ್ನ ಮೆಚ್ಚಿ ಪ್ರೋತ್ಸಾಹಿಸು ವವರು ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೇ ?

ಕಲೆ ಯಾರ ಸ್ವತ್ತು ಅಲ್ಲ. ಕಮಲ ಹುಟ್ಟುವುದು ಕೆಸರಿನಲ್ಲೆ. ಆದರೆ ನೋಡುವ ಕಣ್ಣು ದೋಷ ಪೂರ್ಣವಾಗಿರಬಾರದಷ್ಟೆ. ಪ್ರತಿಭೆಗೆ ಮಗುವಾದ ರೇನು ? ದೊಡ್ಡವರಾದರೇನು ? ಗುರುತಿಸುವುದು ನಮ್ಮ ಕರ್ತವ್ಯ. ಆ ರೀತಿ ಯಲ್ಲಿ ಇಂದಿಗೂ ವರ್ತಿಸುತ್ತಿದ್ದಾರೆ, ಕುವೆಂಪು.

ಅಂದಿನಿಂದ ಇಂದಿನವರೆಗೆ, ಆ ಮಹಾನ್‌ಕವಿ ಈ ಬಾಲಕ ಲಾವಿದ ವರ್ಮನಿಗೆ ಬರೆದ ಪತ್ರದಲ್ಲಿ 'ನೀವು' ಎಂದು ಬರೆಯುತ್ತಾರೆಯೇ ಹೊರತು 'ನೀನು' ಎಂದು ಬರೆದುದು ಎಲ್ಲೂ ಕಾಣಲಿಲ್ಲ. ಹುಡುಗ ಎಂದು ತಾತ್ಸಾರ ಮಾಡದೆ, ಸರಿಯಾದ ಸಮಯದಲ್ಲಿ ಸರಿಯಾದ ತಿಳುವಳಿಕೆಯನ್ನೂ, ಪ್ರೋತ್ಸಾಹದ ನಾಲ್ಕು ಮಾತನ್ನೂ ಆಡುತ್ತಲೇ ಬಂದಿದ್ದಾರೆ. ಇದಕ್ಕಿಂತ ದೊಡ್ಡತನ ಬೇಕೇ ?

ಪ್ರವಾಸ ಮುಗಿಸಿ ಭಾರತ ಸುತ್ತಿ ಹೊರಟಾಗ ಕಲ್ಕತ್ತಾದಿಂದ ಕುವೆಂಪ
ಅವರಿಗೊಂದು ಪತ್ರ ಬರೆದ. ಅವರು ಉತ್ತರಿಸುತ್ತಾ.

"ನಿಮ್ಮ ಅಕ್ಷರಗಳನ್ನು ನೋಡಿ ಸಂತೋಷ ಪಡುತ್ತಿರುವವರ
ನಾನೊಬ್ಬ. ನಿಮಗೆ ಶ್ರೀಗುರು ಕೃಪೆ ಮಾಡಲಿ" ಎಂದು ಬರೆದರು. ಬೆಂಗಳೂರ
ಆಕಾಶವಾಣಿಯಲ್ಲೊಮ್ಮೆ ಸರ್ಜನ ಸಂದರ್ಶನ ಕಾರ್ಯಕ್ರಮ ಪ್ರಸಾರವಾದಾ
ಅಭಿಮಾನದಿಂದ ಆ ಕಾರ್ಯಕ್ರಮವನ್ನು ಕೇಳಿ, ಪತ್ರ ಬರೆಯುತ್ತಾ.

"ನೀವು ದಕ್ಷಿಣದ ಸಾಹಿತ್ಯ ಮತ್ತು ಸಂಸ್ಕೃತಿಯ ಪರಿಚಯ ಮಾ
ಕೊಂಡರೆ ನಿಮ್ಮ ಕಲೆಗೆ ಕಳೆ ಕಟ್ಟುವುದರಲ್ಲಿ ಸಂಶಯವಿಲ್ಲ. ಶ್ರೀಗುರು ಹಾರೈ
ಗಯ್ಯಲಿ. ಕಲ್ಕತ್ತಾಕ್ಕೆ ಹೋದವರು ದಕ್ಷಿಣೇಶ್ವರ, ಬೇಲೂರು ಮಠಗಳಿಗ
ಹೋಗಿಬನ್ನಿ. ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಮೆಟ್ಟಿದ ನೆಲವನ
ಸ್ಪರ್ಶಿಸಿ ಧನ್ಯರಾಗಿ ಎಂದು ತಿಳುವಳಿಕೆ ನೀಡಿ, ಸರ್ಜ ಇನ್ನೂ ಎತ್ತರ ಬೆಳೆಯ
ನೆರವಾದರು.

ದೂರದಲ್ಲಿದ್ದರೂ ಹತ್ತಿರದ ಆತ್ಮೀಯರಂತೆ ಮಾರ್ಗದರ್ಶನ ನೀಡ
ಕುವೆಂಪು ಅವರ ಪತ್ರ ಸಾಹಿತ್ಯವೂ ಎಷ್ಟು ಅಮೂಲ್ಯ ಎನ್ನುವುದಕ್ಕೆ, ಅವರ
ವಿಷಯ ಎಷ್ಟು ಮಹತ್ವಪೂರ್ಣ ಎನ್ನುವುದಕ್ಕೆ ೧೯೬೭ ರಲ್ಲಿ ಅವರು ಬರೆದ
ಪತ್ರ ಸಾಕ್ಷಿ. ಅದೂ ಸರ್ಜನನ್ನು ಕುರಿತದ್ದೇ.

....

'ದೈವದತ್ತವಾದ ಪ್ರತಿಭೆ ಗಣಿಯ ವಜ್ರದಂತೆ. ಅದಕ್ಕೆ ಸಾಧನೆಯ ಸಾ
ಹಿಡಿಯುವುದೇ ರಹಸ್ಯವಿದ್ದ ಹಾಗೆ ಸಾಣೆ ಹಿಡಿಯುವಲ್ಲಿದೆ ಜಗತ್ತಿನ ನೂರು ಕ
ಯಲ್ಲಿ ಅದಕ್ಕೆ ಬೆಲೆ ಬರುವುದಿಲ್ಲ. ಬೆಲೆ ಮರೆಯಾಗಿ ಇರುತ್ತದೆ. ಅದಕೆ ಬರುವುದಿ
ಆ ಸಾಣೆ ಹಿಡಿಯುವ ಸಾಧನೆಯನ್ನ ಕೈಗೊಂಡು ನೀವು ಯಶಸ್ವಿಯಾಗಿ ಎಂ
ಹಾರ್ದಪೂರ್ವಕ ಹರಸುತ್ತೇನೆ.

ಗಣಿಯ ವಜ್ರ ಯೋಗ್ಯರ ಕೈಸೇರಿದರೆ ಮಾತ್ರ ಅದಕ್ಕೆ ನೈಜ ಪ್ರಾ
ನಿಮ್ಮ ಕಲಾ ಪ್ರತಿಭೆಯನ್ನ ದುರುಪಯೋಗ ಪಡಿಸಿಕೊಳ್ಳುವ ಬರಿಯ ಸಾಹಸಿ
ಕೈಗೆ ಕೊಡಬೇಡಿ. ಸ್ವಾರ್ಥಿಗಳ ಕ್ಷಣಿಕ ಪ್ರಶಂಸೆಗೆ ಮಾರು ಹೋಗಬೇಡಿ.

........ನಿಮ್ಮ ಪ್ರತಿಭೆ ಪೂಜೆಗೆತ್ತಿದ ಆರತಿಯ ಜ್ಯೋತಿಯಾಗಿ ನಿರಂ
ಬೆಳಗಲಿ.

ನಿಮಗೆ ಒಳಿತಾಗಲಿ

ಕುವೆಂಪು

—ಕುವೆಂಪು ಎಲ್ಲಿ? ಇದೀಗ ಕಲಾರಂಗದಲ್ಲಿ ಅಡಿ ಇಟ್ಟಿರುವ ಶ್ರೀನಿವಾ
ಸರ್ಜನೆಲ್ಲಿ? ಆದರೂ ಕುವೆಂಪು ಎಂದೋ ಪರಿಚಯವಾದ ಆ ಬಾಲಕನಿಗೆ ಒಳ್ಳೆ

ಮಾತಿನ ಜೊತೆಗೆ ಅನುಭವದ ನಾಲ್ಕು ಹಿತ ನುಡಿಗಳನ್ನೂ ಏಕೆ ಹೇಳುತ್ತಾರೆ ಎಂಬುದು ವಿಚಾರ ಮಾಡಿದಾಗ ಅವರ 'ಕವಿ ಹೃದಯ' ನಮ್ಮ ಕಣ್ಣು ಮುಂದೆ ನಿಲ್ಲುತ್ತದೆ. ಇಂದಿನ ಜಗತ್ತನ್ನ ಚೆನ್ನಾಗಿ ಬಲ್ಲ ಕುವೆಂಪು, ಪ್ರತಿಭೆ ಕಮರಿ ಹೋಗುವುದನ್ನ ಎಂದೂ ಸಹಿಸರು

ಅನ್ಯಾಯವೆಂದಾಗ ರೊಚ್ಚಿಗೇಳುವ, ಕನ್ನಡವೆಂದಾಗ ದನಿ ಏರಿಸುವ, ಪ್ರತಿಭೆ ಕಂಡಾಗ ಆದರಿಸಿ, ಗೌರವಿಸುವ ಮಲೆನಾಡಿನ ಮಹಾನ್ ಕವಿ ಕುವೆಂಪು, ಜನತೆಯ ನೋವು-ನಲಿವನ್ನ ಚೆನ್ನಾಗಿ ಬಲ್ಲ ಜನತಾ ಕವಿಯೂ ಹೌದು.

ಕುವೆಂಪುವಿಗೆ

ಸುರಿದು ಕಿವಿಯಿಂದ ಹೃದಯದಲ್ಲಿ ಕಡಲಾಗುತಿದೆ
ನಿನ್ನೀ ಮಹಾಕಾವ್ಯರಸ ಜಾಹವಿ, ಕುವೆಂಪು !
ಸಾವಧಾನದಿ ಹರಿಯುತಿದೆ ಇಲ್ಲಿ ಕೊಳಲಿಂಪು
ಆದರದೊ ಧುಮುಧುಮಿಸುತಲ್ಲಿ. ಸಿಡಿಲಾಗುತಿದೆ
ಅಗ್ನಿ ದಿವ್ಯವ ಮೀರಿ ಆನಂದ ಮಾಗುತಿದೆ
ವಿಶ್ವವೇ ತೊನೆಯೆ ಜೋತಿಹುದವರ ತನಿಬಿಣ್ಪು
ಜಾಗರಾ ಮುಗ್ಧ ರಾಜಸವು ಸ್ವಪ್ನದ ಲಂಪು
ಸೆಳೆಯೆ ಶಿಶುಹೃದಯ ಸಾತ್ವಿಕಕೆ ಬದಲಾಗುತಿದೆ
ಪಂಪರನ್ನ ಕುಮಾರವ್ಯಾಸರಾಗೆ ಕುವೆಂಪು.
ವ್ಯಾಸನನ್ನವರಂತೆ ವಾಲ್ಮೀಕಿಯನ್ನಂತೆ
ಕರೆತಂದ ನಿನ್ನ ಭಾಗೀರಥ್ಯದೇನ್ ಪೆಂಪು !
ಸಹ್ಯಾದ್ರಿ ಋಷ್ಯಮೂಕವೊಳೆಸಿತು ನೀನ್ ನೋಂತೆ !
ಲಂಘಿತ ಮಹಾಕಾವ್ಯ ಜಲಧಿಗೆ ನಮೋನಮಃ
ನೀತಾರವಿಂದ ಸಂಜೀವಗೆ ನಮೋನಮಃ

—ಕೆ. ನರಸಿಂಹ ಮೂರ್ತಿ, ಎಂ. ಎ., ಐ.ಎ.ಎಸ್.

ಕಾನೂರು ಹೆಗ್ಗಡಿತಿ ; ಮಹಾಕೃತಿಯ ಮಹಾಕ

ಶ್ರೀಮತಿ ಕೆ. ಸಾವಿತ್ರಿ, ಬೆಂಗಳೂರು.

—: :—

ಸುಮಾರು ಮೂವತ್ತು ವರ್ಷಕ್ಕೂ ಹಿಂದೆ ರಚಿತವಾದ, "ಕಾನೂ
ಸುಬ್ಬಮ್ಮ ಹೆಗ್ಗಡಿತಿ ಕಾದಂಬರಿಯನ್ನು ಓದಿದಾಗ, ಕುವೆಂಪು ಮಲೆನಾಡಿ
ಮಧುರವಾಗಿ ಹಾಡು ಹಕ್ಕಿ ಮಾತ್ರವಲ್ಲ, ಸರ್ವಕಾಲಿಕ, ಸಾರ್ವಲೌಕಿಕವ
ಬಲ್ಲಂತಹ ಮಹಾಗದ್ಯ ಕೃತಿಯನ್ನೂ ರಚಿಸಬಲ್ಲಂತಹ ಹಿರಿಯ ಕಾದಂಬರಿಕ
ಎಂಬುದೂ ತಿಳಿಯುತ್ತದೆ. ಅನೇಕ ರೂಪಕಗಳೊಡನೆ, ಸುಂದರ ಪ್ರಕೃತಿ ವಣ
ಯೊಡನೆ ಕೂಡಿರುವ ಈ ಬೃಹದ್ ಕಾದಂಬರಿ ಕೇವಲ ಕಾದಂಬರಿ ಮಾತ್ರ
ಕಾವ್ಯಮಯವಾದ ಕಾದಂಬರಿ. ಮಲೆನಾಡಿನ ಪ್ರಕೃತಿ ಹಾಗೂ ಜನಜೀವನ,
ಹಾಗೂ ಕಾವ್ಯಮಯ ಶಬ್ದಜಾಲ, ಎಲ್ಲವನ್ನೂ ಹಾಸು ಹೊಕ್ಕಾಗಿ ಉಳ್ಳ
ಕಾದಂಬರಿ ನಮ್ಮನ್ನು ಬೇರೆಯೇ ಲೋಕಕ್ಕೆ ಒಯ್ದು, ಆ ಲೋಕದ ಒ
ಹೊರಗು, ಸತ್ಯ ಸೌಂದರ್ಯ, ಎಲ್ಲದರ ದರ್ಶನ ಮಾಡಿಸಿ ನಾನಾರೀತಿಯ ಅನು
ಗಳಲ್ಲಿ ನಮ್ಮನ್ನು ವಿಹರಿಸಿ, ಒಂದು ಬಗೆಯ ಧನ್ಯತೆಯ, ಸಾರ್ಥಕತೆಯ
ಭವವನ್ನು ನಮಗೆ ಮಾಡಿಸಿ ಕೊಡುತ್ತದೆ.

ಕಾದಂಬರಿಕಾರರೇ, 'ಅರಿಕೆ'ಯಲ್ಲಿ ಹೇಳಿಕೊಂಡಿರುವ ಮಾತಿನಂತೆ
ಕಾದಂಬರಿಯೂ, "ಕರತಲ ರಂಗಭೂಮಿ, ಅಂಗೈ ಮೇಲಣ ನಾಟಕ ಶಾಲೆ,
ರಿಂದ ಕಾದಂಬರಿಯನ್ನು ಓದುವ ವಾಚಕರು ನಾಟಕವನ್ನು ನೋಡುವ
ಕರೂ ಆಗಬೇಕಾಗುತ್ತದೆ. ವಾಚಕರ ಕಲ್ಪನೆ ಸದಾ ಎಚ್ಚೆತ್ತಿರಬೇಕು, ಅದು
ಮಾಡುವುದಿರಲಿ, ತೂಕಡಿಸಿದರೂ ರಸಸ್ವಾದನೆಗೆ ಭಂಗ ಬರುತ್ತದೆ............
ಕಾದಂಬರಿಯನ್ನು ಓದುವಾಗ ನಮ್ಮ ಕಲ್ಪನೆ ಜಾಗ್ರತವಾಗಿದ್ದರೆ, ಕಾದಂಬ
ಪ್ರತಿ ಸನ್ನಿವೇಶವೂ ಪ್ರತಿ ವ್ಯಕ್ತಿಯೂ ನಮ್ಮ ಕಣ್ಣಿನ ಮುಂದೆ ಬಂದು ನಿಂ
ಭಾಸವಾಗುತ್ತದೆ. ಕಾದಂಬರಿಕಾರರೇ ಹೇಳಿರುವಂತೆ, ಇದು ಕಥೆಯ ಕೋಲ
ವಲ್ಲ. ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳ ಕಡಲಿನಲ್ಲಿ ಒಂದು
ಇದು ಅನೇಕರಿಗೆ ಸಂಪೂರ್ಣವಾಗಿ ಹೊಸ ಪ್ರಪಂಚ. ಈ ಕಾದಂಬರಿಯ
ಸ್ವಾದನೆ ಮಾಡಬೇಕಾದರೆ ಓದುಗ ತಾಳ್ಮೆಯಿಂದ, ಸಾವಾಕಾಶವಾಗಿ ಓದ
ಗುತ್ತದೆ.

ಕಾದಂಬರಿಯುದ್ದಕ್ಕೂ ಪ್ರತಿ ವ್ಯಕ್ತಿ ಚಿತ್ರಣದಲ್ಲೂ ಸನ್ನಿವೇಶ ವ
ಯಲ್ಲೂ ಕಂಡು ಬರುವ ಮುಖ್ಯ ಅಂಶ–ಕಾದಂಬರಿಕಾರರ ಸಹಾನುಭೂತಿ. ಅ

ಕ್ರೂರವಾಗಿ ವರ್ತಿಸುವ ಚಂದ್ರಯ್ಯಗೌಡರು, ಅಜ್ಞಾನಿ ಸುಬ್ಬಮ್ಮ, ಕಳ್ಳು ಮಾಂಸಗಳ ದುಶ್ಚಟಗಳಿಗೆ ಒಳಗಾಗಿರುವ, ಸಾಮಾನ್ಯ ಆಳುಗಳಾದ ಸೇರು, ಸಿಂಗ, ಬೈರ, ಮುಂತಾದವರು, ಎಲ್ಲರೂ ಕವಿಯ ಸಹಾನುಭೂತಿಯ ಅಮೃತವನ್ನುಂಡು ಕಳೆಗೊಂಡ ವ್ಯಕ್ತಿಗಳು. ಕಾದಂಬರಿಕಾರರು ಓದುಗರಿಂದಲೂ ಅದೇ 'ಸಹಾನುಭೂತಿ ಇಲ್ಲದಿದ್ದರೆ ನಂದನವೂ ಮರುಭೂಮಿಯಾಗುತ್ತದೆ.'

ಚಂದ್ರಯ್ಯಗೌಡರು, ಸುಬ್ಬಮ್ಮ, ರಾಮಯ್ಯ ಮುಂತಾದವರು ಹೆಜ್ಜೆ ಹೆಜ್ಜೆಯಾಗಿ ದುರಂತದತ್ತ ಸಾಗಲು ಹೇಗೆ ಪರಿಸ್ಥಿತಿ, ವಿಧಿ, ಅಜ್ಞಾನ, ಅಸೂಯೆ, ಅಸಂಸ್ಕೃತಿ, ಅದೃಢ ವ್ಯಕ್ತಿತ್ವ, ಇವೆಲ್ಲಾ ಕಾರಣಗಳಾಗಿದ್ದವೆಂಬುದನ್ನು ಎಷ್ಟು ಸಹಜರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಯಾವೊಬ್ಬ ವ್ಯಕ್ತಿಯ ಕ್ರೂರ ನಡತೆಯ ಹಿಂದೆ, ಅದಕ್ಕೆ ಎಷ್ಟೆಲ್ಲಾ ಕಾರಣಗಳು ಕೆಲಸ ಮಾಡುತ್ತಿದ್ದವು ಎಂಬುದನ್ನು ಅತ್ಯುತ್ತಮ ಮನೋವೈಜ್ಞಾನಿಕನಂತೆ ವಿಶ್ಲೇಷಿಸಿದ್ದಾರೆ. ಸೂರೆ ಹೋಗಿರುವ ಮಲೆನಾಡಿನ ಪ್ರಕೃತಿಯನ್ನು ಕುರಿತು ಎಷ್ಟು ವರ್ಣಿಸಿದರೂ ಕಾದಂಬರಿಕಾರರೂ ದಣಿಯರು. ಕಲ್ಲುಸಾರದ ಬಳಿ ಬಂಡೆಯಿಂದ ಬಂಡೆಗೆ ಧುಮುಕಿ ನೊರೆನೊರೆಯಾಗಿ ಹರಿಯುವ ತುಂಗೆಯೇನು ! ತುಂಗೆಯ ಇಕ್ಕೆಲದ ಮಾಲೆ ಮಾಲೆ ಅರಣ್ಯಗಳೇನು ! ಮಲೆನಾಡಿನ ಮಧ್ಯಾಹ್ನದ ಶ್ಯಾಮಲ ನಿದ್ರಾಸಕ್ತ ಬೆಟ್ಟಗುಡ್ಡಗಳೇನು ! ಕಾನುಬೈಲಿನ ಸೌಂದರ್ಯವೇನು ! ಮಳೆಗಾಲದ ಕಾರ್ಮುಗಿಲೇನು ! ಚೈತ್ರದ ವಸಂತಗಾನವೇನು ! ಅಡವಿಯಲ್ಲಿ ಕಂಡವರ ಮೈಮರೆಸುವ ಆ ಅತಿಸುಂದರ ಸಂಜೆ ಮುಂಜಾವುಗಳೇನು ! ಕೋಗಿಲೆ, ಕಾಜಾಣ, ಮೀಂಚುಳ್ಳಿ, ಮಂಗಟ್ಟೆ, ಗಿಳಿವಿಂಡುಗಳ ಗಾನವೇನು ! ವನರಾಜಿಯ ಹಸಿರುಡೆಯ ಸೊಬಗೇನು !...........ಒಂದೇ ! ಎರಡೇ !

ಆದರೆ ಇಂತಹ ಸುಂದರ ಪ್ರಕೃತಿಯ ಮಡಿಲಿನಲ್ಲಿ ಬದುಕುತ್ತಿದ್ದ ಮಾನವನ ಬಾಳು ಎಷ್ಟೊಂದು ಸ್ವಾರ್ಥಪರ, ಎಷ್ಟು ವಿಕೃತ, ಎಷ್ಟು ಅಸಭ್ಯವಾಗಿತ್ತು ? ಎಂಬುದನ್ನೂ ಅಷ್ಟೇ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಕಾನೂರಿನ ಅತಿ ಶ್ರೀಮಂತ ಚಂದ್ರಯ್ಯಗೌಡರ ಮನೆಯ ಹಿತ್ತಲು ಭಾಗ ಹೀಗಿದ್ದಿತಂತೆ—,

"........ಕ್ರಮಾಕ್ರಮಗಳನ್ನು ಒಂದಿನಿತೂ ಗಣನೆಗೆ ತಾರದೆ ತಮ್ಮ ಉದರ ಪೋಷಣೆ ಮಾಡಿಕೊಳ್ಳುತ್ತಾ ಡೊಕ್ಕೇರಿ, ಕಾಲು ಚಾಚಿಕೊಂಡು ಬಿದ್ದಿರುವ ಕುನ್ನಿಮರಿಗಳು, ತನ್ನ ಹೂಮರಿಗಳೊಡನೆ ನೆಲವನ್ನು ಕೆದರಿ ಗಲೀಜು ಮಾಡುವ ಹೇಂಟೆ........ಮೇಲುಗಡೆ ನೇತಾಡುತ್ತಿರುವ ತಟ್ಟಿಯಲ್ಲಿ ಸಂಡಿಗೆ ಮಾಡಲು ಒಣಗಲಿಟ್ಟಿರುವ ಮಾಂಸದ ದೊಡ್ಡ ದೊಡ್ಡ ತುಂಡುಗಳು. ಸಂದುಗೊಂದುಗಳಲ್ಲಿ ಕಿಕ್ಕಿರಿದಿರುವ ಜೇಡರ ಬಲೆಗಳ ತುಮುಲಜಟಿಲ ವಿನ್ಯಾಸ.......ತಾಂಬೂಲದ

ಕೆಂಪಾದ ಉಗುಳು. ಇವುಗಳಿಗೆಲ್ಲಾ ಮುಕುಟಪ್ರಾಯವಾಗಿ ಮೂತ್ರದ ವಾಸನೆ....

ಅಲ್ಲಿ ಹಾಗಿದ್ದರೆ ಅಣ್ಣಯ್ಯಗೌಡರ ಮನೆಯಲ್ಲಿ ಹೀಗೆ, "...........ಹುಡು ಓಡಿಹೋಗಿ ಒಂದು ಸಣ್ಣ ಮಡಕೆಯಲ್ಲಿ ನೀರು ತಂದಳು. ಅನರು ಜಾವಿಯಾ ಉಪಯೋಗಿಸುತ್ತಿದ್ದ ಗಚ್ಚಿಯ ಹೊಂಡವು. ಆ ಹೊಂಡದಲ್ಲಿ ಬಟ್ಟೆ ಒಗೆಯು ದರಿಂದ ಮೊದಲುಗೊಂಡು ಎಲ್ಲ ಶೌಚ ಕಾರ್ಯಗಳೂ ನಡೆಯುತ್ತಿದ್ದುದರಿಂ ಹಾವಸೆ ಹಬ್ಬಿ ನೀರು ಹಸಿರುಗಟ್ಟಿತ್ತು. ಒಮ್ಮೊಮ್ಮೆ ಹಗಲು ಬಿಸಿಲಿನಲ್ಲಿ ಎಮ್ ಗಳೂ ಅದರಲ್ಲಿ ಬಿದ್ದು ಹೊರಳಾಡುತ್ತಿದ್ದುದರಿಂದ ಅದರಲ್ಲಿ ಸೆಗಣಿ ವಾಸನೆಯು ತುಂಬಿತ್ತು. ಅರಿಯದ ಮಗಳು ಕೊಟ್ಟಳು, ಜ್ವರಪೀಡಿತಳಾಗಿ ಅರಿವುಗೆಟ್ಟ ತಾಯಿ ಕುಡಿದಳು ಕುಡಿದವಳು ಹಾಗೆಯೇ ವಾಂತಿಮಯವಾಗಿದ್ದ ಹಾಸಿಗೆಯ ಮೇ ಮಲಗಿದಳು..........."

ಎಂತಹ, ಮರುಕ ಹುಟ್ಟಿಸುವ ಅಜ್ಞಾನ!

ಇನ್ನು ಮೌಢ್ಯ ಅಂಧ ವಿಶ್ವಾಸಗಳೋ! ಕತ್ತಲಲ್ಲಿ ಏನೋ ಆಕೃತಿಯನ ಕಂಡು ಭೂತವೆಂದು ಕುಸಿದು ಬೀಳುವ ಚಂದ್ರೇಗೌಡರು, ಭೈರನ ಮಗ ಗಂ ಸತ್ತುದಕ್ಕೆ ಹೂವಯ್ಯ ಭೂತರಾಯನ ಹರಕೆ ಹೋತವನ್ನು ಇಟ್ಟುಕೊಂಡುದ ಪರಿಣಾಮ ಎನ್ನುತ್ತಾರೆ. ಅವರ ಕಾಯಿಲೆಗೆ ಕಾರಣವೂ ಭೂತರಾಯ ಚೇಷ್ಟೆಯೇ. "ಭೂತ ಹೂವಯ್ಯಗೌಡರ ಕೈವಶವಾಗಿ ಹೋತದಲ್ಲಿ ವಾಸಿಸುತ್ತ ಅವರು ಹೇಳಿದ ಹಾಗೆ ಕೇಳುತ್ತದೆ" ಎಂದು ಸುತ್ತಿನ ಎಲ್ಲ ಜನರ ಅಭಿಪ್ರಾಯ ಉನ್ಮಾದಾವಸ್ಥೆಯಲ್ಲಿರುವ ಸೀತೆ ಹೂವಯ್ಯನೊಡನೆ ಸಹಜ ರೀತಿಯಲ್ಲಿ ನಡೆ ಕೊಂಡು ಅವನು ಹೋದ ಮೇಲೆ ಮತ್ತೆ ಅದೇ ವಿಕಾರಾವಸ್ಥೆಗೆ ಇಳಿದುದ ಶಾಮಯ್ಯಗೌಡರ ವಿಮರ್ಶೆ, "ಇದೆಲ್ಲಾ ಅವನ ಮಾಯಾಮಂತ್ರ ಅಲ್ಲದೆ ಮತ್ತೇನ ಅಲ್ಲ" ಎಂಬುದು. ಸೀತೆಯ ಮನೋವಿಕಾರಕ್ಕೆ ಕೃಷ್ಣಪ್ಪನ ದೆಯ್ಯ ಮೈಮೇ ಬಂದಿದೆ ಎಂದು ಸೀತೆಯ ತಂದೆ ತಾಯಿಯರಾದಿಯಾಗಿ ಎಲ್ಲರೂ ನಂಬುವರು. ಕೊನೆ ಹೂವಯ್ಯನಂತಹ ಮಗನ ಸಂಪರ್ಕದಲ್ಲಿಯೇ ಇದ್ದೂ, ಅವನ ನ್ಯಾಯಬದ್ಧವಾ ತರ್ಕವನ್ನು ಕೇಳಿಯೂ, ಅವನ ಬುದ್ಧಿ, ವಿಚಾರಗಳಲ್ಲಿ ಅಪಾರ ವಿಶ್ವಾಸವಿದ್ದ ಈ ಭೂತಪ್ರೇತಗಳಲ್ಲಿ ನಂಬುಗೆಯನ್ನು ಬಿಡಲಾರದಾದ ನಾಗಮ್ಮ ಹಳ್ಳಿಗರ ಮೌಢ್ಯವನ್ನೇ ಮೂಲಧನವಾಗಿ ಮಾಡಿಕೊಂಡು ಸ್ವಾರ್ಥಸಾಧನೆ ಮಾಡುತ್ತಾ "ಶೂದ್ರ ಮಕ್ಕಳಿಗೆಲ್ಲಾ ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೇ? ಇ ನ್ನೆಲ್ಲಾ ಓದಿ ಮನೆಹಾಳು ಮಾಡಿಕೊಳ್ಳುತ್ತಾರೆ." ಎನ್ನುವ ವೆಂಕಪ್ಪಯ್ಯನವ

ಹಾಗೆಯೇ ಮಲೆಯ ಜನರ ಬದುಕನ್ನೂ ಅವರ ರೀತಿನೀತಿಗಳನ್ನೂ ವ ಸುವಲ್ಲಿ, ಆ ಜನರ ಜೀವನದ ಅಸಂಸ್ಕೃತಿಯು "ಎಷ್ಟು ಸಹಜತೆ, ವಾಸ್ತವತೆಗಳ ಕೂಡಿದೆ. ಮಾತೆತ್ತಿದ್ದರೆ ಈ ಜನಗಳ ಬಾಯಲ್ಲಿ ಹೊಲಸು ಮಾತು ಸಿರಗ

ವಾಗಿ ಹೊರಬರುತ್ತವೆ. ಕೋಪ ಬಂದಾಗ, ಒನಕೆಯಿಂದ ಬತ್ತ ಕುಟ್ಟುವಂತೆ ಕುಟ್ಟಿಬಿಡುತ್ತಾರೆ. ಅರಣ್ಯವೇ ಬೆಚ್ಚಿಬೀಳುವಂತೆ ರೋದಿಸುತ್ತಾರೆ. ಸುಸಂಸ್ಕೃತರ ಸಾಲಿಗೆ ಸೇರುವ ನಾಗಮ್ಮನವರೂ, ಇದಕ್ಕೆ ಹೊರತಲ್ಲ "ನಿನ್ನ ಗುಡಿ ನಾಶವಾಗ...." ಎಂದು ಮುಂತಾಗಿ ಭಗವಂತನನ್ನೇ ಶಪಿಸಿಬಿಡುತ್ತಾರೆ.

"ನಿನ್ನ ಕೃಷ್ಣಪ್ಪಗೌಡರನ್ನು ಹುಲಿ ಹಿಡಿಯ...." ಎಂದು ಸೀತೆಯೂ ಒಮ್ಮೆ ಶಪಿಸಿಬಿಡುತ್ತಾಳೆ!

ಇಷ್ಟಾಗಿಯೂ, ಇಷ್ಟೊಂದು ವಾಸ್ತವಿಕತೆಯಿಂದ ಜನಜೀವನ ವರ್ಣಿಸಲ್ಪಟ್ಟಿದ್ದರೂ, ವಾಸ್ತವಿಕತೆಯ ಹೆಸರಿನಲ್ಲಿ ಅಶ್ಲೀಲವನ್ನು ಎಲ್ಲೂ ಬಳಸಿಕೊಂಡಿಲ್ಲ. ಸೇರೆಗಾರ ರಂಗಪ್ಪನ ವಿಟ ಜೀವನವನ್ನು, ಗಂಗೆಯಂತಹ ಮಾಯಗಾರ್ತಿಯ ಬದುಕನ್ನು ಸೇರೆಗಾರ ರಂಗಪ್ಪ–ಸುಬ್ಬಮ್ಮ ಇವರ ಅನೈತಿಕ ಸಂಬಂಧವನ್ನು ವಿವರಿಸುವಾಗಲೂ ಎಲ್ಲೂ ಯಾವ ರೀತಿಯ ಅಶ್ಲೀಲ ಪದಗಳನ್ನಾಗಲಿ, ವರ್ಣನೆಯನ್ನಾಗಲಿ ಬಳಸಿಲ್ಲ.

ಮಲೆಯ ಜನರ ಬದುಕು ಈ ಮೌಢ್ಯ, ಅಜ್ಞಾನ, ಅಸಂಸ್ಕೃತಿ, ಸ್ವಾರ್ಥ ಮುಂತಾದವುಗಳಿಗೆ ಸಿಲುಕಿ ವಿಕೃತವಾಗಿದ್ದರೆ. ಅವರ ಬದುಕಿನ ಬಹು ಭಾಗವನ್ನು ಕರಾಳಗೊಳಿಸಿರುವ ಇನ್ನೊಂದು ರಾಹು ಕಳ್ಳು ಹಾಗೂ ಮಾಂಸಗಳ ಚಾಪಲ್ಯ. ಜೀಲರಾಳುಗಳಿಂದ ಹಿಡಿದು ಚಂದ್ರಯ್ಯಗೌಡ, ಶಾಮಯ್ಯಗೌಡ, ಸಿಂಗಪ್ಪಗೌಡ ಮುಂತಾದ ಎಲ್ಲ ಹಿರಿಯ ವ್ಯಕ್ತಿಗಳೂ ಈ ಚಾಪಲ್ಯಕ್ಕೆ ಒಳಗಾಗಿದ್ದಾರೆ. ಸ್ತ್ರೀಯರಾದ ಸುಬ್ಬಮ್ಮ ನಾಗಮ್ಮನವರೂ ಇದಕ್ಕೆ ಹೊರತಲ್ಲ. ಹಿರಿಯ ದೇವರಾದ ತಿರುಪತಿ ತಿಮ್ಮಪ್ಪನ ಆಣೆಯಿಟ್ಟು ಕುಡಿಯುವುದಿಲ್ಲವೆಂದು ಶಪಥ ಮಾಡಿದ ಕಾಗದಕ್ಕೆ ಸಹಿ ಹಾಕಿದ್ದರೂ ದೇವರ ಹೆದರಿಕೆಯೂ ಅವರುಗಳ ಹೆಂಡದ ಚಾಪಲ್ಯವನ್ನು ನಿರೋಧಿಸಲು ಅಸಮರ್ಥವಾಗುತ್ತದೆ. ನಾಗಮ್ಮ ತಮ್ಮ ಮಗನ ಸದ್ಗುಣಗಳಿಂದ ಪ್ರೇರಿತರಾಗಿ ಮಗನಿಗೆ ಹಿತವಾಗುವಂತೆಯೇ ಸನ್ಮಾರ್ಗದಲ್ಲಿ ಬಾಳಬೇಕೆಂದು ಬಯಸಿ ಅದಕ್ಕಾಗಿ ಎಲ್ಲಾ ಪ್ರಯತ್ನಗಳನ್ನೂ ಮಾಡಿದರೂ, ಈ ಕುಡಿತದ ಚಟವನ್ನು ಬಿಟ್ಟಲಾರದವರಾಗಿ ಕೊನೆಗೆ ಆಗೊಮ್ಮೆ ಈಗೊಮ್ಮೆಯಾದರೂ—ಕೊನೆಗೆ ಹದಿನೈದು ದಿನಗಳಿಗೊಮ್ಮೆಯಾದರೂ ಗುಟ್ಟಾಗಿ ಕುಡಿಯುತ್ತಾರೆ.

ಈ ಎಲ್ಲಾ ಪ್ರವೃತ್ತಿಗಳಿಂದ ಪ್ರೇರಿತರಾದ ಜನರನೇಕರು ನಿಷ್ಠುರರಾಗಿ ವರ್ತಿಸುತ್ತಾರೆ. ಅವರ ಸ್ವಾರ್ಥಪರ ಋಣ ಜಂಭದಿಂದ ಕೂಡಿದ ಪ್ರವರ್ತನೆ, ಕತೆಯನ್ನು ದುರಂತದ ಪ್ರಪಾತಕ್ಕೆ ತಳ್ಳುತ್ತದೆ. ಚಂದ್ರಯ್ಯಗೌಡರ ಮನಸ್ಸಿಗೆ, ಒಮ್ಮೆಗಾದರೂ, ಹೂವಯ್ಯನೂ ತನ್ನ ಮಗನಂತೆಯೇ ಎಂದು ತಿಳಿದುಕೊಳ್ಳುವಷ್ಟು ಸಂಸ್ಕಾರವಿದ್ದಿದ್ದರೆ ಆಗ ಕತೆಯ ಓಟವೇ ಬೇರೆಯಾಗುತ್ತಿತ್ತು, ಎಲ್ಲವೂ ಮಂಗಳಕರವಾಗಿ ಪರಿಣಮಿಸಿ, ಕಾನೂರಿನ ಮನೆ ಸುಖದ ಬೀಡಾಗಬಹುದಿತ್ತೇನೋ!

ಆವರೆ, ಸೇರೆಗಾರ ರಂಗಪ್ಪ, ಗಂಗೆ, ವೆಂಕಪ್ಪಯ್ಯ ಜೋಯಿಸರು, ಸಿಂಗಪ್ಪಗೌಡ ಮುಂತಾದ ಅನೇಕರು ಒಂದಲ್ಲ ಒಂದು ರೀತಿಯಲ್ಲಿ ಚಂದ್ರಯ್ಯಗೌಡರ ದುಷ್ಟಪ್ರ ರ್ತನೆಯನ್ನು ಪ್ರಚೋದಿಸಿದವರೆ.

ಈ ಬೃಹತ್ ಕಾದಂಬರಿಯ ಒಂದೊಂದು ಸಣ್ಣಪಾತ್ರದಿಂದ ಮೊದಲ್ಗೊಂಡು, ಕಾದಂಬರಿಯ ಅತ್ಯಂತ ಮುಖ್ಯಪಾತ್ರವಾದ ಹೂವಯ್ಯನವರೆಗ ಯಾರೊಬ್ಬರೂ, ಒಬ್ಬರಂತೆ ಇನ್ನೊಬ್ಬರಿಲ್ಲದಿರುವುದು ಕತೆಗೆ ಜೀವಂತತೆಯನ್ನು ಒದಗಿಸಿಕೊಟ್ಟಿದೆ. ಕೊನೆಗೆ ಆಳುಗಳಾದ ಬೈರ, ಸಿಂಗ, ತಿಮ್ಮ, ಸೋವ ಮುಂತಾದವರಲ್ಲಿಯೂ ಒಬ್ಬರಿಗಿಂತ ಇನ್ನೊಬ್ಬರು ಎಷ್ಟು ಬೇರೆ. ಪ್ರತಿಯೊಂದ ಪಾತ್ರವೂ ತನ್ನ ವಿಶಿಷ್ಟ ರೀತಿನೀತಿಗಳನ್ನು ವ್ಯಕ್ತಪಡಿಸಿ ಕಾದಂಬರಿಕಾರರ, ಬದ ಕನ್ನು ನೋಡಬಲ್ಲ, ಅಳೆಯಬಲ್ಲ ಪ್ರತಿಭಾಪೂರ್ಣ ಶಕ್ತಿಯ ಪರಿಚಯ ಮಾ ಕೊಡುತ್ತದೆ.

ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲಾ ಕ್ರೌರ್ಯಕ್ಕೆ, ನಿರಂಕುಶ ದರ್ಪಕ್ಕೆ ಹೆಸ ರಾಂತ ಕಾದಂಬರಿಯ ಅನೇಕ ದುರ್ಘಟನೆಗಳಿಗೆ ಸೂತ್ರಧಾರಿಯಾದ, ಪ್ರಚಂಡ ವ್ಯಕ್ತಿ ಚಂದ್ರಯ್ಯಗೌಡರು ತಾವು ಮುದುಕರಾಗಿದ್ದರೂ, ತಮ್ಮ ಮಕ್ಕಳೇ ಮದ ವೆಯ ವಯಸ್ಸಿಗೆ ಬಂದಿದ್ದರೂ, ತಮ್ಮ ಧನಮದದಿಂದ, ಶರೀರ ಚಾಪಲ್ಯದಿಂದ ಇಳಿವಯಸ್ಸಿನಲ್ಲಿ ಬಡಹುಡುಗಿ ಎಳೆಯ ಸುಬ್ಬಮ್ಮನನ್ನು ಕೈಹಿಡಿದು, ಕಾನೂರಿ ದುರಂತಕ್ಕೆ ನಾಂದಿ ಹಾಡುತ್ತಾರೆ. ಸಮಾಜದ ದೃಷ್ಟಿಯಿಂದ ಅವರು ತಪ್ಪಿತಸ್ಥ ರಲ್ಲದಿದ್ದರೂ, ಅವರ ಅಂತರಂಗ ನಿರಂತರವಾಗಿ ಚುಚ್ಚಿಚುಚ್ಚಿ, ಅವರು ಮಾಡಿದ ತಪ್ಪಿಗೆ ಶಿಕ್ಷೆ ವಿಧಿಸುತ್ತಲೇ ಇರುತ್ತದೆ. "ಎಳೆಯದೆಂದಿಗೂ ಹಳೆಯದನ್ನು ಒಲಿಯ ಲಾರದು, ಬಾಲ್ಯವೃದ್ಧಾಪ್ಯಗಳಿಗೆ ಗೌರವದ ಸಂಬಂಧವಿರಬಲ್ಲುದೆ ಹೊರತು ಪ್ರೇಮ ಸಂಬಂಧವಿರಲಾರದು"—ಕಾದಂಬರಿಕಾರರ ಈ ಮಾತು ಎಷ್ಟು ಸತ್ಯ! ಮಾತ್ಸರ್ಯದಿಂದ ತುಂಬಿದ ಗೌಡರ ಮನಸ್ಸು ಸೇರೆಗಾರ ರಂಗಪ್ಪ ಶೆಟ್ಟಿಯನ್ನು ಶಂಕಿಸುತ್ತದೆ. ತಮ್ಮ ತರುಣ ಪತ್ನಿಯ ಪರವಾಗಿ ಕ್ರೂರವರ್ತನೆ ಆರಂಭವಾಗು ತ್ತದೆ. ಹೂವಯ್ಯನ ಅನುಪಮ ಗಾಂಭೀರ್ಯ, ಸುಸಂಸ್ಕೃತ ನಡೆನುಡಿಗಳಿಂದ ಸಹಜ ವಾಗಿ ಪ್ರಭಾವಿತಳಾಗಿ, ತಾನೂ ನಯಶೀಲೆಯಾಗಲು ಸಹಜವಾಗಿ ಪ್ರಯತ್ನಿಸಿದ ಸುಬ್ಬಮ್ಮನ ವರ್ತನೆಯಲ್ಲೂ ಗೌಡರ ಸಂಶಯಗ್ರಸ್ತ ದೃಷ್ಟಿ ಪಾಪವನ್ನೇ ಅರಸುತ್ತದೆ. ಮನೆಯಲ್ಲಿ ಉಂಟಾದ ನೂತನ ಮೈತ್ರಿ, ಅವರ ದೃಷ್ಟಿಯಲ್ಲಿ ಅವರ ವಿರುದ್ಧ ನಡೆದ ಪಿತೂರಿಯಂತೆ ಕಂಡು ಹುಚ್ಚುಹುಚ್ಚಾಗಿ ವರ್ತಿಸುತ್ತಾರೆ. ಜೊತೆಗೆ, ಬೆಂಕಿಗೆ ತುಪ್ಪ ಸುರಿಸುವ, ಸೇರೆಗಾರ ರಂಗಪ್ಪನ ಹಿತೋಪದೇಶ.

ಹೂವಯ್ಯನನ್ನು ತನ್ನಿಂದ ದೂರ ಕಳಿಸಲೇಬೇಕೆಂಬ ಹಟಕ್ಕೆ ಈ ಸಂಶಯ ಪಿಶಾಚಿಯೂ ಒಂದು ಕಾರಣವಾಗುತ್ತದೆ. ನಂತರ ಆಸ್ತಿ ವಿಭಾಗದಲ್ಲಿ, ಅದರ ನಂತರವೂ ಚಂದ್ರಯ್ಯಗೌಡರು ಹೂವಯ್ಯನ ಬಗ್ಗೆ ತೋರುವ ಸಣ್ಣತನ ಯಾರಾದರೂ ಅಸಹ್ಯಪಟ್ಟುಕೊಳ್ಳುವಂತಹುದು. ಅವರ ರೋಗಗ್ರಸ್ತ ಮಿದುಳಿನ ಸಂಶಯ ಪಿಶಾಚಿ ಪ್ರತಿಯೊಬ್ಬರಲ್ಲೂ ತನ್ನ ವಿರೋಧವನ್ನೇ ಕಾಣತೊಡಗುತ್ತದೆ. ಸುಬ್ಬಮ್ಮನ ಬಗ್ಗೆಯಂತೂ ಅವರ ಮಿದುಳಿನಲ್ಲಿ ಅತ್ಯಂತ ಕರಾಳಕಲ್ಪನೆಗಳೇ ಬರತೊಡಗುತ್ತವೆ. ಕೊನೆಗೆ ಕ್ರೋಧಾಂಧರಾದ ಗೌಡರು ಅವಳನ್ನು ಕಡಿಯಲು ಹೋಗುವುದಕ್ಕೂ ಹೇಸುವುದಿಲ್ಲ. ಹೂವಯ್ಯ, ನಾಗಮ್ಮ ಇವರ ಬಗ್ಗೆ ಅವನ ಈರ್ಷ್ಯೆ ಎಷ್ಟು ಪ್ರಖರವಾದದ್ದೆಂದರೆ, ಮಗಳ ಮದುವೆಯ ದಿಬ್ಬಣ ಕೆಳಕಾನೂರಿನ ಮೇಲೆ ಹೋದರೆ ಅಲ್ಲಿ ಅವರನ್ನು ಕಂಡು, ನಾಗಮ್ಮ ಸಂತೋಷಿಸುತ್ತಾರೆ ಎಂಬುದನ್ನರಿತ ಗೌಡರು, ಆ ದಾರಿ ತಪ್ಪಿಸಿ ಬೇರೆಯೇ ದಾರಿಯಲ್ಲಿ ಮದುವೆಯ ದಿಬ್ಬಣವನ್ನು ಕಳಿಸಿಬಿಡುತ್ತಾರೆ! ಹುಲ್ಲು, ಹಣಬೆ, ಸೌದೆಕೊಟ್ಟಿಗೆ, ಗಾಡಿಕೊಟ್ಟಿಗೆ, ಎಲ್ಲಾ ಸುಟ್ಟು ಇಬ್ಬರು ಸತ್ತು ಶಾಮಯ್ಯಗೌಡರು ಸಾಯುವಷ್ಟು ನೈಸುಟ್ಟುಕೊಂಡಿದ್ದರೂ ಚಂದ್ರಯ್ಯಗೌಡರ ದೃಷ್ಟಿಯಲ್ಲಿ ಅದು "ಚಿಲ್ಲರೆ ಕೇಸು" ಚಂದ್ರಯ್ಯಗೌಡರ ರಾಕ್ಷಸಕ್ರೌರ್ಯದ ಪರಮಾವಧಿ ಕಂಡುಬರುವುದು. ಮನೋರೋಗ ಪೀಡಿತೆಯಾದ ಸೀತೆಗೆ ಬರೆಹಾಕುವಾಗ. ಅವರು ಸೀತೆಗೆ ಎಳೆಯುವ ಒಂದೊಂದು ಬರೆಯೂ ಓದುಗರ ಎದೆಯ ಮೇಲೆ ಎಳೆದಂತಾಗಿ, ಓದುಗರ ಎದೆ ಹೆಪ್ಪುಗಟ್ಟುತ್ತದೆ. ಇಷ್ಟೊಂದು ಕ್ರೂರ, ಬರ್ಬರ ವ್ಯಕ್ತಿಯ ಅಂತ್ಯ ಮಾತ್ರ ಯಾರಿಗೂ ಕಣ್ಣೀರು ತರಿಸುವಂತಹುದು. ಆ ದರ್ಪದ ಪ್ರತಿಮೂರ್ತಿ ಚಂದ್ರಯ್ಯಗೌಡರೆಲ್ಲಿ, ಈ ಹಾಸಿಗೆಯ ಮೇಲೆ ಸುರುಟಿಹೋಗಿರುವ ಕನಿಕರದ ಪದಾರ್ಥವೆಲ್ಲಿ! ಕಡೆಗೆ, ಹೂವಯ್ಯ ಬಂದಾಗ, "ಎಲುಬು ಚರ್ಮ ಮಾತ್ರವಾಗಿದ್ದ ತಮ್ಮ ಕೈಯನ್ನು ಹೂವಯ್ಯನ ಕಡೆಗೆ, ಪ್ರೀತಿಯ, ದುಃಖದ, ಪಶ್ಚಾತ್ತಾಪದ, ಕ್ಷಮಾಪಣೆಯ, ಗೌರವದ, ಪ್ರಾರ್ಥನೆಯ ಕಾಲುವೆಯೋ ಹರಿದುದೋ ಎಂಬಂತೆ ಸಪ್ರಯತ್ನವಾಗಿ ನೀಡಿದರು"—ಎಂದಾದರೊಮ್ಮೆ ದುಷ್ಟಶಕ್ತಿ, ಸತ್‌ಶಕ್ತಿಯ ಮುಂದೆ ಮಣಿಯಲೇ ಬೇಕೆಂಬುದನ್ನು, ಕಾದಂಬರಿಕಾರರು ಎಷ್ಟು ಸಶಕ್ತ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ.

ಹೀಗೆ ಚಂದ್ರಯ್ಯಗೌಡರು, ತಮ್ಮ ಕ್ರೌರ್ಯ, ದರ್ಪ, ಐಶ್ವರ್ಯ ಮುಂತಾದವುಗಳಿಂದ ಸುತ್ತಣ ಜನಗಳ ಮೇಲೆ ಪ್ರಭಾವ ಬೀರಿದ್ದರೆ ಹೂವಯ್ಯನ ರೀತಿ ಸಂಪೂರ್ಣವಾಗಿ ಭಿನ್ನವಾದದ್ದು. ಕಾದಂಬರಿಯಲ್ಲಿ ಕಂಡುಬರುವ ಎಲ್ಲ ವ್ಯಕ್ತಿಗಳಿಗಿಂತ ತೀರ ಬೇರೆಯಾದ, ತೀರ ಎತ್ತರದ ಅತ್ಯಪೂರ್ವ ವ್ಯಕ್ತಿ ಈತ. ಪೌರುಷ, ಆಧ್ಯಾತ್ಮಿಕತೆ, ಅಂತರ್ಮುಖತೆ, ರಸಿಕತೆ, ಮೇಧಾಶಕ್ತಿ, ಇತರರಿಗೆ ಕಷ್ಟವಲ್ಲದಿದ್ದರೂ ತನಗೇ ಕಷ್ಟಕರವಾಗಬಹುದಾದ ಸದ್ಭಾವ, ಇವುಗಳಿಂದ ಮೆರೆಯುತ್ತಿದ್ದ ಆತ

ಭವ್ಯವ್ಯಕ್ತಿಯಾಗಿದ್ದನು—ಕಾದಂಬರಿಯ ಪ್ರಾರಂಭದಲ್ಲಿ, ಹೂವಯ್ಯನ ಬಗೆ ಕಾದಂಬರಿಕಾರರು ಹೇಳಿರುವ ಈ ಮಾತು, ಕಡಿಮೆಯೇನೋ ಎನಿಸುತ್ತದೆ. ಆತ ಪರಿಚಯ ಪಡೆಯುತ್ತಾ ಹೋದಂತೆಲ್ಲಾ ಉಪನಿಷತ್ತು, ಭಗವದ್ಗೀತೆ ಮುಂತಾ ಗ್ರಂಥಗಳ ಜ್ಞಾನವನ್ನು ಇಷ್ಟು ಸಣ್ಣ ವಯಸ್ಸಿಗೇ ಸಂಪಾದಿಸಿದ್ದ ಆತ, ವೆಂ ಪ್ಪಯ್ಯ ಜೋಯಿಸರನ್ನು ನಿರ್ಭಯವಾಗಿ ಟೀಕಿಸಿ, ಹಾಸ್ಯ ಮಾಡುತ್ತಾನೆ. ಆದ ಆ ಟೀಕೆಯಲ್ಲಿ ತಪ್ಪನ್ನು ತಿದ್ದುವ ಗುರುವಿನ ಗುಣವಿದೆಯೇ ಹೊರತು, ವೈಯಕ್ತಿ ಅಗೌರವವಿಲ್ಲ. "....ನಮ್ಮ ತಂದೆ ಗೌರವಿಸುವ ನಿಮ್ಮನ್ನು ನಾನೂ ಗೌರವಿಸುತ್ತೇನೆ ಎಷ್ಟು ನಮ್ರವಾಗಿ ಹೇಳುತ್ತಾನಾತ! "ಕರುಣೆ ಮೂಕಪ್ರಾಣಿಯ ಬಲಿದಾ ಕ್ಕಿಂತಲೂ ಹೆಚ್ಚಿನ ಪೂಜೆ" ಎನ್ನುವ ಹೂವಯ್ಯ ಹರಕೆಯ ಹೋತವನ್ನು ಕಾಪಾ ಡುವುದರಲ್ಲಿ ಯಾರನ್ನೂ ಲಕ್ಷಿಸುವುದಿಲ್ಲ.

ಜಗತ್ತಿನ ಎಲ್ಲ ವ್ಯಕ್ತಿಗಳ ಬಗ್ಗೆ ಎಷ್ಟು ಪ್ರೇಮ ಆತನಿಗೆ! ಸಮಾಜದ ಏಳಿ ಯಲ್ಲಿ ಎಷ್ಟು ಆಸಕ್ತಿ ಆತನಿಗೆ! ದ್ವೇಷ, ಅಸೂಯೆಗಳ ಬಿರು ಮಳೆಯನ್ನೇ ಆತನ ಮೇಲೆ ಕರೆದ ಚಂದ್ರಯ್ಯ ಗೌಡರಲ್ಲಿಯೂ ಆತನಿಗೆ ದ್ವೇಷವಿಲ್ಲ. ಪ್ರಕೃ ಸೌಂದರ್ಯವನ್ನು ಕಂಡು, ಅದರ ಆನಂದವನ್ನು ಸವಿಯುವಾಗ ಭಾವ ಸಮಾ ಯನ್ನು ಸೇರುವ ಹೂವಯ್ಯನ ಆಧ್ಯಾತ್ಮಿಕತೆ ಎಂತಹ ಉನ್ನತ ಮಟ್ಟದ್ದು ಭಗವಂತನಲ್ಲಿ ಎಂತಹ ಅಚಲ ನಿರ್ಮಲ ವಿಶ್ವಾಸ! ಸೀತೆಯ ಬಗ್ಗೆ ಆತ ಪ್ರೇಮವೂ ಎಷ್ಟು ಉದಾತ್ತವಾದುದು! ಆತನ ವ್ಯಕ್ತಿತ್ವದ ಬಗ್ಗೆ ಎಷ್ಟು ಹೇ ದರೂ ಕಡಿಮೆಯೇ.

ತನ್ನೆಲ್ಲ ವಿಚಾರಗಳನ್ನೂ, ಆದರ್ಶಗಳನ್ನೂ ಎರಕ ಹೊಯ್ದು ಈ ಹೂ ಯ್ಯನ ವಿಗ್ರಹವನ್ನು ಕಾದಂಬರಿಕಾರರು ಕಡೆದಿದ್ದಾರೋ ಎನಿಸದಿರದು. ಸಕ ಗುಣಗಳನ್ನೂ ಹೂವಯ್ಯನಿಗೆ ಆರೋಪಿಸಿದ್ದರೂ, ಆತ ಹುಟ್ಟಾ ಮಹಾತ್ಮನಲ್ಲ ತನ್ನ ಪ್ರಯತ್ನದಿಂದ ಆತ ಹೇಗೆ ನಿಧಾನವಾಗಿ ಆ ಪದವನ್ನೇರಿದ ಎಂಬುದನ್ನು ಸಮಂಜಸ ರೀತಿಯಲ್ಲಿ ಚಿತ್ರಿಸಿ, ಹೂವಯ್ಯನನ್ನು ಸರ್ವ ವಂದ್ಯನನ್ನಾ ಮಾಡಿದ್ದಾರೆ.

"ಸೀತೆಯ ಪ್ರೇಮ ಪ್ರಸಂಗದಲ್ಲಿ ಅವನಿಗುಂಟಾಗುವ ನಿರಾಸೆ ಅತಿ ದುಃಖಕ ವಾದುದಾದರೂ, ಜಗತ್ತಿನ ಮಹಾ ಪುರುಷರ ಆಲೋಚನಾ ಪ್ರಪಂಚದ ಸಾನ್ನಿಧ್ಯ ವಿದ್ಯೆಯ ಸಂಸ್ಕೃತಿ, ಮನಸ್ಸಿನ ಸಂಯಮ, ನಿರಂತರವೂ ಮೇಲೇರಿ ಮುಂದ ವರಿಯಬೇಕೆಂಬುವ ಉತ್ಕಟಾಕಾಂಕ್ಷೆ, ತೀವ್ರ ವ್ಯಾಕುಲತೆ, ...ಪ್ರಾರ್ಥನೆ ಧ್ಯಾನ–ಇವುಗಳ ಆಧಾರವನ್ನೂ ಸಹಾಯವನ್ನೂ ಪಡೆದು ಆತ ಉನ್ನತಿಯ ಮೆಟ್ಟ ಲನ್ನು ಮೆಲ್ಲನೆ ಏರುತ್ತಾನೆ." 'ಪ್ರಣಯದಲ್ಲಿ ನಿರಾಸೆ ಹೊಂದಿದ್ದ ಹೂವಯ್ಯ ಆತ್ಮವು ವಿವಿಧ ಕಾರ್ಯ ಮಾರ್ಗಗಳಲ್ಲಿ ಸಾಹಸ ಪೂರ್ಣವಾಗಿ ಯಾತ್ರೆ ಹೊರ

ದ್ದಿತು. ಆದರೆ ನಿರಾಶೆಯಾಗಿಯೇ ಇದ್ದು ಬಿಡಲಿಲ್ಲ. ಕ್ರಮ ಕ್ರಮೇಣ ಅದು ಆತನಾತ್ಮದ ಮಹಾ ಮಂಗಳಾರತಿಯ ಪರಿಮಳಿತ ಪಾವನ ಜ್ಯೋತಿಯನ್ನು ಪೋಷಿಸುವ ಕರ್ಪೂರವಾಗುತ್ತಿತ್ತು.'

ಇಂತಹ ಹೂವಯ್ಯ ಕುಂದು ಕೊರತೆಗಳೇ ಇಲ್ಲದ ಅತಿಮಾನವನಲ್ಲ. ಆಗೊಮ್ಮೆ ಈಗೊಮ್ಮೆ ಆತನ ಮನಸ್ಸಿನಲ್ಲಿ ಯೋಚನೆಗಳು ಬರುವುದುಂಟು. ಆದರೆ ತತ್‌ಕ್ಷಣ ಅದನ್ನು ಮನಸ್ಸಿನಿಂದ ಓಡಿಸಿ, ಮನಸ್ಸನ್ನು ಸ್ವಚ್ಛ ಮಾಡಿಕೊಂಡು ಪುಟವಿಟ್ಟ ಚಿನ್ನವಾಗುತ್ತಾನೆ, ಅಂತಹ ಅಪೂರ್ವ ಶಕ್ತಿ ಆತನದು. ಹೂವಯ್ಯನ ಮೂಲಕ ಮಲೆನಾಡಿನ ಬದುಕಿನ ಅಂಧಕಾರವನ್ನು ಹೋಗಲಾಡಿಸಿ ನವ ಜ್ಯೋತಿಯನ್ನು ಬೆಳಗಿಸುವ ಆಸೆಯನ್ನು ಕಾದಂಬರಿಕಾರರು, ಕಾದಂಬರಿಯ ಕೊನೆಯ ಅಧ್ಯಾಯ 'ಹತ್ತು ವರ್ಷಗಳ ನಂತರ'ದಲ್ಲಿ ವ್ಯಕ್ತ ಪಡಿಸಿದ್ದಾರೆ.

ಆದರೆ ಹೂವಯ್ಯನ ಒಡನಾಡಿಯೇ ಆಗಿದ್ದ, ಹೂವಯ್ಯನ ಸದಭಿರುಚಿಗಳನ್ನೇ ತಾನೂ ರೂಢಿಸಿಕೊಂಡಿದ್ದ ರಾಮಯ್ಯ, ಹೂವಯ್ಯನಿಗಿಂತ ತೀರಾ ಭಿನ್ನ. ಹೂವಯ್ಯನ ದೃಢತೆ, ಹಟ, ಉನ್ನತಿಯತ್ತ ನಡೆಯಬೇಕೆನ್ನುವ ಆಕಾಂಕ್ಷೆ, ರಾಮಯನಲ್ಲೂ ಇದ್ದಿದ್ದರೆ, ಅಕಾಲದಲ್ಲಿ ಅದೂ ಆತ್ಮಹತ್ಯೆ ಮಾಡಿಕೊಂಡು ತನ್ನ ನಾಶ ಮಾಡಿಕೊಳ್ಳುವ ಸಂದರ್ಭ ಬರುತ್ತಿರಲಿಲ್ಲ. ಯಾವ ಪ್ರೇಮ ಭಂಗದ ಸನ್ನಿವೇಶ ಹೂವಯ್ಯನನ್ನು ಮೇಲು ಮೇಲಕ್ಕೆ ಕರೆದೊಯ್ದಿತೋ ಅದೇ ಪ್ರೇಮ ಭಂಗ ರಾಮಯ್ಯನನ್ನು ಸರ್ವನಾಶದ ಪಾತಾಳಕ್ಕೆ ತಳ್ಳಿತು.

ಸೀತೆ, ಮಲ್ಲಿಗೆ, ಜಾಜಿ, ಪಾರಿಜಾತಗಳನ್ನು ನೆನಪಿಗೆ ತರುವ ಕೋಮಲ ತರಳೆ. ವಿಧಿಯ ವ್ಯೂಹದಲ್ಲಿ ಸಿಲುಕಿ, ಪ್ರೇಮ ಭಂಗದಿಂದ ಯಾತನೆ, ಮನೋವಿಕಾರ ಯಾರನ್ನಾದರೂ ಕರಗಿಸುವಂತಹವು. ಈ ಸೂಕ್ಷ್ಮ ಮನಸ್ಸಿನ ಬಾಲೆಯ ಬಗ್ಗೆ ಕಾದಂಬರಿಕಾರರ ಸಹಾನುಭೂತಿಯು ತೂಕ ತುಸು ಹೆಚ್ಚಿದೆಯೇನೋ ಎನಿಸಿದರೂ ಅದೊಂದು ಅತಿ ಕುಶಲ ಕುಸುರಿ ಕೆಲಸದಿಂದ ಕೆತ್ತಲ್ಪಟ್ಟ ಸುಂದರ ಮೂರ್ತಿ.

ಸುಬ್ಬಮ್ಮನಂತಹ ಅನ್ಯಾಯ ಮೂಢ ಸಾಮಾನ್ಯ ಹೆಣ್ಣೂ ಆಸೆಗಿಂತ ಜೀರಿಯಾಗಿನಡೆದು ಕೊಳ್ಳುತ್ತಿರಲಿಲ್ಲ. ಚಂದ್ರಯ್ಯ ಗೌಡರ ಸಂಶಯ ಪಿಶಾಚದ ಕಪ್ಪು ನೆರಳು ಆಕೆಯ ಮೇಲೆ ಬೀಳದೆ ಹೂವಯ್ಯನ ಪ್ರಭಾವ ವಲಯದಲ್ಲಿ ಕೆಲ ಕಾಲ ಇರಲವಕಾಶವಾಗಿದ್ದಿದ್ದರೆ ಸುಬ್ಬಮ್ಮನೂ ಇಷ್ಟೊಂದು ಅಪಮಾನ ಕಾರಕ ರೀತಿಯಲ್ಲಿ ಕೊನೆಗೊಳ್ಳುವ ಸಂದರ್ಭ ಬರುತ್ತಿರಲಿಲ್ಲವೆನೋ ಎನಿಸುತ್ತದೆ.

ಇನ್ನು ಕಾದಂಬರಿಯಲ್ಲಿ ಬರುವ ನಾಗಮ್ಮ, ಗೌರಮ್ಮ ರಾಮಯ್ಯ ಗೌಡರು, ಸಿಂಗಪ್ಪ ಗೌಡರು, ಪುಟ್ಟಣ್ಣ, ಕೃಷ್ಣಪ್ಪ, ಚಿನ್ನಯ್ಯ, ಪುಟ್ಟಮ್ಮ, ಸೇರೆಗಾರರು, ಗಂಗೆ ಮುಂತಾದ ಎಲ್ಲರೂ ತಂತಮ್ಮ ಸಂಸ್ಕಾರಗಳಿಗೆ ಅನುರೂಪವಾಗಿ ವರ್ತಿಸಿ

ಸಮಾಜದಲ್ಲಿ ಎಲ್ಲೆಲ್ಲೂ ಕಾಣುವ ದುಷ್ಟ, ಶಿಷ್ಟ ಶಕ್ತಿಗಳ ಪ್ರತಿನಿಧಿಗಳಂ
ಕಾಣುತ್ತಾರೆ.

ಗಹನವಾದ ಕಥಾ ವಸ್ತುವನ್ನು ಕುರಿತು ಗಂಭೀರವಾಗಿ ಹೇಳುತ್ತಾ
ಹೋಗುವ ಕಾದಂಬರಿ ಕಾರರು, ಅಷ್ಟೇ ಸರಸ ಸುಂದರ ಪರಿಹಾಸವನ್ನೂ ಮಾ
ಬಲ್ಲರು, ಎಂಬುದಕ್ಕೆ ಒಂದೆರಡು ಉದಾಹರಣೆಗಳು,

'ಮದ್ಯಪಾನ ನಿರೋಧ ಸಭೆಗೆ ಸೇರಿ ಕೆಲವರಂತೂ ಚೆನ್ನಾಗಿ ಹೊಟ್ಟೆಗ
ತಲೆಗೂ ಸೇಂದಿ ತುಂಬಿಕೊಂಡು, ಬಂದುದರಿಂದ ತೊದಲಿ ತೊದಲಿ ತೊನೆದ
ತೂಗಿ, ಉಪನ್ಯಾಸ ಮಾಡಿದರು ಅವರಲ್ಲಿ ಚಂದ್ರಯ್ಯ ಗೌಡರೂ ಒಬ್ಬರಾಗಿದ್ದರು
................ನೆರೆದವರ ಅಜ್ಞಾನಾಂಧಕಾರವನ್ನು ಪರಿಹರಿಸಿ ಅವರಿಗೆ ಬೆಳಕ
ತೋರುವ ಸಲುವಾಗಿ ಉಪನ್ಯಾಸ ಮಾಡಿಯೇ ಬಿಟ್ಟರು................"ಎಲ್ಲರಿಗೂ
ಕೈ ಮುಗೀತೀನಿ, ನಾನು ಎಲ್ಡು ಮಾತಾಡಿ ಕೂತ್ಕೋ ಬೇಕು ಅಂತ ಎದ್ದ
ನಿಂತೀನಿ................ಗೌಡರಿಗೆ ಮುಂದೆ ಏನು ಹೇಳ ಬೇಕೋ ಗೊತ್ತಾಗಲಿಲ್ಲ
................ಪಕ್ಕದಲ್ಲಿ ಸಿಂಗಪ್ಪಗೌಡರು ಪಿಸುಮಾತಿನಲ್ಲಿ, "ಹೆಂಡ ಕುಡಿಯು
ವುದು ಕೆಟ್ಟದ್ದು" ಎಂದು ಉಪನ್ಯಾಸ ಮಾಡಲು ಸೂಚನೆ ಕೊಟ್ಟರು. ಆ ಕೊಟ್ಟ
ಸೂಚನೆ ತಮಗೆ ಮಾಡಿದ ಉಪದೇಶವೆಂದು ಕೆರಳಿ ಚಂದ್ರಯ್ಯ ಗೌಡರು ಮೆ
ಗಣ್ಣು ಮಾಡಿಕೊಂಡು, ದುರುದುರ ನೋಡುತ್ತಾ, ಸಿಂಗಪ್ಪ ಗೌಡರ ಕಡೆ ತಿರುಗಿ
ಗಟ್ಟಿಯಾಗಿ "ಯಾರೋ. ... .ಯಾರೋ ಹೇಳ್ದೋರು ನಿನಗೆ?" ಎಂದ
ಕೂಗಿದರು.

....

ಭಾಷಣ ಹೀಗೆ ಪ್ರಾರಂಭಿಸಿದರು, "ಹೆಂಡ ಕುಡಿಯೋದು ಬಾಳ ಕೆಟ್ಟದ್ದು
................ಹೆಂಡ ಬಿಟ್ಟರೆ ಮುಂದೇನು ಗತಿ? ನಮ್ಮಪ್ಪ ಕುಡ್ದಿದ್ದ, ನಮ್ಮಜ್ಜ
ಕುಡ್ದಿದ್ದ. ನಾವೂ ಕುಡೀತೀವಿ............ಹೆಂಡ ಕುಡಿಯೋದು ಬಾಳ ಕೆಟ್ಟದ್ದು"
ಕೂಪ್ರ ಸಂಘದ ಈ ಘನ ಉಪನ್ಯಾಸ ಕೇಳಿ ಯಾರು ನಗದಿರಬಹುದು?

ಮತ್ತೊಮ್ಮೆ ನಂಜ 'ಆಕರ'ಕ್ಕೆ ನೀರು ಕುಡಿಯಲು ಹೋಗಿ ಬಂದವನ
ಸ್ವಲ್ಪ ದೂರ ಹೋಗುವುದರಲ್ಲಿಯೇ ನೆಲದ ಮೇಲೆ ದೊಪ್ಪನೆ ಬಿದ್ದವನು ಎದ್ದ
ಧೂಳು ಕೊಡವಿ ಕೊಳ್ಳುತ್ತಾ "ಥುಯ್, ಇವರ ಹೊಟ್ಟೆ ಹಾಳಾಗಿ ಹೋತಲ್ಲೇ
ಅಲ್ಲಾ ದಾರಿ ಸುಮ್ಮ ಸುಮ್ಮನೆ ನನ್ನ ಕಾಲು ಹಿಡಿದು ಎತ್ತಿ ಬಿಡೋದೇ!"

ನಂಜನ ಈ ನಡೆಯನ್ನು ಕಲ್ಪಿಸಿಕೊಂಡು ಹೊಟ್ಟೆ ಹುಣ್ಣಾಗುವಂತೆ
ನಗದವರ್ಯಾರು!

ಲಕ್ಷ್ಮಿಯ ಬಾಲಲೀಲೆಗಳನ್ನು ವರ್ಣಿಸುತ್ತಾ ಹಾಸ್ಯದ ತಿಳಿ ಬೆಳದಿಂಗಳನ್ನೆ
ಹರಿಯಿಸಿದ್ದಾರೆ.

ಇಷ್ಟೊಂದು ವ್ಯಕ್ತಿ ಹಾಗೂ ಸನ್ನಿವೇಶಗಳ ಚಿತ್ರಣದಿಂದ ಕಾದಂಬರಿ ತುಂಬಿ ಹೋಗಿದ್ದರೂ ಅದು ಕೇವಲ ಸಂತೆಯಲ್ಲ. ಕಾದಂಬರಿಕಾರರ, ಈ ದೊಡ್ಡ ಪ್ರದರ್ಶನಕ್ಕೆ ಒಂದು ಉದ್ದೇಶವಿದೆ. ಆ ಉದ್ದೇಶ, ಕಂಟಕಕಾರಕ, ಸಮಾಜ ಘಾತಕ ಶಕ್ತಿಗಳನ್ನು ಎತ್ತಿ ತೋರಿಸುವುದು. ಆದರೆ ವೈಯಕ್ತಿಕ ಮಾನವ ದ್ವೇಷ ಎಲ್ಲೂ ಕಾಣುವುದಿಲ್ಲ.

ಕೊನೆಯದಾಗಿ ಕಾದಂಬರಿಕಾರರು 'ಹತ್ತು ವರ್ಷದ ನಂತರ'ದ ಕಾನೂರಿನ ಚಿತ್ರವನ್ನು ವರ್ಣಿಸಿ ತಮ್ಮ ಅಸೀಮ ಆಶಾವಾದಿತ್ವವನ್ನು ವ್ಯಕ್ತಗೊಳಿಸಿದ್ದಾರೆ. —ಇದರಲ್ಲಿ ವಾಸ್ತವತೆಗಿಂತ ಕಲ್ಪನೆಯ ಬಣ್ಣವೇ ತುಸು ಹೆಚ್ಚಿದ್ದರೂ, ಇದಕ್ಕೆ ಕಾರಣ ಅವರ ಹೃದಯದ, 'ಎಲ್ಲವೂ ಒಳಿತಾಗಲಿ, ಮಂಗಳಕರವಾಗಲಿ!' ಎಂಬ ಸದಾಶಯ.

ವಿಶ್ವಕವಿ ಶ್ರೀ ಕುವೆಂಪು

"ನೀನೇರ ಬಲ್ಲೆಯಾ ನಾನೇರುವೆತ್ತರಕೆ !"
ಎಂದು ಗುಡುಗಿದರಂದು, ಭೀಮಸುಂದರ ಶೈಲಿ-
ಯಲಿ, ವಿಶ್ವ ಕವಿಶ್ರೇಷ್ಠ ಪರಿಪೂರ್ಣ ಸಿದ್ಧಿಯಲಿ ;
ಕನ್ನಡದ ಕೀರುತಿಯ ಧ್ವಜವನೆತ್ತುತೆ ನಭಕೆ !
ಜನಮನದ ಜಲಧಿಯನು ಮಥಿಸಿ ಮೂಡಿತು ಮೂರ್ತಿ
ಎಂದೆಂಬುವೋಲ್ ಅಮರ ಅವತಾರ ವೆತ್ತಿತಮ
ವಿಜ್ಞಾನಮಯ ದಿವ್ಯಭೂಮಿಕೆಗೆ ದರ್ಶನಮ-
ದಾಯ್ತುಸುವುದಂ ತೋರ್ದ ವಿದ್ಯುನ್ಮಯಿಾ ಸ್ಫೂರ್ತಿ !
ನವನವೋನ್ಮೇಷ ಶಾಲಿನೀ ಪ್ರತಿಭೆಯಂ ಸಲೆ-
ವಡೆದ ಶ್ರೀ ಚೈತನ್ಯ ಖಚಿತ ಶಕ್ತಿಯೋಗದಿಂ
ಶ್ರೀ ಕುವೆಂಪುವಂ ಶೃಜಿಸಿದೀ ಮೇರು ಕೃತಿ
ಶ್ರೀಮದ್ರಾಮಾಯಣಂ ಕಾವ್ಯ ಶ್ರೀ ಕಂಡ ನೆಲೆ
ಜಗದ ಪುಣ್ಯದಿನಾಯ್ತೊ ಬ್ರಹ್ಮಾಂಡ ದರ್ಶನಂ
ನಮನವೋ ವಿಶ್ವಕವಿ ಚಿರಮಾಯುತ್ತು ದಿವ್ಯ ಧೃತಿ !

—ಹಿ. ಮ. ನಾಗಯ್ಯ.

ಕನ್ನಡಕ್ಕೆ ಶ್ರೀ ಕುವೆಂಪು ಅವರ 'ಕಾಣಿಕೆ' ಮತ್ತು 'ಕಾಣ್ಕೆ'*

ಶ್ರೀ ಎಂ. ವಿ. ಸೀತಾರಾಮಯ್ಯ, ಎಂ. ಎ.

—:—

ಈಗಿನ ಶ್ರೀ ಕುವೆಂಪು ನನಗೆ ಮೊದಲು ಪರಿಚಯವಾದದ್ದು 'ಕಿಶೋರ ಚಂದ್ರವಾಣಿ'ಯಾಗಿ. ೧೯೨೫-೨೬ರ ಅವಧಿಯಲ್ಲಿ ನಾನು ಮೈಸೂರಿನ ಧರ್ಮ ಪ್ರಕಾಶ ಬನುಮಯ್ಯನವರ ವಿದ್ಯಾಶಾಲೆಯಲ್ಲಿ ಹೈಸ್ಕೂಲು ತರಗತಿಗ ವಿದ್ಯಾರ್ಥಿಯಾಗಿದ್ದಾಗ. ನನ್ನ ಮಾನ್ಯ ಗುರು ಶ್ರೀ ನಾ. ಕಸ್ತೂರಿಯವರೂ ಗೆಳೆಯ ಶ್ರೀ ಮಾ. ನಾ. ಚೌಡಪ್ಪನವರೂ 'ಕಿಶೋರ ಚಂದ್ರವಾಣಿಯ ವಿಚಾರವಾಗಿ ಆಸಕ್ತಿಯನ್ನು ಕೆರಳಿಸಿದರು. ನನ್ನ ಅಣ್ಣಂದಿರು (ಪ್ರ|| ಎಂ. ವಿ. ವೆಂಕಟಕೃಷ್ಣಯ್ಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಕೌಂಟೆಂಟ್) ಮಹಾರಾಜರವರ ಕಾಲೇಜಿ ನಲ್ಲಿ ಬಿ. ಎ. ತರಗತಿಯ ವಿದ್ಯಾರ್ಥಿ: 'ಕಿಶೋರ ಚಂದ್ರವಾಣಿ' ಬೇರೆ ಯಾರೂ ಅಲ್ಲ, ತಮ್ಮ ತರಗತಿಯ ಒಡನೋದುಗ ಕೆ. ವಿ. ಪುಟ್ಟಪ್ಪ ಎಂದು ಅವರು ನನಗೆ ತಿಳಿಸಿದಾಗ (ಪುಟ್ಟಪ್ಪನವರಿಗೂ ಅವರಿಗೂ ಆಗ ಪರಸ್ಪರ ಪರಿಚಯವಿರಲಿಲ್ಲ) ಪುಟ್ಟಪ್ಪನವರು ಏನೋ ಒಂದು ರೀತಿಯಲ್ಲಿ ನನಗೆ ಹತ್ತಿರ ಬಂದಂತಾಯಿತು. ಕಿಶೋರ ಚಂದ್ರವಾಣಿಯ ಕಾವ್ಯೋಪಾಸನೆ ಇಂಗ್ಲಿಷ್ ಪದ್ಯಗಳ ರಚನೆಯಿಂದ ಮೊದಲಾಯಿತೆಂದೂ, ಆಗ ಮೈಸೂರಿಗೆ ಆಗಮಿಸಿದ್ದ ಜೆ. ಎಚ್. ಕಸಿನ್ಸ್ ರವರ ಹಿತೋಕ್ತಿಯ ಪರಿಣಾಮವಾಗಿ ಅದು ಕನ್ನಡಕ್ಕೆ ತಿರುಗಿತೆಂದೂ ಆಗ ನನಗೆ ತಿಳಿದು ಬಂದಿತು. (ಈ ಘಟನೆ ಕನ್ನಡದ ಪುಣ್ಯ!) 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಪದ್ಯದ ಆರಂಭದ ಪಂಕ್ತಿಗಳನ್ನು ನಮ್ಮ ಅಣ್ಣಂದಿರ ಬಾಯಿಂದ ಕೇಳಿ ಈ ನೂತನ ವಾಣಿಯ ಕವಿಯಲ್ಲಿ ನನ್ನ ಆಸಕ್ತಿ ಹೆಚ್ಚಿತು. ನನ್ನ ಅಭಿಪ್ರಾಯದಲ್ಲಿ, 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಕನ್ನಡಕ್ಕೆ ಕುವೆಂಪು ಅವರ ಮೊತ್ತ ಮೊದಲ ಅಮೂಲ್ಯ ಕಾಣಿಕೆ. ಆಗಲಂತೂ ಅದು ಎಲ್ಲರ ಬಾಯಲ್ಲೂ ಕೊಂಡಾಟಕ್ಕೆ ಪಾತ್ರವಾಗಿ

---

* ಈ ಲೇಖನವನ್ನು ಬರೆದದ್ದು ೧೩-೧೨-೫೫ ರಂದು; ಹದಿಮೂರು ವರ್ಷಗಳ ಹಿಂದೆ. ಯಾವ ಕಾರಣದಿಂದಲೋ ಏನೋ, ಪ್ರಕಟವಾಗದೆ ಉಳಿದುಕೊಂಡು ಬಂದಿತು. 'ಮಹಾಯುಗ' ಕೃತಿ ಕರಂಡದಲ್ಲಿ ಇದಕ್ಕೆ ಈಗ ಎಡೆ ದೊರೆಯು ವಂತಾದುದು ನನಗೆ ಸಂತೋಷ ಕೊಟ್ಟಿದೆ. ಅಲ್ಲೊಂದು ಇಲ್ಲೊಂದು ಮಾತ ಹೊರತಾಗಿ, ಲೇಖನದಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ—ಲೇಖಕ.

ಕವನ. ಈಗ, ಮಕ್ಕಳೆಲ್ಲರ ನಾಲಗೆಯ ಮೇಲೂ ನರ್ತಿಸುತ್ತ, ಬಹು ಜನಪ್ರಿಯವಾಗಿರುವ ಕವಿತೆ. ಆದರೂ, ಈಗ ಅದರ ಬಗೆಗೆ ಮೊದಲಿನ ಕೌತುಕವಿಲ್ಲ. ಅದರ ಅಂದಿನ ದಿನಗಳಲ್ಲಿ, ಮೊದಲ ಸಲ ಹಾರುವ ವಿಮಾನವನ್ನು ಪ್ರತ್ಯಕ್ಷವಾಗಿ ಕಂಡಾಗ ಯಾವ ಕುತೂಹಲ ಬೆರೆತ ಸೋಜಿಗವುಂಟಾಯಿತೋ ಆ ಪದ್ಯ ಪಂಕ್ತಿಗಳನ್ನು ಕೇಳಿದಾಗಲೂ ಅದೇ ಬೆರಗಿನ ಭಾವವುಂಟಾಯಿತು.

ಕಿಶೋರ ಚಂದ್ರವಾಣಿಯಲ್ಲಿ ಇಷ್ಟೆಲ್ಲ ಆಸಕ್ತಿ ಹುಟ್ಟಲು ಕಾರಣ ನನ್ನಲ್ಲಿದ್ದ ಕನ್ನಡ ಸಾಹಿತ್ಯಾಭಿಮಾನವಲ್ಲ. ನಿಜವಾಗಿ, ಅಂಥ ಅಭಿಮಾನ ನನ್ನಲ್ಲಿ ಆಗ ಹುಟ್ಟಿರಲಿಲ್ಲ. (ಚಿತ್ರಕಲೆಯ ಅಭ್ಯಾಸದ ಹವ್ಯಾಸದಲ್ಲಿ ಆಗ ನಿರತನಾಗಿದ್ದೆ ನಾನು) ಇಂಗ್ಲಿಷಿನಲ್ಲಿ ಪ್ರಾಸಾನುಪ್ರಾಸಗಳನ್ನು ಜೋಡಿಸಿ, ಪದ್ಯ ಎಂದು ಭ್ರಮಿಸಿ ಕುಂಟು ಪಂಕ್ತಿಗಳನ್ನು ಕೂಡಿಸುವ ಅನೇಕ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿದ್ದುದುಂಟು. ಕನ್ನಡದಲ್ಲಿಯಂತೂ, ದೋಷ ಪೂರ್ಣವಾಗಿ ಪದ್ಯ ರಚನೆ ಮಾಡುವುದು ಹಾಸ್ಯಕರ ಎಂಬ ಪ್ರತೀತಿಯನ್ನು ಕೇಳಿದ್ದೆನಾದ್ದರಿಂದ, ನನ್ನ ಷಟ್ಪದೀ ಪದ್ಯ ರಚನಾಭ್ಯಾಸವೆಲ್ಲಾ ಬಹು ಗುಟ್ಟಾಗಿಯೇ ಸಾಗುತ್ತಿತ್ತು. ನನ್ನ ಸುದೈವದಿಂದ, ಆ ಕಾಲದಲ್ಲಿ ನನಗೆ ಪ್ರೊ|| ತೀ. ನಂ. ಶ್ರೀ ಯವರ ಪರಿಚಯ ಭಾಗ್ಯ ದೊರೆತು, ಅವರು 'ಶ್ರೀ' ಯವರ 'ಇಂಗ್ಲಿಷ್ ಗೀತೆಗಳು' ಗ್ರಂಥದ ಪ್ರತಿಯೊಂದನ್ನು (ಬಹುಶಃ, ೧೯೨೭ ರಲ್ಲಿ) ನನ್ನ ಹುಟ್ಟು ಹಬ್ಬದ ಉಡುಗೊರೆಯಾಗಿ ನನಗೆ 'ಪ್ರೀತಿಯ ಆಶೀರ್ವಾದ'ಗಳೊಡನೆ ಕೊಟ್ಟರು. ಅಲ್ಲಿನ ಚೆಲುವಾದ ಗೀತಗಳ ಮಾದರಿಯಲ್ಲಿ ನಾನೂ ಕೆಲವು ಸಣ್ಣ ಪುಟ್ಟ ಇಂಗ್ಲಿಷ್ ಕವನಗಳನ್ನು ಕನ್ನಡಕ್ಕೆ ತಿರುಗಿಸುತ್ತ, ಹೊಸ ಛಂದಸ್ಸಿನ ಧಾಟಿಯನ್ನು ಅಭ್ಯಾಸ ಮಾಡುತ್ತಿದ್ದೆ. ತೀ. ನಂ. ಶ್ರೀ ಯವರ ಒತ್ತಾಸೆ ಮಾರ್ಗದರ್ಶನಗಳಿದ್ದರೂ ಕೂಡ, ಸ್ವತಂತ್ರ ಕೃತಿ ರಚನೆಗೆ ಕೈ ಹಾಕುವ ಧೈರ್ಯ ಹುಟ್ಟಲಿಲ್ಲ: 'ಕಿರಿಯ ಕಾಣಿಕೆ' ಪ್ರಕಟಗೊಂಡ ಮೇಲೆ ಧೈರ್ಯ ಮೊಳೆಯಿತು. ಅದರಲ್ಲಿನ ಕವನಗಳಲ್ಲಿ, ಆ ಮೊದಲೇ ನನ್ನ ಕುತೂಹಲವನ್ನು ಕೆರಳಿಸಿದ್ದ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ ನನ್ನ ತುಂಬ ಮೆಚ್ಚುಗೆ ಗಳಿಸಿಕೊಂಡು, ನನ್ನ ಸುಪ್ತ ಕವಿತಾ ಶಕ್ತಿಯನ್ನು ಎಚ್ಚರಿಸಿತು ಎನ್ನಬೇಕು. ಅಂದಿನಿಂದ ಸ್ವತಂತ್ರ ಕವಿತಾ ರಚನೆಗೆ ತೊಡಗಿ, ಬೇಗನೆಯೆ 'ತಳಿರು' ಕವನ ಸಂಕಲನದಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರ ಜೊತೆಗೆ ನಿಲ್ಲುವ ಭಾಗ್ಯ ನನ್ನದಾಯಿತು. ಈ ಭಾಗ್ಯ ದೊರಕಿದ್ದು ನನ್ನ ವಿದ್ಯಾ ಗುರುಗಳಾದ ಶ್ರೀ ತೀ. ನಂ. ಶ್ರೀ ಮತ್ತು ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರ ಕೃಪೆಯ ಫಲ.

'ಮೈಸೂರು ಕರ್ನಾಟಕ'ದಲ್ಲಿ ಹೊಸ ಕವಿತೆಯ ಪ್ರಾದುರ್ಭಾವ ಮತ್ತು ಪ್ರಾಚುರ್ಯ 'ಶ್ರೀ' ಯವರ ಇಂಗ್ಲಿಷ್ ಗೀತಗಳಿಂದ ಹೊರ ಹೊಮ್ಮಿ, 'ಕಿರಿಯ ಕಾಣಿಕೆ' ಮತ್ತು 'ತಳಿರು' ಗಳಿಂದ ಕುಡಿಗೊಂಡು ಹಬ್ಬಿ, ಹರಡತೊಡಗಿದರೂ.

ಈ ಹೊಸ ಕನ್ನಡ ಕವಿತೆಯ ಹೊನಲಿಗೆ ಹೆಚ್ಚು ನೀರು ಹರಿದು ಬಂದು ಅದ ಮಹಾಪೂರವಾಗಿ ಹರಿಯ ತೊಡಗಿದ್ದು ಶ್ರೀ ಕುವೆಂಪು ಅವರ ಕಾವ್ಯವಾಹಿ ಯಿಂದ. 'ಕಿರಿಯ ಕಾಣಿಕೆ' ಮತ್ತು 'ತಳಿರು'ಗಳ ಕವಿ ಪಂಕ್ತಿಗಳ ಅಗ್ರಪಂಕ್ತಿ ಯಲ್ಲಿ ಅಂದೂ ಇಂದೂ. ಮೊತ್ತದ ದೃಷ್ಟಿಯಿಂದಲೂ ಗುಣದ ದೃಷ್ಟಿಯಿಂದಲ ಹಾಗೂ ಪ್ರಭಾವಶಾಲಿತ್ವ ದೃಷ್ಟಿಯಿಂದಲೂ, ಅಗ್ರಗಣ್ಯರಾಗಿ ನಿಂತವರ ಇವರೊಬ್ಬರೇ. 'ಕೊಳಲಿ' ನಿಂಚರದಿಂದ ನಾಡಿನ ಕಿವಿಯೊಲಿಸಿಕೊಂಡ ಅವ ಕವಿತೆ, 'ನವಿಲಾ'ಗಿ ನರ್ತಿಸಿ, 'ಪಾಂಚಜನ್ಯ'ವಾಗಿ ಮೊಳಗಿ, ಈಗ 'ಶ್ರೀ ರಾಮಾ ಯಣ ದರ್ಶನ'ದಿಂದ ವಿಶ್ವಮಾನ್ಯಾರ್ಹವಾಗಿದೆ.

—೨—

ಷೇಕ್ಸ್‌ಪಿಯರ್, ಕಾಳಿದಾಸ ಇವರು ಪ್ರಮುಖವಾಗಿ ನಾಟಕ ಕರ್ತರಾದರೂ ಪ್ರಸಿದ್ಧರಾಗಿರುವುದು ಮಹಾಕವಿಗಳೆಂದು. ಕಾಳಿದಾಸನಾದರೋ ರಘು ವಂ ಕುಮಾರ ಸಂಭವ ಮೇಘ ದೂತ ಈ ಪದ್ಯ ಕಾವ್ಯಗಳನ್ನು ಬರೆದಿದ್ದಾನೆ; ಆದ ಷೇಕ್ಸ್‌ಪಿಯರ್ ('ಸಾನೆಟ್'ಗಳನ್ನು ಬಿಟ್ಟರೆ) ಇಂತಹ ದೀರ್ಘ ಕಾವ್ಯಗಳನ್ನು ರಚಿಸಿಲ್ಲ. ಈ ಇಬ್ಬರು ನಾಟಕಕಾರರ ನಾಟಕಗಳಲ್ಲಿಯೂ ನಾಟಕ ಕೌಶ ವೆಲ್ಲವೂ ಕವಿತಾ ವೈಭವಕ್ಕೇ ಪಟ್ಟಗಟ್ಟಿ ತಾನು ಕೈಕಟ್ಟಿ ನಿಂತಿದೆ. ಭಾಸನ ನಾಟ ಗಳಲ್ಲಿ ಕವಿತಾಂಶಕ್ಕಿಂತ ನಾಟಕಾಂಶವೇ ಪ್ರಧಾನ. ಭಾರತೀಯ ಕಾವ್ಯ ಮೀಮಾಂಸೆಯ ದೃಷ್ಟಿಯಲ್ಲಿ ನಾಟಕವೂ (ದೃಶ್ಯ) ಕಾವ್ಯ ತಾನೆ, ಆದರೂ ಪಾಶ್ಚಾತ್ಯ ಸಂಪ್ರದಾಯವನ್ನನುಸರಿಸಿ, ಪದ್ಯ ಕಾವ್ಯ ಕರ್ತೃವನ್ನೆ ಕವಿಯೆಂದ ತಿಳಿಯುವುದು ನಮ್ಮ ಈಚಿನ ರೂಢಿ.

ಕುವೆಂಪು ನಾಟಕಕಾರರೂ ಹೌದು, ಕವಿಗಳೂ ಹೌದು; ಕಥೆ, ಕಾದ ಬರಿ, ಜೀವನ ಚರಿತ್ರೆ, ಚಿತ್ರಗಳು, ಕಾವ್ಯ ಮೀಮಾಂಸೆ, ಕಾವ್ಯ ವಿಮರ್ಶೆ ಮುಂತಾದ ನಾನಾ ಪ್ರಕಾರಗಳ ಗದ್ಯ ಸಾಹಿತ್ಯ ನಿರ್ಮಾಪಕರೂ ಹೌದು. ಮಾತ್ರ ವಲ್ಲ; ಪ್ರತಿ ಪ್ರಕಾರದಲ್ಲೂ ಶ್ರೀಮಾಕೃತಿಯನ್ನು ಸೃಷ್ಟಿಸಿರುವ ಸಿಸ್ತ್ರೀಪುರು ಆದರೂ, ಕುವೆಂಪು ಎಂದ ಕೂಡಲೆ ನನಗೆ ನೆನಪಾಗುವುದು ಕವಿ. ವಿಶೇಷವಾಗಿ ಕವಿತಾ ರಚನೆಯ ಮೂಲಕವೇ ಅವರ ವಾಙ್ಮಯ ಸೇವೆ ಮೊದಲಾಗಿ ನಿಲುಗಡೆ ಯಿಲ್ಲದೆ ಜೀವನದಿಯಾಗಿ ಮುಂಬರಿಯುತ್ತಿರುವುದರಿಂದ, ಅವರು ಕವಿಯೆನಿಸಿರ ವುದು ಕೇವಲ ಸಹಜ, ಇಷ್ಟೇ ಅಲ್ಲ: ಅವರು ಸೃಷ್ಟಿಸಿರುವ ಸಾಹಿತ್ಯ ಪ್ರಕಾ ಯಾವುದೇ ಆದರೂ, ಅದರ ಒಡಲು ಯಾವ ಹೆಸರು ಹೊತ್ತಿದ್ದರೂ, ಉಸಿರ ಕಾವ್ಯದ್ದು: ಕಥೆಯಾಗಲಿ ಕಾದಂಬರಿಯಾಗಲಿ ಗದ್ಯ ಚಿತ್ರವಾಗಲಿ ಜೀವನ ಚರಿತ್ರೆಯಾಗಲಿ ಕಾವ್ಯ ವಿಮರ್ಶೆಯಾಗಲಿ—ಅದರಲ್ಲಿ ಅವರ ಕವಿ ಮುದ್ರೆ ಸ್ಪಷ್ಟ ವಾಗಿ ಅಂಕಿತ. ಅವರ ಕಥೆ ಕಾದಂಬರಿಗಳಲ್ಲಿನ ವರ್ಣೋಜ್ಜ್ವಲವಾದ ನಿಸರ್ಗ

ವರ್ಣನೆ, ಭಾವರಂಜಿತ ಪಾತ್ರಸೃಷ್ಟಿ, ಸಂದರ್ಭಕ್ಕೆ ತಕ್ಕಂತೆ ಮಧುರ ಮನೋಹರವೂ ಓಜಃ ಪೂರ್ಣವೂ ಆದ ಭಾಷಾ ಶೈಲಿ–ಮುಂತಾದ ಗುಣಗಳು ಕವಿಯಲ್ಲದವನ ಗದ್ಯ ಕೃತಿಗಳಲ್ಲಿ ಹೊಮ್ಮುವುದು ಅಸಂಭವ. ಪ್ರಾಚೀನ ಕಾವ್ಯಗಳ ಸವಿಮರ್ಶೆಯಲ್ಲಿ ಅವರು ತೋರಿಸಿರುವ ಸಹೃದಯ ದರ್ಶನ, ರಸಜ್ಞತೆ, ಭಾವಜ್ಞತೆಗಳು ಕವಿ ಸಹಜವಾದ ಸಹೃದಯತೆಯ ವಿಶೇಷ ಲಕ್ಷಣಗಳು ; ಕವಿಯಲ್ಲದ ವಿಮರ್ಶಕನ ಕಾವ್ಯ ವಿಭಜನಾ ಕೌಶಲವಲ್ಲ. ಅವರ ನಾಟಕಗಳಂತೂ ಷೇಕ್ಸ್‌ಪಿಯರ್ ಕಾಳಿದಾಸಾದಿಗಳ ಉದಾತ್ತ ಕಾವ್ಯ ಮಾರ್ಗದಲ್ಲಿ ಮೈವೆತ್ತು ಬಂದ ಕವಿ ಕೃತಿಗಳು.

ಕುವೆಂಪು ಅವರ ಈ ಕವಿ ಮಹಿಮೆ ಎಷ್ಟರಮಟ್ಟಿಗೆ ದೈವದತ್ತವೋ ಅಷ್ಟರ ಮಟ್ಟಿಗೆ ಸಾಧ್ಯ ಲಭ್ಯವಾದ ಸಿದ್ಧಿ. ಕುವೆಂಪು ಅವರ 'ಕೊಳಲಿ'ಗೆ ಮುನ್ನುಡಿ ಬರೆಯುತ್ತ 'ಶ್ರೀ' ಯವರು, ಇವರ ಕಾವ್ಯ ವೀಣೆಯನ್ನು 'ಸರಸ್ವತೀ ದೇವಿಯೇ ನುಡಿಸುತ್ತಿರುವಳು' ಎಂದು ಹೇಳಿರುವ ಮಾತು ಕುವೆಂಪು ಅವರ ನಿಸರ್ಗಸಿದ್ಧವಾದ ನೈಸರ್ಗಿಕ ಕವಿತಾ ಶಕ್ತಿಯನ್ನು ಕುರಿತದ್ದು. ಇದನ್ನೇ ಪ್ರತಿಭೆ ಎನ್ನುವುದು. ಕವಿಗಳು ಅನೇಕ ಮಂದಿ; ಪ್ರತಿಭಾನಂತ ಕವಿಗಳು ವಿರಳ. ಕುವೆಂಪು ಪ್ರತಿಭಾಶಾಲಿಯಾದ ಕವಿ ಎಂದು ಈಗ ಸ್ಥಾಪಿಸ ಹೊರಡುವುದು ಕೊಹಿನೂರು ವಜ್ರವನ್ನು ರತ್ನ ಪರೀಕ್ಷಕನ ಕೈಗಿತ್ತ ಹಾಗೆ! ಆದರೆ, ಅವರ 'ಕಾವ್ಯ ವಿದ್ಯಾ ಪ್ರಚಯ ಪರಿಚಯ' 'ಸತತಾಭ್ಯಾಸ ಪ್ರಯತ್ನ, 'ನಿರ್ಮಲ ಶ್ರುತ'–ಒಂದು ಮಾತಿನಲ್ಲಿ ಅವರ 'ವ್ಯುತ್ಪತ್ತಿ ಸಂಪತ್ತಿ'–ಇವು ವಿಶಾಲ ಕನ್ನಡ ಲೋಕಕ್ಕೆ ಅರಿವು ಗೊಂಡಿರದಿದ್ದರೆ ಅಸಂಭವವಲ್ಲ. ಬೇರೆಯ ರೀತಿಯಲ್ಲಿ ಹೇಳುವುದಾದರೆ, ಕುವೆಂಪು ಅವರ ಕಾವ್ಯ ಜೀವನ ರಸ ತಪಸ್ಯೆ. ಶ್ರೀ ಗುರು ಕೃಪಾಗರ್ಭ ಗುಡಿಯಲ್ಲಿ ಅವರ ಕಾವ್ಯವ್ರತ ದೀಕ್ಷಾಧಾರಣ ಅವರ ಈ ತಪಸ್ಯೆಗೆ ಪಾವನ ಪೀಠವಾಯಿತು. ವಿದ್ಯಾರ್ಥಿ ದಶೆಯಲ್ಲಿಯೂ ತದನಂತರವೂ ಅವರು ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ, ಶ್ರೀರಾಮ ಕೃಷ್ಣ ಗುರುವರೇಣ್ಯರ ಪರೋಕ್ಷ ಪ್ರಭಾವಾನ್ವಿತ ದಿವ್ಯ ಸನ್ನಿಧಿಯಲ್ಲಿ, ಶ್ರೀ ಗುರು ಸಂದೇಶವನ್ನೂ ಭಾರತೀಯ ವೇದಾಂತ ದರ್ಶನಗಳನ್ನೂ ಜನ ಕೋಟಿಗೆ ನಿತ್ಯವೂ ಪ್ರಸಾರ ಮಾಡುವ, ಹಾಗೂ ಶಿಷ್ಯ ಕೋಟಿಗೆ ವೇದಾಂತ ಪಾಠ ಪ್ರವಚನ ಮಾಡುವ ಕಾರ್ಯದಲ್ಲಿ ನಿರತರಾದ ಶ್ರೀ ಸ್ವಾಮಿಜಿಯವರ ಸತ್ಸಂಗದಲ್ಲಿ ಕುವೆಂಪು ಕಾವ್ಯ ಜೀವನಕ್ಕೆ ವೇದಾಂತ ದರ್ಶನಗಳ ವಿಶಾಲ ತಾತ್ತ್ವಿಕ ಭೂಮಿಕೆ ಏರ್ಪಟ್ಟಿತು. ಜೊತೆಗೆ, ಬ್ರಹ್ಮಚರ್ಯ ನಿಷ್ಠವ್ರತ ಜೀವನ; ಸೌಹಾರ್ದ ಸೌರಭ ಸೂಸಲು ಎಷ್ಟು ಅಗತ್ಯವೋ ಅಷ್ಟು ಸ್ನೇಹ ಜೀವನ; ಬಾಲ್ಯ ಜೀವನದಲ್ಲಿ ಸೌಂದರ್ಯ ಸುಧಾಪಾನ ಮಾಡಿಸಿದ ಮಲೆನಾಡಿನ ಪ್ರಕೃತಿ ದೇವಿಯ ಸಂಸ್ಮರಣೆಯನ್ನು ಮರೆಯಗೊಳಿಸದೆ ಪ್ರಕೃತಿ ಪ್ರೇಮವನ್ನು ನಿಚ್ಚ ಹಸುರಾಗಿಟ್ಟಿರಲು ಅನುಗೊಳಿಸಿಕೊಟ್ಟ, ನಿಸರ್ಗ ಸೌಂದರ್ಯದ ನೆಲೆವೀಡಾದ ಮೈಸೂರಿನ ಒಂಟಿಕೊಪ್ಪಲಿನ ಸೌಂದರ್ಯ ಭೂಯಿಷ್ಠ

ಜೀವನ: ಸಾಹಿತ್ಯ ಗುರುಗಳಾಗಿದ್ದ 'ಶ್ರೀ' ಯವರ ಮತ್ತು ತಳುಕಿನ ವೆಂಕಣ್ಣಂ
ನವರ ಆಶೀರ್ವಾದ ಬಲದಿಂದ ಪ್ರವೃದ್ಧಿಗೊಂಡ, ಪಂಪ ರನ್ನ ಕುಮಾರವ್ಯಾ
ಲಕ್ಷ್ಮೀಶ ಮೊದಲಾದ ಪ್ರಾಚೀನ ಕನ್ನಡ ಕವಿವರೇಣ್ಯರ ಕಾವ್ಯಗಳ ವ್ಯಾಸಂ
ವಾಲ್ಮೀಕಿ ವ್ಯಾಸ ಕವಿ ಋಷಿಗಳ ಕಾವ್ಯೇತಿಹಾಸಗಳ ಉಪಾಸನೆ, ಕಾಳಿದ
ಭಾಸ ಭವಭೂತಿ ಮಹಾ ಕವಿಗಳ ಕಾವ್ಯರಸಧಿಯಲ್ಲಿ ಸ್ನಾನ, ಷೇಕ್ಸ್‌ಪಿಯ
ಮಿಲ್ಟನ್ ಡ್ಯಾಂಟೆ ಮಹಾ ಕವಿಗಳ ಕಾವ್ಯ ಪ್ರಪಂಚ ಪರ್ಯಟನ, ಬಂಕಿ
ರವೀಂದ್ರರ ಸಾಹಿತ್ಯ ಸ್ನೇಹ, ವರ್ಡ್ಸ್‌ವರ್ತ್ ಷೆಲ್ಲಿ ಕೀಟ್ಸ್ ಮ್ಯಾಥ್ಯೂ ಆರ್ನಾ
ಟೆನಿಸನ್ ಮೊದಲಾದ ಆಂಗ್ಲ ಕೋಕಿಲ ಕೂಜನ ಮನೋಹರವಾದ ಕಾವ್ಯೋದ
ವಿಹಾರ— ಇವುಗಳಿಂದ ಪಾವನ ಮಧುರವಾದ ರಸ ಜೀವನ: ಇವೆಲ್ಲವ
ರಸ ಯೋಗದಿಂದ ಸಿದ್ಧಿಸಿದ ಉದಾತ್ತ ಕಾವ್ಯ ಜೀವನ ಕುವೆಂಪು ಅವರ
ಬಹುಮಂದಿ ಕವಿಗಳ ವಿಚಾರದಲ್ಲಿಯೂ ಈ ಮಾತನ್ನು ಹೇಳಲು ಸಾಧ್ಯವಾಗ
ಕವಿಯ ಅಂತರಿಕ ಕಾವ್ಯ ಜೀವನ ಒಂದು ಮುಖವಾದರೆ, ಆತನ ಕೌಟುಂ
ವ್ಯಾವಹಾರಿಕ ಇತ್ಯಾದಿ ಪ್ರಾಪಂಚಿಕ ಬಾಹ್ಯ ಜೀವನ ಇನ್ನೊಂದು ಮು
ಆದರೆ, ಕುವೆಂಪು ಅವರ ಬದುಕು ಒಂದು, ಕಾವ್ಯ ಇನ್ನೊಂದು ಅಲ್ಲ; ಅ
ಕಾವ್ಯವನ್ನು ಜೀವಿಸುವವರು. ಪ್ರಾಮಾಣಿಕ ಕವಿಗೆ ಅಗತ್ಯವಾದ ಅಂತ
ಜೀವನ ಬಹಿರಂಗ ಜೀವನಗಳ ಸಾಮರಸ್ಯ ಕುವೆಂಪು ಅವರಲ್ಲಿ ಸಮಾವೇಶಗೊಂ
ಅವರ ಈ ರಸ ಜೀವನದ ವ್ಯಕ್ತ ಭಾಗ ಅವರ ಕಾವ್ಯಸೃಷ್ಟಿ. ಅವರೊಬ್ಬ
ಯೋಗಿ. ಇದೇ ಅವರ ವ್ಯಕ್ತಿತ್ವದ ಮಹಿಮೆ; ಈ ವ್ಯಕ್ತಿತ್ವದ ಮಹಿಮೆ
ಕಾವ್ಯದಲ್ಲಿ ಮೈಗೊಂಡು, ಕಾವ್ಯ ಮಹಿಮೆಗೆ ಕಾರಣವಾಗಿದೆ.

ಅವರ ಕವಿ-ವ್ಯಕ್ತಿತ್ವದ ಅಂತಸ್ಸಾರದಲ್ಲಿ ಯಾವ ಯಾವ ಸತ್ ಪ್ರ
ಸತ್ ಪ್ರೇರಣೆಗಳು ಏಕೀಭವಿಸಿವೆ ಎಂಬುದನ್ನು ಮೇಲೆ ಸ್ಥೂಲವಾಗಿ ಕಾಣ
ಎರಡು ಮೂರು ನಿದರ್ಶನಗಳಿಂದ ಈ ಅಂಶವನ್ನು ಸ್ಪಷ್ಟಪಡಿಸಬಹುದು.
ಕ್ಕಿಂತ ಮೊದಲು, ಅವರು ಮಲೆನಾಡಿನ ನಲ್ಮೆಯ ಶಿಶು. ಈ ಕವಿಯ ನಿ
ಸೌಂದರ್ಯಾನುಭವಕ್ಕೆ ಮಲೆನಾಡೆ ಆಕರ: ಇವರೊಲಿದ ನಿಸರ್ಗ ರಮಣಿಗೆ
ಕವಿತೆಯೇ ನಲ್ಮೆಯ ನಿಲಯ. ಮಲೆನಾಡಿನ ಚರಾಚರ ಜಗತ್ತೆಲ್ಲವೂ ಇವರ
ಲೋಕದಲ್ಲಿ ಪುನರ್ಜನ್ಮ ಪಡೆದು ಅಮರ ಪದವಿಯನ್ನು ಹೊಂದಿವೆ. ಮಲೆನಾ
ಹುಟ್ಟಿ, ಮಲೆನಾಡನ್ನೊಲಿದು, ಮಲೆನಾಡನ್ನು ಮನಸಾರೆ ಬಣ್ಣಿಸಿರುವ ಈ
ಮಲೆನಾಡ ಕವಿ. ನಿಸರ್ಗ ಸೌಂದರ್ಯ ಮಾತ್ರವಲ್ಲದೆ, ಇವರ ಕಾದಂಬರಿ
ಚಿತ್ರಗಳಲ್ಲಿ ಮಲೆನಾಡಿನ ಜನ ಜೀವನದ ಜೀವಂತ ಚಿತ್ರವನ್ನು ಕಾಣಬಹ
ಎರಡನೆಯದಾಗಿ, ಕುವೆಂಪು 'ದಾರ್ಶನಿಕ' ಕವಿ. ಭಾರತೀಯ ದರ್ಶನದ ವ
ಪುರುಷರಾದ ವೇದೋಪನಿಷತ್ತುಗಳ ಋಷಿಗಳು ಪ್ರಥಮತಃ ನಿಸರ್ಗ ಪ್ರೇಮಿ

ನಿಸರ್ಗ ಸೌಂದರ್ಯ ಆತ್ಮೀಯ ಅವಲೋಕನದಿಂದ "ಸೊಬಗೆ ಸತ್ಯ, ಸತ್ಯವೆ ಸೊಬಗು" ಎಂಬ ದರ್ಶನ ದೀಕ್ಷೆಯನ್ನು ಕೈಕೊಂಡ ಕುವೆಂಪು ಅವರ ದರ್ಶನವು ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದ ಯೋಗಿಗಳು ಇವರ ಉಪದೇಶಗಳ ಮೂಲಕ ಭಾರತೀಯ ದರ್ಶನದ ಸಾರ ಸಂಪತ್ತಿನಿಂದ ಪುಷ್ಟಿಗೊಂಡು, ವಿಸ್ತೃತವಾಗಿ, ವಿಕಸಿತವಾಗಿ, ವಿಶುದ್ಧವಾಗಿ, 'ಶ್ರೀರಾಮಾಯಣ ದರ್ಶನ'ದಲ್ಲಿ ಸ್ವತಂತ್ರ ಅಭಿವ್ಯಕ್ತಿಯಾಗಿ ಪರಿಣಮಿಸಿತೆನ್ನಬಹುದು.

ಮೂರನೆಯದಾಗಿ, ಕನ್ನಡ ಕಾವ್ಯ ಪರಂಪರೆಯನ್ನು ಅವರ ತಾಯ್ ನೆಲದ ಸಹಜ ಪಾತ್ರದಲ್ಲಿ ಮುಂದುವರಿಸಿಕೊಂಡು ಬಂದ ಆಧುನಿಕ ಕ್ರಾಂತಿ ಕವಿಗಳಲ್ಲಿ ಕುವೆಂಪು ಅಗ್ರಗಣ್ಯರು. 'ಶ್ರೀ' ಯವರು ತಮ್ಮ 'ಇಂಗ್ಲಿಷ್ ಗೀತೆಗಳ'ಲ್ಲಿ ಪ್ರಯೋಗಿಸಿ ತೋರಿಸಿಕೊಟ್ಟ ಹೊಸ ಛಂದಸ್ಸಿನ ವಿವಿಧ ಲಯಗಳನ್ನು ಅಳವಡಿಸಿಕೊಂಡು ನೂತನ ಪದ್ಯ ಮಾದರಿಗಳನ್ನು (verse patterns) ರೂಢಿಗೆ ತಂದು ನೆಲೆ ನಿಲ್ಲಿಸಿದ ಕೀರ್ತಿ ಅವರದ್ದು. 'ಹೀರೆಯ ಹೂವು', 'ಮರದನೆರಳು', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಮುಂತಾಗಿ ಪ್ರಾಚೀನ ಕಾವ್ಯ ಮಾರ್ಗದಲ್ಲಿ ಕಾಣಬಾರದ, ಸಾಮಾನ್ಯ ದೃಷ್ಟಿಗೆ ಕಂಡೂ ಕಾಣದ, ವಸ್ತು ವಿಷಯಗಳೆಲ್ಲ ಕುವೆಂಪು ಕಾವ್ಯ ಪ್ರಪಂಚದಲ್ಲಿ ಜನ್ಮ ಧಾರಣೆಮಾಡಿವೆ. 'ಶ್ರೀ' ಯವರು 'ಅವಳ ತೊಡಿಗೆ ಇವಳಿಗಿಟ್ಟು ನೋಡಬಯಸಿದರು.' ಅದೇ 'ಅನುವಾದ ಮಾರ್ಗ'ವನ್ನು ಕುವೆಂಪು ಅನುಸರಿಸಿ ಮುಂದುವರಿಸಿದ್ದರೆ, ಕನ್ನಡಕ್ಕೆ ಹೊಸತೇನೂ ಬಂದಂತೆ ಆಗುತ್ತಿರಲಿಲ್ಲ. 'ಶ್ರೀ' ಯವರು ಹಾಕಿಕೊಟ್ಟ ಪಾತ್ರವನ್ನು ವಿಸ್ತರಿಸಿ, ಅದರಲ್ಲಿ ಹೊಸ ನೀರ ಹೊನಲನ್ನು ಹರಿಯಿಸಿದವರಲ್ಲಿ ಕುವೆಂಪು ಪ್ರಮುಖರು. ಪಾತ್ರ ಹೊಸದು, ನೀರು ಹೊಸದು; ಆದರೂ ಕನ್ನಡಿಗರಿಗೆ ಪರಿಚಿತವಾದುವೆ. ಕನ್ನಡದ ಕಿವಿಗೆ ಪರಿಚಿತವಾದ ಪದ್ಯಧಾಟಿ; ಕನ್ನಡಿಗರ ಪ್ರಪಂಚಕ್ಕೆ ಹೊರತಲ್ಲದ ವಸ್ತು, ವಿಷಯ, ವಿಚಾರ, ಸನ್ನಿವೇಶ, ಸಂಗತಿ, ಭಾವ ಭಾವನೆಗಳು. ಹೀಗಾಗಿ, ಕುವೆಂಪು ಕೃತಿಗಳಲ್ಲಿ ಅಚ್ಚ ಕನ್ನಡತನ ತುಂಬಿ ತುಳುಕುತ್ತಿದೆ. ಕುವೆಂಪು ಅವರ ಕಾವ್ಯವಲ್ಲರಿ ಯಾವುದೋ ಹೊರನಾಡಿನಿಂದ ತಂದು ನಟ್ಟು ಬೆಳಸಿದ್ದಲ್ಲ; ನಮ್ಮ ನೆಲದಲ್ಲಿಯೇ ಹುಟ್ಟಿ ಹೂತು ಹಣ್ಣು ಬಿಟ್ಟಿರತಕ್ಕದ್ದು; ಇನ್ನೂ ಬಿಡುತ್ತಿರತಕ್ಕದ್ದು.

ಶ್ರೀ ಕುವೆಂಪು ಅವರ ವ್ಯಕ್ತಿ ಸ್ವರೂಪ-ಮಹಿಮೆಗಳಿಗೆ ಅನುಗುಣವಾಗಿಯೇ ಇವೆ ಅವರ ಕೃತಿಗಳ ವಿಸ್ತಾರ, ವೈವಿಧ್ಯ ಮತ್ತು ಔನ್ನತ್ಯ. ಮೊದಮೊದಲು ಅವರು ಕನ್ನಡ ಲೋಕಕ್ಕೆ ಸುಪರಿಚಿತರಾದುದು ಅವರ ಭವ್ಯ ಬಂಧುರ ಭಾವಗೀತೆಗಳ ಮೂಲಕ. 'ಕೊಳಲು', 'ನವಿಲು', 'ಪಾಂಚಜನ್ಯ', 'ಕೃತ್ತಿಕೆ', 'ಪ್ರೇಮಕಾಶ್ಮೀರ', 'ಕಿಂದರಿ ಜೋಗಿ ಮತ್ತು ಇತರ ಕಥನ ಕವನಗಳು', 'ಕೋಗಿಲೆ ಮತ್ತು ಸೋವಿಯಟ್ ರಷ್ಯ', 'ಕಿಂಕಿಣಿ'—ಇವೇ ಮೊದಲಾದ ಹಲ

ವಾರು ಸಂಕಲನಗಳು ಅವರ ಕಾವ್ಯೋಪಾಸನಾ ಕಾಯಕದ ಚಿರ ಸ್ಮಾ
ಗಳಾಗಿವೆ. ಇವಿಷ್ಟರಿಂದಲೇ ಅವರು 'ವರಕವಿ' ಹಾಗೂ 'ಕವಿವರ' ಎಂದೆ
ಕೊಳ್ಳಲು ಅರ್ಹರು. ಇವರ ಮಹಾ ಕಾವ್ಯ ರಚನೆಗೆ ಪೂರ್ವಸಿದ್ಧತೆ ಜೀರಿಯು
ಸಾಗುತ್ತಿತ್ತು. ಅದು ಅವರ ದೃಶ್ಯ ಕಾವ್ಯಗಳಲ್ಲಿ. ಆಧುನಿಕ ಕನ್ನಡ ನಾ
ಪ್ರಪಂಚದಲ್ಲಿ 'ದಶ್ಯ ಕಾವ್ಯ' ಎಂಬ ಮಾತು ಯಾವ ಕೃತಿಗಾದರೂ ಸಲ್ಲುವುದಾ
ಅದು ವಿಶೇಷವಾಗಿ ಕುವೆಂಪು ಅವರ ನಾಟಕಗಳಿಗೆ ಸಲ್ಲಬೇಕು. ಅವರ 'ಯಮ
ಸೋಲು' ಅತ್ಯಂತ ಸುಂದರ ಕಾವ್ಯ; ರಂಗದಮೇಲೂ ಯಶಸ್ವಿಯಾಗಿ ಪರಿಣಾ
ಕಾರಿಯಾಗಿ ಶೋಭಿಸಿದ ದೃಶ್ಯಕಾವ್ಯ. ಅದರಲ್ಲಿ ಅವರು ಸರಳರಗಳೆಯ
ರೂಪಕಕ್ಕೆ ಅತ್ಯಂತ ಯಶಸ್ವಿಯಾಗಿ ಅಳವಡಿಸಿದರು. ಸರಳ ರಗಳೆಯ ನಿರ್ಮಾ
ಕರು, ಪ್ರವರ್ತಕರು, ಯಾರೇ ಆಗಿರಲಿ—ಅದು ಕುವೆಂಪು ಅವರ ಕೃತಿಗಳಲ್ಲಿ ಕ
ಪ್ರಯೋಗ ಸಿದ್ಧಿ ಬಹುಶಃ ಜೀರಿಯು ಕಡೆ ಕಂಡುಬರದು. ಅವರ ಇತರ ನಾ
ಗಳಲ್ಲಿಯೂ ಸರಳರಗಳೆಯ ಪರಿಣಾಮಕಾರಿ ಪ್ರಯೋಗ ಮುಂದುವರಿ
ಆದರೂ, ಅದು ಮೊದಲು ಅಖಂಡ ಧಾರೆಯಾಗಿ ಹರಿದಿರುವುದು ಅವರ
ಮನೋಹರ ಖಂಡಕಾವ್ಯ 'ಚಿತ್ರಾಂಗದ'ದಲ್ಲಿ. ಈ ಎಲ್ಲ ಕೃತಿಗಳ ರಚನೆ ನಡೆ
ತ್ತಿದ್ದಾಗಲೇ 'ರಾಮಾಯಣದರ್ಶನ' ಮಹಾಕಾವ್ಯದ ಮಹಾ ಛಂದಸ್ಸು ಈ ಸ
ರಗಳೆಯ ಮೂಲಮಾತೃಕೆಯಮೇಲೆ ರೂಪಗೊಂಡು, ಆ ಮಹಾಕೃತಿ ರ
ಯನ್ನು ಓಲೈಸುತ್ತಿತ್ತು. ಈ ಮಹಾ ಛಂದಸ್ಸು, ತನ್ನ ನವ್ಯತೆ ಭವ್ಯತೆಗಳ
'ರಾಮಾಯಣದರ್ಶನ' ಮಹಾಕಾವ್ಯಕ್ಕೆ ತಕ್ಕ ವಾಹನವಾಗಿ ಪರಿಣಮಿ
'ರಾಮಾಯಣದರ್ಶನ'ವು ತನ್ನ ವಸ್ತು ಮಹಿಮೆಯಿಂದ ಮಾತ್ರವಲ್ಲದೆ ಛಂದ
ಮಹಿಮೆಯಿಂದಲೂ ಕನ್ನಡ ಜನಕ್ಕೆ ಪ್ರಿಯವೂ ಮಾನ್ಯವೂ ಆಗುವುದರಲ್ಲಿ ಸಂ
ವಿಲ್ಲ.* 'ರಾಮಾಯಣದರ್ಶನ'ದ ಹಲವು ಮಹಿಮೆಗಳು ಮೇಳವಿಸಿ ಅದನ್ನು ಮ
ಕಾವ್ಯ ಪಟ್ಟಕ್ಕೆ ಏರಿಸಿವೆ: ಅದರ ಕವಿಯನ್ನು ಕನ್ನಡ ಮಹಾಕವಿಗಳ ಪ
ಯಲ್ಲಿ ಕೂರಿಸಿವೆ.

ಕುವೆಂಪು ಅವರು ಪ್ರಪ್ರಥಮವಾಗಿ ಕವಿಯೇ ಆದರೂ ಅವರ ದಕ್ಷತೆ
ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ವಿಹರಿಸಿ, ಸಿದ್ಧಿಯನ್ನು ಗಳಿಸಿವೆ.
ಕಥೆಯೇ ('ನನ್ನ ದೇವರು ಮತ್ತು ಇತರ ಕಥೆಗಳು ಮತ್ತು 'ಸಂನ್ಯಾಸಿ ಮ

---

*ಈ ಮಾತಿನ ನಿರೀಕ್ಷೆ ಈಗ ನಿಜವಾಗಿ ಪರಿಣಮಿಸಿರುವುದು ಕನ್ನಡಿಗರಿಗೆಲ್ಲ ಸಂತೋಷ
ವಿಷಯ. ವಿಶ್ವದ ಸಾಹಿತ್ಯ ಲೋಕದ ಪಂಕ್ತಿಯಲ್ಲಿ ಕರ್ನಾಟಕಕ್ಕೆ ಈಗ ಎಡೆ ದೊರೆಯ
ವಾಗಿದೆ. ಈ ಗೌರವದ ಬಹುಭಾಗ ರಾಮಾಯಣ ದರ್ಶನಕ್ಕೆ ಸಲ್ಲುತ್ತದೆ—ಲೇ

ಇತರ ಕಥೆಗಳು)? ಚಿತ್ರಗಳೆ, ಹರಟೆಯೆ? ('ಮಲೆನಾಡಿನ ಚಿತ್ರಗಳು'). ಕಾದಂಬರಿಯೆ? ('ಕಾನೂರು ಸುಬ್ಬಮ್ಮ ಹೆಗ್ಗಡಿತಿ')(a) ಸಾಹಿತ್ಯ ವಿಮರ್ಶೆಯೆ? ('ಕಾವ್ಯ ವಿಹಾರ', 'ತಪೋನಂದನ', ಇತ್ಯಾದಿ). ಜೀವನ ಚರಿತ್ರೆಯೆ? (ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ). ನಾಟಕಗಳೆ? (ರಕ್ತಾಕ್ಷಿ, ಬಿರುಗಾಳಿ, ಬೆರಳ್ಗೆ ಕೊರಳ್ ಇತ್ಯಾದಿ). ಕನ್ನಡದ ಕಾದಂಬರೀ ಪ್ರಪಂಚದಲ್ಲಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ತನ್ನ ಗುಣಮಹಿಮೆಯಿಂದಲೂ ಗಾತ್ರ ಮಹಿಮೆಯಿಂದಲೂ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ; ಮಲೆನಾಡಿನ ಚರಾಚರ ಜಗತ್ತೆಲ್ಲವನ್ನೂ ಕವಿ ಈ 'ಕರತಲ ರಂಗಭೂಮಿಯಲ್ಲಿ' ಪಾತ್ರ ಮಾಡಿಸಿದ್ದಾರೆ. ನಿಸರ್ಗದ ವರ್ಣೋಜ್ಜ್ವಲವಾದ ಹಿನ್ನೆಲೆಯುಳ್ಳ, ಕೇವಲ ಕನ್ನಡ ಕಾದಂಬರಿಯಲ್ಲಿ ಇದು ಪ್ರಮುಖ. ಪದ್ಯ ನಾಟಕಗಳನ್ನು ಪರಿಗಣಿಸಿದರೆ, ಕುವೆಂಪು ಅದ್ವಿತೀಯರು ಅವರ 'ರಕ್ತಾಕ್ಷಿ' ಮೊದಲಾದ ಕೆಲವು ನಾಟಕಗಳಲ್ಲಿ ಷೇಕ್ಸ್‌ಪಿಯರ್ ಮಹಾಕವಿಯ ದುರಂತ ದೃಷ್ಟಿಯು ಒಳಗೆ ಇರುವುದು ದಿಟ; ಆದರೆ, 'ಬೆರಳ್‌ಗೆ ಕೊರಳ್ ನಾಟಕದಲ್ಲಿ ಸಂಪೂರ್ಣವಾಗಿ ನೂತನವೆನ್ನಬಹುದಾದ, 'ಭಾರತೀಯ' ಎನ್ನಬಹುದಾದ, ಒಂದು ದುರಂತ ದೃಷ್ಟಿ ಮೂಡಿಬಂದಿದೆ. ಕುವೆಂಪು ಅವರ ಕಾವ್ಯ ಶೈಲಶ್ರೇಣಿಯಲ್ಲಿ 'ರಾಮಾಯಣ ದರ್ಶನ'ವನ್ನು ಬಿಟ್ಟರೆ, 'ಬೆರಳ್ಗೆ ಕೊರಳ್' ನಾಟಕ ಉಚ್ಚಶಿಖರಗಳಲ್ಲಿ ಒಂದು.

ಕನ್ನಡ ಸಾಹಿತ್ಯಕ್ಕೆ ಕುವೆಂಪು ನೀಡಿರುವ 'ಕಾಣಿಕೆ' ಹಾಗೂ 'ಕಾಣ್ಕೆ' ಎರಡೂ ಹಿರಿಯವು, 'ಕಾಣ್ಕೆ' (ಜೀವನ ದರ್ಶನ) ಇಲ್ಲದ ಯಾವ 'ಕಾಣಿಕೆ'ಯೂ ಶ್ರೇಷ್ಠವೆನಿಸದು, ಪ್ರಭಾವಶಾಲಿಯಾಗದು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಜೈನ ಕವಿಗಳು, ವೀರಶೈವ ಕವಿಗಳು, ವೈಷ್ಣವ ಕವಿಗಳು—ಇವರಲ್ಲಿ ಅಗ್ರಗಣ್ಯರೆನಿಸಿದವರು ತಮ್ಮ ಸಾಧನಾ ಬಲದಿಂದ ಧರ್ಮದಲ್ಲಿ, ಬದುಕಿನಲ್ಲಿ, ತಾವು ಕಂಡ 'ಕಾಣ್ಕೆ'ಯನ್ನು, ಶ್ರದ್ಧೆಯನ್ನು, ಭಕ್ತಿಯನ್ನು, ನಂಬಿಕೆಯನ್ನು, ಬೆಳಕನ್ನು— ಕಾವ್ಯಗಳಲ್ಲಿ ರಸೋಪೇತವಾಗಿ ಮಾಡಿ, ಅವಕ್ಕೆ ಆಧ್ಯಾತ್ಮಿಕ ಮೌಲ್ಯವನ್ನು ಕೊಟ್ಟಿದ್ದಾರೆ. ಹೊಸ ಕನ್ನಡ ಕವಿಗಳಲ್ಲಿ ಪ್ರಮುಖರಾದವರ—ಕುವೆಂಪು ಬೇಂದ್ರೆ ಪು.ತಿ.ನ., ಮುಂತಾದ ಕೆಲವರ—ಕಾವ್ಯ ಕೃತಿಗಳು ಅಚ್ಚ ಭಾರತೀಯ ದರ್ಶನಗಳ, ಸಂಸ್ಕೃತಿಯ, ಮೂಸೆಯಲ್ಲಿ ಪುಟಗೊಂಡು ಅಚ್ಚ ಬಂಗಾರದ ಒಡವೆಗಳಾಗಿ ಆಕೃತಿ ತಳೆದಿರುವುದು ಆ ಪರಂಪರೆಗೆ ಅನುಗುಣವಾಗಿಯೆ ಇದೆ. ಕುವೆಂಪು ಅವರ ಕೃತಿಗಳು—ಮುಖ್ಯವಾಗಿ ಅವರ ಅನೇಕಾನೇಕ ಕವನಗಳು, ಕೆಲವು ನಾಟಕಗಳು, ರಾಮಾಯಣ ದರ್ಶನ ಇವೆಲ್ಲ ಒಂದು ವಿಶಿಷ್ಟ 'ದರ್ಶನ' ಪ್ರಪಂಚವನ್ನು

(a) 'ಮಲೆಯಲ್ಲಿ ಮದುಮಗಳು' ಈಚಿನ ಬೃಹತ್ ಕಾದಂಬರಿ.

ಪ್ರದರ್ಶನ ಮಾಡುತ್ತಿವೆ. ಈ ಮೊದಲೇ ಸೂಚಿಸಿರುವಂತೆ, ಶ್ರೀರಾಮಕೃ
ಪರಮಹಂಸರು, ಶ್ರೀ ವಿವೇಕಾನಂದರು, ಶ್ರೀ ಅರವಿಂದ ಯೋಗಿಗಳು ಈ ಮ
ಪುರುಷರ ಬೋಧೆಗಳಿಂದ ಪ್ರಭಾವಿತವಾದ ಅವರ ವ್ಯಕ್ತಿತ್ವವು ತನ್ನ 'ಪೂರ್ಣದೃ
ಯಿಂದ ಚಿರಂತನ ಸತ್ಯಗಳನ್ನು ಮತ್ತೆ ಕಂಡಿದೆ: ಆ ಕಂಡ ಕಾಣ್ಕೆಯ 'ಸತ್ಯ
ಸತ್ಯ ಕಥನ'ವೆ 'ಶ್ರೀ ರಾಮಾಯಣ ದರ್ಶನಂ'; 'ಕುವೆಂಪು ಕಾಣ್ಕೆ'ಯ
ಪ್ರತಿಬಿಂಬಿಸುವ ಮಹಾಕೃತಿ; ಕನ್ನಡ ಸಾಹಿತ್ಯ ಭಂಡಾರಕ್ಕೆ ಕುವೆಂಪು ಅರ್ಪಿ
ಕಾಣಿಕೆಗಳಲ್ಲಿ ಅನರ್ಘ್ಯವಾದ ಕೃತಿರತ್ನ.

ಕುವೆಂಪು ಅವರ ಕಾಣ್ಕೆಯನ್ನು ಸೂಚಿಸಿದಂತೆ, ಕನ್ನಡ ಸಾಹಿತ್ಯಕ್ಕೆ ಅವ
ನೀಡಿರುವ ಕಾಣಿಕೆಗಳನ್ನು ನಿರ್ದೇಶಿಸುವುದು ಮಾತ್ರ ಈ ಕಿರಿಯ ಬರಹದ ಹ
ನಲ್ಲಿ ಸಾಧ್ಯ; ಹಾಗೂ ಉಚಿತ. ಮೊದಲನೆಯದಾಗಿ, ಪ್ರತಿ ಸಾಹಿತ್ಯ ಪ್ರಕಾರಕ
ಉತ್ತಮ ನಿದರ್ಶನ ಎನ್ನಬಹುದಾದ ಕೃತಿಯಿಂದ ಅಲಂಕೃತವಾದ ಅವರ ಶ್ರೀ
ಕೃತಿಸಮುದಾಯವೆ ಒಂದು ಅಮೂಲ್ಯವಾದ ಕಾಣಿಕೆ; ಅವುಗಳಲ್ಲಿ, ಕನ
ಸಾಹಿತ್ಯಕ್ಕೆ ಒಂದು ಹೊಸತನವನ್ನು ನೀಡಿರುವ ಕೃತಿಗಳೂ ಇವೆ. ಮು
ಸ್ಫೂರ್ತಿ 'ಶ್ರೀ' ಯವರದ್ದೇ ಆದರೂ, ಹೊಸ ಕನ್ನಡದ ಅನೇಕ ತರುಣ ಕವಿಗ
ತಮ್ಮ ಛಂದಸ್ಸಿನ ಪಾಠವನ್ನು ಕುವೆಂಪು ಕೃತಿಗಳಲ್ಲಿ ಮೊದಲು ಮಾಡಿ, ಅಲ್ಲಿ
ವಿರಮಿಸಬೇಕಾಗಿದೆ. ಅವರಿಟ್ಟ ಲಯದ ಹೆಜ್ಜೆಗಳನ್ನು ಬಹು ಸಂಖ್ಯೆಯ ತರ
ಕವಿಗಳು ಮೀರಿಸಲಾಗಿಲ್ಲ. ಇಂದಿನ 'ನವ್ಯಕವಿ'ಗಳೆನ್ನಿಸಿಕೊಂಡವರು ಕ
ಛಂದಸ್ಸಿನ ವಿಷಯದಲ್ಲಿ ಕುವೆಂಪು ಅವರು ಕೈಕೊಂಡ ಕೆಲವು ಪ್ರಯೋಗಗಳ
ಸ್ವೀಕರಿಸಿ ಹೆಚ್ಚು ವ್ಯಾಪಕವಾಗಿ ಮಾಡಿದ್ದಾರೆ. ಹೀಗೆ, ಹೊಸ ಕನ್ನಡ ಛಂದಸ್ಸಿ
ಬೆಳವಣಿಗೆಯಲ್ಲಿ 'ಶ್ರೀ' ಯವರ ಕೃತಿಗಳಿಗೆ ಚಾರಿತ್ರಿಕ ಮಹತ್ವ ಮೌಲ್ಯಗಳಿದ್ದ
ಕುವೆಂಪು ಕೃತ ಕವನಗಳಿಗೆ ಪ್ರಾಚುರ್ಯ-ಪ್ರಭಾವ ಕಾರಕತ್ವ ಮಹತ್ವವಿದೆ. ನ
ನವೀನವಾದ ಮಂಜುಳ ಛಂದೋ ಮುದ್ರಿಕೆಗಳು ಕುವೆಂಪು ಕನ್ನಡಕ್ಕೆ ಕೊಟ್ಟಿರ
ಒಂದು ದೊಡ್ಡ ಕಾಣಿಕೆ. 'ಸಾನೆಟ್' ಪದ್ಯ ಜಾತಿಯ ವ್ಯಾಪಕ ಪ್ರಯೋ
ಮಹಾಛಂದಸ್ಸಿನ ನಿರ್ಮಿತಿ, ಸುಭಗಪ್ರಾಸ ಪ್ರಯೋಗ, ಭಾವಾನುಗುಣವಾ
ಲಯ-ವಿನ್ಯಾಸ—ಈ ಕೆಲವು ವಿಶೇಷಾಂಶಗಳನ್ನು ಈ ಸಂದರ್ಭದಲ್ಲಿ ಎತ್ತಿ ಹೇ
ಬಹುದು.

ಕುವೆಂಪು ಅವರ ಇನ್ನೊಂದು ಮುಖ್ಯ ಕಾಣಿಕೆ—ಮಹೋಪಮೆ.* ಇ

---

*ನೋಡಿ: ಇದೇ ಲೇಖಕನ—ಕನ್ನಡಕ್ಕೆ ಶ್ರೀ ಕುವೆಂಪು ಅವರ ಕಾಣಿಕೆ. ಮಹೋಪಮೆ—ಎಂಬ ವಿಮರ್ಶಾ ಲೇಖನ (ಉಡುಗೊರೆ, ೧೯೫೬. ಮಹಾರಾಜ ಕಾಲೇಜು ವಿದ್ಯಾರ್ಥಿಗಳು ಪ್ರಕಟಿಸಿದ ಸಂಭಾವನಾ ಗ್ರಂಥ).

ನ್ನಡ ಕಾವ್ಯ ಶ್ರೀಗೆ ಅವರು ತೊಡಿಸಿದ ಹೊಚ್ಚಹೊಸ ಒಡವೆ. ಅವರ 'ಚಿತ್ರಾಂ
ದಾ' ಎಂಬ ದೀರ್ಘ ಕಾವ್ಯದಲ್ಲಿಯೂ, 'ರಾಮಾಯಣ ದರ್ಶನ'ದಲ್ಲಿಯೂ ಈ
ೂಸ ಅಲಂಕಾರದ ಸಾರ್ಥಕ ಪ್ರಯೋಗವನ್ನು ಕಾಣಬಹುದು.

ಕಾವ್ಯ ವಿಮರ್ಶೆಯಲ್ಲಿ ಕುವೆಂಪು ಒಂದು ಹೊಸ ದಿಗ್ದ್ವಾರವನ್ನು ದಾಕಿ
ರು ಎನ್ನಬಹುದು: ಅದು ಕವಿಯಾದ ಸಹೃದಯನ ಸುಂದರ ರಾಜಮಾರ್ಗ:
ದ್ರಾನ್ವೇಷಣ ಶೀಲನಾದ ನೀರಸ ವಿಮರ್ಶಕನ ಕ್ಷುದ್ರಮಾರ್ಗವಲ್ಲ. ರಸ ಗ್ರಹಣ
ಾಮರ್ಥ್ಯವನ್ನು ಪಡೆಯಬಯಸುವ ಕನ್ನಡ ಓದುಗನಿಗೆ ಅವರ ವಿಮರ್ಶೆಗಳೇ
ಂದು ರಸದೂಟ; ನಿಜವಾಗಿ 'ಕಾವ್ಯವಿಹಾರ'. ಈ ಕಾವ್ಯ ವಿಮರ್ಶೆಗಿಂತ
ೆಚ್ಚಾಗಿ ಕಾವ್ಯಮೀಮಾಂಸೆಯಲ್ಲಿ ಅವರು ಸಾಧಿಸಿರುವ ಕಾರ್ಯ ಮಹತ್ವದ್ದು.
ಾವ್ಯವಿರಚನ ಮತ್ತು ಕಾವ್ಯವಿಮರ್ಶನ ಕಾರ್ಯಗಳಿಗೆ ಅವರು ಕಲ್ಪಿಸಿರುವ ಎರಡು
ೂತನ ಪ್ರಸ್ಥಾನಗಳು—ಪೂರ್ಣದೃಷ್ಟಿ ಮತ್ತು 'ಪ್ರತಿಮಾ ವಿಧಾನ—ಕಾವ್ಯ
ಾಮಾಂಸೆಗೇ ಅವರಿತ್ತಿರುವ ಎರಡು ಹೊಸ ನಿಕಷಗಳು. ಈ ಅಮೂಲ್ಯ
ಾಣಿಕೆ ಅವರ 'ಕಾಣ್ಕೆ'ಯ ಫಲ.

ಒಟ್ಟಿನಲ್ಲಿ, ಕುವೆಂಪು ಕನ್ನಡಕ್ಕಿತ್ತಿರುವ ಕಾಣಿಕೆಗಳೆಲ್ಲವೂ, ಅವರ ದಿವ್ಯವಾದ,
ಶುದ್ಧವಾದ, ಸಂಪೂರ್ಣವಾಗಿ ಭಾರತೀಯವಾದ 'ಕಾಣ್ಕೆ'ಯ ದಿವ್ಯ ಪ್ರಭೆಯಲ್ಲಿ
ಳೆದ ಕಾವ್ಯ ವೃಕ್ಷದ ರಸಪೂರ್ಣ ಫಲಗಳು. ಭಾರತದ ಸಂಸ್ಕೃತಿ ಪುನರುಜ್ಜೀವನ
ೂಳ್ಳಬೇಕಾದ ಈ ಪರ್ವಕಾಲದಲ್ಲಿ ಕುವೆಂಪು ಅವರ ಕೃತಿರಾಶಿ ಹಿರಿಯ ಪಾತ್ರ
ನ್ನು ನಿರ್ವಹಿಸುವುದರಲ್ಲಿ ಸಂದೇಹವಿಲ್ಲ. ಆದ್ದರಿಂದಲೇ, ಅವರು ಕೇವಲ ಕನ್ನಡದ
ವಿಯಲ್ಲ; ಭಾರತೀಯ ಕವಿಯೂ ಹೌದು. ಸ್ವತಂತ್ರ ಭಾರತದ ಭಾರತಿ
ೋಲಗದಲ್ಲಿ ಕನ್ನಡದ ವಾಣಿಯ ಇಂಚರವೂ ಕೇಳಿಬರುವಂತೆ ಮಾಡಿದ ಯಶಸ್ಸು
ುವೆಂಪು ಅವರದ್ದು. ಕನ್ನಡಕ್ಕೆ ಈ ಗೌರವವನ್ನು ತಂದುಕೊಟ್ಟ ಈ ಕವಿವರ್ಯರಿಗೆ
ನ್ನಡಲೋಕ ಕೃತಜ್ಞವಾಗಿರಬೇಕು. ಕನ್ನಡ ತಾಯಿ ತನ್ನ ಈ ನಚ್ಚಿನ ಕುವರ
ಂದ ಇದಕ್ಕಿಂತ ಹೆಚ್ಚಿನ ಗೌರವವನ್ನು, ವಿಶ್ವಮಾನ್ಯತೆಯನ್ನು, ಪಡೆಯುವಂತಾಗ
ಂದು ಮನಃಪೂರ್ವಕವಾಗಿ ಹಾರೈಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಧೀರ ಧಿಷಣೆ - ಕುವೆಂಪು

ಡಾ॥ ಜಿ. ಮರುಳಸಿದ್ಧಯ್ಯ, ಎಂ. ಎ., ಪಿ. ಹೆಚ್. ಡಿ.

—०—

ಮಲೆನಾಡಿನ ಮಡಿಲಲ್ಲಿ ಹುಟ್ಟಿದ ಶ್ರೇಷ್ಠ ಶಿಶು, ಮೈಸೂರಿನ ಹಾಗೂ ಭ
ತದ ಶಾರದಾ ಪೀಠಗಳ ಮಂಗಳತಮ ಮನೀಷಿ. ಬಾಲ್ಯದಿಂದಲೂ ದಿವ್ಯ ತೇಜ
ವರಕವಿ ಕುವೆಂಪು ತಮ್ಮದೇ ಆದ ವೈಶಿಷ್ಟ್ಯವನ್ನು ಬೆಳೆಸಿಕೊಂಡು ಬಂದವ
ಕಮಲಪತ್ರ ಮಧ್ಯಸ್ಥಿತ ಜಲಬಿಂದುವಿನಂತೆ ಜನಜಂಗುಳಿಯ ಮಧ್ಯೆ ಇದ್ದರೂ ಇ
ಪ್ರಕೃತಿ ಅವರದು. ರಾಜಹಂಸವು ರಸಮಿಶ್ರಣದಿಂದ ಸಾರವನ್ನು ಮಾತ್ರ ಸ್ವೀ
ಸುವಂತೆ. ಆವರಣದ ಮಿಶ್ರ ಸಂಸ್ಕೃತಿಗಳೇನೇ ಇರಲಿ–ಕೇವಲ ಋಜುಮಾರ್ಗ
ತಮ್ಮ ರಾಜಮಾರ್ಗವನ್ನಾಗಿ ಮಾಡಿಕೊಳ್ಳಬಲ್ಲ ಹಲವೇ ವ್ಯಕ್ತಿಗಳಲ್ಲೊಬ್ಬ
ನಮ್ಮ ಕವಿ ಕುಲಗುರು ಕುವೆಂಪು ಜಗದ ಝಂಝಾಟವೇನೇ ಇರಲಿ, ಉದಯ
ಗುಹಾತಪಸ್ವಿ ಎಂದೂ ಉದಯೋನ್ಮುಖಿಯೇ ಅಧ್ಯಯನ, ಅಧ್ಯಾ
ಮತ್ತು ಕವನ–ಇವೇ ಅವರ ತ್ರಿಗುಣ. ಮನೋಮಯ–ವಿಜ್ಞಾನಮಯ–ಆನ
ಮಯ ಕೋಶಗಳೇ ಅವರ ಆಸ್ಥಾನ. ಉಳಿದ ಸ್ಥಾನಗಳೆಲ್ಲಾ ಅವರ ಪ್ರಾಕ
ಶರೀರಕ್ಕೆ.

ವಿದ್ಯಾರ್ಥಿಯಾಗಿ, ಅದ್ಯಾಪಕ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಬ
ಮಂದಿ ಸಂದಿದ್ದಾರೆ. ಆದರೆ ಕುವೆಂಪುವಂಥ ಧೀರದಿಷಣೆಗಳಾರನ್ನು ನಾ
ಕಂಡಿಲ್ಲ. ಇವರ ಮರ್ತ್ಯದ ಮಣಿಹ ಎಲ್ಲರಲ್ಲಿಲ್ಲ. ಅವರ ನಡೆ ವಿಶ್ವತೋಮ
ಯಲ್ಲದಿದ್ದರೂ ವಿಶ್ವೈಕಮುಖಿ. ಈ ಮಹಾ ವ್ಯಕ್ತಿಯನ್ನು, ಅವರ ಬೃಹನ್ಮ
ಕೃತಿಗಳನ್ನೂ ನಾವು ಅರ್ಥ ಮಾಡಿಕೊಳ್ಳುವುದೂ ಕಷ್ಟ. ಬಣ್ಣಿಸುವುದಿನ್ನೂ ಕ

ನಾನು ರಸ ಋಷಿಯಲ್ಲ, ಕವಿಯಲ್ಲ, ಭಾವುಕನಲ್ಲ, ಸಾರಗ್ರಾಹಿಯ
ಅಲ್ಲ. ಅಲ್ಲದೆ ನನಗೆ ಅವರ ಸಾನ್ನಿಧ್ಯ ಅಷ್ಟೇನೂ ಹೆಚ್ಚಿಗೆ ನಿಕಟವಾಗಿ ಲಭಿ
ಸುಯೋಗವೂ ಇಲ್ಲ. ನನ್ನ ಮಾನದಂಡದಿಂದ ಅವರನ್ನಳೆಯ ಹೊರಟವ
ಹೊರತು, ಅವರ ನಿಜಸ್ವರೂಪವನ್ನು ರೂಪಿಸುವುದಕ್ಕಲ್ಲ. ಅವರಲ್ಲಿ ನಿಮ
ಭಕ್ತಿಯುಳ್ಳವರಲ್ಲಿ ನಾನೊಬ್ಬ. ಅವರ ಕವಿತೆ ಕಾವ್ಯಗಳನ್ನು ತಕ್ಕಮಟ್ಟಿಗೆ ಅರ
ಕೊಂಡಿದ್ದೇನೆ. ಅವರ ಮೇರುಕೃತಿಗಳಿಗೆ ಮಣಿದಿದ್ದೇನೆ. ನನ್ನ ಮನೋಭೂ
ಯಲ್ಲಿ ಅವರ ಪವಿತ್ರ ಸತ್ವಕ್ಕೆ ನಾನು ಮಣಿವುದು, ಉಳಿದೆಲ್ಲಕ್ಕಿಂತ ಅವರ
ಪ್ರಕೃತಿಗೆ.

ವಿಶ್ವವಿದ್ಯಾನಿಲಯ ಮೊನ್ನೆಮೊನ್ನೆ ಸ್ವಾಯತ್ತ ಸಂಸ್ಥೆಯಾಯಿತು.
ಅ ಮುನ್ನ ಅದರ ಪರಿಸರದಲ್ಲಿ ಕುವೆಂಪು ಒಬ್ಬ ಅಧ್ಯಾಪಕ ಭಾರ್ಗವರಾಗಿದ್ದುದೂ
ಉಂಟು. ಇಂಗ್ಲಿಷ್ ಬಾದಶಾಹಿತನದ ದುರಾಕ್ರಮಣದಿಂದ ಕನ್ನಡ, ಕನ್ನಡತನ
ಕ್ಕಾಗಿ ಹೆಣಗಾಡುತ್ತಿದ್ದ ಕಾಲ ಅದು.

"ಜಯಕರ್ಣಾಟಕ ಮಾತೆ" ಎಂದರೆ "ಮುಚ್ಚುಬಾಯಿ" ಎನ್ನುತ್ತಿದ್ದ ಕಾಲ. ಕನ್ನಡ ಕವಿಗಳಲ್ಲಿ ಕೆಲರು ಸ್ವಾರ್ಥಕ್ಕಾಗಿ ತಾಯಿಯನ್ನು ಒತ್ತೆಯಿಟ್ಟು ಆಭಾಸ ಹರಿತನದ ಅಮಲಿನ ತುಮುಲದಲ್ಲಿ ಕುವೆಂಪು ಅವರ ಜಾಗ್ರತ್ಪಂಥವನ್ನು ವ್ಯರ್ಥಗೊಳಿಸುವ ವಿಷ ನಿಮಿಷಗಳಿಲ್ಲದಿಲ್ಲ. ಸ್ವಾರ್ಥ, ಜಾತೀಯತೆ, ಪ್ರಗತಿ ದ್ವೇಷ, ವ್ಯಕ್ತಿಕಷಾಯ ಇತ್ಯಾದಿಗಳು ರಾಜಕೀಯದನಸ್ನೂ ವಿ. ವಿ. ನಿಲಯವನ್ನು ಹೊಲಸು ಮಾಡಿದ್ದರೂ ಸಹ ಅದಾವುದಕ್ಕೂ ಜಗ್ಗದೇ ಕುಗ್ಗದೆ, ತನ್ನದೇ ಆದ ವರಿಷ್ಠ ವ್ಯಕ್ತಿತ್ವವನ್ನು ಎಂದೆಂದಿಗೂ ಉಳಿಸಿ ಬೆಳೆಸಿಕೊಂಡು ಬಂದ ಇಂಥ ಹುದ್ದೆಗಾರ ರತ್ನ ನಾನು ಕಾಣೆ. ಮಂತ್ರಿಮಂಡಲವನ್ನೇ ಧಿಕ್ಕರಿಸಿ ಎಚ್ಚರಿಸಿದ ಈ ಭಾರ್ಗವ ಭಗತ್ ಸಿಂಹನಿಗಿಂತ ಕಡಿಮೆಯಲ್ಲ. ಯುವ ಜನ ಜಗತ್ ಜಾಗ್ರತ ಪ್ರೇಮಿಗೂ ಕಡಿಮೆಯಲ್ಲ. ತೂಕವೇ ಇಲ್ಲದ ನಮ್ಮಂಥವರಿರಲಿ, ಅತಿರಥ ಮಹಾತಿರಥರೂ ಆಸಾಹೇಬ–ಈ ಸಾಹೇಬರ ಬಾಲಬಡುಕರಾಗಿದ್ದು ಕೇವಲ ವಿಭೂತಿ ಪೂಜೆಯಿಂದ ಮೇಲೇರಿ, ಕಾಲಪುಣ್ಯ ತೀರಿ ಕೆಳಗಿಳಿದುದನ್ನು ನಾಬಲ್ಲೆ. ಆದರೆ, ಏನೇ ಬರಲಿ, ಏನೇ ಆಗಲಿ, ಕಂಡಕಂಡ ಕಲ್ಲು-ಮರಕ್ಕೆಲ್ಲಾ ಯಾರೇ ಕೈಮುಗಿಯಲಿ, ಇಂಥ ಸತವೃಷ್ಟ ಜೀವನಕ್ಕೆ ಸೊಪ್ಪು ಹಾಕದೆ ಅಂತೆಯೇ ಒಬ್ಬರ ಮನವನ್ನೂ ನೋಯಿಸದೆ, ತಾನು–ತನ್ನ ತಪಸ್ಸು ಇಷ್ಟರಲ್ಲೇ ಇರುವೆನೆಂಬ ಇಂಥ ಧೀರತನು ಸಾರಸ್ವತ ನನಗಿನ್ನೂ ಸಿಕ್ಕಿಲ್ಲ, ಸಿಗಲಿಕ್ಕಿಲ್ಲ. ಇವರ ಸೌಜನ್ಯ ಸಾಮ್ಯದ ಸೀಮೋಲ್ಲಂಘನೆ ಮಾಡಿಲ್ಲ. ಚಾರಿತ್ರ್ಯ-ಶುದ್ಧ, ಸ್ಥಿತಪ್ರಜ್ಞನ ಯಜ್ಞ ವಾಣಿ ಅಂದೂ ಇಂದೂ ಎಂದೂ ಒಂದೇ. ನಿಲುವಿನಲ್ಲಿ ಬದಲಿಲ್ಲ. ಮಾತಿನಲ್ಲಿ ಮಿತಿ, ನಡೆನುಡಿಗಳಲ್ಲಿ ಧೀರ ಏಕತಾನ. ನೋಡಿದರೆ ತನ್ನ ಪ್ರಭಾವದಿಂದ ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡುವ ಕಾಯಕಲ್ಪ ಎಂತೆಂಥ ಸಾಹೇಬತನವೂ ಈ ಸಾರಸ್ವತ ಬ್ರಹ್ಮಮೂರ್ತಿಯ ಮುಂದೆ ಕೇವಲ ಮಾಂಡಲಿಕ ತನದಲ್ಲಿ ನಿಲಿಸುವುದು, ಈ ನಿಲುವು, ಎಲ್ಲ ಕವಿಗಳಿಗೂ, ದಾರ್ಶನಿಕರಿಗೂ ವಿಭೂತಿಗಳಿಗೂ ಬಾರದ ವಿಭೂತಿ. ಇದಕ್ಕಾಗಿ, ಈ ಸ್ವಯಂ ಸಂಪಾದಿತ ಸ್ವಯಂಸಾಚಾರ್ಯ ಪದವಿಗಾಗಿ ಈ ಧೀರಧಿಷಣರಿಗೆ "ನಮೋ ನಮಃ" ಎಂಬೆ.

ನಿರ್ಹಾರಾಕಾರಿಣೀ ತೃಣಮಿವ ತಿರಸ್ಕಾರ ವಿಷಯಃ (ವಿಶಾಖದತ್ತ.)

They also sevre him who stand and wait·

ಶ್ರೀ ಕುವೆಂಪುವಿನ ಸೌಂದರ್ಯೋಪಾಸನೆ

ಶ್ರೀ ಜಿ. ಬ್ರಹ್ಮಪ್ಪ ಎಂ. ಎ.,

—: :—

ಕುವೆಂಪು ನಿಸರ್ಗದ ತೋಳತೆಕ್ಕೆಯಲ್ಲಿ ಬೆಳೆದ ಮಹಾಕವಿ. ಮಲೆನಾಡಿ ವರಪುತ್ರನಾದ ಈ ಕವಿ ತಾವಿರುವ ಕಡೆಯಲ್ಲೇ ಪ್ರಕೃತಿಯ ಸೌಂದರ್ಯವನ ಸವಿದು ರಸಸ್ಫೂರ್ತಿಗೊಳ್ಳುವ ವರಕವಿ. ನೆನೆದಾಗ ಸಮಾಧಿಸ್ಥನಾಗುವ ಮಹರ್ಷಿ ಯಂತೆ ಈ ರಸಋಷಿ ಬೇಕೆಂದಾಗ ರಸಸಮಾಧಿಯಲ್ಲಿ ತನ್ಮಯರಾಗಿ ಹೋಗಬಲ್ಲರ ಭೂಗೋಳದಲ್ಲಿ ಮುಕ್ಕಾಲುಭಾಗ ನೀರ ರಾಶಿಯಿರುವುದು ಸರಿಯಷ್ಟೆ. ಅದಕ್ಕೆ ಮಿಗಿಲಾಗಿ ನಮ್ಮ ಭೂಗೋಳದ ಮೇಲೂ ಕೆಳಗೂ ಅಷ್ಟೇಕೆ ಎಲ್ಲ ಕಡೆಯ ಸೌಂದರ್ಯವಾರಾಶಿಯಿಂದ ಆವೃತವಾಗಿರುವುದನ್ನು ಶ್ರೀ ಕುವೆಂಪುವಿನಂಥ ಪ್ರತಿಭ ಸಂಪನ್ನರು ಮಾತ್ರ ದರ್ಶಿಸಬಲ್ಲರು. ಮಿಂಚುತಮಿಂಚುತ ಈ ರಸಋಷಿ ಮಿಂಚ ಹುಳುವಾಗಿ, ಹಿಗ್ಗುತ ಹಿಗ್ಗುತ ಇವರು ಹೀರೇ ಹೂವಾಗಿ, ಹಸಿರ ನಡು ವಿರಾಜಮಾನರಾದ ತಮ್ಮ ಕಣ್ಣೆತ್ತರನ್ನೂ ಹಸುರಾಗಿಸಿಕೊಂಡು ಲಂಪಟತನವ ಕಾಳಿಂಗವನ್ನು ತೊತ್ತಳ ತುಳಿಯುತ್ತ ಕವಿತಾ ಜನಾರ್ದನರಾಗಿ ವಿರಾಜಿಸುತ್ತಿ ವರು. ಭಾವಗೀತೆಗಳ ವೇಣುಗಾನದಲ್ಲಿ ಕನ್ನಡಾಂಬೆಯನ್ನು ಕುಣಿಸಿರುವ ರಾಮಾಯಣ ದರ್ಶನವೆಂಬ ಆಧ್ಯಾತ್ಮಿಕ ಪಾಂಚಜನ್ಯವನ್ನು ಮೊಳಗಿ ಭಾರತಾಂ ಯನ್ನು ಎಚ್ಚರಗೊಳಿಸಿರುವರು! ಇಂಥ ವಿಶ್ವಕವಿ ಯುಗಕ್ಕೆ ಒಬ್ಬರು ಬಂದರ ನಾವು ಧನ್ಯರು, ನಮ್ಮ ರಾಷ್ಟ್ರ ಧನ್ಯ!

(ಒಂಟಿಕೊಪ್ಪಲಿನ ಜಲಾಶಯದ ದಿಬ್ಬದಲ್ಲಿ ನಿಂತು ಕುವೆಂಪು ಭಾವಸಂ ತ್ಸರದ ಶುಕ್ಲಪಕ್ಷದ ಚೈತ್ರಪಂಚಮಿಯ ಸೂರ್ಯೋದಯ ಸಮಯದಲ್ಲಿ) ತೇಜ ಯಾಗಿ ರೂಪಾಂತರಗೊಂಡುದನ್ನು ಹೃದಯಸ್ಪರ್ಶಿಯಾಗುವಂತೆ "ಪ್ರಕೃ ಉಪಾಸನೆ"ಯಲ್ಲಿ ಇವರು ಬಣ್ಣಿಸಿರುವರು.

ದೇವೇಂದ್ರದಿಕ್ಕಿನ ದಿಗಂತದಿಂ ಮೂಡಿದನು
ಕಿರಣವಿಲ್ಲದ ರಕ್ತಬಿಂಬದ ದಿವಾಕರಂ–
ಕುಂಕುಮದ ಪುಣ್ಯೋದಕದಿ ಮಿಂದು ಬಂದಂತೆ,
ಯಜ್ಞಕುಂಡದಿನೆದ್ದ ಕೆಂಡ ದೇವತೆಯಂತೆ,
ಮೂಷೆಯಲಿ ಕಾಯ್ದ ಕಬ್ಬಿಣದುಂಡೆ ಚಂಡಂತೆ,

ಕತ್ತಲಲಿ ಕತ್ತರಿಸಿದುರಿಯ ವರ್ತುಲದಂತೆ
ಕವಿಯ ಭಾವಾವೇಶವೊಂದು ಹೆಗ್ಗಡಿಯಂತೆ. *

ಕವಿತಾ ಕಲ್ಪವೃಕ್ಷವಾದ ಕುವೆಂಪು ಬಾಯ್ದೆರೆದಾಗ ಕಲ್ಪನೆಯ ಕಾಮನ ಬಿಲ್ಲು ಮೂಡಿಬರದಿರದು: ಸಪ್ತವರ್ಣಗಳ ಸಮ್ಮೇಳನ ನೆರೆಯದಿರದು !

ಸೂರ್ಯೋದಯವನ್ನು ಶ್ರೀ ಕುವೆಂಪು ವೀಕ್ಷಿಸುತ್ತ ನಿಂತಾಗ ಇವರ ಪ್ರತಿಭಾ ನೇತ್ರ ಅರಳಿತು. ಇವರ ಕಲ್ಪನಾ ಪಕ್ಷಿ ಗರಿಗೆದರಿ ನಿಮಿರಿತು !

ಮಿಂಚುಹರಿವಂತೆ ನೆತ್ತರು ಚಿಮ್ಮಿ ದೇಹದಲಿ
ತೇಜಸ್ವಿಯಾದೆ ನಾಂ ಸೂರ್ಯನಂತೆ !

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ ಮೇಣಾವುದಾರಾಧನೆಯು
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ ?

ಶ್ರೀ ಕುವೆಂಪುರವರಿಗೆ ಸೌಂದರ್ಯೋಪಾಸನೆಯೇ ಶಿವೋಪಾಸನೆಯಾಗಿದೆ. ಶಿವನ ಸೌಂದರ್ಯವನ್ನು ನೋಡುತ್ತ ನೋಡುತ್ತ ಇವರು ಸತ್ಯದರ್ಶನ ಮಾಡುವರು. ಇಂಥವರನ್ನೇ ರಸಋಷಿಯೆನ್ನುವುದು. ಶಿವನ ಸತ್ಯದರ್ಶನ ಮಾಡುತ್ತ ಮಾಡುತ್ತ ಅವನ ಸೌಂದರ್ಯವನ್ನು ಕಾಣುವಂಥವರನ್ನು ಮಹರ್ಷಿಯೆನ್ನುವರು.

ಸೌಂದರ್ಯದ ಉಪಾಸನೆಯಲ್ಲಿ ತನ್ಮಯರಾದ ಇವರಿಗೆ ಲೌಕಿಕಾಸಕ್ತಿಗಳೆಲ್ಲ ಹೇಯವಾಗಿ ಭಾಸವಾಗುವುವು.

ನೋಡದೋ : ನನ್ನ ಪದತಲಲಿ
ಎಂಬಂತೆ ನಗರ ನಾಗರೀಕತೆಯ ಜೀವನಂ
ಹಬ್ಬಿ ಬಿದ್ದಿದೆ, ತನ್ನ ನೂರಾರು ಬಾಯ್ಗಳಿಂ
ಕೈಗಳಿಂ ಮೈಗಳಿಂ ಕಣ್ಗಳಿಂ ಕಾಲ್ಗಳಿಂ,

* ಪಕ್ಷಿಕಾಶಿ. ಪು. ೨೧

ನಖದಂಷ್ಟ್ರ ಭೀಷಣ ಪೆಡಂಭೂತವನು ಹೋಲಿ !

....
ಯಾವ ಹೃದಯದ ಮನುಜರಿಹರಿಲ್ಲಿ ? ನನ್ನವೋಲ್
ಯಾರಿದೀ ಉದಯವನು ನೋಡುತಿಹರೇನು ?

ಲೋಗರು ತಮ್ಮ ಬಾಳನ್ನೆಲ್ಲ ನಾನಾ ವಿಷಯ ವಾಸನೆಗಳಲ್ಲಿ ಅದ್ದಿ ವಿರೂಪಗೊಳಿಸಿಕೊಳ್ಳುತ್ತಿರುವರಲ್ಲ ಎಂದು ಈ ರಸಋಷಿ ವಿಶ್ವಾನುಕಂಪದ ನಿಟ ಸಿರನ್ನು ಬಿಟ್ಟಿರುವರು. ಯಾವು ಯಾವು ದನ್ನೋ ತಲೆಗೆ ಹಾಕಿಕೊಂಡು ಜ ಸಾಮಾನ್ಯರು ಮನೆಗೆ ಬಂದ ಸೌಂದರ್ಯ ಮಹಾಲಕ್ಷ್ಮಿಯನ್ನು ಕಡೆಗಣಿಸುತ್ತಿರು ರಲ್ಲ ಎಂದು ಈ ಕವಿ ನೊಂದಿರುವರು. ಹುಟ್ಟು ಕುರುಡರನ್ನು ಕಂಡು ಕಣ್ಣಿ ವರು ಪರಿತಪಿಸುವಂತೆ ಈ ಕವಿ ರಸಲೋಚನ ವಿಹೀನರಿಗಾಗಿ ಮರುಕ ಪಟ್ಟಿರುವ

ಶಿವಶಿವಾ, ಕಣ್ದೆರೆದು
ಪ್ರಕೃತಿ ಸೌಂದರ್ಯಮಂ ಭಾವನೋಜ್ಜ್ವಲವಾಗಿ
ನೋಡದಿಹ ಬಾಳೊಂದು ಬಾಳಲ್ಲ! "ಸೊಬಗಿನಲಿ
ಶಿವನಿಹನು; ಶಿವನೆ ಸೊಬಗಾಗಿಹನು" ಎನಿತೊರೆಯೆ
ಈ ವಚನ ಪುನರುಕ್ತಿಯಾದೀತು ? ಹಳಸೀತು ?*

ಇಲ್ಲಿ ಕುವೆಂಪುವಿನ ಕವಿ ಹೃದಯವನ್ನು ನಾವು ಕಾಣಬಹುದು. ಮಾ ನಾಗಿ ಹುಟ್ಟಿದಮೇಲೆ ತನ್ನ ರಸಕೋಶವನ್ನು ತುಂಬಿ ತುಳುಕಿಸಿಕೊಳ್ಳಬೇಕಾದು ಅವನ ಪರಮಧ್ಯೇಯವಾಗಿರಬೇಕು.

....ಲೋಕದಲಿ ದುಃಖವಿರೆ
ಆ ದುಃಖದೊಳಗರ್ಧ ಹೃದಯ ದಾರಿದ್ರ್ಯದಿಂ
ಬಂದಿಹುದು! ಆ ಹೀನ ದೀನ ದಾರಿದ್ರ್ಯಮಂ
ಪರಿಹರಿಸಿ "ದರ್ಶನ"ವ ದಯೆಗೈಯೆ—
ಕಲೆಯಹುದು

ಕಲೆಯಿಂದ ಜಡವು ಚೇತನವಾಗಿ, ಜೀವನದ
ನೀರಸತೆ ಕಿಡಿಯಾಗಿ, ಪ್ರವಹಿಪುದು ನೂತನತೆ,
ಚಿರವಾಗಿ. ಭುವನ ಕವಿವರ ಕನಸಿನವೀ ಸೃಷ್ಟಿ;
ಭುವನ ಶಿಲ್ಪಿಯ ಚಿತ್ರಕೃತಿ; ಭುವನ ಗಾಯಕನ

---

* ಪಕ್ಷಿಕಾಶಿ, ಪು. ೨೩

ಸುಮಧುರ ಮಹಾಗಾನ! ಸವಿಯದಿರೆ, ನೋಡದಿರೆ,
ಕೇಳದಿರೆ, ಬದುಕಿದ್ದರೂ ನಾವು ಸತ್ತಂತೆ!

ಹೃದಯ ದಾರಿದ್ರ್ಯಕ್ಕಿಂತ ಭೀಕರವಾದ ದಾರಿದ್ರ್ಯವಿಲ್ಲ! ಆರ್ಥಿಕ ದಾರಿದ್ರ್ಯವನ್ನು ಅವರಿವರ ಕಾಲುಕಟ್ಟಿ ಪರಿಹರಿಸಿಕೊಳ್ಳಬಹುದು. ಅಮೇರಿಕಾದಿಂದಲೋ ರಷ್ಯದಿಂದಲೋ ಬಂಗಾರವನ್ನು ತಂದು ನಾವು ಶೃಂಗಾರ ಮಾಡಿಕೊಳ್ಳಬಹುದು. ಆದರೆ ಭರತ ಖಂಡದ ಹೃದಯ ದಾರಿದ್ರ್ಯಕ್ಕೆ ಮದ್ದನ್ನು ಎಲ್ಲಿಂದ ತರಬೇಕು? ವಿವೇಕಾನಂದರು ತಾವು ಕಂಡ ಸತ್ಯವನ್ನು ಹೇಳಲು ಹೊರಟಾಗ ಆಸಕ್ತಿಯಿಂದ ಮೊದಲು ಆಲಿಸಿದ ಜನ ಅಮೇರಿಕನ್ನರು. ರವೀಂದ್ರನಾಥ ಠಾಗೂರರ ಪ್ರತಿಭಾ ಸಂಪದವನ್ನು ಕಂಡುಕೊಂಡು ಮೊದಲು ಮೆಚ್ಚಿದವರು ಪಾಶ್ಚಿಮಾತ್ಯರು: ಸರ್. ಸಿ. ವಿ. ರಾಮನ್‌ರವರ ವೈಜ್ಞಾನಿಕ ಸಂಪತ್ತನ್ನು ಕಂಡು ಮೊದಲು ತಲೆದೂಗಿದವರು ಪಾಶ್ಚಿಮಾತ್ಯರು; ಶ್ರೀ ಕುವೆಂಪುರವರು ರಾಷ್ಟ್ರಕವಿಗಳಾದುದು ಭಾರತ ಸರ್ಕಾರದ ಅಕಾಡೆಮಿ ಬಹುಮಾನ ವಿಜೇತರಾದಮೇಲೇನೆ!–ಇವುಗಳನ್ನು ನಾವು ಗಮನಿಸಿದರೆ ನಮ್ಮ ಹೃದಯದಾರಿದ್ರ್ಯ ಎಷ್ಟು ಆಳವಾಗಿ, ಎಷ್ಟು ವಿಸ್ತಾರವಾಗಿ ವ್ಯಾಪಿಸಿಕೊಂಡಿದೆ ಎಂಬುದನ್ನು ನಾವು ಗ್ರಹಿಸಬಹುದು.

ಯಾವುದಕ್ಕೂ ವೇಳೆಯೇ ಇಲ್ಲವೆಂಬ ಪಲ್ಲವಿಯನ್ನು ಹಾಡಿಕೊಂಡು ತಮ್ಮ ಬಾಳನ್ನು ವ್ಯರ್ಥಗೊಳಿಸುತ್ತಿರುವವರನ್ನು, ಇದ್ದಾಗಲೆ ಸತ್ತಂತೆ ವರ್ತಿಸುವವರನ್ನು ಕಂಡು ಕುವೆಂಪು ಕಂಬನಿ ಸೂಸಿರುವರು.

ಎನಿತು ಶ್ರೀಮಂತರಿಹರೀ ರಾಜಧಾನಿಯಲಿ!
ಅವರೆನಿತು ಕಾಲವನು ಕಳೆಯುವರು ಕಲೆಗಾಗಿ
ಹೇಳಯ್ಯ? *

ಈ ಪ್ರಶ್ನೆ ಮರ್ಮಭೇದಕವಾದುದು. ಹೃದಯ ದಾರಿದ್ರ್ಯ ಶ್ರೀಮಂತರನ್ನೂ ಬಿಟ್ಟಿಲ್ಲವಲ್ಲ!

ಪೃಥ್ವಿಯಲಿ ಕ್ಲೇಶಕಷ್ಟಗಳೆಲ್ಲ ಕೊನೆಮುಟ್ಟಿ
ಸರ್ವರೂ ರಸದ್ರಷ್ಟರಾಗಿ, 'ದರ್ಶನ' ಪಡೆದು,
ಕಾವ್ಯದಾಸ್ವಾದನೆಗೆ, ಸೌಂದರ್ಯ ಸಾಧನೆಗೆ,
ಕಲೆಯ ಆರಾಧನೆಗೆ, ಮನವೀಯುವ ಪುಣ್ಯ
ಸ್ವರ್ಗವೆಂದೈತರುವುದೋ ಕಾಣೆ

ತೀರ್ಥಂಕರ ಭಗವಾನರು ವಿಶ್ವದ ಜೀವಕೋಟಿಯನ್ನೆಲ್ಲ ಒಮ್ಮೆಗೇ ಉದ್ಧರಿಸಲು ಪಣ ತೊಟ್ಟರು. ಸಮವಸರಣದಲ್ಲಿ ಕುಳಿತು ಅವರು ವಿಶ್ವಪರ್ಯಟನನೆಸಗಿ

* ಪಕ್ಷಿಕಾಶಿ ಪುಟ ೨೪

ಪರು. ಒಂದೊಂದು ಜೀವವನ್ನೂ ತೀರ್ಥಂಕರರು ಬಾಯಾರೆ ಕರೆದರು, ಮತ್ತೆ ಮತ್ತೆ ಕರೆದರು! ಆದರೆ ಬಂದವರೆಷ್ಟು ಮಂದಿ? ಬಂದವರಲ್ಲಿ ಧ್ವನಿಯನ್ನು ಆಲಿಸಿದವರೆಷ್ಟು ಮಂದಿ? ಶ್ರೀ ಕುವೆಂಪುವೂ ರಸಧ್ವನಿಯನ್ನು ಮೊಳಗಿಸಿರುವರು. ದಿನದಿನವೂ ಸೌಂದರ್ಯದ ಸಮವಸರಣವಾದ, ರಸದ ಅನುಭವ ಮಂಟಪವಾ ಸೂರ್ಯೋದಯ ಸೂರ್ಯಾಸ್ತಗಳು ಮೈದೋರುತ್ತಿದ್ದರೂ ಎಷ್ಟು ಜನ ಭಕ್ತ ಸಹೃ ಯರು, ಎಷ್ಟು ಜನ ಭಕ್ತ ಸಹೃದಯರು ಈ ದಿವ್ಯ ವಾತಾವರಣದ ಅನುಭಾವ ವನ್ನು ಪಡೆಯುತ್ತಿರುವರು? ಹೃದಯ ದಾರಿದ್ರ್ಯದ ಅಭವ್ಯರಿಗಾಗಿ, ಹೃದಯ ದಾರಿದ್ರ್ಯದ ಭವಿಗಳಿಗಾಗಿ ಕಾರಣಪುರುಷರಾದ ಕವೆಂಪು ಸಂಕಟಪಟ್ಟಿರುವರು.

ಕಣ್ದೆರೆಯೆ ಸ್ವರ್ಗವಿದೆ! ಕಣ್ಮುಚ್ಚೆ ನರಕವಿದೆ!
ಸುಂದರ ಮಹೇಶ್ವರನ ರಸಮಯ ಶರೀರವಿದು
ವಿಶ್ವರೂಪದಿ ನಮಗೆ ತೋರುತಿದೆ. ಜೀವನಂ
ಕ್ಷಣಕ್ಷಣಕೆ ಮುಟ್ಟುತಿಹುದಾತನಂ, ಘ್ರಾಣದಲಿ
ಸ್ಪರ್ಶದಲಿ ರುಚಿಯಲ್ಲಿ, ಶ್ರೋತ್ರದೃಷ್ಟಿಗಳಲ್ಲಿ
ಎದೆ ತುಂಬಿ ಬಾಳುವುದೆ ಪ್ರಾಣ ಕರ್ಪೂರವಂ
ಹೊತ್ತಿಸೆತ್ತಿದ ಮಂಗಳಾರತಿ. *

ಇಲ್ಲಿ ಶ್ರೀ ಕುವೆಂಪುರವರು ರಸವಿಶ್ವರೂಪವನ್ನು ನಮಗೆ ತೋರಿರುವರು ಬಾಳನ್ನೆಲ್ಲ ರಸಮಯ ಮಾಡಿಕೊಳ್ಳುವ ಕಲೆಯನ್ನು ಇಲ್ಲಿ ಚಿತ್ರಿಸಿರುವರು. ಬದ ಕೆಲ್ಲ ಸೌಂದರ್ಯ ಶಿವಪೂಜೆಯಾಗುವಂತೆ ಈ ರಸಋಷಿ ಅಳವಡಿಸಿಕೊಂಡಿರುವರು:

ಮೇಲೇಳು ಸೋದರನೆ,
ಗೆಲುವಿನಿಂದಿದಿರುಗೊಳ್ ಉದಯಿಸುವ ಸೂರ್ಯನಂ
ಗಿರಿಯ ನೆತ್ತಿಯಮೇಲೆ: ನಿನ್ನಮಲ ಹೃದಯದಲಿ
ನಾಳ ನಾಳಗಳಲ್ಲಿ ನೆತ್ತರಾಡಲಿ ಚಿಮ್ಮಿ
ಬಿಸಿಯಾಗಿ; ಎದೆಯುಬ್ಬಿ ಶ್ವಾಸಕೋಶವ ತುಂಬಿ
ಹೊರಬರಲಿ ತಂಪಾದ ನಿರ್ಮಲ ಸಮೀರಣಂ;
ಕಿವಿಹೊಗಲಿ ಹಕ್ಕಿಯುಲಿ; ಹೂಗಂಪು ಮೂಗಿನಲಿ
ಸಂಭೃತಸುವಾಸನೆಯ ನಾಕವಂ ನಿರ್ಮಿಸಲಿ;
ಕಣ್ಣಿಗಾಗಲಿ ದಿವ್ಯ ಸೌಂದರ್ಯ ದರ್ಶನಂ;
ಪ್ರಜ್ಞೆಯಾಧಿಕ್ಯದಿಂ ಪ್ರಜ್ಞೆ ತಪ್ಪುವ ತೆರದಿ

---

* ಪಕ್ಷಿ ಕಾಶಿ ೨೫.

ಭಾವದಾವೇಶದಲಿ ಬಾಳೆಂಬ ದಳ್ಳುರಿಯ
ನಾಲಗೆಯು ನಾಕಸೀಲವ ನೆಕ್ಕುವಂತಾಗೆ,
ಜೀವಗಿರಿ ಶೃಂಗದಲಿ ತುಂಗಗೋಪುರವಾಗಿ
ಮೆರೆಯುಯ್ಯ, ಕಲೆಯ ಮಹಿಮೆಗೆ ಮಹಾ ಸಾಕ್ಷಿಯಾಗಿ!

ಪಂಚೇಂದ್ರಿಯಗಳನ್ನೂ ಸೌಂದರ್ಯಸ್ವಾದನೆಗಾಗಿ ಮೀಸಲಾಗಿಟ್ಟು ಕಲೆಗಾರನಾಗಬೇಕೆಂದು ಶ್ರೀ ಕುವೆಂಪು ಆಶಿಸಿರುವರು. ಭವರೋಗಕ್ಕೆ ಪ್ರಥಮ ಚಿಕಿತ್ಸೆಯನ್ನು ಈ ಮಹಾಕವಿ ಇಲ್ಲಿ ಸೂಚಿಸಿರುವರು. ಸೌಂದರ್ಯೋಪಾಸನೆಯೇ ಭವರೋಗಕ್ಕೆ ನಾವು ಮಾಡಬೇಕಾದ ರಸ ಚಿಕಿತ್ಸೆಯೆಂಬುದನ್ನು ಈ ವಿಶ್ವಕವಿ ಸಾರಿರುವರು.

ಅಳುಕದೀ ಕನ್ನಡಂ

ಪಂಪ ರನ್ನರ್ ಕುಮಾರವ್ಯಾಸ ಲಕ್ಷ್ಮೀಶ
ಹರಿಹರಾದಿಗಳುಸಿರ್ ನಮ್ಮೊಳಿರ್ಪನ್ನೆಗಂ
ಅಳುಕದೀ ಕನ್ನಡಂ, ಅಳಿಯದೀ ಕನ್ನಡಂ,
ಉಳಿವುದೀ ಕನ್ನಡಂ! ಮೊನ್ನೆ ಕಣ್ಬಿಟ್ಟುದೀ
ಪಸುಳೆ ವಿದ್ಯಾನಿಲಯಮಾ ಮುತ್ತ ನುಡಿತಾಯ್ಗೆ
ಪೊಲೆವಾಲಿಸಿತ್ತೊಲಿದು ಸಲಹಿವಪುದೆಂಬಾಸೆ
ನಗೆಗೀಡು, ನಾಣ್ಗೀಡು, ಬೆಳ್ತನಂ! ತಾಯಿಂದೆ
ಪಸುಳೆ ಬಾಳ್: ತಾಯೆರ್ದೆಯೆ ಸಿಸುಗೆ ಕೂಳ್! ಪೆತ್ತಳಂ
ಪೆರ್ದುಳಿವುದೇನರ್ಭಕಂ ಪೇಳ್? ಪ್ರಭೇದವೇನ್
ಗೊತ್ತೆ, ಪಸುಳೆಗೆ ಮತ್ತೆ ಪೇನ್ಗೆ? ನೆತ್ತರುಣೆ ಪೇನ್:
ಪಾಲುಣಲ್ ಪಸುಳೆ. ಕೊಂದು ಸಾವುದು ಕೊನೆಗೆ ತಾನ್
ಪೇನ್; ಬಳ್ದು ಬರ್ದುಕಿಪುದು ತನ್ನಬ್ಬೆಯಂ ಪಸುಳೆ!
ನೆತ್ತರುಣೆ ಪೇನಾಗದೆಂಬೆ ಪಸುಳೆ ತಾನಾಗಲೀ
ಕನ್ನಡಮ್ಮನ ಎರ್ದೆಯ ಅಮೃತ ಜೀವನಪೀಂಟೆ,
ಮರಳಿ ಜೀವಾಮೃತವನೀವ ವಿದ್ಯಾಲಯಂ!

—ಕುವೆಂಪು.

ಬೆರಳ್‌ಗೆ ಕೊರಳ್ ಮತ್ತು ಹೆಬ್ಬೆರಳುಗಳ ತುಲನಾತ್ಮಕ ವಿಮರ್ಶೆ

ಶ್ರೀ ಕೆ. ಆರ್. ಶೇಷಗಿರಿ, ಎಂ. ಎ.

—::—

೧

ಸಾಹಿತ್ಯವು ಜನಜೀವನದ ಪ್ರತಿಬಿಂಬವಾಗಿದ್ದು ಮಾರ್ಗದರ್ಶನವನ್ನೀಯ ಬೇಕು ; ಅದೇ ನಾಟಕವು, ಸಾಹಿತ್ಯದ, ಒಂದು ಪ್ರಾಕಾರವಾಗಿದ್ದು ಗುರಿ ಸಾಧಿಸುವುದರಲ್ಲಿ ಪರಿಣಾಮಕಾರಿಯೆಂಬುದು ಸರ್ವವಿದಿತ. ಅಂತೆಯೇ ಕನ್ನಡ ಸಾಹಿತ್ಯದಲ್ಲಿ, ನಾಟಕಗಳ ಸಂಖ್ಯೆಗೇನೂ ಕಡಮೆಯಿಲ್ಲ. ಆದರೆ ಅವುಗಳಲ್ಲಿ ನಾಟಕರಂಗ ಭೂಮಿಯಲ್ಲಳವಡಿಸುವಂತಹ ಉತ್ತಮ ನಾಟಕಗಳು ಬಹುವಿರಳ.

ರಾಮಾಯಣ ಮಹಾಭಾರತಗಳಿಂದ ಮೊದಮೊದಲು ವಸ್ತುಗಳನ್ನಾರಿಸಿಕೊಂಡು ಪ್ರತಿಭೆಯನ್ನು ಪ್ರದರ್ಶಿಸಿದ್ದುಂಟು: ಅನಂತರ ಸಾಮಾಜಿಕದತ್ತ ಗಮನವನ್ನು ಹರಿಸಿರುವುದು ಕನ್ನಡ ಸಾಹಿತ್ಯದಲ್ಲಿ ಕಂಡು ಬಂದಿದೆ.

ಪ್ರಸ್ತುತ 'ಬೆರಳ್‌ಗೆ ಕೊರಳ್' ಎಂಬ ಕಾವ್ಯ ನಾಟಕದ ವಸ್ತುವು ಮಹಾಭಾರತದ್ದಾಗಿದೆ: ಹಾಗೆಯೇ ಕೈಲಾಸಂ ಅವರ 'Purpose', ಗೋವಿಂದ ಪೈ ಅವರ 'ಹೆಬ್ಬೆರಳು'. ಮುಖ್ಯವಾಗಿ ಹೆಚ್ಚು ಒಂದನ್ನೊಂದು ಹೋಲುವ, ಗುರಿಯನ್ನು ಸಾಧಿಸಲಿರುವ ನಾಟಕಗಳೆಂದರೆ 'ಬೆರಳ್‌ಗೆ ಕೊರಳ್' ಮತ್ತು 'ಹೆಬ್ಬೆರಳು'. "ಕುವೆಂಪುರವರ ನಾಟಕ ಕೃತಿ ರಚನೆಯಲ್ಲಿ ಹಿಮಾಲಯದಲ್ಲಿ 'ಶೂದ್ರ ತಪಸ್ವಿ' ಎಂಬುದು ಒಂದು ಧವಳಗಿರಿ. 'ಬೆರಳ್‌ಗೆ ಕೊರಳ್' ಗೌರಿಶಂಕರ" (1) ಎಂದು ನುಡಿದಿರುವ ವಿಮರ್ಶೆ, ಉಚಿತವಾಗಿದ್ದು ಅರ್ಥವತ್ತಾಗಿದೆ. 'Purpose' ಎಂಬ ನಾಟಕವು ಮಾತ್ರ "ಭಾರತೀಯ ದೃಷ್ಟಿಯಿಂದ ಭಿನ್ನವಾದುದು" (2). ಶ್ರೀ ಗೋವಿಂದ ಪೈ ಯವರ ನಾಟಕ "ಹೆಬ್ಬೆರಳು ಶ್ರೇಷ್ಠವಾದ ನಾಟಕವಾದರೂ ಕೇವಲ ಲೌಕಿಕ ಸಾಮ್ರಾಜ್ಯಕ್ಕೆ ಸೇರಿದುದು" (3) ಎಂಬ ವಿಮರ್ಶೆಯ ನುಡಿಗಳು ಸತ್ಯದಿಂದ ದೂರವಾಗಿಲ್ಲ.

---

(1) ಕನ್ನಡ ನಾಟಕ ಶ್ರೀ ತ. ಸು. ಶಾಮರಾವ್ ಪುಟ ೨೫೪.

(2) ಅದೇ ಪುಟ ೨೫೮.

(3) ಅದೇ ೨೬೦.

೨

ವ್ಯಾಧನೊಬ್ಬನ ಮಗನಾದ ಏಕಲವ್ಯನು ದ್ರೋಣನಿಂದ ನಿರಾಕರಿಸಲ್ಪಟ್ಟರೂ, ದ್ರೋಣ ಪ್ರತಿಮೆಯನ್ನಿರಿಸಿಕೊಂಡು ಬಿಲ್ವಿದ್ಯೆಯನ್ನು ಕಲಿತುದಷ್ಟೇ ಅಲ್ಲ, ದ್ರೋಣನ ಅತಿಮೆಚ್ಚಿನ ಶಿಷ್ಯನಾದ ಅರ್ಜುನನನ್ನೂ ಮೀರಿಸಿದನು. ಗುರು ನಿಮಿತ್ತ ಮಾತ್ರ ; ನಿಷ್ಠೆ, ಶ್ರದ್ಧೆಗಳು ಶಿಷ್ಯನಲ್ಲಿದ್ದರೆ, ವಿದ್ಯೆ ತನಗೆ ತಾನೆ ಹತ್ತುತ್ತದೆಂಬುದನ್ನು ಸಾಧಿಸಿದನು.

ಏಕಲವ್ಯನಿದ್ದ ಕಾಡಿನಲ್ಲಿ ಬೇಟೆಗಾಗಿ ಕೌರವ ಪಾಂಡವರು ಬೇಟೆಗೋಸ್ಕರ ನಾಯಿಯೊಂದಿಗೆ ಹೊರಟರು. ಏಕಲವ್ಯನನ್ನು ಕಂಡ ನಾಯಿಯು ಬೊಗಳಿದಾಗ, ಬಾಯಿಯೊಳಗೆ ಬಾಣಗಳಿಂದ ಪುನಃ ಶಬ್ದ ಮಾಡದಂತೆ ಹೊಡೆದನು. ಆ ಬಾಣಗಳು ತೆರೆದ ಬಾಯನ್ನು ತೆಗೆದಹಾಗೆಯೇ ಇದ್ದೂ ಇಸಿತಾದರೂ ಪೆಟ್ಟಾಗಿರಲಿಲ್ಲ. ನಾಯಿಯ ಸ್ಥಿತಿಯನ್ನು ಕಂಡ ಅರ್ಜುನನಿಗೆ ಆಶ್ಚರ್ಯವೂ ಅಸೂಯೆಯೂ ಏಕ ಕಾಲದಲ್ಲಿ ಮೂಡಿತು. ದ್ರೋಣ ಗುರುವು ತನ್ನನ್ನೇ ಬಿಲ್ವಿದ್ಯೆಯಲ್ಲಿ ಅದ್ವಿತೀಯನನ್ನಾಗಿಸುವೆನೆಂಬ ವಚನದಲ್ಲಿ ಹುಸಿಯು ಕಂಡು ಬಂದು ಅರ್ಜುನನು ಗುರುವಿನ ಬಳಿಗೆ ನೇರವಾಗಿ ಧಾವಿಸಿ ನಡೆದ ವೃತ್ತಾಂತವನ್ನು ವಿವರಿಸಿದನು. ಗುರುವು ಏಕಲವ್ಯನ ಬಳಿಗೆ ಬಂದು ನಿಂದನು. ಗುರುವನ್ನು ಕಂಡ ಏಕಲವ್ಯನು ನಮಸ್ಕರಿಸಿ, ತನ್ನ ಸಾಮರ್ಥ್ಯವನ್ನು ಬಿನ್ನವಿಸಿಕೊಂಡನು. ಆಗ ಗುರುವು "ನನಗೆ ಗುರುದಕ್ಷಿಣೆಯನ್ನು ಕೊಡು" ಎಂದು ಕೇಳಿದರು. "ಸಮಸ್ತವೂ ತಮಗೇ ಅರ್ಪಿತವೆಂದ ಮಾತನ್ನಾಲಿಸಿ ಗುರುವು 'ನಿನ್ನ ಬಲಗೈ ಹೆಬ್ಬೆರಳನ್ನು ದಕ್ಷಿಣೆಯಾಗಿ ನೀಡು' ಎಂಬ ಅಭೀಷ್ಟವನ್ನು ಪ್ರಕಟಿಸಿದೊಡನೆಯೇ ಏಕಲವ್ಯನು ಕತ್ತರಿಸಿ ಕೊಟ್ಟನು.

ಮಹಾಭಾರತದಲ್ಲಿ ಬರುವ ಒಂದು ತುಣುಕು ಸನ್ನಿವೇಶವನ್ನು ಕವಿಶ್ರೇಷ್ಠರಿಬ್ಬರು ನಾಟಕಗಳನ್ನು ರಚಿಸಿದ್ದಾರೆ ಮಹಾಛಂದಸ್ಸಿನ ಲಯವನ್ನು ಆರಿಸಿಕೊಂಡು ಒಬ್ಬರು ಕನ್ನಡದ ಕಣ್ವರೆನಿಸಿದ ಬಿ. ಎಂ. ಶ್ರೀ ಅವರಿಗೂ, ಇನ್ನೊಬ್ಬರು ತಮ್ಮ 'ಸಾಕುತಾಯಿ' ಅವರಿಗೂ ಅರ್ಪಿಸಿರುವುದರಲ್ಲಿ ಔಚಿತ್ಯವನ್ನು ಮೆರೆದಿದ್ದಾರೆ. ಒಂದು ಭಾರತೀಯ ನಾಟಕದ ಸಂಸ್ಕೃತಿಯದ್ದಾದರೆ ಇನ್ನೊಂದು ಗ್ರೀಕ್ ಧಾಟಿಯದು. ಈ ಎರಡು ಪದ್ಯ ನಾಟಕಗಳನ್ನು ರಂಗಭೂಮಿಯಲ್ಲಳವಡಿಸುವುದು ಗದ್ಯ ನಾಟಕದಷ್ಟು ಸುಲಭ ಸಾಧ್ಯವಲ್ಲ. ದೀರ್ಘವಾದ ಪದ್ಯದಲ್ಲಿರುವ ಸಂಭಾಷಣೆಗಳು ನೋಟಕರಿಗೆ ಅರ್ಥವಾಗದಿರಬಹುದು ; ಏಕೆಂದರೆ ಪ್ರೇಕ್ಷಕರೆಲ್ಲಾ ಪಂಡಿತರಲ್ಲ ; ಎಂದಾಗ ಅಂತಹವರು ಮಂದಿರದಿಂದ ದೂರವಿರಬೇಕು, ಅವರಿಗೆ ರಸಾಸ್ವಾದ ಅಸಾಧ್ಯವೆಂಬರ್ಥವಲ್ಲ. ಅನ್ಯಭಾಷೆಯನ್ನರಿಯದವನೂ ಸನ್ನಿವೇಶ, ಹಾವಭಾವಗಳಿಂದ ಗ್ರಹಿಸಿಕೊಳ್ಳಬಲ್ಲ ರಸಜ್ಞರಿಲ್ಲದಿಲ್ಲ ; ಆದರೆ ಪ್ರತಿಯೊಂದು ಪದಗಳನ್ನೂ ಅರ್ಥೈಸಿಕೊಳ್ಳಲು ಸಾಧ್ಯವೆ ? 'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶನ 'ಹೆಬ್ಬೆ

ರಳು'ವಿಗಿಂತ ಕಷ್ಟ ಸಾಧ್ಯ. "ಹೆಬ್ಬೆರಳು ರಂಗದೃಷ್ಟಿಯಿಂದಲೂ, ರಸದೃ ಯಿಂದಲೂ, ಅತ್ಯುತ್ತಮವಾದುದು. ಆದರೆ ಇದನ್ನು ರ ಭೂಮಿಯ ಮೇಲೆ ಪ್ರದರ್ಶಿಸಿ ಯಶಸ್ವಿಯಾದೇನೆಂಬ ಕೆಚ್ಚು ಯಾವ ಕಸುಬುದಾ ಸಿಗೂ ಹುಟ್ಟಲಿಲ್ಲ. ರಂಗನಿರ್ದೇಶಕರು ಕಲಾ ಸೇವೆಯನ್ನು ತಮ್ಮ ಧ್ಯೇ ವನ್ನಾಗಿಟ್ಟುಕೊಂಡರೆ ಈ ನಾಟಕಗಳು ರಂಗಭೂಮಿಯ ಮೇಲೆ ಬರುವುದು ಸಾ ವಾಗಬಹುದು ; ಜನತೆಯ ರುಚಿಯೂ ಸ್ವಲ್ಪಮಟ್ಟಿಗೆ ಸುಧಾರಿತವಾದೀತು"(4 ನಾಲ್ವತ್ತೆರಡು ಪುಟಗಳುಳ್ಳ 'ಹೆಬ್ಬೆರಳು' ಎಂಬ ನಾಟಕವು ರಸಾಭಿಜ್ಞತೆಂ ನ್ನೊದಗಿಸುವಲ್ಲಿ, ರಂಗಭೂಮಿಯಲ್ಲಿ ನಡೆಸುವಲ್ಲಿ 'ಬಹುದು' ಎಂದ ಮೇ ಐವತ್ತೊಂಬತ್ತು ಪುಟಗಳುಳ್ಳ 'ಬೆರಳ್‌ಗೆ ಕೊರಳ್' ಕೊಡುವುದಕ್ಕೆ ನಿರ್ದೇಶಕ ಕೊರಳ್ ಸಮರ್ಥವಾಗಿರಬೇಕು. ಪದ್ಯ ನಾಟಕವಾಗಿದ್ದು, ದೀರ್ಘ ಸಂಭಾಷಣ ಸ್ವಗತ, ಹಿಂದೆ ನಡೆದ ಘಟನೆಗಳನ್ನು ಕಥಾ ರೂಪದಲ್ಲಿ ಪ್ರೇಕ್ಷಕರಿಗೆ ಬೇಸರ ಬಾರ ರೀತಿಯಲ್ಲಿ ಚಿತ್ರಿಸುವ ಮಾರ್ಗವು ಸುಲಭದ ತುತ್ತಲ್ಲ ; ಆದರೂ ನುಂಗಲಾರ ತುತ್ತುಗಳೇನಲ್ಲ.

೩

'ಬೆರಳ್‌ಗೆ ಕೊರಳ್' ಮತ್ತು 'ಹೆಬ್ಬೆರಳು' ಎಂಬ ನಾಟಕಗಳಲ್ಲಿ ಬರು ಪಾತ್ರಗಳು ಹೀಗಿವೆ.

ಏಕಲವ್ಯ	ಏಕಲವ್ಯ
ಅಬ್ಬೆ (ತಾಯಿ)	ಹಿರಣ್ಯಧನು (ಏಕಲವ್ಯನ ಸಾಕು ತಂದೆ)
ದ್ರೋಣ	ದ್ರೋಣಾಚಾರ್ಯ
ಅಶ್ವತ್ಥಾಮ	ಅರ್ಜುನ ಗೊಂದಳದವರು.

ಮುಖ್ಯವಾದ ಪಾತ್ರಗಳು ಎರಡು ಮಾತ್ರ. ಏಕಲವ್ಯ ಹಾಗೂ ದ್ರೋಣ. ಅಬ್ಬೆಯ ಪಾತ್ರಕ್ಕೆ ಬದಲಾಗಿ ಹಿರಣ್ಯ ಧನುವಿನ ಪಾತ್ರವು ಬಂದಿದ್ದು 'ಹೆಬ್ಬೆರಳು' ವಿನಲ್ಲಿ ಸ್ತ್ರೀ ಪಾತ್ರಕ್ಕೆ ಅವಕಾಶವಿಲ್ಲದಾಗಿದೆ. 'ಬೆರಳ್‌ಗೆ ಕೊರಳ್'ನಲ್ಲಿ ಅರ್ಜುನನ ಪಾತ್ರಕ್ಕೆ ಬದಲಾಗಿ ಅಶ್ವತ್ಥಾಮ ; ಅರ್ಜುನನು ತೆರೆಯ ಮೇಲೆ ಕಾಣಬರ ದಿದ್ದರೂ, ಅವನಿಗಾಗಿಯೇ ಈ ನಾಟಕವೆಂಬುದು ವ್ಯಕ್ತವಾಗದಿರದು. ಅರ್ಜುನನ ಮನದಿಚ್ಛೆಯನ್ನು ತನ್ನ ಮಗನಾದ ಅಶ್ವತ್ಥಾಮನಲ್ಲಿ ವಿವರಿಸಿಕೊಂಡು ಹೋಗುವು ದಾದರೆ 'ಹೆಬ್ಬೆರಳು'ವಿನಲ್ಲಿ ಅರ್ಜುನನು ಪಾತ್ರವಹಿಸಿ ಗುರುವು ತನಗ ನೀಡಿದ

(4) ಕನ್ನಡದಲ್ಲಿ ನಾಟಕ ಸಾಹಿತ್ಯ ಶ್ರೀ ಎಚ್. ದೇವೀರಪ್ಪ, ಪುಟ ೧೩೧
(ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ)

[illegible]



ಎಂ. ಜೆ. ಕೋದಂಡರಾಮಶೆಟ್ಟಿ, ಬಿ.ಎಸ್‌ಸಿ.,
ಪ್ರಧಾನ ಕಾರ್ಯದರ್ಶಿ

ವಚನವನ್ನು, ವಚನಭಂಗಕ್ಕೆ ಕಾರಣವಾದ ವ್ಯಕ್ತಿಯನ್ನು ತೋರಿಸಿ ತೆಪ್ಪಗಾಗುತ್ತಾನೆ. ಅಬ್ಬೆಯ ಪಾತ್ರದಿಂದ ತಾಯಿಯು ಮಗನಲ್ಲಿರಿಸಿದ್ದ ಪ್ರೀತಿ, ಮಗನ ಕತ್ತರಿಸಿದ ಬೆರಳನ್ನು ಕಂಡಾಗ ಒತ್ತರಿಸಿ ಬಂದ ಅಳಲು, ಮರುಕ್ಷಣವೇ ಶಾಪವೆಲ್ಲವೂ ಸಹಜವಾಗಿದ್ದು ಪರಿಣಾಮಕಾರಿಯಾಗಿದೆ.

'ಬೆರಳ್‌ಗೆ ಕೊರಳ್'ನಲ್ಲಿ ಗುರು, ಕರ್ಮ, ಯಜ್ಞ ತತ್ವಗಳೆಂಬ ಮೂರು ತತ್ವಗಳಿಂದ ಕೂಡಿದ ಮೂರು ನೋಟಗಳಿವೆ. 'ಹಬ್ಬಿರಳು'ವಿನಲ್ಲಿ ನಾಲ್ಕು ದೃಶ್ಯಗಳು.

'ಬೆರಳ್‌ಗೆ ಕೊರಳ್' ನಾಟಕದ ಆರಂಭವೇ ಓದುಗರಲ್ಲಾಗಲೀ, ರಂಗಭೂಮಿಯಲ್ಲಿ ಪ್ರೇಕ್ಷಕರಲ್ಲಾಗಲೀ ಮುಗ್ಧಗೊಳಿಸುತ್ತದೆ. ಉಷಃಕಾಲ, ಸೂರ್ಯೋದಯದ ವೇಳೆ, ಹಕ್ಕಿಗಳ ಇಂಚರದೊಂದಿಗೆ ಮಲಗಿದ್ದ ಪ್ರಕೃತಿಯು ಎಚ್ಚತ್ತಂತೆ, ಕತ್ತಲೆಯನ್ನು ಪಡುವಣದಾಚೆಗೆ ನೂಕುವ ಬೆಳಕಿನ ಪ್ರಕರತೆ, ಆಗಲೇ ಗುರುಸ್ತುತಿ. "ಗುರುಬ್ರಹ್ಮ ಗುರುರ್ವಿಷ್ಣು............ಎಂಬ ಶ್ಲೋಕದಿಂದ ಆರಂಭವಾದ ಗುರುತತ್ವ ಅದರಿಂದಲೇ ಮುಕ್ತಾಯವಾಗುತ್ತದೆ. ನಾಟಕಕ್ಕೆ ಸ್ತುತಿಯನ್ನು ಅಳವಡಿಸಿರುವುದು ಉಚಿತವಾಗಿದೆ. ಗುರುವೇ ಸರ್ವಸ್ವವೆಂಬ ಭಾವನೆಯು ಆರಂಭದಲ್ಲಿಯೇ ಸಹೃದಯರ ಮನಸ್ಸಿನಲ್ಲಿ ಬಿತ್ತುತ್ತದೆ. ಅನಂತರ ಏಕಲವ್ಯನ ಪಾತ್ರವು ಸುಳಿದು, ಅವನಲ್ಲಿಯೇ ಕೇಂದ್ರಿಕೃತವಾಗುವಂತೆ ಸೆರೆಹಿಡಿದಿರುವುದು ಶೈಲಿಯ ಮಹತ್ವ. ತೆರೆಯ ಮರೆಯಲ್ಲಿ ಕೇಳಿ ಬರುವ ದನಿ, ಆಮೇಲೆ ಬಾಲಕನು ಪೂಜಿಸುವ ವಿಗ್ರಹ; ಅವನಾರು ಆ ವಿಗ್ರಹವಾವುದು ಎಂಬ ಕುತೂಹಲ ಕೆರಳುವುದು ಸಹಜ. ಶ್ರೀರಾಮನು ತನ್ನ ಸೇವೆಯನ್ನು ಸ್ವೀಕರಿಸುವನೆಂಬ ಆಸೆ ಆಕಾಂಕ್ಷೆ ಆತುರಗಳಿಂದ ಕಾದಿದ್ದ ಶಬರಿಯು ಎದುರು ನೋಡಿದಂತೆ, ಏಕಲವ್ಯನು ತಾನು ಕಲಿತಿರುವ ವಿದ್ಯೆಯನ್ನು ಗುರುವಿನ ಪ್ರತ್ಯಕ್ಷದಲ್ಲಿ ಎಂದು ಪ್ರದರ್ಶಿಸುವನೆಂಬ ಉತ್ಸಾಹ ದಾಹದಿಂದ ದ್ರೋಣ ಗುರುವಿನ ಆಗಮನವನ್ನು ನಿರೀಕ್ಷಿಸುತ್ತಿದ್ದಾನೆ. ದ್ರೋಣನು ಕ್ಲುಪ್ತದಿನವನ್ನು ತಿಳಿಸಿದ್ದನೇನೋ—ಆ ದಿನವನ್ನು ಕಂಡವನೇ ಬಡವನು ಮುಂದೆ ಕಾಣಲಿರುವ ನಿಧಿಯಂತೆ ಹೃದಯ ದುಂಬುತ್ತದೆ.

"ಈಸುದಿನ ಬದುಕಿದಡಕೇ ಸುದಿನಮನ್ ಕಂಡೆನ್ ಏಕೆ?—"ದಿಟವಪ್ ಇಂದು ಗುರು ಬರ್ಪುದೆನ್ನಿ ವನಸ್ಥಲಕೆ".

ತನ್ನ ಮಗನು ಪೂಜಿಸುವ ದ್ರೋಣನ ಪ್ರತಿಮೆಯನ್ನು ಗೊಂಬೆಯೆಂದೇ ಬಗೆದು "ಅಣುಗನಲ್ತೆ ಆಡಲಿ" ಎಂದು ಸಮಾಧಾನ ಪಟ್ಟಳು: ಅವನ ಬಳಿಯಾಡಲು ಮತ್ತಾರಿದ್ದಾರೆ? "ಮೃಗಗಳ್, ಪಕ್ಷಿಗಳ್, ಮರಗಳ್, ಕಲ್ಗಳ್, ತಿಂಗಳ್, ನೇಸರ್, ಜಲಪಾತಂಗಳ್ ತೊರೆಗಳ್" ಇವು ಅವನ ಗೆಳೆಯರು.

ಮುಂದೆ ಏಕಲವ್ಯನು ಪೂರ್ವದಲ್ಲಿ ನಡೆದ ಘಟನೆಯನ್ನು ತಾಯಿಯೊಡ ವಿವರಿಸುವ ಮುನ್ನ "ಆ ಕತೆಗೆ ನಾಯಕಂ ನಾನೆ, ಕವಿಯುಂ ನಾನೆ" ಎನ್ನುವ ಏಕಲವ್ಯನೇನೋ ಆ ಕತೆಗೆ ನಾಯಕನೇಕೆ, ನಾಟಕಕ್ಕೂ ನಾಯಕನು ಹೌ ಆದರೆ ಕವಿಯಾದುದೆಲ್ಲಿ?—ಕವಿಯು ಚೇತನ ಕಥಾನಾಯಕನಲ್ಲಿ ಬೆರತ ಸಮರಸಭಾವವನ್ನು ಪಡೆಯುತ್ತದೆ.

ಗುರುವು ಬರುವ ಮಾರ್ಗವನ್ನು ಏಕಲವ್ಯನು ಕಾದಿರುತ್ತಾನೆ. ಸತ್ಕರಿಸಲ ಸಿದ್ಧತೆಯಾಗಿರುತ್ತದೆ. ತಾಯಿಯೊಂದಿಗೆ ಗುರುವ ಆಗಮನವನ್ನು ಹೇಳಿಕೊಳ ವುದೇ ಪರಮಾನಂದ 'ಶಿಷ್ಯನಂ, ಪರಸಲ್ಕೆ' ಎಂಬುದೇ ಏಕಲವ್ಯನಲ್ಲಿದ್ದ ಏಕಮಾತ್ ಸ್ವಾರ್ಥ. ಗುರುವಿನಾಗಮನಕ್ಕೆ ಮೊದಲು ಅಬ್ಬೆಯೊಂದಿಗೆ ತನ್ನ ಹಿಂದಿನ ವೃತ್ತಾಂ ತವನ್ನು ಹೇಳಿಕೊಳ್ಳುತ್ತಾ, ಹಿಂದೊಂದು ದಿನ, ಅರ್ಜುನ ಕಾಡಿನಲ್ಲಿ ಬೇಟೆಯಾಡ ತ್ತಿದ್ದಾಗ ಬಾಣದಿಂದ ಹಂದಿಯೊಂದನ್ನು ಕೆಡೆದ. ಮರೆಯಲ್ಲಿದ್ದ ತಾನು ಪ್ರಾ ಯನ್ನು ಪ್ರತ್ಯಕ್ಷ ನೋಡದೆ, ದನಿಯನ್ನಾಲಿಸಿ ಬಿಟ್ಟ ಬಾಣ ಹಂದಿಯ ಗತಿಯನ್ನು ಮುಗಿಸಿತ್ತು. ಅರ್ಜುನನಿಗೆ ಆಶ್ಚರ್ಯ! ಒಬ್ಬನನ್ನೂ ಕಾಣದೆ, ಬಾಣವೆಲ್ಲಿಂ ಬಂದಿತು? ಮಾತಿಗೆ ಮಾತು ಬಂದು ದ್ರೋಣನೇ ತನಗೂ ಗುರುವೆಂಬುದನ್ನು ಹೇಳಲು ಗುರುವಿನ ಮೇಲೆ ಆಕ್ರೋಶವು ಅವನಲ್ಲಿ ಉದಿಸಿತು. ತಾನು ಏಕಲವ್ ನೆಂದು ತಿಳಿದ ಅಶ್ವತ್ಥಾಮನು ಓಡಿ ಬಂದಪ್ಪಿದನು. ಅರ್ಜುನನಿಗೆ ಮುಖ ಭಂ ವಾಗಿ ಹುಸಿನಗೆಯಿತ್ತು ನಡೆದು ಹೋದನು—ಅಷ್ಟರಲ್ಲಿ ಕಹಳೆಯ ದನಿಯು ಮೊಳಗುತ್ತದೆ. ನಾಟಕವು ಕರ್ಮತತ್ವದ ಹಾದಿಯಲ್ಲಿ ಸಾಗುತ್ತದೆ. ದ್ರೋಣ ಉಭಯ ಸಂಕಟವು ಆರಂಭವಾಗುತ್ತದೆ—ಅರ್ಜುನನು ದ್ರೋಣನ ಬಳಿಗೆ ಬಂದ ತನಗಿಂತ ಮಿಗಿಲಾದವನೊಬ್ಬನಿದ್ದಾನೆಂಬುದನ್ನು ತಿಳಿಸಿದ್ದನು. ಅದನ್ನೇ ಗುರುವ ಯೋಚಿಸುತ್ತಿದ್ದನು ತನ್ನ ವಚನವನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದೆ ಆಗಿದ್ದಿತು. ದ್ರುಪದನು ಅರ್ಜುನನಿಂದ ಸೆರೆಹಿಡಿದುದು, ದ್ರುಪದನನ್ನು ಅವಮಾ ಗೊಳಿಸಿದುದು ಆಗ ಅರ್ಜುನನಿಗೆ ನೀಡಿದ ಭಾಷೆ.

"ನಿನಗಿದೊ ಮೆಚ್ಚಿ ಪೂಣ್ದಪೆನ್
ಜಗತ್ರಯದಿ ನಿನಗೆಣೆಗಳಿಲ್ಲದೊಲ್
ನಿನಗೆನ್ನ ಬಿಲ್‌ಕಲ್ಪಿಯುಂ ದಾನ ನೀವೆನ್
ನಿನ್ನ ಪೆಸರಂ ಗಗನಕೆತ್ತುವೆನ್...."

ಇಂದು ದ್ರೋಣನನ್ನು ನಿರ್ಬಂಧಿಸಿತ್ತು; ಕಾರಣ
"ವಿಧಿ....ನನ್ನ ಹಂಕಾರ ಭಲಮೆ ಮುರಿದಿಕ್ಕಿದುದು...."

ನ್ಯಾಯಾನ್ಯಾಯದ ಪರಸ್ಪರ ಸೆಣಸಾಟದಲ್ಲಿ ತನ್ನನ್ನೇ ದೂಷಿಕೊಳ್ಳುವ ಸ್ಥಿತಿ ದ್ರೋಣನ ಪಾಲಿಗೆ ಬಂದಿತು. ಎಲ್ಲವೂ "ಈಶ್ವರೇಚ್ಛಾರೂಪದಿನ್ಮ ಕರ್ಮಪಾಶಂ" ಎಂದು ಉದ್ಧರಿಸುವ ದ್ರೋಣನಿಗೆ ದೈವವು ತೋರಿದ ಮಾರ್ಗದಿಂದ

"ತಣಿಯುವಂತರ್ಜನಂ
ಸಲ್ವಂತೆ ನಾನಿತ್ತ ವಚನಂ ಮೇಣ್
ಏಕಲವ್ಯರಿಗೊದಗದಲ್ ಆವುದುಂ ಪೆರ್ ಕೇಡು...."

ಆದರೆ ಅಧಿಕ ಕೇಡಾಗುವುದು ತನಗೇ ಎಂಬುದು ಗುರುವಿಗೂ ಆಗ ತಿಳಿಯದು. ತಾನು ಕಾಡಿಗೆ ಬಂದ ಉದ್ದೇಶವನ್ನು ಸಾಧಿಸಲು, ಏಕಲವ್ಯನನ್ನು ಎದುರುಗೊಳ್ಳುವುದೇ ಕರ್ಮ ತತ್ವವಾಗಿ ಪರಿಣಮಿಸಿದೆ. ಪೆರ್ ಕೇಡನ್ನು ಎಣಿಸೆನೆಂದು ತನ್ನ ಮಗ ಅಶ್ವತ್ಥಾಮನಿಗೆ ಭಾಷೆಯನಿತ್ತು ಮುಂದೆ ನಡೆದನು.

ಏಕಲವ್ಯನ ಗುರುಭಕ್ತಿ ಯಜ್ಞ ತತ್ವದ ತುಂಬಾ ತುಂಬಿದೆ. ದ್ರೋಣನು ಏಕಲವ್ಯನಲ್ಲಿರಿಸಿರುವ ವಾತ್ಸಲ್ಯವೂ ಕಡಮೆಯೇನಲ್ಲ. ತನ್ನನ್ನು ಎದುರುಗೊಳ್ಳಲು ದೂರದಲ್ಲಿ ಬರುವುದನ್ನು ಕಂಡ ದ್ರೋಣನಿಗೆ ಹರ್ಷಾಂಬುಧಿಯುಕ್ಕುತ್ತದೆ. ಇಂತಹ ಶಿಷ್ಯನಿದ್ದರೆ ತಾನೆ ಗುರುವಿಗೆ ನಿಜಾರ್ಥವು ಬೆಳಕಿಗೆ ಬರುವುದೆಂದು ತಿಳಿದನು. ಶಿಷ್ಯನಿಗೆ ನೀಡಿದ್ದು ಅಲ್ಪ. "ಆ ಅಲ್ಪದಿಂದೆಂತಪ್ಪ ಭೂಮನುಮಂ ಸಾಧಿಸಿರ್ದನ್" ಎಂಬ ಹೆಮ್ಮೆ ಗುರುವಿಗೆ ಮೂಡದಿರದೇ! ಹಾಗೆಯೇ "ನರಗುರು ನಿಮಿತ್ತ ಮಾತ್ರನ್" ಎಂಬ ಸತ್ಯವನ್ನು ಅರಿತ ಮಹಾಗುರು.

ಶಬ್ದವೇಧಿ ಸಿದ್ಧಿಯನ್ನು ಏಕಲವ್ಯನು ಪಡೆದಿರುವ ಕುರುಹಾಗಿ ಪರಿಕಿಸಲು ತೊಡಗಿದಾಗ ಪ್ರಾಣಿದಯೆಯ ಗುಣವು ಸ್ಪಷ್ಟವಾಗಿ ಮತ್ತಷ್ಟು ಶಿಷ್ಯನಲ್ಲಿ ವಿಶ್ವಾಸವು ಮೂಡಿ ಸಂಪ್ರೀತಿಯಿಂದ ಆಲಿಂಗಿಸಿ ಕೊಳ್ಳುತ್ತಾನೆ. ಶಿಷ್ಯರಲ್ಲಿ ಒಬ್ಬರನ್ನೊಬ್ಬರು ಅಸೂಯೆ ಪಡುವುದು ಕೀಳುತನವೆಂಬ ಏಕಲವ್ಯನ ನುಡಿಗಳಿಂದ ದ್ರೋಣನು ತಾನು ಬಂದ ಉದ್ದೇಶವನ್ನು ಸಾಧಿಸುವುದೆಂತು ಎಂದು ಒಳಗೊಳಗೆ ಸಂಕಟಪಡುವುದು ಹೊರಪಡುತ್ತದೆ. ನುಡಿದ ಪ್ರತಿ ನುಡಿಯಲ್ಲಿಯೂ ದ್ರೋಣನನ್ನು ಗೆಲ್ಲುತ್ತಿದ್ದು, ಶಿಷ್ಯನ ಮೇಲಿನ ಮೆಚ್ಚುಗೆಯ ಮೇರೆ ಮೀರುತ್ತಿತ್ತು. ಸಚ್ಛಿಷ್ಯನೊಂದು ಕಡೆ, ವಚನ ಪರಿಪಾಲನೆಯೊಂದುಕಡೆ. ಈ ಎರಡರ ಮಧ್ಯೆ ದ್ರೋಣನು ತೊಳಲಿದನು, ತನ್ನನ್ನೇ ನಿಂದಿಸಿಕೊಂಡನು. ಶಿಷ್ಯನಾದರೋ ತನ್ನನ್ನೇ ಸಮರ್ಪಿಸಿಕೊಳ್ಳಲು ಸಿದ್ಧನಿದ್ದ. ಕಡೆಗೆ ಗುರುವು ಪೆರ್ ಬೆರಳನ್ನು ದಕ್ಷಿಣೆಯಾಗಿ ಕೇಳಿದಾಗ ಶಿಷ್ಯನ ದೃಷ್ಟಿಯಲ್ಲಿ ಇದೊಂದು ಕಿರಿಯ ಕಾಣಿಕೆಯಾಗಿ ಗೋಚರಿಸಿತು.

"ಕೊರಳನೆಯೆ ಬಲಿಯಿತ್ತವನ್
ಬೆರಳೊಂದನೀಯಲಂಜುವೆನೆ ? ತೃಣಕೆಣೆಯಲ್ತೆ ?"

ಶಿಷ್ಯನು ಧಿಕ್ಕರಿಸಿ ಕೊಡಲಾರೆನೆಂದಿದ್ದರೆ ದ್ರೋಣನಿಗೆ ಸಂತಸವನ್ನು ತರುತ್ತಿತ್ತೋ ಏನೋ? ಆದರೆ ದ್ರೋಣನಿಗೆ ಇಲ್ಲಿಯೂ ಸೋಲಬೇಕಾಯಿತು. ಬೆರಳನ್ನು ಕತ್ತರಿಸಿ ಅರ್ಪಿಸಿದಾಗ ಏಕಲವ್ಯನು ಬರೀ ಶಿಷ್ಯನಾಗುಳಿಯಲಿಲ್ಲ ಶಿಷ್ಯೋತ್ತಮನೆನಿಸಿದ. ದ್ರೋಣನು ಮಡುಗಟ್ಟಿದ್ದ ರಕ್ತದಲ್ಲಿ ತನ್ನ ರುಂಡವಿಲ್ಲದ ಮುಂಡವನ್ನು ಕಂಡು ಗಾಬರಿಯಾಗುತ್ತಾನೆ. "ಮುಂದೇನ್ ಕಾದಿಹುದೊ ನನ ಬಿದಿಯುರಿಗುಂ". ದ್ರೋಣನಿಗೂ ತಾನೆಸಗಿದುದು ಮಹಾಪರಾಧವೆಂಬ ಅರಿವಿತ್ತು ಅದಕ್ಕೆ ಪ್ರಾಯಶ್ಚಿತ್ತ ಇಲ್ಲವೇ ಪ್ರತಿಫಲವು ಕಾದಿದೆಯೆಂಬುದರ ಸೂಚನೆಯನ್ನು ಗ್ರಹಿಸಿದನು. ಆಶೀರ್ವದಿಸಿದ ದ್ರೋಣನು ಏಕಲವ್ಯನಿಂದ ಬೀಳ್ಕೊಟ್ಟನು. ಏಕಲವ್ಯನು ಮಡುಗಟ್ಟಿದ್ದ ರಕ್ತ, ತುಂಡರಿಸಿದ ಹೆಬ್ಬೆರಳು ಕಾಣದಿರಲೆಂಬ ಬಯಕೆಯು ಕೈಗೂಡಲಿಲ್ಲ. ಕಂಡ ಅಬ್ಬೆಯು ರೌದ್ರ, ಕೋಪದಿಂದ ಶಪಿಸಿಬಿಟ್ಟಳು.

"ಆರ್ಗೊ ಬಲಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆ ಪಾಪಿಯ ಕೊರಲ್"

ಎಂಬ ನುಡಿಗಳು ಹೊರಬಿದ್ದವು. ಯಾವುದು ಆಗದಿರಲೆಂದು ಗುರು ಶಿಷ್ಯರಿಬ್ಬರು ಆಶಿಸಿದ್ದರೋ, ವಿಧಿಯ ಕೈವಾಡದಿಂದ ವಿಫಲವಾಯಿತು.

ಗುರುವು ಏಕಲವ್ಯನಿಗೆ ಕಲಿಸಿಕೊಟ್ಟುದುನು, ಬಯಸಿದ ದಕ್ಷಿಣೆಯು ಅಲ್ಪವಾದರೂ ವಿಧಿಯು ಪ್ರತಿಫಲವಾಗಿ ಕೊರಳನ್ನೇ ಇಚ್ಛಿಸಿದುದು ಅಪಾರವೇ ದಿಟ ತನಗರಿಯದಂತೆ ಹೊರಬಿದ್ದ ಅಬ್ಬೆಯ ನುಡಿಗಳೇ ಶಾಪವಾಗಿ ಪರಿಣಮಿಸಿ ಗುರುವು ತನ್ನ ಕೊರಳನ್ನು ಮುಡಿಪಾಗಿಡಬೇಕಾಗುತ್ತದೆ.

'ಹೆಬ್ಬೆರಳು'ವಿನಲ್ಲಿ ಏಕಲವ್ಯನು ದ್ರೋಣಾಚಾರ್ಯನಲ್ಲಿಯೇ ವಿದ್ಯೆಯನ್ನು ಕಲಿಯಬೇಕೆಂಬ ಉತ್ಕಟಾಕಾಂಕ್ಷೆಯನ್ನು ತೋರಿಸಿದಾಗ ಸಾಕು ತಂದೆ ಹಿರಣ್ಯಧನು ವಿರೋಧಿಸಿ ಬುದ್ಧಿ ಹೇಳುತ್ತಾನೆ.

"ಜೇನರ್ಸೀಂಟುವೆ ಅಕಟ ಹುಳದ ಕೊಂಡಿಯು ಮರವೆ ಜೇಡವನ
ತಳ್ಳಿ! ನಿನಗಾಂ ಕಲಿಸಿದುದೆ ನಿನ್ನ ಸಾಸಿರವಧಿಗೆ ಸಾಕು".

ಏಕಲವ್ಯನಿಗೆ ತಂದೆ ಕಲಿಸಿದುದು ವಿದ್ಯೆಯೆನಿಸಿಸಲಿಲ್ಲವೊ ಏನೋ! ಆದರೂ ಏಕಲವ್ಯನನ್ನು ಗುರುವಿನ ಬಳಿಗೆ ಹೋಗಲು ಅನುಮತಿ ಕೊಟ್ಟನು. ಇದಿಷ್ಟೂ

ಮೊದಲ ನೋಟದಲ್ಲಿರುವ ಮುಖ್ಯಾಂಶ. ಕೊನೆಯಲ್ಲಿ ಗೊಂದಳದವರು ಹಿರಣ್ಯಧನುವಿನ ಶಂಕೆಯನ್ನು ಪ್ರತಿಪಾದಿಸುವಂತಿದ್ದು ಮುಂದೇನಾಗುವುದೋ ಎಂಬ ಚಿಂತೆ ಹೊರಪಡುತ್ತದೆ.

"ಮುಂದೆ ಏನಹುದೊ ಮುಂದೆಯೆ ಬಲ್ಲುದಾ ಮರ್ಮ".

ಮುಂದಿನ ನೋಟದಲ್ಲಿ ಅರ್ಜುನನನ್ನು ಬಿಲ್ವಿದ್ಯೆಯಲ್ಲಿ ಪ್ರಾವಿಣ್ಯತೆ ಪಡೆಯಲು ತೊಡುವ ಪ್ರತಿಜ್ಞೆ ದ್ರೋಣನಿಂದ. ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸೆಂಬ ಏಕಲವ್ಯನ ಕೋರಿಕೆಯನ್ನು ಧರ್ಮಜನನ್ನೊಬ್ಬನನ್ನುಳಿದರೆ ಉಳಿದವರು ವಿರೋಧಿಸುತ್ತಾರೆ. ಅರ್ಜುನನು ಬಾಯಿಂದೇನನ್ನೂ ಉಸುರದೆ 'ತಲೆವಾಗಿ ನೆಲನಗೀರುತ' ನಿಲ್ಲುವುದರ ಮುಖೇಣ, ತನ್ನ ಅಸಮ್ಮತಿಯನ್ನು ತೋರ್ಪಡಿಸುತ್ತಾನೆ. ಇದರ ಪರಿಣಾಮ ಏಕಲವ್ಯನಿಗೆ ಪ್ರವೇಶವಿಲ್ಲವಾಯಿತು. ದ್ರೋಣನು ಗೊಂದಳದವರಿಗೆ, ಏಕಲವ್ಯನಿಗೆ ನೀಡುವ ಉಪದೇಶಾತ್ಮಕ ವಿವರಣೆಗಳಿಗೆ ಅರ್ಥವಿಲ್ಲದಂತಾಗಿ ದ್ರೋಣನ ಪಾತ್ರಕ್ಕೆ ಕಳಂಕವಿಡಿದಿರುವಂತಾದರೂ, ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾನೆ.

"ಧರ್ಮಸಂಕಟಕೆನ್ನ ನೀಡುಗೊಳಿಸದಿರಣ್ಣ".

ಏಕಲವ್ಯನಿಗೆ 'ನೀಬೇರೆಲ್ಲಿಗಯ್ದು ಕಲಿ, ಲಂಬಿಸಿತು ಕಾಲ, ಎಂದು ಖಡಾಖಂಡಿತವಾಗಿ ನುಡಿಯುವಂತಿದ್ದರೂ ಅನುಕಂಪೆ ತುಂಬಿದೆ. ನಿರಾಶನಾಗಿ ಹೊರಡುವ ಮುನ್ನ ಏಕಲವ್ಯನ ಪ್ರಾರ್ಥನೆ.

"ಒಮ್ಮೆ ನಲ್ಮೆಡಿದೆನ್ನ ಕಳುಹಿಸೈ ಗುರುದೇವ"
ಇದ್ದಕ್ಕಿದ್ದಂತೆಯೇ ದ್ರೋಣನು ತುಂಬು ಹೃದಯದಿಂದ
"ಕಾಮಿತಾರ್ಥವ ನಿನ್ನ ಪ್ರೊರೆಯಿಸಲೀಶ್ವರಂ ಬಿಲ್ಜಾಣನಾಗು"

ಎಂದು ಹರಸುವಾಗ ಮೊದಲ ಕಾಠಿಣ್ಯತೆ ಕಾಣಬರದು; ಮೇಲಾಗಿ ತನ್ನ ಸ್ಥಿತಿಯನ್ನು ಹೇಳಿಕೊಂಡಂತಾಯಿತು. ಏಕಲವ್ಯನಿಗೆ ಅದೇ ಹಾಲ್ಜೇನಾಯಿತು. ದ್ರೋಣ ಪ್ರತಿಮೆಯನ್ನಿರಿಸಿಕೊಂಡು ಬಿಲ್ವಿದ್ಯೆಯನ್ನು ಕಲಿಯಲಾರಂಭಿಸಿದ.

ಗುರುವನ್ನಾಗಿ ಬಯಸಲು ಹೋಗಿ ತಿರಸ್ಕೃತನಾದ ಏಕಲವ್ಯ ಮರಳಿ ಬಿಲ್ವಿದ್ಯೆಯನ್ನು ತಾನೊಬ್ಬನೇ ಸಾಧಿಸಿಕೊಳ್ಳಬೇಕಾಯಿತು ಇದೇ ಈ ನೋಟದ ಧ್ಯೇಯ.

ಮೂರನೆಯ ನೋಟದಲ್ಲಿ ಏಕಲವ್ಯನು ದ್ರೋಣ ಪ್ರತಿಮೆಯನ್ನಿರಿಸಿ, ಅದರ ಮುಂದೆ ಶಸ್ತ್ರಾಭ್ಯಾಸಿಸುತ್ತಿರುವುದನ್ನು ಕಂಡ ಹಿರಣ್ಯಧನುವಿಗೆ

ಪರಿಹಾಸ್ಯವಾಗುತ್ತದೆ. ವಿದ್ಯೆಯು ಕರಗತವಾಗಿದೆ ಗುರುವಿಗೆ ಕಾಣಿಕೆಯನ್ನೀಯ
ಬೇಕೆಂಬ ಏಕಲವ್ಯನ ನುಡಿಗಳು ಮತ್ತಷ್ಟು ಕೆಣಕಿದಂತಾಗಿ.

"ಸಾಲದೇಂ ಕಂದ ಹಾವಿನ ಬಿಲದ ಬಳಿಗೆಯ್ದಿ.
ಸೋಕಿಯುನ್ನೊದಿದುದೆ? ಇನ್ನದರೊಳಗೆ ಕೋಲ
ಕುಕ್ಕಿ ಕೆಣಕಿಸಬೇಕೆ"

18524

ಎಂದು ರೇಗಿ ಕೈಯ ಕಾಣಿಕೆಯನ್ನೀ ದ್ರೋಣನು ಮುಂದೆ ಕೇಳುತ್ತಾನೆಂ
ಭವಿಷ್ಯವನ್ನು ನುಡಿಯುತ್ತಾನೆ. ಏಕಲವ್ಯನೂ ಸ್ಥೈರ್ಯದಿಂದ ಗುರುವು ಕೇಳಿದ
ದನ್ನು ನೀಡಲು ಸಿದ್ಧವೆಂದನು. ಹಿರಣ್ಯಧನು ನಿರಾಶನಾಗಿ "ಎನಿತು ಮಳೆಗ
ರೊಡೇಂ ಹಚ್ಚಿ ಹೂವುದೆ ದೇವ" ಎಂದು ಗುರುವಿನ ಬಳಿಗೆ ಹೋಗಲು ಸಮ್ಮತಿ
ದನು. ಕೊನೆಯ ನೋಟದಲ್ಲಿ ದ್ರೋಣನು ಕಲಿಸುತಿದ್ದ ವಿದ್ಯೆಯು ಕೌರ
ಪಾಂಡವರಿಗೆ ಪರಸ್ಪರ ಒಳಿತಾಗುವುದು ಬಿಟ್ಟು ದ್ವೇಷಾಸೂಯೆಗಳಿಗೆಡೆಯಾಯಿ
ತಲ್ಲ ಎಂದು ಯೋಚಿಸುತ್ತಿರುವಲ್ಲಿ, ಅರ್ಜುನನು ಜೋಲು ಮುಖದಿಂದ ಬ
ಬಂದು ನಿಂದು ನೀಡಿದ ಭಾಷೆಯನ್ನು ಜ್ಞಾಪಿಸಿ, ಭಿಲ್ಲರ ಯುವಕನೊಬ್ಬ ಶಬ
ವೇಧಿಯನ್ನು ಸಿದ್ಧಿಸಿಕೊಂಡಿರುವುದನ್ನು ಹೇಳಿಕೊಂಡನು ಅನಂತರ, ಆ ಅನಾಮ
ಧೇಯ ಏಕಲವ್ಯನೆಂದು ತಿಳಿಯಿತು. ಆ ವೇಳೆಗೆ ಏಕಲವ್ಯನೇ ಬಂದು ಗುರುವಿ
ನಮಸ್ಕರಿಸಿ ಗುರುದಕ್ಷಿಣೆಯನ್ನೀಯಲು ಬಂದಿರುವುದಾಗಿ ತಿಳಿಸಿದಾಗ, ದ್ರೋಣನ
ನಗುತ್ತಾ "ನಿನ್ನ ಬಲಗೈಯ ಹೆಬ್ಬೆರಳ ನೀ ಎನೆ ಕಂದ" ಎಂಬ ಮಾತು ಮುಗಿವು
ರೊಳಗೆ ಕತ್ತರಿಸಿಟ್ಟನು. ಅರ್ಜುನನಿಗೂ ದಿಗ್ಭ್ರಮೆಯನ್ನುಂಟು ಮಾಡಿತು
ದ್ರೋಣನೂ ಇಷ್ಟು ಸುಲಭವಾಗಿ ತನ್ನಿಚ್ಛೆ ನಡೆಯುವುದೆಂದು ತಿಳಿದಿರಲಿಲ್ಲ
ಹಿರಣ್ಯಧನುವು ಪ್ರವೇಶಿಸಿ ದ್ರೋಣನನ್ನು ಕೆಡೆನುಡಿಯುತ್ತಾನೆ. ದ್ರೋಣ
ಪ್ರತ್ಯುತ್ತರವು ಅಷ್ಟೇನು ಸಮಾಧಾನವಿರುವಂತೆ ತೋರುವುದಿಲ್ಲ.

"....ನಂಬು ನೀನಂಬಂದಿರು
ಪರಿಹಾಸಕೆಂದೆ ನಾ ಬೆರಳ ಕೇಳಿದೆ"

ಈ ವಾಕ್ಯವನ್ನು ಹಿರಣ್ಯಧನುವು ನಂಬುವನೆ? ಎಲ್ಲವೂ ದೈವಚಿತ್ತವೆಂದನ
ಹಿರಣ್ಯಧನುವು ಕೊನೆಗೆ "ಯಾವೊಂದು ಕೆನಸನನ್ನೆ ಸಗಲಿಸಗಿದ ಕೆಡುಕೆ ಕೊನೆಗದಕೆ
ಮುಳುವಹದು" ಎಂಬ ನುಡಿಯನ್ನಾಡಿದನು. ಮಗ ಏಕಲವ್ಯನು ತಂದೆಯನ್ನು
ಸಮಾಧಾನಿಸುವುದು ಗುರುವಿಗೆ ಬೆರಗು ಮೂಡಿಸುತ್ತದೆ. ಅವನ ವಿನಯ,

ಓಡಾಡತೆ ತನ್ನನ್ನು ಕ್ಷಮಿಸೆಂದು ಕೇಳುವಷ್ಟರ ಮಟ್ಟಿಗೆ ದ್ರೋಣನ ಅಂತರಂಗ ಓಗುಡುತ್ತದೆ.

"ಚಾಪ ಬಾಗವೆ ಶರಕೆ, ನಿನ್ನ ಭಕ್ತಿಯು ಮುಂದೆ ನತಸಾದೆ ನಾಂ ಕೆಂದ" ಎಂಬ ನುಡಿಗಳು ಹಿರಣ್ಯಧನುವಿನಲ್ಲಿ ದ್ರೋಣನ ಬಗ್ಗೆ ಸ್ವಲ್ಪ ವಿಶ್ವಾಸವುಂಟಾಗಿ ಅತಿಥಿಯಾಗಿ ಕರೆಯುತ್ತಾನೆ. ಮರುದಿನ ಬರುವುದಾಗಿ ಹೇಳಿ ದ್ರೋಣನು ಅರ್ಜುನನೊಡನೆ ಹಿರಣ್ಯಧನುವಿನ ಭವಿಷ್ಯ ನುಡಿಗಳನ್ನು ವಿವರಿಸುತ್ತಾ ಹೊರಟನು.

"ಬೆರಳ್‌ಗೆ ಕೊರಳ್"ನಲ್ಲಿ ವಿಧಿಯು ದ್ರೋಣನ ತಲೆಯನ್ನು ಬಯಸಿದರೆ "ಹೆಬ್ಬೆರಳು"ವಿನಲ್ಲಿ ಇಡೀ ಕುರುವಂಶವನ್ನೇ ಬಲಿ ತೆಗೆದುಕೊಂಡಿತು.

—೪—

ಏಕಲವ್ಯನ ದಕ್ಷಿಣದ ಬೆರಳನ್ನು ಪಡೆಯುವುದು ಮಹಾಯಜ್ಞವೇ ಆಗಿದ್ದು ಶ್ರೀ ಕುವೆಂಪುರವರ ನಾಟಕದಲ್ಲಿ ಮಂದಗತಿಯಲ್ಲಿ ಸಾವಧಾನವಾಗಿ ಸಾಗುತ್ತದೆ; ಶ್ರೀ ಪೈಯವರಲ್ಲಿ ವೇಗವಾಗಿ ಎಂಬ ಅಂಶವನ್ನು ಗಮನಿಸಬಹುದು. ಅರ್ಜುನನನ್ನು ಏಕಮೇವಾದ್ವಿತೀಯ ಬಿಲ್ಗಾರನನ್ನಾಗಿ ಮೆರಸುತ್ತೇನೆಂಬ ದ್ರೋಣನ ಪ್ರತಿಜ್ಞೆಯೇ ಏಕಲವ್ಯನ ಹೆಬ್ಬೆರಳು ಹೋಗುವುದಕ್ಕೂ, ದ್ರೋಣನ ಶಿರವು ಕಡಿದು ಬೀಳುವುದಕ್ಕೂ, ಕೌರವ ಪಾಂಡವರಲ್ಲಿ ವೈಷಮ್ಯ ಬೆಳೆದು ಹಾಳಾದುದಕ್ಕೂ ಸಂಬಂಧವಿಲ್ಲವೆಂದು ಮೇಲುನೋಟಕ್ಕೆ ಏನೋ ನೇಹವಿದೆಯೆಂದೆನಿಸದಿರದು. ದ್ರೋಣನಿಂದ ದ್ರುಪದ, ಧೃಷ್ಟದ್ಯುಮ್ನನಿಂದ ದ್ರೋಣ, ಅಶ್ವತ್ಥಾಮನಿಂದ ಪಂಚ ಪಾಂಡವರು, ಕೃಷ್ಣನಿಂದ ಅಶ್ವತ್ಥಾಮ, ವ್ಯಾಧನಿಂದ ಕೃಷ್ಣ ಅಂತ್ಯವನ್ನು ಪಡೆಯುವುದು ಇಲ್ಲವೇ ಶಾಪವನ್ನು ಹೊಂದುವುದು ಏಕಲವ್ಯನ ಹೆಬ್ಬೆರಳಿನ ವೃತ್ತಾಂತದಿಂದ ಮುಂದುವರೆದ ಪರಂಪರೆಯ ವಿಧಿಯ ಚಕ್ರವು ತಿರುಗುತ್ತದೆ.

ಏಕಲವ್ಯನ ಬೆರಳ್‌ಗೆ ದ್ರೋಣನ ಕೊರಳ್ ಬಲಿಯಾಗಲೇಬೇಕೆಂಬ ವಿಧಿಯ ಹಟವಿದೆ. ಅದನ್ನು ಪಡೆಯುವ ಬಗೆಯೆಂತು? ತಿರಸ್ಕೃತ ಶಿಷ್ಯನಲ್ಲಿ ಆ ಕಾಣಿಕೆಯನ್ನು ಕೊಡು ಎಂದು ಕೇಳುವುದೆಂತು? ಕೊನೆಗೆ ಬೆರಳನ್ನು ದಾನವಾಗಿ, ಗುರುದಕ್ಷಿಣೆಯಾಗಿ ಉಸುರಿದನು. ಏಕಲವ್ಯನು ತನ್ನ ಸರ್ವಸ್ವವನ್ನೇ ಸಮರ್ಪಿಸಲು ಸಿದ್ಧನಿರುವಾಗ "ಬೆರಳೊಂದನೀಯಲಂಜುವನೆ? ತೃಣಕೆಣೆಯಲ್ತೆ?" ಬಂದ ಕಾರ್ಯವು ಸಾಧಿತವಾಯಿತು. ಅದರ ಫಲ ಮುಂದೆ ಕಾದಿತ್ತು. ನಡೆದ ಘಟನೆಯನ್ನು ರಹಸ್ಯವಾಗಿಡಬೇಕೆಂಬ ಹಂಬಲ ದ್ರೋಣ, ಏಕಲವ್ಯರದು. ಆದರೆ ಅಜ್ಜಿಯ ಶಾಪಕ್ಕೆ ದ್ರೋಣನು ಪಕ್ಕಾಗಬೇಕಾಯಿತು, ಯಜ್ಞ ಪೂರ್ಣವಾಗುತ್ತಿದ್ದಂತೆ ಬೊರೆಯುವ

ಫಲಕ್ಕೆ ವಿಷ ಆಕಿತು ಏಕಲವ್ಯನ ದೃಷ್ಟಿಯಲ್ಲಿ "ನನ್ನ ತ್ಯಾಗಂ ವ್ಯ
ವಾಯ್ತೆ ?" ಅಜ್ಜಿಯ ಶಾಪವು, ದ್ರುಪದನ ಧೃಷ್ಟದ್ಯುಮ್ನನಿಂದ ದ್ರೋಣನ
ಯಾಗಬೇಕೆಂಬ ಅಭೀಷ್ಟಕ್ಕೆ ಹೊಂದಿಕೊಂಡಿತು. ದ್ರೋಣನು ರಣಾಂಗಣ
ಕೊರಳನ್ನಿತ್ತ. ಈ ಎರಡು ಕಾರ್ಯಗಳು ವಿಧಿಯ ಚಿತ್ತ.

'ಹೆಬ್ಬೆರಳು'ವಿನಲ್ಲಿ ಏಕಲವ್ಯನು ಬೆರಳನ್ನು ಕಳೆದುಕೊಳ್ಳುವ ಪ್ರಸಂಗ ಬ
ತೀವ್ರವಾದುದು. ಅರ್ಜುನನು ಅನಾಮಿಕ ವ್ಯಾಧನೊಬ್ಬನಿಗೆ ಶಬ್ದವೇಧಿ ಸಿ
ಯಾಗಿದೆಯೆಂದಾಗ ಆತನಾರು ಎಂಬುದನ್ನು ಸ್ವಲ್ಪ ಹೊತ್ತು ಆಲೋಚಿಸಿದ ನಂ
ತಿಳಿದು, ಏಕಲವ್ಯನ ಎದುರು ನಿಂತು ಶಿಷ್ಯನ ಸತ್ವವನ್ನು ಹುಡುಗಾಟಕ್ಕೆ ಪರಿ
ಲಿಬ್ಬಾಗಿ ಬೆರಳನ್ನು ಕ್ಷಣಾರ್ಧದಲ್ಲಿ ಪಡೆದು, ಅನಂತರ ಬಹುಮಾನಿಸುವುದ
ಪಶ್ಚಾತ್ತಾಪದಿಂದ ಮರುಗುವುದನ್ನು ಗಮನಿಸುತ್ತೇವೆ.

"ನಾತು ಮುಗಿನ ಮುನ್ನಮೆ ನಿನ್ನ ಮಗನದಂ ತರಿದಿತ್ತ"

ಎಂದು ದ್ರೋಣನು ಹಿರಣ್ಯಧನುವಿಗೆ ಸಮಾಧಾನ ನೀಡುವ ಮಾ
ಗಳನ್ನೂ ಕಡೆಗಣಿಸಿದರೂ, ಶಿಷ್ಯನ ಬಗ್ಗೆ ತೋರುವ ಪ್ರೀತಿ, ವಾತ್ಸಲ್ಯಗಳು ಹ
ಯಲ್ಲವೆನಿಸುತ್ತದೆ.

ಮೇಲಿನೆರಡು ನಾಟಕಗಳಲ್ಲಿ ಗುರಿಯು ಒಂದೇ ಆಗಿದ್ದರೂ ಸಾಧಿಸಿದ ೦
ಯಲ್ಲಿ 'ಬೆರಳ್‌ಗೆ ಕೊರಳ್' ಮೇಲ್ಮಟ್ಟದ್ದಾಗಿದೆ. "ಕುವೆಂಪುರವರ ಪ್ರತಿಭೆ ಕಲ್ಪನ
ಶಕ್ತಿಗಳೂ ಅದರಿಂದ ನೈಸರ್ಗಿಕವಾಗಿ ಕಾಣಬರುವ ಸಂವಿಧಾನ ಕೌಶಲ ಪಾತ್ರಸೃ
ಗಳೂ ಕಾವ್ಯದ ಉದ್ದಕ್ಕೂ ಕಾಣಬರುವ ಧ್ವನಿಪೂರ್ಣವಾದ ಅರ್ಥಪೂರ್ಣವಾ
ರಸಮಯವಾದ ಸಂಭಾಷಣೆಗಳೂ ಅಲ್ಲಲ್ಲಿ ಒಡಮೂಡಿರುವ ಪ್ರತಿಮೆಗಳು
ಎಲ್ಲಕ್ಕೂ ಹೆಚ್ಚಾಗಿ ಅವರು ಕಾಣುತ್ತಿರುವ ನೂತನ ದರ್ಶನವೂ ಈ ದೃಶ್ಯ ಕಾ
ವನ್ನು ಅದ್ವಿತೀಯವಾಗಿ ಮಾಡಿವೆ"(5) ಮೇಲಾಗಿ ಗ್ರೀಕ್ ರುದ್ರ ನಾಟಕದ
ಕಾಣಬರುವ ಒಂದು ಸಾಮಾನ್ಯ ತತ್ವ.

"ಅಂತೆ ಕರ್ಮದ ಪಾಂಗು ; ಮರಿಗೆ ಮರಿ ; ಮರಿಗೆ ಮರಿ ;
....ಮುಂದೇನ್ ಕಾದಿಹುದೊ ವಿಧಿಯುಲಿಗುಂ" (ಬೆ.ಕೊ)
"ಯಾವೊಂದು ಕೆಲಸವನ್ನೆಸಗಲೆಸಗಿದ ಕೆಡುಕೆ ಕೊನೆಗದಕೆ
ಮುಳುಸಹುದು ! ಇದರೊಳಿಬ್ಬಗೆ ಎಡೆಯ"(ಹೆಬ್ಬೆರಳು)

5 ಕನ್ನಡ ನಾಟಕ, ಪು. ೨೬೬

ಇದೇ ವಿಧಿಯ ಕೈವಾಡ.

ಕಂಡ ಸ್ವಪ್ನ ನಿಜವೋ ಸುಳ್ಳೋ, ಕಂಡ ಬಿಂಬ ದಿಟವೋ ಸಟೆಯೋ, ಆದರೆ ಅಜ್ಜಿಯ ಬಾಯಿಂದ ಹೊರಬಿದ್ದ ನುಡಿಗಳು ಸತ್ಯವಾಗುವವು.

ತ್ಯಾಗದಿಂದ ವ್ಯಕ್ತಿ ಔನ್ನತ್ಯವನ್ನು ಹೊಂದುತ್ತಾನೆಂಬುದು ಹೊಸ ವಿಚಾರವೇನಲ್ಲ: ಆದರೆ ಅದನ್ನು ಇತರರು ಗಮನಿಸಿದಾಗಲೇ ಪ್ರದರ್ಶನಕ್ಕೆ, ಬೆಳಕಿಗೆ ಬರಲು ಸಾಧ್ಯ. ಎಲ್ಲೋ ಮಹಾಭಾರತದಲ್ಲಿ ಏಕಲವ್ಯನು ಈ ಬೆರಳ್ ನೀಡುವ ಪ್ರಸಂಗವು ಇದ್ದೂ ಇಲ್ಲದಂತಿದ್ದು ಕವಿವರ್ಯರಿಬ್ಬರ ಗಮನವು ಆ ಕಡೆ ಹರಿದು ಏಕಲವ್ಯನ ನಾಮ ಶಾಶ್ವತಗೊಳ್ಳುವಂತೆಯೂ, ಗುರುನಿಷ್ಠೆ, ವಿನಯ ಸೌಶೀಲ್ಯಗಳು ಬೆಳಕಿಗೆ ತರುವದಲ್ಲದೆ ಅವನಲ್ಲಿ ಗೌರವ ಭಾವನೆಯು ಮೂಡುವಂತೆ ಮಾಡಿದರು.

"Great things can be done by great sacrifices only. Be great. No great work can be done without sacrifice"

ಎಂಬ ವಿವೇಕಾನಂದರ ನುಡಿ ಮುತ್ತುಗಳನ್ನು ಏಕಲವ್ಯನಂದೇ ಸಾಧಿಸಿದ್ದನೆಂಬುದರಲ್ಲಿ ಸಂಶಯವಿರದು.

—: :—

ಕನ್ನಡಕ್ಕಾಗಿ ಕೈಎತ್ತು ನಿನ್ನಕೈ
ಕಲ್ಪವೃಕ್ಷವಾಗುತ್ತದೆ; ಕನ್ನಡಕ್ಕಾಗಿ ಕೊರಳೆತ್ತು
ಅಲ್ಲಿ ಪಾಂಚಜನ್ಯ ಮೂಡುತ್ತದೆ
ಕನ್ನಡಕ್ಕಾಗಿ ಕಿರು ಬೆರಳೆತ್ತಿದರೂ ಸಾಕು
ಅದು ಗೋವರ್ಧನ ಗಿರಿಧಾರಿಯಾಗುತ್ತದೆ.

—: :—

ಕವಿಯ ಮನ ನಂದನವನ;
ಆನಂದದಿಂದ ರಸನಿಕೇತನ;
ಅಲ್ಲಿ ಪಾಪವೂ ಪುಣ್ಯದ ವಾಹನ
ಅಲ್ಲಿ ದುಃಖವೂ ಸುಖದ ಜವಾನ
ಅಲ್ಲಿ ಸಾವೂ ಅಮೃತ ಯಾನ!

ಕವಿಗೆ ಕರ್ಣಂ ಪ್ರಮಾಣಂ ವ್ಯಾಕರಣಮಲ್ತು

ಶ್ರೀಮತಿ ಎಸ್. ರತ್ನಮ್ಮ, ಎಂ. ಎ.

—: :—

'ವ್ಯಾಕರಣ ಮೇಕೆಂಬೆಯೋ ಮರೆಯಲ್ಕೆ ಕಲ್ತು' ಎಂದು ವ್ಯಂಗ್ಯ ಹಾ
ದಲ್ಲಿ ಕಟಕಿಯಿಂದ ವಿದ್ಯಾರ್ಥಿದೆಸೆಯಲ್ಲಿ ವ್ಯಾಕರಣ ಸೂತ್ರಗಳನ್ನು ಗಟ್ಟು ಮ
ಕಷ್ಟಪಡುತ್ತಿದ್ದ ಸಂದರ್ಭದಲ್ಲಿ ಕವಿ ಕುವೆಂಪು ಹೇಳಿದ ಮಾತಿದು. ಆಗಿನ್ನೂ
ಕುವೆಂಪು ತರುಣ ವಿದ್ಯಾರ್ಥಿ. ಆದರವರು ವ್ಯಾಕರಣ ಶಾಸ್ತ್ರದ ಪ್ರಧಾನೋಪಾ
ರಾಗಿ ಭಾಷಾಸರಸ್ವತಿಯ ನಿಜ ದರ್ಶನವನ್ನು ಆಗಲೇ ಪಡೆದಿದ್ದುದು ಅತ್ಯ
ವಿಸ್ಮಯಕರವಾದದ್ದು. ಈ ಮಾತು ಕವಿ ಕುವೆಂಪು ಹೇಳಿದುದಾದರೂ ಕು
ಎರಡು ಸಾವಿರ ವರ್ಷಗಳಿಂದ ಹರಿದು ಬರುತ್ತಿರುವ ಕನ್ನಡ ಭಾಷೆಯ ಪ
ಯೊಬ್ಬ ಮಹಾ ಕವಿಯ ಅಂತರ್ಯದ ಮಿಡಿತವಾಗಿದೆ.

ಕನ್ನಡ ನುಡಿ ಮೂಲ ದ್ರಾವಿಡ ವೃಕ್ಷದಿಂದ ಬಿಡಿಯಾಗಿ ಕಳಚಿದಂದಿನಿ
ಅದನ್ನು ಸಂಸ್ಕೃತ ಭಾಷೆಯ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷಾ ಸಂಪರ್ಕಗ
ಸರ್ವತೋಮುಖವಾಗಿ ಪೋಷಿಸಿ ಸಲಹುತ್ತಿದೆ. ಆದರಿದು ಸಂಸ್ಕೃತ ಭಾಷೆ
ವ್ಯಾಕರಣ ಸೂತ್ರಗಳ ವಜ್ರಾಭರಣಗಳನ್ನು ತೊಡಿಸಿ ಕನ್ನಡ ನುಡಿಗಟ್ಟಿನ ಮೂ
ವಿಗ್ರಹನನ್ನು ಸಂಪೂರ್ಣವಾಗಿ ಮುಚ್ಚಿದ ಆಡಂಬರದ ಪೂಜೆಯಾಗಿದೆ. ಅಲಂ
ಸಿದ ಜಾಣ್ಮೆಯನ್ನು ಹೊಗಳಿದರೂ ವಜ್ರಾಭರಣಗಳ ಬೆಲೆಯನ್ನರಿತು ಜೆ
ದಾನಿಗಳ ದಾನವನ್ನು ಕೊಂಡಾಡಿದರೂ, ಭಕ್ತ ಕಾಣಬಯಸುವುದು ಮೂಲ ವಿ
ಹದ ಸಹಜ ಸೌಂದರ್ಯ ಮತ್ತು ದೇವತ್ವವನ್ನು. ಹಾಗೆಯೇ ಪ್ರತಿಯೊ
ಕನ್ನಡ ಮಹಾಕವಿಯೂ ಕ್ರಾಂತಿಕಾರ ಭಕ್ತನಂತೆ ಹೋರಾಡಿ ಈ ವ್ಯಾಕರ
ಸೂತ್ರಗಳ ವಜ್ರಾಭರಣಗಳ ಅಲಂಕಾರಗಳನ್ನು ಕಿತ್ತು ಮೂಲ ಭಾಷಾ ಸ
ಸ್ವತಿಯ ಸಹಜ ರೂಪವನ್ನು ಪ್ರತಿಯೊಬ್ಬರಿಗೂ ತೋರಿಸಿಕೊಟ್ಟಿದ್ದಾರೆ! ಕ
ಕುವೆಂಪು. ಮರೆಯಲಾಸೆಪಟ್ಟ ವ್ಯಾಕರಣ ನಿಯಮಗಳು ಇಂತಹ ಕೃತ
ಸಂಸ್ಕೃತ ಭಾಷಾ ವ್ಯಾಕರಣ ನಿಯಮಗಳು. ಕುವೆಂಪುರವರ ಶಕ್ತಿ ಪೂರ್ಣ
ವರ್ಣಾಕರ್ಷಣೆಯಲ್ಲಿ ವ್ಯಾಕರಣದ ನಾಗ ಸೂತ್ರಗಳಿಲ್ಲಾ ತಮಗೆ ತಾವೇ ಕ
ಕೊಂಡು ಕನ್ನಡ ನುಡಿ ಮೈದುಂಬಿ ಅಚ್ಚ ದ್ರಾವಿಡ ಭಾಷಾ ಸ್ವಾತಂತ್ರ್ಯದಿ
ಕಂಗೊಳಿಸುತ್ತಿದೆ. ಕುವೆಂಪು ಕನ್ನಡ ನುಡಿಗಟ್ಟನ್ನು ಸಂಪೂರ್ಣವಾಗಿ ಕಲ್ತು ರ
ಗತಮಾಡಿಕೊಂಡಿದ್ದಾರೆ. ಮಹಾಕವಿ ಇಟ್ಟ ದಿಟ್ಟ ಹೆಜ್ಜೆಯೇ ಮುಂದಿನವ
ಹೆದ್ದಾರಿ.

'ಕವಿಗೆ ಕರ್ಣಂ ಪ್ರಮಾಣಂ, ವ್ಯಾಕರಣ ಮಲ್ತು' ಎಂಬ ಹೇಳಿಕೆ ಎರಡು ಸಾವಿರ ವರ್ಷಗಳ ಹಿಂದಿನಿಂದಲೂ ಬಳಕೆಯಲ್ಲಿರುವ ನಿಯಮ. ಮಹಾಕವಿ ತನ್ನ ದಿಗಂತ ವ್ಯಾಪಕ ಪ್ರತಿಭಾ ವಿಮಾನದಲ್ಲಿ ಕುಳಿತು ಕಲ್ಪನೆಯ ಮಾಧ್ಯಮದ ಮೂಲಕ ಮಹಾಕಾವ್ಯ ಸಂದರ್ಶನ ಬೃಹತ್ ಪ್ರಯಾಣವನ್ನು ಕೈಗೊಳ್ಳುತ್ತಾನೆ. ಹಾಗೆ ಮಹಾಕವಿಯ ದಿವ್ಯ ಪ್ರತಿಭಾ ವಿಮಾನ ಆಕಾಶದಲ್ಲಿ ಹಾರಲು ತೊಡಗಿದಾಗ ವಿಮಾನ ನಿಲ್ದಾಣದ ದಿಗ್ದರ್ಶಕನಾಗಿ ವ್ಯಾಕರಣಗಾರ ತನ್ನ ದಿಕ್ಸೂಚಕ ಸ್ಥಂಭ ವನ್ನೇರಿ ಕೈ ಬಾವುಟವನ್ನು ಬೀಸಿ ವಿಮಾನ ಪಥವನ್ನು ಗುರುತಿಸುತ್ತಾನೆ. ನಿಜ ವಾಗಿ ವ್ಯಾಕರಣಕಾರ ಮಹಾಕವಿ ನಿಯಂತ್ರಿಸುತ್ತಿರುವ ಕಾವ್ಯಸಂಚಾರ ಮಾಧ್ಯಮ ವನ್ನು ಸಾಮಾನ್ಯ ಸಹೃದಯರಿಗೆ ತೋರಿಸುವ ಸ್ಥಾನದಲ್ಲಿ ನಿಲ್ಲುತ್ತಾನೆ. ಯಾವ ರೀತಿಯಲ್ಲಿ ಮಹಾ ವಿಮಾನ ಯಾಂತ್ರಿಕನಿಗೆ ತನ್ನ ವಿಮಾನದ ಸಮಸ್ತ ಯಾಂತ್ರಿಕ ಸಲಕರಣೆಯ ಸಂಪೂರ್ಣ ಪರಿಚಯ ಇರಲೇ ಬೇಕಾಗಿದೆಯೋ ಅದೇ ರೀತಿಯಲ್ಲಿ ಮಹಾ ಕವಿಯಾದವನಿಗೆ ತನ್ನ ಭಾಷೆಯ ಸಮಸ್ತ ಭಾಷಾ ಸೂತ್ರಗಳ ವಿಶಯ ದಲ್ಲಿಯೂ ಸಂಪೂರ್ಣ ಹತೋಟಿ ಇದ್ದೇ ಇರುತ್ತದೆ. ವಿಮಾನ ಯಾಂತ್ರಿಕ ಆಕಾಶ ದಲ್ಲಿ ಸಂಚಾರ ಹೊರಡುತ್ತಾನೆ. ಯಂತ್ರ ಕುಶಲಜ್ಞ ಸಂಚಾರ ಹೊರಡದೆ ಕೆಳಗೆ ನಿಲ್ಲುತ್ತಾನೆ. ಇದೇ ಕವಿಗೂ ವ್ಯಾಕರಣ ಕಾರನಿಗೂ ಇರುವ ಮೊದಲ ವ್ಯತ್ಯಾಸ. ಪ್ರತಿಭಾ ಪೂರ್ಣ ವಾಗ್ದೇವಿಯ ವರದತ್ತನಾದವನು ವಿಮಾನ ಸಂಚಾಲಕನಂತೆ ಕವಿ ಯಾಗುತ್ತಾನೆ. ಆ ಪ್ರತಿಭಾಶಕ್ತಿ ಇಲ್ಲದವನು ಕೇವಲ ವ್ಯಾಕರಣಕಾರನಾಗಿ ಕೆಳಗೆ ನಿಲ್ಲುತ್ತಾನೆ.

'ಕವಿಗೆ ಕರ್ಣಂ ಪ್ರಮಾಣಂ, ವ್ಯಾಕರಣ ಮಲ್ತು' ಕವಿಯ ಕರ್ಣ ಪ್ರಮಾಣ ವನ್ನು ಕೆಳಗಿನ ಉದಾಹರಣೆಗಳಿಂದ ನೋಡೋಣ :—

(೧) ಪದ್ಯ ರಚನೆಯಲ್ಲಿ ತೊಡಗಿರುವ ಕವಿಗೆ ಪ್ರತಿಭಾ ಪೀಠದಲ್ಲಿ ಕುಳಿತು ತಾನು ಮಾಡುತ್ತಿರುವ ದಿವ್ಯ ಕಾವ್ಯ ಯಜ್ಞಕ್ಕೆ ಯಾವ ಯಾವ ಪದಗಳ ಹವಿ ಸ್ಸನ್ನು ತಂದು ನೀಡುತ್ತಿರುವನೋ ಅದರ ಅರಿವು ಇರುವುದಿಲ್ಲ. ಪ್ರತಿಭಾಗ್ನಿ ಆರಿದ ನಂತರ ತಾನು ಹೋಮ ಮಾಡುತ್ತಾ ಮುತ್ತುಗದ ಎಲೆಯನ್ನು ಹಾಕುವುದರ ಬದಲು ಮುತ್ತುಗದ ಎಲೆಯಂತೆ ತೋರುತ್ತಿದ್ದ ಮುಳ್ಳು ಮುತ್ತುಗದ ಎಲೆಯನ್ನು ಹಾಕಿರುವುದು ಗೋಚರವಾಗುತ್ತದೆ. ಕಣ್ಣು, ಕಿವಿ, ಮನಸ್ಸು, ಹೃದಯ ಇವು ಗಳಿಗೆ ಲಘುವೆಂದು ಕಾಣಿಸಿದ ಒಂದು ಅಕ್ಷರ ಛಂದಸ್ಸಿನ ದೃಷ್ಟಿಯಿಂದ, ಸ್ಥಾನ ಬಲದಿಂದ, ಗುರುವಾಗುತ್ತದೆ. ಆದರೆ ಆ ಅಕ್ಷರವನ್ನು ಕಿತ್ತು, ಆ ಪದವನ್ನು ಅಳಿಸಿ ತಿದ್ದಿ ಬರೆಯಲು ಕವಿ ಕಣ್ಣ ನ ಹಗ್ಗ ಹೊಸೆಯುತ್ತಿಲ್ಲ, ಆದ್ದರಿಂದ ಇಟ್ಟ ಪದ ವನ್ನು ಅಳಿಸದೆ ಇಂತಹ ಸಂದರ್ಭದಲ್ಲಿ ಕವಿ ತನ್ನ ದಿವ್ಯ ವರ್ಚಸ್ಸಿನಿಂದ ಛಂದಸ್ಸಿನ ಶಿಷ್ಯ ನಿಯಮಕ್ಕೊಂದು ಹೊಸ ಪಾದವನ್ನು ಹಾಕಿ ತಿದ್ದುಪಡಿಯನ್ನು ಸೂಚಿಸು

ತ್ತಾನೆ. ಇದೇ ಶಿಥಿಲ ದ್ವಿತ್ವ ಅಥವಾ ಕವಿಗೆ ಪದ್ಯ ಬರೆಯುವ ರಭಸದಲ್ಲಿ ಸ್ವಾ ಬಲದ ಇಂತಹ ಗುರುವನ್ನು ಮರೆತೋ ಅಥವಾ ನಿರ್ಲಕ್ಷಿಸಿಯೋ ಕಣ್ಣು, ಕಿ ಬೆಲೆ ಕೊಟ್ಟು ಲಘುವೆಂದು ಭಾವಿಸಿ ಬರೆದಿರುತ್ತಾನೆ. ಅಥವಾ ಕವಿಗೆ ಒಂ ಮಾತ್ರೆ ಬೇಕಿದ್ದಾಗ ನಿಜವಾಗಿಯೂ ಗುರು ಎಂದು ತಿಳಿದಿದ್ದರೂ ಕೂಡಬೇಕೆಂ ಲಘುವೆಂದು ಭಾವಿಸಿ ಬರೆದಿದ್ದಿರಬಹುದು. ಅಥವಾ ಉದ್ವಿತ್ವದಿಂದ ಕೂ ಪದಗಳನ್ನು ದ್ವಿತ್ವದಿಂದಲೇ ಬರೆದು ಉಚ್ಚರಿಸಲು ಸಾಧ್ಯವಿಲ್ಲದ್ದರಿಂದ ಸರಳವ ಉಚ್ಚರಿಸಿದ್ದಿರಬಹುದು ಉದಾ :—

ನೆಗಱ್ದುದು ರಾಮಾಯಣಮುಂ
ನೆಗಱ್ದುದು ಭಾರತಮುಮಾಮಹಾಕವಿಗಳನಾ॥
ನೆಗಱ್ದರ್ ವ್ಯಾಸವಾಲ್ಮೀ
ಕಿಗಳೆನೆ ನೆಗಱ್ದುಭಯ ಕವಿಗಳೆಮಗಭಿವಂದ್ಯರ್.

ಈ ಶಿಥಿಲದ್ವಿತ್ವ ಮಹಾಕವಿವಾಣಿಯಲ್ಲಿ ಸೊಗಸು. ಹಾಗೆಂದು ಪ್ ಯೊಬ್ಬನೂ ಸಿಕ್ಕಾಬಟ್ಟೆ ಸಿಕ್ಕಿ ಸಿಕ್ಕಿದ ಸ್ಥಳಗಳಲ್ಲಿ ಸಿಕ್ಕಿ ಸಿಕ್ಕಿದ ಪದಗಳನ್ನು ಶಿ ಮಾಡದಿರಲಿ ಎಂದು 'ಶಿಥಿಲ ದ್ವಿತ್ವ' ನಿಯಮವನ್ನು ಆಚರಣೆಯಲ್ಲಿ ತಂದ ಮುಂದಿನ ಕವಿಗಳು ಭಾಷೆಯನ್ನು ಶಿಥಿಲ ಮಾಡದಿರಲಿ ಎಂದು ಹದಿಮೂರನೇ ಶತಮಾನದವರೆಗಿನ ಎಲ್ಲಾ ಶಿಥಿಲ ದ್ವಿತ್ವ ಪದಗಳನ್ನೂ ಪಟ್ಟಿಹಾಕಿ ಇನ ಮುಂದೆ ಬೇರೆ ಪದಗಳಲ್ಲಿ ಶಿಥಿಲ ದ್ವಿತ್ವ ಮಾಡಕೂಡದು ಎಂದು ಖಚಿತಪಡಿಸಿದ ಕಾಲಕ್ರಮೇಣ ಶಿಥಿಲ ದ್ವಿತ್ವ ತೇಲಿಹೋಯಿತು. ಕವಿ ಕುವೆಂಪು ಶಿಥಿಲ ದ್ವಿತ ಸೊಗಸನ್ನು ಕಂಡರು. 'ರಾಮಾಯಣ ದರ್ಶನಂ'ನಲ್ಲಿ ಶಿಥಿಲ ದ್ವಿತ್ವದಿ ಕೂಡಿದ ನೂರಾರು ಪದಗಳನ್ನು ಬಳಸಿದರು.

ಪದ ಸ್ವರೂಪ

ಪದಗಳು ಸಾಮಾನ್ಯವಾಗಿ ಖಚಿತ ರೂಪಗಳಿಂದ ಮಾತ್ರಾವ್ಯವಸ್ಥೆಗಳ ಕೂಡಿರುತ್ತವೆ. ಆದರೆ ಮಹಾಕವಿಯ ದಿವ್ಯ ಪ್ರತಿಭಾ ಪ್ರನಾಳಿಕೆಯಲ್ಲಿ ಈ ಪ ಗಳೆಲ್ಲವೂ ಅಕ್ಕಸಾಲೆಯ ಇಕ್ಕುಳದಲ್ಲಿ ಸಿಕ್ಕಿ ರೂಪ ಪಡೆಯುವ ಸ್ವರ್ಣಾಭರ ಗಳಂತೆ ರೂಪಗೊಳ್ಳುತ್ತವೆ. ಆಗ ಕವಿ ತನ್ನ ದಿವ್ಯ ಶಕ್ತಿಯಿಂದ ಪದಗಳನ ಅರಳಿಸಬಲ್ಲ, ನಗಿಸಬಲ್ಲ. ಅಳಿಸಿ ಕೊರಗಿಸಲೂ ಬಲ್ಲ. ಹೀಗಾಗಿ ಕವಿ ಒಂ ಪದದಲ್ಲಿ ಒಂದು ಮಾತ್ರೆಯಷ್ಟು ವ್ಯತ್ಯಾಸ ಮಾಡಿಕೊಳ್ಳುತ್ತಾನೆ. ಹಾಗೆಂ ಪ್ರತಿಯೊಬ್ಬ ಕವಿಯೂ ಇಂತಹ ವ್ಯತ್ಯಾಸಗಳನ್ನು ಮಾಡ ಹೊರಟಾಗ ಭಾಷೆ

ಪದಗಳ ಗತಿಯೇನಾಗಬೇಕು ? ಆದ್ದರಿಂದಲೇ ವ್ಯಾಕರಣಕಾರ ಈ ಸ್ವಚ್ಛಂದತೆಗೆ, ಕೀಳ್ಕೃತಿಗಳ ಸ್ವಾತಂತ್ರಕ್ಕೆ ಅಡ್ಡಿ ತಂದು ನಿಯಮಗಳನ್ನು ರಚಿಸಿದನು.

ಉದಾಹರಣೆ

ಅಬಿಂದುಗಳು, ಸಬಿಂದುಗಳು, ಸರೇಪು, ವಿಕ್ಕೆ ಸಂದೇಹವಾದ ಅಕ್ಷರಗಳು, ವಿಕ್ಕೆ ಪುಟ್ಟೆ 'ಳ' ವಾದ ಪದಗಳು ಮತ್ತು ತಪ್ಪು ಪ್ರಾಸಗಳು.

ವಿಭಕ್ತಿ ಪಲ್ಲಟ

ಕರ್ತೃ ಮತ್ತು ಕರ್ಮ ಪದಗಳ ನಡುವಣ ಕಾರ್ಯ, ಕಾರಣ, ಕಾರಕ ಸಂಬಂಧಗಳನ್ನು ತೋರಿಸಲು ವಿಭಕ್ತಿ ಪ್ರತ್ಯಯಗಳನ್ನು ಬಳಸುತ್ತಾರೆ. ಆದರೆ ಮಹಾಕವಿ ಈ ವಿಭಕ್ತಿ ಪ್ರತ್ಯಯಗಳ ಪಲ್ಲಟದಿಂದ ದಿವ್ಯ ಶಕ್ತಿಯೊಂದನ್ನು ಸಾಧಿಸುತ್ತಾನೆ. ಒಂದು ಬಾಣ ಹೊಡೆದು ಎರಡು ಗುರಿಗಳನ್ನು ಸಾಧಿಸಿದಂತೆ ಒಂದು ಒಂದು ಮಾತ್ರೆಯ ವ್ಯತ್ಯಾಸದಲ್ಲಿ ವಿಭಕ್ತಿ ಪಲ್ಲಟವನ್ನು ಜೊತೆಯಲ್ಲಿ ದಿವ್ಯ ಶಕ್ತಿ ಪ್ರದರ್ಶನವನ್ನು ಕವಿ ತೋರಿಸುತ್ತಾನೆ.

ಉದಾಹರಣೆ

ಗಧಾಯುದ್ಧದಲ್ಲಿ ರನ್ನನ ಅಶ್ವತ್ಥಾಮ ರಣರಂಗಕ್ಕೆ ಬರುತ್ತಾ ದಾರಿಯಲ್ಲಿ ರಾಜ್ಯಲಕ್ಷ್ಮಿಯನ್ನು ಕಂಡು.—"ನೀನಾರ್ಗೆ ? ಎತ್ತಣಿಂ ಬಂದಪೆ ? ಎಲ್ಲಿಗೆ ಪೋದಪೆ ?" ಎಂದು ಬೆಸಗೊಳ್ಳುವುದನ್ನು ನಾವು ಕಾಣುತ್ತೇವೆ.

ಇಲ್ಲಿ ವಿಭಕ್ತಿ ಪಲ್ಲಟ ಮಾತ್ರವಲ್ಲ, ರಾಜಲಕ್ಷ್ಮಿಯನ್ನು ಏಕ ವಚನದಲ್ಲಿ 'ನೀನಾರ್ಗೆ ?' ಎಂದು ಭರ್ತ್ಸನೆಯ ನುಡಿಯಲ್ಲಿ ಯಾವಳೋ ಅನಾಮಧೇಯಳನ್ನು ನುಡಿಯುವ ಧಾಟಿಯಲ್ಲಿ ನುಡಿದು ಅಶ್ವತ್ಥಾಮ ಆರ್ಭಟಿಸಿದಾಗ ವಿಭಕ್ತಿ ಪಲ್ಲಟ ವ್ಯಾಕರಣ ವೈಶಿಷ್ಟ್ಯತೆಯಷ್ಟೇ ಅಲ್ಲ, ಅಶ್ವತ್ಥಾಮನ ಆತ್ಮಪ್ರತ್ಯಯ, ಮಹಾವೀರನ ಧೈರ್ಯ ಗೋಚರವಾಗುತ್ತಿದೆ. ಮುಂದೆ ಅವಳನ್ನು ಮುಂದಲೆವಿಡಿದು ಘಟ ಜೇಟಿಯಂತೆ ಎಳೆತಂದು ಕುರು ಸಾರ್ವಭೌಮನೆದುರು ನಿಲ್ಲಿಸಿ ಗಾಳಿಬೀಸು ಎಂದು ಆಜ್ಞಾಪಿಸಿದಾಗ ಅರಿವಾಗುತ್ತದೆ ಕವಿಗೆ 'ಕರ್ಣಂ ಪ್ರಮಾಣಂ ವ್ಯಾಕರಣ ಮಲ್ತು' ಎನ್ನುವುದರ ದಿವ್ಯ ಸತ್ಯ.

ಮೇಲು ನೋಟಕ್ಕೆ ಸಾಮಾನ್ಯ ವ್ಯಾಕರಣ ನಿಯಮಕ್ಕನೂಸಾರವಾಗಿ ಕನ್ನಡ ವಾಕ್ಯ ರಚನೆಯಾಗುವುದು ಕರ್ತೃ, ಕರ್ಮ, ಕ್ರಿಯೆಯ ಧಾಟಿಯಲ್ಲಿ. ಈ ಧಾಟಿಯನ್ನನುಸರಿಸಿ ಕೆಲವು ಸಲ ಕೃತಿಗಳಲ್ಲಿ ಪದ ವಿಭಾಗಮಾಡಿ ತಾತ್ಪರ್ಯ ಅನ್ವಯಸಾರ್ಥ ಹೇಳುವ ಸಮಯದಲ್ಲಿ ಕವಿಯ ಮಹಾ ತೇಜಸ್ಸನ್ನು ಬೆಂಕಿಯನ್ನಾರಿಸಿ ಇದ್ದಿಲನ್ನು ಉಳಿಸುವರು.

ಉದಾಹರಣೆ

ಕುಮಾರ ವ್ಯಾಸನಲ್ಲಿ 'ಕಡಿತಾ ಆಸ್ಥಾನ... ... .' ಆಸ್ಥಾನ ಕಡಿ ಎಂದು ಅನ್ವಯಮಾಡಿದಾಗ ನಾವು ಕಾಣುವ ಅರ್ಥ ಬಂಗಾರಕದ ಕುಂಬಿಯು ಗುಂಡಿಲ್ಲದೆ ಮಿಾಟಿದಂತೆ !

ಆದರೆ ಒಳಹೊಕ್ಕು ನೋಡಿದಲ್ಲಿ ಕನ್ನಡ ವಾಕ್ಯರಚನೆ ಕರ್ತೃ ಕವ ಕ್ರಿಯೆಯ ಆಳತೆಗೋಲಿಗೆ ಉರುಳಾಗಬೇಕಾಗಿಲ್ಲ. ದ್ರಾವಿಡ ಭಾಷಾ ಲಕ್ಷಣಕ್ಕೆ ಸಾರವಾಗಿ ವಾಕ್ಯದಲ್ಲಿ ಕರ್ತೃ ಮತ್ತು ಕರ್ಮ ವಿಶೇಷಣ (Attributio (Noun + Attribution) ಗಳ ಪ್ರಧಾನತೆಯು ಎದ್ದು ತೋರುವುದು.

ವಾಕ್ಯರಚನೆ

ಕರ್ತೃಪದ, ಕರ್ಮಪದ, ಕ್ರಿಯಾಪದ, ಈ ಮೂರು ಪದಗಳೂ ಅನುಕ್ರ ವಾಗಿ ಬರುವ ಧಾಟಿಯಲ್ಲಿ ಬರೆದುದೇ ಕನ್ನಡ ಭಾಷೆಯಲ್ಲಿ ವಾಕ್ಯಗಳಾಗುತ್ತ ಅಕರ್ಮಕ ಮತ್ತು ಸಕರ್ಮಕ ಎಂಬ ಎರಡು ಬಗೆಯ ವಾಕ್ಯಗಳಿವೆ. ಈ ವಾ ಗಳಲ್ಲಿ ಎರಡು ಪ್ರಯೋಗಗಳಿವೆ (೧) ಕರ್ತರಿ (೨) ಕರ್ಮಣಿ. ಕನ್ನಡ ಭಾ ಯಲ್ಲಿ ಸಂಪೂರ್ಣ ಕ್ರಿಯಾಪದದ ರೂಪಗಳೇ ಇಲ್ಲ, ಮಾತ್ರವಲ್ಲ. ಕ್ರಿಯಾ ಗಳಿಲ್ಲದೆಯೇ ವಾಕ್ಯರಚನೆ ನಡೆಯುತ್ತದೆ.

ಉದಾಹರಣೆ

ಕುವೆಂಪು --> ಕಲ್ಪನೆ ನಕ್ಷತ್ರಯಾತ್ರಿ. ಇತ್ಯಾದಿ.

ವಡ್ಡಾರಾಧನೆ --> ಮಾಹಿಷ್ಮತಿ ಎಂಬುದು ಪೊಳಲ್.

ಕುಮಾರವ್ಯಾಸ--> ಕದಣ

ಪಂಪ ಹಲಗೆ ಬಳಪವ ಹಿಡಿಯ ದೊಂದಗ್ಗಳಿಕೆ.

ಕವಿಗೆ ಕರ್ಣಂ ಪ್ರಮಾಣಂ ವ್ಯಾಕರಣ ಮಲ್ತು. ಮಹಾಕವಿ ನಿಜವಾ ವ್ಯಾಕರಣಗಾರ. ಅವನ ಕಾವ್ಯ ಮೂಸೆಯಲ್ಲಿ ಭಾಷೆಯ ಸಮಸ್ತ ಕಲುಷ ಪೂ ರಚನೆಗಳೂ ಕರಗಿಹೋಗುತ್ತವೆ. ಶುದ್ಧ ಚಿನ್ನದಿಂದ ಕೂಡಿದ ದಿವ್ಯ ಪ್ರತಿ ಯೊಂದನ್ನು ನಿರ್ಮಾಣಮಾಡಿ ನಮ್ಮೆದುರು ಪ್ರದರ್ಶಿಸುತ್ತಿರುವ ಕವಿ ತನ್ನ ಅ ಭವವನ್ನೇ ಪ್ರಧಾನವಾಗಿಟ್ಟುಕೊಳ್ಳುತ್ತಾನೆ. ಶುಷ್ಕ ನಿಯಮಗಳನ್ನ ಆದ್ದರಿಂದಲೇ ಅವನಿಗೆ "ಕರ್ಣಂ ಪ್ರಮಾಣವೇ" ಹೊರತು ವ್ಯಾಕರಣವಲ್ಲ.

ಕನ್ನಡ ಕಿಂಕಿಣಿ

ಶ್ರೀ ಸಾ. ಶಿ. ಮರುಳಯ್ಯ, ಎಂ. ಎ.

೧

ಆಧುನಿಕ ಕನ್ನಡ ಸಾಹಿತ್ಯ ಇಂಗ್ಲೀಷಿಗೆ ಬಹು ವಿಧದಲ್ಲಿ ಋಣಿ. ಏಕೆಂದರೆ, ಅದರಿಂದ ಇದು ತುಂಬಾ ಉಪಕೃತವಾಗಿದೆ. ಅದರ ಸಂಸರ್ಗದಿಂದಲೇ ಸರ್ವಾಂಗ ಸುಂದರವಾಗಿ ಬೆಳೆಯಿತು ಎನ್ನಬಹುದು. ಅಲ್ಲಿನ Lyrics, Novels, Short-stories, Essays, and Criticism—ಇಷ್ಟೂ ರೂಪಗಳನ್ನು ಕನ್ನಡಕ್ಕೆ ಭಾವಗೀತೆ, ಕಾದಂಬರಿ, ಸಣ್ಣಕತೆ, ಪ್ರಬಂಧ, ವಿಮರ್ಶೆ ಎಂಬ ಹೆಸರುಗಳಿಂದ ಹೊಂದಿಸಿಕೊಂಡಿದ್ದೇವೆ. ಆದರೆ ನಾವು ಇಂಗ್ಲೀಷಿನಿಂದ ಬಾಹ್ಯ ರೂಪಗಳನ್ನು ಪಡೆದಿವೇ ಹೊರತು ಅದರ ಅಂತಸ್ಥವಾದ ಆತ್ಮವನ್ನಲ್ಲ. ಆತ್ಮ ನಮ್ಮದು: ಭಾರತೀಯವಾದದ್ದು. ಹೆಚ್ಚು ಹೇಳಬೇಕೆಂದರೆ ಅಲ್ಲಿನ ಅಸ್ಥಿಪಂಜರಕ್ಕೆ ನಮ್ಮ ಭಾರತೀಯ ರಕ್ತ, ಮಾಂಸ, ಮೇದಸ್ಸು, ಚರ್ಮ, ಬಣ್ಣಗಳನ್ನು ಕೊಟ್ಟು, ನಮ್ಮದೇ ಆದ ಆತ್ಮವನ್ನೂ ಅನುಗ್ರಹಿಸಿ, ಅದೊಂದು ವಿನೂತನ ಚೇತನವೆನಿಸಿ ಬಾಳುವಂತೆ ಮಾಡಿದ್ದೇವೆ.

ರೂಪ ಅಲ್ಲಿಯದು, ಸ್ವರೂಪ ನಮ್ಮದು.

ಇಷ್ಟೇ ಅಲ್ಲ, ರೊಮ್ಯಾಂಟಿಕ್ ಶೈಲಿಯ ರಚನೆಯಲ್ಲಿ ನಾವು ಬಹು ಮುಂದೆ ಹೋಗಿದ್ದೇವೆ, ನವ್ಯ ಕಾವ್ಯರಚನೆಯಲ್ಲಿ ನಮ್ಮ ಕವಿಗಳು ಇಂಗ್ಲಿಷಿನ Modern poet ಗಳನ್ನು ಹಿಂದಿಕ್ಕಲಾಗದಿದ್ದರೂ ಭಾವಗೀತೆಗಳಲ್ಲಿ ಸರ್ವ ಸಿದ್ಧಿಯನ್ನು ಪಡೆದಿದ್ದಾರೆ. ಇಂದು ಇಂಗ್ಲಿಷಿಗೇ ಕಾಣಿಕೆಯಾಗಿ ಕೊಡಬಲ್ಲಷ್ಟು ರಾಶಿರಾಶಿಯಾಗಿ ಭಾವಗೀತೆಗಳು ನಮ್ಮಲ್ಲಿ ಸೃಷ್ಟಿಯಾಗಿವೆ. ಅಲ್ಲದೆ, ಸತ್ವದಲ್ಲಂತೂ ನಮ್ಮ ಕನ್ನಡ ಗೀತೆಗಳಿಗೆ ಸರಿ ಸಮಾನವಾಗಿ ಬೇರಾವ ಭಾಷೆಯ ಭಾವಗೀತವೂ ನಿಲ್ಲಲಾರದು ಎಂದರೆ ಅತಿಶಯೋಕ್ತಿಯಾಗಲಾರದು. ಭಾರತದ ಇತರ ಭಾಷಾ ಸಾಹಿತ್ಯ ಕನ್ನಡದಷ್ಟು ಶ್ರೀಮಂತವಾಗಿ ಬೆಳೆದಿಲ್ಲ. ಇದು ಹೆಮ್ಮೆಯ ಮಾತು. ಇಂಗ್ಲೀಷಿನ ಅತ್ಯುತ್ತಮ ಗೀತೆಯೆನ್ನುವುದು ನಮ್ಮ ಕನ್ನಡದ ಸಾಧಾರಣ ಪದ್ಯಕ್ಕೆ ಸಾಟಿಯಾಗ ಬಲ್ಲದು ಅಷ್ಟೆ. ಇದು ಬರಿಯ ಆತ್ಮ ಪ್ರಶಂಸೆಯ ಮಾತಲ್ಲ; ಸತ್ಯಸ್ಯ ಸತ್ಯ ಸಂಗತಿ. ಕನ್ನಡ ಕಾವ್ಯಕೋಶವನ್ನು ಪ್ರವೇಶಿಸಿ, ಸಂಶೋಧಿಸಿದವರಿಗೆ ಮಾತ್ರ ಈ ಮಾತಿನ ಸತ್ಯಾಂಶ ತಿಳಿಯುವುದು. ಹೆಚ್ಚು ಬೇಡ 'ಕಿಂಕಿಣಿ' ಯಂತಹ ಒಂದು ಕಿರುಗೆಜ್ಜೆಯನ್ನು ಮಿಡಿದರೆ ಸಾಕು ಅದರ ನಾದ ಎಂಥದು. ಮಾಧುರ್ಯ ಹೇಗೆ?

ಎಂಬ ಅರಿವಾಗುತ್ತದೆ. ಆಧ್ಯಾತ್ಮ ಅಂಶಗಳಿಂದ ಪರಿಪುಷ್ಟವಾದ ಆತ್ಮ ಗೀತಾಂಜ
ಈ ಕಿರಿಯ ಕಿಂಕಿಣಿ.

ಈ ಕಾವ್ಯಧಾಟಿ ಕನ್ನಡಿಗರಿಗೆ ಹೊಸದೇನೂ ಅಲ್ಲ. ಭಾವಗೀತೆ, ನವ್ಯಕಾವ ಸಣ್ಣಕತೆ, ಕಾದಂಬರಿ, ಪ್ರಬಂಧ, ವಿಮರ್ಶೆಗಳಂತೆ ಈ ರಚನಾ ರೂಪವನ್ನು ನಾ ಇನ್ನೊಬ್ಬರಿಂದ ಎರವಲು ಪಡೆಯಬೇಕಾಗಿಲ್ಲ. ಬೇರೆಯವರಿಗೆ ದಾನಕೊಡುವಷ್ಟು ನಮ್ಮಲ್ಲಿ ಸಂವೃದ್ಧಿಯಾಗಿದೆ. ಕ್ರಿ.ಶ. ಹನ್ನೊಂದು, ಹನ್ನೆರಡನೆಯ ಶತಮಾನಗಳ ವಚನಕಾರರಿಂದ ವಿಪುಲವಾಗಿ ಬೆಳೆದು ನಿಂತಿದೆ ಈ ಸಾಹಿತ್ಯದ ಬೆಳಸು. ವಿಶ್ವ ಮತ್ತಾವ ಸಾಹಿತ್ಯದಲ್ಲೂ ಕಾಣಸಿಗದ, ಈ ಕಾವ್ಯರೂಪ ಕನ್ನಡಕ್ಕೇ ಮೀಸಲ ಹಾಗೂ ವಿಶ್ವ ಸಾಹಿತ್ಯಕ್ಕೆ ಕನ್ನಡದ ಅಮೂಲ್ಯ ಕೊಡುಗೆ ಎಂದರೂ ತಪ್ಪ ಹಾಡಿದರೆ ಪದ್ಯ, ಓದಿದರೆ ಗದ್ಯ ; ಬಹಿರ್ರೂಪ ಸರಳ, ಅಂತರಂಗ ಗಹನ ; ಆಕಾ ದಲ್ಲಿ ವಾಮನ ಸಾಕಾರದಲ್ಲಿ ತ್ರಿವಿಕ್ರಮ ! ಇಲ್ಲಿ ಆರ್ಥಿಕ ಚಿಂತೆಗಿಂತ, ಆಧ್ಯಾ ಚಿಂತನೆ ಬಹಳ ; ಲೌಕಿಕಕ್ಕಿಂತ ಪಾರಮಾರ್ಥದ ವಿಶೇಷ ಬೋಧೆ ಇಲ್ಲಿದೆ. ಆದ ಈ ಬೋಧೆ ಬೋಧೆಯಾಗಿಯೇ ಮಾಡಿಲ್ಲ ಅದು ಭಾವದಿಂದ ದೀಪ್ತವಾಗಿ ಸಾ ತ್ಯದ ಸೊಬಗು ಸೌರಭಗಳನ್ನು ತಳೆದು ಅಭಿವ್ಯಕ್ತವಾಗಿದೆ.

ಈ ರೀತಿಯ ವಚನ ರಚನೆ ಬೇರೆ ಭಾಷಾ ಸಾಹಿತ್ಯದಲ್ಲೂ ಇದೆ. ಖಲೀ ಗಿಬ್ರಾನರ 'ಪ್ರವಾದಿಯ ತೋಟ' ವಿಶ್ವಕವಿ ರವೀಂದ್ರರ 'ತೋಟಗಾ 'ಕಿಶೋರ ಚಂದ್ರ', 'ಫಲಸಂಚಯ' ಇತ್ಯಾದಿಗಳನ್ನು ಹೆಸರಿಸಬಹುದು. ಇ ನಮ್ಮ ಶಿವಶರಣರ ವಚನಗಳಂತೆ, ಶ್ರೀ ಕುವೆಂಪುರವರ 'ಕಿಂಕಿಣಿ' ಯಂತೆ ಆಧ್ಯಾ ಅಂಶದಿಂದ ಪುಷ್ಟವಾಗಿ, ಆತ್ಮ ತೇಜದಿಂದ ಬೆಳಗಿದವುಗಳೇ. ಬಿಂದುವಿನಲ್ಲಿ ಸಿಂ ವನ್ನು ಅಡಗಿಸಿಡುವ ಸಾಹಸ ಈ ಕೃತಿಗಳಲ್ಲಿದೆ, ಅವನ್ನು ಆಳವಾಗಿ ಅಭ್ಯಸಿಸಿ ಮಾತ್ರ ಅವರ ಸೌಂದರ್ಯ ವೇದ್ಯವಾಗುವುದು. ಈ ಸೌಂದರ್ಯದಿಂದ ಸಂತೋಷವಷ ಅಲ್ಲ ಕೈವಲ್ಯವೂ ಪ್ರಾಪ್ತಿಯಾಗುತ್ತದೆ.

"೨"

'ಕಿಂಕಿಣಿ' ಕವಿಯ ಆಧ್ಯಾತ್ಮ ಅನುಭವಕ್ಕೆ ನೀಡಿದ ಅಭಿವ್ಯಕ್ತಿ. ಇದ ಭಾವಾಂಶಕ್ಕಿಂತ ಚಿಂತನಾಂಶದ ಪಾತ್ರ ಪ್ರಧಾನವಾಗಿರುವುದು ಕಂಡು ಬರುತ್ತ

ಭಾವ ವೀಚಿಗಳಳಿದು ಹೃದಯ ಸರೋವರ ನಿಸ್ತರಂಗ !
ಚಿಂತೆ ಯೂರ್ಮಿಗಳುಡುಗಿ ಚಿತ್ತವಾರಿಧಿ ಅಚಂಚಲ !
ಉಳಿದೆಲ್ಲ ಉಪಾಧಿಗಳನುಳಿದಾತ್ಮ ತಾನೆ ಕಿಂಕಿಣಿ !
ಆತ್ಮ ಸಂಧ್ಯಾರ್ಥೇನು ಕಿಂಕಿಣಿ !
ಅರ್ಥಮುಕ್ತ, ಭಾವದೀಪ್ತ, ಧ್ವನಿ ಪ್ರಚುರ ಕೇಳ್ :
ಧ್ಯಾನಫೇನು ಕಿಂಕಿಣಿ ! (ಕಿಂಕಿಣಿ ಪದ್ಯ ೧. ಪುಟ

[illegible]



ಶ್ರೀ ಜಾಳಿಹಳ್ಳಿ ರಂಗೇಗೌಡರು
ಖಜಾಂಚಿ

ಭಾವನೀತಿ, ಚಿಂತೆಮುಕ್ತಿ ಮೊದಲಾದ ಎಲ್ಲ ಉಪಾಧಿಗಳೂ ಅಳಿದು ಉಳಿದ ಮೇಲೆ ನಮಗೆ ಈ ಕಿಂಕಿಣಿಯು ಸಿಕ್ಕಣನ ಗೀತ ಕೇಳಿಸುವುದು! ಅಂದರೆ ನಮ್ಮ ಮನದ ಮಾನಸದಲ್ಲಿ ಬಗೆಬಗೆಯ ಭಾವ ತರಂಗಗಳು ಎದ್ದು ಅವು ಉಡುಗಬೇಕು; ಲೋಕ ಜೀವನದ ಹಲವಾರು ಚಿಂತೆಗಳು ಬತ್ತಬೇಕು; ಯಾವ ಜಂಜಾಟವೂ ಆತ್ಮಕ್ಕೆ ಭಾರವು ಆಗ, ಅದು ಆನಂದಕ್ಕಾಗಿ ಹಾಡಿಕೊಳ್ಳುತ್ತದೆ. ಅದೇ ಆತ್ಮ ಗೀತಾಂಜಲಿ! ಅದು 'ಅರ್ಥಮುಕ್ತ' ಅಂದರೆ ಸಾಧಾರಣ ಅರ್ಥದಿಂದ ಅದು ಬಹುದೂರ, ಅಥವಾ ಅದಕ್ಕೆ ಒಂದೇ ಅರ್ಥ ಸಲ್ಲದು. ಅದು ಚಿಂತನೆಯಿಂದ ಭರಿತವಾಗಿದ್ದರೂ ಭಾವದಿಂದ ಬೆಳಗಿರುತ್ತದೆ. ಬರೀ ಚಿಂತನೆಗೆ ಸ್ಥಾನ ಎಂದರೆ ಭಾವ ಇಲ್ಲ ಎಂದರ್ಥವಲ್ಲ. ಭಾವದ ಕಾವು ಇಲ್ಲದಿದ್ದರೆ ಅದು 'ಗೀತ'ವೇ ಅಲ್ಲ, ಆದ್ದರಿಂದ ಅದು 'ಭಾವದೀಪ್ತ', ಅಂತೆಯೇ ಅದು 'ಧ್ವನಿ ಪ್ರಚುರ!' ವಾಚ್ಯಕ್ಕಿಂತಲೂ ಹೆಚ್ಚಿನ ಸೂಚ್ಯವನ್ನು ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಂಡಿದೆ. 'ಕಾವ್ಯಸ್ಯಾತ್ಮಾ ಧ್ವನಿಃ' ಅಲ್ಲವೇ! ಅಂತೆಯೇ ನಮ್ಮ 'ಕಿಂಕಿಣಿ' ಒಂದು ಮಾತಿಗೆ ನೂರು ಅರ್ಥ ಹೇಳಿ, ನೂರು ಭಾವಗಳು ಮಿಡಿಯುವಂತೆ ಮಾಡುತ್ತಾಳೆ. ವಸ್ತು, ಅಲಂಕಾರ, ರಸಧ್ವನಿಗಳಿಗಿಂತ ಈಕೆ 'ದರ್ಶನ ಧ್ವನಿ'ಯ ಕಾಂತಿಯುತವಾದ ತಂತಿಯನ್ನು ಮೀಟಿ 'ಓಂ' ಕಾರದ ಝೇಂಕಾರಗೈಯುತ್ತಿದ್ದಾಳೆ. ಅದೇ ಓಂಕಾರದಲ್ಲಿ ತಾನೂ ಲಯಳಾಗಿ 'ಧಾನ್ಯಧೇನು' ವೆನಿಸಿದ್ದಾಳೆ. ಲೋಕ ನೀತಿಯನ್ನೂ, ಲೋಕೋತ್ತರ ರೀತಿಯನ್ನು ಜೊತೆ ಜೊತೆಯಲ್ಲೇ ತಿಳಿಸಿ ಅನಂತ ವಿಹಾರಕ್ಕೆ ಓದುಗನ ಆತ್ಮವನ್ನು ಅನುಗೊಳಿಸುತ್ತಾಳೆ ಈ ಸರಸ ಕಿಂಕಿಣಿ!

||೩||

ಪ್ರಯೋಗಕ್ಕೆಂದು ಒಂದೆರಡು ಕರ್ತವ್ಯಗಳನ್ನು ಆರಿಸಿಕೊಳ್ಳಬಹುದು— ಮೊದಲನೆಯದಾಗಿ 'ನೀನು ಪ್ರೇಮಮಯ' ಎಂಬ ಕವನ, ಇದರಲ್ಲಿ ಆಧ್ಯಾತ್ಮ ಚಿಂತನೆ ಇದೆ.

ಸೇರುವ ಗುರಿಯಷ್ಟೇ ಮುಖ್ಯ, ಆ ಗುರಿಯ ಅನ್ವೇಷಣೆ. ಸಾಧಕ ಈ ಹಾದಿಯಲ್ಲಿ ಯಶಸ್ವಿಯಾದರೆ ಸಾಕು! ಪರಮಾತ್ಮ ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವರೂಪಿ. ಆವನ ಅರಮನೆಗೆ ನೂರಾರು ಮಾರ್ಗಗಳಿವೆ, ನೂರಾರು ಹೆಬ್ಬಾಗಿಲುಗಳೂ ಇವೆ. ಏಕೆಂದರೆ ಆತ 'ಎಲ್ಲ ಕರ್ಮಗಳ ಆದರ್ಶ; ಎಲ್ಲ ಸಂಸ್ಕಾರಗಳ ಆದರ್ಶ; ಎಲ್ಲ ಭಾವಗಳ ಆದರ್ಶ, ಎಲ್ಲ ಆತ್ಮಗಳ ಆದರ್ಶ! ಆದ್ದರಿಂದಲೇ ಆತ 'ಪ್ರೇಮಮಯ' ನಾಗಿದ್ದಾನೆ. ಈ ಕರುಣಾಮೂರ್ತಿಯ ಕಾರುಣ್ಯಕ್ಕೆ ಸಿಕ್ಕ ಸಾಧಕ ಸಿದ್ಧನಾಗುವುದರಲ್ಲಿ ಸಂದೇಹವಿಲ್ಲ. ಆವನ ಕರುಣೆಗಾಗಿ ಈತ ಸದಾ

ಶ್ರವಿಸಬೇಕು. ಗುಡಿಯೆಲ್ಲಾಗಲೀ, ಬೇರೆಲ್ಲಾದರೂ ಆಗಲೀ, ಆತನನ್ನು ಕಾಣು ಹಂಬಲ ತುಂಬಿರಬೇಕು, ಸಾಧಕನಲ್ಲಿ!

ಈ ಸಾಧಕನ ಬೇಡಿಕೆ ಸ್ಪಷ್ಟವಾಗಿರುವುದು 'ಒಡನಾಡಿ' ಎಂಬ ಗೀತೆಯಲ್ಲಿ

ದಾರಿಯು ಪರಿಚಯವಿಲ್ಲ· ಸೇರುವ ಗುರಿಯು ಪರಿಚಯವಿಲ್ಲ
ನಿನ್ನ ಪರಿಚಯವೊಂದೆ ನನಗೆಲ್ಲದರ ಪರಿಚಯ.
ಕಡಿದಾದ ಬೆಟ್ಟಗಳಿರೆ ಕೈಹಿಡಿದು ಮೇಲೇರಿಸು. ಆಳವಾದ
ಕಂದರಗಳಿರೆ ಮೆಲ್ಲಗೆ ಕೆಳಗಿಳಿಸು. ಮುಳ್ಳು ಕೆಸರುಗಳಿರೆ
ಮೇಲೆತ್ತಿ ದಾಟಿಸು. ಮರುಭೂಮಿಗಳಿರೆ ಹಾಡಿ ಹುರಿದುಂಬಿಸು.
ಯಾರು ತುಳಿಯದ ಹಾದಿಯಲಿ ತವರೂರಿಗೆ ಹೊರಟಿರುವೆನು.
ನನ್ನದು ಸಿಡಿಲು ಮಿಂಚುಗಳ ಹಾದಿ. ಬೇಡವೆಂಬರೆ
ಹಲರು; ಸುಗ್ಗು ಎಂಬರು ಎಲ್ಲಿಯೋ ಕೆಲರು!
ಒಂಟಿಗರ ಸಂಗಡಿಗನೇ ಸಾಹಸಿಗಳೊಡನಾಡಿಯೆ,
ಕೈಹಿಡಿದು ಕಡೆ ಹಾಯಿಸೆನ್ನ! (ಕಿಂಕಿಣಿ ಪದ್ಯ ೧೧ ಪುಟ ೧೫)

ಲೋಕಾಚಾರದ ಹೇವು ತತ್ತ್ವ ಮಾಡಿರುವುದು ಈ ಕವನಗಳಲ್ಲಿ ಕಂಡು ಬರುತ್ತದೆ:

ಮನುಷ್ಯ ತನ್ನ ಜೀವನದಲ್ಲಿ ಸಾಕಷ್ಟು ಅಳಬೇಕು; ಕಾರಣ ತನ್ನೊಳ ಕೊಳೆಯನ್ನು ತೊಳೆದು ಕೊಳ್ಳುವುದಕ್ಕಾಗಿ; ಆ ಅಳಲನ್ನು ತಡೆದಿಡಲೂಬೇಕು ಆತ್ಮ ಧೃತಿಗಾಗಿ! ಈ ತತ್ತ್ವ ಇಲ್ಲಿದೆ.

ಕಣ್ಣೀರನೊರಸಿಕೊ! ಕಳೆದುದಕಳಲು ನಮಗೆ ಹೊತ್ತಿಲ್ಲ.

ಇಲ್ಲಿಗೇ ಮುಗಿಯಲಿಲ್ಲ ಎಮ್ಮಳಲ ಹೊರೆ. ಅತ್ತಷ್ಟು ಕಣ್ಣೀರನೆಲ್ಲ ಬತ್ತಿಸಬೇಡ. ಮುಂದೆ ದಾರಿಯೊಳೆಮ್ಮನಡ್ಡಗಟ್ಟುವ ದುಃಖಗಳಿಗಾಗಿ ಅಳಲು ಒಂದಿನಿತು ಕಣ್ಣೀರಾದರೂ ಇರಲಿ ಎದೆಯ ಅರಳಿನಲಿ.

ಏಕೆನೆ, ನಮ್ಮ ಕಷ್ಟಕ್ಕೆಲ್ಲ ಕಣ್ಣೀರೆ ಮದ್ದು!

ಅಂತೆಯೇ— (ಕಿಂಕಿಣಿ ಪದ್ಯ ೨೪–ಪುಟ ೩೦)

ಏಳು ಮೇಲೇಳು! ಮತ್ತೊಮ್ಮೆ ಚಿಮ್ಮಿ ಹಾರು ಬಿತ್ತರದ ಅನಂತತೆಯೆಡಗೆ. ಹುಳು ಹಿಡಿದು ಹಾಳಾಗಿರುವ ಹಳೆನೆಚ್ಚುಗಳನೆಲ್ಲ ಕಳಚಿ ಕೊಚ್ಚಿ ಬಿಡು. ಹೊಚ್ಚ ಹೊಸ ನೆಚ್ಚುಗಳ ರೆಕ್ಕೆಯನು ಬಿಚ್ಚಿ ಬಾನೆಡೆಗೇರು, ಓ ಎನ್ನ ಆತ್ಮ ಪಕ್ಷಿ!

ನೂರು ಸಾರಿ ಸೋತಿದ್ದರೇನಂತೆ !
ನೂರೊಂದು ಸಾರಿ ಬಿದ್ದಿದ್ದರೇನಂತೆ !
ಸೋಲು ಗೆಲುವಿಗೆ ಮೆಟ್ಟಲು।
ಬಿದ್ದರಲ್ಲವೆ ಮರಳಿ ಏಳುವುದು !
ಬೀಳದಿದ್ದವನು ಎಂದೂ ಮೇಲೆದ್ದವನಲ್ಲ !

ಸಮರವೆ ಜೀವನದ ತಿರುಳು: ಹೋರಾಟವೇ ಜೀವನದ ಚಿಹ್ನೆ. ಆದರ್ಶ ಪ್ರಾಪ್ತಿಯು ಜೀವನ ಪರಿಸಮಾಪ್ತಿ.

ಮಣ್ಣಿನಲಿಬಿದ್ದು ಹೊರಳಿ ಬದುಕುವುದಕಿಂತಲೂ ಬಾನಿನಲ್ಲಿ ತೇಲಿ ಹಾರಿ ಸಾಯುವುದೆ ಮೇಲು. (ಕಿಂಕಿಣಿ ಪದ್ಯ ೨೫, ಪುಟ ೩೧)

ಕವಿಯ ಆಶಾವಾದ ಇಲ್ಲಿ ಆವಿರ್ಭವಿಸಿದೆ.

ಇಂಥವೆನಿಸಿತೋ ಕವನಗಳ ಸಂಕುಲ ಈ ಕಿಂಕಿಣಿ.

ಕಾಯಕಕ್ಕೆ ಕೈಮುಗಿದ ಕವಿ, ಸೃಷ್ಟಿಯ ಪವಾಡವನ್ನು ಮನಸಾ ಮೆಚ್ಚಿದ್ದಾರೆ, ಪ್ರಕೃತಿಗೆ ಮಾರು ಹೋಗಿದ್ದಾರೆ, ಅಪರೋಕ್ಷಾನುಭೂತಿಯಿಂದ ಅಮೃತಪುತ್ರರಾಗಿದ್ದಾರೆ.

ಆಧುನಿಕ ಕನ್ನಡದ ಉಪನಿಷತ್ ಎನಿಸಬಲ್ಲ 'ಕಿಂಕಿಣಿ' ಅನವರತ ಅಮೃತ ಸ್ರೋತವೀಯಲಿ.

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ,
ಹೊರ ನುಡಿಯ ಹೊರೆಯೆಂದ ಕುಸಿದು ಕುಗ್ಗಿ
ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು
ದೇವನುಡಿಯೆಂದೊಂದು, ಹತ್ತಿ ಜಗ್ಗಿ
ಸಿರಿಸಿಟಲು ಸಿಟಲೆಂದು ಮುದಿಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ !

ಕುವೆಂಪು ಅವರ
"ಕೋಗಿಲೆ ಮತ್ತು ಸೋವಿಯಟ್ ರಷ್ಯಾ"

ಶ್ರೀ ಎಸ್. ಪಿ. ಪಾಟೀಲ, ಎಂ. ಎ.

—o—

ಭಾವಗೀತೆಯಲ್ಲಿ ಭಾವನೆ ಪ್ರಮುಖವಾದದ್ದು. ಭಾವಗೀತೆಯಲ್ಲಿ ವ್ಯಕ್ತಿಂ ಭಾವಪೂರ್ಣವಾದ ವಿಚಾರಗಳು ಸಹಜ ಸ್ಫೂರ್ತವಾಗಿರುತ್ತವೆ. "Lyric sponteneous over-flow of powerful feelings". ಭಾವಗೀ ಯಲ್ಲಿ ಭಾವನೆಯು ಪ್ರಮುಖ ಲಕ್ಷಣ—ಕವಿಯ ಆತ್ಮೀಯತೆ ಮತ್ತು ಸ್ವಂತ ಅ ಭವ, ಪ್ರಬಲವಾದ ಭಾವನೆಗಳ ಮಾಲಿಕೆ ಸಹಜ–ಸ್ಫೂರ್ತವಾಗಿ ಹೊರಹೊಮ್ ಭಾವಗೀತೆಯು ರೂಪದಲ್ಲಿ ಪ್ರಕಟವಾಗುವುದು. ಗೀಳಗಳಲ್ಲಿಯೇ ಪ್ರಕಟವಾ ಕುವೆಂಪುರವರ "ಕೋಗಿಲೆ ಮತ್ತು ಸೋವಿಯಟ್ ರಷ್ಯಾ" ಸುಂದರ ಭಾವಗೀತ ಸಂಗ್ರಹವಾಗಿದೆ. ಕನ್ನಡದ ರಾಷ್ಟ್ರಕವಿಗಳೂ, ಭಾರತೀಯ ಜ್ಞಾನಪೀಠದಿಂ ಗೌರವಿಸಲ್ಪಟ್ಟವರೂ ಆದ ಕುವೆಂಪುರವರ ಈ ಕವನ–ಸಂಗ್ರಹದಲ್ಲಿಯ "ಶ್ರೀರಾಮಾಯಣ ದರ್ಶನಂ"ದಲ್ಲಿ ಕಾಣುವ ಭವ್ಯತೆಯು ಗೋಚರವಾಗುವುದ ಭಾವಗೀತೆಗೆ ಬೇಕಾದುದು ವ್ಯಕ್ತಿತ್ವ, ಸ್ವಾನುಭವ ಮತ್ತು ಉತ್ಕಟತೆ. ಸೃ ಸೌಂದರ್ಯದ ತವರ್ಮನೆಯಾದ ಮಲೆನಾಡಿನಲ್ಲಿ ಬೆಳೆದ ಅವರ ಮನಸ್ಸು ಸೌಂ ರ್ಯೋಪಾಸನೆಯಲ್ಲಿಯೇ ಪರಿವರ್ತನೆಯಾಗಿದೆ. ಮುಂದೆ ಮೈಸೂರಿನಲ್ಲಿ ನೆಲೆಸಿ ಕವಿ ವಿಶಾಲ ಲೋಕಾನುಭವವನ್ನೂ, ಪಾಂಡಿತ್ಯವನ್ನೂ ಗಳಿಸಿದರು. ಶ್ರೀರಾ ಕೃಷ್ಣಾಶ್ರಮದಲ್ಲಿ ಬೆಳೆದು, ಭಾರತದ ಆಧ್ಯಾತ್ಮಿಕ ದಿವ್ಯ ವಾಣಿಯೂ ಇವರ ಹೃ ಯವನ್ನು ಹದಗೊಳಿಸಿತು; ಭಾವವನ್ನು ರೂಪಿಸಿತು. ಪೌರ್ವಾತ್ಯ ಹಾಗ ಪಾಶ್ಚಾತ್ಯ ಸಾಹಿತ್ಯಾಕಾಶದಲ್ಲಿ ಇವರ ಆತ್ಮ ವಿಹಂಗವು ವಿಹರಿಸಿತು.

ಸಾಹಿತ್ಯ ಜೀವನದ ಪಡಿನೆಳಲೆಂದು ಅನ್ನುವದುಂಟು. ಅದರಂತೆ ಸಾಹಿತ್ಯ ಮೇಲೆ ಆಕಾಲದ ಸಾಮಾಜಿಕ, ಧಾರ್ಮಿಕ ಪರಿಸರದ ಪ್ರಭಾವವಾಗುವುದುಂಟ ಆದರೂ ಮಹಾಕವಿ ತನ್ನ ಕಾಲದ ಪರಿಸರದ-ಪರಂಪರೆಯನ್ನು ಮೀರಿ ಭವ್ಯ ಭ ಷತ್ತಿನ ಬಗ್ಗೆ ಜನ–ಜಾಗ್ರತಿಯ ಕಾರ್ಯ ಕೈಗೊಳ್ಳುವನು. ಅವನ ಕಾವ್ಯ ಅವ ಕಾಲ–ದೇಶ–ಜನಗಳಿಗೆ ಮಾತ್ರ ಸೀಮಿತವಾಗದೆ ಚಿರನೂತನವಾಗುವುದು. ಈ ರೀತಿಯಲ್ಲಿ ಕುವೆಂಪುರವರ ಕಾವ್ಯ ಕನ್ನಡನಾಡು-ನುಡಿ, ಸಮಾಜ–ದೇಶಕ್ಕಾ

ಯಲ್ಲದೇ ಮಾನವ ಜನತೆ ಅವರ ಕಲ್ಯಾಣಕ್ಕಾಗಿ ನಿರ್ಮಿತವಾಗಿದೆ. ಈ ಎಲ್ಲ ದೃಷ್ಟಿಯನ್ನು ನಾವು ಕುವೆಂಪುರವರ "ಕೋಗಿಲೆ ಮತ್ತು ಸೋವಿಯಟ್ ರಷ್ಯಾ"ದಲ್ಲಿ ಕಾಣಬಹುದು.

ಸಾಮಾಜಿಕ ದೃಷ್ಟಿ

"ಘ್ರಾಂ ಧ್ರೀಂ ಧ್ರೂಂ!" ಕವಿತೆ ನಮ್ಮ ಮೂಢ ನಂಬಿಕೆಯ ಒಂದು ವಿಡಂಬನೆ. ಘಜನಿಯ ಮಹಮೂದನು ದಂಡೆತ್ತಿ ಬಂದಿರಲು, ರಾಜಸ್ಥಾನದ ರಾಜರು ಯುದ್ಧಕ್ಕೆ ಸಿದ್ಧರಾಗದೇ, ಮಂತ್ರ ಶಕ್ತಿಯನ್ನು ಹುಡುಕಲು ಪ್ರಯತ್ನ ಮಾಡಿ ಈ ಮಂತ್ರವನ್ನು ಗೊತ್ತು ಹಚ್ಚಿದರು. ಪೂಜಾರಿಯ ಪ್ರಕಾರ—

"ಓ ಸೋದರರೇ ಬೆದರುವದೇತಕೆ ?
ಖಡ್ಗಗಿಡ್ಗಗಳ ನೆರವೂ ಏತಕೆ
ಈ ಮಂತ್ರದ ಬಲವಿರೆ ನಮಗೆ ?" ಎಂದು ಧೈರ್ಯವನ್ನೀಯು
ವರು.

....

"ಆದೊಡೆ ಮೇಚ್ಛರು ಮಡಿಯಲೇ ಇಲ್ಲ ;
ಸತ್ತರು, ಪಾಪ, ಪುರೋಹಿತರೆಲ್ಲ."

ಧೂರ್ತರ ದಾಳಿಗೆ ಗುಡಿ ವಿಗ್ರಹಗಳು ಪುಡಿ–ಪುಡಿಯಾದುವು. ಈ ರೀತಿಯ ಮೂಢ ನಂಬಿಕೆಯಿಂದ, ದೇವರ ಪೂಜೆಯನ್ನು ಮಾಡುತ್ತ ಕೂಡುವ ನಮ್ಮ ಮೂಢ ನಂಬಿಕೆಯು ಕಡಿಮೆಯಾಗಬೇಕು. ಗುಡಿ ಹಾಳಾದರೂ ಕೊನೆಗೂ ನಶ್ವರ ಕಾಂಚನ ಹೋದರೂ ಚಿಂತೆಯಿಲ್ಲವಂತೆ. ಆದರೆ ಮಂತ್ರಶಕ್ತಿಯ ಮೇಲೆಯೇ ವಿಶ್ವಾಸ. ಈ ರೀತಿ ನಮ್ಮ ಮೂಢ ನಂಬಿಕೆಯ ವಿಡಂಬನೆಯನ್ನು ನಾವು ಇಲ್ಲಿ ಕಾಣುವೆವು.

ನೀರಡಿಸಿ ಬಂದವನಿಗೆ ನೀರು ಕೊಡಬಾರದೆ? "ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ, ದಡದಲ್ಲಿ ಮಿಾಯುತ್ತ ನಿಂತಿರುವ ನಾನು, ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವದೆಂದು, ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು ?" ಈ ಎಲ್ಲ ವಿಷಯಗಳನ್ನು ಮನು–ವೇದಶಾಸ್ತ್ರಗಳು ಹೇಳದಿದ್ದರೂ, ಕುವೆಂಪುರವರು—

"ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೇ ನಮಗೆ ಶ್ರೀ ಧರ್ಮಸೂತ್ರ"

ಎಂದು "ಯಾವ ಕಾಲದ ಶಾಸ್ತ್ರ ಏನು ಹೇಳಿದರೆ ಏನು ?" ಎಂಬ ಕವನದ ಚೆನ್ನಾಗಿ ಹೇಳಿದ್ದಾರೆ.

ಈ ಪ್ರಕಾರ ಬದಲಾಗುವ ಕಾಲಕ್ಕೆ —— ಹೊಸ ಕಾಲಕ್ಕಾಗಿ ತರುಣರ ಎದ್ದೇಳಬೇಕು. ಹಣ್ಣಾದ ಎಲೆಗಳು ಉದುರುತ್ತಿವೆ. ಅದಕ್ಕಾಗಿ ಚಿಗುರ ಒಡೆಯಲು ಬೇಕು.

"ಹಳೆ ಮತದ ಕೊಳೆಯಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ."

ಅದಕ್ಕಾಗಿ "ತರುಣರಿರ, ಎದ್ದೇಳಿ" ಎಂದು ಕುವೆಂಪುರವರು ತರುಣರಿಗೆ ಕ ಇತ್ತಿದ್ದಾರೆ. ಇದಕ್ಕೂ ಮುಂದೆ ಹೋಗಿ, ತರುಣರು ಧಾರ್ಮಿಕ ಗದ್ದಲದಲ್ಲಿ ಸಿಗದೆ ಪ್ರಗತಿಯ ಬಗ್ಗೆ ಕಾರ್ಯದಲ್ಲಿ ತೊಡಗಬೇಕೆಂದು ಅವರಿಗೆ—

"ಗುಡಿ ಚರ್ಚು ಮಸಜೀದಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯಬನ್ನಿ"

ಎಂದು "ಓ, ಬನ್ನಿ, ಸೋದರರೆ, ಬೇಗ ಬನ್ನಿ" ಎಂದಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳು ಹೊಸ ಪಯಣಕ್ಕಾಗಿ ಹೊರಟಿವೆ. ಇವುಗಳ ಜೊತೆಗೂಡಿ, ತಾವೂ ಮತವೆಂಬ ಮೋಹದ ಅಜ್ಞಾನಕ್ಕೆ ಸಿಲುಕದೇ ಲೋಕ ಹಿತಕ್ಕಾಗಿ ದುಡಿಯಬೇಕು, ಇದಕ್ಕೂ ಮುಂದೆ ಹೋಗಿ "ಹೊಸಬಾಳಿನ ಗೀತೆ"ಯಲ್ಲಿ—

"'ಸರ್ವರಿಗೆ ಸಮಬಾಳು ! ಸರ್ವರಿಗೆ ಸಮಪಾಲು !'
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ !"

ಎಂದು ಘೋಷಿಸಿದ್ದಾರೆ. ಈ ಪ್ರಕಾರದ ಯುಗಚಕ್ರದ ಪರಿವರ್ತನೆಗೆ ಎಲ್ಲರೂ ಒಗ್ಗಟ್ಟಾಗಿ ದುಡಿಯಬೇಕೆಂಬುದು ಕುವೆಂಪುರವರ ಮತ. ಬದಲಾವಣೆಯ ಬಗ್ಗೆ ಬರೆಯುತ್ತ ಮುಂದೆ ಸಮಾಜದಲ್ಲಿಯೂ—ಧಾರ್ಮಿಕದಲ್ಲಿಯೂ ಬದಲಾವಣೆ ಅವಶ್ಯವೆನ್ನುವದನ್ನು ಕುವೆಂಪು ಪ್ರತಿಪಾದಿಸಿದ್ದಾರೆ. ಅದಕ್ಕಾಗಿ—

"ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು"

ಎಂದು ನಮ್ಮನ್ನು ಎಚ್ಚರಿಸಿದ್ದಾರೆ.

"ಕಾವಿಯನುಟ್ಟ ತರುಣನೊಬ್ಬನಿಗೆ"—ನಿಜವಾಗಿಯೂ ಒಂದು ಉತ್ತಮ ಉಪದೇಶವಾಗಿದೆ. ಕಾವಿಯನುಟ್ಟ ಕೂಡಲೇ ಪ್ರತಿಯೊಬ್ಬನಿಗೂ ಶಾಂತಿ ಲಭಿಸಲಾರದು. ಆತ ಜ್ಞಾನಿಯಾಗಲಾರ. ಇದನ್ನೇ ಸಮರ್ಪಕವಾಗಿ ಹೇಳುವುದಾದರೆ, ಅವರದೇ ಉದಾಹರಣೆಯನ್ನು ಕೊಡಬಹುದು. ಬೆಳೆ ಬೆಳೆದು ಹಣ್ಣಾದಕಾಯಿಗೆ ಸುವಾಸನೆ ಬರುವದುಂಟು. ಆದರೆ ಅದೇ ಪೆಟ್ಟು ತಗುಲಿದ ಕಾಯಿ ಮೇಲೆ ಹಣ್ಣಾಗಿ ಕಂಡರೂ ಒಳಗೆ ತುಂಬಿದ್ದು ಮಾರ್ದವವಲ್ಲ—ಹೇಸಿಗೆ. ಅದರಂತೆ—

"ಆವೇಶವಿಲ್ಲದೆಯೇ ವೇಷದಲ್ಲಿಯೆ ಮಾತ್ರ
'ಸ್ವಾಮಿಜಿ'ಯನನುಕರಿಸೆ ನೀ ನಾಟಕದ ಪಾತ್ರ!"

ಎಂದು ತರುಣ ಸನ್ಯಾಸಿಯ ಸ್ಥಿತಿಯನ್ನು ಸ್ಪಷ್ಟಪಡಿಸಿದ್ದಾರೆ.

ಕುವೆಂಪುರವರು ಗ್ರಹಿಸಿದಂತೆ" ದೇವರು ಸೆರೆಯಾಳ್" ಎಂಬುದನ್ನು ನಾವು ದಿನವೂ ಕಾಣುತ್ತೇವೆ. "ದೇವರು ಸೆರೆಯಾಳ್, ದೇಗುಲ ಸೆರೆಮನೆ, ಕಾವಲು ಪೂಜಾರಿ!" ದೇವರು ಸಮೀಪವಿದ್ದರೆ ತೊಂದರೆಯೆಂದು ದೂರದಲ್ಲಿ ಗುಡಿಯನ್ನು ಕಟ್ಟಿಸಿ ಇಟ್ಟದ್ದುಂಟು. ಭಕ್ತನು—

"ಪುರಸೊತ್ತಾದರೆ ಕೆಲಸದೊಳಿಲ್ಲಿ
ಬೇಸರ ಪರಿಹಾರಕೆ ಬಹೆನಲ್ಲಿ!"

"ಹೂವು ದೇವರು"—ಇಲ್ಲಿ ನಾವು ಕುವೆಂಪುರವರ ಸೌಂದರ್ಯ ದೃಷ್ಟಿಯನ್ನು ಕಾಣುವೆವು. ದೇವರು ಸುಂದರವಾದ ಹೂವುಗಳಿಗೆ ಮಾರಿಯಾಗುತ್ತಾನೆ. ಬೇರೆ ಬೇರೆ ಬಣ್ಣದ ಹೂಗಿಡಗಳನ್ನು ಕಂಡು—"ಕಾಮನ ಬಿಲ್ಲಿನ ಬತ್ತವ ಬತ್ತಿ; ಬೆಳೆಯೂದಂತಿದೆ ಹೂದೋಟ" ಎಂದಿದ್ದಾರೆ. ಈ ತರದ ಬಣ್ಣ ಬಣ್ಣದ ಹೂದೋಟ ಎದೆಯಲ್ಲಿ ಆನಂದದ ಚಿಲುಮೆಯನ್ನು ಚಿಮ್ಮಿಸುತ್ತಿದೆ. ಈ ಹೂವನ್ನು ಕೊಯ್ಯುವ ಪೂಜಾರಿಯನ್ನು 'ಕಟುಕ'ನೆಂದು ಕರೆದು ಕುವೆಂಪುರವರು ಅವನಿಗೆ ಸಾರ್ಥಕವಾದ ಹೆಸರನ್ನೇ ಕೊಟ್ಟರೆಂದು ಹೇಳಬಹುದು. ಆದರಂತೆ—

"ಕೋಮಲ ಸುಮಗಳ ಕತ್ತನು ಕೊಯ್ದು
ಕಗ್ಗತ್ತಲಿನ ಕಗ್ಗತ್ತಲಿಗೆಯ್ದು
ಗುಡಿಯಾ ಕಲ್ಲಿಗೆ ಬಲಿಕೊಡದಿದ್ದರೆ
ಪರಮಾತ್ಮನಿಗೆ ತೃಪ್ತಿಯೆ ಇಲ್ಲೇನು?"

ಎಂದು ಕೇಳುವರು. "ಚೆಲುವೆಂಬುದೆ ಆ ಶಿವನಲ್ಲೇನು?" ಎಂಬುದೇ ಅವರ ತತ್ವ. ಈ ರೀತಿ ಅವರ "ಹೂ-ದೇವರು" ಕವಿತೆಯಲ್ಲಿ ಅವರ ಸೌಂದರ್ಯದ ಕಲ್ಪನೆಯನ್ನು ಕಾಣಬಹುದು.

ದೇವರು ಯಾರು? ಎಲ್ಲಿದ್ದಾನೆ?—ಎಂಬುದನ್ನು ಗುರುತಿಸಿ ಕುವೆಂಪುರವರು "ಮೊದಲನೆ ದೇವರು ಈ ಹಣ್ಮುದುಕಿ" ಎಂದು ತೋರಿದ್ದಾರೆ. ಆ ಮುದುಕಿಯ ದೀನ ಸ್ಥಿತಿಗೆ ಮರುಗುವ ಕವಿ, ಮಾನವ ಜನಾಂಗದ ಪರವಾಗಿ ಕ್ಷಮೆ ಕೇಳುವರು—

ಕ್ಷಮಿಸೆಮ್ಮನು, ಓ ಕಣ್ಕಿವುಡಜ್ಜಿ
ನಾವೆಲ್ಲರೂ ಸೇರಿ,
ಹೇಗೋ, ಏನೋ ಅಂತೂ ಇಂತೂ
ನಾವೆಲ್ಲರೂ ಸೇರಿ
ನಿನ್ನನು ಈ ಗತಿಗೆಳೆದಿದ್ದೇವೆ!

ಆ ತಪ್ಪಿಂ ತಪ್ಪಿಸಿಕೊಳ್ಳಲು ಈ ದೇವರಿಗೀವರ ಸೇವೆ! ಎಂದು ನಿಜ ದೇವರ ನೆಲೆಯನ್ನು ತೋರಿದ್ದಾರೆ. ಈ ರೀತಿ ಅವರ ಸಮಾಜಿಕ ದೃಷ್ಟಿಯನ್ನು ಅವರ ಕವನಗಳಲ್ಲಿ ಕಾಣುತ್ತೇವೆ.

ಕನ್ನಡ ಪ್ರೇಮ ಹಾಗೂ ಕರ್ನಾಕಟ ಪುನರುಜ್ಜೀವನಕ್ಕಾಗಿ ಆತುರ:

ಕುವೆಂಪುರವರ "ಕೋಗಿಲೆ ಮತ್ತು ಸೋವಿಯಟ್ ರಷ್ಯಾ" ಕವನ ಸಂಗ್ರಹದಲ್ಲಿ ಸಾಮಾಜಿಕ ಬೋಧೆಯ ಜೊತೆಗೆ ಕರ್ನಾಟಕದ ಪುನರುಜ್ಜೀವನದ ಬಗ್ಗೆ ಅವರ ಆತುರವನ್ನು ಸ್ಪಷ್ಟಪಡಿಸುವ ಕವನಗಳನ್ನು ಕಾಣುವೆವು." ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ!" ಎಂದು ಕನ್ನಡ ಭಾಷೆಯು ಅನ್ಯ ಭಾಷೆಗಳ ಪ್ರಭಾವದಿಂದ ಸಾಯುತ್ತಲಿದೆ ಎಂಬ ಅಪ್ರಿಯ ಸತ್ಯವನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುತ್ತಲಿದ್ದಾರೆ. ರಾಜ ನುಡಿಯೊಂದು, ರಾಷ್ಟ್ರ ನುಡಿಯೊಂದು ಅನ್ಯಭಾಷೆಗಳೇ ಪ್ರಬಲವಾಗಿರುವಾಗ—

"ಇರುವ ಅಲ್ಪ ಶಕ್ತಿಯನು, ಇರುವ ಅಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲ ಬೇಡಿ;"

ಎಂದು ಕನ್ನಡಿಗರಿಗೆ ವಿನಂತಿಸಿಕೊಳ್ಳುತ್ತಲಿದ್ದಾರೆ. ಪರಭಾಷೆ ಮೊದಲು ಆಶೀರ್ವಾದವೆನಿಸಿದರೂ ಕಡೆಗೆ ಅದೇ ಉರುಲಾಗುತ್ತದೆ. ಪರಭಾಷೆ ಎಷ್ಟೇ ಹಿರಿಯ

ದಾವರೂ ನಮಗೆ ಕನ್ನಡವೇ ಶ್ರೇಷ್ಠ. "ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿ ಸಾಕ್ಷಿ: ಗೆಲುವಿನ್ನುರದಕೆ ನಿಮಗಿಹುದು ಶಕ್ತಿ" ಎನ್ನುವರು. ಅಲ್ಲದೆ—

"ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
ಹೊತ್ತಹೊರೆ ಬಲಕಾರಿ ನೆತ್ತರಹುದೆ ?"

ಎಂದು ಔಚಿತ್ಯಪೂರ್ವಕ ಪ್ರಶ್ನಿಸುತ್ತಾರೆ. ಈ ರೀತಿ ಪರಭಾಷೆಯ ಮೋಹಕ್ಕೆ ಬಲಿಬೀಳುವ ಕನ್ನಡಿಗರಿಗೆ ಎಚ್ಚರಿಕೆಯನ್ನಿತ್ತಿದ್ದಾರೆ.

"ಮೆಟ್ಟುವ ನೆಲ ಕರ್ನಾಟಕ" ಕವನದಲ್ಲಿ ಕನ್ನಡನಾಡಿನ ಶ್ರೇಷ್ಠತೆಯನ್ನು, ಕನ್ನಡಿಗನ ಕರ್ತವ್ಯವನ್ನೂ ಸೂಚಿಸಿದ್ದಾರೆ.

"ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗೂ ನೀ ಕನ್ನಡವಾಗಿರು."

ಪ್ರತಿಯೊಬ್ಬನು ಮೆಟ್ಟುವ ನೆಲ ಕರ್ನಾಟಕ, ಮುಟ್ಟುವ ಮರ ಶ್ರೀಗಂಧ, ಕುಡಿಯುವ ನೀರು ಕಾವೇರಿ; ಆಮೇಲೆ ಕರ್ನಾಟಕದ ಒಂದೊಂದು ಮಹಿಮೆಯನ್ನು ಹೇಳುತ್ತಾರೆ. ಪಂಪ, ಕುಮಾರವ್ಯಾಸ, ಹರಿಹರ, ರಾಘವಾಂಕರನ್ನು ಓದುವ ನಾಲಗೆ ಕನ್ನಡ. ಬನವಾಸಿ, ಬೆಳ್ಗೊಳ, ಜೋಗದ ಜಲಪಾತಗಳನ್ನು ನೆನೆಸುವ ಮನ ಕನ್ನಡ. ಅದಕ್ಕಾಗಿ—

"ಎಲ್ಲಿದ್ದರೆ ಏನ್ ? ಎಂತಿದ್ದರೆ ಏನ್ ?
ಎಂದೆಂದಿಗೂ ತಾನ್—
ಕನ್ನಡವೇ ಸತ್ಯ !
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯಾ !"

ಎಂದು ಕನ್ನಡದ ಹಿರಿಮೆಯನ್ನೂ, ಕನ್ನಡಿಗರ ಶ್ರೇಷ್ಠತೆಯನ್ನೂ ನಿರೂಪಿಸಿದ್ದಾರೆ. ಅಲ್ಲಿ "ಹಿಂದಿನ ವೈಭವವನ್ನು ಸ್ಮರಿಸಿ, ಇಂದಿನ ಅವನತಿಗಾಗಿ ಮರುಗಿ, ನಾಳಿನ ದಿವ್ಯ ದರ್ಶನವನ್ನು ಕಂಡಿದ್ದಾರೆ."

"ಶಿಲಾಭೇರಿ" ಕವನದಲ್ಲಿ ಕನ್ನಡ ಜನತೆಯನ್ನು ಎಚ್ಚರಿಸುವ ಒಂದು ಪ್ರಯತ್ನ ಉಂಟು. ವೀರಗಲ್ಲುಗಳು ಕೂಗುತ್ತಲಿವೆ. ಅವು ಆ ಜನಗಳ ಶೌರ್ಯದ

ಕುರುಹು. 'ಸತ್ತವರು ನಾವಲ್ಲ, ನೀವೆಂದು ಸಾರುತಿವೆ".

"ನಮ್ಮಿಂದಿನಾ ಕೆಚ್ಚು
ನಮ್ಮಿಂದಿನಾ ನೆಚ್ಚು
ನಿಮ್ಮೊಳಗಿಂದುದ್ಭವಿಸಲಾ ದಿವ್ಯ ಹುಚ್ಚು !"

ಎಂದು ಬೀರುತ್ತಲಿವೆ. ಹೆಣ್ಣಿನ ಮಾನರಕ್ಷಣೆಗಾಗಿ, ಹೆಬ್ಬುಲಿಯೊಡ ಕಾದಾಡಿ, ಒಡೆಯನಿಗಾಗಿ ಹೋರಾಡುತ್ತ, ದೇವರಿಗಾಗಿ, ಯುದ್ಧ ಮಾಡುತ್ತ ಜೀವ ತೆತ್ತ ಜೀವಿಗಳು—

"ಬಲಿದಾನ ಗೈದ ಕನ್ನಡತನದ ತುತ್ತೂರಿ
ಭೋರಿಡುತ್ತಿದೆ ಶಿಲಾಭೇರಿ,
ಪ್ರಾಣ ಸಂಚಾರಿ !"

ಈ ಕನ್ನಡ ಜನ ಸತ್ತವರಲ್ಲ. ಜೀವನದಿಂದ ಇದ್ದೂ ಸತ್ತಂಥವರಾದ ನಮ್ಮ ಕವಿಯು ಅಳಿದ ವೀರ ಕನ್ನಡಿಗರ ಮಹಾಕಾರ್ಯವನ್ನು ಹೇಳಿ, ಕನ್ನಡಿಗರ ಮುಂದೆಯೂ ಇದೇ ಸಂಸ್ಕಾರವನ್ನು ಉಳಿಸಿಕೊಳ್ಳಬೇಕೆಂದು ಆಶಿಸುತ್ತಾರೆ

ಮಾತೃಭೂಮಿಗಾಗಿ ಪ್ರತಿಯೊಬ್ಬನೂ ಹೋರಾಡಬೇಕಾದುದು ಅವಶ್ಯ ಅದನ್ನೇ ಕುವೆಂಪುರವರು "ಕನ್ನಡಮ್ಮನ ಹರಕೆ"ಯಲ್ಲಿ ಆಶೀರ್ವದಿಸಿದ್ದಾರೆ. ಕನ್ನ ತಾಯಿ ತನ್ನ ಮಕ್ಕಳಾದ ಕನ್ನಡಿಗರಿಗೆ ಕರ್ನಾಟಕಕ್ಕಾಗಿ ಹೋರಾಡಲು ಹೇಳ ತ್ತಿದ್ದಾಳೆ. "ಕನ್ನಡವ ಮರತೆಯಾದರೆ, ಆಯ್ಯೋ ಮರತಂತೆ ನನ್ನ !" ಎಂದ ದುಃಖಿಸುತ್ತಾಳೆ. ಕನ್ನಡ ನಾಡಿನಲ್ಲಿ ಕನ್ನಡವನ್ನು ಮೆರೆಯಿಸಿ, ಕನ್ನಡ ತಾಯಿಗಾ ಹೋರಾಡಿ, ತಾಯ್ನುಡಿಯನ್ನು ಕಾಪಾಡು. ಈ ರೀತಿ "ತಾಯ್ನುಡಿಗೆ ದುಡಿದ ಮಡಿ, ಇಹಪರಗಳೇಳ್ಗೆ !" ರನ್ನ, ಪಂಪ, ನಾರಣಪ್ಪ, ಬಸವರನ್ನು ; ಅವರ ಕನ್ನಡ ಭಾಷೆಯನ್ನು ಕೊಲ್ಲುವ ಮುಂಚೆ ನನ್ನನ್ನೇ ಕೊಲ್ಲು ಎಂದು ಕನ್ನಡಮ್ಮ ತನ್ನ ಕಂದನಿಗೆ ಹರಕೆಯಿತ್ತಿದ್ದಾಳೆ. ಆ ಕನ್ನಡ ತಾಯಿ—

"ದಮ್ಮಯ್ಯ, ಕಂದಯ್ಯ,
ಬೇಡುವೆನು ನಿನ್ನ ;
ಕನ್ನಡಮ್ಮನ ಹರಕೆ,
ಮರೆಯದಿರು ಚಿನ್ನಾ !

ಮರತೆಯಾದರೆ ಅಯ್ಯೋ :
ಮರೆತಂತೆ ನನ್ನ ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ !"

ಎಂದು ದೀನತೆಯಿಂದ ಬೇಡುವ ತಾಯ ಹರಕೆಯನ್ನು ಯಾವ ಕನ್ನಡಿಗನಾದರೂ ಮರೆಯುವದು ಸಾಧ್ಯವೆ? ಈ ರೀತಿ ಕನ್ನಡನನ್ನೂ ಕನ್ನಡ ಮಾತೆಯನ್ನೂ ಮರೆಯುವ ಕನ್ನಡ ಕಂದರಿಗೆ ತಾಯ ಹರಕೆಯನ್ನು ಕುವೆಂಪುರವರು ಯೋಗ್ಯಕಾಲಕ್ಕೆ ಅರಿವು ಮಾಡಿಕೊಟ್ಟುದುಂಟು. ಹೀಗೆ "ಕುವೆಂಪು—ಕನ್ನಡ ಒಂದಾಗಿ ಬೆಸೆದಿದೆ. ಅವರು ಜೀವಿಸುತ್ತಿರುವುದೇ ಕನ್ನಡ ಸೇವೆಗಾಗಿ, ಉತ್ಕರ್ಷಕ್ಕಾಗಿ." ಆದ್ದರಿಂದ—

"ಕುವೆಂಪುವಿರುವ ಕನ್ನಡಕ್ಕೆ
ಅನ್ಯರಿಂದ ಬಹುದೆ ಧಕ್ಕೆ ?"

ಎಂಬ ವಿಶ್ವಾಸ ನನಗುಂಟಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ರಾಷ್ಟ್ರೀಯ ದೃಷ್ಟಿ

ಕನ್ನಡವನ್ನೂ, ಕರ್ನಾಟಕವನ್ನೂ ಪ್ರೀತಿಸುವ ಕವಿ, ಅಷ್ಟೇ ಆಳವಾಗಿ ರಾಷ್ಟ್ರವನ್ನೂ ಪ್ರೀತಿಸಬಲ್ಲ. ಅವರ ರಾಷ್ಟ್ರೀಯ ಭಾವನೆ ಸದಾಕಾಲವೂ ಜಾಗ್ರತವಾಗಿರುವದನ್ನು ನಾವು ಕಾಣಬಹುದು. 'ರಾಜ್ಯ ಯಾರದಾದರೂ ಸುಲಿಗೆ ರೈತನದು' ಎಂಬ ಮಾತನ್ನು ಪ್ರತಿಯೊಂದು ಹಳ್ಳಿಯಲ್ಲಿಯ ರೈತರ ಬಾಯಿಂದ ಕೇಳುತ್ತೇವೆ. ಅದೇ ನಿಜವಾದ 'ರೈತನ ದೃಷ್ಟಿ'ಯನ್ನು ಕುವೆಂಪುರವರು ತಮಗೆ ಕಂಡ ರೀತಿಯಲ್ಲಿ ಬಣ್ಣಿಸಿದ್ದಾರೆ.

"ಕರಿಯರದೊ ಬಿಳಿಯರದೊ ಯಾರದಾದರೆ ಏನು ?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ !

ಆದ್ದರಿಂದ "ಕತ್ತಿ ಪರದೇಶಿಯಾದರೆ ಮಾತ್ರ ನೋವೆ?" ಎನ್ನುವರು ಈ ಸಾಮ್ರಾಜ್ಯವೆಂಬುದು ಸೋಮಾರಿಗಳಿಗೆ, ಸುಖಿಗಳಿಗೆ, ರಸಿಕರಿಗೆ ಕಾಮಧೇನು. ಯಾವ ರಾಜರಾದರೂ ರೈತನ ಮೇಲೆ ಅವಲಂಬಿಸಿದವರು. "ಸಾಕೆನಗೆ, ಸಾಕಯ್ಯ

ಸಾಮ್ರಾಜ್ಯ ಪೂಜೆ: ಸಿಡಿಮದ್ದಿನಕ್ಷತೆಗೆ ಗುಂಡು ಚರೆ ಲಾಜೆ!" ಎಂದು ಬೇಸರಿಸಿದ ರೈತ ಪ್ರತಿಜ್ಞೆಗೆಯ್ಯುತ್ತಿದ್ದಾನೆ—

"ಸಾಮ್ರಾಜ್ಯ ಶೂರ್ಪನಖಿ ಮೋಹಿಸಿಯು ರೂಪಕ್ಕೆ
ಮರುಳಾಗೆನೆಂದಿಗೂ, ಸೀತೆ ಮೇಲಾಣೆ!"

ಎಂದು "ರಕ್ತತರ್ಪಣ"ದಲ್ಲಿ ಸತ್ತವರ ಕೂಗು ಕರೆಯುತಲಿದೆ ಎಂದು ಕುವೆಂಪುರವರು ನಮ್ಮನ್ನು ಎಚ್ಚರಿಸಿದ್ದಾರೆ. ಹಿಂದೆ, ಸ್ವಾತಂತ್ರ್ಯಕ್ಕಾಗಿ, ಸ್ತ್ರೀಯರ ಮಾನ ರಕ್ಷಣೆಗಾಗಿ, ಜೀವ ತೆತ್ತ ಜನ ರಕ್ತ-ತರ್ಪಣ ಮಾಡಬೇಕೆಂದು ನಮ್ಮನ್ನು ಕರೆಯುತ್ತಿದ್ದಾರೆ. ಈ ಜನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತ ಬಾವುಟವನ್ನು ನಮ್ಮೆಡೆಗೆ ಎಸೆದು ಜೀವ ತೆತ್ತಿದ್ದಾರೆ. ಆ ಬಾವುಟವನ್ನು ರಕ್ಷಿಸುವೆವೆಂಬ ಭರವಸೆಯಿಂದ ಅವರು ಮಡಿದಿದ್ದಾರೆ. ನಾವು ನುಗ್ಗದೇ ಹೋದರೆ—

"ಅಲೆವ ಪ್ರೇತಗಳಾಗಿ ಕೂಡಿ ಚೀರಿ
ಕಾಡುವೆವು ನಿಮಗೆ ಸಿದ್ಧಿಯ ಕೊಡದೆ ಚಿರದಿನಂ
ರಕ್ತ ತರ್ಪಣಕಾಗಿ ಗಂಟಮಾರಿ"

ಎಂದು ಹೇಳುತ್ತಿದ್ದಾರೆ. ಅದಕ್ಕಾಗಿ ನಾವು ಹೋರಾಟಕ್ಕಾಗಿ ಸಿದ್ಧರಾಗಬೇಕು—

"ಇಲ್ಲದಿರೆ ನಿಮಗಾಗಿ ಸತ್ತೆಮಗೆ ಸೊಗವಿಲ್ಲ,
ಬದುಕಿರುವ ನಿಮಗುಮಾ ಆ ಬದುಕೆ ಮಿತ್ತು!"

ಎಂಬ ಎಚ್ಚರಿಕೆಯನ್ನು ಕೇಳಿಯೂ ಸುಮ್ಮನಿರಬೇಕೆ? ಈ ರೀತಿ ಸ್ವಾತಂತ್ರ್ಯಪ್ರಿಯತೆ, ದೇಶಕ್ಕಾಗಿ ರಕ್ತ-ತರ್ಪಣ ಮಾಡಬೇಕೆನ್ನುವ ಭಾವನೆ ಪರಿಣಾಮಕಾರಿಯಾಗಿದೆ.

"ಸುಮುಹೂರ್ತವೊ ಇಂದೆ" ಎಂಬ ಕವನದಲ್ಲಿ ಇದಕ್ಕೂ ಮುಂದೆ ಹೋಗಿ ಕುವೆಂಪುರವರು—

"ಬೀಳಲಿ ಸೈ ಸತ್ತರು ಕಾರಿ;
ಹೋದರೆ ಹೋಗಲಿ ತಲೆಹಾರಿ:"

ಎಂದು ಜನರನ್ನು ತಾಯ್ನಾಡಿನ ಮೋಕ್ಷಕ್ಕಾಗಿ, ಸ್ವಾತಂತ್ರ್ಯ ಸಿದ್ಧಿಗಾಗಿ ಹುರಿದುಂಬಿಸುತ್ತಿದ್ದಾರೆ. ರಾಷ್ಟ್ರಕ್ಕಾಗಿ ಜೀವ ಕೊಡಲು ಈ ಹೊತ್ತೆ ಸುಮುಹೂರ್ತವಿದೆ ಎಂದು ಹೇಳುತ್ತಾರೆ. ರಾಷ್ಟ್ರದ ಸಲುವಾಗಿ ಜೀವ ಕೊಡಲು ಮುಂದಾಗಬೇಕು. ಇದೇ ನಿಜವಾದ ರಾಷ್ಟ್ರಪ್ರೇಮ. ತ್ಯಾಗಕ್ಕಾಗಿ ದೇಶಮಾತೆ ಕರೆಯುತ್ತಿದ್ದಾಳೆ. ಭೋಗದ ರೋಗವನ್ನು ಬಿಟ್ಟು ಹೊರಬರಲು. ಇಷ್ಟೇ ಅಲ್ಲ—

"ತಡ ಮಾಡಿದರಮ್ಮನ ನೀಂ ಕೊಂದೆ!
ಸುಮುಹೂರ್ತವೊ ಇಂದೆ!"

ಎಂದು ಮತ್ತೊಮ್ಮೆ ಎಚ್ಚರಿಸುವರು. "ಭರತ-ಭೂಮಿ ನನ್ನ ತಾಯಿ" ಕವನದಲ್ಲಿ ಕುವೆಂಪುರವರು ದೇಶಮಾತೆಗಾಗಿ ತಮ್ಮ ಆತ್ಮಾರ್ಪಣೆಯನ್ನು ಮಾಡಲು ಸಿದ್ಧರಾಗಿದ್ದಾರೆ. ಜಾತಿ-ಮತ-ಭಾಷೆ-ಪ್ರಾಂತಗಳ ಒಡಕನ್ನು ಬಿಟ್ಟು ಭರತ-ಭೂಮಿ-ತಾಯಿಯ ಗುಡಿಯ ಕಟ್ಟಲು ತಮ್ಮ ಆತ್ಮ ತರ್ಪಣೆಯನ್ನು ಮಾಡುವುದಾಗಿ ಸಾರುತ್ತಿದ್ದಾರೆ. ಈ ರೀತಿ ರಾಷ್ಟ್ರೀಯ ಭಾವನೆಯ ಬಗ್ಗೆ ಕುವೆಂಪುರವರ ಭಾವನೆಗಳು ದೇಶ ಪ್ರೇಮದಿಂದಲೂ, ತಮ್ಮ ಸಮರ್ಪಣೆಯ ರೀತಿಯಲ್ಲಿ ಬಂದಿವೆ. ರಾಷ್ಟ್ರದ ಸಲುವಾಗಿ ಪ್ರತಿಯೊಬ್ಬರೂ ರಕ್ತ ತರ್ಪಣ ಮಾಡಲು ಸಿದ್ಧನಾಗಬೇಕೆನ್ನುವ ಅವರ ತತ್ವ ಅವರ ಜಾಗ್ರತ ರಾಷ್ಟ್ರ ಭಕ್ತಿಗೆ ಹಿರಿಯ ಸಾಕ್ಷಿಯಾಗಿದೆ.

ಇಲ್ಲಿಯವರೆಗೆ ಕುವೆಂಪುರವರ ಸಾಮಾಜಿಕ-ಕನ್ನಡಮಯ-ಹಾಗೂ ರಾಷ್ಟ್ರೀಯ ದೃಷ್ಟಿಯನ್ನು ಅವಲೋಕಿಸಿದುದಾಯಿತು. ಅವರ ದೃಷ್ಟಿ ನಮ್ಮ ದೇಶದ ಮಟ್ಟಿಗೆ ಸೀಮಿತವಾಗಿರದೆ ಮಾನವ ಕೋಟಿಗೆ ಸಂಬಧಿಸಿದೆ. ಈ ದೃಷ್ಟಿಯಲ್ಲಿ ಕೋಗಿಲೆ ಮತ್ತು ಸೋವಿಯಟ್ ರಷ್ಯಾ" ಮೊದಲನೆಯ ಕವನವೇ ಸುಂದರ ಉದಾಹರಣೆಯಾಗಿದೆ. ಭಾಷೆ ಗದ್ಯದಂತೆ ಕಂಡರೂ, ವಿಡಂಬನೆ ಇರುವದರಿಂದ ಭಾವಗೀತೆಗೆ ಒಪ್ಪುತ್ತಿದೆ. ಸಾಮ್ಯ ವಾದದ ಪ್ರಚಾರದ ಅತಿರೇಕದ ಮೇಲೆ ಇದೊಂದು ವಿಡಂಬನಾತ್ಮಕ ಕವಿತೆ. ಕಾಲ್ಪನಿಕ ಎಷ್ಟೇ ಇದ್ದರೂ ಭಾವಗೀತೆ ಸೊಗಸಾಗಿ ಬಂದಿದೆ. ಮೊದಲಿನಿಂದಲೂ ಕೊನೆಯವರೆಗೆ ರಶಿಯಾದಲ್ಲಿ ನಡೆಯುತ್ತಿರುವ ಸಾಮ್ಯವಾದ ತತ್ವದ ಪ್ರಚಾರದ ವಿಡಂಬನೆ ಚೆನ್ನಾಗಿ ಬಂದಿದೆ. "ಆಳ್ವರಸರಕ್ಷಿಲ್ಲ; ಅರಸರೇ ಆಳ್ಗಳೆಲ್ಲ!" ...."ಕೆಲಸವೆಂದರೆ ಉಸಿರು! ಕೆಲಸವೇ ಬಾಳೆಲ್ಲ!" ಅಲ್ಲಿಯ ಜನರಿಗೆ ಅದಕ್ಕಾಗಿ--

"ಎಲ್ಲವರ ಸುಖವಾಗಿ ಗೆಯ್ಯಬೇಕೆಲ್ಲ;
ಆದರೂ ಸುಖಿಗಳೆನಗೊಬ್ಬರೂ ಕಾಣಲಿಲ್ಲ!"

ಕವಿಗೆ ಅಲ್ಲಿ ಗೋಚರವಾದುದು—

"ದೇಶವೆಲ್ಲವೂ ದೊಡ್ಡದೊಂದು ಕಾರ್ಖಾನೆ ;
ಪ್ರತಿಯೊಬ್ಬ ಮಾನವನು ಯಂತ್ರದಂತಿದ್ದಾನೆ !"

ಇಲ್ಲಿ—"ರಷ್ಯದಲ್ಲಿ ಸೋಮಾರಿಗೆಡೆಯಿಲ್ಲ, ಕೂಳಿಲ್ಲ ;
ಪ್ರಾಣಿಗಳಿಗೂ ಇಲ್ಲಿ ಸಾಮ್ಯವಾದದ ಚಿಂತೆ !"

ಆದ್ದರಿಂದ "ದುಡಿಯದಿರೆ ಮಿಡಿ ಹಕ್ಕಿಗಾದರೂ ಒಂದು ಕಾಳಿಲ್ಲ." ಕೊನೆಯಂತೂ ಒಳ್ಳೆಯ ಮಾರ್ಮಿಕವಾಗಿದೆ. ರಷ್ಯದಲ್ಲಿಯ ಕೋಗಿಲೆಯ ದೀನ ಸ್ಥಿತಿ ಕಂಡು ಮರುಕದಿಂದ ಕೋಗಿಲೆಯ ತತ್ತಿಯನ್ನು ಕರ್ನಾಟಕಕ್ಕೆ ತರಬೇಕೆಂದು ಕವಿ ತೆಗೆದುಕೊಂಡರೂ, ಕಡೆಗೆ ಅದು ಬಿದ್ದು, ಒಡೆದು, ಅದರಲ್ಲಿಂದ—

"ಮೂಡಿ ಬಂದೆನ್ನ ಹಿಡಿದನು ಸೋವಿಯಟ್ಟೊಬ್ಬ ಗೂಢಚಾರ!
ಕೋಗಿಲೆಯ ಮೊಟ್ಟೆಯೊಳಗೂ ಕೂಡ ಸಾಮ್ಯವಾದ ಪ್ರಚಾರ !"

ಈ ರೀತಿಯ ವಿಡಂಬನೆಯ ಸ್ವರೂಪದ ಬಗ್ಗೆ ಕುವೆಂಪು ಅವರೇ ಹೇಳಿದಂತೆ—

"It is quite a strange dream. Though I don't have all admiration to all the satirical element in the poem. I have written. I like and admire the worth of Russia, but my poem took an unusual shape."

(ಎಸ್. ಎಮ್. ವೃಷಭೇಂದ್ರ ಸ್ವಾಮಿ—'ಶ್ರೀ ಕುವೆಂಪುರೊಡನೆ ಒಂದು ಸಂಜೆ'—ಉಡುಗೊರೆ,-ಮಹಾರಾಜ ಕಾಲೇಜು, ಮೈಸೂರು-೧೯೫೭ ಪು. ೨೩೮). ರಶಿಯಾದ ಪ್ರಗತಿಯ ಬಗ್ಗೆ ಮೆಚ್ಚುಗೆ ಇದ್ದರೂ, ಸಾಮ್ಯ ವಾದ ಪ್ರಚಾರದ ಅತಿರೇಕವೇ ಅವರ ವಿಡಂಬನೆಗೆ ಕಾರಣವಾಗಿರಬಹುದೆ ?

'ಮೈಸೂರು-ಬೀಹಾರ,' ಕೇವಲ ಎರಡು ಪ್ರಾಂತಗಳ ಬಗ್ಗೆ ತಿಳುವಳಿಕೆ ಕೊಡುವದಲ್ಲದೆ, ವಿಶ್ವದ ಎಲ್ಲ ಜನರ ಸುಖ-ದುಃಖದ ವಿಚಾರವನ್ನು— ಸ್ಪಷ್ಟಪಡಿಸುವುದು.

"ಕಷ್ಟ ನಷ್ಟವೆಲ್ಲ ಬರಲಿ,
ನೋವು ಸಾವು ಏನೆ ಇರಲಿ,
ಸೃಷ್ಟಿ ಮುಖ ಪರಮಸುಖ
ಎಂದು ಧರ್ಮ ತಾಳಿದೆಥೈ !"

ಇಷ್ಟೇ ಅಲ್ಲ—

"ಇಂದು (ಮುಂದೆ ಏನೆ ಬರಲಿ)
ನರಗೆ ನರನ ನೆರವು ಇರಲಿ !''

ಎಂಬ ವಿಶ್ವಪ್ರೇಮದ—ವಿಶ್ವ-ಬಂಧುತ್ವದ ಸಂದೇಶವನ್ನು ನಾವು ಕಾಣು ತ್ತೇವೆ ಈ ರೀತಿ ಇಲ್ಲಿ ಮಾನವ ಕೋಟಿಯ ಹಿತ ಚಿಂತನೆಯ ದರ್ಶನ ನಮಗಾಗು ವದು. ಅದಕ್ಕಾಗಿ ಈ ನಾಡಕವಿ, ಅಲ್ಲ ರಾಷ್ಟ್ರಕವಿ, ಅಷ್ಟೇ ಅಲ್ಲ 'ಜಗದ ಕವಿಗೆ' ನಮಿಪುದೀ ಜನ.

ಐಕ್ಯೈಕ ಕರ್ನಾಟಕ

ಕನಸು ನನಸಾಯಿತಿದೊ ಐಕ್ಯೈಕ ಕರ್ನಾಟಕ :
ಕಣ್ನಟ್ಟು ಬಯಸಿ ಕಾಣ್ ದಿಕ್ತಟ ಧ್ವಜಪಟ !
ಕಾವೇರಿ ಸಿರಿಯಡಿಯು, ಗೋದಾವರಿಯು ಮುಡಿಯು
ಮೂಡುಮಲೆಯೆಡದ ಗಡಿಯು,
ಪಡುಗಡಲ ಬಲದ ತಡಿಯು ;
ವರ್ಣಶಿಲ್ಪದ ಕಲೆಯು ಚೆಲ್ವಿನ ಶಿಲೆಯು ಗುಡಿಯು,
ಕನ್ನಡದಿಂಪು ನುಡಿಯು ;
ಕನಸು ನನಸಾಯಿತಿದೊ ಐಕ್ಯೈಕ ಕರ್ನಾಟಕ :
ಕಣ್ನಟ್ಟು ಬಯಸಿ ಕಾಣ್ ದಿಕ್ತಟ ಧ್ವಜಪಟ !
ಶಿಶುರೂಪಿ, ಪಶುರೂಪಿ, ಜನರೂಪಿ, ಮನರೂಪಿ,
ನವ್ಯ ಶಾದ್ವಲರೂಪಿ ;
ಕಲ ಕಲ ಪಕ್ಷಿರೂಪಿ ;
ನವ ಸರೋವರದಂತೆ, ನವ ಶಾಲಿವನದಂತೆ,
ನವ ಯೌವನದ ಮೊದಲ ನವ ವಧೂ ವರರಂತೆ ;
ನವ ಕವಿಯ ನವರಸ ನವೀನ ಕೃತಿಯಂತೆ,
ದಿವ್ಯ ವೀಣಾಗಾನ ಗತಿಯಂತೆ ;
ಮೂಡುತಿದೆ ನೋಡು ಅದೊ ಐಕ್ಯೈಕ ಕರ್ನಾಟಕ :
ಕಣ್ನಟ್ಟು ಬಯಸಿ ಕಾಣ್ ದಿಕ್ತಟ ಧ್ವಜಪಟ !
ಕನ್ನಡದ ಮಕ್ಕಳಿರ, ಬನ್ನಿರೈ ಓ ಬನ್ನಿ ;
ತನ್ನತನದನಿತನೂ ನಿವೇದಿಸಲು ತನ್ನಿ ;
ಶಿರೆ ಕಿವುಡು ಕೇಳ್ವಂತೆ ಕೇಳಿಂಚರದೊಳೆನ್ನಿ :
"ಭಾರತಾಂಬೆಯು ಕನ್ಯೆ, ಕನ್ನಡಾಂಬೆಯೆ ಧನ್ಯೆ—ಕುವೆಂಪು.

ಸ್ವಂತಿಕೆ

ಶ್ರೀ ವಸುದೇವ್ ಭೂಪಾಲ್ ಎಂ. ಎ.,

—: :—

ಸಾಹಿತ್ಯವೆಂದರೆ ಸಂಸ್ಕೃತದಲ್ಲಿ ಮಾತ್ರ; ಕನ್ನಡ ಬರಿಯ ಆಡು ಮಾತು-ಎಂದು ಭಾವನೆಯಿದ್ದ ಕಾಲವಿತ್ತು. ಪ್ರತಿಭಾವಂತ ಕನ್ನಡ ಕಬ್ಬಿಗರು ರಚಿಸಿ ಸಾಹಿತ್ಯ ಪ್ರಬುದ್ಧವಾದ ಸಂಸ್ಕೃತ ಸಾಹಿತ್ಯ ಕೃತಿಗಳನ್ನು ಅನುಕರಿಸಿ, ಅನುಸರಿ ನಡೆಯುತ್ತಿತ್ತು. ಕಾವ್ಯವಸ್ತು ಸಂಸ್ಕೃತದಿಂದಲೇ ಆಯ್ಕೆಯಾದವು. ಛಂದಸ್ಸಿನಲ್ಲಿ ಕೆಲವು ಸಂಸ್ಕೃತದಿಂದಲೇ ಕೆಲವು ಛಂದಸ್ಸುಗಳಲ್ಲಿ ಆಗೀಗ ಕನ್ನಡತನವಿ ಬಹುದು. ಹಳೆಗನ್ನಡ ಸಾಹಿತ್ಯದಲ್ಲಿ ಕವಿಶ್ರೇಷ್ಠರೆಂದು ಪರಿಗಣಿತರಾದ ಪಂಪ ನಾರಣಪ್ಪರಿಗೆ ಸಂಸ್ಕೃತದ ವ್ಯಾಸ ಭಾರತವೇ ಮೂಲ. 'ಹಲಗೆ ಬಳಪವ ಹಿಡಿಯ ದೊಂದಗ್ಗಳಿಕೆ'ಯನ್ನು ಹೇಳಿಕೊಂಡ ನಾರಣಪ್ಪನೇ 'ಕವಿ ವ್ಯಾಸನೆಂಬ ಹೆಮ್ಮೆಯೆನಗಿಲ್ಲ' ಎಂದು ಸ್ಪಷ್ಟಪಡಿಸಿದ್ದಾನೆ. ಸಾವಿರ ವರ್ಷಗಳಿಗೂ ಹೆಚ್ಚು ಕಾ ಸಂಸ್ಕೃತ ಸಾಹಿತ್ಯದಿಂದ ಸ್ಫೂರ್ತಿಗೊಂಡು, ಅದರಿಂದಲೇ ಕಾವ್ಯ ಜೀವನವನ್ನು ನೀಗಿದ ಕನ್ನಡ ಕವಿಗಳು ಸಂಸ್ಕೃತದ ಮೇರು ಕೃತಿಗಳನ್ನು ಮೀರಿಸುವುದರಲ್ಲಿ ಅವುಗಳ ಹೆಜ್ಜೆಯೆತ್ತರಕ್ಕೂ ನಿಲ್ಲುವ ಸಾಹಿತ್ಯವನ್ನು ರಚಿಸಲಿಲ್ಲ.

ಇಂಥ ಹೋಲಿಕೆ ಕನ್ನಡಕ್ಕೆ ಮಾತ್ರವಲ್ಲದೆ ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಇತರ ಹಲವಕ್ಕೂ ಅನ್ವಯಿಸಬಹುದು. ಕನ್ನಡನಾಡಿಗೆ ಬಡಿದುಕೊಂಡ ದುರ್ದೈವ ಇತರ ಹಲವು ಪ್ರಾದೇಶಿಕ ಭಾಷೆಗಳಿಗೂ ಬಡಿದುಕೊಂಡಿದ್ದರೆ, ಕನ್ನಡಿಗರೇನೂ ಹೆಮ್ಮೆಪಡಬೇಕಾದುದಿಲ್ಲ.

ಸತ್ವಶಾಲಿಯಾದ, ಪ್ರಬುದ್ಧಮಾನವಾದ ಸಮಾಜ ಮಾತ್ರ ಉನ್ನತೋನ್ನತ ಕವಿ, ಕಲಾವಿದರನ್ನು ಸೃಜಿಸಬಲ್ಲದು. ಇಂಥ ಸಮಾಜದ ಸ್ಥಿತಿಗೆ ರಾಜ್ಯದ ಅಭ್ಯುದಯ ಮೂಲ ಕಾರಣ. ವಿಕ್ರಮಾದಿತ್ಯನು ಉತ್ಕರ್ಷ ಹೊಂದಿದ ರಾಜ್ಯದಲ್ಲಿ ಕಾಳಿದಾಸನಂಥ ಮಹಾಕವಿ, ನಾಟಕಕಾರ ಪ್ರಕಟನಾದ. ಇಂಥ ಹಿನ್ನೆಲೆ ಕರ್ನಾಟಕ ಮುಂತಾದ ರಾಜ್ಯಗಳಿಗೆ ದೊರಕಲಿಲ್ಲವೇನೊ. ದೊರೆತ ಸಮಯದಲ್ಲಾಗಲಿ ಮಹೋನ್ನತ ಪ್ರತಿಭೆಯುಳ್ಳ ಕವಿ ಅಲ್ಲಿ ಮೂಡಿರಬೇಕು. ಸಮೃದ್ಧವಾದ ವೃಕ್ಷದ ಬೆಳೆಗೆ ಉತ್ತಮವಾದ ನೆಲ, ನೀರುಗಳಲ್ಲದೆ ಲೇಸಾದ ಬೀಜವೂ ಅವಶ್ಯವಲ್ಲವೆ. ಎಲಿಜಬೆತ್ ರಾಣಿಯ ಕಾಲದಲ್ಲಿ ಇಂಗ್ಲೆಂಡ್ ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದು, ಷೇಕ್ಸ್‌ಪಿಯರ್‌ನಂಥ ಮಹಾಪ್ರತಿಭೆ ಮೂಡಿದಾಗ ಸಂಪೂರ್ಣ

ವಿಕಾಸನಾಗಲು ಅವಕಾಶ ದೊರೆಯಿತು. ಲಿಯೋನಾರ್ಡ ವಿಂಚಿ, ಮೈಕೇಲ್ ಏಂಜಲೋ ರಂಥ ಕಲಾವಿದ, ಶಿಲ್ಪಿಗಳು ಪ್ರಕಾಶರಾದುದು ರೋಮನ್ ರಾಜ್ಯ, ಸಮಾಜ ಅಭ್ಯುದಯದ ವೈಭವದಲ್ಲಿದ್ದಾಗ.

ಸಂಸ್ಕೃತ ಸಾಹಿತ್ಯ ಮಹಾವೃಕ್ಷದ ನೆರಳಿನಲ್ಲಿ ಪಂಪ, ರನ್ನ, ಜನ್ನ, ನಾರಣಪ್ಪರಂಥ ಕವಿಶ್ರೇಷ್ಠರು ಶ್ಲಾಘ್ಯವಾದ ಕನ್ನಡ ಕೃತಿಗಳನ್ನು ರಚಿಸಿದರು. ಪೊನ್ನ, ನಾಗಚಂದ್ರ, ಷಡಕ್ಷರಿ, ರತ್ನಾಕರ ಮುಂತಾದವರೂ ಉತ್ತಮ ದರ್ಜೆಯ ಕೃತಿಗಳನ್ನು ರಚಿಸಿದ್ದಾರೆ. ಕಥಾವಸ್ತು, ನಿರೂಪಣೆ, ಪಾತ್ರ ವಿವರಗಳಲ್ಲಿ ಸಂಸ್ಕೃತ ಮೂಲಗಳ ಪಡಿನೆಳಲು ಎದ್ದು ಕಾಣುತ್ತದೆ. ರಾಮಾಯಣ, ಭಾರತ, ಜೈನ ಪುರಾಣಗಳಲ್ಲೆಲ್ಲ ಇದೇ ದಾರಿ. ಆಗೀಗ ತುಸು ಬೇರೆ ದಾರಿಯೂ ಇರಬಹುದು. ಇಂಥ ರೀತಿಯಲ್ಲಿ ಕನ್ನಡ ಸಾಹಿತ್ಯ ಸಾವಿರ ವರ್ಷಗಳಿಗೂ ಹೆಚ್ಚು ಕಾಲ ನಡೆಯಿತು.

ಭಾರತದ ಪ್ರಾಚೀನ ನಿವಾಸಿಗಳೆಂದು ಹೇಳಲ್ಪಟ್ಟ ಕೋಲರು, ದ್ರಾವಿಡರು ಯಾವ ಸಾಹಿತ್ಯ ರಚನೆ ಮಾಡಿದುದಕ್ಕೂ ಪುರಾವೆಯಿಲ್ಲ. ಮೊಹೆಂಜೊದಾರೊ, ಹರಪ್ಪಗಳು ದ್ರಾವಿಡ ಸಂಸ್ಕೃತಿಯೆಂದು ಹೇಳಲಾಗುತ್ತಿದೆ. ದ್ರಾವಿಡರೂ ವಿದೇಶದಿಂದ ಭಾರತಕ್ಕೆ ಬಂದು ನೆಲೆಸಿದರೆಂದೂ ಒಂದು ಸಿದ್ಧಾಂತವಿದೆ. ಆರ್ಯರು ಉತ್ತರದ ಛಳಿ ಸೀಮೆಯಿಂದ ಭಾರತಕ್ಕೆ ಬಂದು, ಮೊದಲು ಸಿಂಧೂ, ಗಂಗಾ ಬಯಲುಗಳಲ್ಲಿ ನೆಲೆಸಿ, ಅನಂತರ ಮಿಕ್ಕ ಭಾಗಗಳಿಗೆ ಹರಡಿಕೊಂಡರೆಂದು ನಂಬಲಾಗುತ್ತಿದೆ. ಪ್ರಾಚೀನ ನಿವಾಸಿಗಳಾದ ಕೋಲ, ದ್ರಾವಿಡರನ್ನು ಆರ್ಯರು ದೂರವಾಗಿಟ್ಟಿದ್ದರು. ಕಾಲಕ್ರಮದಲ್ಲಿ ಈ ಜನಾಂಗಗಳಲ್ಲಿ ಪರಸ್ಪರ ಮಿಶ್ರ ಹೊಂದಿ, ಈಗ ಆರ್ಯ-ದ್ರಾವಿಡ ಜನಾಂಗ, ಸಂಸ್ಕೃತಿ ಭಾರತದಲ್ಲಿ ಆವರಿಸಿದೆ. ಈ ಮಿಶ್ರ ಜನಾಂಗದಲ್ಲಿ ಆರ್ಯರ, ಹಾಗು ದ್ರಾವಿಡರ ಹಲವು ವಿಶೇಷತೆಗಳು ಸಮ್ಮಿಲನವಾಗಿವೆ. ಆರ್ಯರ ಸಂಸ್ಕೃತ ಮಹಾ ಕಾವ್ಯಗಳು ಈ ಆರ್ಯ ದ್ರಾವಿಡ ಜನಾಂಗದ ಮಹಾಕಾವ್ಯಗಳೆಂದು ಅಂಗೀಕೃತವಾಗಿವೆ.

ಶಕರು, ಹೂಣರು ವಿದೇಶೀ ದಾಳಿಕಾರರಾಗಿ ಭಾರತದ ವಾಯುವ್ಯ ಭಾಗಗಳನ್ನು ಉಧ್ವಸ್ತಗೊಳಿಸ ತೊಡಗಿದರು. ಶೀಘ್ರದಲ್ಲಿಯೇ ಭಾರತದಲ್ಲಿ ನೆಲೆಗೊಂಡು, ಹಿಂದೂ ಮತದಲ್ಲಿ ಸಂಪೂರ್ಣವಾಗಿ ವಿಲೀನವಾದರು. ಹಿಂದೂಮತದ, ಹಾಗೂ ಹಿಂದೂಸ್ಥಾನದ ಏಳ್ಗೆಗಾಗಿ ಯಾವ ತ್ಯಾಗವನ್ನೂ ಮಾಡಲು ಸಿದ್ಧರಾದರು. ರಾಜಾಸ್ಥಾನದಲ್ಲಿ ಕ್ಷತ್ರಿಯರೆಂದು ಹೆಸರಾದರು. ಶಕ, ಹೂಣ ಜನಾಂಗಗಳಿಂದ ಭಾರತದ ಸಾಹಿತ್ಯದ ಮೇಲೆ ಯಾವ ಅಪೂರ್ವ ಪ್ರಚೋದನೆಯೂ ಉಂಟಾಗಲಿಲ್ಲ.

ಅನಂತರ ಮುಸಲ್ಮಾನ್ ದಾಳಿಕಾರರು ಭಾರತಕ್ಕೆ ನುಗ್ಗಿ ಬಂದ
ಸುಲ್ತಾನರ ಹಾಗು ಮೊಗಲರ ಸಾವಿರ ವರ್ಷಗಳ ಆಡಳಿತದಲ್ಲಿ ಭಾರತೀಯ ಚಿ
ಕಲೆ, ಶಿಲ್ಪಗಳಲ್ಲಿ ತಕ್ಕಷ್ಟು ಪ್ರಭಾವವುಂಟಾಯಿತು. ಭಾರತೀಯ ಸಾಹಿತ್ಯ
ಆದ ಪ್ರಭಾವ ಅಲ್ಪ; ಕನ್ನಡ ಸಾಹಿತ್ಯಕ್ಕಂತೂ ಏನೂ ಇಲ್ಲ.

ಬ್ರಿಟಿಷರು ಭಾರತದಲ್ಲಿ ಆಳಿದುದು ಎರಡೇ ಶತಮಾನವಾದರೂ ಆಂ
ಸಂಸ್ಕೃತಿಯ ಪ್ರಭಾವ ಭಾರತದ ಮೂಲೆ ಮೂಲೆಗೂ ಹರಡಿತು. ವೇ
ಭೂಷಣ ನಡೆನುಡಿ ಕಲೆ ಸಾಹಿತ್ಯ ಎಲ್ಲ ರಂಗಗಳಲ್ಲೂ ಆಂಗ್ಲ ಸಂಸ್ಕೃತಿ ಹಾ
ಹೊಕ್ಕಾಗಿ ಬೆರೆಯಿತು. ಸುಮಾರು ಅರ್ಧ ಶತಮಾನದಿಂದ ಕನ್ನಡದಲ್ಲಿ ಆಂ
ಸಾಹಿತ್ಯ ಪ್ರಕಾರಗಳು ಪುಂಖಾನುಪುಂಖವಾಗಿ ಹೊರ ಮೂಡಿದವು. ವೃ
ಕಂದ, ಚಂಪೂ, ಷಟ್ಪದಿ, ರಗಳೆಗಳ ಬದಲಾಗಿ ಪಾಶ್ಚಾತ್ಯ ಸಾಹಿತ್ಯದಲ್ಲಿರುವ
ಕತೆ, ಕಾದಂಬರಿ, ಪ್ರಬಂಧ, ಭಾವಗೀತೆಗಳಿಂದ ತುಂಬಿತು. ರಗಳೆ ಸರಳ ರ
ಯಾಯಿತು, ಸಾಮಾಜಿಕ ನಾಟಕಗಳು ಹೆಚ್ಚು ಸಂಖ್ಯೆಯಲ್ಲಿ ರಚನೆಯಾ
ರಂಗದ ಮೇಲೆ ಪ್ರದರ್ಶನ ಹೊಂದಿದವು. ಯಕ್ಷಗಾನ, ಬಯಲಾಟಗಳು ಕಣ
ಯಾಗ ತೊಡಗಿದವು.

ಹೀಗೆ, ಆರ್ಯ ಮುಸಲ್ಮಾನ್ ಬ್ರಿಟಿಷ್ ಜನಾಂಗಗಳು ಭಾರತವನ
ಆಕ್ರಮಿಸಿದ ಹಲವು ಸಾವಿರ ವರ್ಷಗಳ ಇತಿಹಾಸವನ್ನು ನಿರೀಕ್ಷಿಸಿದರೆ, ಕನ್ನ
ದಲ್ಲಿ ಯಾವ ಸ್ವತಂತ್ರವಾದ ಸಾಹಿತ್ಯ ಪ್ರಕಾರವಾಗಲಿ ಇಲ್ಲ. ಎರವಲು ತ
ದಾರಿಯಲ್ಲಿಯಾಗಲಿ, ಮೂಲಗಳನ್ನು ಮೀರಿಸುವುದಿರಲಿ, ಮೂಲಕ್ಕೆ ಸಮ
ದಂಥ ಉನ್ನತ ಕೃತಿಗಳಾಗಲಿ ಇಲ್ಲ. ಕನ್ನಡಿಗರೂ ನಾಗರಿಕ ಮನುಷ್ಯರು ಎಂ
ದನ್ನು ಸಮರ್ಥನೆ ಮಾಡಿಕೊಳ್ಳಲೋ ಎಂಬಂತೆ ಕನ್ನಡದಲ್ಲೂ ಸಾಹಿತ್ಯವಿ
ನಾಡು, ಸಮಾಜ ಸತ್ವಶಾಲಿಯಾಗಿದ್ದರೆ ಮಾತ್ರ ಅಲ್ಲಿಂದ ಸಾಹಿತ್ಯವೂ ಮೇಲ್ಮ
ಗಳಿಗೆ ಏರುತ್ತದೆ. ಈಗ ಮಾಡಿರುವುದರ ಬಗೆಗೆ ನಮ್ಮ ಬೆನ್ನನ್ನು ನಾವೇ ತ
ಕೊಂಡರೆ, ಯಾವ ಮಹತೆಯನ್ನೂ ಸಾಧಿಸಿದಂತಾಗಲಿಲ್ಲ. ನಮ್ಮ ಕುಂ
ಕೊರತೆಗಳನ್ನು, ಅಲ್ಪತೆಯನ್ನು ಪರಿಹರಿಸಿಕೊಳ್ಳಲು ಯತ್ನಿಸಬೇಕು; ಮಹ
ಗಾಗಿ ಪ್ರಮಿಸಬೇಕು. 'ಯೋ ವೈ ಭೂಮಾ ತತ್ ಸುಖಂ; ನಾಲ್ಪೇ ಸುಖಮಸ್ತಿ
ಕನ್ನಡಿಗರ ಬದುಕು ಭೂಮತೆಗೇರಿದಾಗ ಮಾತ್ರ, ಕನ್ನಡ ಸಾಹಿತ್ಯದಲ್ಲ
ಭೂಮತೆಯನ್ನು ನಿರೀಕ್ಷಿಸಬಹುದು.

o o o o o o

ಸಂಸ್ಕೃತ ಕವಿಗಳ ಅನುಕರಣೆಯಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದ ಕನ್ನ
ಕವಿಗಳು 'ಕುಮಾರ ವ್ಯಾಸ', 'ಕುಮಾರ ವಾಲ್ಮೀಕಿ' ಎಂದು ಹೆಸರು ತಳೆಯ
ವುದೇ ಹೆಚ್ಚಳಿಕೆಯೆಂದು ಭಾವಿಸುತ್ತಿದ್ದರು. ಆಂಗ್ಲ ಸಾಹಿತ್ಯದ ಅನುಕರಣೆಯ

ಅಥವಾ ಸಂಪ್ರದಾಯದಲ್ಲಿ ಕನ್ನಡ ಭಾವಗೀತೆಗಳನ್ನು ರಚಿಸತೊಡಗಿದವರನ್ನು 'ಕನ್ನಡದ ಶೆಲ್ಲಿ', 'ಕನ್ನಡದ ವರ್ಡ್ಸ್ ವರ್ತ್' ಎಂದು ಕರೆದರೆ ಹೆಚ್ಚಳಿಕೆಯೆಂದು ಭಾವಿಸಲಾಯಿತು. ಕಾದಂಬರಿ ಕನ್ನಡ ಸಾಹಿತ್ಯಕ್ಕೆ ಹೊಸತಾಗಿದ್ದು, ನೈಜತೆ (Realism) ಉಳ್ಳ ಯಾವೊಂದು ಮೂರನೆಯ ದರ್ಜೆಯ ಕಾದಂಬರಿ ಪ್ರಕಟವಾದರೆ, ಇಂಗ್ಲಿಷ್‌ನಲ್ಲಿದ್ದಿದ್ದರೆ ಅದಕ್ಕೆ ನೋಬೆಲ್ ಬಹುಮಾನ ಖಂಡಿತವಾಗಿ ಬರುತ್ತಿತ್ತೆಂದು ಹಲವರು, ಹಲವು ಕನ್ನಡ ಸಾಹಿತಿಗಳೂ ಕೂಡ ಭ್ರಮಿಸುತ್ತಿದ್ದರು.

ಪಾಶ್ಚಾತ್ಯರಲ್ಲಿ ಶ್ರೇಷ್ಠನಾದ ಅಥವಾ ಜನಪ್ರಿಯನಾದ ಸಾಹಿತಿ ಪುಸ್ತಕ ರಚನೆಯಿಂದಲೇ ತಕ್ಕಷ್ಟು ಹಣಗಳಿಸಿ, ಬದುಕು ನೀಗಬಲ್ಲ; ಹಲವು ಸಾಹಿತಿಗಳು ಶ್ರೀಮಂತರೂ ಆಗಿರುವುದುಂಟು. ಕನ್ನಡ ಜನತೆಗೆ ಪುಸ್ತಕ ಕೊಳ್ಳುವ ಮೋಹವಿಲ್ಲ. ಹಲವರು ತಾವು ಪುಸ್ತಕ ಕೊಳ್ಳುವಷ್ಟು ಶ್ರೀಮಂತರಲ್ಲ ಎಂದು ಭಾವಿಸಿಕೊಳ್ಳುತ್ತಾರೆ. ಅವರೂ, ಅವರ ಮನೆಯವರೂ ತಿಂಗಳಿಗೆ ಸಿನಿಮಾಕ್ಕೆ ಎಷ್ಟು ಹಣ ವೆಚ್ಚ ಮಾಡುತ್ತಾರೆ ಎಂದು ಲೆಕ್ಕ ನೋಡಿಕೊಳ್ಳಲಿ. ಸಿನಿಮಾಕ್ಕೆ ಪ್ರತಿಯೊಬ್ಬರೂ ಟಿಕೆಟ್ ಪಡೆದು ಪ್ರವೇಶ ಹೊಂದಬೇಕು. ಒಂದು ಪುಸ್ತಕವನ್ನು ಕೊಂಡರೆ ಮನೆಮಂದಿಯೆಲ್ಲ ಓದಬಹುದು. ಹತ್ತಿಪ್ಪತ್ತು ವರ್ಷಗಳ ನಂತರ ಮಕ್ಕಳು, ಮೊಮ್ಮಕ್ಕಳೂ ಓದಬಹುದು. ಇದನ್ನೆಲ್ಲ ಲೆಕ್ಕ ಹಾಕಿದರೆ ಪುಸ್ತಕದಷ್ಟು ಅಗ್ಗದ ಮನರಂಜನೆ ಅಥವಾ ಅಗ್ಗದ ಜ್ಞಾನ ಸಂಪಾದನೆ ಬೇರೆಯಿಲ್ಲ. ಕರ್ನಾಟಕದ ಶ್ರೀಮಂತರಾಗಲಿ ಊಟ ತಿಂಡಿ, ಬಟ್ಟೆಬರೆ, ಒಡವೆ ಮತ್ತು ಸಿನಿಮಾ, ನಾಟಕ, ಮದುವೆ ಮುಂಜಿ, ಶ್ರಾದ್ಧ ಸಂತರ್ಪಣೆಗಳಿಗೆ ಬೇಕಾದಷ್ಟು ಹಣ ಸುರಿಯುತ್ತಾರೆ. ಪುಸ್ತಕ ಬೇಕಾದರೆ, ಎರವಲು ಪಡೆದು ಓದಿ ಹಿಂದಿರುಗಿಸಿದರಾಯಿತು; ಕೊಳ್ಳಬೇಕೇಕೆ ಎನ್ನುತ್ತಾರೆ. ಇಂಥ ಸನ್ನಿವೇಶದಲ್ಲಿ ಕನ್ನಡ ಪುಸ್ತಕಗಳು ಮಾರಾಟವಾಗುವ ಪ್ರತಿಗಳೆಷ್ಟು, ಅದರಿಂದ ಯಾವ ಸಾಹಿತಿ ಬದುಕು ನೀಗಬಲ್ಲ? ಇದರಿಂದಾಗಿ, ಕನ್ನಡ ಸಾಹಿತಿ ಜೀವನೋಪಾಯಕ್ಕಾಗಿ ಬೇರೊಂದು ವೃತ್ತಿಯನ್ನು ಅವಲಂಬಿಸಬೇಕಾಗುತ್ತದೆ.

ಯಾವೊಂದು ಔದ್ಯೋಗಿಕ ಅಥವಾ ವಾಣಿಜ್ಯ ವೃತ್ತಿಯಲ್ಲಿ ತೊಡಗಿರುವವರು ಸಾಹಿತ್ಯಕ್ಕೆ ದೂರ ದೂರವಾಗಿ ಹೋಗುತ್ತಾರೆ; ಅವರಿಂದ ಸಾಹಿತ್ಯ ರಚನೆ ಕಡಿಮೆಯಾಗುತ್ತ ಬರುತ್ತದೆ; ಸ್ಫೂರ್ತಿ ನಿಂತುಹೋಗಬಹುದು ಕೂಡ ಸಾಹಿತ್ಯ ಪ್ರತಿಭೆಯುಳ್ಳ ಕೆಲವರು ವೃತ್ತಿಗಾಗಿ ಪತ್ರಿಕೋದ್ಯಮದಲ್ಲಿ ತೊಡಗುತ್ತಾರೆ. ಅಂದಿನಿಂದ ಸಾಹಿತ್ಯಕ್ಕೆ ದೂರ ದೂರವಾಗಿ ಪತ್ರಿಕೋದ್ಯಮ, ರಾಜಕಾರಣದ ಬಿಸಿ ಮಾತುಗಳಲ್ಲಿ ತಲ್ಲೀನರಾಗುತ್ತಾರೆ. ಇನ್ನು ಕೆಲವರು ತಮ್ಮ ಪುಸ್ತಕಗಳನ್ನು

ತಾವೇ ಪ್ರಕಾಶಿಸಿಕೊಳ್ಳಬೇಕಾಗುವ ಪರಿಸ್ಥಿತಿಯನ್ನು ಕಾಣುತ್ತಾರೆ. ಜೊತೆಗೆ ಇತರರ ಕೃತಿಗಳನ್ನು ಪ್ರಕಾಶಿಸೋಣ ಎಂದು ಹೊರಟು, ಅಚ್ಚುಕೂಟವನ್ನು ಪ್ರಾರಂಭಿಸುತ್ತಾರೆ. ಇವರು ಮುದ್ರಕರೋ, ಪ್ರಕಾಶಕರೋ ಆಗಿ ಕೊನೆಗೊಳ್ಳುತ್ತಾರೆ. ಕನ್ನಡ ಪುಸ್ತಕಗಳ ವಿಕ್ರಯವಾಗದೆ ಸಾಹಿತಿಗಳು ಪಡಬೇಕಾದ ಅವಾಂತರಗಳು ಹೀಗೆ.

ಆಧುನಿಕ ಕನ್ನಡದಲ್ಲಿ, ಸಾಹಿತ್ಯ ರಚನೆಯಲ್ಲಿ ಮುಖ್ಯವಾಗಿ ತೊಡಗಿದ್ದವರು, ತೊಡಗಿರುವವರು ಶಾಲೆ, ಕಾಲೇಜುಗಳ ಅಧ್ಯಾಪಕರು. ಈ ಅಧ್ಯಾಪಕರಿಗೆ ಬೇಸಿಗೆ, ದಸರಾ, ಕ್ರಿಸ್‌ಮಸ್‌ಗಳ ದೀರ್ಘ ರಜಗಳೇ ವರ್ಷಕ್ಕೆ ಮೂರು ನಾಲ್ಕು ತಿಂಗಳಿರಬಹುದು. ಭಾನುವಾರಗಳು, ಹಬ್ಬಗಳು, ಯಾವೆಲ್ಲ ರಾಜಕೀಯ ಮುಖಂಡರು ಸತ್ತ ಅಥವಾ ಹುಟ್ಟಿದ ದಿನಗಳಿಗಾಗಿ ರಜಗಳು. ಹೀಗೆ, ಅಧ್ಯಾಪಕರಿಗೆ ಸಾಹಿತ್ಯ ರಚನೆ ಮಾಡಲು ವಿರಾಮ ಸಿಗುತ್ತದೆ: ಸಾಹಿತ್ಯದ ವಾತಾವರಣವಂತೂ ಇದ್ದೇ ಇದೆ. ಈ ವಾತಾವರಣದಲ್ಲಿ ಜಡರೂ ಕವಿತಾ ರಚನೆ ಮಾಡತೊಡಗುತ್ತಾರೆ. ಒರಟಾದ ಮೈಯುಳ್ಳ ಕಪ್ಪೆಚಿಪ್ಪನ್ನು ನದಿ ನೀರೊಳಗೆ ಬಹುಕಾಲ ಎಸೆದಿದ್ದರೆ ಅದರ ಮೈಯೆಲ್ಲ ಬೆರಳಿಟ್ಟರೆ ಜಾರುವಂಥ ನುಣುಪನ್ನು ಪಡೆಯುತ್ತದಲ್ಲ, ಹಾಗೆ ನುಣುಪತನ ಅದರ ಸ್ವಾಭಾವಿಕ ಧರ್ಮವಲ್ಲ; ವಾತಾವರಣದ ಪ್ರಭಾವ.

ಕನ್ನಡ ಸಾಹಿತ್ಯ ರಚನೆ ಮಾಡುತ್ತಿರುವ ಅಧ್ಯಾಪಕ ವರ್ಗದಲ್ಲಿ ಮುಖ್ಯವಾಗಿ ಎರಡು ಬಗೆ. ಕನ್ನಡ ಅಧ್ಯಾಪಕರು; ಇಂಗ್ಲಿಷ್ ಅಧ್ಯಾಪಕರು. ಕನ್ನಡ ಅಧ್ಯಾಪಕರು ಪಂಪ, ರನ್ನ, ಜನ್ನ, ಕುಮಾರವ್ಯಾಸ, ಲಕ್ಷ್ಮೀಶ, ಕೇಶಿರಾಜರ ಗರಡಿಯಲ್ಲಿ ಸಾಧನೆ ಮಾಡಿದವರು. ಪ್ರಾಸ, ಗಣ, ಯತಿಗಳ ಕಸರತ್ತು ಇವರಿಗೆ ಚೆನ್ನಾಗಿ ಗೊತ್ತು. ಭಾವಗೀತೆಗಳನ್ನು, ಭಾವವಿಲ್ಲದ ಭಾವಗೀತೆಗಳನ್ನು ಸಹ, ಆಗೀಗ ಬರೆಯಬಲ್ಲರು. ಭಾವವಿರಲಿ, ಇಲ್ಲದಿರಲಿ ಪದಸೌಂದರ್ಯ ಹಲವರಿಗೆ ಸಿದ್ಧಿಸಿರುತ್ತದೆ; ಈ ಸಾಮರ್ಥ್ಯವೂ ಇಲ್ಲದಿರುವವರುಂಟು. ಇಂಥವರ ರಚನೆಗೆ ಪ್ರತಿಭೆ, ಸ್ಫೂರ್ತಿಗಳು ಕಾರಣವಲ್ಲ. ಸಾಹಿತ್ಯ ಸನ್ನಿವೇಶದ ನಡುವೆ ಇರುವುದರಿಂದ ಇವರೂ ರಚನೆಗೆ ತೊಡಗುತ್ತಾರೆ.

ಹಿರಿಯ ಕನ್ನಡ ಕಾರ್ಯಕರ್ತರೊಬ್ಬರು ಕೆಲವು ಕವನಗಳನ್ನು ಬರೆದು, ಕುವೆಂಪು ಅವರ ಎದುರು ಓದಿ ಹೇಳಿದರು. ಕವನವನ್ನು ಪೂರ್ತಿ ಕೇಳಿ, ಕುವೆಂಪು ಎಂದರು "ಇದಕ್ಕೇ ಸಹವಾಸ ದೋಷ ಎನ್ನುವುದು. ಇವರು ನೋಡಿ; ನಮ್ಮ ಜೊತೆಯಲ್ಲಿ ಸೇರಿ ಇವರೂ ಕವನಗಳನ್ನು ಬರೆಯ ತೊಡಗಿದ್ದಾರಲ್ಲ" ಎಂದು ಭರ್ತ್ಸನೆ ಮಾಡಿದರು. ಹೀಗೆ ಎಷ್ಟೋ ಸಾರಿ ಆಗುತ್ತದೆ. ಕನ್ನಡ ಅಧ್ಯಾಪಕ

ವರ್ಗಕ್ಕೆ ಸೇರಿದ್ದರೂ ಸಹಜ ಪ್ರತಿಭೆ, ಸ್ಫೂರ್ತಿ, ಭಾಷಾ ಸಾಮರ್ಥ್ಯಗಳಿಂದ ಉತ್ತಮ ಕವಿತೆ, ಸಾಹಿತ್ಯಗಳ ನಿರ್ಮಾಪಕರೂ ಉಂಟು.

ಇಂಗ್ಲಿಷ್ ಅಧ್ಯಾಪಕ ಸಾಹಿತಿಗಳಿಗೆ ಸಾಮಾನ್ಯವಾಗಿ ಕನ್ನಡ ಅಧ್ಯಾಪಕ ಸಾಹಿತಿಗಳಷ್ಟು ಪದನೈಪುಣ್ಯ, ಭಾಷಾ ಸಾಮರ್ಥ್ಯಗಳಿಲ್ಲ. ಇವರಿಗೆ ಕನ್ನಡದ ಪ್ರಾಚೀನ ಸಾಹಿತ್ಯದ ಪರಿಚಯ ಇಲ್ಲ; ಅಥವಾ ಸಾಕಷ್ಟು ಇಲ್ಲ. ಬದಲಾಗಿ, ಇಂಗ್ಲಿಷ್ ಸಾಹಿತ್ಯವನದಲ್ಲಿ ವಿಹರಿಸಿದವರು. ಇವರಿಗೆಲ್ಲ ಆಂಗ್ಲ ಕವಿ, ಸಾಹಿತಿಗಳೇ ಗುರುಗಳು. ಕಳೆದ ದಶಕಗಳವರೆಗೆ ಷೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್ ಸ್ಫೂರ್ತಿಯಾಗಿದ್ದರೆ, ಇಂದಿನವರಿಗೆ ಎಲಿಯಟ್, ಜೇಮ್ಸ್ ಜಾಯ್ಸ್ ಮುಂತಾದವರು ಸ್ಫೂರ್ತಿ. ಇವರ ಉಪನಿಷತ್ ಪರಿಚಯವೆಂದರೆ ಎಲಿಯಟ್‌ನ 'ವೇಸ್ಟ್ ಲ್ಯಾಂಡ್'ನಲ್ಲಿ ಉದ್ಧೃತವಾದ ಸಾಲುಗಳಿಂದ, ಫ್ರಾನ್ಸ್‌ನ ಪ್ರಯೋಗ ಶೀಲರು ಕಂಡ ಹೊಸದಾರಿ ಇಂಗ್ಲಿಷ್ ಸಾಹಿತಿಗಳಿಗೆ ಸಾಮಾನ್ಯವಾಗಿ ಸ್ಫೂರ್ತಿಯಾಗುತ್ತದೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ಇಂಗ್ಲಿಷ್ ಅಧ್ಯಾಪಕ ಸಾಹಿತಿಗಳಿಂದ ಬರುತ್ತದೆ. ಕನ್ನಡ ಸಾಹಿತ್ಯ ವಿಮರ್ಶಕರು (?) ಇದೊಂದು ನವಪ್ರಯೋಗವೆಂದು ಹರ್ಷ ಆಶ್ಚರ್ಯಗಳಿಂದ ಮೂಗರಾಗುತ್ತಾರೆ.

ಕನ್ನಡ ಸಾಹಿತ್ಯ, ಸಾಹಿತಿಗಳ ಸಾಮಾನ್ಯವಾದ ನಡೆ ಈ ರೀತಿ. ಇದಕ್ಕೆ ಹೊರತಾಗುವ ಉದಾಹರಣೆಗಳೂ ಇವೆ.

○ ○ ○ ○ ○ ○

ಆಧುನಿಕ ಕನ್ನಡ ಕವಿಗಳಲ್ಲಿ ಬೇಂದ್ರೆ, ಪುಟ್ಟಪ್ಪ ಅಗ್ರಗಣ್ಯರು. ಮರಾಠಿ ತಾಯ್ನುಡಿಯಾದ ಬೇಂದ್ರೆ ಕನ್ನಡ ಕವಿಗಳಲ್ಲಿ ಪಡೆದಿರುವ ಅಗ್ರಗಣ್ಯತೆ ಪ್ರಶಂಸನೀಯ. ಅಚ್ಚಕನ್ನಡ ಪದಗಳು, ಜಾನಪದ ಗೀತೆಗಳ ಧಾಟಿ, ಕನ್ನಡದ ಮಣ್ಣಿನಿಂದ ಮಾಡಿದಂತೆ ಕಾಣುವ ವೈಯಕ್ತಿಕವಾದ ಪ್ರತಿಭೆ, ಪದ್ಯದ ಸನ್ನಿವೇಶದಿಂದ ಅವರಲ್ಲಿ ಮೂಡುವ ಮಾತು ಹಾಸ್ಯವಿಲಾಸ–ಇವುಗಳಿಂದಾಗಿ ಬೇಂದ್ರೆಯವರನ್ನು ಅಚ್ಚ ದೇಸಿ ಕವಿಯೆಂದು, ಆಧುನಿಕ ಕನ್ನಡ ಕವಿಗಳಲ್ಲಿ ಸರ್ವೋತ್ತಮರೆಂದು ಭಾವಿಸಿದ ಕಾಲವಿತ್ತು. ಕರ್ನಾಟಕದಲ್ಲಿ ಕೊನೆಯಿಂದ ಕೊನೆಗೆ ಎಡೆಬಿಡದೆ ಪ್ರವಾಸ ಮಾಡಿ, ಭಾಷಣ ಕಾವ್ಯ ವಾಚನಗಳನ್ನು ಮಾಡುತ್ತಿದ್ದು, ಕನ್ನಡ ಕವಿತೆಯೆಂದರೆ ಬೇಂದ್ರೆ ಎಂದು ಭಾವಿಸಲ್ಪಡುತ್ತಿತ್ತು. ಬೇಂದ್ರೆಯವರ ವಾಚನದಿಂದಲೆ ಜನಪ್ರಿಯವಾಗಿದ್ದ ಅವರ ಕವನಗಳು ಕರ್ನಾಟಕದ ಎಲ್ಲೆಡೆ ಹಾಡಲ್ಪಡುತ್ತಿದ್ದವು. ನಡು ವಯಸ್ಸಿನ ವೇಳೆಗಾಗಲೆ ಬೇಂದ್ರೆ ಪ್ರದರ್ಶಿಸಿದ್ದ ಕಾವ್ಯಸಿದ್ಧಿಯು ದಾರಿಯಲ್ಲೆ ಮುಂದುವರಿದಿದ್ದರೆ, ಅವರು ಈ ವೇಳೆಗಾಗಲೆ ವಿಶ್ವವಿಖ್ಯಾತರಾಗುತ್ತಿದ್ದರೇನೋ. ಕರ್ನಾಟಕದ ದುರ್ದೈವ ಇಂಥ ಪ್ರತಿಭಾವಂತರಿಗೇ ಕೋಶಿನ ಕಷ್ಟ

ವನ್ನು ತಂದಿತ್ತಿತು. ಬದುಕು ನೀಗುವ ಕೋಟಲೆ ವ್ಯವಹಾರಗಳಿಂದ ಮುಕ್ತರಾಗಿದ್ದರೇ ಕಲೆ, ಸಾಹಿತಿಗಳ ಸಾಧಕರು ಸಿದ್ಧಿಯನ್ನು ಪಡೆಯಬಲ್ಲರು. ಕಾಲ, ಶ್ರಮಗಳೆಲ್ಲ ಬಡತನ ನೋಡುವುದಕ್ಕೇ ಮುಡಿಪಾದರೆ ಕಾವ್ಯದ ಹಾದಿಯಲ್ಲಿ ಮುಂದುವರಿದಾರು ಹೇಗೆ.

ಬೇಂದ್ರೆ ಕರ್ನಾಟಕದ ಕೊನೆಯಿಂದ ಕೊನೆಗೆ ತಿರುಗಾಡುತ್ತಿದ್ದಾಗ, "ಕಾವ್ಯಶಕ್ತಿ ಇಂಗಿದ ಮೇಲೆ ಪ್ರವಾಸ, ಭಾಷಣಗಳಲ್ಲಿ ಕಲೆ ತೊಡಗಬೇಕು. ಈಗಲ್ಲ" ಎಂಬ ಗುರಿಯನ್ನೇ ಇಟ್ಟುಕೊಂಡು ಪುಟ್ಟಪ್ಪ ಯೋಗಿಯಂತೆ ಕಾವ್ಯ ರಚನೆಯಲ್ಲಿ ತಲ್ಲೀನರಾದರು. ಮೊದಲು ರಾಮಕೃಷ್ಣಾಶ್ರಮ, ಅನಂತರ ಒಂಟಿಕೊಪ್ಪಲಿನ ಕೊನೆಯಲ್ಲಿದ್ದ ಮನೆ, ಕುಪ್ಪಳಿಯ ಮನೆ, ರಜೆಯಲ್ಲಿ ಶಿವಮೊಗ್ಗೆಯಲ್ಲಿ ಬೀಗರ ಮನೆ–ಇವೇ ಪುಟ್ಟಪ್ಪನವರ ಬಾಹ್ಯ ಪ್ರಪಂಚವಾಯಿತು; ಎಂದರೆ, ಅಧ್ಯಾಪಕ ವೃತ್ತಿಗಾಗಿ ಕಾಲೇಜಿನಲ್ಲಿ ಕಳೆಯಬೇಕಾಗುತ್ತಿದ್ದ ಕಾಲದ ವಿನಹ.

ಕನ್ನಡ ಅಧ್ಯಾಪಕರಾಗಿದ್ದ ಪುಟ್ಟಪ್ಪ ಆಂಗ್ಲ ಸಾಹಿತ್ಯವನ್ನೂ ಆಳವಾಗಿ ಅಧ್ಯಯನ ಮಾಡಿದರು. ಮೊದಮೊದಲಲ್ಲಿ ಷೆಲ್ಲಿ, ವರ್ಡ್ಸ್ ವರ್ತ್ ಪುಟ್ಟಪ್ಪನವರಿಗೆ ಮಾದರಿ. ಪುಟ್ಟಪ್ಪನವರನ್ನು 'ಕನ್ನಡದ ಷೆಲ್ಲಿ' ಎಂದು ಕರೆಯುತ್ತಿದ್ದುದುಂಟು. ವರ್ಡ್ಸ್‌ವರ್ತ್‌ನಂತೆ ಪುಟ್ಟಪ್ಪ ನಿಸರ್ಗಪ್ರೇಮಿ, ನಿಸರ್ಗಾರಾಧಕ, ಮುಂದುವರಿದಂತೆ, ವರ್ಡ್ಸ್ ವರ್ತ್ ಕಾಣದ, ಅರಿಯದ ಆಳ, ಎತ್ತರಗಳನ್ನು ಪುಟ್ಟಪ್ಪ ಸಾಧಿಸಿದರು. ಇದು ಭಾರತೀಯ ಕವಿಗಳ ಆಧ್ಯಾತ್ಮಿಕ ವೈಶಿಷ್ಟ್ಯತೆ. ಪುಟ್ಟಪ್ಪ ಮೊದಲ ಕವನಗಳನ್ನು ರಚಿಸಿದಾಗ ವರ್ಡ್ಸ್ ವರ್ತ್ ಗುರುವಾಗಿರಬಹುದು. 'ಚಿತ್ರಾಂಗದ'ದಲ್ಲಿ ರವೀಂದ್ರ, ಮಿಲ್ಟನ್‌ರ ಪ್ರಭಾವ ಕಾಣುತ್ತದೆ. 'ಕಾನೂರು ಸುಬ್ಬಮ್ಮ', 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಿಗೆ ಟಾಲ್‌ಸ್ಟಾಯ್ ಮಾದರಿ. ರಾಮಕೃಷ್ಣ ಪರಮಹಂಸ, ಅರವಿಂದ ಅಧ್ಯಾತ್ಮಿಕ ಗುರುಗಳು.

ಕುವೆಂಪು ಶ್ರೀ ರಾಮಾಯಣ ದರ್ಶನವನ್ನು ರಚಿಸಿ ಮುಗಿಸಿ ಕಾಲು ಶತಮಾನವಾಯಿತು, ಅದರ ರಚನೆ ಹತ್ತು ವರ್ಷ ಕಾಲ. "ಅರ್ಥವಿದೆಯೊ, ಅವಶ್ಯವೊ ಎಂಬ ಗಣನೆಯನ್ನೇ ಮಾಡದೆ ಸಂಸ್ಕೃತಮಯವಾದ ಪದಜಾಲವನ್ನು ಕವನಗಳಲ್ಲಿ ನೇಯುತ್ತಾರೆ. 'ತಿಣುಕಿದನು ಫಣಿರಾಮ ರಾಮಾಯಣದ ಕವಿಗಳ ಭಾರದಲಿ' ಇವರು ಇನ್ನೊಂದು ರಾಮಾಯಣವನ್ನು ಬರೆಯುವ ಗೋಜಿಗೇಕೆ ಹೋಗಿದ್ದಾರೆ" ಎಂದು ಹಲವರು ಮೂಗು ಮುರಿಯುತ್ತಿದ್ದರು. ಶ್ರೀ ರಾಮಾಯಣದ ಮೊದಲ ಕೆಲವು ಭಾಗಗಳು 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟವಾದಾಗ ಯಾರೂ ಹೆಚ್ಚು ಉತ್ಸಾಹ ತಾಳಲಿಲ್ಲ. ಈ ಕಾವ್ಯ ಸಂಪುಟಗಳಲ್ಲಿ ಪ್ರಕಟವಾದ

ಮೇಲೆ, ದೀರ್ಘಕಾಲದ ಕಾವ್ಯ ತಪಸ್ಸಿನ ಪರಿಣಾಮ ಇದು, ಎಂಬುದು ಮೇಲ್ಲೇ ಕಾಣುತ್ತಿತ್ತು. ಅಮಿತ ಸಂಖ್ಯೆಯ ಕವಿತೆ, ಖಂಡ ಕಾವ್ಯಗಳನ್ನು ರಚಿಸಿದ ರವೀಂದ್ರರಾಗಲಿ ಇಂಥ ಮಹಾ ಕಾವ್ಯವನ್ನು ಬರೆಯುವ ಸಾಹಸಕ್ಕೆ ಎಳಸಲಿಲ್ಲ. ಮಹಾ ಕಾವ್ಯವನ್ನು ರಚಿಸದಿರುವುದೇ ರವೀಂದ್ರರ ಮುಖ್ಯ ಕೊರತೆ. ಭಾರತದ ಇತರ ಪ್ರಾದೇಶಿಕ ಭಾಷೆಗಳಲ್ಲಾಗಲಿ ಇಂಥ ದೀರ್ಘ ವ್ಯವಸಾಯ ಇಂದು ಬಹು ಅಪರೂಪ: ಆಧುನಿಕ ಜೀವನದ ಅವಸರ, ಗಡಿಬಿಡಿ, ಗೊಂದಲಗಳಲ್ಲಿ ಇಂಥ ದೀರ್ಘ ಕಾವ್ಯವನ್ನು ಬರೆಯುವ ವಿರಾಮ, ಮನಶ್ಯಾಂತಿಗಳೆಲ್ಲಿ ದೊರಕಿಯಾವು.

ಕುವೆಂಪು 'ಶ್ರೀರಾಮಾಯಣ ದರ್ಶನ'ವನ್ನು ಪ್ರಕಟಿಸಿದ್ದಾರೆಂದು ಗೊತ್ತು. ಒಂದಾದ ಮೇಲೊಂದು ಬಹುಮಾನಗಳು ಬಂದಮೇಲೆ ಹೆಚ್ಚು ಜನರಿಗೆ ಗೊತ್ತು, ಆದರೆ ಓದಿದವರೆಷ್ಟು ಜನ, ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್', ಎಲಿಯಟ್‌ನ 'ವೇಸ್ಟ್ ಲ್ಯಾಂಡ್', ಜಾಯ್ಸ್‌ನ 'ಯುಲಿಸಿಸ್'ಗಳ ಹೆಸರು ಆಂಗ್ಲ ಜನತೆಗೆ ಗೊತ್ತು. ಆದರೆ ಓದಿದವರೆಷ್ಟು ಜನ. ಓದಿ, ಆನಂದಿಸಿದವರು ಇನ್ನೂ ಬಹು ಕಡಿಮೆ. ಹೇಗೋ ಹಾಗೆ. ಆದರೆ ಮೇಲ್ಕಂಡ ಇಂಗ್ಲಿಷ್ ಕೃತಿಗಳ ಬಗೆಗೆ ಸಾಕಷ್ಟು ಪ್ರೌಢ ವಿಮರ್ಶೆಗಳು, ಗ್ರಂಥಗಳೂ ಬಂದಿದ್ದಾವೆ. ಶ್ರೀ ರಾಮಾಯಣ ದರ್ಶನದ ಬಗೆಗೆ ವಿಮರ್ಶೆಗಳಾಗಲಿ, ಗ್ರಂಥಗಳಾಗಲಿ ಬಹುಕಾಲ ಬರಲಿಲ್ಲ. (ಈಚೆಗೇನಾದರೂ ಬಂದಿರಬಹುದು) ಲೇಖನಗಳೇ ಇಲ್ಲದ ಮೇಲೆ ಹೊಗಳಿಕೆ, ತೆಗಳಿಕೆ ಇನ್ನೆಲ್ಲಿ.

ಪುಟ್ಟಪ್ಪನವರೊಡನೆ ಶಿವಮೊಗ್ಗೆಯಲ್ಲಿ ಸಂಜೆ ಗಾಳಿ ಸಂಚಾರಕ್ಕೆ ನಾ ಹೋಗುತ್ತಿದ್ದುದುಂಟು. ಯಾವುದು ಹೇಳಿದರೂ ತಾನು ಅದಕ್ಕಿಂತ ಮೇಲೆ, ಎಂಬ ಅಹಂಭಾವ ಅವರ ಮನಸ್ಸಿನಲ್ಲಿದ್ದಂತೆ ನನಗೆ ಭಾಸವಾಗುತ್ತಿತ್ತು.

"ನಿಮಗೆ ನೋಬೆಲ್ ಬಹುಮಾನ ಬರಬಹುದೆ?"

'ಅಂಥ ಬಹುಮಾನಗಳಿಗೆಲ್ಲ ನಾನು ಲೆಕ್ಕಿಸುವುದಿಲ್ಲ. ಅದರ ಬಗೆಗೆ ನನ್ನ ಕವನವೊಂದು ಇದೆಯಲ್ಲ, ಎಂದೇನೋ ಹೇಳಿ, ಅಸಡ್ಡೆಯಿಂದಲೆಂಬಂತೆ ಬೆರಳ ಲ್ಲಾಡಿಸಿದರು.

ಇದು ಅಹಂಭಾವದ ಅತಿರೇಕ ಎಂದೆನಿಸಿತು ನನ್ನ ಮನಸ್ಸಿಗೆ. ಜಗತ್ತಿನ ಸರ್ವಶ್ರೇಷ್ಠವಾದ, ಬಂದ ಕೂಡಲೆ ಶ್ರೀಮಂತನಾಗುವಂಥ ಬಹುಮಾನದ ಬಗೆಗೆ ಈತ ಹೀಗೆ ಹೇಳಿದರೆ? ವಿದ್ಯಾರ್ಥಿಯಾಗಿದ್ದ ನನ್ನ ಅಪ್ರಬುದ್ಧ ಮನಸ್ಸಿಗೆ ಇದ ರನ್ನು ಕೆಣಕಲೆಂದು ಈ ಪ್ರಶ್ನೆ ಮೂಡಿರಬೇಕು. (ಈಗ ಎನಿಸುತ್ತದೆ–ಎಂಥೆಂಥವೋ ಕಳಪೆ ಪುಸ್ತಕಗಳಿಗೆಲ್ಲ ನೋಬೆಲ್ ಬಹುಮಾನ ಬಂದಿದೆ; ಶ್ರೀ ರಾಮಾಯಣ ದರ್ಶನ ಅಂಗೀಕೃತ ಭಾಷೆಗೆ ಸಮರ್ಪಕವಾಗಿ ತರ್ಜುಮೆಯಾದರೆ ಅದಕ್ಕೂ

ನೋಬೆಲ್ ಬಹುಮಾನ ಬರಬೇಕೆಂದು. ಮುಖ್ಯವಾದ ತೊಡಕೆಂದರೆ, ಭಾಷಾಂತರದಲಿ ಕಾವ್ಯದ ಸಂಪತ್ತು ಬಹುವಾಗಿ ನಾಶವಾಗಿ ಬಿಡುತ್ತದೆ. ಗದ್ಯವಾದರೆ ಪರವಾಯಿಲ್ಲ. ರವೀಂದ್ರರ "ಗೀತಾಂಜಲಿ" ಮುಂತಾದವು ಬರಿಯ ಇಂಗ್ಲಿಷ್ ಭಾಷಾಂತರಗಳಲ್ಲಿ; ಮೂಲ ಕವಿಯಿಂದ ಬೇರೆ ಭಾಷೆಯಲ್ಲಿ ಪುನರ್ರಚನೆ. "ಬಲಾಕಾ" ರವೀಂದ್ರರ ಸರ್ವಶ್ರೇಷ್ಠ ಕವನಗಳ ಸಂಕಲನ; ಬೇರೆ ಯಾರೋ ಅದನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿದ್ದು, ಇದನ್ನು ಓದಲೂ ಬೇಸರವಾಗುತ್ತದೆ.)

ಇನ್ನೊಂದು ಸಂಜೆ ಗಾಳಿ ಸಂಚಾರಕ್ಕೆ ಹೋಗುತ್ತಿದ್ದಾಗ ಇದೇ ಧಾಟಿಯಲ್ಲಿ ಮುಂದುವರಿಸಿದೆ. 'ನಿಮಗೆ ದೇವರ ಸಾಕ್ಷಾತ್ಕಾರವಾಗಿದೆಯೆ ?'

ಅದೇನು ಮಹಾ. ಎಷ್ಟೋ ಬಾರಿ ಆಗಿದೆ–ಎಂದು ಬಿಡುವರು, ಎಂದುಕೊಂಡು ಹೀಗೆ ಕೇಳಿದೆ. ಮೌನವಾಗಿ, ಕಣ್ಣನ್ನು ನನ್ನೆಡೆ ತಿರುಗಿಸಿ ದುರುಗುಟ್ಟಿದರು.

ಇನ್ನೊಮ್ಮೆ ಇದೇ ಪ್ರಶ್ನೆಯನ್ನು ಕೇಳಿದೆ.

"ನನಗೆ ದೇವಸಾಕ್ಷಾತ್ಕಾರವಾಗಿದ್ದರೆ, ಹೀಗೆಲ್ಲ ನಿಮ್ಮೊಡನೆಲ್ಲಿ ಸೇರಿ ಮಾತನಾಡುತ್ತಿರಲಿಲ್ಲ! ಎಂದು ನಿಧಾನವಾಗಿ ಉತ್ತರವಿತ್ತರು.

ಇಷ್ಟಾದರೂ ವಿಚಿತ್ರತೆಯೇನಿಯಲ್ಲ, ಎಂದು ನನ್ನ ಮನಸ್ಸು ಹಗುರಾಯಿತು.

ಸಾಹಿತ್ಯ ಅಕಾಡೆಮಿಯ ಐದು ಸಾವಿರ ರೂಪಾಯಿ ಬಹುಮಾನ ಕುವೆಂಪುವಿನ "ಶ್ರೀರಾಮಾಯಣ ದರ್ಶನ"ಕ್ಕೆ ಕೊಡಲಾಗಿದೆಯೆಂದು ಆ ದಿನ ಪತ್ರಿಕೆಗಳಲ್ಲಿ ಬಂದಿತ್ತು. ಒಂಟಿಕೊಪ್ಪಲಿನ ಮನೆಗೆ ಆವರಿವರು ಬಂದು ಅಭಿನಂದನೆ ಸಲ್ಲಿಸುತ್ತಿದ್ದರು. ಪುಟ್ಟಪ್ಪನವರ ಮನಸ್ಸು, ಮುಖಭಾವ ತಿಳಿಯಾಗಿತ್ತು.

ನಾನೇನೂ ಅಭಿನಂದನೆ ಸಲ್ಲಿಸಲಿಲ್ಲ. ಬದಲಾಗಿ, "ಇದೇನು ಮಹಾ. ಇದಕ್ಕಿಂತ ದೊಡ್ಡ ಬಹುಮಾನಗಳು ನಿಮಗೆ ಬರುತ್ತವೆ" ಎಂದೆ. ನನ್ನ ಮನಸ್ಸಿಗೆ ಆಗ ಹಾಗೆ ತೋರಿತಷ್ಟೆ.

ಕುವೆಂಪು ತಟಕ್ಕನೆ ನಕ್ಕರು. "ಇಂಥದೇನಾದರೂ ಬಂದರೆ ಮಾತ್ರ ಈ ಕೆಲವು ಜನರ ಗಮನಕ್ಕೆ ಬರುತ್ತದೆ. ಇಲ್ಲದಿದ್ದರೆ ಲೆಕ್ಕಿಸುವುದಿಲ್ಲ, ಆಗ ತಾನೆ ಅಭಿನಂದನೆ ಸಲ್ಲಿಸಿ ಇಂಗ್ಲಿಷ್ ಪ್ರಾಧ್ಯಾಪಕರು ಹಿಂದೆ ಕೂತಿದ್ದರು.

ಇದಾದ ಮೇಲೆ ಹಲವು ಬಹುಮಾನ, ಪ್ರಶಂಸೆಗಳು ಕುವೆಂಪುವಿನ ಕೊರಳಿಗೆ ಬಿದ್ದವು. ಪದ್ಮಶ್ರೀ, ಡಾಕ್ಟರೇಟ್, ಜ್ಞಾನಪೀಠದ ಬಹುಮಾನ–ಇತ್ಯಾದಿ. ಶ್ರೀರಾಮಾಯಣ ದರ್ಶನವನ್ನು ಕಡೆಗಣಿಸಿದ್ದ ಜನರು, ಹೆಚ್ಚು ಹೆಚ್ಚು ಬಹುಮಾನ ದೊರೆತಂತೆಲ್ಲ ಕುವೆಂಪುವಿಗೆ ಹೆಚ್ಚು ಗೌರವ ಕೊಡತೊಡಗಿದರಲ್ಲ. ಬಂಗಾಳದಲ್ಲಿ ಪ್ರಸಿದ್ಧರಾಗಿದ್ದ ರವೀಂದ್ರರು ನೋಬೆಲ್ ಬಹುಮಾನ ಪಡೆದ ಮೇಲೆ ಮಾತ್ರ ಸಮಗ್ರ ಭಾರತದ ವ್ಯಕ್ತಿಯಾದರು; ಇದಕ್ಕೆ ಇತರ ಪ್ರಾಂತದವರಿಗೆ ಬಂಗಾಳಿ ತಿಳಿಯದಿದ್ದುದು ಕಾರಣ, ಕನ್ನಡ ತಿಳಿದವರು ಕೂಡ ಕನ್ನಡದವರಿಗೆ ಸರ್ಕಾರದ

ಪುರಸ್ಕಾರಗಳು ಬಂದಮೇಲೆ ಮಾತ್ರ ಗೌರವ ಸಲ್ಲಿಸತೊಡಗುವುದು ಅಸಂತೋಷಕರವಾದುದು. "Better late than never" ಎಂದುಕೊಳ್ಳಬೇಕು. ಜನಸಾಮಾನ್ಯಕ್ಕೆ ಕಾವ್ಯದ ಮಹತ್ತು ತಿಳಿಯ ಸಾಧ್ಯವಿಲ್ಲ; ಹಿರಿಯ ಪುರಸ್ಕಾರಗಳು ಬಂದ ಮೇಲೆ, ಇದರಲ್ಲಿ ಮಹತ್ತಿದೆ, ಎಂದು ಭಾವಿಸುತ್ತಾರೆ. ಕನ್ನಡದ ಕವಿ. ಪಂಡಿತ, ವಿಮರ್ಶಕರು ಈ ಮಹತ್ ಕೃತಿಗೆ ಇದುವರೆಗೆ ಯಾವ ರೀತಿಯ ಮನ್ನಣೆ ಸಲ್ಲಿಸಿದರು? ಈ ತುಲನೆ. ಮನ್ನಣೆ ನಿಷ್ಕರ್ಷೆಯಾಗಬೇಕಾದುದು ಮುಂದಿನ ಶತಮಾನಗಳ ವಿಮರ್ಶಕರಿಂದಲೊ?

ಅಲ್ಪ ನಾನು ಎಂದು ಕುಗ್ಗಿ
ಮುದುಗಬೇಡವೊ :
ಓ ಅಲ್ಪವೆ,
ಅನಂತದಿಂದ ಗುಣಿಸಿಕೊ ;
ನೀನನಂತವಾಗುವೆ

○ ○ ○

ಆಶ್ಚರ್ಯಪಡು, ಆಶ್ಚರ್ಯಪಡು,
ಆಶ್ಚರ್ಯಪಡು, ಓ ನನ್ನ ಜೀವ
ಆಶ್ಚರ್ಯಪಡುವ ಶಕ್ತಿಯನು
ಕಳೆದುಕೊಂಡರೆ ನೀನು ನಿರ್ಜೀವ !

○ ○

ಒಲುಮೆ ಒಂದು ದಿವ್ಯ ರಕ್ಷೆ
ಇಹ ಸಮಸ್ಯೆಗೆ :
ಮದುವೆ ಅದಕೆ ಮಧುರ ದೀಕ್ಷೆ
ಗೃಹ ತಪಸ್ಸಿಗೆ.

ಉದಯ ರವಿಯ ಯಾತ್ರೆಗೆ

ಪೋಗಿ ಬಾರೊವೆಮ್ಮ ಗೆಳೆಯ
'ಉದಯರವಿಯ' ಯಾತ್ರೆಗೆ
ನಿಂತ ನಿಲುವಿನಲ್ಲೆ ಒಮ್ಮೆ
ಶ್ರೀ ಕುವೆಂಪು ದರ್ಶನಕೆ. ॥ ೧ ॥

ಅಲ್ಲಿ ಪೂರ್ಣ ತೇಜಸ್ವಿ
ಚೈತ್ರ ನಿತ್ಯ ನೂತನ
ಕವಿಯ ಕರುಣ ಕಾವ್ಯಗಂಗೆ
ಹರಿಯುತಿರಲು ದಿನದಿನ ॥ ೨ ॥

ಮೌನ ಮಂತ್ರ ಘೋಷದಲ್ಲಿ
ಪೂರ್ಣ ತುಂಬಿ ತಾಣವು
ಅಭ್ರ ಗಂಭೀರವಾಗಿ
ನಲಿವುದಯ್ಯ ಪ್ರಾಣವು ॥ ೩ ॥

ನಗರದಲ್ಲೆ ಇದ್ದರೇನು
ಅದೊಂದು ಪರ್ಣಶಾಲೆ
ಪದ್ಮ ಪತ್ರದಲ್ಲಿ ಬಿಂದು
ಮುತ್ತು ಎನಿಪ ಲೀಲೆ ॥ ೪ ॥

ಮಾಣು ಮನದ ಭಯವನೆಲ್ಲ
ಬಯಕೆಯೇನು ಉಸುರು
ಅವರ ಅಮೃತ ವಾಣಿಯಿಂದ
ಅಹುದು ಮನವು ಹಸಿರು ॥ ೫ ॥

ಎಲ್ಲ ತೀರ್ಥ ಸ್ನಾನಪಾನ-
ದನುಭವನವ ಪೊಂದುವೆ
ಸೊಲ್ಲರಿಯದ ಕಲೆಯ ಕಲ್ಲ
ದೇವ ಗೃಹವು ಇದುವುನೆ ॥ ೬ ॥

ಮನದ ಮಡಿಗೆ ಕೊರತೆ ಬೇಡ
ಇಹುದು ಇಲ್ಲಿ ವಿಗ್ರಹ
ಭಕ್ತನಾಗಿ ನಮಿಸಿ ನುತಿಸೆ
ಹರಿವುದು ದುರಾಗ್ರಹ ॥ ೭ ॥

ಸತ್ಯರೂಪಿ ಶಿವ ಸಮೀಪಿ
ರಸ ಋಷಿ ನಿವಾಸ
ಹರಸುತಿಹರು ನನ್ನ ಗುರು
ತಳೆದು ಮಂದಹಾಸ ॥ ೮ ॥

ಅದೋ ನಮಿಸು ರಾಮನಯನ
ಉಸುರಿದ ವಲ್ಮೀಕವು
ಆದಿ ಕವಿಯ ವ್ಯಾಸ ಋಷಿಯ
ಸನ್ನಿಭ ಕುವೆಂಪುವು. ॥ ೯ ॥

—**ಟಿ. ಕೆ. ವಿಶ್ವನಾಥ ಶೆಟ್ಟಿ,** ಎಂ. ಎ., ತುಮಕೂರು

ಶ್ರೀ ದಾಸ ಸಾಹಿತ್ಯ

ಶ್ರೀ ಬಿ. ವಿ. ಶ್ರೀನಿವಾಸರಾವ್, ಎಂ. ಎ.

ಕನ್ನಡ ಸಾಹಿತ್ಯ ಪ್ರಪಂಚದ ಅಡಿಗಲ್ಲಿಗೆ, ದಾಸ ಸಾಹಿತ್ಯ ಸಹಿತ ಒಂದು ಶಿರವಾಗಿ ನಿಂತಿದೆ ಎಂದು ಹೇಳಿದರೆ ತಪ್ಪಾಗಲಾರದು. ಕನ್ನಡ ಕುಲರಸಿಕರ ಚಿತ್ತವನ್ನು ಉದ್ಧಾರ ಮಾಡಿ ಪ್ರಕಾಶಗೊಳಿಸುವ ಶಕ್ತಿಯೇ ದಾಸ ಸಾಹಿತ್ಯ. ಈ ದಾಸ ಸಾಹಿತ್ಯವೇ ಕನ್ನಡಿಗರ ಕುಲದೈವ: ನೈತಿಕ ಮತ್ತು ಧಾರ್ಮಿಕ ಪ್ರಗತಿಯನ್ನು ತಂದೊಡ್ಡುವ ಈ ಕನ್ನಡದ ಕನ್ನಡಿ ದಾಸ ಸಾಹಿತ್ಯದ ಹಿರಿಮೆ, ಅಗಾಧವಾದದ್ದು. ಮಿಗಿಲಾಗಿ ಮಾನವ ಕುಲದ ಸುಧಾರಣೆಯನ್ನು ಮಾಡುವ ಶಕ್ತಿಯಿಂದ ಕೂಡಿದ್ದಾಗಿದೆ. ದಾಸ ಸಾಹಿತ್ಯ ತಿಳಿಗಡನ್ನವೂ ಹೌದು. ನಲುವಿನ ಕನ್ನಡವೂ ಹೌದು. ಚೆಲುವಿನ ಕನ್ನಡವೂ ಹೌದು.

ಈ ದಾಸ ಸಾಹಿತ್ಯ ಕನ್ನಡ ಶಾಸ್ತ್ರೀಯ ಸಾಹಿತ್ಯದ ಒಂದು ಭಾಗವಾಗಿದೆ. ಇದು ಯಾವ ಮತ ಜಾತಿ ಭೇದಗಳಿಂದ ಕೂಡಿಲ್ಲ. ಯಾವ ಬಗೆಯ ಪಕ್ಷಕ್ಕೂ ಸಿಕ್ಕಿದುಕೊಂಡಿಲ್ಲ. ಕರ್ನಾಟಕ ಸಾಂಸ್ಕೃತಿಕ ಕುಲದ ಪರಂಪರೆಯ, ಮಾನವ ಜನಾಂಗದ ಶ್ರೇಷ್ಠವಾದ ಕಾಣಿಕೆ ಮತ್ತು ವರಪ್ರಸಾದವಾಗಿದೆ. ಜಗತ್ತನ್ನು ಸಾಂಸ್ಕೃತಿಕ ದೃಷ್ಟಿಯಲ್ಲಿ ವಿಸ್ತರಿಸುವುದಕ್ಕೆ ಈ ದಾಸ ಸಾಹಿತ್ಯ ಅತ್ಯುತ್ತಮವಾದ ಆಧಾರವಾಗಿದೆ.

ಸುಮಾರು ಹದಿನಾರನೆಯ ಶತಮಾನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣಯುಗ ಅದರಲ್ಲೂ, ದಾಸ ಸಾಹಿತ್ಯದ ಅಭ್ಯುದಯಕಾಲ ಎನ್ನಿಸಿಕೊಂಡಿದೆ. ಈ ಕಾಲದಲ್ಲಿ ದಾಸರುಗಳ ಗಾಯನ ಕೀರ್ತನೆಗಳಿಗೆ ಬಹಳ ಅವಕಾಶವೂ, ಮತ್ತು ಪ್ರೋತ್ಸಾಹವೂ ಇತ್ತು. ಕನ್ನಡ ಸಂಸ್ಕೃತಿಗೆ ದಾಸ ಸಾಹಿತ್ಯ ವಿಶೇಶ ಅಸ್ತಿಭಾರವಾಗಿ ಕನ್ನಡಿಗರ ಧಾರ್ಮಿಕ ಸಂಪತ್ತನ್ನು ಅಭಿವೃದ್ಧಿ ಮಾಡಿತು.

ಈ ದಾಸ ಸಾಹಿತ್ಯದ ಮುಖ್ಯ ಅಂಶ ಮತ್ತು ಜೀವಾಳ ಮುಕ್ತಿ. ಮುಕ್ತಿ ಎಂದರೇನು? ಅದನ್ನು ಪಡೆಯುವುದು ಹೇಗೆ? ಅದನ್ನು ಪಡೆಯುವುದರಿಂದ ಮನುಗೆ ಅನುಕೂಲಗಳೇನು? ಎಂಬುದನ್ನು ಪರಿಗ್ರಹಿಸಲು ದಾಸ ಸಾಹಿತ್ಯದ ರಸದೂಟ ಅವಶ್ಯಕವಾಗಿದೆ.

ಈ ಹದಿನಾರನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಧಾರ್ಮಿಕ ವಿದ್ಯಾಭ್ಯಾಸದ ಬೆಳವಣಿಗೆ ಖ್ಯಾತಿಗಳಿಸಿತು. ಈ ಸುವರ್ಣಯುಗದ ಮುನ್ನೋಟದಲ್ಲಿ, ಕನ್ನಡ ಕುಲರಸಿಕರ ಅದೃಷ್ಟಕ್ಕೆ ಸರಿಯಾಗಿ ರಸಿಕರ ದಾಸರ ದಾಸಸಾಹಿತ್ಯ ಪ್ರಾರಂಭವಾಯಿತು. ಕನ್ನಡ ಸಾಹಿತ್ಯ ಮೆರೆಯಿತು. ಕನ್ನಡ ಶೈಲಿ ಮೊಳಗಿತು.

ಕನ್ನಡದ ಕನ್ನಡಿ ಪ್ರಕಾಶವಾಯಿತು. ದಾಸರುಗಳು, ಸುಖಜೀವಿಗಳಾಗಲು ವಾಸ್ತವಿಕ ಪ್ರಪಂಚದ ಸುಖಭೋಗಗಳನ್ನು ಅನುಭವಿಸಲು, ಆಸೆಪಡದೆ ವಿ ಕಾಶ್ರಮ ಹೊಂದಿದರು. ಕನ್ನಡ ಸಾಹಿತ್ಯದ ವಿಕಾಸಕ್ಕೆ, ತಮ್ಮ ತನು-ಮನ ಗಳನ್ನು ಧಾರೆ ಎರೆದರು. ಕನ್ನಡ ಕಿರೀಟಪ್ರಾಯರಾದರು.

ಅರಣ್ಯೋಪಾಧಿಯಲ್ಲಿರುವ ಸಂಸಾರದ ಕಷ್ಟದ ತಾಪತ್ರಯಗಳಿಗೆ ಸಿಕ್ಕಿ ಬಳಲಿ ಬೆಂಡಾಗಿ, ಸಂಸಾರದಲ್ಲಿ ವಿರಕ್ತರಾಗಿ, ಧಾರ್ಮಿಕ ಮನೋಭಾವನೆಯ ಪ್ರಪಂಚಕ್ಕೆ ಇಳಿದು ಕನ್ನಡ ದೇಶೋದ್ಧಾರ ಮಾಡಲು ಯತ್ನಮಾಡಿದರು. ಮತ್ತು ಈ ಸಾಹಸದಲ್ಲಿ ಜಯಪ್ರದರಾದರು.

ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಶ್ರೀ ಅಚಲಾನಂದ ದಾಸರಿಂದ ಈ ದಾಸ ಸಾಹಿತ್ಯದ ಸುಗ್ಗಿ ಪ್ರಾರಂಭವಾಯಿತು. ಈ ದಾಸರುಗಳು, ಕನ್ನಡ ಕಲಿಗಳು, ಪರಮಜ್ಞಾನಿಗಳು. ದಾಸರಿಗೆ ದಾಸರುಗಳು ಈ ಮಹಾತ್ಮರು, ಸಿ ಗನ್ನಡದಲ್ಲಿ ತಮ್ಮ ಆತ್ಮಜ್ಞಾನದ ತಿಳುವಳಿಕೆಯನ್ನು ಪದ ರೂಪದಲ್ಲಿ ತಿಳಿಸಿದರು. ದೇವರಲ್ಲಿ ಭಕ್ತಿ ಇಟ್ಟರೆ ನಿಮ್ಮ ಸಾಧನೆಗಳಲ್ಲಾ ಜಯ ಪ್ರದವಾಗುವುದು ಎಂದು ಜನರಲ್ಲಿ ಪ್ರಚಾರ ಮಾಡಲು ಪ್ರಾರಂಭಿಸಿದರು. ಅಂತಹ ಭಕ್ತಿ ಹೊಂದಲು ಮುಕ್ತಿಯೇ ಆಧಾರ ಅದರಲ್ಲೂ ನಿತ್ಯಾಧಾರವಾಗಿದೆ.

ಪ್ರಪಂಚದಲ್ಲಿ ವೈರಾಗ್ಯದ ಬಗ್ಗೆ ಭಾಷಣ ಮಾಡಲು ಅನುವಾದರು. ಸಂಸಾರದಲ್ಲಿ ಏನೂ ತಿರುಳಿಲ್ಲ ಎಂದು ಪ್ರಚಾರ ಮಾಡಿದರು. ಹರಿಯನ್ನು ಭಕ್ತಿ ರೂಪದಲ್ಲಿ ಕಂಡರೆ ಅದೇ ಸಂಸಾರ ಎಂದರು. ಜೀವನವು ಬೇವು ಬೆಲ್ಲದ ಮಿಶ್ರಣ-ಅಂದರೆ ಕಷ್ಟ ಸುಖಗಳ ಪರಂಪರೆ. ದೇವರನ್ನು ನಮ್ಮ ಕಡೆಗೆ ಒಲಿಸಿಕೊಳ್ಳಬೇಕಾದರೆ, ಪರಿಶುದ್ಧವಾದ ಆತ್ಮೀಯತೆಯಿಂದ ಕೂಡಿದ ಭಾವ ಭಕ್ತಿಯಿಂದಲೇ ಸಾಧ್ಯ. ದಾಸ ಸಾಹಿತ್ಯದಲ್ಲಿ, ದಾಸರ ಆತ್ಮಾನುಭವ ಪ್ರದರ್ಶನವಾಗಿದೆ. ತಮ್ಮ ಆತ್ಮ ಚರಿತ್ರೆಯನ್ನು ತಮ್ಮ ಪದ ಸಾಹಿತ್ಯದ ಮೂಲಕ ಶೃತಪಡಿಸಿದ್ದಾರೆ. ಉದಾಹರಣೆಗೆ ಪುರಂದರದಾಸರು ರಚಿಸಿರುವ ಈ ಕೆಳಗೆ ಕಂಡ ಪದವನ್ನು ಗಮನಿಸಿರಿ.

ಜ್ಞಾನ ಒಂದೇ ಸಾಕು ಮುಕ್ತಿಗೆ, ಇನ್ನೇನು ಬೇಕು,
ಹುಚ್ಚು ಮಾನವನೇ ||ಪ||
ಪಿತಮಾತೆ । ಸತಿಸುತರನು । ಅಗಲಿರಬೇಡ ।
ಯತಿಯಾಗಿ ಅರಣ್ಯ ಚಲಿಸಲುಬೇಡ ||
ವ್ರತನೇಮಗಳ ಮಾಡಿ । ದಣಿಯಲು ಬೇಡ ।
ಸತಿಯಿಲ್ಲದವಗೆ ಸದ್ಗತಿಯಿಲ್ಲೊ ಮೂಢ ||
ಹೆಣ್ಣು ಹೊನ್ನು ಮಣ್ಣು । ಜರೆದಿರಬೇಡ ||

ಅನ್ನ ವಸ್ತ್ರ ನೀನು ಬಿಟ್ಟಿರಬೇಡ ||
ತನ್ನದೆಂದು ದೇಹ । ನಂಬಲುಬೇಡ ||
ಆಯಾಸ ದಿನದಲ್ಲಿ । ಶ್ರಮ ಪಡಬೇಡ ||
ಕುಹುಕಬುದ್ಧಿಯಲಿ । ಕುಣಿದಾಡಲುಬೇಡ
ಪುರಂದರ ವಿಠಲನ । ಮರೆತಿರಬೇಡ ||

ಈ ಮೇಲಿನ ಪುರಂದರ ದಾಸರ ಕೀರ್ತನೆ ಆತ್ಮವನ್ನು ಎಷ್ಟರ ಮಟ್ಟಿಗೆ ಪರಿಶೋಧನೆ ಮಾಡುವುದು ಎಂಬುದನ್ನು ವಾಚಕರು ಗಮನಿಸಬೇಕು.

ದಾಸರುಗಳು, ಕೇವಲ ಕರ್ಣಾಟಕದಲ್ಲಿ ಮಾತ್ರ ಹುಟ್ಟಲಿಲ್ಲ. ಕರ್ಣಾಟಕ ದಾಸರ ಕನ್ನಡ ಸಾಹಿತ್ಯದ ಲಹರಿ ಬಹುದೂರ ಭಾರತದಲ್ಲಿ ಹರಡಿ ಪ್ರಚಾರವಾಗಿ ಖ್ಯಾತಿ ಗಳಿಸಿತು. ಶ್ರೀವ್ಯಾಸರಾಯದಾಸರ ಅನುಗ್ರಹದಿಂದ ಬಂಗಾಳದಲ್ಲಿ ಚೈತನ್ಯ ದಾಸರು ಉದ್ಭವಿಸಿದರು. ಪುರಂದರ ದಾಸರಿಂದ ತ್ಯಾಗರಾಜರು ಸ್ಫೂರ್ತಿ ಶಕ್ತಿ ಹೊಂದಿದರು. ಅಂದಮೇಲೆ, ತೆಲುಗು ಸಾಹಿತ್ಯದ ಮೇಲೂ ಸಹ ಕನ್ನಡ ಸಾಹಿತ್ಯ ತನ್ನದೇ ಆದ ಪ್ರಭಾವವನ್ನು ಬೀರಿದೆ ಎಂದು ಹೇಳಬಹುದು. ದಾಸರುಗಳು, ನರದಾಸರಲ್ಲ ಹರಿದಾಸರು.

ನರನಂಬಿ ಪಾಡುವವರಲ್ಲ ।
ಯಮನಿಗೆಂದೂ ಅವರು ಅಂಜಿದವರಲ್ಲ ।
ಸಕಲ ದುಃಖ ಕಷ್ಟನಿವಾರಕನು ಶ್ರೀ ಹರಿ ||

ಎಂಬುದೇ ಅವರ ಅಚಲ ನಿಷ್ಠೆ. ದಾಸರು ತಮ್ಮ ಆರಾಧನೆಯ ದೇವದೇವನಲ್ಲಿ ಸಕಲವೆಲ್ಲವನ್ನು ಅರ್ಪಿಸಿದ್ದಾರೆ. ಎಲ್ಲರೂ ದೀನ ಭಾವ ತಾಳಿದ್ದಾರೆ. ಕನ್ನಡ ಮಾತೆಯ ಕಷ್ಟಸುಖಗಳಲ್ಲಿ ಭಾಗಿಗಳಾಗಿದ್ದಾರೆ. ಕನ್ನಡ ಸಾಹಿತ್ಯ ವೈಖರಿಯನ್ನು ಬೆಳಗಲು, ನಿರಂತರ ಶ್ರಮಿಸಿದ್ದಾರೆ. ಅಂದಮೇಲೆ ಕನ್ನಡ ಸಾಹಿತ್ಯ ದೃಷ್ಟಿಯಿಂದಲೂ, ದಾಸ ಸಾಹಿತ್ಯದ ಹಿರಿಮೆ ಶ್ರೇಷ್ಠವಾದದ್ದು. ಹರಿದಾಸರೆಲ್ಲರೂ, ಸುಲಭ ಕನ್ನಡ ಶೈಲಿಯಲ್ಲಿ, ದೇವರ ನಾಮಗಳನ್ನು ರಚಿಸಿ ಜನರಲ್ಲಿ ಸುಲಭವಾಗಿ, ಅವುಗಳನ್ನು ವರ್ಣಿಸಿ ಕನ್ನಡ ಭಾಷೆಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ಅಮರರಾಗಿದ್ದಾರೆ.

ಒಟ್ಟನಲ್ಲಿ ಕನ್ನಡದಲ್ಲಿನ ದಾಸ ಸಾಹಿತ್ಯ ಏನೆಂದರೆ, ಕನ್ನಡ ಸಾಹಿತ್ಯದ ಹೂದೋಟದಲ್ಲಿ ಪ್ರಫುಲ್ಲ ಪುಷ್ಪ ದಾಸಸಾಹಿತ್ಯ. ಇಹಪರಗಳೆರಡರ ಸಾಧನೆಗೂ, ಯೋಗ್ಯವಾದ ಜಲತ್ಕೋದ್ಧಾರಕ ಮಹಾ ಕಾವ್ಯದಾಸಸಾಹಿತ್ಯ ಶಿಖಾಮಣಿ. ಪುರಂದರ ದಾಸರೊಬ್ಬರೇ ಒಂದುಲಕ್ಷ-ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿ ಅಮರರಾದರು. ನಮ್ಮ ಕನ್ನಡ ಮಾತೆಯ ಸುಪುತ್ರರೆಲ್ಲರೂ ದಾಸಸಾಹಿತ್ಯದ ಮೇಲ್ಮೆಯನ್ನು ಅನುಸರಿಸಿ, ಕನ್ನಡ ಸಾಹಿತ್ಯದ ಪ್ರಗತಿಗೆ ನೆರವಾಗಲಿ.

ಕವಿ ಕಲ್ಪನೆ

ಶ್ರೀ ಚ. ಸುಂದರೇಶನ್, ಎಂ. ಎ.

ಕವಿಯ ಸೃಷ್ಟಿ ಸಾಮರ್ಥ್ಯದ ಒಂದು ಹೊಳಹು ಕಲ್ಪನೆ. ಕಾವ್ಯಲೋಕಕ್ಕೆ ಸಂಬಂಧಿಸಿದ ಈ ಶಬ್ದ ಲೋಕಪ್ರಿಯವೂ ಆಗಿದೆ. ಊಹೆ, ಕಥೆ, ಸೃಷ್ಟಿ, ಕೃತಿ ಕಟ್ಟು, ಆಳವಡಿಕೆ, ಮಾಟ—ಎಂದೆಲ್ಲ ನಿಘಂಟಿನಲ್ಲಿ ಅರ್ಥಗಳಿವೆ. 'ಸುಳ್ಳಿನ ಕಟ್ಟಡ ವನ್ನು ಕಟ್ಟುವ ಜಾಣತನ ಎಂಬ ಅನರ್ಥವೂ ಈ ಶಬ್ದಕ್ಕಿದೆ. Making, fixing, setting, forming, fancy, idea, fabrication, invention, an imagination, a plan—ಹೀಗೆ ವಿವಿಧಾರ್ಥಗಳು ಆಂಗ್ಲ ಭಾಷೆಯಲ್ಲಿ ದೊರಕುತ್ತಿವೆ. 'ಕಲ್ಪನೆ' ಎಂಬುದನ್ನು Fancy, conception- ಎಂಬುದಕ್ಕೆ ಸಮಾನವಾಗಿ ಅಂಗೀಕರಿಸೋಣ' ಎಂಬ ಅಭಿಪ್ರಾಯ ಗಮನಾರ್ಹ.(1) Intuition, Imagination, Emotion, Conception, Perception, Contemplation, Genius (ii) Parody, Caricature, Wit, Sarcasm, Irony, Mockery—ಈ ತೆರನಾದ ಶಬ್ದಗಳಿಗೆ ಸಮಾನ ರೂಪಗಳು ಕನ್ನಡದಲ್ಲಿ ಒಮ್ಮೊಮ್ಮೆ ಹೊಳೆಯದೆ ಆ ಆ ಶಬ್ದಗಳನ್ನೇ ಕೆಲವರು ಬಳಸುವುದುಂಟು. ಅಷ್ಟೇ ಅಲ್ಲ, ಕಲ್ಪನೆ ಎಂಬ ಶಬ್ದದ ಸಲುವಾಗಿ ಏನೆಲ್ಲ ಬೇರೆ ಬೇರೆ ಪದಗಳನ್ನು ಪ್ರಯೋಗಿಸುತ್ತಾರೆ. ಕೆಲವೊಂದು ಶಬ್ದಗಳನ್ನೇ ಅದಲು ಬದಲು ಮಾಡುವ ಪ್ರಸಂಗಗಳೂ ಇವೆ. ಶಬ್ದಗಳ ಬಳಕೆಯಲ್ಲಿ ನಿಶ್ಚಿತವಾದ ಅರ್ಥಜ್ಞಾನ ಆವಶ್ಯಕ. ಶಬ್ದಾರ್ಥ ಸ್ವರೂಪ-ವಿನ್ಯಾಸವನ್ನು ಅರಿತಾಗಲೇ ಆನಂದ. ಅರ್ಥ ತಿಳಿ ಯದೆ ಶಬ್ದ ಬಳಸಬಾರದು. ಶಬ್ದರೂಪ ಕೆಡಿಸಬಾರದು. ಒಂದು ಶಬ್ದ ವಿರೂಪ ವಾದರೂ ಕೊನೆಗೆ ಇಡೀ ಶಬ್ದಕುಲಕ್ಕೆ ಹಾನಿ ಒದಗುತ್ತದೆ. ರಸಭರಿತವಾದ ನುಡಿ ಇಲ್ಲವೇ ಸುಶಬ್ದವನ್ನು ನಿರ್ಮಿಸಿದವನೂ ಕವಿಯೇ! ಈ ಭಾವ ಬಲು ದೊಡ್ಡದು.

ಕವಿಯ ಕಾರ್ಯವೆಲ್ಲ ಶಬ್ದವನ್ನೇ ಅವಲಂಬಿಸಿದೆ. ತನ್ನ ನೂರು ಕಲ್ಪನೆ, ದರ್ಶನಾನುಭವಗಳನ್ನು ಶಬ್ದಗಳಲ್ಲಿ ಪವಣಿಸಿದಾಗಲೇ ಕವಿಗೆ ಧನ್ಯತೆ. ಕವಿ ಶಬ್ದಲೀಲಾಪ್ರಿಯ; ಶಬ್ದಪ್ರಭು. ಶ್ರುತಿ ರಮ್ಯವಾದ ಶಬ್ದಬಂಧದಿಂದ ಕವಿ ಸಚ್ಚಿದಾನಂದದ ಅನುಭವವನ್ನು ಸಹೃದಯನಿಗೆ ನೀಡುತ್ತಾನೆ. ಎಲ್ಲರಂತೆ ಕವಿ ಸಾಮಾನ್ಯ ಮನುಷ್ಯನಾದರೂ ಆತನ ಅಸಾಮಾನ್ಯತೆಯಿರುವುದು ಭಾವ, ಅನು ಭವ, ಅಭಿವ್ಯಕ್ತಿ ವಿಶೇಷಗಳಲ್ಲಿ. ಸುತ್ತಣವರ ಸಹೃದಯತೆಯಿಂದ ಬೆಳೆದ ಕವಿ

---

(೧) ತೀ. ನಂ. ಶ್ರೀ: ಭಾರತೀಯ ಕಾವ್ಯಮೀಮಾಂಸೆ (ಎರಡನೆಯ ಮುದ್ರಣ) ಪುಟ ೬೧)

ಚೇತನ, ಸುತ್ತ-ಮುತ್ತ ಇರುವ. ಸವಿಯನ್ನೆಲ್ಲ ದುಂಬಿಯಂತೆ ಒಂದುಗೂಡಿಸಿ ಒದಗಿಸುತ್ತದೆ. ಕವಿಯನ್ನು ನಾವು ವಿಶೇಷವಾಗಿ ಏಕೆ ಗೌರವಿಸುತ್ತೇವೆ ಎಂದರೆ ಆತ ಸಂಗ್ರಹಿಸಿದ ಅನುಭವಗಳನ್ನು ಚಿತ್ತಾಕರ್ಷಕವಾದ ಉಕ್ತಿ ರೂಪದಲ್ಲಿ ಕೊಡುವುದರಿಂದ. ಕವಿ ದೃಷ್ಟಿ, ಭಾವಸೃಷ್ಟಿ, ಅಭಿವ್ಯಕ್ತಿ ಶಕ್ತಿ, ಕಲ್ಪನಾ ಸಂಪತ್ತಿ ವಿಶಿಷ್ಟವೂ ವಿನೂತನವೂ ಆಗಿರುವುದರಿಂದ ಕವಿ ಪ್ರತಿಭೆಯ ವಿಶೇಷ ಪ್ರಕಾರವೇ ದೃಷ್ಟಿ; ದೃಷ್ಟಿಯಿಂದಲೇ ಸೃಷ್ಟಿ. ಕವಿಯ ಕಣ್ಣು ಕ್ಷ-ಕಿರಣ; ಯಕ್ಷ-ಕಿರಣವೂ ಹೌದು;

ಒಬ್ಬರು ಒಮ್ಮೆ ಹೀಗೆ ನುಡಿದರು: ಹಲವಾರು ಕಾವ್ಯಗಳನ್ನು ಬರೆಯದೆ ಇರುವ ಮಹಾಕವಿ ನಾನು'-ಎಂದು! ಈ ದೃಷ್ಟಿಯಿಂದ ನಾವೆಲ್ಲರೂ ಕವಿಗಳೇ! ಯಾರಿಗೆ ತಾನೆ ಈ ಮಾತು ಒಪ್ಪದು! ನಿಜವಾದ ದೃಷ್ಟಿಯಲ್ಲಿ ಯಾರು ಕವಿ ಎಂದರೆ ಆತ್ಮದ ಯಜಮಾನ್ಯವುಳ್ಳವ; ತನ್ನ ಮನಸ್ಸಿಗೆ ಅನುಗುಣವಾಗಿ ರೂಪಗೊಂಡವ. ಈ ಬಗೆಗೆ ಉಪನಿಷತ್ತಿನ ಮಂತ್ರವೊಂದು ಮಹತ್ವದ್ದಾಗಿದೆ: ಕವಿರ್ಮನೀಷೀ ಪರಿಭೂಃ ಸ್ವಯಂಭೂಃ ಯಥಾತಥ್ಯತೋಽರ್ಥಾನ್ ವ್ಯದದಾತ್ ಶಾಶ್ವತೀಭ್ಯಃ ಸಮಾಭ್ಯಃ" (೨)

ಮಹಾಕವಿ ಷೆಲ್ಲಿಯ ಅಭಿಪ್ರಾಯದಲ್ಲಿ "ಇರುಳಲ್ಲಿ ಕುಳಿತು ತನ್ನ ಏಕಾಂತತೆಯನ್ನೇ ಉಲ್ಲಾಸಗೊಳಿಸಲು ಇನಿದನಿಯನ್ನು ಬೀರಿ ಹಾಡುವ ಒಂದು ರಾತ್ರಿಗಾನ ಪಕ್ಷಿಯೇ ಕವಿ" (೩.) ಅಂಬಿಕಾತನಯರ ದೃಷ್ಟಿಯಲ್ಲಿ:

"ಕವಿಯು ಮಾನಸಪುತ್ರ
ಅವನು ಆಗಸದೇಹಿ
ಮಾತಿನಲೆ ಮೂಡುವನು, ಭಾವಜೀವಿ
ಮೈಯಾಚೆ, ಉಸಿರಾಚೆ
ಬಗೆಯ ಬಣ್ಣಗಳಾಚೆ
ಅವನ ಹೂವರಳುವುದು ಭಾವದೇವಿ (೪)

ಕವಿ ಸ್ವಯಂಭು. ಆತ್ಮದೇಹಿ. ಭಾವಜೀವಿಯಾದ ಕವಿ ಒಡಮೂಡುವುದು ರಸೋಕ್ತಿಗಳಲ್ಲಿಯೇ. ಇಂದ್ರಿಯಾತೀತವಾಗಿ, ಪ್ರಾಣಾತೀತವಾಗಿ, ಭಾವದ ಬಣ್ಣಗಳಾಚೆ ಕವಿಯ ಮಾತಿನ ಪುಷ್ಪ ಅರಳುತ್ತದೆ.

ಇಂತಹ ಕವಿಗೆ ಕಲ್ಪನಾ ಶಕ್ತಿ ಹೇಗೆ ಲಭಿಸುತ್ತದೆ ಎಂಬುದು ಮುಂದಿನ

(೨) ಈಶಾವಾಸ್ಯೋಪನಿಷತ್ತು ॥೮॥
(೩) 'ಕಾವ್ಯಸಮರ್ಥನೆ ಪುಟ: ೧೨
(೪) ಗಂಗಾವತರಣ: ಪುಟ ೩೬

ವಿಚಾರ. ಈ ಬಗೆಗೆ ಕವಿಯ ನುಡಿಯನ್ನೇ ಆಲಿಸಿ:

'ಭೃಂಗದ ಜೆನ್ನೇರಿ ಬಂತು ಕಲ್ಪನಾ ವಿಲಾಸ' (೫) ಕಲ್ಪನಾ ಸೌಂದರ್ಯ ಲಹರಿ ಕವಿಭೃಂಗದ ಜೆನ್ನೇರಿ ಬರುತ್ತದೆ. ಹೇಗೆ ಬರುತ್ತದೆ? ಯಾವಾಗ ಬರುತ್ತದೆ? —ತಿಳಿಸಲು ಬರುವುದಿಲ್ಲ. ಒಮ್ಮೊಮ್ಮೆಂದೊಮ್ಮೆಗೇ ಹೊಳೆವ ಭಾವ-ಕಲ್ಪನೆಗಳಿಂದ ಕವಿತೆ ಚೆಲುವಾಗುತ್ತದೆ. ಭಾವ–ಕಲ್ಪನಾಸೃಷ್ಟಿಗೆ ಸುಂದರ ಪರಿಸರ, ರಸಾತ್ಮಕ ದೃಷ್ಟಿ, ನೆಲ-ಮುಗಿಲುಗಳ ಪ್ರೇಮ ಅಗತ್ಯ. ಕಾವ್ಯಮಯ ಭಾವಗಳ ಸೃಷ್ಟಿಗಾಗಿ ಕವಿ ರವೀಂದ್ರರು ದೋಣಿ ಪಯಣವನ್ನು ಕೈಗೊಳ್ಳುತ್ತಿದ್ದರೆಂಬ ವಿಚಾರ ಗಮನಾರ್ಹ.

ಮಾನವನ, ರಾಜಕಾರಣಿಗಳ ಕಲ್ಪನೆಗೆ ಕೆಲವೊಮ್ಮೆ ಜೆಲೆ ಸಿಗದೆ ಹೋಗಬಹುದು. ಆದರೆ ಕವಿಯ ಕಲ್ಪನೆ ಮಾತ್ರ ಸತ್ಯ; ಕವಿ ಕಲ್ಪನೆಯ ಜಗತ್ತು ಅತ್ಯಂತ ಸುಂದರ. ವಾಸ್ತವತೆಗೆ ವಿರೋಧವಾದ ಅಂಶಗಳನ್ನು ಕವಿ ತಿಳಿಸಿದರೂ ನಾವು ಪರಿಗ್ರಹಿಸುತ್ತೇವೆ. ಬೆಳದಿಂಗಳನ್ನೇ ಹಾಲೆಂದು ತಿಳಿದು ಬೆಕ್ಕು ಅದನ್ನು ನೆಕ್ಕಿತು–ಎಂದು ಕವಿ ತಿಳಿಸಿದರೂ ನಾವು ಒಪ್ಪಿಕೊಳ್ಳುತ್ತೇವೆ. ಅಸಹಜವಾದುದನ್ನು ಸಹಜವೋ ಎನ್ನುವಂತೆ ನಿರೂಪಿಸುವ ಕವಿಯ ಚಾತುರ್ಯವನ್ನು ಕಂಡು ಹಿಗ್ಗುತ್ತೇವೆ.

ಕಲ್ಪನೆ–ಸಾದೃಶ್ಯಗಳು ಮೂಲ ಪ್ರೇರಕವಾಗಿ ಕವಿಯ ಅನುಭವ ಕೋಶದಿಂದ ಹೊರಬರುತ್ತದೆ ಕವಿತೆ. "ಗಡಿಯಾರದ ಗತಿಯೊಡನೆ ಹಾರಿ ಹೋಗುವ ಕಲ್ಪನೆ ಹೊಳೆದು, ಗಗನದ ಗ್ರಹ ನಕ್ಷತ್ರಗಳೊಡನೆ ಹಾರಿಹೋಗುವ ಕಾಲದ ಸಾಮ್ಯ ತೋರಿ ರೆಕ್ಕೆ ಬಿಚ್ಚಿ ಬಂದಿತಂತೆ ಕವಿ ಬೇಂದ್ರೆ ಅವರ "ಹಕ್ಕಿ ಹಾರುತಿದೆ ನೋಡಿದಿರಾ"—ಎಂಬ ಕವನ.


ಕವಿ ಕಲ್ಪನೆಯ ಬಗೆ-ಬಿನ್ನಾಣವನ್ನು ಮನಗಾಣಿಸುವ ಕೆಲವೊಂದು ನುಡಿಗಳನ್ನು ಇಲ್ಲಿ ಕೊಡಲಾಗಿದೆ:—

'ಮೈ ಮುರಿವುತಿದೆ ಬೆಳದಿಂಗಳು' (೬)
'ಬಿಸಿಲು ಕುಣಿದು ಬೆವತದ' (೭)
'ದೇವರು ರುಜು ಮಾಡಿದನು
ರಸವಶನಾಗುತ ಕವಿ ಅದ ನೋಡಿದನು'(೮)

---

೫ ನಾಮಲೀಲೆ: ಪುಟ ೪೪.   ೬ ಸೋಮನಾಥ ಚಾರಿತ್ರ

೭ ಶ್ರೀ ಬೇಂದ್ರೆ: ಗಂಗಾವತರಣ ಪುಟ ೪೮.   ೮ ಶ್ರೀ ಕುವೆಂಪು ಪಕ್ಷಿಕಾಶಿ ಪುಟ ೨೬



ಡಾ|| ಬಿ. ಎಂ. ನಾರಾಯಣ್, ಎಂ.ಬಿ.ಬಿ.ಎಸ್.

ಸಹ ಕಾರ್ಯದರ್ಶಿ

'ಹೂವ ಪೊಕ್ಕ ಕಿರಣ ಹೂ ಸೀರ ನೆಕ್ಕಿತು' (೯)

—ಈ ಬಿಡಿನುಡಿಗಳಲ್ಲಿ ಕವಿಕಲ್ಪನೆ ಬೆರಗುಗೊಳಿಸುವ ಬಗೆಯಲ್ಲಿ ಬಿಂಬಿತವಾಗಿದೆ.

ಬುದ್ಧನ ಪರಿಶುದ್ಧ ಭಾವದ ಕಲ್ಪನೆಯನ್ನೂ, ಸಿಲುಬೆಯಲ್ಲಿ ತೂಗಾಡುತ್ತಿದ್ದ ಯೇಸುವಿನ ವ್ಯಕ್ತಿತ್ವದ ಕಲ್ಪನೆಯನ್ನೂ ಶ್ರೀ ಗೋವಿಂದ ಪೈ ಅವರ ಮುಂದಿನ ನುಡಿಗಳು ಪರಿಣಾಮ ಪೂರ್ಣವಾಗಿ ಮನಗಾಣಿಸುತ್ತಿವೆ.

'ಡಿಂಡೀರ ಪಿಂಡದಿ ಮರಾಲ ಮಂಡಿಸಿದಂತೆ!–ನೊರೆಯ ಉಂಡೆಯ ಮೇಲೆ ಹಂಸವು ಕುಳಿತಂತೆ ಜ್ಞಾನ–ಧ್ಯಾನಪೂರ್ಣನಾದ ಬುದ್ಧನ ನಿಲವು ಪರಿಶೋಭಿಸಿತು. ಇದು ಕವಿಯ ಧವಳ ಸೂಕ್ತಿಯೇ ಆಗಿದೆ.

'ಮರಣ ವೃಕ್ಷದೊಳಮೃತ ಫಲದಂತೆ'-ಯೇಸು ಸಿಲುಬೆಗೆ ಏರಿಸಿದಾಗ ಕಂಡು ಬಂದನೆಂಬುದಂತೂ ಕವಿಯ ಅದ್ಭುತವಾದ ಭಾವ–ಕಲ್ಪನೆಗಳನ್ನು ಕಾಣಿಸುತ್ತಿದೆ. ಈ ಉಪಮೆಯಲ್ಲಿ ಇಡೀ ಗೊಲ್ಗೊಥಾ ಕಾವ್ಯದ ಸಾರ್ಥಕತೆಯಿದೆ. (೧೦.)

ಔಚಿತ್ಯಪೂರ್ಣವೂ ಹೃದಯಂಗಮವೂ ಆದ ಕವಿ ಸಹಜ ಕಲ್ಪನೆ ಮಕ್ಕಳ ಹೃದಯದಿಂದಲೂ ಹೊಮ್ಮಿ ಬರುವುದುಂಟು. ಸಂಜೆಯ ಕೆಂಪು ಬಣ್ಣವನ್ನು ಆಕಾಶ ದಲ್ಲಿ ಕಂಡು ಮಗು ಒಮ್ಮೆ ತಿಳಿಸಿದೆ: 'ಆಕಾಶದಲ್ಲಿ ದೀಪ ಹಚ್ಚ್ಯೈತೆ'—ಎಂದು ಮೆಚ್ಚುವಂಥ ಮಾತೇ ಸರಿ. ಮಲ್ಲಿಗೆ ಗಿಡದಲ್ಲಿ ಸಾಲಾಗಿ ಮೊಗ್ಗು ಅರಳಿರುವುದನ್ನು ನೋಡಿದ ಮಗು: "ಮಲ್ಲಿಗೆ ಗಿಡದಲ್ಲಿ ಮೊಗ್ಗಿನ ಜಡೆ ಬಿಟ್ಟಿದೆ"–ಎಂದಾಗ ಯಾರಿಗೆ ತಾನೆ ಹಿಗ್ಗು ನುೂಡದು! ಮಕ್ಕಳ ಮನಸ್ಸಿನಲ್ಲೂ ಮುಗ್ಧ ಮನೋಭಾವದ ಹಳ್ಳಿಗರಲ್ಲೂ ನವಿರಾದ ಹಸನಾದ ಭಾವ–ಕಲ್ಪನೆಗಳು ಆಶ್ಚರ್ಯವನ್ನುಂಟುಮಾಡುವ ರೀತಿಯಲ್ಲಿ ಹೊಮ್ಮಿ ಬರಲೆಡೆಯಿದೆ.

'ಅಳುವ ಕಂದನ ತುಟಿಯು ಹವಳದ ಕುಡಿಹಾಂಗ
ಕುಡಿಹುಬ್ಬು ಬೇವಿನೆಸಳ್ಹಾಂಗ ಕಣ್ನೋಟ
ಶಿವನ ಕೈಯಲಗು ಹೊಳೆದ್ಹಾಂಗ'

"ಶರಣರ ನೆನೆದರ ಸರಗಿಯ ಇಟ್ಹಾಂಗ
ಹವಳಮಲ್ಲಿಗಿ ಮುಡಿದ್ಹಾಂಗ ಶರಣರ
ನೆನೆಯೋ ನನ ಮನವೇ||"

ಹೀಗೆ ಕಾವ್ಯಮಯ ಭಾವ–ಕಲ್ಪನೆಗಳು ಮಕ್ಕಳಲ್ಲಿ, ಹಳ್ಳಿಗರಲ್ಲಿ ನಿಸರ್ಗ

---

(೯) ಗಂಗಾವತರಣ: ಪುಟ ೧೫.

(೧೦) ಗೋವಿಂದ ಪೈ: ಗೊಲ್ಗೊಥಾ—ವೈಶಾಖ

ವಾಗಿ ಮೂಡಿ ಬರುತ್ತವೆ. ಕವಿಯಲ್ಲಿ ಈ ಪ್ರಜ್ಞೆ ವಿಶೇಷವಾಗಿ ಜಾಗ್ರತವಾಗಿರುತ್ತದೆ.

ಕಲ್ಪನಾ ಸಾಮರ್ಥ್ಯದಿಂದ ನಮಗೆ ಕಾಣುವ ಜಗತ್ತಿನ ದೃಶ್ಯಗಳನ್ನೇ ವಿನೂತನವಾಗಿ ಕವಿ ಕಾಣಿಸುತ್ತಾನೆ; ಅಪೂರ್ವ ಭಾವಗಳನ್ನು ಆವಿಷ್ಕಾರಗೊಳಿಸುತ್ತಾನೆ. ಕವಿಯ ದೃಷ್ಟಿವಿಶೇಷ ವಿಸ್ಮಯ ಜನಕ; ಪ್ರತಿಭಾ ಸೃಷ್ಟಿ ಶಿವಮಯ; ಆನಂದಮಯ, ರಸಾನಂದದ ಅನುಭವಕ್ಕಾಗಿ ಕೆಲವೊಂದು ಕಲ್ಪನಾ ರಮ್ಯತೆಯ ಪದ್ಯಗಳನ್ನು ಇಲ್ಲಿ ಒದಗಿಸಿದೆ:

೧

ಲೋಕಮೋಹಕವಾದ ಶೃಂಗಾರ ರಸ ನೇಮಿಚಂದ್ರನ ಲೀಲಾವತಿ ಕಾವ್ಯದಲ್ಲಿ ತುಂಬಿ ಬಂದಿದೆ. "ಸ್ತ್ರೀ ರೂಪಮೇ ರೂಪಂ, ಶೃಂಗಾರಮೇ ರಸಂ" ಎಂಬ ಕವಿ ಸೂಕ್ತಿಯಂತೂ ಆತನ ದೃಷ್ಟಿ-ಧ್ಯೇಯ ನಿಲವನ್ನು ಕಾಣಿಸುತ್ತಿದೆ. ನೇಮಿಚಂದ್ರನ ಪ್ರಸ್ತುತ ಪದ್ಯ ಬೆಳದಿಂಗಳನ್ನು ಕುರಿತದ್ದಾಗಿದೆ.

"ಇದು ಪತ್ತೇನೆಂಬೆ ಬೆಳ್ದಿಂಗಳ ಬೆಳತಿಗೆಯಂ ಪಂಸೆ ಪಾಲ್ಗೆತ್ತು ಸಾರ್ದ
ಪ್ಪುದೊ ಮಲ್ಲೀಮಾಲೆಗೆತ್ತೀನೆರಗಿದಪುದೊ ಭೃಂಗಂ ಬಿಸಭ್ರಾಂತಿಯಿಂದಂ
ಕದುಕಲ್ಕೈಗಯ್ಯೆಳಾರ್ಪೈದಪುದಿ ಭಕಳಭಂ ಸಾಂಪ್ರ ಚಂದ್ರಾಂಶುವಂ ಜಾ
ರೆ ದುಕೂಲಂ ಲೀಲೆಯಿಂದಂ ತೆಗೆದಪುದೊ ಕುಚಾಗ್ರಕ್ಕೆ

ಕಾಂತಾ ಕದಂಬಂ (೧೧)

ಚಿತ್ತವನ್ನು ಮುದಗೊಳಿಸುವ ಕವಿಭಾವ-ಕಲ್ಪನೆ ಸಹಜ ಸುಂದರವಾಗಿ ಈ ಪದ್ಯದಲ್ಲಿ ಮೂಡಿ ಬಂದಿದೆ. ಬೆಳದಿಂಗಳ ಬಿಳುಪನ್ನು ಹಂಸವು ಹಾಲೆಂದು ಭಾವಿಸಿ ಹತ್ತಿರಕ್ಕೆ ಬಂದು ಬಿಡುವುದೋ, ದುಂಬಿಯು ಮಲ್ಲಿಗೆ ಮಾಲೆ ಎಂದು ಭಾವಿಸಿ ಬಂದೆರಗುವುದೋ, ಆನೆ ಮರಿಯು ತಾವರೆ ನಾಳ ಎಂಬ ಭ್ರಾಂತಿಯಿಂದ ಕದುಕಲು ಸೊಂಡಿಲು ಚಾಚುವುದೋ, ಸ್ತ್ರೀ ಸಮೂಹವು ತಮ್ಮ ದುಕೂಲವು ಜಾರಿದಾಗ ಬೆಳದಿಂಗಳನ್ನೆ ತಮ್ಮ ಕುಚಾಗ್ರಕ್ಕೆ ಮೇಲು ಸೆರಗಾಗಿ ಎಳೆದುಕೊಳ್ಳುವರೋ! ಇದನ್ನು ಮತ್ತೆ ಏನೆಂದು ಹೇಳಲಿ-ಎಂದಿದ್ದಾನೆ ಕವಿ. ಈ ಕವಿವಾಣಿಯ ಸೊಗಸನ್ನು ಮತ್ತೇನೆಂಬೆ ಎಂದೆನ್ನುವ ತವಕ ಸಹೃದಯನಿಗೆ ಉಂಟಾಗದಿರದು.

೨

ಸಮಾಜ ಜೀವನವನ್ನು ಸಂಸ್ಕರಿಸುವ ಪವಿತ್ರವಾದ ಸಾಧನ ಕೃತಿಗಳಲ್ಲಿ

---

೧೧ ಲೀಲಾವತಿ : ದ್ವಿ. ಆ. ॥೨೧॥

ುಮಾರವ್ಯಾಸನ ಮಹಾಭಾರತವು ಪ್ರಮುಖವಾದುದು. ಸ್ವತಂತ್ರವೂ ಧೀರ ಂಭೀರವೂ ಆದ ಮನೋಧರ್ಮ ಈ ಕವಿಯದು. ವೀರನಾರಾಯಣನ ಪರಮ ಕ್ತನಾಗಿ, ಆತ್ಮವಿಶ್ವಾಸಿಯಾಗಿ, ಇಹ-ಪರಕ್ಕೆ ಆವಶ್ಯಕವಾದ ಪರತರ ವಿಚಾರ ಳನ್ನು ಕುಮಾರ ವ್ಯಾಸನು ಚೆನ್ನಾಗಿ ಅರುಹಿದ್ದಾನೆ.

ಕುಮಾರವ್ಯಾಸನ ಕಲ್ಪನಾಶೀಲತೆಯನ್ನು ಮನಗಾಣಲು ಭೀಷ್ಮಪರ್ವದಿಂದ ಂದು ಪದ್ಯವನ್ನು ಇಲ್ಲಿ ಕೊಡಲಾಗಿದೆ :

"ಕಮಲಜನ ಹೋಲುವೆಯ ಧಾರುಣಿ
ಯಮರ ಕರದಲಿ ನಿಗಮ ಪೂತೋ
ತ್ತಮ ಸುವಾರಿಗಳಿಳಿದವಜ ಸನ್ನಿಭನ ಮಸ್ತಕಕೆ
ಕಮಲಜನ ಕರದಿಂದ ಗಂಗಾ
ವಿಮಲನದಿಯಿಳಿತಂದು ಸಾರ್ದುದೊ
ಹಿಮಗಿರಿಯನೆಂಬಂತಿರಿಳಿದುದು ಪಟ್ಟದಭಿಷೇಕ॥ (೧೨)

ಭೀಷ್ಮನ ಸೇನಾಧಿಪತ್ಯದ ಪಟ್ಟಾಭಿಷೇಕದ ಸಂದರ್ಭ. ಬ್ರಹ್ಮನನ್ನು ಹೋಲತಕ್ಕ ಬ್ರಾಹ್ಮಣರ ಕರದಲ್ಲಿ ವೇದದಿಂದ ಪರಿಶುದ್ಧವಾದ ಉತ್ತಮ ಜಲಗಳು ್ರಹ್ಮನಂತಿರುವ ಭೀಷ್ಮನ ತಲೆಗೆ ಇಳಿದವು. ಅದು ಹೇಗಿತ್ತು ಎಂದರೆ ಬ್ರಹ್ಮನ ೖಯಿಂದ ಗಂಗಾನದಿಯು ಇಳಿದು ಬಂದು ಹಿಮಗಿರಿಯನ್ನು ಸೇರಿತೋ ಎಂಬಂತೆ ಟ್ಟಾಭಿಷೇಕದ ಜಲವು ತಿಳಿಯಿತು ಎಂದು ವರ್ಣಿಸಿದ್ದಾನೆ ಕವಿ. ಬ್ರಾಹ್ಮಣರನ್ನು ್ರಹ್ಮನಿಗೂ, ಜಲವನ್ನು ಗಂಗೆಗೂ, ನರೆತ ಭೀಷ್ಮನ ತಲೆಯನ್ನು ಹಿಮಗಿರಿಗೂ ನ್ವಯಿಸಿರುವುದರಲ್ಲಿ ಕವಿ ಕಲ್ಪನೆಯ ಸಾತಿಶಯತೆಯನ್ನು, ಕವಿದೃಷ್ಟಿಯ ಹಜತೆಯನ್ನು ಗುರುತಿಸ ಬಹುದಾಗಿದೆ.

೩

ವಸಂತೋದಯದ ವರ್ಣನೆಯನ್ನು ಕುರಿತದ್ದು ಮಲ್ಲಣಾರ್ಯರ ಮುಂದಿನ ದ್ಯ:—

"....ಕಾಮಚಕ್ರೇಶ್ವರನ ದಂಡು ಬನದೊಳಗೆ ಬಿಟ್ಟು
ಪುಂಡರೀಕಾಕರಂ ಬಂಡಾಯ್ತು ಶುಕಪಿಕಂ

೧೨ ಕರ್ಣಾಟ ಭಾರತ ಕಥಾ ಮಂಜರಿ. ಭೀಷ್ಮ ಪರ್ವ. ಪದ್ಯ ॥೩೧॥

ತೊಂಡುಗೆಡೆದುರೆ ಕೂಗಲಳ್ಕಿ ನವಿಸುತ ಭಯಂ
ಗೊಂಡು ಪಲ್ಗಿರಿವುತಿವೆ ದಾಳಿಂಬವಿಸ್ನಾ ವಸಂತ ವೇಳೇಳೆಂದನು || (೧೩)

ವಸಂತನ ಚಾರಿತ್ರದ ಈ ವರ್ಣನೆಯಲ್ಲಿ ಕವಿಕಲ್ಪನೆಯೂ ಮಿನುಗಿದೆ. ಸತ್ಯೇಂದ್ರಚೋಳನೊಡನೆ ವನಪಾಲಕನಾಡಿದ ಮಾತಿದು, "ಸತ್ಯೇಂದ್ರನೆ, ಕೇಳು ಕಾಮಚಕ್ರೇಶ್ವರನ ಸೇನೆ ವನದಲ್ಲಿ ಬೀಡುಬಿಟ್ಟಿದೆ. ಇದರಿಂದ ಕಮಲಾಕರವಾದ ಸರೋವರವು ಕದಡಿದೆ. ಗಿಳಿಕೋಗಿಲೆಗಳು ತುಂಟತನದಿಂದ ಅತಿಶಯವಾಗಿ ಕೂಗಲು ದಾಳಿಂಬಗಳು ಹೆದರಿ ನವಿಸುತ್ತಾ ಭಯದಿಂದ ಹಲ್ಲುಬಿಡುತ್ತಿವೆ. ಇದೋ ವಸಂತ ಬಂದನು, ಮೇಲೇಳು–ಎಂದು ವನಪಾಲಕನು ನುಡಿದನು. ಸಂತ್ಯೇಂದ್ರ ಚೋಳನು ಸಹಜವಾಗಿ ಪ್ರಭುವಾದರೂ ಕವಿದೃಷ್ಟಿಯಲ್ಲಿ ಈಗ ಆತನು ಮಂಡಲಾಧಿಪ. ಕಾಮನು ಚಕ್ರೇಶ್ವರ ; ವಸಂತನೇ ಸೇನಾಧಿಪತಿ.

ಗಿಳಿ–ಕೋಗಿಲೆಗಳ ಕೂಗಿಗೆ "ಪಲ್ಗಿರಿವುತಿವೆ ದಾಳಿಂಬವು" ಎಂಬ ಭಾವವು ಕವಿಕಲ್ಪನೆಯಿಂದ ಬಣ್ಣಗೊಂಡಿದೆ; ಚಿತ್ತವನ್ನು ಸೆಳೆದು ಅರಳಿಸುತ್ತಿದೆ.

೪

ಹದಿನೇಳನೆಯ ಶತಮಾನದ ಮಹಾಕವಿ ಷಡಕ್ಷರದೇವ. ಚಿಕ್ಕ ವಯಸ್ಸಿನಲ್ಲಿಯೇ ನಿಸರ್ಗದತ್ತವಾದ ಕವಿತಾಶಕ್ತಿಯನ್ನು ಪಡೆದವ. ಯತಿ ತಿಲಕನಾದರೂ ಕವಿತಾಕೋಮಲೆಗೆ ಎಡೆಯಿತ್ತವ. ಪಾಂಡಿತ್ಯ–ಪ್ರತಿಭೆಗಳಿಗೆ ಹೆಸರಾದ ಈ ಕವಿಯ ಕಾವ್ಯವೊಂದರಿಂದ ಮುಂದಿನ ಪದ್ಯವನ್ನು ತೆಗೆದುಕೊಳ್ಳಲಾಗಿದೆ:—

"ಸುರನದಿಯಲ್ಲಿ ಮಿಂದು ಸುರಮಾರ್ಗಕಚೌಘಮನ್ನೈದೆ ಬಿರ್ಚಿ, ವಿ
ಸ್ಫುರಿತ ತದುತ್ಪ್ರತಾಪ ತಪನಾತಪದಾರಿಸಿ ಸೂಡಿ ತಾರಕೋ
ತ್ಕರಕುಸುಮಂಗಳಂ ತಳೆದು ಚಂದ್ರಿಕೆಯೆಂಬ ವಿಶಾಲಚೇಲಮಂ
ಧರಣಿಪ ಕೀರ್ತಿಕಾಂತೆ ವಿಧುದರ್ಪಣಮಂ ನೆರೆನಿಂದು ನಿಟ್ಟಿಪಳ್"; (೧೪)

ಚೋಳಭೂಪಾಲನ ಕೀರ್ತಿ ಸೂರ್ಯ, ಚಂದ್ರ, ನಕ್ಷತ್ರ ಮಂಡಲದವರೆಗೂ ವ್ಯಾಪಿಸಿತ್ತು ಎಂಬುದನ್ನು ತಿಳಿಸುವುದು ಕವಿಯ ಮುಖ್ಯ ಉದ್ದೇಶ, ಆದರೆ ಈ ಭಾವದ ನಿರೂಪಣೆಯಲ್ಲಿ ಕಲ್ಪನೆಯ ಉನ್ನತಿಕೆಯನ್ನು ಕವಿಯ ವರ್ಣನಾ ಸಾಮರ್ಥ್ಯವನ್ನು ಗುರುತಿಸಬಹುದಾಗಿದೆ.

---

೧೩ ಭಾವಚಿಂತಾರತ್ನ : ಪುಟ ೨೩ ಪದ್ಯ ॥೨॥

೧೪ ರಾಜಶೇಖರ ವಿಲಾಸ. ತೃತೀಯಾಶ್ವಾಸ ಪದ್ಯ ॥೫॥

ರಾಜನ ಕೀರ್ತಿಕಾಂತೆ ಮಿಂದಿರುವುದು ದೇವಗಂಗೆಯಲ್ಲಿ. ಮಿಂದ ಬಳಿಕ ತನ್ನ ಕೇಶರಾಶಿಯನ್ನು ಹರಡಿರುವುದು ಸುರಮಾರ್ಗದಲ್ಲಿ. ಆರ್ದ್ರವಾದ ಕೇಶವನ್ನು ಆರಿಸಿಕೊಂಡಿರುವುದು ಸತ್ಯೇಂದ್ರನ ಪ್ರಭಾವ ಪೂರ್ಣವಾದ ಮಹಾಶೌರ್ಯವೆಂಬ ಬಿಸಿಲಿನಿಂದ. ಅನಂತರ ಆಕೆ ಮುಡಿದದ್ದು ನಕ್ಷತ್ರಗಳೆಂಬ ಹೂಗಳನ್ನು. ಧರಿಸಿದ ವಸ್ತ್ರವೋ ಬೆಳದಿಂಗಳು. ಇಂತಹ ನಿಲವಿನಲ್ಲಿ ನಿಂದು ತನ್ನ ಸೊಬಗನ್ನು ತಾನು ನೋಡಿಕೊಳ್ಳಲು ಈ ಕೀರ್ತಿ ಮನೋಹರಿ ಚಂದ್ರಮನನ್ನೇ ಕನ್ನಡಿಯನ್ನಾಗಿ ಮಾಡಿಕೊಂಡಿರುವಳು! ಷಡಕ್ಷರದೇವನ ಈ ಪದ್ಯ ಭವ್ಯ ಕಲ್ಪನೆಯ ರಮ್ಯ ಸೃಷ್ಟಿಯೇ ಸರಿ!

ಈ ಪರಿಯಲ್ಲಿ ನಮ್ಮ ಕವಿಗಳು ಕಲ್ಪನಾಶೀಲರಾಗಿದ್ದಾರೆ; ಲೋಲರಾಗಿದ್ದಾರೆ. ನುಡಿಗೆ ಸಿಲುಕದ ಭಾವವನ್ನು ತಮ್ಮ ಕಲ್ಪನಾ ಸಾಮರ್ಥ್ಯದಿಂದ ಕಾಣಿಸಿದ್ದಾರೆ; ಸ್ವಾನುಭೂತಿಯಿಂದ ಅರಳಿಸಿದ್ದಾರೆ. ಭಾವನ, ವರ್ಣನ, ಬೋಧನ, ಕಥನ ಮೊದಲಾದ ಕಾವ್ಯಾಂಶಗಳೂ ಸಹ ಒಂದಲ್ಲ ಒಂದು ರೀತಿಯಲ್ಲಿ ಕವಿಯ ಕಲ್ಪನಾಲಹರಿಯೊಡನೆ ಒಡಗೂಡಿ ಬರುತ್ತವೆ ಎಂಬ ವಿಚಾರವನ್ನು ಮರೆಯಲಾಗದು. ಒಟ್ಟಿನಲ್ಲಿ ಕವಿತೆ ಕವಿಯ ಜೀವಗುಣವನ್ನು ರಸದ ರುಚಿಯನ್ನು ಪ್ರಕಟಪಡಿಸುತ್ತದೆ.

ಕವಿ ಹೊಸ ಹೊಸ ಭಾವಗಳನ್ನು ಕಾಣುತ್ತಾನೆ; ಕಟ್ಟುತ್ತಾನೆ, ಇಲ್ಲದ್ದನ್ನು ತೆರೆಯುತ್ತಾನೆ. ಇರುವುದನ್ನು ಮರೆಸುತ್ತಾನೆ. ಭವದ ಜಂಜಡ-ಬಂಧನದಿಂದ ಪಾರಾಗಿಸುತ್ತಾನೆ, ಭವದಿಂದ ಭಾವಲೋಕದತ್ತ ಕೊಂಡೊಯ್ಯುತ್ತಾನೆ. ಜೀವನವನ್ನು ರಸಗಾನವನ್ನಾಗಿಸುತ್ತಾನೆ. ಬಾಳಿನಲ್ಲಿ ಅಮೃತಶ್ರುತಿಯನ್ನು ಮೂಡಿಸುತ್ತಾನೆ. ಕವಿಕಲ್ಪನೆಯ ಪರಿಭಾವನೆಗೆ ನಮ್ಮ ಬುದ್ಧಿಭಾವಗಳು ಹಸನಾಗಿರಬೇಕು ಹದುಳವಾಗಿರಬೇಕು, ಒಳಗಣ್ಣು, ಒಳಗಿವಿಗಳಿಂದ ಕವಿ ನೀಡುವ ದೃಶ್ಯ-ನಾದಗಳನ್ನು ಕಂಡು-ಕೇಳಿ ಹೃದಯ ತೆರೆದು ಅನುಭವಿಸಿದಾಗಲೇ ಕಾವ್ಯಾನಂದ. ಕವಿಯ ಕಲ್ಪನಾಸೃಷ್ಟಿ ಸಹೃದಯಭಾವ ಗೋಚರವಾದಾಗಲೇ ಸಾರ್ಥಕತೆ. ಕವಿಸೃಷ್ಟಿ ಸಹೃದಯ ಸೃಷ್ಟಿಯೂ ಆಗಬೇಕು. ಸಹೃದಯನ ಅನುಕಲ್ಪನೆಯಲ್ಲಿಯೆ ಕವಿಕಲ್ಪನೆಯ ಸಾಫಲ್ಯ.

ಕಲ್ಪನಾದೃಷ್ಟಿಯಿಂದ ಮಾನವಜೀವನ ಸಂಪದ್ಭರಿತವಾಗುತ್ತದೆ. ಕಾವ್ಯಮಯವಾದ ಭಾವ-ಕಲ್ಪನೆಗಳು ನಮ್ಮ ಜೀವನವನ್ನು ರಸಾತ್ಮಕವಾಗಿ ಅಲೌಕಿಕವಾಗಿ ಪರಿಣಮಿಸುತ್ತವೆ. ಕವಿಗಂತೂ ಈ ಭಾವ-ಕಲ್ಪನೆಗಳೇ ಪ್ರಾಣ. ಕಲ್ಪನಾಸೃಷ್ಟಿಯಾದ ಕವಿತೆಯಿಂದಲೇ ಕವಿಗೆ ಮಾನ; ಕವಿಯ ಜೀವಮಾನ.

ವೈದಿಕ ಸಾಹಿತ್ಯ

ಆಸ್ಥಾನ ವಿದ್ವಾನ್ ಶ್ರೀ ಎಂ. ಜಿ. ನಂಜುಂಡಾರಾಧ್ಯ, ಮೈಸೂರು.

—: :—

ಭಾರತೀಯ ಸಂಸ್ಕೃತಿಯ ಸಂಕೇತ ಧರ್ಮ. ಅದು ಮಾನವನ ಅಭ್ಯುದಯ ಮತ್ತು ನಿಃಶ್ರೇಯಸ್ಸುಗಳ ನೆಲೆ. ಜೀವನರಥವನ್ನು ಗುರಿ ಮುಟ್ಟಿಸಲು ಏರ್ಪಟ್ಟ ಪಥ ಧರ್ಮರಥ.

ಧರ್ಮದ ಬೀಜವು ವೇದಗಳಲ್ಲಿ ಮೊಳೆತು ಸ್ಮೃತಿಗಳಲ್ಲಿ ಪಲ್ಲವಿಸಿ ಇತಿಹಾಸ ಪುರಾಣಗಳಲ್ಲಿ ಹುಲುಸಾಗಿ ಬೆಳೆದು ಶ್ರೀರಾಮ, ಕೃಷ್ಣ, ಬುದ್ಧ, ಬಸವ, ಮಹಾತ್ಮಾ ಗಾಂಧಿ ಮುಂತಾದ ಆದರ್ಶ ಮಹಾ ಪುರುಷರ ಜೀವನ ಕ್ಷೇತ್ರದಲ್ಲಿ ಫಲಿಸಿ ಪಾವನ ವಾಗಿದೆ. ಧರ್ಮ ನಿರ್ಣಯದಲ್ಲಿ ವೇದಗಳನ್ನು ಬಿಟ್ಟರೆ ಸ್ಮೃತಿಗಳೇ ಪರಮ ಪ್ರಮಾ ಣವೆನಿಸಿವೆ. ಮನ್ವಾದಿ ಸ್ಮೃತಿಗಳು ಭಾರತೀಯರ ಧಾರ್ಮಿಕೇತಿಹಾಸದ ಮೈಲಿ ಗಲ್ಲು ಗಳೆಂದರೂ ಒಪ್ಪುತ್ತದೆ.

ಶ್ರುತಿ

ಎಲ್ಲ ಧರ್ಮಗಳ ಮೂಲವು ವೇದ. "ವೇದೋಽಖಿಲೋಧರ್ಮ ಮೂಲಂ"ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ. ತಪೋನಿಷ್ಠರಾದ ಮಹರ್ಷಿಗಳ ಸತ್ವೋದ್ರಿಕ್ತ ಸ್ಥಿತಿಯಲ್ಲಿ ಅಪ್ರಯತ್ನವಾಗಿ ನಿಶ್ವಸಿತದಂತೆ ಹೊರ ಹೊಮ್ಮಿದ ಸತ್ಯವೇ ಶಬ್ದ ಸ್ವರೂ ಪವನ್ನು ತಳೆದು ವೇದವೆನಿಸಿತು. ಆದ್ದರಿಂದಲೇ ಅದು "ಅಪೌರುಷೇಯ" ಅಥವಾ "ಈಶ್ವರೀಯ ವಾಣಿ" ಎಂದು ಹೇಳಲ್ಪಡುತ್ತಿರುವುದು. ವೇದವು ಶಿಷ್ಯ ಪರಂಪರೆ ಯಿಂದ ಒಬ್ಬರಿಂದೊಬ್ಬರಿಗೆ ಕೇಳಿಸುತ್ತ ಬಂದುದರಿಂದ "ಶ್ರುತಿ" ಎನಿಸಿತು. ವೇದ ಶಾಖೆಗೆ ಸಂಬಂಧಿಸಿದ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳ ಶ್ರುತಿ ಶ್ರೇಣಿಯಲ್ಲಿ ಸೇರಿವೆ. ವೇದ ಮೂಲವೆನಿಸಿರುವ ಭಗವಂತನ ಮುಖೋದ್ಭವ ವೆನಿಸಿರುವ ಆಗಮ ಅಥವಾ ತಂತ್ರಗಳೂ ಸಹ ಶ್ರುತಿಕೋಟಿಯಲ್ಲಿ ಸೇರಿವೆ.

"ವೈದಿಕೀ ತಾಂತ್ರಿಕೀ ಚೈವ ದ್ವಿವಿಧಂ ಶ್ರುತಿ ಕೀರ್ತಿತಂ" (ಮನು. II–೧ ವ್ಯಾಖ್ಯಾನ) ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ.

ಸ್ಮೃತಿ

ವೈದಿಕ ಸಂಸ್ಕೃತವು ಕಾಲಕ್ರಮದಲ್ಲಿ ಬದಲಾವಣೆ ಹೊಂದುತ್ತಾ ಬಂದು

ಲೌಕಿಕ ಸಂಸ್ಕೃತದ ಹುಟ್ಟನ್ನು ಮುಟ್ಟುವ ವೇಳೆಗೆ ಸಹಸ್ರಾರು ವರ್ಷಗಳು ಕಳೆದಿರಬೇಕು. ಆಗ ಶ್ರುತಿಗಳಲ್ಲಿನ ಎಷ್ಟೋ ಶಬ್ದಗಳ ಅರ್ಥವು ಬದಲಿಸಿ ಧರ್ಮ ಸೂಕ್ಷ್ಮಗಳು ದುಬೋಧನೆನಿಸಿರಬೇಕು. ವೇದ ಮಾರ್ಗಾನುಷ್ಠಾನ ಪರರಾದ ಮನ್ವಾದಿ ಮಹರ್ಷಿಗಳು ವೇದ ಮೂಲವನ್ನು ಸ್ಮರಿಸಿ (ನೆನಪು ಮಾಡಿಕೊಂಡು) ನಿರೂಪಿಸಿದ ಸಾಹಿತ್ಯವೇ "ಸ್ಮೃತಿ" ಯೆನಿಸಿತು. "ಶ್ರುತಿಂ ಮನಯೋ ಸ್ಮರಂತಿಚ ತಥಾವಿಧಂ" ಮುಂತಾದ ಉಕ್ತಿಗಳು ಈ ಬಗ್ಗೆ ನಿದರ್ಶನವಾಗಿವೆ. ಸ್ಮೃತಿಗಳು ಶ್ರುತಿಯನ್ನೇ ಅನುಸರಿಸುತ್ತವೆ.

"ಶ್ರುತೇರಿವಾರ್ಥಂ ಸ್ಮೃತಿ ರನ್ವಗಚ್ಛತ್" (ರಘು II–೨) "ಮನು ಹೇಳಿರುವುದೆಲ್ಲವೂ ವೇದದಲ್ಲಿದೆ. ಸರ್ವಜ್ಞನಾದ ಮನು ತನ್ನ ಜ್ಞಾನ ನೇತ್ರದಿಂದ ಪರಿಶೀಲಿಸಿ ವೇದ ಸಮ್ಮತವಾದುದನ್ನೇ ಹೇಳಿದ್ದಾನೆ" (ಮನು. ಅ. ೨, ೭–೮) ಮುಂತಾದ ಉಕ್ತಿಗಳು ಇದಕ್ಕೆ ನಿದರ್ಶನ.

ಸ್ಮೃತಿಗಳ ಕಾಲದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇವುಗಳ ರಚನೆ ಕ್ರಿ. ಪೂ. ೨೦೦೦ ದಿಂದ ಕ್ರಿ. ಶ. ೪–೫ನೆಯ ಶತಮಾನಗಳವರೆಗೂ ನಡೆದಿದೆ ಯೆಂದು ಸ್ಥೂಲವಾಗಿ ತಿಳಿದು ಬಂದಿದೆ.

ಸ್ಮೃತಿಗಳ ಸಂಖ್ಯೆ ನೂರಾರು. ಪ್ರಧಾನವಾಗಿ "ಸ್ಮೃತಯೋರಷ್ಟಾ ದಶ ಪ್ರೋಕ್ತಾಃ ಮನುಭಿರ್ನಿರ್ಮಿತಾಃ ಪೃಥಕ್"(ನೀಲಕಂಠ ಶಿವಾಚಾರ್ಯ(ಕ್ರಿ.೧೪೦೦) ಎಂದು ಕ್ರಿಯಾಸಾರದಲ್ಲಿ ಮನು, ಬೃಹಸ್ಪತಿ, ದಕ್ಷ ಮುಂತಾದ ಹದಿನೆಂಟು ಮಂದಿ ಸ್ಮೃತಿಕಾರರನ್ನೂ ಜಾಬಾಲಿ, ನಾಚಿಕೇತ, ಲೋಗಾಕ್ಷಿ ಮುಂತಾನ ಹದಿನೆಂಟು ಮಂದಿ ಉಪಸ್ಮೃತಿಕಾರರನ್ನು ಉಲ್ಲೇಖಿಸಲಾಗಿದೆ.

ಸ್ಮೃತಿಗಳಲ್ಲಿ ಪ್ರತಿಪಾದಿತವಾದ ವಿಷಯಗಳು

ಸಾಮಾನ್ಯವಾಗಿ ಸ್ಮೃತಿಗಳಲ್ಲಿ ವ್ಯಕ್ತಿ ಜೀವನ, ಗೃಹ ಜೀವನ ಮತ್ತು ಸಾಮಾಜಿಕ ಜೀವನಗಳಲ್ಲಿ ಇರಬೇಕಾದ ಮಾನವ ನೀತಿಯನ್ನು ಎತ್ತಿ ಹಿಡಿಯಲಾಗಿದೆ. ಇವುಗಳಲ್ಲಿ ಮಾನವನು ಜನ್ಮಧಾರಣ ಮಾಡಿದಂದಿನಿಂದ ಅವಸಾನದವರೆಗೆ ಅನುಸರಿಸಬೇಕಾದ ಗರ್ಭಾಧಾನಾದಿ ಸಂಸ್ಕಾರಗಳು ಮೊದಲನೆಯ ಆಚಾರ ಕಾಂಡದಲ್ಲಿ ಉಕ್ತವಾಗಿವೆ. ಗೃಹಸ್ಥ ಮತ್ತು ಸಾಮಾಜಿಕ ಜೀವನದಲ್ಲಿ ತಟಸ್ಥವಾಗುವ ವ್ಯವಹಾರಗಳಿಗೆ ಸಂಬಂಧಿಸಿದ ನಿಬಂಧನೆಗಳು ಎರಡನೆಯ "ವ್ಯವಹಾರ ಕಾಂಡ" ದಲ್ಲಿ ನಿರೂಪಿಸಲ್ಪಟ್ಟಿವೆ. ಮೇಲಿಕಂಡ ನಿಯಮಗಳನ್ನು ಮೀರಿದ ಸಂದರ್ಭದಲ್ಲಿ ವಿಧಿಸಬೇಕಾದ ಪಶ್ಚಾತ್ತಾಪ ಮತ್ತು ದೇಹ ದಂಡನೆಗಳಿಗೆ ಸಂಬಂಧಿಸಿದ ವಿಷಯಗಳು ಮೂರನೆಯ "ಪ್ರಾಯಶ್ಚಿತ್ತ" ವಿಭಾಗದಲ್ಲಿ ಹೇಳಿವೆ.

ಈ ವಿಭಾಗಗಳು ಯಜ್ಞವಲ್ಕ್ಯ ಮುಂತಾದ ಕೆಲವು ಸ್ಮೃತಿಗಳಲ್ಲಿ ವಿಸ್ತಾರವಾಗಿವೆ. ಮತ್ತೆ ಕೆಲ ಕೆಲವು ಸ್ಮೃತಿಗಳಲ್ಲಿ ಕೆಲವು ಕಾಂಡಗಳು ಮಾತ್ರ ದೊರೆಯುತ್ತವೆ. ಯುಗ ಧರ್ಮವನ್ನು ಅನುಸರಿಸಿ ಕೆಲ ಕೆಲವು ಸ್ಮೃತಿಗಳಿಗೆ ಪ್ರಾಧಾನ್ಯವಿರುವುದು ಕಂಡು ಬರುತ್ತದೆ. ಉದಾಹರಣೆಗಾಗಿ; ಕೃತಯುಗದಲ್ಲಿ ಮನುಸ್ಮೃತಿ, ತ್ರೇತಾಯುಗದಲ್ಲಿ ಗೌತಮ ಸ್ಮೃತಿ, ದ್ವಾಪರಯುಗದಲ್ಲಿ ಶಂಖಲಿಖಿತ ಸ್ಮೃತಿ, ಕಲಿಯುಗದಲ್ಲಿ ಪರಾಶರ ಸ್ಮೃತಿ (ಅ. I ೨೪) ಎಂದು ನಿರ್ಣಯಿಸಲಾಗಿದೆ. ಇದಕ್ಕೆ ಕಾರಣವನ್ನು ಸಹ ಸ್ಮೃತಿಗಳು ಹೇಳಿವೆ. ಕಾಲ ಕಾಲಕ್ಕೆ ಜನತೆಯ ಆಚಾರ ವಿಚಾರಗಳು ವ್ಯತ್ಯಸ್ತವಾಗುತ್ತವೆ. ಅದಕ್ಕಾಗಿ ಧರ್ಮ ನಿಯಮಗಳಲ್ಲೂ ಬದಲಾವಣೆಯಾಗಬೇಕಾದುದು ಅಗತ್ಯ.

ಅನ್ಯೇ ಕೃತಯುಗೇ ಧರ್ಮಾಃ ತ್ರೇತಾಯಾಂ ದ್ವಾಪರೇಸರೇ !
ಅನ್ಯೇ ಕಲಿಯುಗೇನ್ರೂಣಾಂ ಯುಗಹ್ರಾಸಾನು ರೂಪತಃ॥ (I ೮೫)

ಎಂಬ ಉಕ್ತಿಯಂತೆ ಯುಗ ಧರ್ಮವನ್ನು ಅನುಸರಿಸಿ ಸ್ಮೃತಿಗಳಿಗೆ ಪ್ರಾಮಾಣ್ಯವನ್ನು ಅಂಗೀಕರಿಸಲಾಗಿದೆ.

ಸ್ಮೃತಿಗಲ್ಲಿ ಉಕ್ತವಾದ ನೀತಿ

ಧರ್ಮಾನುಷ್ಠಾನದ ಅಗತ್ಯವನ್ನೂ ಒತ್ತಿ ಹೇಳುವುದೇ ಸ್ಮೃತಿಗಳ ಉದ್ದೇಶ.

"ಎಂಥ ಕಷ್ಟ ಬಂದರೂ ಧರ್ಮವನ್ನು ಬಿಡಬಾರದು. ಕಾಮದಿಂದಲಾಗಲೀ, ಭಯದಿಂದಾಗಲಿ, ಇಲ್ಲವೆ ಲೋಭಕ್ಕಾಗಿಯಾಗಲಿ ಧರ್ಮ ಬಿಡಬಾರದು. ಧರ್ಮವು ನಿತ್ಯ. ಸುಖ ದುಃಖಗಳು ಅನಿತ್ಯ."

"ಆತ್ಮಾ ಸ್ಮೃತಿ ಮತ್ತು ಪರನಿಂದೆಗಳು ಯುಕ್ತವಲ್ಲ"
(ಆತ್ಮ ಸ್ತುತಿ ಪರಗರ್ಹಾಮಿತಿಚ ವರ್ಜಯೇತ್)

"ಸತ್ಯವನ್ನು ಹೇಳಬೇಕು. ಪ್ರಿಯವನ್ನು ಹೇಳಬೇಕು. ಅಪ್ರಿಯವಾದ ಸತ್ಯವನ್ನಾಗಲಿ, ಪ್ರಿಯವಾದುದ್ದೆಂದು ಸುಳ್ಳನ್ನಾಗಲಿ ಹೇಳಬಾರದು" (ಮನು vi ೧೩೮)

"ಪರಸ್ತ್ರೀಯನ್ನು ತಾಯಿಯಂತೆ ಕಾಣಬೇಕು." (ಮನು. ೨.೧೨೯)

"ತಾಯಿ, ತಂಗಿ, ಮಗಳು ಯಾರೊಡನೆಯೂ ಏಕಾಂತದಲ್ಲಿರಬಾರದು. ಏಕೆಂದರೆ ಇಂದ್ರಿಯ ಗ್ರಾಮವು ಬಲವತ್ತರವಾದದ್ದು" (ಮನು. II.೨೧೫)

"ಕೇವಲ ಉಪಭೋಗದಿಂದ ಕಾಮವು ಶಾಂತವಾಗುವುದಿಲ್ಲ. ಅದು ಆಜ್ಯಾಹುತಿಯಿಂದ ಪ್ರಜ್ವಲಿಸುವ ಬೆಂಕಿಯನ್ನು ಉಪಶಮನ ಮಾಡುವಂತೆ ಅಶಕ್ಯ" (ಮನು. II ೯೪)

"ಒಳ್ಳೆಯ ವಸ್ತುವನ್ನು ಎಲ್ಲಿದ್ದರೂ ಸಂಗ್ರಹಿಸಬೇಕು. ವಿಷದಿಂದ ಅಮೃತ;

ಬಾಲಕನಿಂದ ಒಳ್ಳೆಯ ಮಾತು. ಶತ್ರುವಿನಲ್ಲಿನ ಒಳ್ಳೆಯ ನಡತೆ ಮತ್ತು ಅಮೇಧ್ಯದಲ್ಲಿನ್ನ ಸುವರ್ಣ ಇವುಗಳನ್ನು ಸ್ವೀಕರಿಸಬಹುದು" (ಮನು. II ೨೩೯)

"ಸಾಕ್ಷಿಯು ಸತ್ಯವನ್ನೇ ಹೇಳಬೇಕು. ಧರ್ಮವು ಸತ್ಯದಿಂದ ವರ್ಧಿಸುತ್ತದೆ ಆದುದರಿಂದ ಯಾವಾಗಲೂ ಸತ್ಯವನ್ನೇ ಹೇಳಬೇಕು" (ಮನು. VIII ೮೩)

"ಆಪತ್ಕಾಲದಲ್ಲಿ ಮೊದಲು ಆತ್ಮರಕ್ಷಣೆ; ತರುವಾಯ ಧರ್ಮರಕ್ಷಣೆ ಮಾಡಬೇಕು. (ಪರಾಶರ VII ೩೬) "ಶೌಚಾಚಾರಗಳಲ್ಲಿಯೂ ಸಹ ಆಪತ್ಕಾಲಕ್ಕೆ ವಿನಾಯಿತಿಯುಂಟು. ಆಪತ್ತಿನಿಂದ ಪಾರಾದ ತರುವಾಯ ಬೇಕಾದರೆ ಪ್ರಾಯಶ್ಚಿತ್ತ ಮಾಡಿಕೊಂಡು ಸುಸ್ಥಿತಿಗೆ ಬಂದಮೇಲೆ ಧರ್ಮಾಚರಣ ಮಾಡಬೇಕು" (ಪರಾಶರ ३೮)

"ಜೀವನೋಪಾಯಕ್ಕಾಗಿ ಯಾವ ವೃತ್ತಿ [ಕಾಯಕ) ಯನ್ನಾದರೂ ಅವಲಂಬಿಸಬಹುದು. ಅವುಗಳಲ್ಲಿ ಮುಖ್ಯವಾಗಿ ವಿದ್ಯೆ, ಶಿಲ್ಪ. ಭೃತಿ: ಸೇವಾ, ಗೋರಕ್ಷೆ. ವ್ಯಾಪಾರ, ಕೃಷಿ, ಭೈಕ್ಷ, ಕುಸೀದ "ಮುಂತಾದವು ಜೀವನ ಹೇತಗಳು. ಉತ್ತಮರು ಯಾವ ಪ್ರಾಣಿಗೂ ನೋವಾಗದ ರೀತಿಯಲ್ಲಿ ವೃತ್ತಿಯನ್ನು ಅವಲಂಬಿಸಬೇಕು. ನಿಂದ್ಯವಲ್ಲದ ಯಾವ ಕೆಲಸವನ್ನಾದರೂ ಮಾಡಿ ಧನಾರ್ಜನೆ ಮಾಡಬಹುದು."

ಸ್ಮೃತಿಗಳ ಧ್ಯೇಯ

ಸ್ಮೃತಿಗಳಲ್ಲಿ ಜೀವನ ಸುಧಾರಣೆಗಾಗಿ ಹೇಳಿರುವ ನಿಯಮಗಳು ಇಡಿಯ ಮಾನವನ ಲೋಕಕ್ಕೆ ಅನ್ವಯಿಸುತ್ತವೆ. ಈ ನಿಯಮಗಳು ಯಮ ಮತ್ತು ನಿಯಮ ಎಂದು ಎರಡು ವಿಧ. ಯೋಗ ಸೂತ್ರಕಾರನು ಹೇಳುವ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಮತ್ತು ಅಪರಿಗ್ರಹಗಳು, ಯಮಗಳು ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನಗಳು ನಿಯಮಗಳು (ಯೋಗ ಸೂತ್ರ. II ३೦-३೨) ಇವುಗಳನ್ನು ಪ್ರಸ್ತಾಪಿಸಿದ ಸ್ಮೃತಿಕಾರರು ನಿಯಮಗಳಿಗಿಂತ ಯಮಗಳೇ ಮುಖ್ಯವೆಂದು ಒತ್ತಿ ಹೇಳಿದ್ದಾರೆ.

> ಯಮಾನ್ ಸೇವೇತ ಸತತಂ ನಿತ್ಯಂ ನಿಯಮಾನ್ ಬುಧಃ
> ಯಮಾನ್ಪತತ್ಯ ಕುರ್ವಾಣೋ ನಿಯಮಾನ್ ಕೇವಲಾನ್ಭಜನ್"
> (ಮನು. IV ೨೦೪)

"ಓಂಕಾರ ಪ್ರಣವವೇ ಪರಬ್ರಹ್ಮ. ಪ್ರಾಣಾಯಾಮವೇ ತಪಸ್ಸು. ಗಾಯತ್ರಿಗಿಂತ ಶ್ರೇಷ್ಠವಾದ ಮಂತ್ರವಿಲ್ಲ. ಮೌನಕ್ಕಿಂತ ಸತ್ಯವಾದಿತ್ವವೇ ಮುಖ್ಯ." (ಮನು II ೮३) ಮುಂತಾದ ಉದಾತ್ತಾಶಯಗಳು ಸ್ಮೃತಿಗಳಲ್ಲಿ ಉಕ್ತವಾಗಿವೆ.

ಸ್ಮೃತಿಗಳಲ್ಲಿ ತಪಸ್ಸಿನ ಹೆಚ್ಚಳವನ್ನು ಬಹುವಾಗಿ ಬಣ್ಣಿಸಲಾಗಿದೆ. ತಪಸ್ಸಿ

ನಿಂದ ಎಲ್ಲವನ್ನು ಸಾಧಿಸಬಹುದೆಂಬುದು ಅವುಗಳ ನಿರ್ಧಾರ.

ತಪಸಾ ಕಿಲ್ಬಿಕಂ ಹಂತಿ ವಿದ್ಯಾಯಾಮೃತ ಮಶ್ನುತೇ|| (ಮ. III ೧೦೪) ತಪಸ್ಸಿನಿಂದ ಪಾಪ ವಿಮೋಚನ; ವಿದ್ಯೆಯಿಂದ ಅಮೃತತ್ವ ಲಭಿಸುತ್ತದೆ.

ಸ್ಮೃತಿಕಾರರಿಗೆ ಸಾಧನ ಮಾರ್ಗಗಳಲ್ಲಿ ಆತ್ಮ ಸಾಕ್ಷಾತ್ಕಾರವೇ ಮುಖ್ಯ. ಕರ್ಮಗಳು ಕಾಮ ಮತ್ತು ನಿಷ್ಕಾಮ ಎಂದು ಎರಡು ವಿಧ. ಐಹಿಕ ಮತ್ತು ಆಮುಷ್ಮಿಕ ಫಲಾಭಿಲಾಷೆಯಿಂದ ಮಾಡುವ ಕರ್ಮಗಳು ಪ್ರವೃತ್ತ (ಕಾಮ್ಯ) ಕರ್ಮಗಳು. ನಿಷ್ಕಾಮ ಎಂದರೆ ಶಿವಾರ್ಪಿತ ಬುದ್ಧಿಯಿಂದ ಮಾಡುವಗಳು ನಿವೃತ್ತಿ ಕರ್ಮಗಳು.

ಪ್ರವೃತ್ತಂ ಕರ್ಮಸಂಸೇವ್ಯ ದೇವಾನಾಮೇತಿ ಸಾಮ್ಯತಾಮ್।
ನಿವೃತ್ತಂ ಸೇವಮಾನಸ್ತು ಭೂತಾನ್ಯತ್ಯೇತಿ ಪಂಚವೈ:||
(ಮನು. XII ೯೪)

"ಯಾವ ಆಶ್ರಮದಲ್ಲಿಯೇ ಇರಲಿ ವೇದಾದಿ ಸತ್ ಶಾಸ್ತ್ರ ತತ್ವಗಳನ್ನು ಬಲ್ಲವನಾಗಿ ಅನುಷ್ಠಾನ ಪರನಾಗಿದ್ದ ಪಕ್ಷದಲ್ಲಿ ಅವನು ಇಹದಲ್ಲಿಯೇ ಬ್ರಹ್ಮಭಾವ ಪಡೆಯುವನು."

"ಅಜ್ಞರಿಗಿಂತ ಗ್ರಂಥವನ್ನು ಅಭ್ಯಾಸ ಮಾಡುವವನು. ಶ್ರೇಷ್ಠ. ಅಧ್ಯಯನ ಮಾಡುವವನಿಗಿಂತ ಅದನ್ನೂ ಧಾರಣ ಮಾಡಿಕೊಂಡವನು ಶ್ರೇಷ್ಠ. ಧಾರಣ ಮಾಡಿದವನಿಗಿಂತ ಅದರ ಅರ್ಥ ಬಲ್ಲವನು ಶ್ರೇಷ್ಠ. ಅವನಿಗಿಂತಲೂ ಅದನ್ನು ನಡೆಯಲ್ಲಿ ಆಚರಿಸುವವನೂ ಶ್ರೇಷ್ಠ.

"ನಾವು ಆಚರಿಸುವ ಧರ್ಮವು ಋಷಿ ಪ್ರೋಕ್ತವೂ, ವೇದ ಸಮ್ಮತವೂ ಆಗಿ ತನ್ನ ವಿಚಾರದ ಒರೆಗಲ್ಲಿಗೆ ಒಂದುದೇ ಧರ್ಮ."

ಮಾನವನು ಚರಾಚರಾತ್ಮಕನಾದ ಎಲ್ಲ ವಿಶ್ವವೂ ತನ್ನಲ್ಲಿಯೇ ಇರುವುದೆಂದು ಭಾವಿಸಿ ಅಧರ್ಮಕ್ಕೆ ವಶನಾಗದೆ ಎಲ್ಲ ದೇವತೆಗಳೂ ಪರಮಾತ್ಮನ ಸ್ವರೂಪವೆಂದೇ ಭಾವಿಸುವುದಲ್ಲದೆ ಸಮಸ್ತ ಜಗತ್ತು ಪರಬ್ರಹ್ಮ ಸ್ವರೂಪವೆಂದು ತಿಳಿಯುವುದೇ ನಿಜವಾದ ತತ್ವ ಜ್ಞಾನ.

ಹೀಗೆ ಉದಾತ್ತವಾದ ಲೌಕಿಕ ಮತ್ತು ಪಾರಲೌಕಿಕ ತತ್ವಗಳ ವಿಧಿ ವಿಧಾನಗಳನ್ನು ಅಂದಂದಿಗೆ ನಿರೂಪಿಸಿ ಸ್ಮೃತಿಗಳು ಭಾರತ ಸಂಸ್ಕೃತಿಯನ್ನು ಉಜ್ವಲಗೊಳಿಸುತ್ತ ಬಂದಿವೆ. ಅಂಥ ಸ್ಮೃತಿಗಳಲ್ಲಿನ ಉದಾತ್ತ ತತ್ವಗಳನ್ನೂ ಆಧುನಿಕ ವಿಚಾರದ ಒರೆಗಲ್ಲಿಗೆ ಹಚ್ಚಿ ಯುಕ್ತವಾದುದನ್ನು ಅರಿತು ಆಚರಿಸುವುದು ನಮ್ಮ ಕರ್ತವ್ಯ.

ಮಂಥರೆ

ಶ್ರೀ ಭಾರತೀ ರಮಣಾಚಾರ್, ಬೆಂಗಳೂರು.

ರಾಮಾಯಣ ಆದಿಕಾವ್ಯ. ಈ ಕಾವ್ಯದ ಕಥಾವಸ್ತುವು ಅನೇಕ ಕವಿಗಳಿಗೆ ಪ್ರೇರಣೆಯನ್ನು ನೀಡಿದೆ. ಆ ಕಥೆಯನ್ನು ಹೇಳುವವರು ಕವಿಗಳಾಗುವರೋ ಎನ್ನುವಷ್ಟು ಹೃದಯಂಗಮವಾಗಿರುವುದೇ ಆ ಸಾಹಿತ್ಯದ ಲೋಕ ಪ್ರಿಯತೆಗೆ ಕಾರಣ.

ರಾಮಾಯಣದ ಆಧಿಕಾರಿಕ ಕಥಾ ಪ್ರವಾಹವನ್ನೂ ಅನಿರೀಕ್ಷಿತವಾಗಿ ತಿರುಗಿಸಿ ಅದರಲ್ಲಿ ತೀವ್ರತೆಯನ್ನುಂಟು ಮಾಡಿದ ಘಟನೆಗಳು ಎರಡು. ಒಂದು ರಾಮನ ರಾಜ್ಯಾಭಿಷೇಕಕ್ಕೆ ಬಂದೊದಗಿದ ಕುತ್ತು. ಇನ್ನೊಂದು ಸೀತಾಪಹರಣಕ್ಕೆ ತನ್ಮೂಲಕ ರಾಕ್ಷಸ ಸಂಹಾರಕ್ಕೆ ನಾಂದಿಯಂತಿರುವ ಶೂರ್ಪಣಖಾ ವಿರೂಪೀಕರಣ. ಈ ಘಟನೆಗಳಿಗೆ ಕಾರಣರಾದ ಪಾತ್ರ ಮಂಥರೆ ಮತ್ತು ಶೂರ್ಪಣಖಿ. ಈ ಲೇಖನದಲ್ಲಿ ಮಂಥರೆಯ ಪಾತ್ರದ ಬೆಳವಣಿಗೆ ರಾಮ ಸಾಹಿತ್ಯ ಪರಂಪರೆಯಲ್ಲಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ನೋಡುವ ಜೊತೆಗೆ ಕು. ವೆಂ. ಪುರವರು ಈ ಪಾತ್ರವನ್ನು ಹೇಗೆ ಗ್ರಹಿಸಿ ಚಿತ್ರಿಸಿರುವರೆಂಬುದನ್ನು ವಿಮರ್ಶಿಸೋಣ,

ಕೈಕೇಯಿ ದೇವಿಯು ವಿಶ್ವಾಸಘಾತಕತನವನ್ನು ಮಾಡಿ ದಶರಥ ಮಹಾರಾಜನಿಂದ ವರವನ್ನು ಪಡೆದು, ರಾಮನನ್ನು ಕಾಡಿಗೆ ಅಟ್ಟಿ ಭರತನಿಗೆ ರಾಜ್ಯವನ್ನು ಗಿಟ್ಟಿಸುವಲ್ಲಿ ಯಶಸ್ವಿಯಾದಳೆಂದು ವಾಲ್ಮೀಕಿಗಳು ಆದಿಕಾವ್ಯದಲ್ಲಿ ವರ್ಣಿಸಿರುತ್ತಾರೆ. ಬಹುತೇಕ ಎಲ್ಲ ರಾಮಾಯಣಗಳಲ್ಲೂ ಈ ಅಭಿಪ್ರಾಯದ ರಕ್ಷಣೆಯಾಗಿದೆ. ಆದರೆ ಗುಣಭದ್ರನು ಬರೆದಿರುವ ಉತ್ತರ ಪುರಾಣದಲ್ಲಿ ಅನಾಮಕಂ ಜಾತಕಂ ಈ ಎರಡು ಗ್ರಂಥಗಳಲ್ಲಿ ಕೈಕೆಯಿಯ ವರದ ಪ್ರಸ್ತಾಪವೇ ಇಲ್ಲ. ಈ ಬಗೆಯ ಮಾರ್ಪಾಟು ರಾಮನ ಸಾಹಿತ್ಯದಲ್ಲಿ ಹೇರಳವಾಗಿ ಆಗಿದೆ. ರಾಮನ ವನವಾಸದ ಅವಧಿ ಹದಿನಾಲ್ಕು ವರ್ಷಗಳೆಂಬುದು ವಾಲ್ಮೀಕಿಗಳ ಹಾಗೂ ಬಹುತೇಕ ರಾಮಾಯಣ ಕವಿಗಳ ಅಭಿಪ್ರಾಯ ರಾಮ ಲಕ್ಷ್ಮಣ ಸೀತೆ ಮೂವರೂ ಕಾಡಿಗೆ ಹೋದರೆಂಬುದೂ ಜನ ಜನಿತ. ಆದರೆ ಅನಾಮಕಂ ಜಾತಕಂ ನಲ್ಲಿ ರಾಮ ಸೀತೆಯರಿಬ್ಬರೇ ಕಾಡಿಗೆ ಹೋದರೆಂಬ ಉಲ್ಲೇಖವಿದ್ದರೆ ದಶರಥ ಜಾತಕಂ ನಲ್ಲಿ ರಾಮ ಲಕ್ಷ್ಮಣರಿಬ್ಬರೇ ವನವಾಸಕ್ಕೆ ತೆರಳಿದರೆಂದು ಬರುತ್ತದೆ. ಸಿಂಹಳ ಮತ್ತು ಟಿಬೆಟ್ಟಿನಲ್ಲಿ ಪ್ರಚಾರದಲ್ಲಿರುವ ರಾಮಾಯಣಗಳ ಪ್ರಕಾರ ರಾಮ ಏಕಾಕಿಯಾಗಿ

ಕಾಡಿಗೆ ಹೋದನೆಂದು ವರ್ಣಿತವಾಗಿದೆ. ರಾಮನು ಯಾವ ದಿಕ್ಕಿನಲ್ಲಿದ್ದು ವನ ವಾಸದ ಅವಧಿಯನ್ನು ಮುಗಿಸಿದನೆಂಬುದರಲ್ಲೂ ಬಹು ಬಗೆಯ ನಿರೂಪಣೆ ಕಾಣಿ ಸುತ್ತದೆ, ದಶರಥ ಜಾತಕಂ ಪ್ರಕಾರ ಹಿಮಾಲಯದ ತಪ್ಪಲಲ್ಲಿ ಕೇವಲ ಹನ್ನೆ ರಡು ವರ್ಷಕಾಲ ವನವಾಸ ಮಾಡಿದನೆಂದು ಬಂದಿದೆ. ಇದರಂತೆ ದಶರಥ ಕಥಾನಕಂ ಸಂಘದಾಸನ ವಸುದೇವ ಹಿಂಡಿ ಮುಂತಾದ ಕೃತಿಗಳಲ್ಲಿ ಹನ್ನೆರಡೇ ವರ್ಷದ ವನವಾಸದ ಪ್ರಸ್ತಾಪವಿದೆ, ಅದೇ ಸ್ವಯಂಭು ದೇವನ ಪಉಮ ಚರಿಯದಲ್ಲಿ ಹದಿನಾರು ವರ್ಷ ವನವಾಸದ ಮಾತಿದೆ.

ವನವಾಸದ ಕಾರಣಗಳನ್ನು ನಿರೂಪಿಸುವಲ್ಲಿಯೂ ಕೂಡ ಏಕಾಭಿಪ್ರಾಯ ವಿಲ್ಲದಿರುವುದನ್ನು ರಾಮ ಸಾಹಿತ್ಯದಲ್ಲಿ ನೋಡಬಹುದು.

ದಶರಥ ಜಾತಕಂ ಮತ್ತು ದಶರಥ ಕಥಾನಕಂ– ಇವುಗಳಲ್ಲಿ ಭರತನ್ನ ತಾಯಿಯು ತನ್ನ ಮಗನಿಗೇ ರಾಜ್ಯವನ್ನು ಕೊಡಬೇಕೆಂದು ಒಂದೇ ವರವನ್ನು ಕೇಳಿ ಪಡೆಯುತ್ತಾಳೆ. ದಶರಥನು ಹಿರಿಯ ಮಗನಾದ ರಾಮನಿಗೆ ಏನಾದರೂ ವಿಪತ್ತು ಬಂದೊದಗಬಹುದೆಂದು ಶಂಕಿಸಿ ರಾಮ ಲಕ್ಷ್ಮಣರನ್ನು ಬರಮಾಡಿ ಕೊಂಡು ಕಾಡಿಗೆ ಹೊರಟು ಹೋಗುವಂತೆ ತಿಳಿಸುತ್ತಾನೆ, ಅಂದರೆ ಮಲತಾಯಿಯ ಭಯ ರಾಮವನಗಮನಕ್ಕೆ ಕಾರಣವಾಗಿದೆ. ಮಲತಾಯಿಯ ವರವಲ್ಲ.

ತನ್ನ ಸೋದರ ಮಾವನು ರಾಜ್ಯದ ಮೇಲೆ ದಂಡೆತ್ತಿ ಬರಲು ಸಿದ್ಧತೆ ಗಳನ್ನು ಮಾಡಿಕೊಳ್ಳುತ್ತಿರುವನೆಂಬ ಸಮಾಚಾರವನ್ನು ತಿಳಿದು ರಾಮನು ಯುದ್ಧಕ್ಕೆ ಹೆದರಿ ರಾಣಿಯನ್ನು ಕರೆದುಕೊಂಡು ರಾಜಧಾನಿಯನ್ನೇ ಬಿಟ್ಟು ಕಾಡಿಗೆ ಹೋಗಿ ಬಿಡುತ್ತಾನೆ; ಹೀಗೆಂದು ಅನಾಮಕಂ ಜಾತಕಂನಲ್ಲಿ ಬರುತ್ತದೆ.

'ಪಉಮಚರಿಯಂ' ಪ್ರಕಾರ ಭರತನಿಗೆ ರಾಜ್ಯಾಭಿಷೇಕವಾಯಿತೆಂದು ತಿಳಿದೊಡನೆಯೇ ರಾಮನು ಸೀತಾ ಲಕ್ಷ್ಮಣರನ್ನು ಕರೆದುಕೊಂಡು ದಕ್ಷಿಣ ದೇಶದ ಕಡೆಗೆ ಸ್ವಂತ ಇರಾದೆ ಇಂದಲೇ ಹೊರಟು ಹೋಗುತ್ತಾನೆ.

ಅನಾಮಕಂ ಜಾತಕದಲ್ಲಿ ರಾಮನ ವನವಾಸವು ಭಯದಿಂದ ಪ್ರೇರಿತವಾಗಿ ದ್ದರೆ ಪಉಮಚರಿಯಂ ಪ್ರಕಾರ ಈರ್ಷೆಯಿಂದ ಪ್ರಚೋದಿತವಾಗಿದೆ. ಇದಕ್ಕಿಂತ ಸ್ವಲ್ಪ ಉತ್ತಮ ಟಿಬೆಟ್ಟನ ರಾಮಾಯಣದಲ್ಲಿ ಬಂದಿರುವ ಪ್ರಸಂಗ. ಅಲ್ಲಿ ದಶ ರಥನ ಎದುರಿನಲ್ಲಿ ಒಂದು ತೊಡಕಿನ ಪ್ರಶ್ನೆ ಇದ್ದಿತೆಂಬ ಉಲ್ಲೇಖವಿದೆ. ರಾಮ ಮತ್ತು ಭರತ ಇಬ್ಬರೂ ಎಲ್ಲ ಬಗೆಯಿಂದಲೂ ಸಿಂಹಾಸನಕ್ಕೆ ಅರ್ಹರಾಗಿದ್ದರು. ಯಾರಿಗೆ ರಾಜ್ಯ ಕೊಡಬೇಕು? ಇದು ದಶರಥನನ್ನು ಪೇಚಿನಲ್ಲಿ ಸಿಗ ಹಾಕಿತು. ಇದನ್ನರಿತು ರಾಮನು ಸ್ವಪ್ರೇರಣೆಯಿಂದ ಭರತನಿಗಾಗಿ ರಾಜ್ಯವನ್ನು ಬಿಟ್ಟು ಕೊಟ್ಟು ವನಕ್ಕೆ ತೆರಳಿದನಂತೆ.

ಸಿಂಹಳ ರಾಮಾಯಣದ ಪ್ರಕಾರ ಶನಿಕಾಟದಿಂದ ತಪ್ಪಿಸಿಕೊಳ್ಳಲು ರಾಮನು ಸೀತೆಯನ್ನು ಅರಮನೆಯಲ್ಲೇ ಬಿಟ್ಟು ಏಳು ವರ್ಷ ವನವಾಸಕ್ಕೆ ಮನಸ್ಸು ಮಾಡಿದನೆಂದು ಬರುತ್ತದೆ.

ವಾಲ್ಮೀಕಿ ರಾಮಾಯಣದ ಪ್ರಕಾರ ಕೈಕೇಯಿ ವರವನ್ನು ಬೇಡಿ ರಾಮನನ್ನು ಕಾಡಿಗೆ ಅಟ್ಟಿದಳೆಂಬುದು ಪ್ರಸಿದ್ಧವಿದೆ. ಆದರೆ ಅವಳು ಮೊದಲು ವಾತ್ಸಲ್ಯಮಯಿಯಾಗಿದ್ದಳು. ಅವಳಿಗೆ ರಾಮ–ಭರತರಲ್ಲಿ ಕಿಂಚಿತ್ತು ವ್ಯತ್ಯಾಸವೇ ತೋರುತ್ತಿರಲಿಲ್ಲ. ರಾಮನಿಗೆ ಪಟ್ಟಾಭಿಷೇಕವೆಂದು ಮಂಥರೆಯ ಬಾಯಿಂದ ಕೇಳಿದಾಗ ಸಂತಸಗೊಂಡು ಕಂಠಹಾರವನ್ನು ಉಪಾಯನವಾಗಿ ಕೊಟ್ಟಳು ಎಂದೂ ಸಹ ವರ್ಣನೆ ಬರುತ್ತದೆ. ಇಂಥ ಕೈಕೇಯಿ ಮಂಥರೆಯ ಮಾತಿನ ಮೋಡಿಗೆ ಮಾರು ಹೋಗಿ, ಸವತಿ ಮಾತ್ಸರ್ಯದ ಕಡಲಿನಲ್ಲಿ ತೇಲುತ್ತಾ ಏದುತ್ತಾ, ಮಂಥರೆಯ ಸಲಹೆಯಂತೆ ರಾಮನಿಗೆ ವನವಾಸ, ಭರತನಿಗೆ ರಾಜ್ಯ ದೊರಕಿಸಿಕೊಳ್ಳಲು ಕೋಪ ಭವನಕ್ಕೆ ಹೋಗಿ ಅತಿ ನಿಷ್ಠುರ ಮೂರ್ತಿಯಾಗಿ ದಶರಥನಿಂದ ವರವನ್ನು ಪಡೆಯುತ್ತಾಳೆ ಎಂದು ಬಂದಿದೆ.

ಆದರೆ ಮಂಥರೆಗೆ ರಾಮನಿಗೆ ಪಟ್ಟಾಭಿಷೇಕವಾದರೇನು ಭರತನಿಗಾದರೇನು? ಅವಳಿಗೇಕೆ ಈ ಬಗೆಯ ಪಕ್ಷಪಾತ? ಅವಳು ಹೀಗೇಕೆ ಮಾಡಿದಳು? ಇದಕ್ಕೆ ಪ್ರಬಲವಾದ ಕಾರಣವೇನಾದರೂ ಇತ್ತೆ? ಮಂಥರೆಯ ಈ ಬಗೆಯ ಮನೋಧರ್ಮವನ್ನು ಹೇಗೆ ತಾನೆ ಅರ್ಥ ಮಾಡಿಕೊಳ್ಳಬೇಕು! ತನ್ನ ಒಡತಿಗೇ ಬೇಡವಾಗಿದ್ದ ರಾಜ್ಯವನ್ನು ಭರತನಿಗಾಗಿ ಗಿಟ್ಟಿಸಲು ಒಡತಿಯ ಸರಳ ಸ್ನೇಹ ಭರಿತ ಸ್ವಭಾವವನ್ನು ತಿದ್ದಿ, ತನ್ನಿಷ್ಟ ಸಾಧನೆಯನ್ನಾಗಿ ಮಾಡಿಕೊಂಡ ಅವಳ ಜಾಣ್ಮೆ ಏನೇ ಇರಲಿ, ಅವಳ ಈ ವರ್ತನೆ ಸರಿಯೆ? ರಾಮ ಸಾಹಿತ್ಯದಲ್ಲಿ— ಮಂಥರೆಯನ್ನು ಒಪ್ಪಿಕೊಂಡಾಗ-- ಇದೊಂದು ಮಹಾ ಪ್ರಚಂಡ ವ್ಯಕ್ತಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೇನು ದಶರಥ ಮಹಾರಾಜನ ಮನೋಭಿಲಾಷೆ ಈಡೇರಲು ಹೆಚ್ಚು ವಿಳಂಬವಿಲ್ಲ. ಎಲ್ಲ ಸಿದ್ಧತೆಗಳೂ ಸಾಗಿವೆ. ಅರಮನೆಯಲ್ಲೂ ರಾಜಧಾನಿಯಲ್ಲೂ ಜನ ಸುಖದ ಶಿಖರವನ್ನೇರಿ ಕುಳಿತಂತಿದೆ ಸಂಭ್ರಮ–ಸಡಗರ. ಸಂತಸದ ಈ ವಾತಾವರಣ ಇದ್ದಕ್ಕಿದ್ದಂತೆ ಭಯ, ಶೋಕ, ಕಾತರತೆಯ ಭೀಕರ ದೃಶ್ಯವಾಗಿ ಪರಿಣಮಿಸುತ್ತದೆ. ಸುಖ ಸಂತೋಷದ ಶಿಖರವೇರಿದ್ದ ದಶರಥ ಮಹಾರಾಜನು ದುಃಖದ ಕಡಲಿನಲ್ಲಿ ಬಿದ್ದು ಮರಣವನ್ನೈದುತ್ತಾನೆ. ಸುಖದ ಸೋನೆಯನ್ನನುಭವಿಸುತ್ತಿದ್ದ ದಶರಥನ ರಾಣಿಯವರ ವೈಧವ್ಯದ ವ್ಯಥೆಗೆ ತುತ್ತಾಗುತ್ತಾರೆ. ಇಡೀ ಅಯೋಧ್ಯೆಯೇ ತಲ್ಲಣಗೊಳ್ಳುತ್ತದೆ, ತತ್ತರಿಸುತ್ತದೆ. ಇಂಥ ಅನಿರೀಕ್ಷಿತ ಮಹತ್ ಪರಿಣಾಮವನ್ನುಂಟು ಮಾಡಿದ ವ್ಯಕ್ತಿ

ತ್ವದ ಬಗ್ಗೆ ಮಹರ್ಷಿ ವಾಲ್ಮೀಕಿಗಳು ಕೊಟ್ಟಿರುವ ವಿವರ ಏನೇನೂ ಸಾಲದಾಗಿದೆ. ಅವಳ ಮನೋಧರ್ಮವನ್ನರಿಯಲು ಎಳ್ಳಷ್ಟೂ ಸಾಲದು, ನಿನಿಮಿತ್ತವಾಗಿರುವಂತೆ ತೋರುತ್ತದೆ ಅವಳ ದ್ವೇಷಾಸೂಯೆಗಳು, ಅವಳ ಮಮತೆ–ವಾತ್ಸಲ್ಯಗಳು, ಒಂದು ವೇಳೆ ಕೈಕೇಯಿಯ ಮೇಲಿನ ಮಮತೆ–ತತ್ಪರಿಣಾಮವಾಗಿ ಭರತನ ಮೇಲಿನ ವಾತ್ಸಲ್ಯವೇ ಅವಳನ್ನು ಪ್ರೇರೇಪಿಸಿ ರಾಮನನ್ನು ಕಾಡಿಗೆ ಅಟ್ಟುವಂತೆ ಮಾಡಿ ತಂದಿಟ್ಟುಕೊಂಡರೂ, ತನ್ನ ಅಥವಾ ತನ್ನವರ ಅಭ್ಯುದಯಕ್ಕಾಗಿ, ನಿರ್ನಿಮಿತ್ತವಾಗಿ ಅನ್ಯರಲ್ಲಿ ದ್ವೇಷ ಸಾಧನೆ ಮಾಡಲು ಹೊರಟಿರುವ ಆಕೆಯ ವರ್ತನೆ ಬುದ್ಧಿ ಗ್ರಾಹ್ಯವಾಗಲಾರದು, ವಾಲ್ಮೀಕಿ ರಾಮಾಯಣದಲ್ಲಿಯೂ ಸಮರ್ಪಕ ಉತ್ತರ ದೊರೆಯುವುದಿಲ್ಲ. ಆದ್ದರಿಂದಲೋ, ಏನೋ ಅಲ್ಲಿ ಆ ಗೂನಿಯನ್ನು 'ದುಷ್ಟೆ', 'ರಾಕ್ಷಸೀ', 'ಪಾತಕೀ' 'ನೀಚೆ' ಮುಂತಾಗಿ ಹೇಳಿದ್ದಾರೆ.

ಮಂಥರೆಯ ಈ ಬಗೆಯ ವರ್ಣನೆಯೇ ಸಾಲದು ಎಂಬಂತೆ ಸಂಸ್ಕೃತದ ಕೆಲವು ಗ್ರಂಥಗಳಲ್ಲಿ– ಇನ್ನೂ ನಿರ್ಲಜ್ಜ ನಿಷ್ಠುರಮೂರ್ತಿಯನ್ನಾಗಿ ಚಿತ್ರಿಸಿರುವುದನ್ನು ಸಹ ನೋಡಬಹುದು. ಉದಾರ ರಾಘವ ಕಾವ್ಯದಲ್ಲಿ ಮಂಥರೆ ಬಹು ಚುರುಕು. ಎಲ್ಲಿ ತನ್ನ ಒಡತಿಯು ವರಪ್ರಾಪ್ತ್ಯುಪಾಯದಲ್ಲಿ ಹಿಂದೇಟು ಹೊಡೆಯುವಳೋ ಎಂದು ತಾನೇ ಹೋಗಿ ದಶರಥ ಮಹಾರಾಜನನ್ನು ಕೈಕೇಯಿಯ ಬಳಿಗೆ ಕರೆದು ತರುತ್ತಾಳೆ; ಕೈಕೇಯಿಯು ವರವನ್ನು ಕೇಳಲು ಹಿಂದು ಮುಂದು ನೋಡುತ್ತಿರಲು ತಾನೇ ಅವಳ ಪರವಾಗಿ ಕೇಳಿ ಕೈಕೇಯಿಯ ಅನುಮೋದನೆಯನ್ನು ಪಡೆಯುತ್ತಾಳೆ. 'ರಾಘವೀಯ'ದಲ್ಲಿ ಕೈಕೇಯಿಯ ಬಳಿಗೆ ದಶರಥನನ್ನು ಕರೆದುಕೊಂಡು ಬರುವ ಕಾರ್ಯವನ್ನು ಮಾತ್ರ ಮಂಥರೆ ಮಾಡುತ್ತಾಳೆ. ಪ್ರತಿಮಾ ನಾಟಕದಲ್ಲಿ ಮಂಥರೆಯು ಕೈಕೇಯಿಯ ಪರವಾಗಿ ಅಭಿಷೇಕದ ಸಿದ್ಧತೆಯಲ್ಲಿ ತೊಡಗಿದ್ದ ದಶರಥನ ಬಳಿ ಸಾಗಿ, ಕಿವಿಯಲ್ಲಿ ಏನೋ ಹೇಳಿ ಎಲ್ಲವನ್ನೂ ಸ್ಥಗಿತಗೊಳಿಸುತ್ತಾಳೆ. 'ಪ್ರಸನ್ನ ರಾಘವ' ನಾಟಕದಲ್ಲಿ ಮಂಥರೆಯ ಪ್ರೇರಣೆಯಂತೆ ಕೈಕೇಯಿಯೇ ಹೋಗಿ ವರವನ್ನು ಕೇಳಿ ಅಭಿಷೇಕದ ಮುಂದಿನ ಸಿದ್ಧತೆಗಳನ್ನು ಸ್ಥಗಿತಗೊಳಿಸುತ್ತಾಳೆ,

ಈ ಬಗೆಯ ವೈವಿಧ್ಯವೇನೇ ಇರಲಿ. ಮಂಥರೆಯ ಪಾತ್ರ ಪೋಷಣೆಯಲ್ಲಿ ಸಮರ್ಪಕತೆ ಕಂಡು ಬರುತ್ತಿಲ್ಲ. ಅದೂ ಅಲ್ಲದೆ ಇಂಥ ಅನಿರೀಕ್ಷಿತವಾಗಿ ಮಹತ್ಪರಿಣಾಮವನ್ನುಂಟು ಮಾಡಿ, ಆಧಿಕಾರಿಕ ಕಥಾ ವಸ್ತುವಿನಲ್ಲಿ ಚಮತ್ಕಾರವನ್ನು ತಂದಿರುವ ಮಂಥರೆಯು ಸಾಮಾನ್ಯ ವ್ಯಕ್ತಿಯಾಗಿರಲು ಸಾಧ್ಯವಿಲ್ಲ ಎಂದು ಶಂಕಿಸಿ ಅದಕ್ಕಾಗಿ ನಾನಾ ಬಗೆಯ ಪರಿಹಾರವನ್ನು ಸೂಚಿಸಲು ಹೊರಟಿರುವುದನ್ನು ಕಾಣಬಹುದು.

ಉದಾಹರಣೆಗೆ ಈ ಮಂಥರೆ– ನಿಜವಾದ ಮಂಥರೆಯೇ ಅಲ್ಲ. ಅವಳ ಬದಲು ಬೇರೊಬ್ಬ ರಾಕ್ಷಸಿ ಈ ಕಾರ್ಯವನ್ನು ಮಾಡಿದಳು. ಮಾಯಾಮಯ ರಾಕ್ಷಸ, ಶೂರ್ಪಣಖೀ ಮತ್ತು ಅವಳ ಒಬ್ಬ ದಾಸಿ ಕ್ರಮವಾಗಿ ದಶರಥ, ಕೈಕೇಯೀ ಮತ್ತು ಮಂಥರೆಯ ವೇಷ ಧರಿಸಿ ರಾಮನನ್ನು ಕಾಡಿಗೆ ಕಳುಹಿಸು ವಲ್ಲಿ ಯಶಸ್ವಿಗಳಾಗುತ್ತಾರೆ. ಅಯೋಧ್ಯೆಯಲ್ಲಿ ಆ ಸಮಯದಲ್ಲಿ ದಶರಥ ಕೈಕೇಯಿಯರಿರಲಿಲ್ಲ. ಅಂದ ಮೇಲೆ ಮಂಥರೆ– ಒಬ್ಬ ದಾಸಿ ಏನು ತಾನೇ ಮಾಡಿಯಾಳು. ರಾಕ್ಷಸರು ಬೇಕಾದ್ದು ಮಾಡಬಲ್ಲರು! –ಇದು ಬಲರಾಮಾ ಯಣ ಎಂಬ ನಾಟಕದಲ್ಲಿ ಬರುವ ವಿವರ.

ಅದೇ ಮಹಾವೀರ ಚರಿತ ಎಂಬ ನಾಟಕದಲ್ಲಿ ಶೂರ್ಪಣಖಿಯೇ ಮಂಥರೆ ಯಲ್ಲಿ ಆವಿಷ್ಟಳಾಗಿ, ಕೈಕೇಯಿಯು ಬರೆದಂತೆ ಒಂದು ಪತ್ರವನ್ನು ಬರೆದುಕೊಂಡು ಹೋಗಿ ಜನಕ, ಯುಧಾಜಿತು ಮುಂತಾದವರೆಲ್ಲರೂ ಮಿಥಿಲಾ ಪಟ್ಟಣದಲ್ಲಿರು ವಾಗಲೇ ರಾಮನಿಗೆ ಅದನ್ನು ತಲುಪಿಸುತ್ತಾಳೆ. ಸ್ವಯಂ ಭರತನೂ ಅವನ ಸೋದರ ಮಾವನಾದ ಯುಧಾಜಿತುವು ದಶರಥ ಮಹಾರಾಜನನ್ನು ರಾಮ ರಾಜ್ಯಾಭಿಷೇಕವನ್ನು ಮಿಥಿಲಾ ಪಟ್ಟಣದಲ್ಲಿಯೇ ಮಾಡುವಂತೆ ಪ್ರಾರ್ಥಿಸಿಕೊಳ್ಳು ತ್ತಾರೆ. ಸಮಯವೂ ಅನುಕೂಲವಾಗಿರುತ್ತದೆ. ಆದ್ದರಿಂದ ದಶರಥನು 'ಪರಶು ರಾಮ ವಿಜಯೋತ್ಸವ'ದ ಜೊತೆಯಲ್ಲಿ :ಅಭಿಷೇಕೋತ್ಸವವನ್ನೂ' ಮಾಡುವುದಾಗಿ ಘೋಷಿಸುತ್ತಾನೆ. ಆಗ ರಾಮನು ಕೈಕೇಯೀ ಕಳಿಸಿದ ಪತ್ರವನ್ನು ತೋರಿಸು ತ್ತಾನೆ. ಅದರಲ್ಲಿ 'ಯಾತ್ವನ್ಯೇನ ವಿಹಾಯ ಕಾಲಹರಣಂ ರಾಮೋ ವನಂ ದಂಡಕಾಂ । ಸೀತಾಲಕ್ಷ್ಮಣ ಮಾತ್ರ ಕಾತ್ಪರಿಜನಾದನ್ಯೋ ನ ಚಾನುವ್ರಜೇತ್॥ ಎಂದು ಬರೆದಿರುತ್ತದೆ. ಅದರಿಂದಾಗಿ ಉತ್ಸವಗಳು ನಿಂತು ಹೋಗುತ್ತವೆ. ರಾಮ ಲಕ್ಷ್ಮಣ ಸೀತೆಯರು ವನಕ್ಕೆ ಅಲ್ಲಿಂದಲೇ ತೆರಳುತ್ತಾರೆ!

'ಅನರ್ಘ ರಾಘವ' ನಾಟಕದ ನಾಲ್ಕನೇ ಅಂಕದಲ್ಲಿ ಮೇಲೆ ಹೇಳಿರುವುದೆಲ್ಲ ಇರುತ್ತದೆ. ಆದರೆ ಇಲ್ಲಿ ಶೂರ್ಪಣಖಿಯಲ್ಲ ಶಬರಿ ಕೈಕೇಯಿಯ ಪತ್ರ (ನಿಜ ವಾದುದಲ್ಲ.)ವನ್ನು ಮಿಥಿಲಾ ಪಟ್ಟಣದಲ್ಲಿ ರಾಮನಿಗೆ ಕೊಡುತ್ತಾಳೆ. ಪರಶು ರಾಮ ವಿಜಯೋತ್ಸವವನ್ನೂ ಜೊತೆಯಲ್ಲೇ ರಾಮ ಪಟ್ಟಾಭಿಷೇಕೋತ್ಸವ ವನ್ನೂ ನೆರವೇರಿಸಬೇಕೆಂದಿದ್ದ ದಶರಾಥ ಮಹಾರಾಜನ ಮನೋಭಿಲಾಷೆ ಕಮರಿ ಹೋಗುತ್ತದೆ. ಏಕೆಂದರೆ ಪತ್ರದಲ್ಲಿ ರಾಮ ಸೀತೆ ಲಕ್ಷ್ಮಣರು ಹದಿನಾಲ್ಕು ವರ್ಷ ವನವಾಸ ಮಾಡಲಿ ಎಂದು ಆಜ್ಞೆ ಇರುತ್ತದೆ :–

ವರ್ಷಾಣಿ ತಿಷ್ಠತು ಚತುರ್ದಶ ದಂಡಕಾಯಾಂ
ಸೌಮಿತ್ರ, ಮೈಥಿಲ ಸುತಾ ಸಹಿತಶ್ಚ ರಾಮಃ ||

ಶಬರಜ್ಜಿ ಯಾವರೋ ಜಾಂಬುವಂತನ ಪ್ರೇರಣೆಯಂತೆ ಈ ಕೆಲಸವನ್ನು ಮಾಡುತ್ತಾಳೆ. ಅದಕ್ಕಾಗಿ ಅವಳು ತನ್ನ 'ಪರ-ಪುರ-ಪ್ರವೇಶ' ವಿದ್ಯೆಯನ್ನು ಪ ಯೋಗಿಸಿಕೊಂಡು ಮಂಥರೆಯ ಶರೀರದಲ್ಲಿ ಹೋಗಿ ಸೇರಿಕೊಳ್ಳುತ್ತಾಳೆ. ಅಂತೂ ರಾಮನನ್ನು ಕಾಡಿಗೆ ಕಳಿಸಿದ ಶ್ರೇಯಸ್ಸು ಮಂಥರೆಗಲ್ಲ ಶಬರಜ್ಜಿಗೆ ಸಲ್ಲತಕ್ಕದ್ದು.

ಸ್ವಾಭಾವಿಕವಾಗಿ ವಾತ್ಸಲ್ಯಮಯಿಯಾಗಿರುವ ಕೈಕೆಯೀದೇವಿಯ ಮನಸ್ಸನ್ನು ತಿದ್ದಿ, ಅಡ್ಡದಾರಿಗೆಳೆದು, ಇಲ್ಲದ ಸವತಿ ಮಾತ್ಸರ್ಯದ ಕಿಚ್ಚು ಹೊತ್ತಿಸಿ, ನಂದನವನದಂತಿದ್ದ ಅಯೋಧ್ಯೆಯನ್ನು ಮಸಣವನ್ನಾಗಿ ಮಾಡಿ, ರಾಜನಿಗೆ ಮೃತ್ಯು, ಕುಮಾರರಿಗೆ ವನವಾಸ ಮತ್ತು ಸನ್ಯಾಸ, ತನ್ನರಸಿಗೆ ವೈಧವ್ಯ, ಇಷ್ಟೆಲ್ಲ ಅನರ್ಥಕ್ಕೆ ಕಾರಣವಾಗುವ ವ್ಯಕ್ತಿ ಎಷ್ಟು ಪ್ರಭಾವ ಹಾಗೂ ಪ್ರತಿಭಾ ಸಂಪನ್ನವಾಗಿರಬೇಕು? ಇದು ಮಾನವ ಬುದ್ಧಿಗೆ ಹೊಳೆಯುತ್ತದೆ. ಆದರೆ ಅಘಟನ ಘಟನಾ ಪಟುವಾದ ಪರಬ್ರಹ್ಮ ಪರಮಾತ್ಮನಾದ ಶ್ರೀರಾಮನು ತೃಣವನ್ನು ಬ್ರಹ್ಮಾಸ್ತ್ರ ಮಾಡಿಕೊಂಡಂತೆ ಯಃಕಶ್ಚಿತ ಒಬ್ಬ ಗೂನಿಯನ್ನು ಇಂಥ ಮಹತ್ಸಾಧನೆಗೆ ಕಾರಣವನ್ನಾಗಿ ಮಾಡಿಕೊಂಡರೆ ಆಶ್ಚರ್ಯವೇನು? ಇದು ತುಲಸೀದಾಸರ ಅಭಿಮತ. ಅವರ ರಾಮಚರಿತ ಮಾನಸದಲ್ಲಿ ಶ್ರೀರಾಮನ ಪ್ರೇರಣೆಯ ಅರಿವಿಲ್ಲದೆಯೆ ದೇವತೆಗಳು ಸಭೆ ಸೇರಿ, ಭೂಭಾರ ಹರಣಕ್ಕಾಗಿ ಅವತರಿಸಿರುವ ಪ್ರಭು ಎಲ್ಲಿ ದಶರಥ ಮಹಾರಾಜನ ಭಕ್ತಿಗೆ ಪರವಶನಾಗಿ ರಾಜ್ಯಭಾರ ಮಾಡುತ್ತಾ ಅಯೋಧ್ಯೆಯಲ್ಲೇ ಕುಳಿತು ಬಿಡುವನೋ ಎಂದು ಯೋಚಿಸಿ ಸರಸ್ವತೀ ದೇವಿಯನ್ನು ಪ್ರಾರ್ಥಿಸಿ, ಅಭಿಷೇಕದಲ್ಲಿ ವಿಘ್ನವನ್ನು ತಂದೊಡ್ಡಲು ಕಳುಹಿಸುತ್ತಾರೆ. ಆ ವಾಗ್ದೇವಿಯಾದರೋ ಅಯೋಧ್ಯೆಗೆ ಬಂದು ಮಂಥರೆಯ ಮನಸ್ಸನ್ನು ತಿದ್ದಿ ಬಿಡುತ್ತಾಳೆ. ಮುಂದೆ ನಡೆಯಬೇಕಾದದ್ದು ನಡೆದು ಹೋಗುತ್ತದೆ. ಸರಸ್ವತಿಯ ಪ್ರೇರಣೆ, ದೇವತೆಗಳ ಷಡ್ಯಂತ್ರ–ಎಲ್ಲಕ್ಕೂ ಮಿಗಿಲಾಗಿ ಪರಮಾತ್ಮನ ಸಂಕಲ್ಪ ರಾಮನ ವನವಾಸಕ್ಕೆ ಕಾರಣವೇ ಹೊರತು ಕೇವಲ ಮಂಥರೆಯಲ್ಲ. ಅವಳು ನಿಮಿತ್ತ ಮಾತ್ರ!

ಕು. ವೆಂ. ಪು. ರವರೂ ಸಹ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಇದೇ ಧೋರಣೆಯನ್ನು ಓದುಗರು ತಾಳಬೇಕೆಂದುಕೊಂಡಿದ್ದಾರೆ. ಅವರ ಕಾವ್ಯ ಪ್ರತಿಮೆಯಂತೆ ಮಂಥರೆ ಮೊದಲಾದವರೆಲ್ಲರೂ ಆ ವಿಧಿವಿಲಾಸಕ್ಕೆ ಕಾರಣ ಮಾತ್ರ, ಏಕೆಂದರೆ

ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ,
ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ,
ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವವಂ

ನೀಡಿ, ಮಂಥರೆ ಸೀತೆ ರಾಮ ರಾವಣರೆಲ್ಲರುಂ
ಸೂತ್ರ ಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?

ಹಾಗಿಲ್ಲದಿದ್ದರೆ 'ರಾಮನೇಂ? ಭರತನೇಂ? ಮಕ್ಕಳಿರ್ವರು ಮೆನ್ನನರ್' ಎಂದು ತನ್ನ 'ಕೊರಳ ಸರಮಂ ತೆಗೆದು ಮಂಥರೆಗೆ ನೀಡ' ಹೋದವಳು, ಅವಳ ಮಾತಿನ ಗಾರುಡಿಗೆ ಸಿಲುಕಿ, ಕಂಗೆಟ್ಟನಗೆ ದಾರಿ ತೋರ್ದ್ದೆಯೌ,

ಓ, ನನ್ನ ಭಾಗ್ಯದೇವತೆ—ಮುಂತಾಗಿ ಹೊಗಳಿ, ಆ ಗೂನಿಯ ವಕ್ರ ಗಾತ್ರವನ್ನು ಬಿಗಿದಪ್ಪಿಕೊಳ್ಳುತ್ತಾಳೆ. ಮುಂದಿನ ಕಥಾ ಭಾಗವು ವಾಲ್ಮೀಕಿಗಳ ನಿರೂಪಣೆಯಂತೆಯೇ ಬರುತ್ತದೆ. ಕು. ವೆಂ. ಪು. ರವರು ಮಂಥರೆಯನ್ನು ವಿಧಿಯ ಕರಣವೆಂದು ಹೇಳಿ ಕೈ ಬಿಡದೆ ರಸದೃಷ್ಟಿಯಿಂದ ಆ ಪಾತ್ರವನ್ನು ವಿಮರ್ಶಿಸಿ ಒಂದು ಮುತ್ತಿನಂತಹ ಮಾತನ್ನು ಹೇಳಿದ್ದಾರೆ. ಮಂಥರೆಯ ನಡತೆ ಎಂಥವರಿಗೂ ತಾತ್ಕಾಲಿಕವಾಗಿ ಬೇಸರವನ್ನುಂಟು ಮಾಡುತ್ತದೆ; ರಸಾಭಾಸಕ್ಕೆ ಕಾರಣಳಾದ ಆಕೆಯ ಬಗ್ಗೆ ಕೋಪ ಕೆರಳುತ್ತದೆ. ಆದರೆ ಕು. ವೆಂ. ಪು. ರವರು ಆ ಚಿರ ತಿರಸ್ಕೃತೆಯನ್ನು ನೋಡುವ ದೃಷ್ಟಿಯನ್ನು ತೆರೆದಿಟ್ಟಿದ್ದಾರೆ. ಅವಳ ಮಹತ್ವವೆಷ್ಟೆಂಬುದನ್ನು ಕವಿಗಳು ರೂಪಕ ಒಂದರಲ್ಲಿ ಸ್ಫುಟವಾಗಿ ಹೇಳಿರುತ್ತಾರೆ:—

"....ಮೂಡುತಿರ್ಪವೆ ಮಹಾರತ್ನಗಳ್, ಪೇಳ್,
ಮಥಿಸದಿರೆ ಮಂಥರೆಯ ವಾಸುಕಿ ಮಹಾಮಮತೆ ತಾಂ
ಕೈಕೆ ಮಂದರದಿಂದಮಾ ತ್ರೇತಾ ಸಮುದ್ರಮಂ||"

ಸಮುದ್ರ ಮಂಥನವಾದಾಗ ಮೊದಲು ಬಂದ ವಿಷದಂತೆ ಇಲ್ಲಿಯೂ ಕಷ್ಟ ಕೋಟಲೆಗಳು ತೋರಿದವು; ನಿಜ. ಕಡೆಯಲ್ಲಿ ಮೃತ್ಯು ಎಂದಿದ್ದರೂ ಬರುತ್ತಿತ್ತು; ಆದರೆ ದಶರಥ ಮಹಾರಾಜನ ವಾತ್ಸಲ್ಯ ರತ್ನವನ್ನು ಹೊರಗೆಡಹಿತು ಈ ತ್ರೇತಾ ಶರಧಿ ಮಥನ. ರಾಮಲಕ್ಷ್ಮಣ ಭರತ ಶತ್ರುಘ್ನರ ಭ್ರಾತೃ ಪ್ರೇಮಕ್ಕೆ ಮಾಲಿನ್ಯ ತಟ್ಟಿದಂತೆ ತಾತ್ಕಾಲಿಕವಾಗಿ ತೋರಿತು ನಿಜ, ಆದರೆ ಭರತನ ತ್ಯಾಗ, ರಾಮನ ಶೀಲ, ಲಕ್ಷ್ಮಣನ ಭ್ರಾತೃಭಕ್ತಿ, ಇವು ಎಲ್ಲಿ ಅಭಿವ್ಯಕ್ತಿಗೊಳ್ಳಬೇಕಿತ್ತು? ಇದರಂತೆ ಕೌಸಲ್ಯೆಯ ವಿವೇಕ, ಸುಮಿತ್ರೆಯ ಸಹಿಷ್ಣುತೆ, ಊರ್ಮಿಳಾದೇವಿಯ ತ್ಯಾಗ ಪ್ರೋಷಿತ ಸತೀ ಧರ್ಮ, ಇಷ್ಟೆಲ್ಲ ಎಲ್ಲಿ ಹೊರಬರಲು ಸಾಧ್ಯವಿತ್ತು!

ಇಷ್ಟಾದರೂ ಮಂಥರೆಯ ವರ್ತನೆಗೊಂದು ಬುದ್ಧಿ ಗ್ರಾಹ್ಯ ಹೊರ ಆವರಣವು ಬೇಡವೇ ಎನ್ನಿಸುತ್ತದೆ? ಆದಿ ಕವಿಯು ಈ ದಿಶೆಯಲ್ಲಿ ಏನೊಂದು ವಿವರವನ್ನು ಕೊಡದೆ ಅವಳು ಕೈಕೇಯಿಯ 'ಹಿತೈಷಿಣೀ' ಎಂದಿಷ್ಟು ಮಾತ್ರ ಸೂಚಿಸಿದ್ದಾರೆ. ಮದುವೆಯಾದಾಗ ತೌರು ಮನೆಯಿಂದ ಅಯೋಧ್ಯೆಗೆ ಹೊರಟು ಬರುವಾಗ ಜೊತೆಯಲ್ಲೇ ಬಂದ ತೊತ್ತೆಂಬುದೂ ತಿಳಿದು ಬರುತ್ತದೆ. ಇಷ್ಟು

ಪಾತ್ರದಿಂದಲೇ ಮಂಥರೆಯು ಏತಕ್ಕಾಗಿ ರಾಮನ ಮೇಲೆ ದ್ವೇಷಾಗ್ನಿಯನ್ನು ಕಾರಿದಳೆಂಬುದು ಬುದ್ಧಿಗೆ ನಿಲುಕದ ಮಾತಾಗಿ ಉಳಿಯುತ್ತದೆ.

ಆದರೆ ಕು. ವೆಂ. ಪು. ರವರು ಈ ಸಂಕೇತಗಳನ್ನು ತಮ್ಮ ಪ್ರತಿಭಾ ಪಟಲದ ಮೇಲೆ ಚಿತ್ರಿಸಿಕೊಂಡಾಗ ಅವರಿಗೆ ಒಂದು ಬುದ್ಧಿ ಗ್ರಾಹ್ಯವಾದ ಜೀವನವೇ ತೋರಿ ಬಂದಿತು. ಅದನ್ನು 'ಮಮತೆಯ ಸುಳಿ' ದಯಾಲಕ್ಷ್ಮಿ ಎಂದು ತೋರಿಸಿದರು. ಮಂಥರೆಯ ಶೈಶವ ಮೊದಲ್ಗೊಂಡು, ಮರಣ ಪರ್ಯಂತ ಅವಳ ಜೀವನ ವೃತ್ತಾಂತವನ್ನು ಕೊಟ್ಟರು. ತನ್ಮೂಲಕ ಯುಗದ ಸಮಸ್ಯೆಗೊಂದು ರೂಪ ಕೊಟ್ಟರು.

ಬೇಟೆಗೆ ಹೋದ ಕೇಕಯ ರಾಜನಿಗೆ ಕಾಡಿನಲ್ಲಿ ಸಿಕ್ಕಿತು ಒಂದು ದಸ್ಯು ಶಿಶು: ವಿಕಾರವೇ ರೂಪುಗೊಂಡಂತಿದ್ದ ಆ ಶಿಶುವನ್ನು ಇರುವೆಗಳು ಮುತ್ತಿಕೊಂಡಿದ್ದವು. ಆ ದೃಶ್ಯವನ್ನು ಕಂಡು ಪ್ರಾಣಿದಯಾ ಭಾವದಿಂದ ಕರಗಿ, ಆ ಶಿಶುವನ್ನೆತ್ತಿಕೊಂಡು ಅರಮನೆಗೆ ಬಂದು ಸಾಕಿ ಸಲಹಿದನು. ಆ ಶಿಶು ಕೂಸಾಗಿ ಬೆಳೆಯಿತು—

....ಕೂಸು ಕುಳ್ಳಾಗಿ, ಗೂನಾಗಿ, ತೊತ್ತಾಗಿ, ಕರ್ರಗೆ, ಜನರ ಕಣ್ಗೆ ಹೇಸಿನಾಕೃತಿಯಾಗಿ.......' ಬೆಳೆಯಿತು. ಇನ್ನೂ ಕೊಂಚ ದೊಡ್ಡವಳಾದ ಮೇಲೆ ಅರಮನೆಯ ಜನ '....ಥೂ ಎಂದು, ಸಾಯೆಂದು, ನಾಯ್ಮರಿಗೆ ಕಡೆಯಾಗಿ, ಕಂಡಿತು. ಅವಳ ಮೊಗಕೆ ಕೆಸರ ನಿಡುವಂತೆ ಆಕೆಗೆ ಮಂಥರೆ ಎಂದು ಹೆಸರನ್ನಿಟ್ಟರು. ಒಟ್ಟಿನಲ್ಲಿ ದೇಹದ ಸೋಂಕಿಲ್ಲದೆ ಬೆಳೆದ ಆಕೆಗೆ ತನ್ನ ಸುತ್ತಮುತ್ತಣ ಸಮಾಜ ನಿಷ್ಠುರ, ನಿಷ್ಕರುಣಿ ಎಂದು ತೋರಿತು. ಸಮಾಜವು ಅವಳೊಡನೆ ನಡೆದುಕೊಂಡ ಬಗೆಯಿಂದ ಅವಳ ಮನಸ್ಸಿನಲ್ಲಿ ದ್ವೇಷಾಸೂಯೆಗಳು ಮನೆಮಾಡುವಂತಾಯಿತು. ಆಕೆ ದೊಡ್ಡವಳಾದಳು. ಪ್ರೀತಿಯನ್ನು ಪಡೆಯಲು, ತಾನೂ ಸಹ ಪ್ರೀತಿ ತೋರಿ ಸಂತೃಪ್ತಿಗೊಳ್ಳಲು ಹೃದಯ ಹಾತೊರೆಯುತ್ತಿತ್ತು? ಆದರೆ ಯಾರನ್ನು ಪ್ರೀತಿಸಬೇಕು? ಯಾರಿಂದ ಪ್ರೀತಿ ದೊರೆತೀತು? ಈಕೆಗೆ ರಸವಿಲ್ಲದಿಹ ಬಾಳ್ಗೆ ಅರಮನೆಯೆ ಮರು ಭೂಮಿಯಾಗಿ ತೋರುತ್ತಿತ್ತು. ಇದು ರಾಜನಿಗೂ ಗೊತ್ತಿತ್ತು. ಇಡೀ ಸಮಾಜವೆ ಹೀಗಿರುವಾಗ ಅವನೊಬ್ಬನು ಏನು ತಾನೆ ಮಾಡಲು ಸಾಧ್ಯವಿತ್ತು? ದೈವಾನುಗ್ರಹದಿಂದ ಆಕೆಗೋಸ್ಕರವೋ ಎಂಬಂತೆ ಕೈಕೆ ಹುಟ್ಟಿದಳು. ಆ ಶಿಶುವನ್ನು ಆಡಿಸಿ ಕೊಂಡಿರಲು ಮಂಥರೆಯನ್ನು ನೇಮಿಸಿದನು. ಹೀಗಾದರೂ ಆಕೆಗೆ ಮನಶ್ಶಾಂತಿ ದೊರೆಯಲೆಂಬುದು ಅವನ ಆಸೆ, ಅದು ಈಡೇರಿತು. 'ಮುಳಿ ಹೊಯ್ದು ತೆರವಾಯ್ತು ಮಂಥರೆಯ ಮರು ಧರೆಗೆ. ಅವಳಿಗೆ ಬದುಕು ಸಾರ್ಥಕವೆನಿಸಿತು. ಜನರು ಅದುವರೆಗೂ ಅವಳಿಗೆ ಮಾಡಿದ ತಿರಸ್ಕಾರ

ಅವಮಾನ, ಅನ್ಯಾಯ ಎಲ್ಲವನ್ನೂ ಆ ಜನಾಧಿಪನು ತೋರಿದ ಔದಾರ್ಯಕ್ಕೆ ಮನಸೋತು ಮರೆತಳು. ರೂಪವಿಹೀನೆಯಾದವರೂ ರೂಪಸಿಯಾದ ಕೈಕೆಯ ಜೊತೆಯಲ್ಲಿದ್ದು ತನಗಿಲ್ಲದಾ ಚೆಲ್ವಿನಲಿ ಜೋಲಾಡಿದಳು.

ಆದರೆ ಆ ಚೆಲುವೆಗೆ ಮದುವೆಯಾಯಿತು. ಆಗ ಮಂಥರೆಯೂ ಅವಳೊಡನೆ ಅಯೋಧ್ಯೆಗೆ ಬಂದಳು. ಅಷ್ಟು ಹೊತ್ತಿಗೆ ಅವಳ ದೇಹ ಮುದಿಯಾಗಿತ್ತು. ಅವ ಳನ್ನು ಕಂಡೊಡನೆ ಊರ ಮಂದಿ ಕಪಿಸಿತು. ಅರಮನೆಯ ತೊತ್ತುಗಳು ತೆಗಳಿ ದೂಕಿದರು. ಕೌಸಲ್ಯೆ ಸುಮಿತ್ರೆ ಯಾರೂ ಸಹ ಅದನ್ನೊಂದು ಅನಿಷ್ಟವೆಂದು ಭಾವಿಸುತ್ತಿದ್ದರು. ಇವನ್ನೆಲ್ಲ ಸಹಿಸದೆ ಗತ್ಯಂತರವಿರಲಿಲ್ಲ. ಆದರೆ ಮತ್ತೊಮ್ಮೆ ಅವಳ ಸುಪ್ತವಾದ ಪ್ರೇಮವನ್ನು ಕೆರಳಿಸುವ ಸನ್ನಿವೇಶ ಬಂತು. ಕೈಕೆ ಭರತ ನನ್ನು ಪಡೆದಳು ಆಗ ಮಂಥರೆಗೆ ಮೂರನೆಯ ಕಣ್ಮೂಡಿದಂತಾಯ್ತು. ಹಗಲಿ ರುಳ್ ಕೈಕೆಯ ತನೂಜನಂ ಸಲಹಿದಳು.

ಈ ಹಿನ್ನೆಲೆಯಲ್ಲಿ ನೋಡಿದಾಗ ಅವಳು ನಡೆದು ಕೊಂಡ ರೀತಿ ಅರ್ಥವಾಗು ತ್ತದೆ. ಆಗ ಅವಳ ಪಾಲಿಗಂತೂ

> "...ನರರನ್ಯರಿಲ್ಲಾಯ್ತು ಮಂಥರೆಯಲೋಕಕ್ಕೆ,
> ಕೈಕೆ ಭರತರ್ವಿನಾ. ದಶರಥಂ
> ಕೈಕೆ ಭರತರ್ಗಾಗಿ ಕೋಸಲಮಯೋಧ್ಯೆಗಳ್........"

ಇದರಿಂದ ಮಂಥರೆಯು ಭರತನಿಗೆ ರಾಜ್ಯವನ್ನೇಕೆ ಕೇಳಲು ಹುರಿದುಂಬ ಸಿದಳೆಂಬುದು ಸ್ಪಷ್ಟವಾಗುತ್ತದೆ. ಆದರೆ ತನ್ನವರ ಹಿರಿಮೆಗಾಗಿ ಅನ್ಯರಿಗೆ ಕೇಡ ಬಯಸುವುದು ಸರಿಯೆ? ಇದು ದುಷ್ಟ ರಾಕ್ಷಸೀ ಸ್ವಭಾವವಲ್ಲವೆ? ಅಕಾರಣವಾಗಿ ಕೌಸಲ್ಯೆ ಸುಮಿತ್ರೆಯರಿಗೂ, ರಾಮಲಕ್ಷ್ಮಣ ಸೀತೆಯರಿಗೂ ತಂದೊಡ್ಡಿದ ಈ ವಿಪತ್ಪರಂಪರೆ ಯಾವ ಸೇಡಿಗಾಗಿ ಎಂದು ಮನಸ್ಸು ಶಂಕಿಸುತ್ತದೆ.

ಇದಕ್ಕೆ ಉತ್ತರ ಕು. ವೆಂ. ಪು. ರವರ ಇನ್ನೊಂದು ಘಟನೆಯ ವರ್ಣನೆ ಯಲ್ಲಡಗಿದೆ. ಇದಕ್ಕೆ ಆದಿ ಕವಿಯ ಕಾವ್ಯದಲ್ಲಿ ಏನೊಂದೂ ಆಧಾರವಿಲ್ಲ. ಆದ ರೇನು ಕು. ವೆಂ. ಪು. ರವರು ಅದಕ್ಕೆ ಮನವೊಪ್ಪುವ ಒಂದು ಸನ್ನಿವೇಶವನ್ನು ಚಿತ್ರಿಸಿದ್ದಾರೆ.

ಒಮ್ಮೆ ಶಿಶುರಾಮ ರೋದಿಸಲಾರಂಭಿಸಿದ. ಅವನ ಅಳುವನ್ನು ಕೇಳಿ ದಶ ರಥ ಮಹಾರಾಜನೂ ಸಹ ಓಡಿ ಬಂದನು. ಅತ್ತು ಅತ್ತು ಮಗುವಿನ ಕಣ್ಣು ಕೆಂಪಾಗಿ ಹೋಗಿದೆ. ಏನು ಮಾಡಿದರೂ ಸಂತೈಸಲಾಗಿಲ್ಲ. ಬಾನಿನಲ್ಲಿ ಜೇ ಯುತ್ತಿದ್ದ ಹುಣ್ಣಿಮೆಯ ಪೂರ್ಣ ಚಂದ್ರನನ್ನು ತಂದು ತನಗೆ ಕೊಡಬೇಕೆಂಬ ಹಂಬಿ. ಆಗ 'ಮರುಗಿದನು ಮಗನಾಸೆ ತನ್ನ ಬಲ್ಮೆಗೆ ಮೀರಿ ಕೈಗೂಡಲಸವಳ ವಲಾ.......' ಎಂದು ತನ್ನ ಐಶ್ವರ್ಯವೆಲ್ಲ ವ್ಯರ್ಥವಾಯಿತು. ಒಂದು ಕಂದನ

ಕ್ರಂದನವನ್ನು ನಿಲ್ಲಿಸಲಾರದೆ ಹೋಯಿತು ಎಂದು ಕೊಳ್ಳುತ್ತಾ ಕೌಸಲ್ಯೆಯು ಕೈಯಿಂದ ಕಂದನನೆತ್ತಿಕೊಂಡು ಜಿಂಕೆ ಮುಂತಾದ ನಾನಾ ವಸ್ತುಗಳನ್ನು ತೋರಿಸಿ ಮನ ಒಲಿಸ ಹೋದರೂ ಮಗುವು ಶಾಂತವಾಗದಿರಲು ಎಲ್ಲರೂ ಕಂಗೆಟ್ಟು ಕುಳಿತಿರುವ ಸಂದರ್ಭ, ಅಲ್ಲಿಗೆ ಭರತನನ್ನೆತ್ತಿಕೊಂಡು ಮಂಥರೆ ಬಂದಳು. ಕೈಕೆಯಿಯನ್ನುಳಿದು ಮಿಕ್ಕವರ ಕಣ್ಣಿಗೆ ಅವಳು ಅಮಂಗಳ ಮೂರ್ತಿಯಾಗಿ ತೋರಿದಳು. ಜನ ಮೌನವಾಂತು.

"ಕುಡು ಬಿಲ್ಲು ಬಾಗಿದ ಮೈಯ್ಯ
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ,
ಗೂಳಿ ಹಿಣಿಲಿನವೋಲು ಗೂನುಬ್ಬಿದ ಬೆನ್ನ,
ಸುಕ್ಕು ನಿರಿನಿರಿಯಾಗಿ ಬತ್ತಿದ ತೊವಲ್ ಪತ್ತಿ
ಬಿಗಿದೆಲ್ಬು ಗೂಡಿನಾ ಶಿಥಿಲ ಕಂಕಾಲತೆಯ
ಪಲ್ಲುದುರಿ ಬೋಡಾದ ಬಚ್ಚು ಬಾಯಿಯ, ಕುಳಿಯ
ಕೆನ್ನೆಗಳ ದಿಟ್ಟ ಮಾಸಿದ ಕಣ್ಣ ಕೋಟರದ
ಕರ್ಬನ ಮೊರಡು ಮೊಗದ ಕೂದಲುದುರಿದ ಬೋಳು
ಪುರ್ಬಿನ ವಿಕಾರದಾ ಬೆಳ್ಪಕ್ಕಿ ತಿಪ್ಪುಳನೆ
ಮಂಡೆಯಂ ಮುತ್ತಿ ಕೆದರಿದ ಬೆಳ್ಪನೆಯ ನಿವಿರ
ಅಸ್ಥಿಪಂಜರದಂತೆವೋಲಸ್ಥಿರ-ಸ್ಥವಿರೆಯಂ,
ಕಂಡು ಹೇಸಿ ಮುಖ ತಿರುಗಿಸಿದರು.

ಆದರೆ ಅವಳು ವಾತ್ಸಲ್ಯಮಯಿ ಎಂಬುದನ್ನು ಅರಿಯಲಾರದೆ ಹೋದರು. ಆಕೆ ಬಂದದ್ದು ರಾಮನನ್ನು ಸಂತೈಸಲು. ಜನರ ಸ್ವಭಾವ ಅವಳಿಗರ್ಥವಾಗಿದ್ದು ಜನ ಅವಳನ್ನು ಉಪೇಕ್ಷಿಸುತ್ತಿದ್ದಂತೆ ಜನರ ನಡೆ ನುಡಿಯನ್ನು ಕಂಡರೂ ಕಾಣದಂತೆ, ಕೇಳಿದರೂ ಕೇಳಿಸದಂತಿರುವುದನ್ನು ಆಕೆ ಅರಿತಿದ್ದಳು. ಆದ್ದರಿಂದಲೇ ಅಂತಃಪುರದ ರಾಣಿಯ ತಾತ್ಸಾರವನ್ನು ಲೆಕ್ಕಿಸದೆ ತನ್ನ ಬಳಿಗೆ ಬಂದ ಕೈಕೆಯ ಕಿವಿಯಲ್ಲಿ ಏನೋ ಹೇಳಿ, ಸೆರಗಿನೊಳಗಿಂದ ಕನ್ನಡಿಯನ್ನು ಹೊರ ತೆಗೆದು ಅವಳ ಕೈಗೆ ಕೊಟ್ಟಳು. ಕನ್ನಡಿಯಲ್ಲಿ ಚಂದ್ರನ ಪ್ರತಿಬಿಂಬವನ್ನು ತೋರಲು ರಾಮ ಚಂದ್ರನು ಅಳುವನ್ನು ನಿಲ್ಲಿಸಿ "ಪಡೆದೆನಿಂದುವನೆಂದು ಕುಣಿ ಕುಣಿದು ನಲಿಯ ತೊಡಗಿದನು" ಎಲ್ಲರೂ ಬೆರಗಾದರು. ಸಂತಸಗೊಂಡರು. ತನ್ನ ವಿಕೃತಿಯಲ್ಲಿ ಅಡಗಿಸಿಟ್ಟುಕೊಂಡಿದ್ದ ಆ ವಾತ್ಸಲ್ಯಮಯಿಯ ಮಮತೆ ಸಾರ್ಥಕತೆಯಿಂದ ಪುಲಕಗೊಂಡಿತು. ಮಂಥರೆಗೆ ರಾಮನನ್ನು ಬಿಗಿದಪ್ಪಿಕೊಳ್ಳಬೇಕೆಂದು ಆಸೆಯಾಯ್ತು.

ತನ್ನ ಮಗುವನ್ನು ಸಂತೈಸಿದ ಆ ಮಂಥರೆಗೆ ಕೃತಜ್ಞಳಾಗಿರುವ ಬದಲು ರಾಮನು ತಾಯಿ ಆಕೆಯನ್ನು ತಡೆದು "ಕಂದಂಗನುಂಗಳಂ, ಮುಟ್ಟದಿರ್, ಮುಟ್ಟದಿರ್॥" ಎಂದು ತಡೆಹಿಡಿದಳು. ಮುದಿ ಮಂಥರೆಯ ಮೈತ್ರಿ ಜರ್ಜರಿತವಾಯಿತು. ಒಲ್ಮೆ ಮುರಿಯಿತು. ಭರತನನ್ನು ಬಗಿದಪ್ಪಿ ಕಣ್ಣೀರು ಸುರಿಸುತ್ತ ನಡೆದಳು. ಆದರೆ ಹೆಡೆ ಎತ್ತಿ ಬುಸು ಸುಯ್ವ ಹಾವಿನಂತೆ ಮನದಲ್ಲೇ ರೋಷವನ್ನು ತುಂಬಿಟ್ಟು ಕೊಂಡು.

ರಾಮನ ತಾಯಿಯ ಈ ವರ್ತನೆಯ ಹಿನ್ನೆಲೆಯಲ್ಲಿ ಅವಕಾಶ ಸಿಕ್ಕಾಗ ಮಂಥರೆ ಸೇಡು ತೀರಿಸಿಕೊಂಡುದುದು ಅತಿ ಸಹಜವೆನಿಸುತ್ತದೆ. ಮಂಥರೆಯ ವೈರ ಆನಿಮಿತ್ತವಲ್ಲ. ಬಾಹ್ಯ ರೂಪವನ್ನು ಕಂಡು ಹೇಸಿದವರದು ಎನ್ನದೆ ವಿಧಿಯಲ್ಲ.

ಹೀಗೆ ಮಂಥರೆಯ ಪಾತ್ರ ಪೋಷಣೆಗೆ ಮನಶ್ಶಾಸ್ತ್ರದ ಹಿನ್ನೆಲೆಯನ್ನೊದಗಿಸಿ, ಅದಕ್ಕಾಗಿ ಒಂದೆರಡು ಸಹಜವಾಗಿ ಕಾಣುವ ಘಟನೆಗಳನ್ನು ಕಲ್ಪಿಸಿಕೊಂಡಿರುವ ಕು. ವೆಂ. ಪು. ರವರ ಜಾಣ್ಮೆ ಮೆಚ್ಚತಕ್ಕದ್ದು.

ಆದರೆ ಸಹೃದಯರಿಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಿಳಿಸ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಕವಿವರ್ಯರು ಆಧುನಿಕ ಸಮಸ್ಯೆಯೊಂದಕ್ಕೆ ಉತ್ತರವನ್ನು ಕೊಟ್ಟು ದೇಶವನ್ನು ಎಚ್ಚರಿಸುತ್ತಿದ್ದಾರೆ. ಮಂಥರೆಯಂತೆ ಸಮಾಜದ ತಿರಸ್ಕಾರಕ್ಕೆ ಕಾರಣರಾದ ಜನ ಅವಕಾಶ ಸಿಕ್ಕಾಗ ಪರಮತಾವಲಂಬಿಗಳಾಗಿ ಮಾತ್ರ ದೇಶವನ್ನೇ ಒಡೆದು ಹಂಚಿಕೊಂಡರು! ಇನ್ನೂ ಅವರನ್ನು ಕಡೆಗಣಿಸಿದರೆ! ನಾಗಾಲ್ಯಾಂಡಿನ ಸಮಸ್ಯೆ ಇದೇ ಸ್ವರೂಪದ್ದು ತಾನೆ? ಗುಣ ಶೀಲಗಳನ್ನರಿಯಲು ಯತ್ನಿಸದೆ, ತಮ್ಮ ಕೈ ಮೀರಿದ ಕಾರಣಕ್ಕಾಗಿ ಜನರ ತಿರಸ್ಕಾರಕ್ಕೆ ಕಾರಣರಾದ ವ್ಯಕ್ತಿಗಳು ಎಂದಿದ್ದರೂ ಕುತ್ತು ತಂದಾರೆಂದು ನೆನಪಿನಲ್ಲಿಡಬೇಕು. ಇಲ್ಲಿ ಚಿತ್ರಿತವಾಗಿರುವ ದಶರಥ ಮಹಾರಾಜನ ಪರಿಜನ, ಪುರಜನ. ಅಂತಃಪುರದ ರಾಣಿಯರ ನಡವಳಿಕೆ ಇಂದಿನ ಉಚ್ಚ ವರ್ಗದವರೆನ್ನಿಸಿ ಕೊಂಡವರ ನಡವಳಿಕೆಯನ್ನು ಪ್ರತಿಬಿಂಬಿಸುತ್ತಿದೆ. ಅಂತೂ ಕು. ವೆಂ. ಪು. ರವರು ಇಲ್ಲಿ ದಲಿತೋದ್ಧಾರದ ಸಮಸ್ಯೆಯನ್ನೆತ್ತಿಕೊಂಡು ನಮ್ಮ ನಡವಳಿಕೆ ದೀನದಲಿತರ ಹೃದಯವನ್ನು:ಒಡೆಯುತ್ತಿದೆ–ಮಂಥರೆಯ ಮನಸ್ಸು ಒಡೆದದ್ದು ತ್ರೇತಾಯುಗದಲ್ಲಿ. ಆಗ ನಡೆದ ಅನರ್ಥ ಪರಂಪರೆಯನ್ನು ನೆನೆಯಿರಿ. ಈಗ ದೇಶದ ಜನಸಂಖ್ಯೆಯ ಕಾಲು ಭಾಗಕ್ಕೂ ಹೆಚ್ಚಾಗಿರುವ ಜನರನ್ನು ಕಡೆಗಣಿಸಿ, ಮನ ಮುರಿಯುವಂತೆ ಮಾಡಿದರೆ ಏನೆಲ್ಲಾ ಅನರ್ಥವಾದೀತು!

ಕು. ವೆಂ. ಪು. ರವರು ಇಲ್ಲಿ ದಾರ್ಶನಿಕ ದೃಷ್ಟಿಯನ್ನು ಸ್ಪಷ್ಟ ಪಡಿಸಿದ್ದಾರೆ, ಏನಾಗ ಬೇಕೆಂದು ವಿಧಿ ಸಂಕಲ್ಪ ವಿದೆಯೊ ಅದು ಆಗಿಯೇ ಆಗುತ್ತದೆ. ಚಾ,ಜೂ,

ತಪ್ಪದು. ಈ ಜಗನ್ನಾಟಕ ಹೇಗೆ ನಡೆಯಬೇಕೆಂದು ಆ ಸೂತ್ರಧಾರನಿಂದ ನಿರ್ಧರಿಸಲ್ಪಟ್ಟಿದೆ. ರಾಮಾಯಣ ಲೀಲಾ ನಾಟಕದಲ್ಲಿ ಕೈಕೆ, ಭರತ, ರಾಮ, ಸೀತೆ, ರಾವಣ ಎಲ್ಲರೂ ನಿರ್ವಹಿಸಬೇಕಾದ ಪಾತ್ರ ಸುನಿಶ್ಚಿತ. ಎಲ್ಲರೂ ಸೂತ್ರದ ಗೊಂಬೆಗಳು. ನಿಮಿತ್ತ ಮಾತ್ರರು.

ಪಾತ್ರಂಗಳಂತರಾಳದಿ ತನ್ನ ಸೂತ್ರಂಗಳಂ
ನಡೆಯಿಪ ಅಂತರ್ಯಾಮಿ ಶಕ್ತಿಯ ವಿಲಾಸಿತಮೊ?

ಸಹೃದಯರು ಕು. ವೆಂ. ಪು. ರವರ ಈ ಮಾತನ್ನು ಒಪ್ಪಿಕೊಳ್ಳ ಬೇಕಾಗುತ್ತದೆ.

ರಾಮಾಯಣ ದರ್ಶನದಲ್ಲಿ ವರಯಾಚನೆಯ ದೃಶ್ಯ–ಮಂಥರೆ ಹಾಗೂ ಕೈಕೆಯರ ವರ್ತನೆ, ಮುಂದೆ ನಡೆಯುವುದೆಲ್ಲವೂ ಅತಿ ಸಹಜವಾಗಿ ಬಂದಿದೆ. ಭಾರತ ಕೈಕೆಯರ ಮೇಲಣ ಅಗಾಧ ಪ್ರೇಮ ಅವಳ ನಡೆ ನುಡಿಗೆ ಕಾರಣವಾಯ್ತು. ರಾಮನ ಮೇಲೆ ದ್ವೇಷಾಸೂಯೆಗಳವಳಿಗಿಲ್ಲ. ರಾಮ ಚಿರಕಾಲ ಬಾಳಲೆಂಬುದು ಅವಳ ಹರಕೆ.

ನಿನ್ನ ಭರತನ ಮೇಲಣಕ್ಕರೆಯ ಮಮತೆಯಿಂ
ರಾಮ ವಿದ್ವೇಷದಿಂದಲ್ತು ರಾಮಂ ಬಾಳ್ಗೆ॥

ಇದು ಅವಳ ಹೃದಯದ ತಿರುಳು.

ಅದಕ್ಕೆ ಸಾಕ್ಷಿ ಇಲ್ಲಿದೆ. ತಾನು ದೊರಕಿಸಿಕೊಟ್ಟ ರಾಜ್ಯ ಭರತನಿಗೆ ಬೇಡವಾಯ್ತು. ಅವನು ಮಂಥರೆಯ ನಡೆತಗೆ, ತನ್ನ ತಾಯಿಯ ನಡತೆಗೆ ಹೇಸಿದ. ಜಗದ ತಿರಸ್ಕಾರಕ್ಕೊಳಗಾದ ಮಂಥರೆಯ ಮನ ಆಗ ಎಚ್ಚೆತ್ತಿತು.

ರಾಮನನ್ನು ಅಯೋಧ್ಯೆಗೆ ಮರಳಿಸಲು ಭರತನಿಗಿಂತಲೂ ಮೊದಲು ತಾನೇ ಕಾಡಿಗೆ ಧಾವಿಸುತ್ತಾಳೆ. ಓ ಭರತನಣ್ಣಯ್ಯ! ಓ ರಾಮಯ್ಯ! ಹೇಳೆಲ್ಲಿರುವೆಯಯ್ಯಾ! ಎಂದು ಅರಚುತ್ತ ಏಕೆಂದರೆ ಭರತನಿಗಾಗಿ ಅವಳು ಕೋಸಲ ಅಯೋಧ್ಯೆಗಳನ್ನು ಬಯಸಿದಳು– 'ತನ್ನಾವ ಪುರುಷಾರ್ಥಕಿನ್ನಾವ ಸಂಪದಕೆ ಮೇಣ್ ಸುಖಕೆ ಆ ಗೂಸಿ' ಈ ಕಾರ್ಯವನ್ನು ಮಾಡಿದ್ದು? ಭರತನ ಹಿತವೇ ತನ್ನ ಹಿತವೆಂದು 'ಪರಾರ್ಥತೆಯ ಶುದ್ಧಿಯಲಿ' ಲೋಕ ಮೆಚ್ಚದ ಕೆಲಸ ಮಾಡಿದ್ದಳು ಆದರೆ ಭರತನೇ ಮೆಚ್ಚಲಿಲ್ಲ ಆಗ 'ಭರತನಕ್ಕರೆಯೊಂದೆ ಸಿರಿಯ ನೆಮ್ಮಾಗಿರ್ದ' ಕುಬ್ಜೆಯಾತ್ಮ ಪುಡಿ ಪುಡಿಯಾಯ್ತು. ಆಗ ಅವಳು ತನ್ನ ನಿಲುವನ್ನೇ ಬದಲಾಯಿಸಿದಳು....

........ಮತ್ತೆ ರಾಮನಂ
ಮನೆಗೆ ಕರೆತಂದೆನಾದೊಡೆ ಕಂದ ಭರತಂಗೆ
ಮುದವಪ್ಪುದಂತೆಯೆ ಕೈಕೆಗುತ್ಸವಂ........ಎಂದು
ಪುಣ್ಯದನ್ವೇಷಣೆಗೆ ಪ್ರೋಪ ಪಾಪದ ತೆರದಿ
ಪೊರಮಟ್ಟಳರಮನೆಯುನು.

ಹಾಗೆ ಧಾವಿಸಿ ಕಾಡಿಗೆ ಹೋದಾಗ ಅವಳಿಗೆ ಪ್ರಜ್ಞೆಯೇ ಇಲ್ಲ. ತಾನು ಹೋಗುವುದೆಲ್ಲಿಗೆ, ಅಲ್ಲಿ ಹೋದರೆ ಇಷ್ಟಾರ್ಥವಿಡೇರುವುದೇ ಎಂಬ ಪ್ರಜ್ಞೆ ಇಲ್ಲ. ಆದರೆ ಆ ದಣಿದ ದೇಹ ಸಾಗಿತ್ತು ರಾಮನನ್ನರಿಸಿ-ಅಲ್ಲ-ಭರತನಣ್ಣಯ್ಯನನ್ನರಸಿ: ಆಗ ಮಂಥರೆಯ ಕುರುಡು ಕಣ್ಗೆ ಒಂದೆಡೆ ದಿವ್ಯ ಜ್ಯೋತಿ ಕಾಣಿಸಿತು ಆ ಜ್ಯೋತಿ ರಾಮನೆಂದೇ ಬಗೆದು ಓಡಿದಳು. ಧುಮುಕಿದಳು. ಆದರೆ ಅದು ಧಗಧಗಿಸು ...ದ್ದ ಕಾಡ್ಗಿಚ್ಚು. ಅದು ಮಂಥರೆಯ ದೇಹ ಶ್ರೀಗಂಧಕಾಷ್ಠ ವಕ್ರತೆಗೆ ...ಗುಲಿ ಭಸ್ಮ ಮಾಡಿತು. ಆದರೆ ಶ್ರೀಗಂಧದ ಕಂಪು ಎಲ್ಲೆಡೆಯೂ ಪಸರಿಸಿತು.

ಮಂಥರೆಯ ಈ ಸಾವು ಎಂಥದು! ರಾಮನ ಮೇಲಿನ ಪುತ್ರ ವಾತ್ಸಲ್ಯ ...ಂದ, ಕೊಟ್ಟ ಮಾತಿಗೆ ವಿವಶನಾಗಿ ಕಾಡಿಗೆ ನೂಕಿದೆನಲ್ಲಾ ಎಂಬ ಪಶ್ಚಾತ್ತಾಪದ ...ದಾವಾಗ್ನಿಯಲ್ಲಿ, ಒಂದೆಡೆ ತನ್ನ ಈ ಮರಣಕ್ಕೆ ನೇರ ಕಾರಣವೆಂದು ತೋರುತಿದ್ದ ...ಕೈಕೆಯಲ್ಲಿ ಜಿಗುಪ್ಸೆ ಹೊಂದಿ, ರಾಮನ ತಾಯಿಯನ್ನು ಬರಮಾಡಿಕೊಂಡು, ...ಳೆಯ ಕತೆಗಳನ್ನು ನೆನೆದು ನೆನೆದು ವಿವರಿಸುತ್ತಾ ರಾಮನಿಗಾಗಿ ಹಂಬಲಿಸಿ, ...ರಾಮಧ್ಯಾನದಲ್ಲೇ ದೇಹವನ್ನು ಬಿಟ್ಟ ದಶರಥ ಮಹಾರಾಜನ ಮರಣಕ್ಕೆ ...ಹೋಲಿಸಿ ನೋಡಬೇಕು! ಮಂಥರೆಗೆ ಯಾರ ಮೇಲೂ ದ್ವೇಷವಿಲ್ಲ. ಯಾರ ವರ್ತ...ಯ ಕಪಿ ನೆನಪಿಲ್ಲ. ತಾನು ಮಾಡಿದುದು ಭರತನಿಗಪ್ರಿಯವಾಯಿತೆಂಬುದೊಂದು ...ಶ್ಚಾತ್ತಾಪ. ರಾಮನನ್ನು ಕರೆತಂದು ಭರತನಿಗೆ ಪ್ರಿಯವನ್ನುಂಟುಮಾಡ...ಬೇಕೆಂಬ ಹಂಬಲಿಕೆ. ಭರತನ ಬಗ್ಗೆ ಅವಳ ಹೃದಯ ಹಣತೆಯಲ್ಲಿ ಬೆಳಗಿದ ಸ್ನೇಹ ಜ್ಯೋತಿ, ರಾಮನ ಬಗ್ಗೆಯೂ ಕಾಡ್ಗಿಚ್ಚಾಗಿ ಬೆಳೆದು. ಅದರಲ್ಲಿ ತನ್ನ ಸಕಲ ವಕ್ರ...ಯನ್ನು ಕಳೆದುಕೊಂಡು ಪುಣ್ಯ ಪ್ರಕಾಶದಿಂದ ಸುತ್ತಲ ಕತ್ತಲೆಯನ್ನೂ ...ಾಕಿತು. ಈ ಮರಣ ಪ್ರೇಮಮಯಿ ಮಂಥರೆಗೆ ಬಂದೊದಗಿದ ಸುಖಾವಸಾನ. ...ಶರಥನ ಮರಣಕ್ಕೂ ಮಿಗಿಲಾದುದು!!

ಮರಣೋತ್ತರ ಕಾಲದಲ್ಲಿ ಮಂಥರೆಯ ಆತ್ಮವೇನಾಯಿತು? ಇದು ಪ್ರಸ...ಆತ್ಮದಲ್ಲೂ, ಆತ್ಮನ ಅಮರತ್ವದಲ್ಲೂ ವಿಶ್ವಾಸವಿಟ್ಟಿರುವವರಿಗೇಳುವ ಪ್ರಶ್ನೆ ...ಪ್ರಶ್ನೆಗೆ ಉತ್ತರ ನಾವು ಸಾಹಿತ್ಯದಲ್ಲಿ ಬಹು ಮುಖವಾಗಿ ದೊರೆಯುತ್ತದೆ. ...ಬ್ರಹ್ಮನ ಆಜ್ಞೆಯಂತೆ ರಾಮನ ಕಾರ್ಯದಲ್ಲಿ ಸಹಾಯ ಮಾಡಲು ದುಂದುಭಿ ...ಂಬ ಗಂಧರ್ವೆ ಮಂಥರೆಯಾಗಿ ಹುಟ್ಟಿದ್ದಳು. ಪದ್ಮ ಪುರಾಣದ ಪಾತಾಲ ಖಂಡ

ದಲ್ಲಿ ಈ ಉಲ್ಲೇಖವಿದೆ. ಮಹಾಭಾರತದ ರಾಮೋಪಾಖ್ಯಾನದಲ್ಲಿ ಇದು ಬರುತ್ತದೆ. ಇನ್ನೂ ಹಲವು ಕೆಲವು ರಾಮಾಯಣಗಳಲ್ಲಿ ಈ ಮಾತಿದೆ. ಕನ್ನಡದ ತೊರವೆ ರಾಮಾಯಣದಲ್ಲಿ ಆಕೆಯು ಸಾಕ್ಷಾತ್ ವಿಷ್ಣು ಮಾಯೆ ಎನ್ನಲಾಗಿದೆ. ಇದರಿಂದಲೇ ಅವಳು ಮರಣೋತ್ತರದಲ್ಲಿ ಏನಾದಳೆಂದು ತಿಳಿಯಬಹುದು, ತಮ್ಮ ಪೂರ್ವ ಸ್ಥಿತಿಯನ್ನು ಪಡೆದರು. ಆದರೆ ಸರಸ್ವತಿಯ ಆವೇಶಕ್ಕೊಳಪಟ್ಟೋ ಅಥವಾ ಸ್ವಭಾವತಃ ದುಷ್ಟೆಯಾದುದರಿಂದಲೇ ರಾಮ ಪಟ್ಟಾಭಿಷೇಕಕ್ಕೆ ವಿಘ್ನವನ್ನು ತಂದೊಡ್ಡಿದ್ದಕೆ ಅವಳ ಗತಿ ಏನಾಯಿತು? ಆದಕ್ಕೆ ಜನಮನದಲ್ಲಿ ಈಗಿನವರೆಗೆ ವ್ಯಾಪ್ತವಾಗಿರುವ ದುರ್ಭಾವನೆಯೇ ಸಾಕ್ಷಿ ಅಂದರೆ ತಿರಸ್ಕೃತೆಯಾಗಿ ಬಹಿಷ್ಕೃತೆಯಾಗಿ, ಕುಖ್ಯಾತಳಾಗಿದ್ದಾಳೆ. ಅವಳ ಬಗ್ಗೆ ಹೇಳಲೇನಿದೆ ಎಂಬ ಉಪೇಕ್ಷೆಯಿಂದ ಆದಿ ಕವಿ ಮೌನವಾಂತಿರಬೇಕೆನ್ನಿಸುತ್ತದೆ.

ಆದರೆ ದೀನದಲಿತರ ಬಗ್ಗೆ ದಯಾರ್ದ್ರರಾದ ಕುವೆಂಪುರವರು ಗೀತಾದರ್ಶನದಂತೆ ಸಾವಿಗೆ ಮುನ್ನ ಇರುವ ಭಾವಕ್ಕನುಸರಿಸಿ ಮುಂದಿನ ಜೀವನವೂ ಇರುವುದೆಂದು ತೋರಿಸಿ, ಚಿರ ತಿರಸ್ಕೃತೆಯು ಆತ್ಮದ ಸಿಲುವಿನಲ್ಲಿ ದೇವಿಯಾಗಿದ್ದಳೆಂದೂ, ದಯಾಲಕ್ಷ್ಮಿಯಾಗಿದ್ದಳೆಂದೂ ವರ್ಣಿಸಿದ್ದಾರೆ. ಸಾಯುವಾಗ ಏನು ಬಂತು, ಜೀವನವಿಡೀ ಅವಳ ಬಾಳ ಊರು ಗೋಲು ಭರತನ ಪ್ರೇಮ ಭರತನಿಗಾಗಿ ರಾಮನ ಮೇಲೆ ಪ್ರೇಮ. ಆದ್ದರಿಂದ ಆತ್ಮ ಸ್ವರೂಪಳಾಗಿ, ನಿಂತಾಗಲೂ ಆಕೆ ಭರತನಿಗಾಗಿ ರಾಮನ ರಕ್ಷೆಯಾಗಿ, ಭರತನ ರಕ್ಷಣೆಗಾಗಿ ತವಕಿಸುತ್ತಿದ್ದುದು ತೋರುತ್ತದೆ. ರಾಮನ ವಾರ್ತೆ ತಿಳಿಯಲಾರದ ಭರತ ನಿರಾಶನಾಗಿ ಅಗ್ನಿ ಪ್ರವೇಶ ಮಾಡಲುದ್ಯುಕ್ತನಾದಾಗ ಸೂಕ್ಷ್ಮ ತನುರೂಪಿಯಾಗಿ ಬಂದು 'ಅಮರ ಸುಂದರ' ಸೂಕ್ಷ್ಮತೇಜದ ಸುರಾಂಗನಾ ಮೂರ್ತಿಯಾಗಿ ಭರತನಿಗೆ ಗೋಚರವಾಗಿ,

'....ಕಂದ ನಿನ್ನಗ್ರಜಂ
ಇಂದೊ ನಾಳೆಯೊ ದಿಟಂ ಪಿಂತಿರುಗಿ ಬಂದಪನ್
ಮಾಣ್ ಮನದ ತರಿಸಲ್ಕೆಯಂ"

ಎಂದು ಭರತನನ್ನು ತಡೆಗಟ್ಟಲು ಗುರುತಿಸಲಾಗದೆ ಭರತ ಕೇಳುತ್ತಾನೆ 'ದೇವಿ ನೀನಾರ್' ಎಂದು ಅದಕ್ಕೆ ಉತ್ತರ

“.......ಮತ್ತಾರ್
ಸದಾ ನಿನ್ನ ಸುಕ್ಷೇಮ ಚಿಂತನೆಯೊಳಿರ್ಪರಾ
ಮಂಥರೆ ವಿನಾ”

ಎಂದಾಗಲೂ ಸಹ ಭರತನಿಗೆ ನಂಬುಗೆ ಬರದೆ ಆ ಹೆಸರನ್ನು–ಮಂಥರೆಯ ಹೆಸರನ್ನು ನೀನೇಕೆ ಹೇಳುತ್ತೀ ಪೂಜ್ಯೆ ಎಂದಾಗ ಆ ಮೂರ್ತಿ ದರ್ಶನ ದೃಷ್ಟಿ

ಯನ್ನು ತೆರೆಸುತ್ತದೆ. ಎಲ್ಲ ತನುಗಳಲ್ಲಿದ್ದು ಲೀಲೆ ಮಾಡುವ ಆ ಅಂತರಾತ್ಮನ ಲೀಲೆ ಎಲ್ಲವು ಎಂದೆನಿಸಿ 'ನಿತ್ಯ ಕಾರಣಳಲ್ತು; ಬರಿ ಕರಣವಾ ಕುಬ್ಜೆ' ಎಂಬ ಸತ್ಯಸ್ಯ ಸತ್ಯ ಕಥನದಿಂದ ವಿಶ್ವಾಸ ಮೂಡುವಂತಾಗುತ್ತದೆ. ಈ ಬಗೆಯಲ್ಲಿ ಕು. ವೆಂ. ಪು. ರವರು ರಾಮ ಸಾಹಿತ್ಯದಲ್ಲಿದ್ದ ಕೊರತೆಯನ್ನು ನೀಗಲು ಒಂದು ವಿನೂತನ, ಬುದ್ಧಿ ಸಂಗತ, ಆತ್ಮ ಸೌಂದರ್ಯ ಸಂಪನ್ನ ಉಜ್ವಲ ಹಾಗೂ ಯುಗದ ಮನುಷ್ಯೆಯ ಪ್ರತಿಮೆಯಂತಿರುವ ಕಲಾ ಕೃತಿಯನ್ನು ನಿರ್ಮಿಸಿದ್ದಾರೆ. ಮಂಥರೆಯ ಮಮತೆಯ ಸುಳಿಯನ್ನೂ, ತನ್ಮೂಲಕ ಅವಳು ಸಾಧಿಸಿದ ಮಹತ್ಸಿದ್ಧಿಯನ್ನೂ ಆಗ ಅವಳ ವ್ಯಕ್ತಿತ್ವದಲ್ಲಿ ಹೊರ ಚಿಮ್ಮಿದ ದಯಾಲಕ್ಷ್ಮಿ ಹಾಗೂ ಪುಣ್ಯ ಲಕ್ಷ್ಮಿಯ ರೂಪಗಳನ್ನು ತೋರಿಸಿ, ಮಹತ್ಕೃತಿಗೆ ಒಪ್ಪುವ ಮಹಾ ವ್ಯಕ್ತಿಯಾಗಿ ಮಂಥರೆಯನ್ನು ಚಿತ್ರಿಸಿದ್ದಾರೆ.

ತರುಣರಿರ, ಎದ್ದೇಳಿ !

ಹೋಗುತಿದೆ ಹಳೆಕಾಲ, ಹೊಸಕಾಲ ಬರುತಲಿದೆ,
ಬರುತಲಿದೆ ಹೊಸಸೃಷ್ಟಿ ಹೊಸ ಬಯಕೆಗಳಲಿ.
ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ,
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ.
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ !
ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ;
ಉದುರುತಿವೆ ಮುದಿಕಡ್ಡಿ ತರಗು ಹಣ್ಣೆಲೆಗಳೆಲ್ಲ,
ನಲಿಯುತಿವೆ ನಳನಳಿಸಿ ಹೊಸಚಿಗುರು ಮೂಡಿ
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ ! ನೋಡಿ !
ಮೊನ್ನೆ ಮೊನ್ನೆಯವರೆಗೆ ಪಶ್ಚಿಮದ ಹೊಲಗೇರಿ,
ಇಂದು ನಂದನವಾಗಿ ನಗುತಲಿದೆ ರಷ್ಯಾ.
ಗರ್ಜಿಸಲು ತೊಡಗಿಹುದು ಕೇಸರಂಗಳ ಕೆದರಿ
ಇದುವರೆಗೆ ಮಲಗಿ ನಿದ್ರಿಸುತ್ತಿದ್ದ ಏಷ್ಯಾ.
ತರುಣರಿರ ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ!
ಹಳೆ ಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ.
ವೇದ ಪ್ರಮಾಣತೆಯ ಮರುಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ.
ತರುಣರಿರ ಎದ್ದೇಳಿ! ಎಚ್ಚರಗೊಳ್ಳಿ ! ಬಾಳಿ !

ಕುವೆಂಪು - ಪ್ರಕೃತಿ ಪೂಜೆ

ಶ್ರೀ ಎಂ. ವಿ. ಗುರುಬಸಪ್ಪ ಶೆಟ್ಟಿ

—: :—

ಹೇ ಪ್ರಕೃತಿ, ಎಲ್ಲ ನಿರ್ದೇಶಿಲ್ಲದಾ ಅಲ್ಲಿ ಮೇಣ್
ಸರ್ವನಿರ್ಪಾ ಸರ್ವ ಶೂನ್ಯತಾ ಸಂಪೂರ್ಣದಲಿ
ನಿನ್ನ ಕೃಪೆಯಿಲ್ಲದಿರೆ ಪೇಳ್ ಪುರುಷದರ್ಶನವೆಲ್ಲಿ?

ಮಹಾ ಛಂದಸ್ಸಿನ "ಶ್ರೀರಾಮಾಯಣ ದರ್ಶನ"ದಲ್ಲಿ ಮಹಾ ಕವಿ ಕುವೆಂಪು, ಪ್ರಕೃತಿಯು ಪರಿಪೂರ್ಣತೆಯಲ್ಲಿ ಮಾನವನ ದರ್ಶನ ಮಾಡಿಸಿದ್ದಾರೆ. ಆದಿ ಕವಿ ಪಂಪನಿಂದ ಹಿಡಿದು ಕುವೆಂಪುವರೆಗೂ ಕವಿಯ ಪ್ರಕೃತಿ ಪೂಜೆ ನಿರಂತರ ವಾಗಿ, ಯಥಾವತ್ತಾಗಿ ನಡೆದುಕೊಂಡು ಬಂದಿದೆ. ಪ್ರಕೃತಿಯ ಈ ನಿತ್ಯಪೂಜೆ ಕವಿಗೆ ಮಹಾ ಚೇತನ ಹಾಗೂ ಕವಿಯ ಭಾಗ್ಯ. ಪ್ರಕೃತಿ-ಕವಿಯ ಸಂಬಂಧ, ನೀರು ಮೀನಿನ ಸಂಬಂಧವಿದ್ದಂತೆ. ಪ್ರಕೃತಿಯನ್ನು ಬಿಟ್ಟು ಮಾನವನಿಲ್ಲ; ಮಾನವನಿಲ್ಲದೆ ಪ್ರಕೃತಿ ಇಲ್ಲ ಕವಿಗೆ ಪ್ರಕೃತಿಯೇ ಪ್ರಧಾನವಾದುದು. ಕವಿಯ ಪರಮಾ ನಂದಕ್ಕೆ ಕಾವ್ಯ ರಚನೆಗೆ ನಿತ್ಯಸ್ಫೂರ್ತಿ ಪ್ರಕೃತಿ. ಈ ಪ್ರಕೃತಿ ಸೌಂದರ್ಯಕ್ಕೆ ಮಾರುಹೋಗದ ಪ್ರಕೃತಿ ಪೂಜೆ ಮಾಡದ ಕವಿ ಇಲ್ಲ.

ಆಂಗ್ಲ ಸಾಹಿತ್ಯದ ಅವಲೋಕನ ಮಾಡಿದಾಗ ಆಂಗ್ಲ ಕವಿ ವರ್ಡ್ಸ್‌ವರ್ತನ ಪ್ರಕೃತಿ ಪೂಜೆ ಆತನ ಕಾವ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿರುವಂತೆ ಕನ್ನಡ ಸಾಹಿತ್ಯದಲ್ಲಿ ಶ್ರೀ ಕುವೆಂಪುರವರು ಪ್ರಕೃತಿಯನ್ನು ಕುರಿತು ರಚಿಸಿರುವ ಕಾವ್ಯ ವಾಹಿನಿಯಲ್ಲಿ ಪ್ರಕೃತಿಯ ರಮ್ಯ ದರ್ಶನದ ರಸದೌತಣವನ್ನೇ ಉಣಬಡಿಸಿ ಕನ್ನಡ ಕಾವ್ಯಲೋಕದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ಕುವೆಂಪು ಹುಟ್ಟಿ ಬೆಳೆದದ್ದು ಪ್ರಕೃತಿಯ ಮಧ್ಯದಲ್ಲಿ; ಮಲೆನಾಡಿನಲ್ಲಿ. ನಿಸರ್ಗ ಸೌಂದರ್ಯದ ವರ್ಣನೆ ಕುವೆಂಪುರವರ ಕಾವ್ಯಗಳಲ್ಲಿ ಬಹು ಸೊಗಸಾಗಿ ವರ್ಣಿಸಲ್ಪಟ್ಟಿದೆ. ವರ್ಡ್ಸ್‌ವರ್ತನು ಆಂಗ್ಲ ಸಾಹಿತ್ಯದಲ್ಲಿ ಪ್ರಕೃತಿ ಪೂಜೆ ಮಾಡಿ ದಂತೆ ಕುವೆಂಪು ಕನ್ನಡದಲ್ಲಿ ಪ್ರಕೃತಿ ಪೂಜೆ ಮಾಡಿ ಧನ್ಯರಾಗಿದ್ದಾರೆ.

ಮಲೆನಾಡಿನ ವರ್ಣನೆ ಮಾಡುವಾಗ ಕವಿಯು ಕವಿತರಚನಾ ಶಕ್ತಿ, ಓದುಗನ ಬುದ್ಧಿ ವಿಕಾಸಕ್ಕೆಡೆಮಾಡುವುದು ಮಾತ್ರವಲ್ಲದೆ ಅವನ ಬದುಕಿಗೊಂದು ಮಹಾ ಚೇತನ ನೀಡಿ ಬಾಳ ದಾರಿದೀಪವಾಗಿರುವುದನ್ನು ಕಾಣುತ್ತೇವೆ.

ಮಲೆನಾಡಿನಲ್ಲಿ ಹುಟ್ಟಿದ ಕವಿ ಕುವೆಂಪು ಕರ್ತವ್ಯ ಬಾಹುಳ್ಯದಿಂದ ಬಯಲು ನಾಡಿನಲ್ಲಿದ್ದಾಗ ಪುನಃ ಪುನಃ ಮಲೆನಾಡಿಗೇ ಹೋಗಬೇಕೆಂಬ ಬಯಕೆ ಮೂಡಿ ಬಂದಾಗ ಮಲೆನಾಡಿಗೆ ಮಾರುಹೋದ ಕವಿಯು ಭಾವ ಓದುಗರ ಮನಸ್ಸಿನ ಕರಪೆಯು ಮೇಲೆ ತರಂಗ ತರಂಗಗಳಂತೆ, ತೆರೆತೆರೆಯಾಗಿ ವರ್ಣಿಸಿ ಮಲೆನಾಡಿನ ಮಹಾ ಪ್ರಕೃತಿಯನ್ನು ಓದುಗರಿಗೆ ದರ್ಶನ ಮಾಡಿಸಿರುವುದನ್ನು ಇಲ್ಲಿ ಕಾಣ ಬಹುದು.

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ
ಮಲೆಯನಾಡಿಗೆ, ಮಳೆಯಬೀಡಿಗೆ ಸಿರಿಯ ಚಲುವಿನ ರೂಢಿಗೆ
ಬೇಸರಾಗಿದೆ ಬಯಲು ಸೀಮೆಯ ಬೋಳು ಬಯಲಿನ ಬಾಳಿದು
ಬಿಸಿಲು ಬೇಸಗೆ ಬೀಸುವುರಿ ಸೆಕೆ ತಾಳಲಾರದ ಗೋಳಿದು
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ
ಅಲ್ಲಿ ತೆರೆತೆರೆಯಾದ್ರಿ ಪಂಕ್ತಿಗಳಲ್ಲಿ ಕಾಣದೆ ಹಬ್ಬಿವೆ ;
ನಿಬಿಡ ಕಾನನರಾಜಿ ಗಿಡಗಳನ್ನಪ್ಪಿ ಸುತ್ತಲು ತಬ್ಬಿವೆ
ದೆಸೆಯ ಬಸವನ ಹಿಣಿಲ ಹೋಲಿವೆ; ಮುಗಿಲ ಚುಂಬನಗೈದಿವೆ
ತುಂಗಶೃಂಗಗಳಲ್ಲಿ; ದಿಕ್ತಟದಲ್ಲಿ ಸೊಂಡಿಲನೆಯ್ದಿವೆ !
ಅಲ್ಲಿ ಇವೆ ಕಾಜಾಣ ಕೋಗಿಲೆ, ತೇನ್, ಗಿಳಿ, ಕಾಮಳ್ಳಿಯು ;
ಕಂಪೆಸೆವ ಸೀತಾಳಿ, ಕೇದಗೆ, ಬಕುಳ ಮಲ್ಲಿಗೆ ಬಳ್ಳಿಯು
ನೀಲಬಾನಲಿ ; ಹಸುರು ನೆಲದಲಿ ; ಕಂಗಳೆರಡನೆ ಬಲ್ಲವು ;
ಅಲ್ಲಿ ಸಗ್ಗವೆ ಸೂರೆಹೋಗಿದೆ ; ನಂದನ ನಾಡೆಲ್ಲವು !
ನೆಳಲು ಗತ್ತಲೆ ತೀವಿದಡವಿಯು ಹೊದರು ಹಳುವಿನ ಸರಲಲಿ
ಹುಲಿಯ ಗರ್ಜನೆ, ಹಂದಿಯಾರ್ಭಟ ಕಾಡುಕೋಳಿಯ ಚೀರುಲಿ ;
ದೊಡ್ಡು ಕಡ, ಮಿಗ, ಮುಸಿಯು, ಕೋಡಗ ಎರಳೆ, ಸಾರಗ ಬಕನವು,
ಹಾವು, ಉಡ, ಕಣೆ ಹಂದಿ, ಚಿಪ್ಪಿನ ಹಂದಿ, ಮುಂಗುಸಿ, ಕುರ್ಕವು !
ಅಲ್ಲಿ ಮೊರೆ ಮೊರೆದುರುಳಿ ಬರುತಿಹ ತೊರೆಯ ತೀರದ ಹಸುರಲಿ
ಮೊಲವು ಗರುಕೆಯ ಮೇಯು ಕುಳಿತಿರೆ, ಬಳಿಯ ಪಡಪಿಡಿ ಕೆಸರಲಿ
ಒಂಟಿಕಾಲಲಿ ನಿಂತು ಕುಕ್ಕನಹಕ್ಕಿ ಬೆಳ್ಳಗೆ ಮೆರೆವುದು :
ಆಹ ! ನೆನೆದರೆ ಸಾಕು, ನನ್ನೆದೆಯುಕ್ಕಿ ಮೈಯನೆ ಮರೆವುದು !

ಗಗನದೆತ್ತರಕೆತ್ತಿ ಕಬ್ಬಿನನೆದೆಯುನೆದ್ದಿವೆ ಗಿರಿಗಳು ;
ಗಗನದಾಚೆಗೆ ಬೀಸಿ ಮನವನು ಬಹವು ನೋಡದ ಕರಿಗಳು ;
ತೇಲಿ ಮುಂದಲಿ ನುಗ್ಗಿ ತಿರುತಿರುಗುಬ್ಬಿ ಭೀಮಾಕಾರದಿ
ತಿರೆಗೆ ಬಾನಿಗೆ ನಡುವೆ ಬಂದಪವಡೆಗೆ ನೀಲದ ನೀರಧಿ
ಚೈತ್ರ ಸಂಧ್ಯೆಯ ಮೊಗಕೆ ಮೆತ್ತುತೆ ಮುಗಿಲಕೂದಲ ಮಸಿಯನು
ಮುಡಿಗೆದರಿ, ಸಿಡಿಲೊದರಿ, ಝಳಪಿಸಿ ಮಿಂಚಿನುಜ್ವಲ ಅಸಿಯನು
ಬಾನಕೆರೆಯಿಂ ನುಗಿಬಹ ಮುಂಗಾರ ಕವಿರಕ್ಕಸಿಯನು
ಕಾಣುತುರ್ವತಿ ನಮಿರು ನಿಮಿರುವಳಿಳಿಯ ಹಸುರಿನ ಸಸಿಯನು !
ಮೊದಲ ಹದಮಳೆ ತಿರೆಯ ತೊಯ್ಯಲು ಮಿಂದ ಕಾಫಿಯ ತೋಟವು
ಇಂದ್ರ ನಂದನವಮರ ವೃಂದಕು ಬೆರಗನೀಯುವ ನೋಟವು !
ಬೆಟ್ಟದೊರೆಯು, ಕಣಿವೆ, ತಪ್ಪಲು, ಗಿರಿಯನೆತ್ತಿಯೊಳೆಲ್ಲಿಯು,
ಕಣ್ಣು ಹೋಹೆಡೆಯಲ್ಲಿ ಕಾಫಿಯ ಹೂವು, ಬೆಣ್ಣೆಯು ಬೆಳ್ಳಿಯು !
ಎಲ್ಲಿ ತಿಂಗಳು ಕಾಡುಮಲೆಗಳ ಮೇಲೆ ಹಾಲ್ಮಳೆ ಸುರಿವುದೋ,
ಕವಿಯ ಜಿಹ್ವೆಗೆ ಎಲ್ಲಿ ಜೇನ್ನುಡಿ ತೇನೆ ಜೇನ್ಮಳೆ ಕರೆವುದೋ,
ಎಲ್ಲಿ ಕದ್ದಿಂಗಳಲಿ ತಾರಾಕೋಟಿ ಕಿಡಿ ಕಿಕ್ಕಿರಿವುದೋ,
ಕಾರಿನಿರುಳಲಿ ಮಿಂಚು ಹುಳುಗಳ ಸೇನೆ ಕತ್ತಲೆಗಿರಿವುದೋ !
ಎಲ್ಲಿ ಹಸುರನು ಚಿಮ್ಮಿ ಕಣ್ಣಿಗೆ ಪೈರುಪಚ್ಚೆಯು ಬೆಳೆವುದೋ,
ಎಲ್ಲಿ ಗದ್ದೆಯ ತೋಗು ಪವನನ ಹತಿಗೆ ತೆರೆ ತೆರೆಯೊಲೆವುದೋ,
ಬಂಗಗಣ್ಣಳ ಮಲೆಯ ಹೆಣ್ಣುಗಳ ದಿಟ್ಟಿಯೆಲ್ಲೆದೆ ಸೆಳೆವುದೋ !
ಎಲ್ಲಿ ಕಾಲವು ತೇಲಿ ಸುಖವಲಿ ತಿಳಿಯದಂತೆಯೆ ಕಳೆವುದೋ !

ಇಲ್ಲಿ ಕರು ತಾಯಿಯನ್ನು ಅರಸಿಕೊಂಡು ಹೋಗುವ ಹಂಬಲವನ್ನು ಕವಿ ಹೃದಯ ಬಿತ್ತರಿಸಿದೆ. ಬಯಲು ಸೀಮೆಯ ಬೋಳು ಬಯಲಿನ ಬಾಳು ; ಮತ್ತು ಮಲೆನಾಡಿನ ಒಲುಮೆಯ, ಮಧುರ ಸುಂದರ ಶೈಲವನ ಲಲಿತಾಂಗದ ಬಾಳು ; ಇವೆರಡರ ವ್ಯತ್ಯಾಸ ಕವಿಯ ಸ್ವಾನುಭವದಿಂದ ಪ್ರಕೃತಿಯ ವರ್ಣನೆ ಚಿತ್ರಿಸಲ್ಪಟ್ಟದೆ.

ಸುಂದರ ದಿನ ಸುಂದರ ಇನ ಸುಂದರ ವನ ನೋಡು ಬಾ !
ಎಳೆ ಬಿಸಿಲೊಳು ತಿಳಿಗೊಳದೊಳು ಜಲದಲೆಗಳು ನಲಿನಲಿಯಲು
ನೋಡು ಬಾ ಕೂಡು ಬಾ, ಬೇಗ ಬಾ ಬಾ ! ಬಾ !!

ಎಂದು ಕವಿ ಮಲೆನಾಡಿನ ಪ್ರಕೃತಿ ಸೌಂದರ್ಯದ ವರ್ಣನೆ, ಸುಂದರ ಚಿತ್ರಗಳ ರಸಪಾಕವನ್ನು ಓದುಗರಿಗೆ ಒದಗಿಸಿ. ಪ್ರತಿಯೊಬ್ಬರೂ ಆ ಸೊಬಗಿನ

ಮಲೆನಾಡನ್ನೊಮ್ಮೆ ನೋಡಲೇಬೇಕೆನ್ನಿಸುವಂತೆ ಪ್ರಕೃತಿಯನ್ನು ಬಣ್ಣಿಸಿದ್ದಾರೆ.

ಕುವೆಂಪುರವರು ತಮ್ಮ ಬಾಲ್ಯ ಯೌವನಗಳನ್ನು ಕಳೆದುದು ಮಲೆನಾಡಿನಲ್ಲಿ ಅಲ್ಲಿ ಕಾವ್ಯ ರಚನೆ ಆರಂಭವಾದುದು.

ಮಲೆನಾಡ ಬನಗಳಲ್ಲಿ ಮುಗುದ ಬಾಲ ನಲಿಯುತಿರಲು
ಅರಿಯದಂತೆ ಹೆಜ್ಜೆಯಿಟ್ಟು ಬೆನ್ನಹಿಂದೆ ನೀನು ಬಂದೆ ಕಬ್ಬಿದಂಗಸೆ
ನೀನಂದು ಕನಕ ರಥವನು ತಂದು ಬಾಯೆಂದು
ಕರೆದಂದು ನಾನು ದೂಳಾಡುತಿದ್ದೆ....

ಇಲ್ಲಿ, ಕವಿಯ ಪೂರ್ವಾಶ್ರಮದ ಪರಿಚಯವು ಪ್ರಕೃತಿಯೊಂದಿಗೆ ಮಿಳನವಾಗಿವೆ.

ಅಂದು ನೀ ವನಗಳಲಿ ನುಡಿದ ಪಿಸುಮಾತು
ಇಂದಿಗೂ ಮೊರೆಯುತಿದೆ ಕರ್ಣಗಳಲಿ
ಅಂದು ನೀನಡವಿಗಳಲ್ಲಿತ್ತ ದರ್ಶನವೆ
ಇಂದಿಗೂ ತುಂಬಿಹುದು ನಯನಗಳನು !

ಎಂದು ಕವಿ ಪ್ರಕೃತಿಯ ಮೇಲೆ ತಮ್ಮ ಅವ್ಯಾಜ ಪ್ರೇಮವನ್ನು ವ್ಯಕ್ತಪಡಿಸಿದ್ದಾರೆ.

ಪ್ರಕೃತಿ ಪೂಜೆ ಗೈದ ಕುವೆಂಪು ಹೀಗೆ ಪತಿ ನಿತ್ಯ ನೇಮ ನಿಷ್ಠೆಯಿಂದ ಕನ್ನಡ ಕಾವೇರಿಯ ವರ ಪಡೆದು ಕನ್ನಡ ಸಾರಸ್ವತ ಲೋಕವನ್ನೇ ಬೆಳಗಿದ್ದಾರೆ. ಈ ಮಹಾ ಕವಿಯ ತಪಸ್ಸಿನ ಸಿದ್ಧಿ ಕನಕಾಭಿಷೇಕ ಮಾಡಿಸಿದೆ. ಕನ್ನಡ ರಾಜ್ಯ, ರಾಷ್ಟ್ರಕವಿ ಪ್ರಶಸ್ತಿ ನೀಡಿದೆ. ಈಗ ಜ್ಞಾನಪೀಠದ ವಿಶೇಷ ಪ್ರಶಸ್ತಿ ನಮ್ಮ ನೆಚ್ಚಿನ ಕವಿಪುಂಗವ ಕುವೆಂಪುರವರಿಗೆ ಲಭ್ಯವಾಗಿದೆ. ಈ ಮಹಾ ಕವಿಯನ್ನು ಕರುಣಿಸಿದ ಮಲೆನಾಡು ಧನ್ಯ; ಪಡೆದ ಕನ್ನಡನಾಡು ಧನ್ಯ; ನೋಡುವ ನಾವೆಲ್ಲರೂ ಧನ್ಯ.

ಜಾನಪದ ಸಾಹಿತ್ಯ

ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು, ಮಲ್ಲಾಡಿಹಳ್ಳಿ.

ಯಾವುದೋ ಒಂದು ಶುಭಯೋಗದಲ್ಲಿ ಬಳಕೆಯಲ್ಲಿ ಬಂದ ಕೆಲವು ಶಬ್ಧಗಳು ಎಲ್ಲರ ಮನೆಮಾತಾಗಿ, ನಾಲಿಗೆಯ ನುಡಿಮುತ್ತುಗಳಾಗಿ, ತಮ್ಮದೇ ಆದ ಸ್ಥಾನವನ್ನು ಪಡೆದಿರುತ್ತವೆ. ಅಂತಹಾ ಶಬ್ಧಗಳಲ್ಲಿ 'ಜಾನಪದ ಸಾಹಿತ್ಯ' 'ನವ್ಯ ಸಾಹಿತ್ಯ' 'ಶ್ರೀ ಸಾಮಾನ್ಯ' ಎಂಬ ಶಬ್ಧಗಳನ್ನು ನಾವಿಲ್ಲಿ ಹೆಸರಿಸಬಹುದು.

ಮನುಷ್ಯನ ಸರಳತೆ, ಸಹಜತೆಗಳು ನವನಾಗರಿಕತೆ ಬೆಳೆದ ಹಾಗೆಲ್ಲ, ಮಸುಕಾಗಿ, ಮಂಕಾಗಿ, ಅವುಗಳು ಇರಲೇ ಇಲ್ಲವೇನೋ–ಎನ್ನುವಂತೆ ಮಾಡಿರುವ ಒಂದು ಮಟ್ಟವನ್ನು ನಾವಿಂದು ತಲುಪಿದ್ದೇವೆ. ಇದು ಹೀಗೆಯೇ ಮುಂದುವರಿದಲ್ಲಿ, ನಾವೆತ್ತ ಸಾಗುತ್ತಿದ್ದೇವೆ, ಅಥವಾ ನಾವು ನಾವಾಗಿಯೇ ಉಳಿದಿದ್ದೇವೆಯೆ, ಎಂಬ ಜಿಜ್ಞಾಸೆ ಹುಟ್ಟುವುದು ಸಹಜ. ಹಾಗೆ, ಮನುಷ್ಯ ನವನಾಗರಿಕತೆಯ ನಡುವೆ ದಿಗ್ಭ್ರಮೆಯಿಂದ ತನ್ನನ್ನೇ ತಾನು ಜ್ಞಾಪಿಸಿಕೊಳ್ಳಲು ಹವಣಿಸಿದಾಗ ಅವನ ಕಣ್ಣಿಗೆ ಬಿದ್ದ ಅಮೂಲ್ಯ ರತ್ನವೇ 'ಜಾನಪದ ಸಾಹಿತ್ಯ' ಮಿಕ್ಕೆಲ್ಲ ಭಾಷೆಗಳಲ್ಲಿ ಕಂಡು ಬರುವಂತೆ, ಕನ್ನಡದ ಸಿರಿ ನುಡಿಯಲ್ಲೂ ಈ ಸಾಹಿತ್ಯ ವಿಪುಲವಾಗಿ ಬೆಳೆದಿದೆ.

'ಜಾನಪದ ಸಾಹಿತ್ಯ' ಆತ್ಮಸಂಸ್ಕೃತಿಯ ಪ್ರಧಾನ ಹಂತವಾಗಿರುವುದರಿಂದಲೇ ಇದನ್ನು ಹೊಸದಾಗಿ ಯಾರೂ ಶೋಧಿಸಲಿಲ್ಲ. ಇದು ಮಾನವತೆಯ ಹುಟ್ಟಿನೊಂದಿಗೇ ಹಾಸು ಹೊಕ್ಕಾಗಿ ಬೆಳೆದು ಬಂದ ಅಂಶ. ನಾಗರಿಕತೆಯ ಏರುಪೇರುಗಳಿಗೆ ಇದು ಬಗ್ಗುವುದಿಲ್ಲ; ಜಗ್ಗುವುದಲ್ಲ-ಅದರ ಭಾರದಿಂದ ತಗ್ಗಿದುದೂ ಇಲ್ಲ. ತಾನೇ ತಾನಾಗಿ ಸುರಿಯುವ ಮಳೆಯ ಹನಿಗಳಂತೆ, ಕೆಳಗಿರುವ ನೆಲ ಹಸನಾದರೆ-ಬೆಳೆ; ಕಲ್ಲಾದರೆ ಅಪ್ರಯೋಜಕ. ಜಾನಪದ ಸಾಹಿತ್ಯ ಅಂದೂ ಇತ್ತು; ಇಂದೂ ಇದೆ; ಎಂದೆಂದಿಗೂ ಇದ್ದೇ ಇರುತ್ತದೆ. ಆದರೆ ಮಾನವನ ಮನೋಭೂಮಿ ಫಲವತ್ತಾಗಿದ್ದರೆ ಮಾತ್ರ ಅಲ್ಲಿ ಭಾವನೆಯ ಪೈರು ಬೆಳೆದೀತು. ಬಂಜರಾದರೆ ಅದು ನಿಷ್ಪ್ರಯೋಜಕ.

ಏಕೆಂದರೆ, ಜಾನಪದ ಸಾಹಿತ್ಯ ಮನರಂಜನೆಗಾಗಿ ಖಂಡಿತ ಅಲ್ಲ; ಅದರಲ್ಲಿ ರಂಜಿಸಬಹುದಾದ ಅಂಶವೇನಾದರೂ ಸಿಕ್ಕರೆ, ಅದು ಕೇವಲ ಉಪವಸ್ತುವಿನಂತೆ ಸಿಕ್ಕುತ್ತದೆ. ಅದು ಮಾಡುವ ಮೊದಲನೆಯ ಕೆಲಸ ಮನೋವಿಕಾಸ; ಆತ್ಮವಿಕಾಸ. ಜಾನಪದ ಸಾಹಿತ್ಯ ಮಾಡುವ ಕಾರ್ಯ ಸಂಸ್ಕೃತಿಯ ಹೂವನ್ನು ಅರಳಿ

ಸಂಪ್ರದಾಯ. ಅದರ ಮೊದಲ ಲಕ್ಷಣವೆಂದರೆ ಸರಳತೆ. ಸರಳವಾದುದನ್ನೂ ಜಟಿಲಗೊಳಿಸುವುದೇ ಸಾಹಿತ್ಯ ಎಂದು ಯಾರಾದರೂ ಹೇಳಿದಲ್ಲಿ, ಜಾನಪದ ಸಾಹಿತ್ಯ ಅದಕ್ಕೊಂದು ಅಪವಾದ. ಜಟಿಲವಾದ ಸಮಸ್ಯೆಗಳಿಗೂ ಇಲ್ಲಿ ಸರಳವಾದ ನಿರೂಪಣೆ ಹಾಗೂ ಪರಿಹಾರಗಳಿವೆ. ಕಲ್ಪನೆಯ ಯಕ್ಷಿಣಿ ಇಲ್ಲಿ ಮೂಕವಾಗುತ್ತಾಳೆ. ಜಾನಪದ ಸಾಹಿತ್ಯದಲ್ಲಿ ಕಲ್ಪನೆಯ ಪಾತ್ರ ಗೌಣ, ಏಕೆಂದರೆ, ಇದರ ಎರಡನೆಯ ಲಕ್ಷಣ, ಸಹಜತೆ. ಸಹಜತೆ ಎನ್ನುವ ಅಂಶ ಕಲ್ಪನೆಯಿಂದ ಅದೆಷ್ಟೋ ದೂರವಿದೆ. ಯಾವುದು ಸಹಜವಾಗಿದೆಯೋ, ಯಾವುದು ಸರಳವೋ ಅದರಲ್ಲಿ ಕಲ್ಪನೆಗೆ ಅವಕಾಶವೆಲ್ಲಿ? ಹೇಳುವುದರಲ್ಲಿ 'ಜಾಣ್ಮೆ' ಯ ಅಂಶ ಪ್ರಧಾನವಾಗಿರುವಂತೆಯೇ ಪರಿಣಾಮದಲ್ಲಿ 'ಹೃದಯ' ದ ಅಂಶ ಮುಖ್ಯವಾಗಿದೆ.

ಕನ್ನಡ ಜಾನಪದ ಯಾವುದೋ ಒಂದು ರೂಪದಲ್ಲಿಲ್ಲ. ಕೇವಲ, 'ಗರತಿಯ ಹಾಡು' ಗಳಲ್ಲಿಯೇ ಪರ್ಯಾವಸಾನ ಹೊಂದಿಲ್ಲ. ನಮ್ಮ ಗ್ರಾಮ ಸಂಸ್ಕೃತಿಯಲ್ಲಿ ಓದು ಬರಹಗಳ ಪಾತ್ರ ಪ್ರಧಾನವಲ್ಲ; ಹೃದಯವನ್ನು ಅರಳಿಸಿಕೊಳ್ಳುವ ಹಿರಿಯಾಸೆಯಿಂದ ಸಹಜವಾಗಿಯೇ ಮೂಡಿ ಬಂದ ಆಣೆ-ಮುತ್ತುಗಳ ಕಾವ್ಯ ಪ್ರಜ್ಞೆಯಿಂದ ಹೇಗೆ ವಂಚಿತವಾಗಬಲ್ಲವು? ಕಾವ್ಯದ ಜೀವನಾಡಿಯೇ ಹೃದಯ. 'ಹಲಗೆ ಬಳಪದ ಹಿಡಿಯದ' ಅಗ್ಗಳಿಕೆಯಿರುವುದು ಈ ಹೃದಯಕ್ಕೆ. ಕೇವಲ ಕಾವ್ಯ ರಚನೆಯಲ್ಲಿಯೇ ಈ ಅಗ್ಗಳಿಕೆ ಸಾಲದು; ಕೇಳುವವನ ಹೃದಯವೂ ಈ ಭಾವಸ್ಪಂದಕ್ಕೆ ಮಿಡಿವಂತಾದಾಗಲೇ ಕಾವ್ಯದ ಪರಿಪೂರ್ಣತೆ ಸಾಧ್ಯ. ಈ ದಿಕ್ಕಿನಲ್ಲಿ ಕನ್ನಡ ಜಾನಪದ ಗೀತೆಗಳು, ನೂರಕ್ಕೆ ನೂರು ಯಶಸ್ವಿಯಾಗಿವೆ. ಪಂಡಿತನಿಂದ ಹಿಡಿದು ಪಾಮರನವರೆಗೂ ಆಗುವ ಹೃದಯ ಸ್ಪಂದ ಒಂದೇ; ಪ್ರೌಢಕಾವ್ಯ ಹಾಗಲ್ಲ! ಹೃದಯ ಪಕ್ಷ ಅಲ್ಲಿ ದುರ್ಬಲವಾಗುತ್ತದೆ. ಕಾವ್ಯವನ್ನು ಸವಿಯಲು ಅದರ ಜಟಿಲತೆ ಅಡ್ಡವಾಗುತ್ತದೆ. ಬುದ್ಧಿಯ ಕಸರತ್ತು ವಿಪರೀತವಾಗಿ, ಹೃದಯಕ್ಕೆ ಸ್ಪಂದನೆಯ ಅವಕಾಶವೇ ಒದಗಲಾರದು.

ಕನ್ನಡ ನಾಡಿನ ಜನಗಳಲ್ಲಿಯೇ, 'ಜಾನಪದ' ಒಂದು ವೈಶಿಷ್ಟ್ಯ. ಬಯಲು ನಾಟಕ, ಯಕ್ಷಗಾನ, ಡೊಂಬೀದಾಸರ ಪದ, ಜೋಕುಮಾರನ ಹಾಡು, ಗೀಗೀ ಪದ, ಜೋಗಿಗೀತೆ, ಅಲ್ಲದೆ ಹಳ್ಳಿಯ ಜನ ತಮ್ಮ ಕಸಬುಗಳೊಂದಿಗೇ ಸಹಜವಾಗಿ ನುಡಿಯುವ ನೂರಾರು ನುಡಿಗಬ್ಬಗಳು ಇವೆಲ್ಲವೂ ಕನ್ನಡ ಸಾಹಿತ್ಯದಲ್ಲಿ ಚಿರಸ್ಥಾಯಿಯಾಗಿ ನಿಲ್ಲಬಲ್ಲ ಚೈತನ್ಯವನ್ನು ಪಡೆದಿವೆ. ಇವು ವೇದಗಳಂತೆ–ಶ್ರುತಿಗಳು ಬಾಯಿಂದ ಬಾಯಿಗೆ ಸಾಗಿ ಬಂದ ಪದಗಳಿವು: ನೂರಾರು ವರ್ಷಗಳಿಂದ ಹೀಗೆಯೇ ಸಾಗುತ್ತಾ ಬಂದು, ತನ್ಮೂಲಕ ತಮ್ಮ ಅಮರತ್ವವನ್ನೂ ಸಾರುವ ಕಾವ್ಯಗಳಿವು, ಈ ಸಾಹಿತ್ಯ ಮುಟ್ಟದ ಭಾಗವಿಲ್ಲ. ಲೌಕಿಕ ವಿಷಯಗಳಲ್ಲಿ ಎಲ್ಲ ರೀತಿಯ ಅನು

ಭವಗಳನ್ನೂ ಪ್ರತಿನಿಧೀಕರಿಸುತ್ತವೆ. ಆಧ್ಯಾತ್ಮ ತತ್ವಗಳಂತಹಾ ಜಟಿಲ ವಿಷಯಗಳನ್ನೂ ಸುಂದರ, ಸರಳವಾದ ಕೆಲವೇ ಶಬ್ದಗಳಲ್ಲಿ ಅಡಕಮಾಡಿ ಹೇಳುವ ಚೈತನ್ಯ ಈ ಸಾಹಿತ್ಯಕ್ಕಿದೆ. ಶಕ್ತ ಸಾಹಿತ್ಯವೆಂದರೆ ಇದೇ-ನೂರಾರು ಬಗೆಯ ಮನೋಸಾಮರ್ಥ್ಯವನ್ನು ಪಡೆದಿರುವ ವಿವಿಧ ಜನಗಳ ಹೃದಯವನ್ನು ಮಿಡಿಸಬಲ್ಲ ಸಾಹಿತ್ಯ ಮಾತ್ರ ಹೀಗಿರಬಲ್ಲದು. ಈ ರೀತಿಯಾಗಿ ಪರೀಕ್ಷಿಸುತ್ತ ಹೋದಲ್ಲಿ, ಜಾನಪದ ಸಾಹಿತ್ಯಕ್ಕಿರುವ ಚೈತನ್ಯ ಅದರ ಗೈರತ್ತು-ಗತ್ತುಗಳು, 'ನವ್ಯ ಪ್ರಜ್ಞೆ'ಯುಳ್ಳ ಕಾವ್ಯಗಳಲ್ಲಿಯೂ ಕಾಣಸಿಗದು. ಭಾರತದ ಸಾಂಸ್ಕೃತಿಕ ದರ್ಶನವಾಗುವುದು ಈ ಸಾಹಿತ್ಯದಿಂದಲೇ. ಸತ್ಯವಾದುದನ್ನು ಶುಭವಾಗಲೆಂದು ಸುಂದರವಾಗಿ ಹೇಳುವುದೇ ಈ ಸಾಹಿತ್ಯದ ಗುರಿ. ಕನ್ನಡದ ಜಾನಪದ ಕವಿಯೊಬ್ಬ ಹೀಗೆ ಹೇಳುತ್ತಾನೆ ನೋಡಿ:—

ಕಟ್ಟಿದನೊಂದು ಗುಡಿಯ ಶಿವ-ತಾ
ಗುಟ್ಟಾಗಿ ನಿಂದನು ಒಳಗೆ ಅವ||
ಪಟ್ಟದ ರಾಣಿಯ ನೆಲೆಮನೆಲಿಟ್ಟು
ಅಟ್ಟವನೇರಿ ಕುಳಿತನವ"

—ಈ ಒಂದೇ ಪದ್ಯದಲ್ಲಿ ಕವಿಯು ಅಷ್ಟಾಂಗಯೋಗದ ತಿರುಳನ್ನು ಹೊರಗೆಡವಿದ್ದಾನೆ. ಇಂತಹ ಎಷ್ಟೋ ಪದ್ಯಗಳು ಜಾನಪದ ಸಾಹಿತ್ಯದಲ್ಲಿ ಕಾಣಸಿಗುತ್ತವೆ.

ಇಲ್ಲಿ ಆಧ್ಯಾತ್ಮವೆಂದರೇನೆಂದು ಕೇಳುವವರಿಗೆ, ಸಹಜ, ಸರಳ ಉತ್ತರವಿದೆ ತಿಳಿದುಕೊಳ್ಳಲು ಸುಲಭ; ತಿಳಿವು ಮೂಡಿಸಿದ ಜ್ಞಾನ ಅನುಭವವನ್ನು ಪಡೆಯುವಂತೆ ಮಾಡಲು ಸಹಾಯಕವಾದೀತು.

ಜಾನಪದ ಸಾಹಿತ್ಯ ಜನ್ಮ ತಾಳಿದುದು ಯಾರ ಸಂಕಲ್ಪದಿಂದಲೂ ಅಲ್ಲ; ಇಂದಿನ ಆಧುನಿಕ ಸಾಹಿತ್ಯದಲ್ಲಿ ಬರಹಗಾರನ ಪಾತ್ರ ಅವನ ಬರಹಕ್ಕಿಂತಲೂ ಹಿರಿದಾಗಿ ನಿಂತಿದೆ. ಆದರೆ ಜಾನಪದದಲ್ಲಿ ಹಾಗಲ್ಲ; ಅದನ್ನು ರಚಿಸಿದವರು ಯಾರಾದರೇನು! ರಚನೆ ಮುಖ್ಯ. ಅದರ ಸಾರತೆ ಮುಖ್ಯ. ಅದೊಂದು ದೀಪ; ಯಾರು ಹಚ್ಚಿದರೇನಂತೆ, ಬೆಳಗುವುದೇ ಅದರ ಹಿರಿಯ ಗುಣ. ಅಲ್ಲದೆ, ಅದರಿಂದ ಅಂತಹ ಎಷ್ಟು ದೀವಿಗೆಗಳನ್ನು ಬೇಕಾದರೂ ಹಚ್ಚಬಹುದು. ತನ್ನಷ್ಟೇ ಏಕೆ ತನಗಿಂತ ಹೆಚ್ಚು ಬೆಳಕನ್ನು ಕೊಡುವ ದೀಪವನ್ನು ಹೊತ್ತಿಸುವ ಸಾಮರ್ಥ್ಯ ಅದಕ್ಕಿಲ್ಲವೇ ?

ಉಪಾಯನ ಕೃತಿ ಕರಂಡ



ಬಿ. ಇ. ಪುಟ್ಟೇಗೌಡ
ಸಹಕಾರ್ಯದರ್ಶಿ



ಬಿ. ಇ. ಪುಟ್ಟೇಗೌಡ
ಸಹಕಾರ್ಯದರ್ಶಿ

ಹೀಗೆ....

ಜಾನಪದ ಸಾಹಿತ್ಯ ಯಾರೋ ಒಬ್ಬನ ವಿಶಿಷ್ಟ ಸ್ವತ್ತಲ್ಲ. ಅದು ಸಕಲ ಜನತೆಯದು. ಅದರ ಒಡೆತನ ಎಲ್ಲರಿಗೂ ಸೇರಿದುದು. ಮಾನವತೆ ಇರುವವರೆಗೆ ತಾನೂ ಅದನ್ನು ಬೆಂಬಿಡದೆ ಇರುತ್ತದೆ. ಮೊಟ್ಟ ಮೊದಲು 'ವಾಣಿ' ಎಲ್ಲಿ ಉದಿಸಿತೋ, ಮೊದಲು ಇಬ್ಬರು ಮೂಕ ಮಾನವರು ಎಂದು ಮಾತಿಗೆ ಆರಂಭಿಸಿದರೋ, ಅಲ್ಲಿಯೇ ಆಗಲೇ, ಹುಟ್ಟಿದ ಮೂಲ ಸಾಹಿತ್ಯವಿದು ಪರಾವಾಣಿಯ ಪ್ರತಿರೂಪ. ವೈಖರೀವಾಣಿಯಲ್ಲಿ ಪರಾಶಕ್ತಿ ಲೀನವಾಗಿದ್ದು ಅದೃಶ್ಯವಾಗಿರುವಂತೆ, ಜಾನಪದ ಸಾಹಿತ್ಯದ ಅಂಶ ಇತರೆ ಎಲ್ಲ ಪ್ರೌಢ ಸಾಹಿತ್ಯಗಳಿಗೂ ಆಧಾರವಾಗಿದೆ. ಪ್ರೌಢ ಸಾಹಿತ್ಯದ ಆಡಂಬರದ ಅಂಗಿ-ಅಲಂಕಾರಗಳನ್ನು ಕಿತ್ತೆಸೆದರೆ ಉಳಿಯುವುದೇ ಜಾನಪದ ಸತ್ಯ ಸಾಹಿತ್ಯ. ಅದನ್ನು ರಚಿಸುವವನಿಗೂ ಶ್ರಮವಿಲ್ಲ; ಅನುಭವಿಸುವವನಿಗಂತೂ ಇಲ್ಲವೇ ಇಲ್ಲ.

ಆದುದರಿಂದಲೇ—

ಅದು ಸತ್ಯ ಸಾಹಿತ್ಯ; ನಿತ್ಯ ನೂತನ ಸಾಹಿತ್ಯ.

ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿ ಸಾಕ್ಷಿ;
ಗೆಲವಿದ್ದರದಕೆ ನಿಮಗಿಹುದು ಶಕ್ತಿ,
ನುಡಿ ಮಡಿದರೆಲ್ಲರೂ ಮೂಕ ಜಂತುಗಳಂತೆ:
ಬಾಲವಲ್ಲಾಡಿಪುದೆ ಪರಮ ಭಕ್ತಿ !
ಉತ್ತರದ ಕಾಶಿಯಲ್ಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದುರೆಯಹುದೆ ?
ತಾಯಿತ್ತ ಮೊಲೆ ಹಾಲೆ ನಿಮ್ಮ ಮೈಗಾಗದಿರೆ
ಹೊತ್ತ ಹೊರೆ ಬಲಕಾರಿ ನೆತ್ತರಹುದೇ ?
ಕಣ್ದೆರೆಯಿರೇಳಿ, ಓ ಕನ್ನಡದ ಮಕ್ಕಳಿರ,
ಗರ್ಜಿಸುವುದನು ಕಲಿತು ಸಿಂಹವಾಗಿ !
ನಖದಂಷ್ಟ್ರ ಕೇಸರಗಳ ಬೆಳೆಸಿ ಹುರಿಗೊಂಡು
ಶಿರವೆತ್ತಿ ನಿಂತು ಕುರಿತನವ ನೀಗಿ.

—ಕು. ವೆಂ. ಪು.

ಕರ್ನಾಟಕದ ಮಹಾಪುರುಷರು

ಡಾ|| ಜಾ. ರಾ. ಗೋಪಾಲ್, ಎಂ.ಎ.ಪಿಹೆಚ್.ಡಿ. ಧಾರವಾಡ

ಪ್ರತಿಯೊಂದು ನಾಡಿನ ಇತಿಹಾಸದಲ್ಲೂ ಅನೇಕ ಮಹಾ ಪುರುಷರು ಆಗಿ ಹೋಗಿದ್ದಾರೆ. ಇತಿಹಾಸ ಕೇವಲ ಮಹಾಪುರುಷರ ಜೀವನದ ಕಥೆ ಅಲ್ಲ, ಎಂಬುದು ನಿಜವಾದರೂ, ಮಹಾಪುರುಷರ ಸ್ಥಾನ, ನಾಡಿನ ಆಗು–ಹೋಗುಗಳಲ್ಲಿ ಆತನ ಪಾತ್ರ ಹಿರಿದಾದದ್ದು. ಇತಿಹಾಸವನ್ನು ಮಾನವನ ಬಾಳಿನ ಹೋರಾಟದ ನಿರೂಪಣೆ ಎಂದು ಅರ್ಥವಿಸಿದಾಗ ಮಾನವ ಸಮಾಜದಲ್ಲಿ ನಡೆದ ಘಟನೆಗಳ ಹಿಂದೆ ಕೆಲವು ಮಹಾಪುರುಷರ ಕೈವಾಡವಿದೆ ಎಂಬುದು ತಾನಾಗಿಯೇ ಕಾಣಬರುತ್ತದೆ. ನಾಡಿನ, ರಾಷ್ಟ್ರದ, ಸಂಸ್ಕೃತಿಗೆ ಧಕ್ಕೆ ತಗುಲಿದಾಗ, ಅದರ ಅಳಿವು–ಉಳಿವಿನ ಮೂಲಭೂತ ಪ್ರಶ್ನೆ ಉದ್ಭವಿಸಿದಾಗ ಸಮಾಜದ ಎಡರು ತೊಡರುಗಳನ್ನೂ, ಭೀತಿ–ಭಯಗಳನ್ನೂ ನಿವಾರಿಸಲು, ಸಮಾಜದ ಪ್ರಗತಿಗೆ ಪೋಷಕವಾಗಿ ಒಬ್ಬ ಮಹಾಪುರುಷ ಮುಂದೆ ಬರುತ್ತಾನೆ. ಪ್ರಜಾಶಕ್ತಿ, ಸಮಾಜಶಕ್ತಿ, ಆತನಲ್ಲಿ ಕೇಂದ್ರೀಕೃತವಾಗಿ ಆ ವ್ಯಕ್ತಿಯ ರೂಪದಲ್ಲಿ ಹೊರಹೊಮ್ಮುತ್ತವೆ. ಸಮಾಜದ ಆಶೋತ್ತರಗಳನ್ನೆಲ್ಲಾ ತನ್ನದಾಗಿ ಮಾಡಿಕೊಂಡು ಸಮಾಜಕ್ಕೆ–ನಾಡಿಗೆ–ಬೇಕಾದ ಶಕ್ತಿಯನ್ನು ಆತನು ನೀಡುತ್ತಾನೆ.

ನಮ್ಮಲ್ಲಿ ಧರ್ಮಪ್ರವೃತ್ತಿ ಇಳಿಮುಖವಾದಾಗ ಸಹ ಧಾರ್ಮಿಕ ಮಹಾಪುರುಷರು ಅವತರಿಸಿ ಸಮಾಜವನ್ನು ಪುನಶ್ಚೇತನಗೊಳಿಸುತ್ತಾರೆ. 'ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ಅಭ್ಯುತ್ಥಾನ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ' ಎಂಬ ದೇವನ ವಾಕ್ಯ ಸಮಾಜದಲ್ಲಿ, ನಾಡಿನಲ್ಲಿ ಅವತಾರ ಪುರುಷರ ಹೊಣೆಗಾರಿಕೆಯನ್ನು ಎತ್ತಿ ತೋರಿಸುತ್ತದೆ. ಇಂತಹ ಪುರುಷರ ಜೀವನ ಚರಿತ್ರೆಯೇ ಬಹುಮಟ್ಟಿಗೆ ಜಗತ್ತಿನ ಇತಿಹಾಸದ ಸಾರವಾಗಿದ್ದು, ಅವರ ಮಾತುಗಳು ದೀವಿಗೆಗಳಾಗಿ, ಅವರು ಸಾಧಿಸಿದ ಧ್ಯೇಯಗಳು ಶ್ರೇಯಸ್ಸಿಗೆ ಹಾದಿಗಳಾಗಿವೆ. ಅವರು ಬಾಳಿದ ರೀತಿ-ನೀತಿಗಳನ್ನೂ, ಅವರ ಸಾಧನೆಗಳನ್ನೂ ನೆನೆದರೆ ಸಾಮಾನ್ಯ ಜನಸಾರ ಮನಸ್ಸಿನ ಮೇಲೆ ಉತ್ತಮ ಪರಿಣಾಮ ಉಂಟಾಗುವುದ

ಕ್ಷಿಪೆ. ಸದ್ಗುಣಗಳು ವೃದ್ಧಿಯಾಗಿ ದುರ್ಗುಣಗಳು ನಾಶವಾಗಲು ಸಹಾಯಕ ವಾಗುತ್ತದೆ.

ಕರ್ನಾಟಕ

ಕರ್ನಾಟಕ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ– ವಹಿಸುತ್ತಾ ಬಂದಿದೆ. ಭೌಗೋಲಿಕವಾಗಿ ದಖ್ಖನ್ ಪ್ರಸ್ಥಭೂಮಿಯಾದ ಈ ನಮ್ಮ ನಾಡು ರಾಜಕೀಯ ಕ್ಷೇತ್ರದಲ್ಲೂ. ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಸಮನ್ವಯಗಳಿಗೆ ಎಡೆಮಾಡಿಕೊಟ್ಟಿದೆ. ಬಹುತರ ಜಗತ್ತಿನ ಪ್ರಮುಖ ಧರ್ಮಗಳ ಆಗರವಾಗಿದೆ. ಈ ನಾಡಿನ ಮಹಾಪುರುಷರು ಕರ್ನಾಟಕದ ಸಂಸ್ಕೃತಿಗೆ ಒಂದು ವಿಶಿಷ್ಟ ಮೆರಗನ್ನಿತ್ತಿದ್ದಾರೆ. ಇಂತಹ ಮಹಾಪುರುಷರಲ್ಲಿ ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಮೆರೆದ ಹಲವರನ್ನು ಮಾತ್ರ ಇಲ್ಲಿ ನೆನೆಯಲಾಗಿದೆ.

ಇಮ್ಮಡಿ ಪುಲಕೇಶಿ :

ಕ್ರಿ. ಶ. ಏಳನೆಯ ಶತಮಾನದ ಆರಂಭದಲ್ಲಿ ಕರ್ನಾಟಕದಲ್ಲಿ ಸಾಮ್ರಾಜ್ಯವೊಂದು ಉದಯವಾಯಿತು. ಆರನೆಯ ಶತಮಾನದ ಮಧ್ಯದಲ್ಲಿ ಅಲ್ಲಿಯವರೆಗೆ ರಾಜ್ಯವಾಳುತ್ತಿದ್ದ ಕದಂಬರನ್ನು ಮೂಲೆಗೊತ್ತಿ ಚಾಲುಕ್ಯವಂಶದ ಮೊದಲನೆಯ ಪುಲಕೇಶಿ ತನ್ನ ರಾಜ್ಯಭಾರವನ್ನು ಆರಂಭಿಸಿದನು. ಇವನು ಬಾದಾಮಿಯಲ್ಲಿ ಒಂದು ಅಜೇಯವಾದ ದುರ್ಗವನ್ನು ನಿರ್ಮಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಈ ಮೊದಲನೆಯ ಪುಲಕೇಶಿಯು ಮೊಮ್ಮಗನೇ ಇಮ್ಮಡಿ ಪುಲಕೇಶಿ.

ತನ್ನ ತಂದೆಯಾದ ಕೀರ್ತಿವರ್ಮನ ಮರಣ ಕಾಲದಲ್ಲಿ ಇನ್ನೂ ಪ್ರಾಪ್ತ ವಯಸ್ಕನಾಗಿರಲಿಲ್ಲವಾದ ಕಾರಣ ಇಮ್ಮಡಿ ಪುಲಕೇಶಿಯ ಚಿಕ್ಕಪ್ಪನಾದ ಮಂಗಲೇಶನು ರಾಜ್ಯದ ಸೂತ್ರವನ್ನು ವಹಿಸಿದನು. ಆದರೆ ಪ್ರಾಪ್ತ ವಯಸ್ಕನಾದ ಮೇಲೂ ಸಹ ಪುಲಕೇಶಿಗೆ ರಾಜ್ಯಾಡಳಿತ ದೊರಕಲಿಲ್ಲ. ಅಧಿಕಾರಕ್ಕೆ ಮನಸೋತ ಮಂಗಲೇಶನು ರಾಜ್ಯವನ್ನು ತನ್ನದಾಗಿಯೇ ಮಾಡಿಕೊಂಡು ತನ್ನ ನಂತರ ತನ್ನ ಮಗನಿಗೆ ಪಟ್ಟ ಕಟ್ಟುವ ಉದ್ದೇಶಪಟ್ಟಂತೆ ತೋರಿತು. ಮಹತ್ವಾಕಾಂಕ್ಷಿಯಾದ ಪುಲಕೇಶಿ ಇದನ್ನು ಸಹಿಸದೆ ರಾಜಧಾನಿಯಾದ ಬಾದಾಮಿಯನ್ನು ತೊರೆದು, ಪ್ರಜೆಗಳನ್ನೂ ಮಂಡಲಿಕರನ್ನೂ ಒಲಿಸಿಕೊಂಡು ಕೊನೆಗೆ ಚಿಕ್ಕಪ್ಪನನ್ನು ಸಮರಾಂಗಣದಲ್ಲಿ ಎದುರಿಸಿದನು. ಮಂಗಲೇಶನು ಯುದ್ಧದಲ್ಲಿ ಸೋತನಷ್ಟೇ ಅಲ್ಲ, ಜೀವವನ್ನೂ ತೊರೆದನು. ಪುಲಕೇಶಿ ತನ್ನ ಹಕ್ಕಿಗಾಗಿ ಹೋರಾಡುತ್ತಿದ್ದ ಅದುವರೆಗೂ ಮಾಂಡಲಿಕರಾಗಿದ್ದ ಹಲವರು ಸ್ವಾತಂತ್ರ್ಯ ಘೋಷಣೆ ಮಾಡತೊಡ

ಗಿದರು. ಅವರಲ್ಲಿ ಪ್ರಮುಖರಾದ ಅಪ್ಪಾಯಿಕ ಮತ್ತು ಗೋವಿಂದ ಎಂಬ ಇಬ್ಬರು ತಮ್ಮ ಗಜಸೈನ್ಯವನ್ನು ಭೀಮಾನದಿ ತೀರದವರೆಗೆ ನುಗ್ಗಿಸಿದರು. ಆದರೆ ಎಳ್ಳಷ್ಟೂ ಹೆದರದ ಪುಲಕೇಶಿ ಅವರನ್ನು ಸಮರದಲ್ಲಿ ಸೋಲಿಸಿದನು. ಇಬ್ಬರಲ್ಲೊಬ್ಬನು ಶರಣಾಗತನಾದನು. ಮತ್ತೊಬ್ಬನು ಪಲಾಯನ ಹೇಳಿದನು.

ಈ ಯುದ್ಧಗಳ ಬಳಿಕ ಚಾಲುಕ್ಯ ರಾಜ್ಯದ ಸ್ವಾಮಿತ್ವ ಪಡೆದ ಪುಲಕೇಶಿ ಅದನ್ನು ಸ್ಥಿರಗೊಳಿಸಲು ದಂಡಯಾತ್ರೆ ಹೊರಟನು. ಯಾತ್ರೆಯ ಮೊದಲ ಘಟ್ಟದಲ್ಲಿ ವರದಾ ನದಿಯನ್ನು ದಾಟಿ ಬನವಾಸಿಯನ್ನೂ ಇತರ ಅನೇಕ ದುರ್ಗಗಳನ್ನೂ ಬಗ್ಗು ಬಡಿದು ತನ್ನ ಸ್ವಾಧೀನ ಮಾಡಿಕೊಂಡನು. ತುಳುನಾಡಿನ ಆಳುಪರು ಇವನಿಗೆ ಶರಣಾದರು. ನಂತರ ಕೊಂಕಣದಲ್ಲಿ ಅಧಿಕಾರದಲ್ಲಿದ್ದ ಮೌರ್ಯರನ್ನು ಸದೆ ಬಡಿದು, ಅಲ್ಲಿನ ಮುಖ್ಯ ಬಂದರವಾಗಿದ್ದ ಪುರಿಯನ್ನು ಸ್ವಾಧೀನ ಮಾಡಿಕೊಂಡನು. ಇವನು ಅಲ್ಲಿದ್ದಾಗಲೇ ಲಾಟ, ಮಾಳವ, ಗುರ್ಜರ ರಾಜರು ಇವನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು.

ಹೀಗಿದ್ದಾಗ ಕನೋಜದ ಹರ್ಷವರ್ಧನನು ಉತ್ತರ ಭಾರತವನ್ನು ತನ್ನ ಅಧೀನಕ್ಕೆ ತಂದುಕೊಂಡು ದಕ್ಷಿಣ ಭಾರತವನ್ನು ಆಕ್ರಮಿಸಿ ಅಖಂಡ ಭಾರತದ ಸಾರ್ವಭೌಮನಾಗುವ ಕನಸನ್ನು ಕಾಣುತ್ತಿದ್ದ. ಎಂತಲೇ ತನ್ನ ರಾಜ್ಯದ ಅಪ್ರತಿಮ ಭಟರನ್ನೆಲ್ಲಾ ಒಂದುಗೂಡಿಸಿ ತಡಿಯೊಡೆದ ಪ್ರಕ್ಷುಬ್ಧ ಮಹೋದಧಿಯಂತಿದ್ದ ಅಸಂಖ್ಯಾತ ಸೇನಾಬಲದೊಡನೆ ಸಾಗಿದನು. ಪುಲಕೇಶಿಯ ಹಂಬಲವೇನೂ ಕಡಿಮೆಯದಾಗಿರಲಿಲ್ಲ. ಉತ್ತರ ದಿಗ್ವಿಜಯಕ್ಕಾಗಿ ಅವನು ಮುಂದೆ ಸಾಗಿದ್ದನು. ಮಲ್ಲರಿಬ್ಬರೂ ಒಬ್ಬರನ್ನೊಬ್ಬರು ಎದುರಿಸಿದರು. ನರ್ಮದಾ ತಡಿಯೇ ರಣಭೂಮಿಯಾಯಿತು. ಎದೆಗುಂದದೆ ಕಾದಿದ ಕರ್ನಾಟಕ ಸಿಂಹದ ಮುಂದೆ ಉತ್ತರಾಪಥದ ಮದದಾನೆಯ ಆಟ ಸಾಗಲಿಲ್ಲ, ತನ್ನ ಎಲ್ಲಾ ಆಸೆಗಳನ್ನೂ ಬದಿಗೊತ್ತಿ ಜೀವದಾಸೆಗಾಗಿ ರಣರಂಗದಿಂದ ಓಡಬೇಕಾಯಿತು. ಆ ಉತ್ತರಾ ಪಥೇಶ್ವರ ಕರ್ನಾಟಕದ ಇತಿಹಾಸದಲ್ಲಿ ಇದೊಂದು ಪ್ರಮುಖ ಘಟನೆ.

ಇದೇ ಸಮಯದಲ್ಲಿ ಭಾರತದಲ್ಲಿ ಸಂಚರಿಸಿದ ಚೀನಾ ದೇಶದ ಯಾತ್ರಿಕನಾದ ಹುಯೆನ್ ತ್ಸಾಂಗನು ಒಂದು ವರ್ಷಕಾಲ ಸುಮಾರು ಕ್ರಿ. ಶ. ೬೪೧–೪೦ ರಲ್ಲಿ ಕರ್ನಾಟಕದಲ್ಲಿ, ಪುಲಕೇಶಿಯ ರಾಜ್ಯದಲ್ಲಿ, ಪ್ರವಾಸ ಮಾಡಿದನು. ಈತನೂ ಸಹ ತಾನು ಕಣ್ಣಾರೆ ಕಂಡ ಕರ್ನಾಟಕದ ಸೈನಿಕರ ಬಗ್ಗೆ ಬರೆಯುತ್ತಾ "ಅವರು ಯುದ್ಧಕ್ಕೆ ನಗಾರಿಗಳನ್ನು ಬಾರಿಸುತ್ತ ಹೋಗುವರು. ಮದಿಸಿದ ನೂರಾರು ಆನೆಗಳನ್ನು ರಣಾಂಗಣಕ್ಕೆ ಒಯ್ದಾಗ ಇವರೆದುರಿಗೆ ಯಾವ ಶತ್ರುಗಳೂ ನಿಲ್ಲ

ಲಾರರು. ಇವರ ಅರಸು ಪುಲಿಕೇಶಿ. ಇವನ ರಾಜತಂತ್ರ ವಿಶಾಲ ವ್ಯಾಪ್ತಿ ಯುಳ್ಳದಾಗಿದ್ದು ಶೀಲಾದಿತ್ಯ ಮಹಾರಾಜ (ಹರ್ಷವರ್ಧನ)ನು ಪೂರ್ವದಿಂದ ಪಶ್ಚಿಮದವರೆಗಿನ ದೇಶಗಳನ್ನೂ ಗೆದ್ದಿದ್ದನಾದರೂ ಈ ದೇಶದ ಜನರು ಅವನ ಆಧಿಪತ್ಯಕ್ಕೆ ಒಳಗಾಗಿಲ್ಲ. ಇವರನ್ನು ಜಯಿಸಬೇಕೆಂದು ಅವನು ಪಂಚಪ್ರಾಂತ್ಯ ಗಳಿಂದಲೂ ದಂಡನ್ನು ಕೂಡಿಸಿ, ತಾನೇ ಅದರ ನಾಯಕತ್ವವನ್ನು ವಹಿಸಿ ಇವರ ಮೇಲೆ ಹೋದರೂ ಅವರು ಇವನಿಗೆ ಬಗ್ಗಲಿಲ್ಲ." ಎಂದೆಲ್ಲಾ ನರ್ಮದಾ ನದಿಯ ದಡದ ಮೇಲೆ ನಡೆದ ಆ ಕಾಳಗವನ್ನು ಕುರಿತು ಬರೆದಿದ್ದಾನೆ.

ಪುಲಕೇಶಿಯು ಈ ಸಾಹಸವನ್ನು ಸ್ಮರಿಸಿ ಪರಮೇಶ್ವರ ಎಂಬ ಬಿರುದು ಧರಿಸಿದ. ಇದು ಅವನ ವಂಶಕ್ಕೇ ಪರಂಪರಾನುಗತ ಬಿರುದಾಗಿ ಉಳಿಯಿತು. ಈ ವಿಜಯ ಯಾತ್ರೆಗಳಿಂದ ಅವನು ಮೂರು ಮಹಾರಾಷ್ಟ್ರಗಳ ಸ್ವಾಮ್ಯವನ್ನು ಸಾಧಿಸಿದ.

ನಂತರ ಪೂರ್ವಾಭಿಮುಖವಾಗಿ ಹಾಗೂ ಮುಂದೆ ದಕ್ಷಿಣಾಭಿಮುಖವಾಗಿ ಸಾಗಿ ಕೋಸಲ ಹಾಗು ಕಲಿಂಗರನ್ನು ಈ ಚಾಲುಕ್ಯ ಚಕ್ರವರ್ತಿ ಮಣಿಸಿದ. ಪಿಷ್ಟಪುರ (ಆಂಧ್ರದ ಗೋದಾವರಿ ಜಿಲ್ಲೆಯ ಪೀಠಾಪುರಂ)ವನ್ನು ಧ್ವಂಸಗೊಳಿಸಿ ನಂತರ ಪಲ್ಲವರ ಮೇಲೆ ಏರಿ ನಡೆದ. ಪಲ್ಲವರ ಅರಸನಾದ ಮಹೇಂದ್ರ ವರ್ಮನು ಸೋತು ಕಂಚಿಯ ಕೋಟೆಯಲ್ಲಿ ಅಡಗಿಕೊಂಡನು. ಪುಲಕೇಶಿ ಮುಂದೆ ಕಾವೇರಿ ಯನ್ನು ದಾಟಿ ಚೋಳ, ಕೇರಳ ಮತ್ತು ಪಾಂಡ್ಯರೊಡನೆ ಸ್ನೇಹ ಬೆಳೆಸಿದನು.

ಪುಲಕೇಶಿಯ ಈ ದಿಗ್ವಿಜಯ ಯಾತ್ರೆಯ ಪರಿಣಾಮವಾಗಿ ಗುಜರಾತದಿಂದ ಪೀಠಾಪುರದವರೆಗೂ ನರ್ಮದಾ ನದಿಯಿಂದ ಪೆನ್ನಾರ್‌ವರೆಗೂ ಇಡೀ ದಕ್ಷಿಣದ ತಪ್ಪಲು ಇವನ ಕೈವಶವಾಗಿ ಕರ್ನಾಟಕ ಸಾಮ್ರಾಜ್ಯ ಇವನ ಕಾಲದಲ್ಲಿ ರೂಪು ಗೊಂಡಿತು.

ಈ ದಿಗ್ವಿಜಯ ಭಾರತದಲ್ಲಿಯಷ್ಟೇ ಅಲ್ಲ ಹೊರ ದೇಶಗಳಲ್ಲೂ ವ್ಯಾಪಿಸಿ ಪುಲಕೇಶಿಯ ಹೆಸರನ್ನು ಬೆಳಗಿಸಿತು. ಇವರ ಖ್ಯಾತಿ ದೂರದ ಪರ್ಷಿಯಾ ದೇಶಕ್ಕೆ ಹಬ್ಬಿತು. ಟಬರಿ (Tabari) ಎಂಬ ಅರಬ್ ಇತಿಹಾಸಕಾರ ಪರ್ಷಿ ಯಾದ ಅರಸನಾದ ಎರಡನೆಯ ಖುಸ್ರು (Khusrau II) ವಿಗೂ ಪುಲ ಕೇಶಿಗೂ ಪರಸ್ಪರ ಪತ್ರ ವ್ಯವಹಾರ ಸಹ ನಡೆಯುತ್ತಿತ್ತು, ಎಂದಿದ್ದಾನೆ. ಈ ನಿಕಟ ಸಂಬಂಧವನ್ನು ಸೂಚಿಸುವ ಸಲುವಾಗಿಯೋ ಎಂಬಂತೆ ಅಜಂತಾ ಗುಹೆ ಗಳಲ್ಲಿ ಇರಾಣ ದೇಶದ ವೇಷ-ಭೂಷಣಗಳುಳ್ಳ ಚಿತ್ರಗಳನ್ನು ವರ್ಣ ಚಿತ್ರಕಾರ

ರೂಪಿಸಿದ್ದಾನೆ. ಅಜಂತಾ ಗುಹೆಗಳ ಈ ವರ್ಣವಿನ್ಯಾಸ ಪುಲಕೇಶಿ ಕಲಾಪೋಷಕನೂ ಆಗಿದ್ದನೆಂಬುದನ್ನು ಸೂಚಿಸುತ್ತವೆ. ಇವನ ಕಾಲದ ಸಾಹಿತ್ಯದ ಬೆಳವಣಿಗೆಗೆ ಐಹೊಳೆಯಲ್ಲಿನ ಶಾಸನದ ಕರ್ತೃವಾದ ರವಿಕೀರ್ತಿಯೇ ಸಾಕ್ಷಿ. ಈ ಕವಿ ತಾನು ಭಾರವಿ ಮತ್ತು ಕಾಳಿದಾಸರಿಗೆ ಸಮಾನನೆಂದು ಕರೆದುಕೊಂಡಿದ್ದಾನೆ.

ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದಲೇ ಒಂದು ಪ್ರತ್ಯೇಕ ಘಟಕವಾಗಿ ಅಸ್ತಿತ್ವ ಪಡೆದಿದ್ದ ನಮ್ಮನಾಡಿನ ಕರ್ನಾಟಕ–ಪ್ರಾದೇಶಿಕ ಒಕ್ಕಟ್ಟಿನ ಅರಿವು ಹಾಗೂ ಏಕೀಭಾವದ ಪರಿಜ್ಞಾನ ಉಂಟಾದುದು ಚಾಲುಕ್ಯರ ಕಾಲದಲ್ಲಿಯೇ. ಅದರಲ್ಲೂ ಇಮ್ಮಡಿ ಪುಲಕೇಶಿಯ ಕಾಲದಲ್ಲಿ, ಕರ್ನಾಟಕದ ಬಲ ಪ್ರಾಬಲ್ಯಕ್ಕೆ ಬಂದುದು ಆತನಿಂದಾಗಿ. ಅಂದಿನಿಂದ ಕರ್ನಾಟಕದ ಅರಸರ ಸೈನ್ಯ ಶೌರ್ಯ, ಸಾಹಸಗಳಿಗೆ ಹೆಸರಾಯಿತು.

ಶಕಪುರುಷ ಆರ್ಮಡಿ ವಿಕ್ರಮಾದಿತ್ಯ

ಇತಿಹಾಸ ಒಂದು ಪ್ರವಾಹದಂತೆ. ಹಳೆಯ ನೀರು ಹರಿದು ಹೊಸದು ಸೇರುವಂತೆ ಘಟನೆಗಳು ಬದಲಾಗುತ್ತಲೇ ಇರುತ್ತವೆ. ಒಂದು ರಾಜವಂಶ ಕೀರ್ತಿಯ ತುದಿಯನ್ನು ಮುಟ್ಟಿ ಅವನತಿ ಹೊಂದಿ ಮತ್ತೆ ಅದರ ಸ್ಥಾನವನ್ನು ಇನ್ನೊಂದು ಮನೆತನ ಆಕ್ರಮಿಸುವುದು ಸಹಜವಾದ ಘಟನೆಯೇ. ಕರ್ನಾಟಕದ ಇತಿಹಾಸ ಪರಂಪರೆಯಲ್ಲೂ ಇಂತಹ ಘಟನೆಗಳಿವೆ. ಬಾದಾಮಿಯಲ್ಲಿ ಆಳಿದ ಚಾಲುಕ್ಯರ ರಾಜ್ಯ ಹೀಗೆಯೇ ಅಳಿದು ನಂತರ ರಾಷ್ಟ್ರಕೂಟರು ಕರ್ನಾಟಕದ ಅರಸರಾದರು. ಅವರೆ ಹತ್ತನೆಯ ಶತಮಾನದ ಅಂತ್ಯದಲ್ಲಿ ಅವರ ಪ್ರಭಾವ ಕುಗ್ಗಿದಾಗ ಮತ್ತೊಮ್ಮೆ ಚಾಲುಕ್ಯವಂಶದ ಇಮ್ಮಡಿ ತೈಲಪನು ಚಾಲುಕ್ಯ ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಿದನು. ಇವನ ವಂಶದ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಕಲ್ಯಾಣವು ಇವರ ರಾಜಧಾನಿಯಾಗಿ ಈ ವಂಶದವರಿಗೆ ಕಲ್ಯಾಣಿಯ ಚಾಲುಕ್ಯರೆಂದೇ ಹೆಸರಾಯಿತು.

ಈ ಚಾಲುಕ್ಯ ರಾಜ್ಯ ಮತ್ತು ತನ್ಮೂಲಕ ಕರ್ನಾಟಕ ಕೀರ್ತಿಯು ಪರಾಕಾಷ್ಠೆ ಮುಟ್ಟಿದುದು. ಸೋಮೇಶ್ವರನ ಮಗನಾದ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ. ಇವನ ಅಗ್ರಜನಾದ ಇಮ್ಮಡಿ ಸೋಮೇಶ್ವರನು ದಕ್ಷನಾಗಿರಲಿಲ್ಲ. ಅವನ ಎಂಟು ವರ್ಷಗಳ ಆಳ್ವಿಕೆಯಲ್ಲಿ ಅವನ ತಂದೆ ಕಟ್ಟಿದ ಚಾಲುಕ್ಯ ಸಾಮ್ರಾಜ್ಯವೆಂಬ ಕಟ್ಟಡದಲ್ಲಿ ಬಿರುಕುಗಳು ಕಾಣತೊಡಗಿದುವು.. ತನ್ನ ತಂದೆಯೊಡನೆ ಅವನು ಕಾದಿದ ಕದನಗಳಲ್ಲಿಯೂ, ಆಡಳಿತ ನಿರ್ವಹಣೆಯಲ್ಲಿಯೂ ಚಿಕ್ಕಂದಿನಿಂದ ಪಾಲುಗೊಂಡಿದ್ದ ವಿಕ್ರಮಾದಿತ್ಯನಿಗೆ ಸಾಮ್ರಾಜ್ಯದ ಪರಿಸ್ಥಿತಿಯ ಅರಿವಾಯಿತು. ಹೇಗಾ

ದರೂ ಮಾಡಿ ಶೈಥಿಲ್ಯವನ್ನು ಹೋಗಲಾಡಿಸಬೇಕೆಂದು ನಿಶ್ಚಯಿಸಿದ ವಿಕ್ರಮಾದಿತ್ಯ ಅನಿವಾರ್ಯವಾಗಿ ಅಣ್ಣನನ್ನು ಸಿಂಹಾಸನದಿಂದ ತಾನೇ ರಾಜ್ಯಾಡಳಿತದ ಹೊಣೆ ಹೊರಬೇಕಾಯಿತು; ರಾಜನಾಗಬೇಕಾಯಿತು. ಮೊದಲಿನಿಂದಲೂ ಈ ಕಿರಿಯ ಮಗನ ಶಕ್ತಿ ಸಾಮರ್ಥ್ಯಗಳನ್ನರಿತಿದ್ದ ಮೊದಲನೆಯ ಸೋಮೇಶ್ವರನು ಇವನನ್ನೇ ಯುವರಾಜ ಪದವಿಯಲ್ಲಿ ನೆಲೆಗೊಳಿಸಬೇಕೆಂದು ಹಿಂದೊಮ್ಮೆ ಯೋಚಿಸಿದ್ದಾಗ ಆ ಪದವಿಯನ್ನು ವಿಕ್ರಮಾದಿತ್ಯನು ವಿನಯ ಪೂರ್ವಕವಾಗಿ ನಿರಾಕರಿಸಿದ—ಅದು ಜನ್ಮತಃ ತನ್ನ ಅಣ್ಣನಿಗೆ ಸಲ್ಲಬೇಕಾದ ಗೌರವವೆಂದು. ಆದರೆ ಇಂದು ಅದೇ ಅಣ್ಣನನ್ನು ಸಿಂಹಾಸನದಿಂದ ಹೊರದೂಡಲೇಬೇಕಾಯಿತು—ನಾಡಿಗಾಗಿ ಇಷ್ಟೇ ಅಲ್ಲ. ತಾನು ಸಿಂಹಾಸನಾರೂಢನಾದ ಬಳಿಕ ತನ್ನ ತಮ್ಮನಾದ ಜಯಸಿಂಹನು ತನ್ನ ವಿರುದ್ಧ ದಂಗೆಯೆದ್ದಾಗ ಮತ್ತೊಮ್ಮೆ—ಈ ಬಾರಿ ತಮ್ಮನ ಅವಿಧೇಯತೆಯನ್ನು ಪ್ರತಿಭಟಿಸಿ-ಕದನ ರಂಗಕ್ಕಿಳಿಯಬೇಕಾಯಿತು.

ಹೀಗೆ ಪಟ್ಟಕ್ಕೆ ಬಂದ ವಿಕ್ರಮಾದಿತ್ಯ ಇತಿಹಾಸದಲ್ಲಿ ತನ್ನದೇ ಆದ ಒಂದು ಹಿರಿಮೆಯ ಸ್ಥಾನವನ್ನು ಪಡೆಯಬೇಕೆಂದೋ ಏನೋ, ತನ್ನ ಹೆಸರಿನಲ್ಲಿಯೇ ಒಂದು, ಕಾಲಗಣನೆಯ ಪದ್ಧತಿಯನ್ನು ಆರಂಭಿಸಿದ. ಇದುವರೆಗೂ ಶಕಕಾಲದ ವರ್ಷಗಳನ್ನು ಎಣಿಸುತ್ತಿದ್ದ ಕರ್ನಾಟಕದಲ್ಲಿ ಇವನ ಪಟ್ಟಾಭಿಷೇಕದ ಮೊದಲನೆಯ ವರ್ಷದಿಂದ—ಶಕಕಾಲ ೯೯೯ನೆಯ ಪಿಂಗಳ ಸಂವತ್ಸರ ಚೈತ್ರ ಶುದ್ಧ ಪಾಡಿವಕ್ಕೆ ಸಮನಾಗಬಹುದಾದ ಕ್ರಿ.ಶ. ೧೦೭೬ನೆಯ ಫೆಬ್ರುವರಿ ಮಾಹೆಯ ೨೬ನೆಯ ದಿನಾಂಕ ಆದಿತ್ಯವಾರದಿಂದ ಹೊಸ ಚಾಲುಕ್ಯ ವಿಕ್ರಮಶಕೆ ಆರಂಭವಾಯಿತು.

ತಂದೆಯ ಕಾಲದಲ್ಲಿಯೇ ಗಂಗವಾಡಿ ೯೬೦೦೦ ಮತ್ತು ಬನವಾಸಿ ೧೨೦೦೦ ಪ್ರಾಂತಗಳನ್ನು ಆಳುತ್ತಿದ್ದು ಆತನ ಆಣತಿಯಂತೆ ಅನೇಕ ಸಮರಗಳಲ್ಲಿ ಭಾಗವಹಿಸಿ ತನ್ನ ವಂಶದ ಜನ್ಮ ಶತ್ರುಗಳಂತಿದ್ದ ಉತ್ತರದ ಪರಮಾರ ಹಾಗೂ ದಕ್ಷಿಣದ ಚೋಳ ವಂಶಗಳ ಅರಸರೊಡನೆ ಹೋರಾಡಿ ಚಾಲುಕ್ಯ ರಾಜ್ಯವನ್ನು ಭದ್ರಪಡಿಸಿದ ಈ ವಿಕ್ರಮಾದಿತ್ಯನ ಆಳ್ವಿಕೆಯ ಕಾಲ ಶಾಂತಿ ಸುಭಿಕ್ಷಗಳ ಕಾಲ. ಇವನ ಸಮಕಾಲೀನನಾಗಿದ್ದ ಚೋಳರ ಮೊದಲನೆಯ ಕುಲೋತ್ತುಂಗನು ವೆಂಗಿಯ ಪೂರ್ವ ಚಾಲುಕ್ಯರ ವಂಶಜನೂ ಆಗಿದ್ದ ವೆಂಗಿದೇಶವನ್ನು ಚೋಳ ರಾಜ್ಯಕ್ಕೆ ಕೂಡಿಸಿ ಆಳತೊಡಗಿದ್ದನು. ದೂರದ ದಾಯಾದಿಗಳಾದ ಪೂರ್ವ ಚಾಲುಕ್ಯರ ವೆಂಗಿದೇಶವನ್ನು ಹೇಗಾದರೂ ಮಾಡಿ ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಯೋಚಿಸಿದ ಮೊದಲನೆಯ ಸೋಮೇಶ್ವರ ಆ ದೇಶದ ಪಶ್ಚಿಮಕ್ಕಿದ್ದ ಹಲ-ಕೆಲ ಭಾಗಗಳನ್ನು ಮಾತ್ರ ಆಕ್ರಮಿಸಿ ತೃಪ್ತಿ ಹೊಂದಬೇಕಾಯಿತು. ಪರಸ್ಪರರ ಬಲಾ ಬಲಗಳನ್ನು ಅರಿತುಕೊಂಡಿದ್ದ ವಿಕ್ರಮಾದಿತ್ಯ ಮತ್ತು ಕುಲೋತ್ತುಂಗರು ಅದುವರೆಗೂ ತಾವು ನಡೆಸಿದ ಕದನಗಳನ್ನು ತಾತ್ಕಾಲಿಕವಾಗಿಯಾದರೂ ಕಡೆಗಣಿಸಿ ತಮ್ಮ ತಮ್ಮ

ನಾಡಿನಲ್ಲಿ ಶಾಂತಿ-ಸಮೃದ್ಧಿಗಳನ್ನು ನೆಲೆಗೊಳಿಸಲು ಉದ್ಯುಕ್ತರಾದರು. ಅರಸನಾದ ಬಳಿಕ ವಿಕ್ರಮಾದಿತ್ಯನು ಕಾದಲೇ ಇಲ್ಲವೆಂತಲ್ಲ! ಕೊನೆಯ ಕಾಲದಲ್ಲಿ ಉದ್ಧಟತನದಿಂದ ವರ್ತಿಸಿ ದಂಗೆಯೇಳಲು ಯತ್ನಿಸಿದ ಹೊಯ್ಸಳ ವಿಷ್ಣುವರ್ಧನನನ್ನು ತಗ್ಗಿಸಿದ. ಶಿಲಾಹಾರ ಭೋಜನ ಮೇಲೆ ಒಮ್ಮೆ ಧಾಳಿ ಮಾಡಬೇಕಾಯಿತು. ವೆಂಗಿದೇಶದಲ್ಲಿ ದ್ರಾಕ್ಷಾರಾಮದಲ್ಲಿ ದೊರೆತಿರುವ ಇವನ ಶಾಸನಗಳಿಂದ ಇವನು ಕಡೆಗೂ ಆ ಪ್ರಾಂತಗಳನ್ನು ಆಕ್ರಮಿಸಿಕೊಳ್ಳುವುದರಲ್ಲಿ ಯಶಸ್ವಿಯಾದನೆಂದು ಕಂಡು ಬರುತ್ತವೆ.

ಇವನ ಅಧೀನದಲ್ಲಿ ದಕ್ಷ ಆಡಳಿತಗಾರರೂ, ನುರಿತ ಸೇನಾನಿಗಳೂ ಆಗಿದ್ದ ಅನಂತಪಾಲ ಮುಂತಾದ ಮಹಾ ಪ್ರಧಾನರೂ ಇತರ ಅಧಿಕಾರಿಗಳೂ ಇದ್ದು ಅರಸನು ಕೈಗೊಂಡ ಕಾರ್ಯಗಳ ಯಶಸ್ವಿಗೆ ಬಹಳ ಸಹಾಯ ಮಾಡಿದರು. ಹಾಗೆಂದು ದೇಶ ಸುಭಿಕ್ಷವೂ, ಶಾಂತಿಯುತವೂ ಆಗಿತ್ತು. ಪ್ರಜೆಗಳ ನಿರ್ಭೀತಿಯಿಂದ ಸೌಖ್ಯದಿಂದ ಬಾಳುತ್ತಿದ್ದರು. ಅವನ ರಾಜ್ಯದಲ್ಲಿ ಕಳ್ಳಕಾಕರರ ಬಾಧೆಯೇ ಇರಲಿಲ್ಲವಂತೆ. ಬಾಗಿಲುಗಳನ್ನು ಭದ್ರಪಡಿಸಿಕೊಳ್ಳಬೇಕಾದುದರ ಅವಶ್ಯಕತೆಯೇ ಇಲ್ಲವೆನ್ನುತ್ತಾನೆ ಕವಿ ಬಿಲ್ಹಣ; ಅಷ್ಟೇ ಅಲ್ಲ; ಅಕಾಲ ಮೃತ್ಯುವಾಗಲೀ, ದುರ್ಭಿಕ್ಷವಾಗಲೀ ಕಂಡು ಬರಲಿಲ್ಲ. ವಿಕ್ರಮನ ಕಾಲದಲ್ಲಿ ಪ್ರಜೆಗಳು ಮತ್ತೊಮ್ಮೆ ರಾಮ ರಾಜ್ಯದ ಸವಿ ಕಂಡರಂತೆ. 'ಜಗದೊಳಗರ ಸಿಂಗಂ ಪ್ರಜೆಯೆ ದೈವಂ' ಎಂಬ ನಾಣ್ನುಡಿ ಕೇವಲ ಕವಿವಾಣಿಯಾಗಿರದೆ ಇವನ ಕಾಲದಲ್ಲಿ ರೂಢಿಗೆ ಬಂದದ್ದಾಗಿತ್ತು.

ಗೀತ-ನೃತ್ಯಾದಿ ಕಲೆಗಳ ಪೋಷಕನೂ, ಆಶ್ರಯಧಾತನೂ ಆಗಿದ್ದ ಈ ಅರಸನ ಕಾಲದಲ್ಲಿ ಕರ್ನಾಟಕದ ಕಲೆಗಳು ಸರ್ವತೋಮುಖ ಅಭಿವೃದ್ಧಿಯನ್ನು ಹೊಂದಿದ್ದುವು. ಈ ಅರಸನು ಸಾಹಿತ್ಯಾಭಿಮಾನಿಯೂ, ಕವಿ ಗಮಕಿ-ವಾದಿ-ವಾಗ್ಮಿಗಳ ಆಧಾರ ಸ್ತಂಭನೂ ಆಗಿದ್ದನೆಂಬುದಕ್ಕೆ ಇವನ ಆಸ್ಥಾನದಲ್ಲಿದ್ದ ಬಿಲ್ಹಣ ಕವಿಗಿಂತ ಬೇರೊಬ್ಬನ ನಿದರ್ಶನ ಅವಶ್ಯಕವಾಗದು. ಮಧ್ಯ ಪ್ರದೇಶದ ಈ ಕವಿ ಕಾಶ್ಮೀರದಲ್ಲಿದ್ದು ಅಲ್ಲಿಂದ ದಕ್ಷಿಣಕ್ಕೆ ಬಂದು ಚಾಲುಕ್ಯ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಆಶ್ರಯ ಪಡೆದ. ಈ ಕವಿಯ "ವಿಕ್ರಮಾಂಕದೇವ ಚರಿತ" ಸಂಸ್ಕೃತ ಭಾಷೆಯ ಮಹಾಕಾವ್ಯಗಳಲ್ಲೊಂದೆನಿಸಿಕೊಂಡಿದೆ. ಯಜ್ಞವಲ್ಕ್ಯ ಸ್ಮೃತಿಯ ಆಧಾರದ ಮೇಲೆ ರಚಿತವಾದ ಮಿತಾಕ್ಷರ ಎಂಬ ನ್ಯಾಯ ಶಾಸ್ತ್ರದ ಗ್ರಂಥ ಕೃರ್ತೃವಾದ ವಿಜ್ಞಾನೇಶ್ವರನೂ ಸಹ ಈ ಕರ್ನಾಟೇಶ್ವರನ ಆಸ್ಥಾನದಲ್ಲಿದ್ದವನೇ. ಹೆಚ್ಚೇಕೆ ? ರಾಜಕುಮಾರನಾದ ಭೂಲೋಕಮಲ್ಲನೆನಿಸಿದ ಸೋಮೇಶ್ವರನೇ ಸ್ವತಃ ಕವಿ. ಈತನ 'ಮನಸೋಲ್ಲಾಸ' ಅಥವಾ 'ಅಭಿಲಷಿತಾರ್ಥ ಚಿಂತಾಮಣಿ' ಕ್ರಿ.ಶ. ೧೧೨೯-೩೦ ರಲ್ಲಿ ಮುಗಿಯಿತೆಂದು ತಿಳಿದಿದೆಯಾದ್ದರಿಂದ ತಂದೆಯು ಜೀವಿಸಿದ್ದಾಗಲೇ ಈತನು

ಲೇಖನ ಕಾರ್ಯ ಆರಂಭಿಸಿರಬೇಕು. 'ಪಂಪ ರಾಮಾಯಣ'ದ ಕರ್ತೃವಾದ ಅಭಿನವ ಪಂಪನೆನಿಸಿದ ನಾಗಚಂದ್ರನೂ, 'ಧರ್ಮಾಮೃತ'ದ ಕರ್ತೃವಾದ ನಯಸೇನನೂ ಈ ಕಾಲಕ್ಕೆ ಸೇರಿದವರೆಂಬುದನ್ನು ಇಲ್ಲಿ ಸ್ಮರಿಸಬಹುದು. ಮಲ್ಲಿಕಾರ್ಜುನ ಭಟ್ಟ, ವೈಜನಾಥ, ನಾಗದೇವ, ಮಾಧವ ಭಟ್ಟ, ಭಾಸ್ಕರ, ಚಂದ್ರಭಟ್ಟ, ನಾಗಾರ್ಜುನ ಪಂಡಿತರೇ ಮೊದಲಾದ ಹಲವಾರು ಶಾಸನ ಕವಿಗಳು—ಅವರ ಶಾಸನ ಕಾವ್ಯಗಳಿಂದ ಬೆಳಕಿಗೆ ಬಂದಿದ್ದಾರೆ. ಅನಾಮಧೇಯರಾಗಿ ಉಳಿದಿರುವವರೆಷ್ಟೊ?

ಹೀಗೆ ಅರಸನ ಪ್ರೋತ್ಸಾಹದಿಂದ ಪೋಷಿಸಲಾದ ನಮ್ಮ ಸಂಸ್ಕೃತಿಗೆ ಅಂದು ಒಂದು ವಿಶಿಷ್ಟತೆ ಇತ್ತು. ಇದು 'ಕರ್ನಾಟಕ ಸಂಸ್ಕೃತಿ' ಎನಿಸಿಕೊಳ್ಳಬಹುದಾದ ಒಂದು ಮೇಲ್ಮೆ ನಮ್ಮದಾಗಿ ಆ ಅರಸನ ಆಶ್ರಯದಲ್ಲಿ ಬೆಳೆದು ಬಂತು. ಹಾಗೆಂದೇ ವಿಜ್ಞಾನೇಶ್ವರನು "ಈ ಕ್ಷಿತಿಯಲ್ಲಿ ಕಲ್ಯಾಣ (ರಾಜಧಾನಿಯಾಗಿದ್ದ ಈಗಿನ ಬಸವ ಕಲ್ಯಾಣ) ದಂತಹ ಪುರ ಇನ್ನೊಂದಿಲ್ಲ—ಇನ್ನು ಮುಂದೆ ಆಗಲಾರದು; ವಿಕ್ರಮಾರ್ಕನಿಗೆ ಸಮನಾದ ಅರಸ ಮತ್ತೊಬ್ಬನನ್ನು ಕಂಡರಿಯೆವು; ಕೇಳರಿಯೆವು" ಎಂದಿದ್ದಾನೆ.

ಕನ್ನಡ ರಾಜ್ಯ ರಮಾರಮಣ ಕೃಷ್ಣದೇವರಾಯ

ಇಂತು ಮೆರೆದ ಕರ್ನಾಟಕದ ವೈಭವ ಕಾಲಚಕ್ರಕ್ಕೆ ಸಿಲುಕಿ ಇಳಿಮುಖವಾಗತೊಡಗಿತು. ವಿಕ್ರಮಾದಿತ್ಯನ ನಂತರ ಬಂದ ಅರಸರು ಹಿರಿಯರು ಕಟ್ಟಿದ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲಾರದೆ ಹೋದರು. ಕ್ರಿ.ಶ. ೧೪ನೆಯ ಶತಮಾನದಲ್ಲಿ ಆ ವೇಳೆಗಾಗಲೇ ಉತ್ತರ ಹಿಂದೂಸ್ಥಾನವನ್ನು ಆಕ್ರಮಿಸಿ ಅಲ್ಲಿ ರಾಜ್ಯಸ್ಥಾಪನೆ ಮಾಡಿದ್ದ ಮಹಮ್ಮದೀಯರು ತಮ್ಮ ರಾಜ್ಯದ ವಿಸ್ತಾರದ ಯೋಜನೆ ಮಾಡಿ ದಕ್ಷಿಣದ ಕಾಕತೀಯ, ಯಾದವ ಮತ್ತು ಹೊಯ್ಸಳರ ಮೇಲೆ ದಾಳಿಮಾಡಿ ಅವರ ಸಂಪತ್ತನ್ನು ಸೂರೆಗೊಂಡು ಅವರ ರಾಜ್ಯದ ಅವನತಿಗೆ ಕಾರಣರಾದರು. ಆದರೆ ಇವರದು ಕೇವಲ ರಾಜಕೀಯ ಅತಿಕ್ರಮಣವಾಗಿರದೆ, ಮತ ಪ್ರಚಾರದ, ಮತಾಂತರಗೊಳಿಸುವ ಕಾರ್ಯಾಚರಣೆಯಾಗಿದ್ದು, ಇದು ಅವರು ಹಿಂದೂ ಧರ್ಮದ ಮೇಲೆಯೇ ನಡೆಸಿದ ಧಾಳಿಯಾಗಿತ್ತು. ಈ ವಿಷಮ ಪರಿಸ್ಥಿತಿಯಲ್ಲಿ ಕೇವಲ ಕರ್ನಾಟಕವನ್ನಷ್ಟೇ ಅಲ್ಲ, ಸಮಗ್ರ ದಕ್ಷಿಣ ಭಾರತವನ್ನು, ಹಿಂದೂ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾದ ಕರ್ತವ್ಯ ಕರ್ನಾಟಕದ ಅರಸುಮನೆತನವಾದ ಹೊಯ್ಸಳರ ಮಾಂಡಲಿಕರೂ ಬಂಧುಗಳೂ ಆದ ಸಂಗಮ ವಂಶದ ಸೋದರರಾದ ಹರಿಹರ ಬುಕ್ಕರದಾಗಿತ್ತು. ಶೃಂಗೇರಿಯ ವಿದ್ಯಾರಣ್ಯರ ಆಶೀರ್ವಾದ ಬಲದಿಂದ, ತಮ್ಮ ಇತರ ನಾಲ್ವರು ತಮ್ಮಂದಿರ ಬೆಂಬಲದೊಡನೆ ಹರಿಹರನು

ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಮಾಡಿದನು. ಹಂಪೆಯಲ್ಲಿ ಸ್ಥಾಪಿತವಾದ ಈ ಸಾಮ್ರಾಜ್ಯ ಹಿಂದೂ ಸಂಸ್ಕೃತಿಯ ಪ್ರತೀಕವಾಯಿತು. ಈ ಸಾಮ್ರಾಜ್ಯದ ಅರಸರು ಕೇವಲ ಕನ್ನಡನಾಡು, ಕರ್ನಾಟಕ ಸಂಸ್ಕೃತಿ ಎಂಬ ಒಂದು ವಿಧದ ಸಂಕುಚಿತ ಮನೋಭಾವನೆಯನ್ನು ಮೆಟ್ಟಿ ಇಡೀ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹಿಂದೂ ಸಂಸ್ಕೃತಿಯ, ಹಿಂದೂ ಧರ್ಮದ ರಕ್ಷಣೆಗಾಗಿ ಹೋರಾಡಬೇಕಾದ ಹೊಣೆ ಹೊತ್ತರು. ಇಂತಹವರಲ್ಲಿ ಅತಿ ಶ್ರೇಷ್ಠನಾದವನು ಕೃಷ್ಣದೇವರಾಯ.

ಕ್ರಿ.ಶ. ೧೫೦೯ರಲ್ಲಿ ಪಟ್ಟಕ್ಕೆ ಬಂದು ತುಳುವ ವಂಶದ ಕೃಷ್ಣದೇವರಾಯನ ಕಾಲದಲ್ಲಿ ಈ ನಾಡು ವಿಶ್ವದಲ್ಲಿಯೇ ಪ್ರಸಿದ್ಧಿ ಹೊಂದಿದ ಸಾಮ್ರಾಜ್ಯವೆನಿಸಿಕೊಂಡಿತು. ಇವನ ಕಾಲದಲ್ಲಿ ಭಾರತಕ್ಕೆ ಬಂದ ಪೋರ್ತುಗೀಸ ಯಾತ್ರಾರ್ಥಿಗಳೂ, ರಾಯಭಾರಿಗಳೂ ಆದ ಡೂಯರ್ಟೆ ಬಾರ್ಬೋಸ (Duarte Barbosa) ಡೊಮಿನಿಗೊ ಪೇಸ್ (Dominigo Paes) ಮತ್ತು ನ್ಯೂನಿಜ್ (Nuniz)ರು ಪ್ರಮುಖರು. ಇವರು ರಾಯನ ಕಾಲದಲ್ಲಿ ಅವನ ರಾಜ್ಯದಲ್ಲೂ, ರಾಜಧಾನಿಯಲ್ಲೂ ಸುತ್ತಿ, ಆ ರಾಯನ, ಆ ದೇಶದ—ಪ್ರಜೆಗಳ ಕುರಿತು ಬರೆದಿಟ್ಟಿದ್ದಾರೆ. ದೇಶದಲ್ಲಿ ಹಾಲು ಹೊನ್ನಿನ ಹೊಳೆ ಹರಿಯುತ್ತಿತ್ತೆಂದರೆ ಹೆಚ್ಚಿನ ಮಾತಲ್ಲ. ರಾಯನ ಕಾಲ ಸಂಸ್ಕೃತ, ತೆಲುಗು ಹಾಗೂ ಕನ್ನಡ ಸಾಹಿತ್ಯಗಳ ಉತ್ಕರ್ಷ ಕಾಲ. ಅರಸನು ಕದನಗಳಲ್ಲಿ ನಿರತನಾಗಿದ್ದರೂ ಸಹ ಸದಾ ಕನ್ನಡನಾಡಿನ ಪುರೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದ. ಧರ್ಮಕ್ಕೇ ಚ್ಯುತಿ ಬಂದಾಗ ಬೇರೇನೂ ಮಾರ್ಗ ಕಾಣದೆ ದೇವರ ಮೊರೆ ಹೋಗಬೇಕಾಗಿ ಬಂದದ್ದರಿಂದಲೋ ಎಂಬಂತೆ ಅದು ಭಕ್ತಿಮಾರ್ಗದ ಉಚ್ಛ್ರಾಯ ಕಾಲವೂ ಆಗಿದ್ದು ವ್ಯಾಸರಾಯ, ಪುರಂದರದಾಸ ಮತ್ತು ಕನಕದಾಸರು ಭಕ್ತಿಮಾರ್ಗದ ಪ್ರಚಾರಕರಾಗಿ ಮೆರೆದರು. ಸಾಮಾಜಿಕ, ಆರ್ಥಿಕ ಸುಭದ್ರತೆ ರಾಜ್ಯದಲ್ಲಿ ನೆಲೆಗೊಂಡಿತ್ತು. ವಸ್ತುತಃ ನಮ್ಮ ದೇಶದ ಐಶ್ವರ್ಯವೇ ಹೊರ ನಾಡಿನವರನ್ನು ಆಕರ್ಷಿಸಿತ್ತೆನ್ನಬಹುದು. ರಾಯನು ರಾಜಧಾನಿಯಾದ ಹಂಪೆಯಲ್ಲಿ ಕಟ್ಟಿಸಿದ ವಿಠ್ಠಲಸ್ವಾಮಿಯ ಕೃಷ್ಣಸ್ವಾಮಿಯ ಗುಡಿಗಳು ಏಕಶಿಲೆಯ ನರಸಿಂಹನ ಮೂರ್ತಿ–ಇವುಗಳ ಭಗ್ನಾವಶೇಷಗಳು ಆಗಿನ ಕಲಾವೈಭವದ ಜೀವಂತ ಸಾಕ್ಷಿಗಳಾಗಿ ಈಗಲೂ ಉಳಿದಿವೆ.

ಕ್ರಿ. ಶ. ೧೫೦೯ ರಲ್ಲಿ ರಾಯನು ಪಟ್ಟಕ್ಕೆ ಬಂದಾಗ ರಾಜ್ಯದ ಪರಿಸ್ಥಿತಿ ಆಶಾದಾಯಕವಾಗಿರದೆ ಸಾಮಂತರಾಗಿದ್ದ ಪಾಳೆಯಗಾರರು ಕೇಂದ್ರದ ವಿರುದ್ಧ ಬಂಡಾಯ ಹೂಡಿದ್ದರು. ಒರಿಸ್ಸಾದಲ್ಲಿ ಆಳುತ್ತಿದ್ದ ಗಜಪತಿ ವಂಶದ ಅರಸನು ರಾಜ್ಯದ ಪೂರ್ವ ಭಾಗಗಳನ್ನು ಆಕ್ರಮಿಸಿಕೊಂಡಿದ್ದನು. ಬಿಜಾಪುರ ಸುಲ್ತಾನನಾದ ಯೂಸುಫ್ ಅದಿಲ್ ಖಾನ್ ಮತ್ತು ಬಹಮನಿಯ ೨ನೆಯ ಮಹಮದ್

ಶಾಹ ಇವರುಗಳು ಸಾಮ್ರಾಜ್ಯದ ವಿರುದ್ಧ ಧಾರ್ಮಿಕ ಯುದ್ಧ (Jeehad) ಗಳಲ್ಲಿ ತೊಡಗಿದರು. ಹೀಗೆ ಹದಗೆಟ್ಟಿದ್ದ ರಾಜ್ಯಕ್ಕೆ ಅರಸನಾಗಿ ಬಂದ ಕೃಷ್ಣದೇವ ರಾಯ ಕೂಡಲೇ ಹಲವಾರು ಕ್ರಮಗಳನ್ನು ಕೈಕೊಂಡನು. ಪ್ರಜೆಗಳನ್ನು ಮದುವೆಯ ಸುಂಕ ಮುಂತಾದ ಕರಗಳಿಂದ ಮುಕ್ತಗೊಳಿಸಿ ಅವರನ್ನು ತುಷ್ಟಿಗೊಳಿಸಿದ್ದಲ್ಲದೆ, ಬೊಕ್ಕಸವನ್ನು ಸುಧಾರಿಸಲು ಸೂಕ್ತ ಕ್ರಮಗಳನ್ನು ಸಂಗ್ರಹಿಸಿ ಸೈನ್ಯ ಸದಾ ಸನ್ನದ್ಧವಾಗಿರುವಂತೆ ಮಾಡಿದನು. ಉಮ್ಮತ್ತೂರು ಪಾಳೆಯಗಾರನಾಗಿದ್ದ ಗಂಗರಾಜನನ್ನೂ ಒಮ್ಮೆ ಸದೆ ಬಡಿದು ಅವನಿಂದ ಶ್ರೀರಂಗಪಟ್ಟಣ ಮತ್ತು ಶಿವನ ಸಮುದ್ರದ ಕೋಟೆಗಳನ್ನೂ ವಶಪಡಿಸಿಕೊಂಡು ತನ್ನ ಒಬ್ಬ ಅಧಿಕಾರಿಯನ್ನು ಅಲ್ಲಿ ನೇಮಿಸಿದನು. ಬಹುಮನಿ ಸುಲ್ತಾನರ ವಿರುದ್ಧ ದಂಡೆತ್ತಿ ಹೋಗಿ ಅವರನ್ನು ಸೋಲಿಸಿದನು. ಯೂಸುಫ್ ಅದಿಲ್ ಖಾನನು ಈ ಕದನದಲ್ಲಿ ಮಡಿದನು. ಕೃಷ್ಣಾ–ತುಂಗಭದ್ರಾ ನಡುವಣ ಪ್ರದೇಶಗಳನ್ನು ಆಕ್ರಮಿಸಿ ರಾಯಚೂರು ಕೋಟೆಯನ್ನು ಕರಗತ ಮಾಡಿಕೊಂಡನು. ಮಹಮುದ್‌ಷಹನನ್ನು ಅವನ ರಾಜ್ಯದಲ್ಲಿ ಮತ್ತೆ ನಿಲ್ಲಿಸಿ 'ಯವನರಾಜ್ಯ ಪ್ರತಿಷ್ಠಾಪನಾಚಾರ್ಯ' ನೆನಿಸಿಕೊಂಡನು. ಗಜಪತಿ ವಂಶದ ಪ್ರತಾಪರುದ್ರನ ಮೇಲೆ ನುಗ್ಗಿ ಉದಯಗಿರಿ, ಕಂದಕೂಡು, ಕೊಂಡವೀಡು ಕೋಟೆಗಳನ್ನು ವಶಪಡಿಸಿಕೊಂಡು ಕೊನೆಗೆ ಕಲಿಂಗ ರಾಜ್ಯದ ಸಿಂಹಾಚಲವನ್ನು ಮುತ್ತಿದನು. ಹೌಹಾರಿದ ಗಜಪತಿಯ ಅರಸನಾದ ಪ್ರತಾಪರುದ್ರನು ರಾಜ್ಯವನ್ನು ಬಿಟ್ಟೋಡಿದನು. ನಂತರ 'ಗಜಪತಿ ಸಪ್ತಾಂಗಹರಣ' ನಾದ ರಾಯನು ಪೊಟ್ಟನೂರು ಕೋಟೆಯಲ್ಲಿ ವಿಜಯ ಸ್ತಂಭವೊಂದನ್ನು ನೆಟ್ಟು ರಾಜಧಾನಿಯಾದ ಕಟಕಪುರಿಯಲ್ಲಿ ಅವಿತಿದ್ದ ಪ್ರತಾಪರುದ್ರನನ್ನು ಮತ್ತೊಮ್ಮೆ ಸೋಲಿಸಿದನು. ಆದರೂ ಶರಣಾಗತನಾದ ಅವನೊಡನೆ ಸ್ನೇಹವನ್ನು ಬೆಳೆಸಿ ಅವನ ರಾಜ್ಯವನ್ನು ಬಿಟ್ಟುಕೊಟ್ಟು, ಅವನ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದನು.

ಈ ಕದನಗಳಲ್ಲಿನ ರಾಯನ ರಾಜತಂತ್ರ ಶ್ಲಾಘನೀಯವಾಗಿತ್ತು. ಗಜಪತಿಯ ಮೇಲೆ, ಉಮ್ಮತ್ತೂರಿನ ಪಾಳೆಯಗಾರರ ಮೇಲೆ ಆತನು ದಂಡೆತ್ತಿದುದು ಸಾಮ್ರಾಜ್ಯ ವಿಸ್ತರಣೆಯ ಲೋಭದಿಂದಲ್ಲ! ಅದಕ್ಕಿಂತಲೂ ಹೆಚ್ಚಾಗಿ ಹಿಂದುಗಳೇ ಆದ ಆ ಶತೃಗಳು ತಮ್ಮ ನಾಡಿನ, ಸಂಸ್ಕೃತಿಯ ರಕ್ಷಣೆಗೆ ಬದಲು ಸ್ವಾರ್ಥಪರರಾಗಿ, ಮಹಮ್ಮದೀಯರ ಪ್ರಲೋಭನಕ್ಕೊಳಗಾಗಿ, ಅವರ ಕುತಂತ್ರದ ಕೈಗೊಂಬೆಗಳಾಗಿ ನಾಡಿನ, ಸಂಸ್ಕೃತಿಯ ವಿನಾಶಕ್ಕೆ ಕಾರಣರಾಗುತ್ತಿದ್ದುದನ್ನು ತಡೆಗಟ್ಟಲು! ಆ ಕಾರಣದಿಂದಲೇ ಗಜಪತಿಗೆ ಬುದ್ಧಿವಾದ ನೀಡಿ ಅವನನ್ನು ಅವನ ರಾಜ್ಯದಲ್ಲಿ ಪುನಃ ಪ್ರತಿಷ್ಠಾಪಿಸಿದ್ದು. ಹಾಗೆಂದು ಅರಸನು ಮಹಮ್ಮದೀಯರ ದ್ವೇಷಿಯಾಗಿರದೆ ಅವರ ರಾಜ್ಯದಾಹ ಮಿತಿ ಮೀರಿದಾಗ, ಹಿಂದುಗಳು

ತಮ್ಮ ತಾಯ್ನಾಡಿಗಾಗಿ ಸರ್ವಸ್ವವನ್ನೂ ತ್ಯಾಗಮಾಡ ಬಲ್ಲರೆಂಬುದನ್ನು ಅವರಿಗೆ ತೋರಿಸಿ ಕೊಡಲೆಂದೇ ಅವರೊಡನೆ ಅವಿಚ್ಛಿನ್ನವಾಗಿ ಹೋರಾಡಿ ಕೃತಾರ್ಥನಾದ.

ಕರ್ನಾಟಕದ ಇತಿಹಾಸದಲ್ಲಷ್ಟೇ ಅಲ್ಲ, ಭಾರತದ ಇತಿಹಾಸದಲ್ಲಿಯೇ ಖ್ಯಾತಿವೆತ್ತ ಕೆಲವೇ ಅರಸರಲ್ಲಿ ಪ್ರಮುಖನು ಕೃಷ್ಣದೇವರಾಯ. ಇವನನ್ನು ಇವನ ರಾಜನೀತಿಯನ್ನು, ಇವನ ರಾಜ್ಯವನ್ನು ಹೊರನಾಡಿನಿಂದ ಬಂದು ಕಂಡವರೆಲ್ಲಾ ಮುಕ್ತಕಂಠದಿಂದ ಹೊಗಳಿದ್ದಾರೆ. ಪ್ರತಿನಿತ್ಯದ ಅಂಗಸಾಧನೆಯಿಂದ ಉಕ್ಕಿನಂತೆ ಬಲಿಷ್ಠವಾದ ಇವನ ಶರೀರ, ಮುಖದಲ್ಲಿ ಸಿಡುಬಿನ ಕಲೆಗಳಿದ್ದರೂ, ತೇಜಸ್ಸಿನಿಂದ ಕಂಡವರ ಕಣ್ಣನ್ನು ಕೋರೈಸುತ್ತಿತ್ತು. ಪರಿಪೂರ್ಣ ಜ್ಞಾನಿಯೂ ವ್ಯವಹಾರ ಚತುರನೂ, ರಾಜನೀತಿ ಕುಶಲನೂ ಆದ ರಾಯನು ಕದನ ರಂಗದಲ್ಲಿ ಕಾಳಭೈರವನಂತಿರುತ್ತಿದ್ದನು. ಪ್ರಜಾನುರಾಗ ರಾಜ್ಯದ ಮೂಲಾಧಾರವೆಂಬುದನ್ನರಿತ ಈತನು ಪ್ರಜಾಹಿತಕ್ಕಾಗಿ ಅವರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿದನು. ಎಂಟು ಪ್ರಮುಖವಾದ ಬಂದರಗಳುಳ್ಳ ಸುಮಾರು ಹದಿನಾರು ನೂರು ಮೈಲಿಯ ಕಾರಾವಳಿ ಪ್ರದೇಶದ ಅಧಿಪತಿಯಾದ ಅರಸನು ವ್ಯಾಪಾರವನ್ನು ಪ್ರೋತ್ಸಾಹಿಸಿದನು. ವ್ಯಾಪಾರೋದ್ದೇಶದಿಂದ ಆಗ ಬರತೊಡಗಿದ್ದ ಪೋರ್ತುಗೀಸರೊಡನೆ ಮೈತ್ರಿಯನ್ನು ಬೆಳೆಸಿ ಅವರ ಸ್ನೇಹ ಸಂಬಂಧದಿಂದ ದೇಶದ ಐಶ್ವರ್ಯವನ್ನೂ ಬಲವನ್ನೂ ಹೆಚ್ಚಿಸಿಕೊಂಡನು. ಧರ್ಮಾಭಿಮಾನಿಯಾದ ರಾಜನು ಹಿಂದೆಂದೂ ಕೇಳದಷ್ಟು ದಾನಗಳನ್ನು ದೇಶದ ದೇವಾಲಯಗಳಿಗಿತ್ತು. ಮತ್ತೊಮ್ಮೆ ಅವುಗಳು ಸಾಂಸ್ಕೃತಿಕ ಕೇಂದ್ರಗಳಾಗುವಂತೆ ಮಾಡಿದನು. ಕಾಲಗತಿಯಿಂದಲೂ, ಪರಾಕ್ರಮಿಗಳ ಸೌಜನ್ಯದಿಂದಲೂ ಶಿಥಿಲಗೊಂಡಿದ್ದ ದೇವಸ್ಥಾನಗಳನ್ನೂ ಕಟ್ಟಿಸಿ ಅಲ್ಲಿನ ವಿದ್ಯಾದಾನ, ಅನ್ನದಾನ, ನಿತ್ಯ ಪೂಜಾರಿ ಕರ್ಮಗಳು ನಿರ್ವಿಘ್ನವಾಗಿ ನೆರವೇರುವಂತೆ ಏರ್ಪಾಡುಗಳನ್ನು ಮಾಡಿದನು.

ಸ್ವತಃ ಕವಿಯೂ, ಲೇಖಕನೂ ಆಗಿದ್ದ ಅರಸನು ಸಂಸ್ಕೃತ ಕನ್ನಡ—ತೆಲಗು ಈ ತ್ರಿಭಾಷಾ ಪಂಡಿತನಾಗಿದ್ದು 'ಮದಲಾಸ ಚರಿತಂ' 'ರಸ ಮಂಜರಿ' ಮುಂತಾದ ಸಂಸ್ಕೃತ ಗ್ರಂಥಗಳನ್ನೂ, 'ಅಮುಕ್ತ ಮಾಲ್ಯದ' ಎಂಬ ರಾಜನೀತಿಯ ತೆಲಗು ಕಾವ್ಯವನ್ನೂ ರಚಿಸಿದನು. ಅಲ್ಲಸಾನಿ ಪೆದ್ದನ್ನ, ನಂದಿ ತಿಮ್ಮನ ಮೊದಲಾದ ಎಂಟು ಕವಿಗಳು ಆಸ್ಥಾನದ ಅಷ್ಟ ದಿಗ್ಗಜಗಳಾಗಿ ಮೆರೆದರು. ಕನ್ನಡದಲ್ಲಿ ದಾಸಸಾಹಿತ್ಯ ಪ್ರಾಸಂಗಾಯು, ಪುರಂದರದಾಸ ಮತ್ತು ಕನಕದಾಸರಿಂದಾಗಿ ವಿಪುಲವಾಗಿ ಬೆಳೆಯಿತು. ತಿಮ್ಮಣ್ಣ ಕವಿಯ 'ಕರ್ನಾಟಕ ಭಾರತ ಕಥಾ ಮಂಜರಿ' ಗುಬ್ಬಿಯ ಮಲ್ಲಣಾರ್ಯನ 'ಭಾವ ಚಿಂತಾರತ್ನ' ಮತ್ತು 'ವೀರಶೈವಾಮೃತ

ಪುರಾಣ' 'ವಿರುಪರಾಜನ' 'ತ್ರಿಭುವನ ತಿಲಕ' ಮೊದಲಾದ ಕನ್ನಡ ಗ್ರಂಥಗಳು ರಾಜನ ಕನ್ನಡ ಸಾಹಿತ್ಯಾಭಿಮಾನದ ಸಂಕೇತಗಳಾಗಿವೆ.

ಇಂತಹ ಅರಸನನ್ನು ತೆಲುಗರು ಆಂಧ್ರದವನೆಂದೂ. ಕನ್ನಡಿಗರು ಕನ್ನಡಿಗ ನೆಂದೂ ಹೆಮ್ಮೆಯಿಂದ ಸಾರಿಕೊಳ್ಳುವುದರಲ್ಲಿಯೇ ಸ್ಪರ್ಧಿಸಿದ್ದಾರೆ. 'ಕನ್ನಡ ರಾಜ್ಯ ರಮಾರಮಣ' 'ಕರ್ಣಾಟಕ ಮಹೀಶ' 'ಕರ್ಣಾಟಕ ರಾಜ್ಯ ರಕ್ಷಾಮಣಿ' 'ಕರ್ಣಾಟೇಶ್ವರ ಶ್ರೀ ಕೃಷ್ಣರಾಯ' ಎಂದೆಲ್ಲಾ ಶಾಸನಗಳಲ್ಲಿ, ಸಂಸ್ಕೃತ, ತೆಲಗು, ಹಾಗೂ ಕನ್ನಡ ಸಾಹಿತ್ಯ ಗ್ರಂಥಗಳಲ್ಲಿ ಕರೆಯಲ್ಪಟ್ಟಿರುವ ಈ ಅರಸ ಕನ್ನಡಿಗ ನೆಂಬುದು ಸುಸ್ಪಷ್ಟವಾದರೂ ಪ್ರಥಮತಃ ಇವನು ಭಾರತೀಯ– ಭಾರತೀಯ ಸಂಸ್ಕೃತಿಯ ಪ್ರತೀಕವೆಂಬುದನ್ನು ನೆನಪಿನಲ್ಲಿಡಬೇಕು.

—o—

ಒಲುಮೆ ಒಂದು ಕಾವ್ಯರಕ್ಷೆ ಇಹ ಸಮಸ್ಯೆಗೆ
ಮದುವೆ ಅದಕೆ ಮಧುರ ದೀಕ್ಷೆಗೃಹ ತಪಸ್ಸಿಗೆ :

X X X

ದೃಷ್ಟಿಯಂತೆ ಸೃಷ್ಟಿ

X X X

ನೂರು ಜನ್ಮದ ಬೇವು ನೂರು ಜನ್ಮಕೆ ಬೆಲ್ಲ
ನೂರು ನಿಟ್ಟುಸಿರುಗಳು ಸೇರಿದರೆ
ಒಂದು ನಗೆ ಹೊಮ್ಮುವುದು

X X X

ಅತಿ ಎಲ್ಲಿಯೂ ಒಳಿತಲ್ಲ

X Z X

ಅನುಭವ ಸ್ಥವಿರೆಯಾದರೂ ಸರ್ವದಾ ಪ್ರಗತಿಶೀಲೆ.

X X X

ಅನುರಾಗವೆಲ್ಲಿದೆಯೋ ಅಲ್ಲಿ ವೈಕುಂಠ
ಪ್ರೇಮವೆಲ್ಲಿದೆಯೋ ಅಲ್ಲಿ ಕೈಲಾಸ

X X X

ಕುಮಾರ ವಾಲ್ಮೀಕಿ

ಶ್ರೀ ಕಾಶಿ ವಿಶ್ವನಾಥ ಶೆಟ್ಟಿ, ಎಂ.ಎ.,

ಪ್ರಾರ್ಥನೆ

ಶ್ರೀ ಜನಕಜಾರಮಣ ವಿಮಲ ಸ
ರೋಜ ಸಂಭವ ಜನಕನನುಪಮ
ರಾಜಶೇಖರವಿನುತ ನಿಖಿಳಾಮರ ಕಿರೀಟಚಯ
ರಾಜಿತಾಮಲ ಲಲಿತಪದ ಪಂ
ಕೇಜನಾನತ ಜನದಯಾಸುರ
ಭೂಜ ತೊರವೆಯ ರಾಯ ನರಹರಿ ಪಾಲಿಸುಗೆ ಜಗವ.

ಪರಮ ಮಂಗಳಮೂರ್ತಿ ಪಾವನ
ಚರಿತೆ ಪರಮಾನಂದಮಯ ಪುರ
ಹರ ಪುರಂದರ ಪೂಜಿತಾಂಘ್ರಿ ಸರೋಜ ಶಶಿಮೌಳಿ
ಶರಣ ಜನ ಸುರಧೇನು ಗಂಗಾ
ಧರ ಗಜಾಸುರ ಮಥನ ಗೌರೀ
ವರ ತ್ರಿಯಂಬಕನೊಲಿದು ಸಲಹುಗೆ ಸಕಲ ಸಜ್ಜನರ.

ವನರುಹಾಸನ ವಿಶ್ವಜಗತೀ
ಜನಕ ಸನಕಾದ್ಯಖಿಳ ಮುನಿಜನ
ವಿನುತ ವಿಬುಧವರೇಣ್ಯ ವಾಣೀವಧು ಮುಖಾಂಭೋಜ
ದಿನಪ ಘನ ಚಾತುರ್ಯ ಚತುರಾ
ನನ ರಜೋಗುಣ ಲೋಕವಿಭು ಭೂ
ವಿನುತ ವಿಮಲವಿರಿಂಚಿಮಾಳ್ಕೆಮಗಖಿಳ ಸಂಪದವ.

ಉದಧಿಲಂಘನನ ವನಿ ಜಾಸ
ಮ್ಮುದವಿವರ್ಧನ ವೈರಿಭಟಗಜ
ವಿದಳನೋದ್ಧತ ಸಿಂಹ ಲಂಕಾನಗರ ನಿರ್ದಹನ
ಕದನಕರ್ಕಶ ಭೀಮ ರಿಪುದಶ

ವದನ ದರ್ಪವಿರಾಮ ರಾಘವ
ಪದ ಸರೋಜ ಭ್ರಮರ ಭುವನ ಪ್ರಾಣಜಂ ಪಂಪೆ

ಸರಿಸಿಜಾಂಘ್ರಿದ್ವಯುದ ಕೋಮಲ
ಚರಣಕಾಂಡದ ಘನನಿತಂಬದ
ನಿರುಪಮಾಂಗದ ನಿಮ್ನ ನಾಭಿಯ ನಿಬಿಡ ಕುಜಭರದ
ವರತರಾಭಯಕರದ ಶೋಭಾ
ಕರದ ನಗೆಮೊಗದನುಪಮದ ಬಂ
ಧುರದ ಭಾರತಿ ನಿಲುಗೆ ಮನ್ಮುಖ ಪದ್ಮಸದ್ಮದಲಿ.

ಕರ ಚತುಷ್ಟಯುದುದಿತ ಮದ ಸಿಂ
ಧುರ ನಿಭಾನನದಮಲ ಲಂಬೋ
ದರದ ವರಸಿಂಧೂರ ಚಂದನ ಗಂಧ ಬಂಧುರದ
ಉರುಲಲಾಟದಿ ನರ್ತಿಸುವ ಕಚ
ಭರದ ಕಮನೀಯ ಪ್ರಭಾವಿ
ಸ್ತರ ವಿನಾಯಕ ಮಾಡೆಮಗೆ ನಿರ್ವಿಘ್ನದಾಯಕನ.

ಆದಿಕವಿಯಾದ ವಾಲ್ಮೀಕಿಯಿಂದ ಹಿಡಿದು ಕನ್ನಡ ಕುವೆಂಪುವರೆಗೆ ರಾಮಾಯಣ ಪರಂಪರೆಯನ್ನು ಸಿಂಹಾವಲೋಕನ ಕ್ರಮದಿಂದ ಈಕ್ಷಿಸಿದಾಗ ಭಾಷೆ, ಜಾತಿ ಮತ ಪಂಥಗಳ ಭೇದವಿಲ್ಲದೆ ಅದಕ್ಕೆ ಸಂದಿರುವ ಗೌರವವು ಅದರ ಮಹತ್ ಬೃಹತ್‌ಗಳಿಗೆ ಜೀವಂತ ಸಾಕ್ಷಿಯಾಗಿದೆ. ಒಂದು ದೇಶದ ನಾಗರೀಕತೆಯ ಧ್ರುವ ಸಾಕ್ಷಿಎಂದರೆ ಆ ದೇಶದ ಸಾಹಿತ್ಯ, ಕಲಾಸೌಧಗಳು ನಿರ್ಮಾಣ ನಗರದ ಭಗ್ನಾವಶೇಷಗಳು ಅಲ್ಲಿನ ಅಂದಿನ ಕಲಾಪ್ರೌಢಿಮೆಯ ಸೂಕ್ಷ್ಮ ಸಂಕ್ಷಿಪ್ತ ಊಹಾತ್ಮಕ ಚಿತ್ರದ ಅಸ್ಥಿಪಂಜರವನ್ನು ಕೊಟ್ಟರೆ, ಸಾಹಿತ್ಯ ಅದರ ದಷ್ಟಪುಷ್ಟ ಸೌಂದರ್ಯದ ಸಾಕಾರದ ಸಾಕ್ಷಾತ್ಕಾರ ಮಾಡಿಸಿಕೊಡುತ್ತದೆ. ಅಂತೆಯೇ ಭಾರತದ ಅಸಂಖ್ಯಾಂತ ಧರ್ಮಗಳ ಏಕಮೇವ ಸೂತ್ರವರ್ತಿಯಾದ ರಾಮಾಯಣ, ಭಾರತಗಳು ಭರತಭೂಮಿಯ ಅವಿಶ್ರಾಂತ ಉನ್ಮೀಲಿತ ನೇತ್ರಗಳಾಗಿವೆ. ಕಾಲ ದೇಶಾತೀತ ಸಾರ್ವಭೌಮ ಸಾಹಿತ್ಯಕೃತಿಗಳಾಗಿವೆ. ಜನಸೌಭಾಗ್ಯಕ್ಕಾಗಿಯೋ, ಜನಮಂಗಳಕ್ಕಾಗಿಯೋ ಅಥವಾ ಆತ್ಮ ಕಲ್ಯಾಣಕ್ಕಾಗಿಯೋ ರಾಮಾಯಣ ಪಾರಾಯಣ ಅವಿಶ್ರಾಂತವಾಗಿ ನಡೆಯುವಾಗಿ ಆತ್ಮಸಾಕ್ಷಾತ್ಕಾರಗೊಂಡ ಆತ್ಮದ ಅನಂತ ದರ್ಶನವು ಆನಂದಾರಾಮದಲ್ಲಿ ಮುಳುಗಿದಾಗ ಆ ಜಗನ್ನಿಯಾಮಕನ ಅವತಾರಗಳನ್ನು ಅಂದಿನ ಕಾಲ ದೇಶ ವರ್ತಮಾನಾನುಕೂಲತೆಗೆ ಅಳವಡಿ

ಹಾಡಿದ್ದಾರೆ ಕವಿಶ್ರೇಷ್ಠರು. ಅದಕ್ಕೆ ಭಾಷೆಯೊಂದು ಮಾಧ್ಯಮವೇ ಹೊರತು ಬಂಧನವಲ್ಲ. ಹೀಗೆ ನಾರದನಿಂದ ಪ್ರೇರಿತರಾದ ವಾಲ್ಮೀಕಿ ಮಹರ್ಷಿಗಳು ವಲ್ಮೀಕ ಕೋಗಿಲೆಯಾಗಿ ರಾಮಾ ರಾಮಾ ಎಂದು ಕೂಜನ ಗೈದರೋ ಅದು ಗಂಗಾ ಸ್ತೋತ್ರವಾಗಿ. ದೇವಗಂಗೆಯಾಗಿ ನಭೋಗಣದಿಂದ ಧರೆಗಿಳಿಯಲ್ ಅದನ್ನ (ಪಾ) ಮಾನಾಮಿ ಭಕ್ತಿಪರವಶರಾಗಿ ತಮ್ಮ ಅಮರವಾಣಿಯಿಂದ ಆಯಾ ಭಾಷೆಯಲ್ಲಿ ಬರೆಯತೊಡಗಿದರು.

ಪ್ರಸ್ತುತ ಕನ್ನಡ ಭಾಷೆಯಲ್ಲಿನ ರಾಮಾಯಣ ಪರಂಪರೆಯನ್ನು ಇಲ್ಲಿ ವಿವೇಚಿಸುವುದು ಸೂಕ್ತವಾಗಿದೆ.

ಮಹಾಕವಿ ಕುಮಾರವ್ಯಾಸನು (೧೪೦೦) ತನ್ನ ಭಾರತ ಕಥಾಮಂಜರಿಯ ಪ್ರಾರಂಭದಲ್ಲಿ ಭಾರತವನ್ನೇ ತನ್ನ ಕಾವ್ಯದ ವಸ್ತುವನ್ನಾಗಿ ಆರಿಸಿಕೊಂಡುದಕ್ಕೆ ಕಾರಣವನ್ನು ಹೇಳುತ್ತಾ

> ತಿಣುಕಿದನು ಫಣಿರಾಯ ರಾಮಾ
> ಯಣದ ಕವಿಗಳ ಭಾರದಲಿ ತಿಂ
> ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ

ಎಂದಿದ್ದಾನೆ. ಅಂದರೆ ಆದಿಕಾವ್ಯದ ಹರಹಿನ ವಿಷಯವಾಗಿಯೂ ಜನಸಾಮಾನ್ಯರಲ್ಲಿ ಅದರ ಪ್ರಚಾರ ನಡೆಯುವುದಕ್ಕೋ ಅಥವಾ ಅದರ ಮೇಲೆ ಜನಸಾಮಾನ್ಯಕ್ಕಿದ್ದ ಪ್ರೇಮದಿಂದಲೋ ಅನೇಕ ಕವಿಗಳು ರಾಮಾಯಣಗಳನ್ನು ಬರೆದಿದ್ದಾರೆಂದು ಹೇಳುತ್ತೇವೆ. ಅಂದಾಗ ಕೇವಲ ಕನ್ನಡದ ಭಾಷೆಯಲ್ಲಿನ ರಾಮಾಯಣಗಳಷ್ಟೇ ಎಂದು ಭಾವಿಸಬಾರದು. ಏಕೆಂದರೆ ಅವನ ದೃಷ್ಟಿ ಕೇವಲ ಕನ್ನಡ ಮಾತ್ರವಾಗಿರದೆ ತನಗೆ ಪರಿಚಿತವಿರಬಹುದಾದ ದೇಶ ಭಾಷೆ ಸಂಸ್ಕೃತ ಹಾಗೂ ಮರಾಠಿ ಮತ್ತು ತೆಲುಗು ಭಾಷೆಯಲ್ಲಿನ ರಾಮಾಯಣಗಳು ಇರಬಹುದು. ಏಕೆಂದರೆ ನಮಗೆ ತಿಳಿದಮಟ್ಟಿಗೆ ಕುಮಾರವ್ಯಾಸನಿಗಿಂತ ಮೊದಲು ಬರೆದು ಸಿಕ್ಕುವ ರಾಮಾಯಣಗಳು ನಾಲ್ಕು — ಪೊನ್ನನ ಭುವನೈಕ ರಾಮಾಭ್ಯುದಯವು, ಭತ್ತಲೇಶ್ವರ ರಾಮಾಯಣ, ನಾಗಚಂದನ ಚರಿತ್ರ ಪುರಾಣ ಮತ್ತು ಕುಮುದೇಂದು ರಾಮಾಯಣ ಮಾತ್ರ. ತೆಲುಗಿನಲ್ಲಿ ಕುಮಾರವ್ಯಾಸನಿಗೆ ಮೊದಲು ಸು. ಕ್ರಿ. ಶ. ೧೧ನೇ ಶತಮಾನದಲ್ಲಿ ಗೋನ ಬುದ್ಧಾರೆಡ್ಡಿ ವಿರಚಿತ (1) ರಂಗನಾಥ ರಾಮಾಯಣ, (2) ಸು ೧೩ನೇ ಶತಮಾನದಲ್ಲಿ ಭಾಸ್ಕರ, ರಾಮಭದ್ರುಡು, ಕುಮಾರ ಗಿರಿ ಇವರೇ ಮುಂತಾದ ನಾಲ್ವರಿಂದ ರಚಿತವಾದ ಭಾಸ್ಕರ ರಾಮಾಯಣ. (3) ತಿಕ್ಕನ ಸೋಮಯಾಜಿ ವಿನಿರ್ಮಿತ ನಿರ್ವಚನೋತ್ತರ ರಾಮಾಯಣ.

ಉಭಯಭಾಷಾ ಕವಿಗಳಾದ ಜೈನರು ಬಹುಶಃ ಮೊಟ್ಟಮೊದಲು ಕನ್ನಡ ಭಾಷೆಯಲ್ಲಿ ರಾಮಾಯಣವನ್ನು ಬರೆದಂತೆ ತಿಳಿಯುತ್ತದೆ. ಭಾರತವೂ ಸಹಾ (ನಮಗೆ ಸಿಕ್ಕಿರುವ ಮಟ್ಟಿಗೆ) ಮೊದಲು ಬರೆಯಲ್ಪಟ್ಟುದು ಜೈನ–ಪಂಪರಿಂದಲೇ. ಸುಮಾರು ಕ್ರಿ. ಶ. ೧೧೪೦ರಲ್ಲಿದ್ದ ನಾಗಚಂದ್ರನು ಪಂಪನ ಮೇಲಿನ ಭಕ್ತಿ–ಅಭಿಮಾನಗಳಿಂದ ಅಭಿನವ ಪಂಪನೆಂಬ ಹೆಸರಿನಿಂದ ಪ್ರಾಕೃತ ಗ್ರಂಥವಾದ ಪಾಲುಮಚರಿತದಿಂದ "ರಾಮಚಂದ್ರಚರಿತ ಪುರಾಣ" ಅಥವಾ ಪಂಪ ರಾಮಾಯಣವನ್ನು ಬರೆದಿದ್ದಾನೆ. ಜೈನ ಮತಸ್ಥನಾದ ಇವನ ಗುರು ಬಾಲಚಂದ್ರಮುನಿ, ಅಂತೆಯೇ ಕಥೆ ಜೈನ ಸಂಪ್ರದಾಯಾನುವರ್ತಿಯಾಗಿದೆ. ಭಾರತೀ ಕರ್ಣಪೂರ, ಕವಿತಾ ಮನೋಹರ ಮುಂತಾದ ಬಿರುದಾಂಕಿತನಾದ ಇವನ ಕಾವ್ಯ ಪ್ರೌಢವಾಗಿ ವರ್ಣನೆಗಳು ಲಲಿತವೂ ಮನೋಹರವೂ ಆಗಿದ್ದವು. ಚಂಪೂ ಸಂಪ್ರದಾಯದ ಈ ಕಾವ್ಯ ಬಹಳ ಉತ್ತಮವಾದದ್ದು.

ಎರಡನಯದು ಕುಮುದೇಂದುವಿನದು. ಇವನ ಕಾಲ ಸುಮಾರು ಕ್ರಿ. ಶ. ೧೨೭೫. ವಿದ್ವಾಂಸರ ವಂಶದಲ್ಲಿ ಜನಿಸಿದವನ ತಂದೆ ತಾತಂದಿರೆಲ್ಲರೂ ಪಂಡಿತ ಕವಿಗಳಾಗಿದ್ದರು. ಕವಿ ಜೈನನಾದ್ದರಿಂದ ಕಥೆ ಜೈನ ಸಂಪ್ರದಾಯದ್ದು. ಎಲ್ಲಾ ಜಾತಿಯ ಷಟ್ಪದಿಗಳಿಂದ ಕೂಡಿದ ಕಾವ್ಯ ಇವನದು. ಸರಳವಾದ ಇವನ ಕಾವ್ಯ ಕೆಲವೆಡೆ ಪಂಪ ರಾಮಾಯಣವನ್ನು ಅನುಸರಿಸಿದೆ.

ರಾಮವಿಜಯ ಕಾವ್ಯವೆಂಬ ಮತ್ತೊಂದು ಜೈನ ರಾಮಾಯಣವನ್ನು ವಾಗ್ದೇವಿಯ ಮುಖಮಣಿಮುಖರನೆನಿಸಿದ ದೇವಪ್ಪನೆಂಬ ಕವಿ ಸುಮಾರು ೧೫೪೦ರಲ್ಲಿ ಬರೆದಿದ್ದಾನೆ. ಸು. ೧೯ ಸಂಧಿ, ೨೫೬೩ (ಪದ್ಯ) ಸಾಂಗತ್ಯದಲ್ಲಿದೆ. ಇದರ ಕಥೆಯೂ ಜೈನ ಸಂಪ್ರದಾಯಕ್ಕೆ ಸೇರಿದುದಾಗಿದೆ.

ಸುಮಾರು ೯೫೦ರಲ್ಲಿದ್ದ ಪೊನ್ನನು ರಾಮ ಕಥೆ ಅಥವಾ ಭುವನೈಕ ರಾಮಾಭ್ಯುದಯ್ಯವೆಂಬುದನ್ನು ಬರೆದಿದ್ದಂತೆ ಶಬ್ದಮಣಿ ದರ್ಪಣದಲ್ಲಿ

ಉದಯಾಸ್ತೋನ್ನತ ಶೈಲಸೇತು ಹಿಮವತ್ಕುತ್ಕೀಲ ಪರ್ಯಂತ ಸಂ
ಪದೆಯಂ ವಾರ್ಧಿತರಂಗ ರಂಗನಿನದತ್ಕಾಂಚೀ ಕಲಾ ಪಾಂಚಿತಾ
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
ರ್ಚಿದಗೆಲ್ಲಂ ಭುವನೈಕ ರಾಮನುಹಿಪಂ ಗಕ್ಕುಂ ಪೆರರ್ಗಕ್ಕುಮೇ ||

ಎಂಬ ಪದ್ಯದಿಂದ ತಿಳಿಯುತ್ತದೆ. ಆದರೆ ಇದು ದೊರೆತಿಲ್ಲ.

ಸುಮಾರು ೧೬೦೦ರಲ್ಲಿದ್ದ ನಾರಾಯಣ ಎಂಬ ಕವಿ ಉತ್ತರ ರಾಮಾಯಣವನ್ನು ಬರೆದಿದ್ದಾನೆ. ಇದು ೪೪ ಸಂಧಿ ೨೦೩೬ ಪದ್ಯದ ಭಾಮಿನೀ ಷಟ್ಪದಿ ಕಾವ್ಯ.

'ಅದ್ವೈತ ರಾಮಾಯಣ'ವನ್ನು ನಿಜಗುಣಾರ್ಯನು ಬರೆದಿದ್ದಾನೆ. ಸುಮಾರು ೧೬೫೦ರಲ್ಲಿದ್ದನು. ವೀರಶೈವ ಕವಿಯಿರಬೇಕು. 'ನಿಜಗುಣಾರ್ಯನ ವಚನದ ವೃತ' ಎಂದು ಹೇಳಿಕೊಂಡುದುದರಿಂದ ಇದೇ ಅವನ ಹೆಸರಿರಬೇಕು. ಇದು ವಚನ ಗ್ರಂಥ.

"ಅದ್ವೈತದಲ್ಲಿ ರಾಮರಾವಣರ ನಿಜಪಥವನು ಪಾದ ವೈಭವವನು
ಮಂಡೋದರಿಯು ರಾವಣನ ವಾದವನ್ನು ಉಸಿರುವೆನು"

ಎಂದು ಹೇಳಿಕೊಂಡಿದ್ದಾನೆ. ಪೂರ್ಣ ಪ್ರತಿ ದೊರೆತಿಲ್ಲ.

'ಉತ್ತರ ರಾಮಾಯಣ'ವನ್ನು ಯೋಗೀಂದ್ರನೆಂಬ ಕವಿ ಬರೆದಿದ್ದಾನೆ. ೧೬೫೦ರಲ್ಲಿ ಬರೆದ ಈತನು ಬ್ರಾಹ್ಮಣ ಕವಿ. ವಾಲ್ಮೀಕಿ ಕಥೆಯನ್ನು ಕನ್ನಡದಲ್ಲಿ ಹೇಳಿದಂತೆ ಹೇಳುತ್ತಾನೆ ಸಂಸ್ಕೃತ ರಾಮಾಯಣದ ಉತ್ತರಕಾಂಡದ ಕಥೆ ಇಲ್ಲಿ ಪೂರ್ಣವಾಗಿಹೇಳಿದೆ ಕುಸುಮ ಷಟ್ಪದಿಯಲ್ಲಿ ಬರೆದಿದೆ ೪೮ ಸಂಧಿ ೨೪೮೦ ಪದ್ಯಗಳಿವೆ.

ಉತ್ತಮವೆನಿಪ್ಪುದಿಂ
ತುತ್ತಯ ಶ್ಲೋಕ ಚಾ
ರಿ ತ್ರವಿದು ವಾಲ್ಮೀಕಿ ಮುನಿಪನಿಂದಾ
ವಿಸ್ತೀರ್ಣ ವಾಯ್ತುದನೆ
ಮತ್ತೆ ಯೋಗೀಂದ್ರಾಖ್ಯ
ನು ತ್ತಮರು ಮೆಚ್ಚೆ ಕನ್ನಡದಲೊರೆದಾ" ಎನ್ನುತ್ತಾನೆ.

ನರಸಪ್ಪನೆಂಬ ಕವಿಯು ೧೬೧೨ರಲ್ಲಿ 'ಉತ್ತರ ರಾಮಾಯಣವನ್ನು ಬರೆದಿದ್ದಾನೆ. ಭಾರಧ್ವಜ ಗೋತ್ರಜ, ಭಾಮಿನಿ ಷಟ್ಪದಿಯಲ್ಲಿ, ಷಟ್ಕಾಂಡಗಳನ್ನೂ ಶುಕರೂಪನು ರಚಿಸಲು ತಾನು ಉತ್ತರಕಾಂಡವನ್ನು ರಚಿಸಿದಂತೆ ಹೇಳುತ್ತಾನೆ. ಅಸಮಗ್ರಪ್ರತಿಯೇ ೫೧ ಸಂಧಿ ೨೪೪೫ ಪದ್ಯಗಳು, ೫೨ನೇ ಸಂಧಿಯಲ್ಲಿ ೩೭ ಪದ್ಯಗಳಿವೆ.

ಇನ್ನೊಂದು ಭಾಮಿನೀಷಟ್ಪದಿಯ ಮೂಲಕ ರಾಮಾಯಣ ಇದರ ಕವಿಯ ಹೆಸರು ಗೊತ್ತಿಲ್ಲ. ಕಾಲ ಸುಮಾರು ೧೬೦೦, ಯಾವ ದೇವರನ್ನೂ ಗುರುವನ್ನೂ ಸ್ತುತಿಸದೆ ನೇರವಾಗಿ ಕಥೆ ಹೇಳುವುದರಿಂದ ಯಾವ ಪಂಥನು ತಾನುಯಾಯಿ ಎಂಬುದೂ ತಿಳಿಯುವುದಿಲ್ಲ.

ತಿರುಮಲ ವೈದ್ಯನೆಂಬ ಕವಿಯು ೧೬೫೦ರಲ್ಲಿ ಉತ್ತರ ರಾಮಾಯಣವನ್ನು ಬರೆದಿದ್ದಾನೆ. ಬ್ರಾಹ್ಮಣ ಕವಿ, ಭಾಮಿನಿಯ ಷಟ್ಪದಿಯಲ್ಲಿದೆ. ೨೦ ಸಂಧಿ ೧೦೧೦ ಪದ್ಯಗಳಿವೆ. ಕುಮಾರ ವಾಲ್ಮೀಕಿಯು ಕನ್ನಡಿಸದೆ ಬಿಟ್ಟಿರುವ ಉತ್ತರ ಕಾಂಡ ವನ್ನು ಈತನು ಕನ್ನಡಿಸಿದ್ದಾನೆ.

'ರಾಮಚಂದ್ರ ಚರಿತ್ರ'ವನ್ನು ೧೭೦೦ರಲ್ಲಿದ್ದ ಚಂದ್ರಶೇಖರನೆಂಬ ಕವಿ ಬರೆದಿದ್ದಾನೆ, ಸಾಂಗತ್ಯ ರೂಪವಾದ ಇದರಲ್ಲಿ ೩೭ ಸಂಧಿ ೫೨೬೮ ಪದ್ಯಗಳುಳ್ಳ ಈ ಕಾವ್ಯವನ್ನು ೧೬ ಸಂಧಿಗಳನ್ನು ಬರೆದು ಕವಿ ಕಾಲವಾಗಲು ೧೭೫೦ರಲ್ಲಿದ್ದ ಪದ್ಮನಾಭ ಕವಿಯು ಮುಂದುವರೆಸಿದ್ದಾನೆ. ಚಂದ್ರಶೇಖರನು ಜೈನ ಮತದವ ನಾಗಿದ್ದು ಅದೇ ಸಂಪ್ರದಾಯದಲ್ಲಿ ಬರೆದಿದ್ದಾನೆ. ಲಕ್ಷ್ಮಣ ಬಂದು ರಾಜನ ಆಸ್ಥಾನಲ್ಲಿದ್ದಂತೆ ತಿಳಿಯುತ್ತದೆ.

ಮಾರ್ಕಂಡೇಯ ರಾಮಾಯಣವನ್ನು ತಿಮ್ಮರಸ ಕವಿ ಬರೆದಿದ್ದಾನೆ. ೧೬೫೦ ಬ್ರಾಹ್ಮಣ ಕವಿ ಮೇಲುಕೋಟೆಯ ನಾರಾಯಣನ ಅಂಕಿತದಲ್ಲಿ ವಾರ್ಧಕ ಷಟ್ಪದಿ ಯಲ್ಲಿ ಬರೆದಿದ್ದಾನೆ. ಸಮಗ್ರ ಪ್ರತಿ ದೊರೆತಿಲ್ಲ.

ಶಂಕರ ರಾಮಾಯಣ ಈ ಕಾವ್ಯವನ್ನು ತಿಮ್ಮಣ್ಣ ಕವಿ ಬರೆದಂತೆ (ದಾಸಪ್ಪ ನೋ ?) ತಿಳಿಯುತ್ತದೆ. ಆದರೆ ಎಲ್ಲಿಯೂ ಕವಿ ತನ್ನ ಹೆಸರನ್ನಾಗಲಿ, ಇತರ ವಿಷಯಗಳನ್ನಾಗಲಿ ಹೇಳಿಲ್ಲ. ಕಾವ್ಯವು ಭಾಮಿನೀಷಟ್ಪದಿಯಲ್ಲಿ ೪೭ ಸಂಧಿ ೩೩೦೦ ಪದ್ಯಗಳಿವೆ ಗಿರಿಜೆಗೆ ಶಿವನು ಹೇಳಿದಂತೆ ಹೇಳಿದೆ.

ಅಧ್ಯಾತ್ಮ ರಾಮಾಯಣ, ಶಂಕರ ನಾರಾಯಣನು ಬರೆದಂತೆ ತಿಳಿಯುತ್ತದೆ. ೭ ಕಾಂಡ ೨೦೫೨ ಪದ್ಯ ವಾಲ್ಮೀಕಿ ರಾಮಾಯಣವನ್ನು ಇವನ್ನು ಕನ್ನಡದಲ್ಲಿ ಹೇಳಿದಂತೆ ಹೇಳುತ್ತಾನೆ. ಈತನು ರಚಿಸದೇ ಬಿಟ್ಟ ಉತ್ತರ ಕಾಂಡವನ್ನು ಶಾಲ್ಯದ ಕೃಷ್ಣರಾಜನು ರಚಿಸಿದ್ದಾನೆ. ಕಾಲ ಉಕ್ತವಾಗಿಲ್ಲ. ಕೃಷ್ಣರಾಜನಿಗಿಂತ ಸ್ವಲ್ಪ ಮುಂಚೆ ಇದ್ದಿರಬೇಕು ಅಂದರೆ ೧೭೦೦–೧೭೪೦.

ಮೂಲಬಲ ರಾಮಾಯಣ, ಹರಿದಾಸನೆಂಬ ಮಾಧ್ವ ಕವಿ ಬರೆದದ್ದು ೧೭೫೦. ವ್ಯಾಸರಾಯ ಮಠದ ಶಿಷ್ಯನೆಂದು ಹೇಳಿಕೊಂಡಿದ್ದಾನೆ. ಭಾಮಿನಿ ಷಟ್ಪದಿಯಲ್ಲಿದ್ದು ೧೩ ಸಂಧಿ ೭೨೬ ಪದ್ಯಗಳಿವೆ. ರಾವಣ ಕುಂಭಕರ್ಣರ ಮೂಲ ಬಲವನ್ನು ಶ್ರೀರಾಮನು ಸಂಹರಿಸಿದ ಕಥೆಯನ್ನು ಹೇಳಿದೆ.

ರಾಮ ಕಥಾಭ್ಯುದಯ. ವೆಂಕಾಮಾತ್ಯ ಕೃತವಾದದ್ದು ವಾರ್ಧಕವಲ್ಲಿದೆ ೧೭೫ ಸಂಧಿ ೯೭೬೫ ಪದ್ಯದ ದೊಡ್ಡ ಕಾವ್ಯ. ವಿಸ್ತಾರವೂ ಪ್ರೌಢವೂ ಆಗಿದೆ. ಕಾವ್ಯಾಂತದಲ್ಲಿ ಹನುಮಂತನನರ ಪ್ರಸಾದದಿಂದ ಬರೆದಂತೆಯೂ, ಚತುರ್ವಿಧ ಕವಿ ತಾವಿ ಶಾರದನೆಂದೂ, ಗಾಂಧರ್ವ ಕಳಾನಿಧನೆಂದೂ, ಹಂಪೆಯ ಮಾತ್ಯನ

ವ್ಯಗನೆಂದೂ ಹೇಳಿಕೊಂಡಿದ್ದಾನೆ. ಹೈದರಾಲಿಯಲ್ಲಿ ಮಂತ್ರಿಯಾಗಿದ್ದನು ೧೭೭೦ ರಲ್ಲಿದ್ದನು.

ತಿರುಮಲೇಶ ಚರಿತೆ — ಕವಿ ಕಾಲ ತಿಳಿಯುವುದಿಲ್ಲ. ತಿರುಪತಿಯ ತಿಮ್ಮಪ್ಪನನ್ನು ವಿಷ್ಣುವೆಂದೂ ಅವನ ದಶಾವತಾರಗಳನ್ನು ವಿವರಿಸುತ್ತಾ ರಾಮಾವತಾರ ಕಥೆಯನ್ನು ಹೆಚ್ಚಾಗಿ ಹೇಳುತ್ತಾನೆ. 'ತಿರುಮಲಾಧೀಶ' 'ತಿರುಮಲನೆ' ಎಂದು ಪದ್ಯಗಳು ಕೊನೆಗೊಳ್ಳುತ್ತವೆ. ರಾಮಾವತಾರದಲ್ಲಿ ೧೨೯೫ ಪದ್ಯಗಳಿವೆ. ಒಟ್ಟು ೯ ಸಂಧಿ ೨೧೦೯ ಪದ್ಯ. ಅಸಮಗ್ರ ಪ್ರತಿ.

ವರದ ವಿಠ್ಠಲ ರಾಮಾಯಣ—ವಾಲಗಳ್ಳಿಯ ವಿಠ್ಠಲ ಕೃತವಾಗಿದೆ. ೫೬ ಸಂಧಿ, ೩೩೮೫ ಪದ್ಯ, ಭಾಮಿಸಿ ಷಟ್ಪದಿ. ೧೭೫೧ರಲ್ಲಿದ್ದ ಅಸಮಗ್ರ ಪ್ರತಿ.

ರಾಮಕಥಾವತಾರ–೧೭೭೦–೧೮೪೧ ರಲ್ಲಿದ್ದ ದೇವಚಂದ್ರನು ರಚಿಸಿದ್ದಾನೆ. ಜೇನ ಕವಿ, ಚಂಪೂರೂಪ ೧೬ ಆಶ್ವಾಸ, ೬೮೦೦ ಪದ್ಯ. ನಾಗಚಂದ್ರನನ್ನೇ ಬಹುಪಾಲು ಅನುಕರಿಸಿದ್ದಾನೆ; ವಿಸ್ತರಿಸಿದ್ದಾನೆ.

ಜಿನ ರಾಮಾಯಣ—ಚಂದ್ರಸಾಗರವರ್ಣಿ. ತೋವಿನಕೆರೆ ಸ್ಥಳ. ಗುರು ಲಕ್ಷ್ಮೀಸೇನ ಚಂದ್ರಪ್ರಭನ ಅನುಗ್ರಹದಿಂದ ೧೮೧೦ರಲ್ಲಿ ಪರಶುರಾಮ ಭಾರತವನ್ನು ಬರೆದಂತೆ ಹೇಳುತ್ತಾನೆ. ಕಾಲ ೧೮೧೦ ಕದಂಬ ಪುರಾಣ, ಜಿನಭಕ್ತಿಸಾರ, ಜಿನಮುನಿ, ಪರಶುರಾಮ ಚರಿತ, ಜಿನ ರಾಮಾಯಣ ಬರೆದಿದ್ದಾನೆ. ಭಾಮಿನಿ ಷಟ್ಪದಿಯ ೮೬ ಆಶ್ವಾಸ, ೫೦೨೧ ಪದ್ಯ, ಜೈನ ಸಂಪ್ರದಾಯ.

ಅಧ್ಯಾತ್ಮ ರಾಮಾಯಣ—ಗದ್ಯ ಗ್ರಂಥ ೭ ಕಾಂಡ, ೬೫ ಸರ್ಗ, ೮೫೦೦ ಗ್ರಂಥ ಸಂಖ್ಯೆ. ಬ್ರಹ್ಮಾಂಡ ಪುರಾಣದಲ್ಲಿನ ಶಿವಶಿವೆಯರ ಸಂವಾದ ರೂಪದ ರಾಮಾಯಣವಿದು. ಮೈಸೂರು ರಾಜಮನತನದ ಸಂಕ್ಷಿಪ್ತ ಚರಿತ್ರೆ ಇದೆ. ಕರ್ತೃ ಮುಮ್ಮಡಿ ಕೃಷ್ಣರಾಜರು. ಕಾವ್ಯ ದೊರೆತಿಲ್ಲ.

ಅದ್ಭುತ ರಾಮಾಯಣ—೧೮೭೦–೧೯೦೧. ಮುದ್ದಣ.

ರಾಮಾಶ್ವಮೇಧ — ಗದ್ಯಗ್ರಂಥ. ಮುದ್ದಣ ಮನೋರಮಾ ಸಂವಾದ ರೂಪದಲ್ಲಿದೆ,

ಶ್ರೀರಾಮ ಪಟ್ಟಾಭಿಷೇಕ—ವಾರ್ಧಕ ಷಟ್ಪದಿ. ೫ ಸಂಧಿ, ೨೪೭ ಪದ್ಯ, ಮುದ್ದಣ ರಚಿತ.

ಕರ್ಣಾಟಕ ರಾಮಾಯಣ ಸಂಗ್ರಹ— ಹೆಚ್. ಲಿಂಗರಾಜೇ ಅರಸರು ೧೯೧೯ರಲ್ಲಿ ಬರೆದರು. ಭಾಮಿನಿ ಷಟ್ಪದಿ. ೧೧ ಸಂಧಿ, ಸುಲಭ ಶೈಲಿ.

ಶೇಷ ರಾಮಾಯಣ — ಸೋಸಲೆ ಅಯ್ಯಾ ಶಾಸ್ತ್ರಿ, ಚಾಮರಾಜರ ಆಸ್ಥಾನ. ೧೮೨೭ನೇ ಕಾಲ. ವಾರ್ಧಕ ಷಟ್ಪದಿ. ೨೪ ಸಂಧಿ, ೧೨೪೦ ಪದ್ಯಗಳು.

ಬತ್ತಲೀಶ್ವರನು ೧೪೩೦ರಲ್ಲಿ ರಾಮಾಯಣ ಬರೆದಂತೆ ತಿಳಿದುಬರುತ್ತೆ. ಇದು ವೀರಶೈವ ರೀತಿಯಾಗಿದೆ. ಆದರೆ ಸಿಕ್ಕಿಲ್ಲ.

ತೊರವೆಯ ರಾಮಾಯಣ.

ಕುವೆಂಪು ರಾಮಾಯಣ ದರ್ಶನಂ.

ವೆಂಕಟರಾಯ ಕವಿ ಹನುಮಾನ್ ೧೮೮೦ — ಪೂರ್ಣ ರಾಮಾಯಣ (ಅಪ್ರಕಟಿತ.)

ಅಳಿಯ ಲಿಂಗರಾಜ ೧೮೨೩—ರಾಮೋದಯ ಕಥೆ–ಕಾವ್ಯ.

ಬೊಬ್ಬೂರ ಕವಿ ಆಧಾರಿತ. ಬಿ. ನರಹರಿಶಾಸ್ತ್ರಿ–೧೮೮೨ ಪರಶುರಾಮ ರಾಮಾಯಣ.

ಕೇಶವ ರಾಮಾಯಣ—ಭದ್ರಗಿರಿ ಕೇಶವದಾಸರಿಂದ ರಚಿತವಾದದ್ದು.

ಕವಿಯ ಪರಿಚಯ : "ಕುಮಾರ ವಾಲ್ಮೀಕಿ" ಎಂಬುದು ಈ ಗ್ರಂಥ ಕರ್ತೃವಿನ ಹೆಸರಲ್ಲ. ಇದು ಇವನು ರಾಮಾಯಣವನ್ನು ಬರೆದಂಥ ಆದಿಕವಿ ವಾಲ್ಮೀಕಿಯ ಮೇಲಿನ ಪ್ರೀತಿಯಿಂದಲೋ ಅಭಿಮಾನದಿಂದಲೋ ತಳೆದಂತಹ ಹೆಸರಿರಬೇಕು. ಅಥವಾ ಕುಮಾರವ್ಯಾಸನನ್ನೇ ಅನುಸರಿಸಿ ಅವನ ರೀತಿ ನೀತಿ ಛಂದಗಳನ್ನು ಅಳವಡಿಸಿಕೊಂಡಂತೆ 'ನಾರಣಪ್ಪ'ನ ಅಭಿಮಾನದ ಕುಮಾರ ವ್ಯಾಸನೆಂಬಂತೆ ತನ್ನನ್ನು ಕುಮಾರ ವಾಲ್ಮೀಕಿ ಎಂದು ಕರೆದುಕೊಂಡಿರಬಹುದು. ಇಲ್ಲವೇ ಹಲವರೆನ್ನುವಂತೆ ಅವನ ಬಿರುದಾಗಿಯೋ, ಕಾವ್ಯನಾಮವಾಗಿಯೋ ಇರಬಹುದು. ಆದರೆ ಈತನ ನಿಜನಾಮ "ನರಹರಿ" ಎಂಬುದಾಗಿ. ಈತನು ಬ್ರಾಹ್ಮಣ ಕುಲದವನು.

ಸುರನರೋರಗ ವಂದ್ಯ ನಿಗಮೋ
ತ್ಕರ ಕಲಾಪಾನಿಂದ್ಯ ವಿಶ್ವಂ
ಭರ ಪದಾಂಬುಜ ಭೃಂಗಭೂಸುತ ಮುನಿಜನೋತ್ತುಂಗ
ಶರಣಜನ ಸುರಪಾಲನಾಯಕ
ಪರಧಿ ನಿರುಪಮ ತತ್ವವಿದ್ಯಾ
ಶರಧಿ ಸಲಹುಗೆ ನಮ್ಮ ಮಧ್ವಾಚಾರ್ಯ ಗುರುರಾಯ

ಎಂಬುದಾಗಿ ಮಧ್ವಾಚಾರ್ಯ ಗುರುಗಳನ್ನು ಸ್ತುತಿಸುವುದರಿಂದ ಈತ ಮಾಧ್ವ ಸಂಪ್ರದಾಯದವನಾಗಿರಬೇಕು. ಜೊತೆ ಮುಖ್ಯ ಪ್ರಾಣದೇವರನ್ನೂ ಸ್ತುತಿಸುವುದರಿಂದ ದ್ವೈತಮತಾನುಯಾಯಿ ಎಂಬುದು ಸುಸ್ಪಷ್ಟ.

ಉದಧಿ ಲಂಘನ ದನುಜಾ ಸ
ಮುದ್ರದ ವಿವರ್ಧನ ವೈರಿಭಟಗಜ
ವಿದಳನೋದ್ಧತಸಿಂಹ ಲಂಕಾನಗರ ನಿರ್ದಹನ
ಕದನ ಕರ್ಕಶ ಭೀಮ ರಿಪುದಶ
ವದನ ದರ್ಪವಿರಾಮ ರಾಘವ
ಪದ ಸರೋಜ ಭ್ರಮರ ಭುವನ ಪ್ರಾಣಜಂ ವಂದೆ.

"ಹರಿಸರ್ವೋತ್ತಮ ವಾಯು ಜೀವೋತ್ತಮ"ವೆಂಬ ಅವರ ಮೂಲ ಮಂತ್ರದಂತೆ ರಾಮಕಥೆಯು ಹಿರಿಯ ಕಥೆಯೇ ಆಗಿದೆ.

'ತೊರವೆಯ ರಾಯ ನರಹರಿ ಪಾಲಿಸುಗೆ ಜಗವ' ಎಂಬುದಾಗಿ ಹೇಳುವುದರಿಂದ ಈತನ ಜನ್ಮಸ್ಥಳ 'ತೊರವೆ' ಎಂಬ ಗ್ರಾಮವಿರಬಹುದು. 'ನರಹರಿ' ಎಂಬುದು ಆ ಸ್ಥಳದಲ್ಲಿನ ಅರ್ವಾಚೀನ ದೇವಾಲಯದಲ್ಲಿರುವ ನಾರಸಿಂಹ ದೇವರಾಗಿದ್ದು ಕವಿಯ ಮಾತಾಪಿತೃಗಳು ಆ ದೇವರ ವರಪ್ರಸಾದದಿಂದ ಪಡೆದಿರಬಹುದಾದ ಪುತ್ರಸಂತಾನಕ್ಕೆ ನರಹರಿ ಎಂಬುದಾಗಿ ನಾಮಕರಣ ಮಾಡಿರಬಹುದು. ಆತನು ತನ್ನ ಕಾಲವನ್ನಾಗಲೀ, ಇತರ ಸ್ವಕೀಯ ವಿಷಯಗಳನ್ನಾಗಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಆದರೂ 'ತೊರವೆ' ಎಂಬ ಗ್ರಾಮವನ್ನು ೧೫೮೦ರಿಂದ ೧೬೨೬ರವರೆಗೆ ಆಳಿದ ಸಣ್ಣ ಇಬ್ರಾಹಿಂ ಆದಿಲ್‌ಶಹನು ಕಟ್ಟಿಸಿದನು ಎಂಬುದಾಗಿ ಡಾ|| ಎ. ಎಸ್. ನೀಲಕಂಠಶಾಸ್ತ್ರಿ ಮೆಡಿವಲ್ ತಿಳಿಸುತ್ತದೆ. [ಪು. ೧೧೮] ಈ ಗ್ರಾಮವು ಬಿಜಾಪುರದ ಪಶ್ಚಿಮಕ್ಕೆ ನಾಲ್ಕು ಮೈಲಿಯ ಅಂತರದಲ್ಲಿದೆ. ವಿಜಾಪುರದ ಭರಭರಿಯ ವೈಭವದ ಕಾಲಕ್ಕೆ ಅವರದೇ ಒಂದು ಭಾಗವಾಗಿದ್ದಿರಬಹುದು. ಹತ್ತಾರು ದೇವಾಲಯಗಳಿದ್ದು ನೃಸಿಂಹನದೂ ಒಂದಾಗಿದೆ. ಇದು ಈಚಿನ ಕಾಲದ ಕಟ್ಟಡವೆಂದು ಮುಂಬೈಗೆ ಜೆಟಿಯರ್ [೧೮೮೩—೫೫೭೭] ತಿಳಿಸುತ್ತದೆ. ಇಲ್ಲಿನ ನೀರಿನ ವ್ಯವಸ್ಥೆಯನ್ನೂ ಕೆರೆಗಳನ್ನೂ ಒಂದನೇ ಆದಿಲ್‌ಶಹನೇ ಮಾಡಿಸಿದನೆಂದು ತಿಳಿಯುತ್ತದೆ. ತೊರೆಬಾಯ್ ತೊರವೆ ಎಂದಾಗಿರಬಹುದೆಂದು ಹೇಳುತ್ತಾರೆ.

ಕುಮಾರ ವಾಲ್ಮೀಕಿಯು, ಕುಮಾರ ವ್ಯಾಸನನ್ನು ಹೊಗಳುವುದರಿಂದಲೂ, ಕನಕದಾಸನು ತನ್ನ ಮೋಹನ ತರಂಗಿಣಿಯಲ್ಲಿ

ಉರಗಾಲಯವಿ ಸರ್ವಡಿದನ ಮತ್ಸೋ
ದರ ಜಾತೆಯಾತ್ಮ ಸಂಭವನ
ವರ ಪುರಾಣಂಗಳ ಕನ್ನಡಿಸಿದ ಕವಿ
ವರರ ಕೊಂಡಾಡುವೆ ಮುದದಿ ‖ ೧-೧೭ ‖

ಎಂದು ಇಬ್ಬರನ್ನೂ ಹೊಗಳುವುದರಿಂದ 'ನರಹರಿ'ಯು ಈ ಇಬ್ಬರು ಕವಿಗಳ ನಡುವಣ ಕಾಲದವನಾಗಿದ್ದಿರಬೇಕು. ಕನಕದಾಸನ ಕಾಲವು ಅಸ್ಪಷ್ಟ. ಆದರೂ ೧೫೬೦ರಿಂದ ೧೬೨೦ರರ ಒಳಗಿದ್ದವನಾಗಿರಬಹುದು.

ಈತನಿಗೆ 'ಕವಿರಾಜ ಹಂಸ' ಎಂಬ ಬಿರುದಿದ್ದಂತೆ ತಿಳಿಯುತ್ತದೆ. ಐರಾವತ, ವೈರಾವಣ ಕಾಳಗಗಳೆಂಬ ೧೨ ಗ್ರಂಥಗಳನ್ನು ಬರೆದಂತೆಯೂ ತಿಳಿಯುತ್ತವೆ. ಇವಲ್ಲದೆ 'ಕಪೋತ ಚರಿತೆ' ಎಂಬುದೊಂದು ಕಾವ್ಯವೂ ಇವನದೆಂದು ಹೇಳುತ್ತಾರೆ. 'ವೈರಾವಣ ಕಾಳಗ' ಅವು ಷಟ್ಪದಿಯಲ್ಲಿದೆ. ಆದರೆ ವಿಮರ್ಶಕರು ಎಲ್ಲದರ ಶೈಲಿಯನ್ನು ಪರಾಂಬರಿಸಿ, ಶೈಲಿ ರೀತಿಗಳನ್ನು ನೋಡಿದರೆ ಅವನದಲ್ಲವೆಂಬ ಅಭಿಪ್ರಾಯಪಡುತ್ತಾರೆ.

ಇವನ ಮೇಲೆ ಆಗಿರಬಹುದಾದ ಪೂರ್ವ ಕವಿಗಳ ಪ್ರಭಾವ—ಇವನು ಮುಖ್ಯವಾಗಿ ವಾಲ್ಮೀಕಿ ರಾಮಾಯಣವನ್ನು ಚನ್ನಾಗಿ ಓದಿದವನಾಗಿರಬೇಕು. ಅನಂತರ ಕನ್ನಡದ ಭಾರತ ಕಥಾಮಂಜರಿಯು ಅವನನ್ನು ಕಾವ್ಯರಚನೆಗೆ ಪ್ರೇರೇಪಿಸಿರಬಹುದು. ವೈಷ್ಣವ ಮತಾನುಯಾಯಿಯಾದ, ದಾಸಪಂಥದ ಪ್ರಭಾವಾನುವರ್ತಿಯಾದ ಈತನಿಗೆ ಶ್ರೀರಾಮನು ಕೇವಲ ಆದರ್ಶ ಮಾನವ ಮಹಾಪುರುಷನಾಗದೆ ವಿಷ್ಣುವಿನ ಅವತಾರವಾಗಿರಬೇಕು.

ಅದೇ ಭಾವನೆಯಿಂದ ಕುಮಾರ ವಾಲ್ಮೀಕಿಯೂ ಸಹ

ಗಿರಿಜೆ ಕೇಳು ಸಹಸ್ರನಾಮದ
ಸರಿ ಕಣಾ ರಘುರಾಮಚಂದ್ರನ
ಪರಮ ಮಂಗಳನಾಮ ಸಿರುಪಮ ನಿಗಮ ವಿಶ್ರಾಮ
ನಿರುತವಿದು ನಿಜವೆಂದು ಬಗೆ ನಿ
ರ್ಧರಿಸಿದೆವು ನಿಗಮಾರ್ಥದಲಿ ನಿನ
ಗುರುತರಾಗ್ರಹದ ಬೀಜಾಕ್ಷರವಿದೀಗೆಂದ ‖

ಎಂದು ಹೇಳುತ್ತಾನೆ. ಯಾವ ಶ್ರೀ ರಾಮಚಂದ್ರನನ್ನು ಒಬ್ಬ ಆದರ್ಶ ಮಾನವ ನನ್ನಾಗಿ ವಾಲ್ಮೀಕಿಯು ಸೃಜಿಸಿ ಬಯಸಿದನೋ, ಆ ಅಲೌಕಿಕ ಗುಣಾನ್ವಿತನಾದ ಆತನನ್ನು ಅನಂತರದ ಜನರು. ಮುಖ್ಯವಾಗಿ ದಾಸಕೂಟದವರು ಅವತಾರ

ಪುರುಷನೆಂದು ಬಗೆದರು, ಭಾವಿಸಿದರು. ಅಷ್ಟೇ ಅಲ್ಲದೆ ಅವನ ಇಡೀ ರಾಮಾಯಣದ ಕಥೆಗೆ ಒಂದು ಆಧ್ಯಾತ್ಮಿಕ ಅರ್ಥವನ್ನು ಕಂಡರು, ಕೊಟ್ಟರು. ಇಂಥ ಶ್ರೀ ರಾಮನು ಜನಿಸಿದುದು ನಾರಾಯಣನು ರೂಹಿಸಿದನನುಪಮ ರಾಮ ನಾಮದಲಿ ಎಂದು ಹೇಳುತ್ತಾನೆ. ರಾಮನ ಬಳಿಗೆ ಬಂದ ವಿಭೀಷಣನು ನಾಲ್ವರು ಅನುಯಾಯಿಗಳೊಡನೆ ಬಂದಾಗ 'ರಾಮನನು ಓಲಗಿಪ ಚಾತುರ್ವಿಧದ ಪುರುಷಾರ್ಥದಂದದಲಿ' ಕಂಡನಂತೆ. ಅಷ್ಟೇ ಏಕೆ, ಕಡುವೈರಿಯಾದ ರಾವಣನೂ ಸಹ 'ರಘುನಾಥ ಲಕ್ಷ್ಮೀವಲ್ಲಭನು ತಾನೆಂಬುದನು ತಾ ಬಲ್ಲೆ'ನೆಂದು ತನ್ನ ಮಡದಿಯಾದ ಮಂಡೋದರಿಗೆ ಹೇಳುತ್ತಾನೆ. ಶ್ರೀರಾಮನು ಭಕ್ತಿಪರಾಧೀನ ನಲ್ಲವೆ? ಅವರ ಉದ್ಧಾರಕ್ಕಾಗಿಯೇ ಅವತಾರ ಮಾಡಿರುವುದರಿಂದ ಅವರ ಅವಸಾನ ಕಾಲದಲ್ಲಿ ರಾವಣ ಮತ್ತು ವಾಲಿಯರಿಗೆ ವಿಶ್ವರೂಪ ದರ್ಶನ ಮಾಡಿಸುತ್ತಾನೆ ಭಾಗವತ ಸಂಪ್ರದಾಯದಂತೆ ಅಥವಾ ಶ್ರೀ ಕೃಷ್ಣನಂತೆ ಅವರು ತೃಪ್ತರಾಗಿ ವಿಶ್ವರೂಪಾತ್ಮನೆಂದು ಸ್ತುತಿಸಿ ಮೋಕ್ಷಗಾಮಿಗಳಾಗುತ್ತಾರೆ. ಸೇತು ಬಂಧನಕ್ಕೆ ಮುನ್ನ ರಾಮನು ಬಿಟ್ಟ ಬಾಣಕ್ಕೆ ಹೆದರಿ ಓಡಿ ಬಂದ ಸಮುದ್ರ ರಾಜನು ರಾಮನನ್ನು ಕುರಿತು

ಪ್ರಣವರೂಪ ಸುರೂಪ ನಿರ್ಗುಣ । ಗುಣನಿತಾಂತ ಕೃತಾಂತ ಮತಿತಾ
ಪ್ರಣಯ ಮಾಯ ಪ್ರಕೃತಿ ರಹಿತಧ್ವಾಂತ ಲಯಶೂನ್ಯ
ಅಣುಮಹತ್ಪರಿಪೂರ್ಣ ಚಂದ್ರಾ । ರುಣಹುತಾಶನ ತೇಜರಿಪು ರಾ
ವಣ ವಧಾಸಂಭೂತ ಕಾರಣ ಕಾಯಬೇಕೇಂದ ||

ವಿಶ್ವತೋಮುಖ ವಿಶ್ವಲೋಚನ । ವಿಶ್ವವಿಸ್ಮೃತ ವಿಶ್ವತೋಭುಜ
ವಿಶ್ವವಿಗ್ರಹ ವಿಶ್ವಪಾದ ಸವಿಶ್ವ ವಿಶ್ವಪತಿ
ವಿಶ್ವಚೇತನ ವಿಶ್ವಭಾವನ । ವಿಶ್ವಗತ ವಿಶ್ವೇಶ ಈಶ್ವರ
ವಿಶ್ವ ವಿಶ್ವಾತ್ಮಕ ಜಟಾತ್ಮಕ ಕಾಯಬೇಕೆಂದ ||

ಎಂದು ಹೇಳುವುದನ್ನು ನೋಡಿದರೆ ಕುಮಾರ ವಾಲ್ಮೀಕಿಯ ಮೇಲೆ ಆಧ್ಯಾತ್ಮಿಕ ರಾಮಾಯಣದ ಪ್ರಭಾವವು ಬಹಳವಾಗಿ ಆಗಿರಬಹುದೆಂದು ಹೇಳಬಹುದು. ಇವರ ಜತೆಗೆ ಕುಮಾರ ವ್ಯಾಸನನ್ನು ಬಹಳವಾಗಿಯೇ ಅನುಸರಿಸಿದ್ದಾನೆಂದು ಸಪ್ರಮಾಣವಾಗಿ ಹೇಳಬಹುದಾಗಿದೆ. ಅದನ್ನಿಷ್ಟು ಸುದೀರ್ಘವಾಗಿಯೇ ವಿವೇಚಿಸಬಹುದಾಗಿದೆ,

ಕುಮಾರ ವಾಲ್ಮೀಕಿಯು ತನ್ನ ಕವಿತಾ ಸಾಮರ್ಥ್ಯವನ್ನು ಹೇಳಿ

ಕೊಳ್ಳುವಾಗ ಕುಮಾರ ವ್ಯಾಸನ ಅದೇ ಸಂದರ್ಭದ ಅದೇ ಬಗೆಯ ಪದ್ಯವನ್ನು ಅನುಸರಿಸಿದಂತೆ ಕಂಡುಬರುತ್ತದೆ.

ಪರರ ಬಗೆ ಪರರುಕ್ತಿ ಪರರು
ತ್ಕರುಷ ಪರರುನ್ನತಿಯು ಕೃತಿಯುಪ
ಹರಣೆ ಪರರುಪಮಾನ ಪರರೊಡ್ಡವದ ಪರುಠವದ
ಹರಹು ಹೊಗದಗ್ಗಳಿಕೆ ಪದ ಸಂ
ಚರಣೆಯಲಿ ಲಿಪಿ ತಿರುಗಿ ನೋಡದ
ಚಿರಮು ಜೇರೆ ಕುಮಾರ ವಾಲ್ಮೀಕಿಯು ಪಜೋಲಿಹರಿ ||

ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳಿಪದೊಂದದಗ್ಗಳಿಕೆ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದೊಂ ವಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದ
ವುಲುಹು ಗೆಡದೊಂದಗ್ಗಳಿಕೆಯೆಂಬೀ
ಬಲುಹು ಗದುಗಿನ ವೀರ ನಾರಾಯಣನ ಕಿಂಕರಗೆ.

ಎಂಬುದನ್ನು ನೋಡಿದಾಗ ಅವನ ಛಂದಸ್ಸನ್ನೂ, ಅವನ ಶೈಲಿಯನ್ನೂ, ಭಾವವನ್ನೂ ಎಷ್ಟರಮಟ್ಟಿಗೆ ಅನುಸರಿಸಿದ್ದಾನೆಂಬುದು ವ್ಯಕ್ತವಾಗಿರದು. ಭಾರತ ಭಗವಂತನಾದ ಶ್ರೀ ಕೃಷ್ಣಚರಿತವಾದರೆ ಇವನ ರಾಮಾಯಣ ನಾರಾಯಣಾವತಾರಿಯಾದ ರಾಮನ ಕಥೆ ಕುಮಾರ ವ್ಯಾಸನಿಂದ ಸ್ಫೂರ್ತಿಗೊಂಡು ಆತನ ಉಪಕಾರವನ್ನು ಸ್ಮರಿಸುತ್ತಾನೆ.

ಸರಸವಣಿಕ ಕವಿಗಳೊಳು ಭಾ
ಸುರ ಕುಮಾರ ವ್ಯಾಸನೊಬ್ಬನು
ಪರಕಿಸುವೊಡಾನೊಬ್ಬ ಮಗುಳೆರಡನೆಯ ವರ್ಣಕಕೆ!
ವರಕುಮಾರ ವ್ಯಾಸನೊಬ್ಬನು
ಎರಡನೆಯ ತಾನೊಬ್ಬ ಮಿಕ್ಕಿನ
ಬರಡು ಕವಿಗಳ ಲೆಕ್ಕಿಸುವನೆ ಕುಮಾರ ವಾಲ್ಮೀಕಿ.

ಇಲ್ಲಿಯೂ ಸಹ ಕುಮಾರ ವ್ಯಾಸನ 'ಬರಡುಗವಿಗಳಲೆಕ್ಕಿಸನೆ ಸಾಕೆಣಿಸದಿರು ಕುಮಾರ ವ್ಯಾಸನುಳಿದವರಾ' ಎಂಬುದನ್ನೇ ಹೋಲುತ್ತದೆ. ಅಷ್ಟೇ ಅಲ್ಲ. ತನ್ನ ಕಾವ್ಯದ ಅಗ್ಗಳಿಕೆಯನ್ನು ಹೇಳಿಕೊಳ್ಳುವಾಗಲೂ ಗದಗಿನ ನಾರಣಪ್ಪನ ಕಾವ್ಯದ ಪ್ರತಿಧ್ವನಿ ಮೊಳಗದಿರದು.

ಸುಕವಿಗಳ ಸುಮ್ಮಾನ ಸೂರಿ
ಪ್ರಕರದ ಮಲ ಜ್ಞಾನ ಮುನಿಕರ
ಮುಕುರ ಗುಣಿಗಳ ಗೂಢಸಿಧಿ ರಸಿಕರ ಸುಧಾಜಲಧಿ.
ಅಕುಟಿಲರಮನ ಮೆಚ್ಚು ಸಿರಿಹರಿ
ಭಕುತರುಂ ಮಹದಚ್ಚು ಶಿವಸೇ
ವಕರ ಮೆಚ್ಚು ಕುಮಾರ ವಾಲ್ಮೀಕಿಯ ಪ್ರಬಂಧ ಕೃತಿ.

ಪ್ರಿಯರಿಗ ಪ್ರಿಯರಿಗೆ ವಿವೇಕಾ
ಶ್ರಯರಿಗತಿಮೂರ್ಖರಿಗೆ ವಿಜ್ಞಾ
ನಿಯರಿಗತಿಜಾಣರಿಗೆ ಜಡರಿಗಸೂಯಾಭಾವರಿಗೆ ।
ನಯವಿದರಿಗಜ್ಞರಿಗೆ ಹರುಷೋ

ದಯದ ಪೆಂಪು ಕುಮಾರ ವಾಲ್ಮೀ
ಕಿಯ ಪ್ರಬಂಧ ಪ್ರೌಢತರ ಕವಿತಾ ಚಮತ್ಕಾರ ||

ಅರಸುಗಳಿಗಿದು ವೀರದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ.

ಎಂದ ಮೇಲೆ ಕುಮಾರ ವಾಲ್ಮೀಕಿಯ ಮೇಲೆ ಕುಮಾರ ವ್ಯಾಸನ ಮತ್ತು ಅಧ್ಯಾತ್ಮ ರಾಮಾಯಣದ ಪ್ರಭಾವ ಎಷ್ಟರ ಮಟ್ಟಿಗಾಗಿದೆ ಎಂಬುದನ್ನು ನೋಡ ಬಹುದು,

ತನ್ನ ಕಾವ್ಯದ ಅಗ್ಗಳಿಕೆಯನ್ನು ಹೇಳುತ್ತಾ ಕುಮಾರ ವಾಲ್ಮೀಕಿಯು

ಚಾರುತದ ಕರ್ಣಾಟಕರ ವಿ
ಸ್ತಾರ ರಾಮಾಯಣ ಕರ್ತೃ ಕು
ಮಾರ ವಾಲ್ಮೀಕಿಯೆ ಕಥಾಪತಿ ತೊರವೆಯಧಿನಾಥ !
ವೀರ ನರಹರಿ ಎನಲು ಮೆಚ್ಚದ
ರಾರು ಸತ್ಕವಿತಾ ವಿಲಾಸದ
ಸೂರಿಗಳ ಹೃದಯಾಕರುಷಣ ಕಥಾ ಕುತೂಹಲವ ||

ಎನ್ನುತ್ತಾನೆ. ಕಥಾಪತಿ ತೊರವೆಯಧಿನಾಥ ಅಂದರೆ ಮಹಾವಿಷ್ಣು ಕತೆ ಹೇಳುವವನು ಕುಮಾರ ವಾಲ್ಮೀಕಿ ಎಂದ ಮೇಲೆ ಮೆಚ್ಚದವರಾರಿದ್ದಾರೆ ಎಂದು ಹೆಮ್ಮೆಯಿಂದ ಹೇಳುತ್ತಾನೆ. ನಾಗಚಂದ್ರನು ತನ್ನ ರಾಮಚಂದ್ರ ಚರಿತ ಪುರಾಣದ ಪ್ರಾರಂಭದಲ್ಲಿ ಕಥೆಯ ಶ್ರೇಷ್ಠತೆಯನ್ನು ಕುರಿತು ಹೇಳುವಾಗ 'ಕಾಲಾಯಸದಿಂ ನಿರ್ಮಿಸಿದ ಕಂಟಕೆ ಕಾಂಚನ ಮಾಲೆಯಂತೆ ಉಪಾದೇಯ ಮಕ್ಕುಮೆ, ವಿಷಯಮೊಪ್ಪೆಪೊಡೆ ಅದಾವುದುಂಟಪ್ಪಲಾಕರ್ಣಂ' ಎಂದು ಕಥಾ ನಾಯಕನನ್ನು ಅನುಸರಿಸಿರುತ್ತದೆಂಬ ಮಾತಿನ ಛಾಯೆ ಇಲ್ಲಿ ಕಾಣಿಸುತ್ತದೆ. ಕುಮಾರ ವಾಲ್ಮೀಕಿಯು ಅಷ್ಟು ಸಂಸ್ಕೃತ ಭೂಯಿಷ್ಟವಾಗಿ ಬರೆಯದೆ ನಿರರ್ಗಳವಾಗಿ ಲೀಲಾಜಾಲವಾಗಿ ಹರಿಯುವ ಪ್ರವಾಹದಂತೆ ಪದ ಮೈತ್ರಿಯಿಂದ ಕೂಡಿದ ವಾಕ್ಪ್ರವಾಹವು, ಕಥಾ ನಿರೂಪಣಾ ಕುಶಲತೆಯೂ ಸಹೃದಯ ಹೃದಯವನ್ನು ಸೂರೆಗೊಳ್ಳದಿರದು. ಕಥೆಯ ಓಟ ಸಂದು ಗೊಂದುಗಳಲ್ಲಿ ತಿರುಗದೆ ನೇರವಾದ ನೀಟಾದ ರಾಜಮಾರ್ಗದಲ್ಲಿ ಓಡುತ್ತದೆ. ಯಾವುದು ಮುಖ್ಯ ಯಾವುದು ಅಮುಖ್ಯ ಎಂಬುದನ್ನು ಕವಿ ಚೆನ್ನಾಗಿ ವಿಮರ್ಶಿಸಿ ಬೇಗ ಬೇಗ ನಡೆಯುವುದರಿಂದ ಶ್ರೋತೃಗಳು ಅವನೊಂದಿಗೆಹೋಗುವಂತೆ ಮಾಡಿದ್ದಾನೆ. ಭಾಮಿನೀ ಷಟ್ಪದಿ ಛಂದವೂ ಸಹ ಅದಕ್ಕೆ ಅನುಗುಣವಾಗಿ ಅಳವಡಗೊಂಡಿದೆ.

ಈ ಕವಿಯ ಪದ ಪ್ರಯೋಗವನ್ನು ಪಾಂಡಿತ್ಯವನ್ನು ಪ್ರಶ್ನಿಸಿದ ಕೆಲ ವಿದ್ವಾಂಸರು ಆತನು ಅಷ್ಟು ಪಂಡಿತನಲ್ಲವೆಂದೂ, ಅವನ ಪದ ಸಾಮಗ್ರಿ ಮಿತವಾದುದೆಂದೂ ಅಭಿಪ್ರಾಯ ಪಟ್ಟಂತಿದೆ. ಆದರೆ ಅದು ಅಷ್ಟಾಗಿ ಒಪ್ಪತಕ್ಕ ಮಾತಲ್ಲ. 'ಇವನು ರಾಜಸ್ಥಾನದಲ್ಲಿಯೂ ಇದ್ದಂತೆ ತಿಳಿಯುವುದಿಲ್ಲ. ಇವನಿಗೆ ಯಾವ ರಾಜನ ಅಥವಾ ಸಾಮಂತನ ಆಶ್ರಯವೂ ಇದ್ದಂತೆ ಕಾಣಿಸುವುದಿಲ್ಲ. ಇವನು ಯಾವ ಪಂಡಿತರನ್ನು ಮೆಚ್ಚಿಸುವುದಕ್ಕಾಗಿಯೂ ಕಾವ್ಯ ಬರೆದಂತೆ ತಿಳಿಯುವುದಿಲ್ಲ. ಅಂದ ಮೇಲೆ ಭಾಗವತ ಪರಂಪರೆಯಲ್ಲಿ ಹೊರಟಿರಬಹುದಾದ ಈ ಕವಿ ದಾಸವರೇಣ್ಯರಂತೆ ಜನ ಸಾಮಾನ್ಯರ ತಿಳುವಳಿಕೆಗೆ ನಿಲುಕುವಂತಹ ಸರಳವೂ ಸಂಪದ್ ಭರಿತವೂ ತಿಳಿಯೂ ಆದ ಕನ್ನಡದಲ್ಲಿ ಬರೆದಿರಬೇಕು. ಇದರಿಂದಾಗಿಯೇ ಇವನ ಕಾವ್ಯವನ್ನು ಓದುವಾಗ ಕ್ಲಿಷ್ಟಪದಗಳ ಕಷ್ಟವಾಗಲೀ ಶ್ಲೇಷಾದಿ ಅಲಂಕಾರಗಳ ತೊಡಕಾಗಲಿ ಬರುವುದಿಲ್ಲ ಕೆಲಮಟ್ಟಿನ ಕನ್ನಡ ಭಾಷೆಯ ಪರಿಚಯವಿರಬಹುದಾದವರೂ ಓದಿ ಅಥವಾ ಕೇಳಿ ಕವಿಯ ಭಾವನೆಗಳನ್ನು ಚೆನ್ನಾಗಿ ತಿಳಿದುಕೊಳ್ಳಬಹುದಾಗಿದೆ. ನಿಘಂಟುವಿನ ಸಹಾಯವಿಲ್ಲದೆಯೇ ಓದಬಹುದಾಗಿದೆ. ಅದು ನಿಜವಾಗಿಯೂ ಕಾವ್ಯಕ್ಕೆ ಒಂದು ರೀತಿಯಲ್ಲಿ ಉಪಕಾರವೆಂದೇ ಹೇಳಬಹುದು. ಅಂದಾಗ ಅಲಂಕಾರಗಳಿಲ್ಲದೆ ಇಲ್ಲ, ಸಂಸ್ಕೃತ ಪದಗಳು ಅಷ್ಟಾಗಿ ಬಳಕೆಯಾಗದಿರುವುದು ಯುದ್ಧಕಾಂಡದಲ್ಲಿ ಕೊಂಚ ಮಟ್ಟಿಗೆ ಕವಿಗೆ ತೊಂದರೆ

ಯನ್ನು ಕೊಟ್ಟಿರಬೇಕು. ಒಟ್ಟಿನಲ್ಲಿ ಈ ಕವಿ ಈ ಹಿಂದೆ ನಾಲ್ಕು ರಾಮಾಯಣ ಗಳನ್ನು ಕನ್ನಡದಲ್ಲಿ ಬರೆದಿದ್ದರೂ, ಅವೆಲ್ಲ ಸ್ವಧರ್ಮದ ಕಟ್ಟುಪಾಡಿಗೊಳಪಟ್ಟ ಕಥೆಯನ್ನೇ ಬೇರೆಯ ಹಾದಿಗೆ ತಿರುಗಿಸಿದುವರಿಂದ ವಾಲ್ಮೀಕಿಯನ್ನು ಅನುಸರಿಸಿ ಕನ್ನಡಿಸಿದವರಲ್ಲಿ ಮೊದಲಿಗನು—ಮತ ದೃಷ್ಟಿಯಿಂದಲೂ ಇದು ಬ್ರಾಹ್ಮಣ ಕವಿ ಗಳ ಮೊದಲ ರಾಮಾಯಣ ; ಸಂಕ್ಷೇಪವಾದರೂ ಮೂಲ ರಾಮಾಯಣದ ಮರ್ಮವನ್ನರಿಯಲು ಇದನ್ನೋದಬೇಕಾಗುತ್ತದೆ.

ತೊರವೆಯ ರಾಮಾಯಣದ ಕಥೆ ಶಿವನ ಒಡ್ಡೋಲಗದಿಂದ ಪ್ರಾರಂಭವಾಗು ತ್ತದೆ. ಶಿವನನ್ನು ಶಿವೆಯು ಭೂಲೋಕದಲ್ಲಿ ಸಕಲಗುಣ ಪರಿಪೂರ್ಣನಾದವನಾರೆಂದು ಕೇಳಲು, ರಾಮನ ಕಥೆಯನ್ನು ವಿವರಿಸಿದನು. ಇದನ್ನು ನಾರದನು ವಾಲ್ಮೀಕಿಗೆ ಹೇಳಲು, ವಾಲ್ಮೀಕಿಯು ಕುಶ ಲವರಿಗೆ ತಿಳಿಸಿದನು.

ದಶರಥನು ಅಯೋಧ್ಯೆಯಲ್ಲಿ ಧರ್ಮದಿಂದ ರಾಜ್ಯವಾಳುತ್ತ ಪುತ್ರ ಕಾಮೇಷ್ಟಿ ಯಾಗದ ಫಲವಾಗಿ ನಾಲ್ಕು ಮಕ್ಕಳನ್ನು ಪಡೆದವನು. ರಾಮ ಲಕ್ಷ್ಮಣರು ಬೆಳೆ ಯುತ್ತಿರುವಾಗ ಕೌಶಿಕನು ಯಜ್ಞ ಸಂರಕ್ಷಣಾರ್ಥವಾಗಿ ರಾಮ ಲಕ್ಷ್ಮಣರನ್ನು ಕರೆದುಕೊಂಡು ಹೋಗಿ ತಾಟಕಿ ವಧಾನಂತರ ಯಜ್ಞ ಕಾರ್ಯ ಮುಗಿಸಿ, ಮಿಥಿ ಲೆಗೆ ಬಂದರು. ಸೀತಾ ಸ್ವಯಂವರದಲ್ಲಿ ಶಿವಧನು ಭಂಗಮಾಡಿ ರಾಮನು ಸೀತೆ ಯನ್ನೂ, ಲಕ್ಷ್ಮಣನು ಊರ್ಮಿಳೆಯನ್ನು ಭರತ ಶತ್ರುಘ್ನರು ಮಾಂಡವಿ ಶ್ರುತಿ ಕೀರ್ತಿಗಳನ್ನು ಮದುವೆಯಾಗಿ ಅಯೋಧ್ಯೆಗೆ ಬಂದು ಸುಖವಾಗಿರುವಾಗ ಭರತ ಶತ್ರುಘ್ನರು ಸೋದರ ಮಾವನ ಮನೆಗೆ ಹೋದರು. ದಶರಥನು ರಾಮನಿಗೆ ಪಟ್ಟಾಭಿಷೇಕ ಮಾಡುವ ಏರ್ಪಾಟು ಮಾಡಿದನು. ಇದನ್ನು ತಿಳಿದ ಮಂಥರೆಯು ಕೈಕೆಯನ್ನು ವಶಮಾಡಿಕೊಂಡು ದುರ್ಬೋಧೆ ಮಾಡುವಳು. ಆಕೆ ಪತಿಯಿಂದ ಎರಡು ವರ ಬೇಡಿ ರಾಮನನ್ನು ಕಾಡಿಗೆ ಕಳಿಸಿದಳು. ಆ ವೇಳೆಗೆ ಭರತನು ಬಂದು ನಿಜ ಸ್ಥಿತಿಯನ್ನರಿತು ಕಾಡಿಗೆ ಹೋಗಿ ರಾಮ ಪಾದುಕೆಗಳನ್ನು ತಂದು ನಂದಿ ಗ್ರಾಮದಲ್ಲಿ ನಿಂತು ರಾಜ್ಯಭಾರ ಮಾಡುತ್ತಿದ್ದನು.

ಇತ್ತ ರಾಮನು ವನವಾಸ ಮಾಡುತ್ತ ತಪಸ್ವಿಗಳನ್ನು ರಕ್ಷಿಸಿ ರಾಕ್ಷಸರನ್ನು ಕೊಲ್ಲುತ್ತಿರಲು, ರಾವಣನ ತಂಗಿ ಶೂರ್ಪನಖಿ ರಾಮನನ್ನು ಮೋಹಿಸಿ ಬಲಾತ್ಕರಿ ಸಲು, ಲಕ್ಷ್ಮಣನು ಆಜ್ಞಾ ಧಾರಕನಾಗಿ ಕಿವಿ ಮೂಗುಗಳನ್ನು ಕೊಯ್ಯುತ್ತಾನೆ. ಅವಳ ಸಹೋದರರಾದ ಖರ ದೂಷಣರು ೧೪ ಸಹಸ್ರ ರಾಕ್ಷಸರೊಡನೆ ಬಂದು ರಾಮನಿಂದ ಕೊಲ್ಲಲ್ಪಟ್ಟರು. ಶೂರ್ಪಣಖಿಯು ಅಣ್ಣ ರಾವಣನಲ್ಲಿ ಹೋದಳು. ರಾವಣನು ತಂಗಿಗಾದ ಅಪಮಾನ ಕಾರಣ ಕೇಳಲು ನಿಜ ವೃತ್ತಾಂತವನ್ನು ತಿಳಿ ಸದೆ ಸೀತೆಯ ಸೌಂದರ್ಯವನ್ನು ಹೊಗಳಿ ಸಹೋದರ ಶಿರಗಳನ್ನು ತೋರಿಸಲು

ಕ್ರೋಧೋನ್ಮತ್ತನಾದ ರಾವಣನು ಹೊರಗೆ ಮರುಗಿ ಮನದಲ್ಲಿ ಸೀತೆಗೆ ಮನ ಸೋತು ಮಾರೀಚನ ಸಹಾಯದಿಂದ ಸೀತೆಯನ್ನು ಕೊಂಡೊಯ್ದನು. ಮಾರ್ಗ ದಲ್ಲಿ ತಡೆದ ಜಟಾಯುವನ್ನು ರೆಕ್ಕೆ ಪುಕ್ಕ ತರಿದು ಮುಂದಾದನು.

ಈ ಕಡೆ ರಾಮಲಕ್ಷ್ಮಣರು ಸೀತೆಯನ್ನು ಕಾಣದೆ ಮುಂದೆ ನಡೆದು ಜಟಾಯುವಿನಿಂದ ನಿಜ ವೃತ್ತಾಂತವನ್ನು ತಿಳಿದು ದಕ್ಷಿಣಾಭಿಮುಖವಾಗಿ ಹೊರಟು ವಾಲಿಯನ್ನು ಕೊಂದು ಸುಗ್ರೀವ ಆಂಜನೇಯರ ಸಹಾಯದಿಂದ ಸೀತಾ ವೃತ್ತಾಂತವನ್ನು ತಿಳಿದು ಲಂಕೆಗೆ ಧಾಳಿ ಮಾಡಿದರು. ಮಧ್ಯದಲ್ಲಿ ಇದ್ದ ಬಂಡ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಕಪಿ ಸೇನೆ ಲಂಕೆಯಲ್ಲಿ ಬೀಡು ಬಿಟ್ಟಿತು. ವಾನರ ರಾಕ್ಷಸ ಯುದ್ಧ ಕೈಗಟ್ಟಿತು. ಇಂದ್ರಜಿತು ಸರ್ಪಾಸ್ತ್ರದಿಂದ ರಾಮ ಲಕ್ಷ್ಮಣರನ್ನು ಬಂಧಿಸಲು ಗರಡನು ಬಿಡಿಸಿದನು.

ವಜ್ರದಂಷ್ಟ್ರ, ಅಕಂಪನ, ಪ್ರಹಸ್ತ, ಕುಂಭಕರ್ಣ, ಇಂದ್ರಜಿತು–ನಿಕುಂಭಿಳಾಯಾಗ ಮಾಡಿ ವಿಫಲರಾಗಿ ಮಡಿದರು. ಕೊನೆಗೆ ರಾವಣನೇ ಹೆಂಡತಿಯ ಮಾತನ್ನು ಲೆಕ್ಕಿಸದೆ ಯುದ್ಧಕ್ಕೆ ಬಂದು ಲಕ್ಷ್ಮಣನನ್ನು ಮೂರ್ಛೆಗೆಡಹಿದನು. ಅನಂತರ ಮರಣ ಮಹಾ ಯಜ್ಞಕ್ಕೆ ತೊಡಗಿದಾಗ ಹನುಮಾದಿಗಳು ಅದನ್ನು ಹಾಳು ಮಾಡಿದರು. ರಾಮನಿಂದ ರಾವಣ ಹತನಾದನು. ಸೀತೆಯನ್ನು ಅಗ್ನಿ ಶುದ್ಧಿಯ ನಂತರ ಸ್ವೀಕರಿಸಿದನು. ವಿಭೀಷಣನಿಗೂ ಪಟ್ಟಗಟ್ಟಿ ಅಯೋಧ್ಯೆಗೆ ಬಂದು ಪಟ್ಟಾಭಿಷಕ್ತನಾಗಿ ರಾಜ್ಯ ಭಾರ ಮಾಡುತ್ತಿದ್ದನು.

ಇಷ್ಟು ಕಥೆಯನ್ನು ೧೧೨ ಸಂಧಿಗಳು ೫೦೭೯ ಪದ್ಯಗಳಲ್ಲಿ ಬರೆದಿದ್ದಾನೆ. ಇದರಲ್ಲಿ ೩೯೦೦ ಪದ್ಯಗಳು ಯುದ್ಧ ಕಾಂಡಕ್ಕೇ ಮೀಸಲಾಗಿರುವುದು ವಿಸ್ಮಯ ಕಾರಕವಾದ ವಿಷಯವೇ ಸರಿ. ಬಹುಶಃ ಇದಕ್ಕೆ ಎರಡು ಕಾರಣಗಳಿರಬೇಕು. ಮೊದಲನೆಯದಾಗಿ ಆ ಕಾಲದ ರಾಜಕೀಯ ಸ್ಥಿತಿ ಗತಿಗಳನ್ನು ನೋಡಿದರೆ, ದಕ್ಷಿಣ ಭಾರತದಲ್ಲಿ ರಾಜ್ಯ ನಿರ್ಮಾಣ ರಾಜ್ಯ ಪತನಗಳ ಕಾಲವಾಗಿತ್ತೆಂದು ಚರಿತ್ರೆಯಿಂದ ತಿಳಿಯುತ್ತದೆ. ಕವಿಯು ಆಗ ತಾನೆ ತಾಳಿ ಕೋಟೆಯ ಯುದ್ಧ ಮುಗಿದು ಅದರ ರುದ್ರ ಭಯಂಕರ ಸ್ಥಿತಿಗತಿಗಳು ಜನಮನದಲ್ಲಿ ಮರೆಯದೆ ಉಳಿದು ಕೊಂಡಿದ್ದುದು ಕಂಡು ಕೇಳಿದ ಅದರ ನೆನಪುಗಳನ್ನು ತನ್ನ ಕಾವ್ಯದಲ್ಲಿ ತಂದುದು ಸಹಜವಾಗಿಯೇ ಇದೆ. ಅದರಂತೆ ವಿಜಯನಗರದ ಜನರು ಪಟ್ಟ ಪಾಡನ್ನು ಸಂಕಟಗಳನ್ನು ಲಂಕೆಯ ಜನ ನೆಪದಲ್ಲಿ ಹೇಳಿರಬಹುದು.

ಎರಡನೆಯದಾಗಿ ಕವಿಯು ತನ್ನ ಕಾವ್ಯವನ್ನು ಇವೆಷ್ಟು ದಿನಗಳಲ್ಲಿ ಮುಗಿಸುವುದಾಗಿ ವೀರ ಪ್ರತಿಜ್ಞೆಯನ್ನು ಕೈಗೊಂಡು ಪ್ರಾರಂಭಿಸಿರಬಹುದು. ಮೊದಲೈದು ಕಾಂಡಗಳನ್ನು ಬೇಗ ಬೇಗ ಕಾಲವಿಳಂಬವಾದೀತೆಂಬ ಭಯದಿಂದ

ಸಂಕ್ಷೇಪಿಸಿ ಬರೆಯುತ್ತ ಆರನೆಯ ಕಾಂಡಕ್ಕೆ ಬಂದಾಗ ಇನ್ನೂ ಕಾಲಾವಕಾಶದ ಸುದೀರ್ಘತೆಯನ್ನರಿತು ಅದನ್ನು ವಿವರಿಸುತ್ತ ವಿಸ್ತಾರವಾಗಿ ಬರೆದಿರಲೂ ಬಹುದು. ಇದಕ್ಕೆ ಪುಷ್ಟಿ ದೊರೆಯುವಂತೆ ವಾಲ್ಮೀಕಿಯು ಹೇಳಿದ ಹೊಸ ವಿಷಯ ಗಳನ್ನು ವಿಶೇಷವಾಗಿ ಸೇರಿಸಿರುವುದೂ ಯುದ್ಧ ಕಾಂಡದಲ್ಲಿಯೇ ಎಂಬುದು ಸಹೃದಯ ಹೃದಯ ವೇದ್ಯವಾಗದಿರಲಾರದು.

ವಾಲ್ಮೀಕಿ ರಾಮಾಯಣಕ್ಕೂ-ಇದಕ್ಕೂ ಇರುವ ವ್ಯತ್ಯಾಸ:

ಇನ್ನು ಎರಡು ರಾಮಾಯಣಗಳಿಗೂ ಇರುವ ವ್ಯತ್ಯಾಸಗಳನ್ನು ಕೊಂಚ ಮಟ್ಟಿಗೆ ಪರಿಶೀಲಿಸುವುದು ಸೂಕ್ತವಾಗಿದೆ. ವಾಲ್ಮೀಕಿಯ ಕಥೆಗೂ ಇದಕ್ಕೂ ಅಷ್ಟೇನೂ ಹೆಚ್ಚು ವ್ಯತ್ಯಾಸಗಳು ಕಂಡು ಬರುವುದಿಲ್ಲ. ಏಕೆಂದರೆ ಮೊದಲೆ ತಿಳಿಸಿದಂತೆ ವಾಲ್ಮೀಕಿಯ ಹೃದಯವನ್ನರಿಯ ಬೇಕಾದರೆ ಕುಮಾರ ವಾಲ್ಮೀಕಿಯನ್ನೇ ಓದ ಬೇಕಾಗಿದೆ. ಆತನು ಅದುವರೆಗೆ ಇದ್ದ ಜೈನ ಕವಿಗಳ ರಾಮಾಯಣಗಳ ಪ್ರಭಾವದಿಂದಲೂ, ತನ್ನ ಮೇಲೆ ಪ್ರಭಾವ ಬೀರಿರಬಹುದಾದ ಆಧ್ಯಾತ್ಮ ರಾಮಾ ಯಣದಿಂದಲೂ ಅಲ್ಲಲ್ಲಿ ಹಲ ಕೆಲ ಸಣ್ಣ ಬದಲಾವಣೆಗಳನ್ನು ಮಾಡಿದ್ದಾನೆ. ವಾಲ್ಮೀಕಿಯು ಕೊಟ್ಟಿರುವ ವಿವರವಾದ ವರ್ಣನೆಗಳನ್ನೆಲ್ಲಾ ಬಿಟ್ಟು ಸಂಗ್ರಹವಾಗಿ ರಾಮ ಪಟ್ಟಾಭಿಷೇಕದವರೆಗೂ ಹೇಳುತ್ತಾನೆ. ಉತ್ತರ ಕಾಂಡದ ಕಥೆಯನ್ನು ಹೇಳಿಲ್ಲ. ಬಹುಶಃ ಕೆಲ ವಿಮರ್ಶಕರ ಅಭಿಪ್ರಾಯದಂತೆ ಅದು ವಾಲ್ಮೀಕಿ ಕೃತಿ ಯಲ್ಲವೆಂದು ತಿಳಿದು ಬಿಟ್ಟಿರಲೂ ಬಹುದೆಂದು ಕಾಣಿಸುತ್ತದೆ.

ಇದರಲ್ಲಿನ ರಾಮನು ವಿಷ್ಣುವಿನ ಅವತಾರವೆಂದು ಹೇಳುತ್ತಾನೆ. ಇದರಿಂದ ಆತನು ಬಳಸಿದ "ಭವನಸ್ಮಿತಲಯ ವಿವರ್ಜಿತನ ಹಿರಿಯ ರಾಣಿ ಕೌಸಲ್ಯೆ ಬೆಸಲಾದಳೆಂಬ ಮಾತೂ, ವೀರ ದಶರಥ ಸಾರ್ವಭೌಮನ ಪಾರ ಸಂತೋಷಾಂಬುಧಿಗೆ ನೇರೆದಪ್ಪಿದುದಾದಿ ನಾರಾಯಣನ ಜನನದಲಿ" ಎಂಬ ಮಾತೂ ಅರಿವಥಾ ಸಮಯಕ್ಕಾಗಿ ನರರೂಪಿನಿಂದ ನಾರಾಯಣನು ರೂಪಿಸಿದನನುಪಮ ರಾಮನಾಮದಲಿ ಮತ್ತೂ,

ತುದಿ ಮೊದಲು ನಡುವೆಂಬ ಲಯದ
ಭ್ಯುದಯವೆಂಬ ವಿಕಾರಗಳು ಸೋಂ
ಕದ ಸನಾಥನಿಗಾಯ್ತು ಲೀಲೆ ಮನುಷ್ಯ ರೂಪಿನಲಿ

ಎಂಬುದನ್ನು ನೋಡಿದರೆ ರಾಮನು ಕೇವಲ ಸಾಮಾನ್ಯ ಮನುಷ್ಯನಲ್ಲ ವೆಂಬ ಭಾಗವತ ಭಾವನೆ ತೋರುತ್ತದೆ. ಅದಕ್ಕೆ ತಕ್ಕಂತೆಯೇ ಅಮಾನುಷ ಲೀಲೆ

ಗಳನ್ನು ಪ್ರದರ್ಶಿಸುತ್ತಾನೆ. ಆದರೂ ವಾಲ್ಮೀಕಿ ರಾಮಾಯಣದಲ್ಲಿಲ್ಲದ ಓ ತಿವೇವೆ ಯರ ಸಂಭಾಷಣೆ, ಆಂಜನೇಯನು ಮೂರ್ಛಿತನಾದ ಲಕ್ಷ್ಮಣನಿಗಾಗಿ ಓಷಧ ಪರ್ವತಕ್ಕೆ ಹೋಗುವಾಗ ದಾರಿಯಲ್ಲಿ ಕಾಲ ನೇಮಿಯ ವೃತ್ತಾಂತ. ರಾವಣನು ತನ್ನ ಮಗನಂತೆ ಯಜ್ಞ ಮಾಡುವ ವಿಷಯಗಳನ್ನು –ಅಧ್ಯಾತ್ಮ ರಾಮಾಯಣ ದಿಂದ ತೆಗೆದುಕೊಂಡಿರಬಹುದು–ರಾಮಾಯಣದ ಕಥೆಗೆ ಸೂತ್ರ ಪ್ರಾಯಳಂತಿ ರುವ ಮಂಥರೆಯನ್ನು "ಜ್ಞಾತಿದಾಸೀಯತೋ ಜಾತಾ" ಎಂದು ಮೂಲ ರಾಮಾ ಯಣದಲ್ಲಿ ಸಂಬಂಧಿಸಿ ಪಾಪ ದರ್ಶಿಸಿ ಎಂದು ಕರೆದರೆ ಇಲ್ಲಿ ಪೂರ್ವ ಮಾಯಾ ಕರುಣಿ ಮಂಥರೆ ಎಂದು ಕರೆದಿದೆ. ಆಕೆಯು ಶ್ರೀರಾಮಚಂದ್ರನ ಪಟ್ಟಾಭಿಷೇಕ ವೃತ್ತಾಂತವನ್ನು ತಿಳಿದು

ಅಂದಿನುದಯದಿಲವಳು ಕೈಕೆಯ
ಮಂದಿರಕೆ ನೃಪಸಭೆಯೊಳಿದ್ದೈ
ತಂದಳಾ ಸೈಳೇಂದ್ರಿವೇಷದ ಮಾಯೆವಹಿಲದಲಿ
ಕಂದನಿಕ್ಕುವೆನ ವನಿಪನನುನ
ಸಂದ ಮೋಹದ ಮಾನಿನಿಗೆ ಮನು
ನಂದನನನೆಬ್ಬಟ್ಟುವೆನು ರಾವಣನ ವಧೆಗೆನುತ||

ಎಂದು ಹೇಳುತ್ತಾಳೆ.

ವಾಲಿ, ರಾವಣರು ಪ್ರಾಣ ಬಿಡುವ ಕಾಲದಲ್ಲಿ 'ನಿಗಮಾತ್ಮಕ'ನೆಂದು ಹೊಗಳಿ ಪ್ರಾಣ ಬಿಡುತ್ತಾರೆ. ವಾಲ್ಮೀಕಿಯ ರಾವಣ ಯುದ್ಧ ಸಮಯದಲ್ಲಿ ತನ್ನ ಕಡೆಯವರ ನಷ್ಟದಿಂದ ಹೆಚ್ಚ್ಹೆಚ್ಚು ಕೋಪಾವಿಷ್ಟನಾದರೆ ಕುಮಾರ ವಾಲ್ಮೀಕಿಯ ರಾವಣ ಅನುತಾಪ ಪಶ್ಚಾತ್ತಾಪಗಳಿಂದ ಕರಗಿ ಕಾಳಿಕೆಯನ್ನು ನೀಗಿಕೊಳ್ಳು ತ್ತಾನೆ.

ಮಾಣದಾದೆನು ಮಾವನಾಡಿದ
ವಾಣಿಯನು ಕಾಮುಕ ತನದಿ ತಾ
ಕಾಣದಾದೆನು ಕಲಿ ವಿಭೀಷಣನುಚಿತ ಭಾಷಿತವ
ಪ್ರಾಣ ಮಿತ್ರನಲಾ ಪ್ರಹಸ್ತನ
ಊಣಯುವ ತಾಳಿದೆನು ಜನನಿಯ
ಜಾಣಿಕೆಯ ಚಾತ್ಯುತ್ತರ ವನತಿಗಳೆ ದನಕಟೆಂದ

ಮರುಗಿ ಪೂರ್ವ ಜಾತ ಸ್ಮರಣೆಯುಂಟಾಗಿ ತನ್ನ ಮುಕ್ತಿಗೆ, ಹೇತುವಾದ ಕಾಳಗಕ್ಕೆ ನಿಲ್ಲುತ್ತಾನೆ. ಜಗದೊಳಗನೋವ ಕೀರ್ತಿಗೆ ಮರಳಿ ಕಾಳಗವೆ ನಿಧಾನಿಸಿ

ರಾಘವೇಂದ್ರನೊಳಿಂದ ನಸುರೇಂದ್ರ ಎಂಬುದಾಗಿ ಅರಿತು ಕೊಂಡರೂ ಸ್ವಾಭಿಮಾನಿಯೂ ವೀರನೂ ಆದ ಅವನಿಗೆ ಉಚಿತವಾದ ವೆಚ್ಚಿಸುವೆನಾ ವನಜ ಪೀಠನ ಸಿಗವು ಜೂಟನ ಕೋಟಿ ಹೋಪುದಲೀ ತನಗೆನೂರ್ಪಡಿ ವಿಕ್ರಮದ ಹೇಂಪಿನ ಮಹಾಭಟ ಕೋಟಿ ರಾವಣನು ಮಹಾ ಕೃತು ಕುಂಡದಲಿ ಹೊರವಡಿಸುವೆನು ಎಂದ ಅನಂತರಯೇ ಅವನ ಪತ್ನಿಯಾದ ಮಂಡೋದರಿಯು ರಾಮನ ಅವತಾರದ ಬಗ್ಗೆ ಹೇಳಿ ಅವನನ್ನು ಶರಣಾಗುವುದೇ ವಿಹಿತವೆಂದಾಗ,

ಬಲ್ಲೆ ನೀ ರಘುನಾಥ ಲಕ್ಷ್ಮೀ
ವಲ್ಲಭನು ತಾನೆಂಬುದನು ನಾ
ಬಲ್ಲೆನ ವನಿಜೆ ಲಕ್ಷ್ಮಿಯೆಂಬುದ ನಾ ಹವಕೆ ನೆರೆದ
ಭಲ್ಲುಕರು ಮರ್ಕಟರು ಸುರರೆಂ
ಬೆಲ್ಲವೇತಕೆ ಕೇಳು ರಣಮುಖ
ದಲ್ಲಿ ರಾಮನ ಕೂಡುವುದು ಸಂಕಲ್ಪ ತನಗೆಂದ.

ಇದು ರಾಮನ ಭಗವದವತಾರವನ್ನು ನಿರೂಪಿಸಿದರು ರಾವಣನ ಪಾತ್ರದ ಮೇಲೆ ಒಂದು ವಿಧವಾದ ಅಸ್ವತಂತ್ರತೆಯನ್ನು ಸ್ಥಾಪಿಸುತ್ತದೆ. ನಟನು ನಾಟಕದಲ್ಲಿ ಪಾತ್ರ ಮಾಡಿರುವಾಗ ತನ್ನ ಮೂಲಸ್ಥಿತಿಯನ್ನು ಸ್ಮರಿಸಿಕೊಂಡು ರಂಗಸ್ಥಳದಲ್ಲಿ ಹೇಳಿದಂತಿದೆ.

ರಾಮನನ್ನು ರಾವಣನ ಆದೇಶದಂತೆ ವಂಚಿಸಲು ಮಾಯಾ ಮೃಗ ವೇಷದಲ್ಲಿ ಬಂದ ಮಾರೀಚನು ರಾಮನಿಗೆ ಸಿಕ್ಕಿಸಿಕ್ಕದಂತೆ ಓಡಿದನೆನ್ನುವಾಗ

ತೊಳಲಿಸಿತು ಸೌರಾಷ್ಟ್ರದವನೀ
ತಳದೊಳಾ ಗೌಳಾವನಿಯುಮಂ
ದಳದೊಳಂಗ ಕಳಿಂಗ ಗುರ್ಜರ ನಿಷಧ ಕಾಂಭೋಜ
ತುಳು ವಿದರ್ಭ ದ್ರಾವಿಡಾವನಿ
ಗಳಲಿ ಕೇರಳ ಸಿಂಧು ಮರುಕುಂ
ತಳದ ವಿಷಯಂಗಳಲಿ ವಿವಿಧಾರಣ್ಯ ವೀಧಿಯಲಿ

ಎಂದು ತೊಳಸಿದನಂತೆ.

ಇತ್ತ ರಾವಣನು ಸೀತೆಯನಪಹರಿಸಲು ಮುನಿಯ ವೇಷದಿಂದ ಬಂದಾಗ ಸೀತೆಯು ದರ್ಭಾಸನವನ್ನಿತ್ತು ಉಪಚರಿಸಿ ನಮ್ಮಯ ಜನಕ ಬಂದವೊಲಾಯಿತೆಂದು ಹೇಳುತ್ತಾಳೆ.

ಸೀತಾನ್ವೇಷಣಕ್ಕೆ ಹೊರಟ ಕಪಿಕುಲ ಸಮೂಹವು ಭರತನನ್ನು ಕಂಡು ಸೀತಾಪಹರಣ ವೃತ್ತಾಂತವನ್ನು ತಿಳಿಸಲು, ಭರತನು ರಾಮ ಸಹಾಯಕ್ಕಾಗಿ ಸೈನ್ಯ ಸಮೇತ ಹೊರಡಲು ನಾರದನು ರಾಮನ ಸಾಮರ್ಥ್ಯವನ್ನು ತಿಳಿಸಿ ತಡೆಯುತ್ತಾನೆ.

ಹನುಮಂತನು ಲಂಕೆಗೆ ಹಾರಿ ಹೋಗುವಾಗ ದಾರಿ ತಪ್ಪಿ ಸಿಂಧೂತೀರಕ್ಕೆ ಹೋಗಿ, ತೃಣ ಬಿಂದುವಿನ ಸಹಾಯದಿಂದ ಲಂಕಾ ಮಾರ್ಗವನ್ನು ತಿಳಿದು ಸೇರಿ, ಸೀತೆಯನ್ನು ಹುಡುಕುತ್ತಾ ಹೊರಟು ಕುಂಭಕರ್ಣನ ಮೂಗಿನಲ್ಲಿ ಸಿಕ್ಕಿ ಒದ್ದಾಡುತ್ತಾನೆ.

ಸಮುದ್ರರಾಜನಿಗೆ ಬಾಣ ಬಿಡುವ ಪ್ರಯತ್ನ ಮಾಡಲು, ಓಡಿಬಂದು ಸಮುದ್ರರಾಜ ಪ್ರಾರ್ಥಿಸಲು, ವ್ಯರ್ಥವಾಗದ ರಾಮಬಾಣವು ಅವನ ಪ್ರಾರ್ಥನೆಯಂತೆ ೮೭ ಕೋಟಿ ನಿಶಾಚರರನ್ನು ಕೊಲ್ಲುತ್ತದೆ.

ಭರತ ಭೂಮಿಯ ಪರ್ವತ ಶಿಖರಗಳನ್ನೆಲ್ಲಾ ವಾನರು ಕಿತ್ತು ತಂದು ಸೇತುಬಂಧನ ಮಾಡುವಾಗ, ಹನುಮನು ಕೈಲಾಸವನ್ನೇ ಎತ್ತಿ ಬಿಡಲು, ಶಿವನು-ಹನುಮನ ವಾಚ್ಯಾತೀತ ಉಪಮಾತೀತ ಪರಾಕ್ರಮ ಸಮಾಧಾನ ಪಡಿಸುತ್ತಾನೆ.

ಯುದ್ಧಕ್ಕೆ ಮುಂಚೆ ರಾವಣನು ಮಯನಿಂದ ಕೋಟೆಯನ್ನು ಬಲಪಡಿಸಿ ಯುದ್ಧ ಕಾಲದಲ್ಲಿ ಕೋಟಿ ಹೋಮ ಮಾಡುತ್ತಾನೆ. ಸುಷೇಣನ ಮಾತಿನ ಪ್ರಕಾರ ಚಂದ್ರ ದ್ರೋಣ ಪರ್ವತಕ್ಕೆ ಹನುಮಂತನು ಹೋಗುವಾಗ ಮಾಯಾವಿಯಿಂದ ಕಾಲಹರಣವಾಗುವಂತೆ ಆದದು. ಕೊನೆಗೆ ರಾವಣನು ಯುದ್ಧಕ್ಕೆ ಹೊರಡುವಾಗ,

ಕರೆಸಿದನು ಭಂಡಾರಿಗಳನಾ
ಹರಿಹುತಾಶನ ಯಮನಿಶಾಚರ
ವರುಣವಾಯು ಕುಬೇರ ಶಂಕರರಿತ್ತ ಕಪ್ಪಗಳ
ಹಿರಿದು ಕಾಲದ ಹಳೆಯ ಟಂಕದ
ಪರಿಪರಿಯ ನಾಣಯವನೆಲ್ಲವ
ತರಿಸಿಸೂಸಿದ ನಖಿಳಯಾಚಕ ಜನದ ಸಂದಣಿಗೆ

ಹೊರಿಸಿ ಸುಭಟರ ಸತಿಸುತರ ಮಂ
ದಿರಗಳಿಗೆ ಕಳುಹಿದನು ನಗರದ
ಹರವ ಹಾರುವ ವಿನುಗು ಬಿಚ್ಚಟಿ ಒಡವು ಬಗ್ಗುಗಳ

ಕರೆಕರೆದು ಕೈಹಾರದಲಿ ಮನ
ವೆರಸಿಸೂರೆಯ ಬಿಟ್ಟು ತೆರಿಗೆಯ
ದರಹಗಳ ನೆರೆತೊಡಿಸಿ ಸಂತಸಪಡಿಸಿದನು ಜನವ

ಸೆರೆಮನೆಯೊಳಿರ್ದಖಿಳ ದಾನವ
ಸುರನರೋರಗ ಜನವ ಮನ್ನಿಸಿ
ಹೊರವಡಿಸಿದನು ಪುರವನಾಪ್ತರ ಬಂಧು ವರ್ಗಗಳ।
ಕರೆದು ರಣದೊಳಗಳಿದೆನಾದೊಡೆ
ವರವಿಭೀಷಣ ದೇವನನು
ಪರಿಚರಿಯದಿಂದುಪಚರಿಸಿಕೊಂಡಿಹುದೆಂದು ನೇಮಿಸಿದ ||

ಈ ರಾವಣನ ನಡವಳಿಕೆಗಳು ವಾಲ್ಮೀಕಿ ರಾವಣನಿಗಿಂತ ಭಿನ್ನನನ್ನಾಗಿ ಮಾತ್ರ ಮಾಡದೆ ದುರಂತ ರಾವಣನನ್ನಾಗಿ ಮಾಡುವ ಪ್ರಯತ್ನದಂತಿದೆ. ಇದು ಬಹುಶಃ ಜೈನ ರಾಮಾಯಣದ ಪ್ರಭಾವವಿರಬಹುದೆಂದು ಕಾಣಿಸುತ್ತದೆ.

ಬದಲಾವಣೆಯಿಂದ ಉಂಟಾಗಿರುವ ಪಾತ್ರ ಪೋಷಣೆ

ಹೀಗೆ ಕುಮಾರ ವಾಲ್ಮೀಕಿಯು ಮಾಡಿಕೊಂಡಿರುವ ವ್ಯತ್ಯಾಸವು ಕೆಲವು ಪಾತ್ರ ಪೋಷಣೆಗೆ ತುಂಬಾ ಉಚಿತವಾಗಿದೆ. ಮೊದಲನೆಯದಾಗಿ ಮಂಥರೆಯು ಮಾಯೆಯ ಅವತಾರವಾಗಿದ್ದಾಳೆ.

ಭೂರಿಭೂಭಾರದ ನಿಶಾಚರ
ವೀರಕುಲವಿಚ್ಛೇದನ ಕೆಲ
ಕ್ಷೀರವರ್ಣನುದಿಸಿದನಲ್ಲೆ ರಾಮಭಿದಾನದಲಿ
ಆ ರಮಾಪತಿಯಾಜ್ಞೆ ಗಾವುದೊ
ದಾರಿಯೆಂದಾ ಮಾಯೆ ವಿಜ್ಞಾ
ಸಾರಮುಖದಿಂದಮಿದಳಾಗತ ಕಾರ್ಯ ಕೌಶಲವ।

ಎಂದ ಮೇಲೆ ಕೈಕೆಯನ್ನು ವಶಪಡಿಸಿಕೊಂಡು ದುರ್ಬೋಧನೆ ಮಾಡುವುದು ಅವಳ ಕರ್ತವ್ಯ; ರಾಮನ ಅವತಾರವೇ ಅದಕ್ಕೆ ಮೊಸಲು. ಜ್ಞಾನದೃಷ್ಟಿಯಿಂದ ತಿಳಿದವಳಾಗಿ ಪ್ರವರ್ತಕಳಾಗುವುದರಿಂದ ಆಕೆಯ ಪಾತ್ರ ಸರ್ವಾದರಣೀಯವಾಗಿದೆ. ಇದರಿಂದ ಕೈಕೆಯ ಮೇಲಿನ ಅಪಖ್ಯಾತಿ ದೂರವಾಗುತ್ತದೆ. ಅವಳ ಕುಮಾಣೆಗೆ ಕವಿದೇನ ಆಕೆಯ ಬಗ್ಗೆ ಜಿಗುಪ್ಸೆ ಬರುವುದಿಲ್ಲ. ಏಕೆಂದರೆ,

ಮುಸುಕಿದಳು ಮಾಯಾ ವಿಳಾಸದ
ವಸನದಲಿ ಮಾಯಾ ನಿತಂಬಿನಿ
ವಿಸುಕದಂತಿರೆ ಕೇಳಿದೈ ಕಾಕುತ್ಸ್ಥನೃಪಸೂನು
ಪಿಸುಣರಿಂದಾರೈಶ್ವರಿಯ ಜಾ
ಳಿಸದು ಜಗದಲಸೂಯದಧಿಕ
ವ್ಯಸನದಲಿ ಮನವಿಕ್ಕಿದಳು ಮಾನಿನಿ ಮಹೀತಳಕೆ.

ಹೀಗೆ ಮಾಯಾವಶಳಾದ ಆಕೆ ಸ್ವಬುದ್ಧಿ ಚ್ಯುತಳಾಗಿ ವರ್ತಿಸಿದರೆ ಆಶ್ಚರ್ಯವೇನು. ಮಾಯಾವಶವಾಗದವರು ಜಗತ್ತಿನಲ್ಲಿ ಯಾರಿದ್ದಾರೆ. ಹೀಗಿರುವಾಗ ಅಬಲೆಯು ಅಸಹಾಯಕಳಾಗಿ ವರ್ತಿಸುತ್ತಾಳೆ.

ಹಾಗೆಯೇ ರಾವಣ ಕುಂಭಕರ್ಣರ ವಿಷಯದಲ್ಲೂ ಸಹೃದಯ ಸಹಾನುಭೂತಿ ಹರಿಯುವಂತೆ ಮಾಡಿದ್ದಾನೆ. ಕುಂಭಕರ್ಣ ಕೇವಲ ಪರಾಕ್ರಮಿ ಮಾತ್ರವಾಗದೆ ಧರ್ಮಿಷ್ಠ ಸೀತೆಯನ್ನು ತಂದನೆಂಬ ಮಾತನ್ನು ಮಂತ್ರಿಗಳಿಂದ ಕೇಳಿದಾಗ,

ಅಕಟ ಕೆಡಿಸಿದನನ್ಯವನಿತಾ
ಸಕರೆಯಲಿ ಮನವಿಕ್ಕಿ ಮಹಿಮಾ
ಪ್ರಕರಣದ ಪೌಲಸ್ತ್ಯವಂಶದವಿಮಲವೈಭವವ
ಮಕರಕೇತನನಸ್ತ್ರ ನಿರ್ಬಾ
ಧಕವೆ ಯಕಟಕಟೈ ಹಿಕಾಮು
ಷ್ಮಿಕಕೆ ಸಲ್ಲದಮತಿಯ ಮನದಲಿ ನೆನೆದನೇ ಎಂದ.

ಎಂದುಕೊಂಡು ಆ ಸ್ಥಾನಕ್ಕೆ ಬಂದು ಅಣ್ಣನಿಂದ ಆಲಂಗಿಸಿಕೊಳ್ಳಲ್ಪಟ್ಟವನಾಗಿ ಸೀತಾಪಹರಣ ವೃತ್ತಾಂತವನ್ನು, ರಾಮನ ಆಗಮನವನ್ನು ಕೇಳಿದಮೇಲೆ,

ಕೇಳು ನೀನೆಲೆಯಣ್ಣ ಪರವೆ
ಣ್ಣಾಳಿಗದಲಿಂದ್ರಾದಿ ದೇವರು
ಕೋಳುವೋದರು ಕಾಮನಾರ್ಗತಿ ಹಿತವನಕಟೆಂದ

ಮುಂದುವರಿದು

ಆದರೆಯು ಕೇಳಣ್ಣ ರಣದಲಿ
ಹೋದವರು ಹೋಗಲಿ ವಿವೇಕವ
ನಾದರಿಸಬಲ್ಲಡೆ ಮಹಾಯುವನಧಿಕ ಸಂಪದವ

ಸಾಧಿಸುವದುಳ್ಳೊಡೆನ್ನ ಪಾಲಕ
ಳೋದರಿಯ ಸೂಲಿದೀವುದಿದು ನಯ
ದಾದಿಸುತ ಸಿನ್ನನುಮತವದೇನೆಂದನಗ್ರಜನ

ರಾವಣನು ಬುದ್ಧಿವಾದವನ್ನು ಕೇಳದಿದ್ದರೂ, ಅವನನ್ನು ಬಿಟ್ಟುಹೋಗದೆ ಕರ್ತವ್ಯದೃಷ್ಟಿಯಿಂದಲೂ ಭ್ರಾತೃಪ್ರೇಮದಿಂದಲೂ ಯುದ್ಧಕ್ಕೆ ಹೊರಡುತ್ತಾನೆ.

ಧುರಕಿವನು ಕೈಗಟ್ಟಿ ನಿಂತರೆ
ತರಹರಿಸುವವರಾರು ನಿರ್ಜರ
ನರಭುಜಂಗಸು ಭಟರೊಳಿದು ತಾ ಸುಪ್ರಸಿದ್ಧ ಕಣಾ

ನಿಜ ಆದರೆ ಅಣ್ಣನ ಪಾಪದ ದೆಸೆಯಿಂದಾಗಿ

ಪರಿಕಿಸುವೊಡೊಂದಿದೆ ಪರಸ್ತ್ರೀ
ಹರಣದನುಬಂಧಿತೆಯ ನಂಗೀ
ಕರಿಸಿದುದರಿಂ ದೇನಹೆನೊ ನಾನರಿಯನಿದ

ನೆಂದು ಅನುಮಾನಿಸಿದಂತೆಯೇ ರಾಮನಿಂದ ಹತನಾಗುತ್ತಾನೆ.

ರಾವಣನೂ ಅಷ್ಟೇ ದಿಕ್ಪಾಲಕರನ್ನೆಲ್ಲಾ ಗೆದ್ದು ಅಧೀನಪಡಿಸಿಕೊಂಡಿದ್ದ ಮಹಾ ಪರಾಕ್ರಮಿ ತಾನು ಸೋಲುತ್ತೇನೆಂದು, ಅದರಯೂ ಯಃಕಶ್ಚಿತ ನರನಿಂದ ಸೋಲುತ್ತೇನೆಂದು ಕನಸಿನಲ್ಲಿಯೂ ನೆನೆದಿರಲಿಲ್ಲ. ಪರಾಭವದ ಮೇಲೆ ಪರಾಭವ ಉಂಟಾಗಲು ಸಹೋದರ ಬಂಧು ಬಾಂಧವರ ಸಾವಿನ ಮೇಲೆ ಸಾವು ಉಂಟಾಗಲು ಅವನ ಬಗೆ ಕದಡಿ,

ಜನನಿಜನನಿಯ ಜನಕನನುಚಿತ
ವೆನಲು ಜರಿದೆನು ಜನಕಜಾಪತಿ
ಜನಪನೆಂಬೇ ಕೂಡಿ ಮಾಡಿದೆನಪ್ರಬುದ್ಧಿಕೆಯ
ದಿನದಿನಕೆ ಕದೆಗೇಹು ಕೈಯೊಡ
ನೊನದು ಕೊಡುತಿದೆ ಕಾಮುಕತ್ವದ
ನೆನಹು ನೆಗ್ಗದೆ ಮಾಣಬೆಂದ ಸುರೇಂದ್ರನಳವಳಿದ

ಸೀತೆಯನ್ನು ತಂದುದಂತೂ ಆಯಿತು, ಪಶ್ಚಾತ್ತಾಪ ಪಟ್ಟರೇನು ಪ್ರಯೋಜನ! ಹಿಂದಕ್ಕೆ ಒಪ್ಪಿಸುವುದಂತೂ ಆಗದ ಕೆಲಸ, ರಾಮನನ್ನು ಗೆದ್ದರೆ ಕೀರ್ತಿ, ರಾಮನಿಂದ ಸತ್ತರೆ ಮುಕ್ತಿ ಎಂದು.

ನೋಡುವೆನು ತಮ್ಮನಲಿ ತಮ್ಮನ
ಪಾಲುತಪ್ಪಿದಬಳಿಕ ಪಂಥದ
ಪಾಡುಪಾಡಿನ ಮೇಲೆ ಪೌರುಷದುರು ಪರಿಗ್ರಹದ
ಮೋಡಿ ಮುರಿಯೆಡೆ ಖಾಡಾ
ಖಾಡಿಯಲಿ ಹೊಯ್ದಾಡಿ ಕೀರ್ತಿಯ
ಜೋಡಿಸುವುದೇ ಜಾಣತನಭಿಯೋಗ ತನಗೆಂದ ।

ತನ್ನ ಅವಸಾನವನ್ನು ಅರಿತುಕೊಂಡ ರಾವಣ ಮಹಾ ಜ್ಞಾನಿಯಂತೆ ದಾನ ಧರ್ಮಗಳನ್ನು ಮಾಡುತ್ತಾನೆ. ಹೀಗೆ ತಾನು ಮಾಡಿಕೊಂಡಿರುವ ಬದಲಾವಣೆ ಯಿಂದ ಕುಮಾರ ವಾಲ್ಮೀಕಿಯ ಪಾತ್ರಗಳು ತುಂಬಾ ಶೋಭಾಯಮಾನವಾಗು ವಂತೆ ಮಾಡಿದ್ದಾನೆ.

ವ್ಯಕ್ತಿ ಸನ್ನಿವೇಶಗಳನ್ನು ಚಿತ್ರಿಸುವುದರಲ್ಲಿನ ಕರ್ಮ ಕುಶಲತೆ

ಇದುವರವಿಗು ಕೆಲವೊಂದು ಪಾತ್ರಗಳನ್ನು ನೋಡಿದ್ದೇವೆ. ಕವಿ ಹೇಗೆ ಅವುಗಳನ್ನು ಜೀವಂತವಾಗಿ ಹೇಗೆ ನಿಲ್ಲಿಸಿದ್ದಾನೆಂಬುದು ವ್ಯಕ್ತವಾಗಿದೆ. ಈ ಕಾವ್ಯದಲ್ಲಿನ ವ್ಯಕ್ತಿ ಸನ್ನಿವೇಶ ಚಿತ್ರಗಳು ಗುಣಭರಿತವಾಗಿವೆ. ಉದಾಹರಣೆ ಗಾಗಿ ಮತ್ತೊಂದನ್ನಿಲ್ಲಿ ನೋಡಬಹುದು.

ವನದಲ್ಲಿ ನಿಸ್ಸಂಗಿಯಾಗಿದ್ದ ಋಷ್ಯ ಶೃಂಗನ ಸಮಗ್ರ ಜೀವನವನ್ನು ಒಂದು ಪದ್ಯದಲ್ಲಿ ಛಟ್ಟ ಇಳಿಸಿದ್ದಾನೆ.

ಆಟವೇ ಮೃಗಗಣದೊಡನೆ ಸವಿ
ಯಾಟವೇ ವನಕಂದ ಫಲತಂ
ಬೇಟವೇ ಕಂಜಾಕ್ಷ ಕಾಮಾರಿಗಳ ಭಜನೆಯಲಿ
ಕೂಟವೇ ಯೋಗಾಂಗನೆಯ ಸರಿ।
ಪಾಟಿಯಲ್ಲಿಹ ಋಷ್ಯ ಶೃಂಗನ
ನಾಟವಿಕ ಕಾಮುನಿಯರ್ಬೈದಿದರರಸ ಕೇಳೆಂದ

ಹಾಗೆಯೇ ಮಂಡೋದರಿಯ ರೂಪವನ್ನು ವರ್ಣಿಸುವಾಗ ಶಬ್ದಗಳೂ ಸಾಕಾಗದೆ ರೂಪಗ್ನದಲ್ಲಿ ರೂಪವನ್ನು ತುಂಬಿ ಕೊಡುತ್ತಾನೆ.

ಹರನ ಹಣೆಗಣ್ಣಿನ ಮಹಾನಲ
ದುರಿಯ ಹೊಯ್ಲಲಿ ಸಾಯಲಾರದೆ
ಪುರುಷತನವನು ಬಿಟ್ಟು ಮಂಡೋದರಿಯ ರೂಪಕವ
ಧರಿಸಿದನೊ ಕಂದರ್ಪನೆನೆಸಿಂ
ಗರದ ಸಾರೋದಯದ ಸೊಬಗಿನ
ಸುರನದಿಯ ಪೌಕ್ತಿಕದವೊಲು ಮೆರೆದಿದ್ದಳಾಕಾಂತೆ.

ನಿದ್ರಾ ಮುದ್ರಿತನಾದ ವಿಭೀಷಣನು ಹನುಮಂತನಿಗೆ ಕಂಡ ರೀತಿಯನ್ನು ಬಹಳ ಸೊಗಸಾಗಿ ವರ್ಣಿಸಿದ್ದಾನೆ.

ಜಗದ ಕೊಲೆಗೆಲಸದಲಿ ಬಳಲಿಕೆ
ಬಿಗಿದ ಮುದ್ರೆಯ ಭೈರವನೊರತಿ
ಯೋಗಡಿಕೆಯ ವಿಶ್ರಮಸುಷುಪ್ತಿಯಲಯಕೃತಾಂಕನೊ
ಉಗಿಸಿನೀರನು ಭಾರಿಸಿದುಮೈ
ತೆಗೆದ ಮುಗಿಲಿನ ಮೂಲ ಮೂರ್ತಿಯೊ
ವಿಗಡರಕ್ಕಸನೋಮ ಹಾದೇವೆನುತ ಬೆರಗಾದ.

ಹಾಗೆಯೇ ಭಾವಚಿತ್ರಗಳನ್ನು ಚಿತ್ರಿಸುವಾಗಲೂ

ಬಳರೊಳಗೆ ಸಜ್ಜನನು ಹಾಲಾ
ಹಲದೊಳಗೆ ಸುಧೆ ಕಾಮರಂಗಳ
ಹಳುವವಲಿ ಹರಿಚಂದನವು ಶಿಖಿಯೊಳಗೆ ಶೀತಳವು
ಕಲುಗಳೊಳು ನಿಜ ಪುರುಷ ಜನಿಸುವು.
ದಿಳೆಗೆ ಚಿತ್ರವಲಾ....

ಎಂದು ವಿಭೀಷಣನ ಜನನವಾಯ್ತೆಂತೆ.

ರಾಮ ಮುದ್ರಿಕೆಯನ್ನು ಕಂಡ ಸೀತೆಗೆ ಆದ ಸಂತೋಷವನ್ನು ಕವಿ

ತರಣಿ ಬಿಂಬವ ತೋರಿಕೆಯ ತಾ
ವರೆಯ ವೊಲು ಹೆರೆಗಂಡು ಹಿಗ್ಗುವ
ಶರನಿಧಿಯ ವೊಲು ಸಾರ್ಥಸಿರಿಯದರಿದ್ರನಂದದಲಿ
ಪರಮ ತತ್ವದ ನಿಲುಕಡೆಯ ಸಂ
ದರುಶನದ ಸುಜ್ಞಾನಿಯ ವೊಲು
ಬ್ಬರದ ಹರುಷದಲಬಲೆ ಹೊಂಪುಳಿಯೋದಳಡಿಗಡಿಗೆ.

ಕವಿಯು, ಭಾವಗಳು ಮನಸ್ಸಿನಲ್ಲಿ ಮೂಡಿ ಅಚ್ಚೊತ್ತಿ ಸಿಲ್ಲುವಂತೆ ಹೀಗೆ ಉಪಮಾನಗಳನ್ನು ಪುಂಖಾನು ಪುಂಖವಾಗಿ ಸಹೃದಯನ ಮೇಲೆ ಬೀಳುವಂತೆ ಮಾಡುತ್ತಾನೆ. ಮುಖ್ಯವಾಗಿ ಕವಿಯು ಸಂಕ್ಷೇಪನ ಕಲಾ ಪಂಡಿತನಾಗಿರುವುದು ಕಂಡು ಬರುತ್ತದೆ. ಒಂದೇ ಪದ್ಯದಲ್ಲಿ ವಿಪುಲಾರ್ಥವನ್ನಡಗಿಸುವ ಕೌಶಲ್ಯವನ್ನು ಕರಗತ ಮಾಡಿಕೊಂಡಿದ್ದಾನೆ. ರೇಖಾ ಚಿತ್ರವನ್ನು ಬರೆಯುವಂತೆ ಹತ್ತಾರು ಪದ್ಯಗಳಲ್ಲಿ ಬರೆಯ ಬಹುದಾದುದನ್ನು ಒಂದೇ ಪದ್ಯ, ಅಥವಾ ಒಂದೇ ವ್ಯಾಕ್ಯ ದಲ್ಲಿ ಭಟ್ಟ ಇಳಿಸಿಕೊಡುತ್ತಾನೆ.

ಕುಮಾರ ವಾಲ್ಮೀಕಿಯ ವೈಶಿಷ್ಟ್ಯ

ಕವಿಗೆ ವಿವೇಚನಾ ಪ್ರತಿಬೆ ಚೆನ್ನಾಗಿದೆ. ಪಾತ್ರಗಳನ್ನು ಕಂಡರಿಸುವಾಗ, ಸನ್ನಿವೇಶಗಳನ್ನು ಕಲ್ಪಿಸುವಾಗ, ಅವರ ಬಾಯಿಂದ ಮಾತುಗಳನ್ನಾಡಿಸುವಾಗ ಆ ಪ್ರತಿಭೆ ಚೆನ್ನಾಗಿಯೇ ಕೆಲಸ ಮಾಡಿದೆ. ದೈವದತ್ತವಾದ ಇದರ ಜತೆಗೆ ಬಹು ಶ್ರುತನಾದ ಅವನ ವ್ಯವಸಾಯವೂ ಚೆನ್ನಾಗಿದ್ದು, ಕಾವ್ಯವು ಜನ ಮೆಚ್ಚು ಗೆಗೆ ಪಾತ್ರವಾಗಿದೆ. ಅವನ ಕಾವ್ಯದಲ್ಲಿ ವರ್ಣನೆಯ ಭಾಗಗಳು ಬಹಳ ಕಡಿಮೆ. ಎಷ್ಟೋ ವೇಳೆ ವಾಲ್ಮೀಕಿಯ ವರ್ಣನಾ ಭಾಗಗಳನ್ನು ಕೈಬಿಟ್ಟಿದ್ದಾನೆ. ಹಾಗೆ ಅಲ್ಲೊಮ್ಮೆ ಇಲ್ಲೊಮ್ಮೆ ಬರುವ ವರ್ಣನಾ ಭಾಗಗಳು ಬಹು ಸ್ವಾಭಾವಿಕವಾಗಿ ಭಾವ ಪೂರ್ಣವಾಗಿ ಬಂದಿವೆ. ವರ್ಷ ಋತು ಬಂದುದನ್ನು ಕವಿ.

ತೊಟ್ಟುದೋ ನಭಕವಚವನು ನೆಲ
ಕಟ್ಟ ಬಿಗಿದರೊಸುರರು ನಿರಿವಿಡಿ
ದುಟ್ಟಳೋಜಲದಾಗಮು ಸ್ತ್ರೀ ಸೀಲಮಯ ಪಟವ
ಮುಟ್ಟ ಮರಕತಶಿಲೆಯ ನೀಲದ
ಬೆಟ್ಟದಿರವೆಂಬಂತೆ ಜಂಪಳ
ವಿಟ್ಟು ಜರೆದುದು ಕಾಮುರ್ಗಿಲು ಕತ್ತರಿಸೆ ಕುಂಭಿಸಿಯ,
 ಬೆಸುವ ಮೇಘದ ಕಾಳಿಕೆಯ ಖಂ
 ಡಿಸುವ ಮಿಂಚಿನ ಸಂಚರದ ಸಂ
 ಧಿಸುವ ಸಿಡಿಲಿನ ಭರದಿ ನೆಲಕೊಗುವಾಲಿ ಕಲ್ಲುಗಳ
 ಬೆಸವಳೆಯ ಬಿರುವಳೆಯ ಬೆದರ್ವಳೆ
 ಬಿಸಿಲುವಳೆ ಸಿರಿಸೋನೆ ಸೇಡಿದ
 ಘಸಣೆ ಮಳೆಯುಲಿ ಗಾಸಿಯಾದುದು ಜಗದ ಜನಸಿಕರ

ಲಂಕೆ ಯುರಿದುದನ್ನು

ಪರವಧೂ ವ್ಯಸನಿಗಳ ಭಂಗವು
ನರಕ ಭಾಜನವೆಂದು ನೆರೆಧಿ
ಕ್ಕರಿಸಿ ದಶಕಂಧರನ ನಗರಾಂಗನೆ ವಿರಾಗದಲಿ
ಪರಮ ಪ್ರಾಯಶ್ಚಿತ್ತ ವಂಗೀ
ಕರಿಸಿ ಹೊಗಲುದ್ಯೋಗಿಸಿದನಿ
ರ್ಧರದ ನಿಡುಗಿಚ್ಚಿನ ವೊಲಿರ್ದುದುದಹನರಿಪುಪುರದ

ಸ್ವಯಂವರ ಮಂಟಪದಲ್ಲಿನ ಸೀತೆಯು ಸ್ಮರಕರಾಗ್ರಸ್ಫುರಿತ ಚಾಪಕಲಾ ಪಶರದಭಿಮಾನ ದೇವತೆಯಂತೆ ಕಂಗೊಳಿಸಿದಳಂತೆ. ಹೀಗೆ ಕವಿಯ ವರ್ಣನಾ ವೈಖರಿಯನ್ನು ವಿವೇಚನಾ ಪ್ರತಿಭೆಯನ್ನು ನೋಡಬಹುದಾಗಿದೆ.

ಇನ್ನು ಶೈಲಿಯನ್ನು ಕುರಿತು ಒಂದೆರಡು ಮಾತು. ತೊರವೆಯ ರಾಮಾಯಣದ ಶೈಲಿ ಸರಳವಾದುದ್ದು. ಒಂದು ಬಾರಿ ಓದುವುದರಿಂದಲೆ ಅರ್ಥ ಗ್ರಹಣ ವಾಗುವಂತಿದೆ. ಕವಿ. ಅಲಂಕಾರ, ಕವಿ ಸಮಯ, ವಾಕ್ಚಮತ್ಕಾರಗಳ ತೊಡಕನ್ನು ಉಂಟು ಮಾಡದೆ ನೇರವಾಗಿ ತಿಳಿಯುವಂತೆ ಮಾಡಿ ಉಪಕರಿಸಿದ್ದಾನೆ ಪಾಂಡಿತ್ಯ ಪ್ರದರ್ಶನಕ್ಕಾಗಿ ಹಿಂದಿನ ಕವಿಗಳು ಕಾವ್ಯದಲ್ಲಿ ಅವಕಾಶ ಸಿಗಲಿ ಸಿಗದಿರಲಿ, ತಾವೇ ಅವಕಾಶವನ್ನು ಕಲ್ಪಿಸಿಕೊಂಡು ಅತಿಶಯೋಕ್ತಿ ಮುಂತಾದ ಅಲಂಕಾರಗಳನ್ನು ತರದಿದ್ದರೆ ಪಂಡಿತರು ಮೆಚ್ಚುವುದಿಲ್ಲವೆಂದು ಒದ್ದಾಡಿರುವುದನ್ನು ಕಾಣುತ್ತೇವೆ. ಆದರೆ ನರಹರಿಯು ಜನ ಸಾಮಾನ್ಯರನ್ನು ತನ್ನ ದೃಷ್ಟಿಯಲ್ಲಿಟ್ಟುಕೊಂಡು, ಭಗವಂತನ ಕಥಾ ನಿರೂಪಣೆ ಮಾಡಿದ್ದಾನೆ. ಅನಿವಾರ್ಯವಾಗಿ ಒಂದೆರಡು ಕಡೆ ಅದೂ ಕಿವಿಗೆ ಇಂಪಾಗುವಂತೆ ಶಬ್ದಾಲಂಕಾರಗಳನ್ನು ತಂದಿದ್ದಾನೆ. ಸಂಸ್ಕೃತದಲ್ಲಿ ಮಹಾಲಕ್ಷ್ಮಿಯನ್ನು ಪದ್ಮೋದ್ಭವಾಂ ಪದ್ಮಮುಖೀಂ ಪದ್ಮನಾಭ ಪ್ರಿಯಂ ರಮಾಂ ಪದ್ಮಮಾಲಾ ಧರಾಂ ದೇವೀಂ ಪದ್ಮಾಕ್ಷಿ ಪದ್ಮ ಸುಂದರೀ........ಎನ್ನುವುದನ್ನು ತಿಳಿದು ಆಕೆಯ ಅವತಾರವೇ ಆದ ಸೀತೆಯನ್ನು ವರ್ಣಿಸುವಾಗ

ಪದ್ಮ ಗಂಧಿಯು ಪದ್ಮವದನೆಯು
ಪದ್ಮ ಸದ್ಮ ನಿವಾಸನೆಯು ಪದ
ಪದ್ಮ ಕರ ಪದ್ಮಂಗಳೊಪ್ಪುವ ಪದ್ಮಲೋಚನೆಯು
ಪದ್ಮ ಜಾಂಬಕಿ ಪದ್ಮಿನಿಯು ಹೃ
ತ್ಪದ್ಮದೊಳು ರಘು ರಾಮಚಂದ್ರನ
ಪದ್ಮ ಪಾದವ ನೆನವ ಸೀತೆಯ ಕಂಡನಾ ಹನುಮ

ಇವನ ಶೈಲಿಯಲ್ಲಿ ಲಾಲಿತ್ಯ, ಮೃದುತ್ವ–ಮತ್ತು ಮಾಧುರ್ಯಗಳ ಗುಟ್ಟು ಅವನ ಸಂಕ್ಷೇಪನ ಕಲೆಯಲ್ಲಿ, ಅವನು ಕೊಡುವ ವಿಶೇಷಣಗಳಲ್ಲಿ, ಮುಂದಣ ಕಥಾ ಸೂಚನೆಗಳಲ್ಲಿ, ಪದ ಪ್ರಯೋಗಗಳಲ್ಲಿ ಅಡಗಿರುವುದು, ಅದನ್ನು ಅರಿಯಲು ಈತನ ಇಡೀ ಕಾವ್ಯವನ್ನು ಓದುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಛಂದಸ್ಸಿನ ದೃಷ್ಟಿಯಿಂದಲೂ, ಈ ವೇಳೆಗೆ ಷಟ್ಪದಿ ಕವಿಗಳ ಶೈಲಿ ಚೆನ್ನಾಗಿ ಪಳಗಿ ಭಾವಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತಾ ಜನಪ್ರಿಯತೆಯನ್ನು ಗಳಿಸಿ ಕೊಂಡಿದ್ದಿತು. ಅವನ ಕವಿತಾ ಸಾಮರ್ಥ್ಯವನ್ನರಿಯಲು ಒಂದೆರಡು ಉದಾಹರಣೆಗಳನ್ನು ನೋಡೋಣ. ರಾಮನು ಸ್ವಯಂವರದಲ್ಲಿ ಬಿಲ್ಲನ್ನು ಮುರಿದುದು ಎಳೆಯ ಕಬ್ಬಿನ ಕೋಲಟನಕರಿ ಕಳಭಕರದಲಿ ಮುರಿವವೊಲು ಪರಶುರಾಮನು ರಾಮನನ್ನು ಎದುರಿಸಿದುದು ಹೇಗಿತ್ತೆಂದರೆ

ತರುಣಿಯನುತು ಸವೆಂದು ತುಂಡದ
ಲರವ ರಾಹುವ ತಾರೆತವಕಿಸಿ
ತರುಬಿ ನಿಲುವ ವೊಲಾಯ್ತು
ಸಾಗರವ ಸರಸಿಯು ಸೆಣಸುವಂತಾಯ್ತು.

ಶ್ರೀ ರಾಮನನ್ನು ಕಾಡಿಗೆ ಕಳುಹಿಸಬೇಕೆಂದು ದುಃಖಿತನಾಗಿ ಮೂರ್ಛೆಗೆ ಸಂದಿದ್ದ ದಶರಥನನ್ನು ಶ್ರೀರಾಮನು ತನ್ನ ಮೃದ ವಚನದಿಂದ ಎಬ್ಬಿಸಿದುದೆಂತಿದ್ದಿತೆಂದರೆ.

ಆ ಮಧುರ ವಾಚೋ ವಿಲಾಸೋ
ದ್ದಾಮ ಗಾರುಡ ಮಂತ್ರವೆಬ್ಬಿಸಿ
ತಾಮ ಹಾದುಷ್ಟಾಂಗನಾರಸನಾಹಿದಷ್ಟನನು

ಹಾಗೆಯೆ ಸೀತೆಯು ರಾಮನನ್ನು ಅಗಲಿರಲಾರದ ಸಂದರ್ಭದಲ್ಲಿ ಕೊಡುವ ಹೋಲಿಕೆಯು ಹೂವ ಸುರಭಿಸುಧಾಂಶು ಬಿಂಬವನಾವಿಮಳರುಚಿ ಕೀರ್ತಿ ಸದ್ಧರ್ಮಾವಳಿಯ ಬಿಟ್ಟಿರಲು ಸಾಧ್ಯವಿಲ್ಲವೋ ಹಾಗೆಯೆ ಸೀತೆ ರಾಮನನ್ನು ಬಿಟ್ಟಿರಲು ಸಾಧ್ಯವಿಲ್ಲ.

ಅರಣ್ಯ ಮಧ್ಯದಲ್ಲಿ ಬಾಯಾರಿ ಮುಗ ತಾಂಡವನನ್ನು ಕಳುಹಿದರು ನೀರು ತರಲು, ಅವನ ಆಶ ಮನಸನ್ನು ಆ ಮುದುಕರು ಮುತ್ತು ಸಡಿಲಿದ ಚಿಪ್ಪಿನವೊಲ ಳಲುತ್ತ ಬಾಯ್ಬಿಡುತಿಹ ಪುರಾಣ ಶರೀರತಾಪಸರಿದ್ದರಂತೆ.

ಅಗ್ನಿ ಸ್ಪರ್ಶಿಯಾಗಿ ಬಂದ ಸೀತೆಯು ಪುಟವಿಟ್ಟ ಮಿಸುನಿಯ ಪ್ರತಿಮೆಯೊಲು ಶೋಭಿಸಿದಳಂತೆ.

ಯುದ್ಧಕ್ಕೆ ಸಿದ್ಧವಾದ ಕುದುರೆಯ ವರ್ಣನೆಯನ್ನು ನೋಡಿ

ತಡಿಸು ಖಾಸನ ಸುಗತಿ ಪ್ರೊಂಬಾ
ಮಡೆ ಜನಾಬಿ ಲಗಾಮು ಮೊಗಗ
ನ್ನಡಿ ಲಲಾಟ ಸಿಬಂಧಿಯು ಪಿಲಣ ಕಚ್ಬ ಕಡಿವಾಣದ
ಮುಡಿ ಚವರಿ ಕಾಲ್ಗೆಜ್ಜೆ ಕನಕದ
ಸಡಕು ಮಣಿಲಂಬಳದ ಹಯಮಿಗೆ
ಗುಡಿಯಿರಿದು ಮೊಗವೆತ್ತಿ ನರ್ತಿಸಿತಸುರಸಿದಿರಿನಲಿ.

ಹೀಗೆ ಕವಿಯ ವರ್ಣನಾ ಕೌಶಲ್ಯದ ಮೌಲ್ಯವನ್ನು ಇತರ ನಿದರ್ಶನಗಳ ಮೂಲಕವೂ ನಾವು ಪರಿಚಯ ಮಾಡಿಕೊಂಡು ಕವಿಯ ಜನಪ್ರಿಯತೆಯನ್ನು ಹೃದಯಾರೆ ಮೆಚ್ಚುತ್ತೇವೆ.





ಶ್ರೀ ರಾಮಕೃಷ್ಣಾಶ್ರಮದ ಶ್ರೀಗಳವರೊಡನೆ ಶ್ರೀ ಕುವೆಂಪು

ಮೆಟ್ಟುವ ನೆಲ ಕರ್ನಾಟಕ

ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು !

ನೀ ಮೆಟ್ಟುವ ನೆಲ-ಅದೆ ಕರ್ನಾಟಕ ;
ನೀನೇರುವ ಮಲೆ-ಸಹ್ಯಾದ್ರಿ.
ನೀ ಮುಟ್ಟುವ ಮರ-ಶ್ರೀಗಂಧದ ಮರ ;
ನೀ ಕುಡಿಯುವ ನೀರ್ ಕಾವೇರಿ.

ಪಂಪನನೋದುವ ನಿನ್ನಾ ನಾಲಗೆ
    ಕನ್ನಡವೇ ಸತ್ಯ,
ಕುಮಾರವ್ಯಾಸನನಾಲಿಪ ಕಿವಿಯದು
    ಕನ್ನಡವೇ ನಿತ್ಯ.
ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ ;—
ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿಗೆ ಹೊಂಪುಳಿವೋಗುವ ಮನ ;—
ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ,
ಮಲ್ಲಿಗೆ ಸಂಪಿಗೆ ಕೇದಗೆ ಸೊಂಪಿಗೆ,
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸ ರೋಮಾಂಚನಗೊಳುವಾತನ ಮನ
ಇಲ್ಲಿದ್ದರೆ ಏನ್ ? ಎಂತಿದ್ದರೆ ಏನ್
ಎಂದೆಂದಿಗು ತಾನ್ —
    ಕನ್ನಡವೇ ಸತ್ಯ !
    ಕನ್ನಡವೇ ನಿತ್ಯ !
    ಅನ್ಯವೆನಲದೆ ಮಿಥ್ಯಾ !

— ಕುವೆಂಪು